ಕೆ.ಎಲ್.ಇ ಸಂಸ್ಥೆಯ

# ಎಸ್. ನಿಜಲಿಂಗಪ್ಪ ಕಾಲೇಜು

ರಾಜಾಜಿನಗರ 2ನೇ ಹಂತ, ಬೆಂಗಳೂರು - 560 010.

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿಯಿಂದ ಮೂರನೇ ಆವೃತ್ತಿಯಲ್ಲಿ
$A^+$ ದರ್ಜೆಯ ಮರು ಮಾನ್ಯತೆ (4 ಅಂಕಕ್ಕೆ 3.53 ಮೌಲ್ಯಂಕ) ಪಡೆದ ಸಂಸ್ಥೆ.

ಯು.ಜಿ.ಸಿ-ಸ್ಟ್ರೈಡ್, ಆಂತರಿಕ ಗುಣಮಟ್ಟ ಭರವಸೆ ಕೋಶ ಮತ್ತು
ಕನ್ನಡ ವಿಭಾಗ ಸಹಯೋಗದಲ್ಲಿ ಆಯೋಜಿಸಿದ

# ಕರ್ನಾಟಕ ಜನಪದ ಮಹಾಕಾವ್ಯಗಳು : ಪರಂಪರೆ ಮತ್ತು ಸಂಸ್ಕೃತಿ

ರಾಷ್ಟ್ರೀಯ ವಿಚಾರ ಸಂಕಿರಣ



ಸೆಪ್ಟೆಂಬರ್ 07, 2021

ISBN – 978-93-5526-247-9

Karnataka janpada Mahakavyagalu: Parampare &Samskruthi  by Kannada Department,
KLE Soceity S Nijalingappa college, Rajajinagar II Block, Bengaluru – 560010
Editor : Dr. Suresha K C
Published by: Dr. Arunkumar B Sonappanavar
Principal, KLE Soceity S Nijalingappa college, Rajajinagar II Block, Bengaluru – 560010
Firsft Impression : 2021
Pages  : VIII +248
Copyrights : KLE's S Nijalingappa College
Email – info@klesnc.org, principal@klesnc.org, Tel : +9180 2352 6055
Website :http://www.klesnc.org
Printer :  Sri Venkateshwara Printers, 4th block  Rajajinagar Bengaluru - 560010
**ISBN – 978-93-5526-247-9**

ಕರ್ನಾಟಕ ಜನಪದ ಮಹಾಕಾವ್ಯಗಳು:ಪರಂಪರೆ ಮತ್ತುಸಂಸ್ಕೃತಿ, ಕನ್ನಡ ವಿಭಾಗ
ಕೆ.ಎಲ್.ಇ ಸಂಸ್ಥೆಯ ಎಸ್.ನಿಜಲಿಂಗಪ್ಪ ಕಾಲೇಜು ರಾಜಾಜಿ ನಗರ 2ನೇ ಹಂತ ಬೆಂಗಳೂರು – 560010
ಸಂಪಾದಕರು : ಡಾ. ಸುರೇಶ ಕೆ.ಸಿ
ಪ್ರಕಾಶಕರು : ಡಾ. ಅರುಣಕುಮಾರ ಬಿ ಸೋನಪ್ಪನವರ
ಪ್ರಾಂಶುಪಾಲರು, ಕೆ.ಎಲ್.ಇ ಸಂಸ್ಥೆಯ ಎಸ್.ನಿಜಲಿಂಗಪ್ಪ ಕಾಲೇಜು ರಾಜಾಜಿನಗರ 2ನೇ ಹಂತ ಬೆಂಗಳೂರು–10
ಮುದ್ರಣ:  ಸೆಪ್ಟೆಂಬರ್ 2021
ಪುಟಗಳು: IX +248
ಹಕ್ಕುಗಳು: ಕೆ. ಎಲ್. ಇ ಸಂಸ್ಥೆಯ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ
ಮುದ್ರಕರು :ಶ್ರೀ ವೆಂಕಟೇಶ್ವರ ಪ್ರಿಂಟರ್ಸ್, ರಾಜಾಜಿನಗರ 4ನೇ ಹಂತ ಬೆಂಗಳೂರು – 560010

**ಸಂಪಾದಕ ಮಂಡಳಿ**



ISBN 978-93-5526-247-9

# K.L.E SOCIETY's

# S. NIJALINGAPPA COLLEGE

Reaccredited by NAAC at "A+" grade with 3.53 CGPA
College with UGC Stride Component – 1
II Block, Rajajinagar Bangalore - 10

**Title:** Proceedings of UGC STRIDE Sponsored IQAC Initiated **National Seminar on "Janapada Mahakavyagalu of Karnataka - culture and heritage".**

**Author's Name:** Dr Arunkumar B. Sonappanavar.

**Editorial Committee Details:**

| Sl. No. | Author Details | Designation | Contributor Details |
|---|---|---|---|
| 1 | Dr. Arunkumar B. Sonappanavar | Principal | Scientific Editor |
| 2 | Dr. Suresha K. C. | Associate Professor | Associate Editor |
| 3 | Dr. Asha G. | Assistant Professor | Associate Editor |
| 4 | Prof. Bhuvaneshwari G . | Assistant Professor | Associate Editor |
| 5 | Prof. Mohan M. | Assistant Professor | Associate Editor |
| 6 | Prof. Venkatesha T. K. | Assistant Professor | Associate Editor |

**Published By: Self Published**

**Publisher's Address:** Dr Arunkumar B. Sonappanavar, Principal, K.L.E Society's S. Nijalingappa College II Block, Rajajinagar Bangalore-10, Karnataka.
**Email: principal@klesnc.org Website: http://www.klesnc.org Mobile: 9483946362 Tel: 080-23526055**

**Printer's Details:**
Principal, K.L.E Society's S. Nijalingappa College II Block, Rajajinagar Bangalore-10, Karnataka

**Edition details: I (First Edition), 2021 ISBN: 978-93-5526-247-9**

**Copyright © 2021.** All rights reserved. No part of this publication may be reproduced, stored in retrieval system or transmitted in any form or by any means, electronic, mechanical, photocopying, recording, otherwise, without the prior written permission of the publishers.

**ಶೀರ್ಷಿಕೆ: ಯುಜಿಸಿ ಸ್ಟ್ರೈಡ್ ಪ್ರಾಯೋಜಿತ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿರುವ ರಾಷ್ಟ್ರೀಯ ವಿಚಾರ ಸಂಕಿರಣ "ಕರ್ನಾಟಕದ ಜಾನಪದ ಮಹಾಕಾವ್ಯಗಳು – ಸಂಸ್ಕೃತಿ ಮತ್ತು ಪರಂಪರೆ" ಪ್ರಕ್ರಿಯೆಗಳು**

**ಲೇಖಕರ ಹೆಸರು: ಡಾ. ಅರುಣಕುಮಾರ ಬಿ. ಸೋನಪ್ಪನವರ್**

**ಸಂಪಾದಕೀಯ ಸಮಿತಿಯ ವಿವರಗಳು:**

| Sl. No. | Author Details | Designation | Contributor Details |
|---|---|---|---|
| 1 | ಡಾ. ಅರುಣಕುಮಾರ ಬಿ. ಸೋನಪ್ಪನವರ | ಪ್ರಾಂಶುಪಾಲರು | ವೈಜ್ಞಾನಿಕ ಸಂಪಾದಕರು |
| 2 | ಡಾ. ಸುರೇಶ ಕೆ.ಸಿ. | ಸಹ ಪ್ರಾಧ್ಯಾಪಕರು | ಸಹ ಸಂಪಾದಕರು |
| 3 | ಡಾ. ಆಶಾ ಜಿ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |
| 4 | ಪ್ರೊ. ಭುವನೇಶ್ವರಿ ಜಿ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |
| 5 | ಪ್ರೊ. ಮೋಹನ್ ಎಂ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |
| 6 | ಪ್ರೊ. ವೆಂಕಟೇಶ್ ಟಿ.ಕೆ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |

**ಪ್ರಕಟಿಸಿದವರು:** ಸ್ವಯಂ ಪ್ರಕಟಿಸಲಗಿದೆ:

**ಪ್ರಕಾಶಕರ ವಿಳಾಸ :** ಡಾ. ಅರುಣಕುಮಾಅರ ಬಿ. ಸೋನಪ್ಪನವರ್, ಪ್ರಾಂಶುಪಾಲರು, ಕೆ.ಎಲ್.ಇ ಸೊಸೈಟಿಯ ಎಸ್.ನಿಜಲಿಂಗಪ್ಪ ಕಾಲೇಜು ೨ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು – ೧೦ ಕರ್ನಾಟಕ

**ಮುದ್ರಕರ ವಿರವಗಳು:** ಕೆ.ಎಲ್.ಇ ಸೊಸೈಟಿಯ ಎಸ್. ನಿಜಲಿಂಗಪ್ಪ ಕಾಲೇಜು ೨ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು – ೧೦ ಕರ್ನಾಟಕ

**ಆವೃತ್ತಿ ವಿವರಗಳು:** ೧ (ಮೊದಲ ಆವೃತ್ತಿ) ೨೦೨೧ **ಐ.ಎಸ್.ಬಿ.ಎನ್ : ೯೭೮-೯೩-೫೫೨೬-೨೪೭-೯**

ಕೃತಿಸ್ವಾಮ್ಯ ಬಿ ೨೦೨೧ ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಪ್ರಕಟಣೆಯ ಯಾವುದೇ ಭಾಗದ ಮರುಮುದ್ರಣ, ಸಂಗ್ರಹಣೆಯ ಮರುಪಡೆಯುವಿಕೆಯ ವ್ಯವಸ್ಥೆ ಅಥವಾ ಯಾವುದೇ ರೂಪದಲ್ಲಿ ವರ್ಗಾಯಿಸುವ ಅಥವಾ ಯಾವುದೇ ಮಾದರಿಯ ಎಲೆಕ್ಟ್ರಿಕಲ್, ಯಾಂತ್ರಿಕ, ನಕಲುಪ್ರತಿ, ಧ್ವನಿಮುದ್ರಣ ಮತ್ತಿತರ ಯಾವುದೇ ರೂಪದಲ್ಲಿ ಪ್ರಕಟಿಸಬೇಕೆಂದರು ಪ್ರಕಾಶಕರ ಪೂರ್ವಾನುಮತಿ ಪಡೆಯಬೇಕು.



ಮಹಾವಿದ್ಯಾಲಯದ ಕಾರಂಜಿ



ISBN 978-93-5526-247-9

9 789355 262479

# ಕರ್ನಾಟಕ ಜನಪದ ಮಹಾಕಾವ್ಯಗಳು: ಪರಂಪರೆ ಮತ್ತು ಸಂಸ್ಕೃತಿ

ಪ್ರಧಾನ ಸಂಪಾದಕರು

**ಡಾ. ಅರುಣಕುಮಾರ ಬಿ ಸೋನಪ್ಪನವರ**

ಸಂಪಾದಕರು

**ಡಾ. ಸುರೇಶ ಕೆ.ಸಿ**

ಸಹ ಸಂಪಾದಕರು

**ಡಾ. ಜಿ. ಆಶಾ.**

**ಶ್ರೀಮತಿ. ಭುವನೇಶ್ವರಿ. ಜಿ**

**ಶ್ರೀ ಮೋಹನ್.ಎಂ**

**ಶ್ರೀ ವೆಂಕಟೇಶ್.ಟಿ.ಕೆ**

ಪ್ರಕಾಶಕರು

**ಡಾ. ಅರುಣಕುಮಾರ ಬಿ ಸೋನಪ್ಪನವರ**

ಪ್ರಾಂಶುಪಾಲರು

ಕೆ.ಎಲ್.ಇ ಸಂಸ್ಥೆಯ ಎಸ್.ನಿಜಲಿಂಗಪ್ಪ ಕಾಲೇಜು

ರಾಜಾಜಿನಗರ 2ನೇ ಹಂತ ಬೆಂಗಳೂರು–10

**ಪ್ರಧಾನ ಸಂಪಾದಕರ ನುಡಿ**

1916ರಲ್ಲಿ ಸಪ್ತರ್ಷಿಗಳೆನಿಸಿದ ಏಳು ಜನ ಶಿಕ್ಷಕ ಮಹನೀಯರಿಂದ ಸ್ಥಾಪಿತವಾದ ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯು, ಇಂದು ಏಷ್ಯಾದ ಬೃಹತ್ ಶಿಕ್ಷಣ ಸಂಸ್ಥೆಯಾಗಿದೆ. 1983 ರಿಂದ ಕೆ.ಎಲ್.ಇ ಸಂಸ್ಥೆಯ ಚುಕ್ಕಾಣಿ ಹಿಡಿದಿರುವ ದಕ್ಷ, ಕ್ರಿಯಾಶೀಲ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಬಿ. ಕೋರೆಯವರ ಸಮರ್ಥ ಮತ್ತು ನಿಸ್ಪೃಹ ಮುಖಂಡತ್ವದಲ್ಲಿ ಆಧುನಿಕತೆ, ತಂತ್ರಜ್ಞಾನದ ಬೆಳವಣಿಗೆ, ಪ್ರಸ್ತುತ ಅಗತ್ಯಗಳನ್ನು ಅರ್ಥೈಸಿಕೊಂಡು, ಗುಣಮಟ್ಟದ ಹಾಗೂ ಕೌಶಲ್ಯಾಧಾರಿತ ಶಿಕ್ಷಣ ನೀಡುತ್ತಾ 103ನೇ ವರ್ಷದಲ್ಲಿ ಮುನ್ನಡೆಯುತ್ತಿದೆ. 'ಶಿಶುವಿಹಾರದಿಂದ ಸ್ನಾತಕೋತ್ತರ ಶಿಕ್ಷಣದ ವರೆಗೆ' ವಿವಿಧ ಶೈಕ್ಷಣಿಕ ಹಂತದಲ್ಲಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಭೌಗೋಳಿಕ ನೆಲೆಗಳಲ್ಲಿ ತನ್ನ ಸೀಮಾರೇಖೆ ವಿಸ್ತರಿಸಿಕೊಳ್ಳುತ್ತ ಬೆಳೆಯುತ್ತಿರುವ ಕೆ.ಎಲ್.ಇ ಸಂಸ್ಥೆಯು ಇಂದು 272 ಶಿಕ್ಷಣ ಸಂಸ್ಥೆಗಳು 1.35 ಲಕ್ಷಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳು, 16,000ಕ್ಕೂ ಹೆಚ್ಚು ಸಿಬ್ಬಂದಿ ವರ್ಗವನ್ನು ಹೊಂದಿದೆ. ಹೊಸ ಹೊಸ ಚೈತನ್ಯದೊಂದಿಗೆ ಎಲ್ಲ ವರ್ಗದ ಜನತೆಯ ಶೈಕ್ಷಣಿಕ ಮತ್ತು ಸಾಮಾಜಿಕ ಜೀವವಾಹಿನಿಯಾಗಿ ಬೆಳೆಯುತ್ತಾ ವೈದ್ಯ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣದ ಎರಡು ಡೀಮ್ಡ್ (ಸ್ವಾಯತ್ತ) ವಿಶ್ವವಿದ್ಯಾನಿಲಯಗಳನ್ನು ಹೊಂದಿದೆ.

1963 ರಲ್ಲಿ ಸ್ಥಾಪಿತಗೊಂಡ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯವು, 2013 ರಲ್ಲಿ "ಸುವರ್ಣಸಂಭ್ರಮ"ವನ್ನು ಆಚರಿಸಿಕೊಂಡಿತು. ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯ ಒಂದು ಬೃಹತ್ ಮಹಾವಿದ್ಯಾಲಯವಾಗಿ ಮೌಲ್ಯಯುತ ಶಿಕ್ಷಣ ನೀಡುತ್ತಿದೆ. ಮಹಾವಿದ್ಯಾಲಯವು A+ Level by NAAC (3rd Cycle) with CGPA of 3.53 on 4.00. Scale and also recognised as "College with Potential for Excellence" - 2 Phase by UGC. 4.92 ಎಕರೆ ವಿಸ್ತೀರ್ಣದಲ್ಲಿ ರಾಜಧಾನಿಯ ಹೃದಯ ಭಾಗದಲ್ಲಿದ್ದು, ಆಧುನಿಕ ತಂತ್ರಜ್ಞಾನದ ಅಡಿಯಲ್ಲಿ ಸ್ಥಾಪಿತಗೊಂಡಿರುವ ಮಹಾವಿದ್ಯಾಲಯವು ಬಿಎ, ಬಿಎಸ್ಸಿ, ಬಿಕಾಂ, ಬಿಬಿಎ, ಬಿಸಿಎ, ಪತ್ರಿಕೋದ್ಯಮ, ಫ್ಯಾಷನ್ ಟೆಕ್ನಾಲಜಿ, ಹೋಟೆಲ್ ಮ್ಯಾನೇಜ್‌ಮೆಂಟ್ ಪದವಿ ಹಾಗೂ ಎಂ.ಎಸ್ಸಿ (ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ) ಎಂ.ಕಾಂ, ಎಂಟಿಎ, ಹಾಗೂ ಎಂ.ಸಿ.ಎ ಸ್ನಾತಕೋತ್ತರ ಪದವಿಗಳನ್ನು ಮತ್ತು ವಾಣಿಜ್ಯ ವಿಭಾಗದಲ್ಲಿ ಸಂಶೋಧನಾ ಕೇಂದ್ರ ಹಾಗೂ ಇಂದಿನ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿಗಾಗಿ ಸಚೇತನ ಕೇಂದ್ರ ಇಂದಿನ ಬದುಕಿಗೆ ಬೇಕಾದ ಎಲ್ಲ ಜ್ಞಾನಶಾಖೆಗಳನ್ನು ಹೊಂದಿದೆ.

ಶಿಕ್ಷಣ ಕ್ಷೇತ್ರದಲ್ಲಿ ದೇಶದಲ್ಲಿಯೇ ಹೊಸ ಮನ್ವಂತರವನ್ನು ಸೃಷ್ಟಿಸಿ ಆಧುನಿಕ ಶಿಕ್ಷಣದ ಹರಿಕಾರರಾಗಿ ಇಂದು ನಾಡಿನ ಪ್ರತಿಷ್ಠಿತ ಉತ್ಕೃಷ್ಟ ಶಿಕ್ಷಣ ಸಂಸ್ಥೆಯಾಗಿ ರೂಪಿಸಿದ ಕೀರ್ತಿ ಸನ್ಮಾನ್ಯ ಶ್ರೀ ಡಾ. ಪ್ರಭಾಕರ ಕೋರೇಜಿಯವರದು. ವಿಶೇಷವಾಗಿ ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ಡೆಂಟಲ್, ನ್ಯಾಯಾಂಗ ಹಾಗೆ ಕೆ.ಜಿ ಯಿಂದ ಪಿ.ಜಿ ಹಾಗೂ ಸಂಶೋಧನಾ ಸಂಸ್ಥೆಯವರಿಗೂ ವಿಸ್ತರಿಸಿ ಕೆ.ಎಲ್.ಇ ಸಂಸ್ಥೆಯನ್ನು ಆಧುನೀಕರಣಗೊಳಿಸಿದರು. ಓದು, ಶಿಕ್ಷಣ, ಪ್ರಕಟಣೆಯ ಜೊತೆಗೆ ಅಂತರರಾಷ್ಟ್ರೀಯ, ರಾಷ್ಟ್ರ ಮಟ್ಟದ ಚರ್ಚೆ, ವಿಚಾರ ಸಂಕಿರಣ, ಸಮಾವೇಶಗಳನ್ನು ಪ್ರತಿವರ್ಷ ನಡೆಸುತ್ತಾ ದೇಶ ವಿದೇಶಗಳಲ್ಲೂ ಜ್ಞಾನ ಕ್ಷೇತ್ರದ ಕ್ಷಿತಿಜವನ್ನು ವಿನ್ಯಾಸಗೊಳಿಸುತ್ತಾ, ಸಾಹಿತಿಗಳನ್ನು, ವಿಜ್ಞಾನಿಗಳನ್ನು ಸಂಶೋಧಕರನ್ನು, ಕವಿಗಳನ್ನು, ತತ್ವಜ್ಞಾನಿಗಳನ್ನು ಶ್ರೇಷ್ಠ ಪ್ರಾಧ್ಯಾಪಕರನ್ನು ಕಲೆಹಾಕುತ್ತಾ ಅವರಿಂದ ಸುಭದ್ರ ಹಾಗೂ ನವಸಮಾಜ ನಿರ್ಮಾಣ ಮಾಡಲು ಅವಕಾಶ ಮಾಡಿಕೊಡುತ್ತಿರುವ ನಮ್ಮ ಕೆ.ಎಲ್.ಇ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಎಲ್ಲ ಸದಸ್ಯರ ಪ್ರೋತ್ಸಾಹ ಹಾಗೂ ಕಾರ್ಯಕಾರಿ ಮಂಡಳಿಯವರು ಪ್ರತಿವರ್ಷ ಮಹಾವಿದ್ಯಾಲಯಗಳಲ್ಲಿ ಗುಣಾತ್ಮಕವಾದ ವಿಚಾರ ಸಂಕಿರಣವನ್ನು ಏರ್ಪಡಿಸಿ ಎಂದು ಹೇಳುತ್ತಾ ಅವುಗಳನ್ನು ಯಶಸ್ವಿ ಮಾಡಿಸಿ ಅವುಗಳು ಸಾರ್ಥಕವಾಗುವ ಹಾಗೆ ನೋಡುವಂತೆ, ಪ್ರಾಧ್ಯಾಪಕರನ್ನು, ವಿದ್ಯಾರ್ಥಿಗಳನ್ನು ನಿರಂತರ ಚಟುವಟಿಕೆಯಿಂದ ಕಾರ್ಯಪ್ರವೃತ್ತರಾಗುವಂತೆ ಪ್ರೇರೇಪಿಸಿದ ಹಿನ್ನಲೆಯಲ್ಲಿ ಈ ಕೃತಿ ಸಾರ್ಥಕತೆ ಮೆರೆದಿದೆ. UGC STRIDE ಪ್ರಾಯೋಜಿತ "ಕರ್ನಾಟಕ ಜನಪದ ಮಹಾಕಾವ್ಯ: ಪರಂಪರೆ ಮತ್ತು ಸಂಸ್ಕೃತಿ" ಎಂಬ ವಿಷಯ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲು ಸಾಧ್ಯವಾಯಿತು. ಈ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಲೇಖನಗಳು ವಿವೇಚನೆ, ಚರ್ಚೆ, ಪರಿಶೀಲನೆ, ಸಂಶೋಧನೆ, ಚಿಂತನಾರ್ಹ ವಿಷಯಗಳ ಮೇಲೆ 50ಕ್ಕಿಂತಲೂ ಹೆಚ್ಚು ಸಂಶೋಧಕರ, ಸಂಪನ್ಮೂಲ ವ್ಯಕ್ತಿಗಳ ಅಧ್ಯಯನದ ಪೂರ್ಣ ಲೇಖನಗಳನ್ನು ಆಯ್ಕೆ ಮಾಡಿಕೊಂಡು ಸುಮಾರು 50ಕ್ಕಿಂತಲೂ ಹೆಚ್ಚು ಪ್ರಬಂಧಗಳನ್ನು ಇಲ್ಲಿ ಸಂಪಾದಿಸಲಾಗಿದೆ. ಜನಪದ ಮಹಾಕಾವ್ಯ ಸ್ವರೂಪ, ಮಲೆ ಮಾದೇಶ್ವರ ಕಾವ್ಯದ ಸಂಕಮ್ಮ, ಜನಪದ ಮಹಾಕಾವ್ಯಗಳಲ್ಲಿ ಐತಿಹಾಸಿಕ ಪ್ರಜ್ಞೆ ಜನಪದ ಮಹಾಕಾವ್ಯ: ಮಂಟೇಸ್ವಾಮಿ ಕಾವ್ಯ, ಪವಾಡಗಳು ಕನ್ನಡ ಜಾನಪದ ಮಹಾಕಾವ್ಯಗಳು ಒಂದು ಸಮೀಕ್ಷೆ ತುಳು ಜನಪದ ಕಾವ್ಯಗಳಲ್ಲಿ ಪ್ರಕೃತಿ ಚಿತ್ರಣದ

ಸ್ವರೂಪ ಇತ್ಯಾದಿ. ಹಲವಾರು ಜನಪದ ಮಹಾಕಾವ್ಯಗಳ ವಿಷಯಗಳ ಮೇಲೆ ಈ ಲೇಖನಗಳು ಬೆಳಕು ಚೆಲ್ಲುತ್ತವೆ. ಪ್ರಸ್ತುತ ಈ ಕೃತಿಯಲ್ಲಿ ಪ್ರಕಟಗೊಂಡಿರುವ ಲೇಖನಗಳು ಇಡೀ ಕರ್ನಾಟಕದ ವಿವಿಧ ಜನಪದ ಮಹಾಕಾವ್ಯಗಳ ವಿಭಿನ್ನ ಸಾಂಸ್ಕೃತಿಕ ಸಂಗತಿಗಳನ್ನು ವಿಶೇಷವಾಗಿ ಕಟ್ಟಿಕೊಡುವುದು ಹಾಗೂ ಓದುಗರ ಅಭಿರುಚಿಯ ಜೊತೆಗೆ ನಮ್ಮ ಕರ್ನಾಟಕ ಜನಪದ ಪರಂಪರೆ ಮತ್ತು ಸಂಸ್ಕೃತಿಯ ವಿವಿಧ ಮಜಲುಗಳನ್ನು ಅನಾವರಣ ಮಾಡಿರುವುದರಿಂದ ಓದುಗರ ಅಭಿರುಚಿಯನ್ನು ಹೆಚ್ಚಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಈ ಕೃತಿಯಲ್ಲಿ ಪ್ರಕಟಿತಗೊಂಡ ಲೇಖಕರ ಪರಿಶ್ರಮ, ವಿದ್ವತ್‌ಜ್ಞಾನ ಹಾಗೂ ಕೆ.ಎಲ್.ಇ ಸಂಸ್ಥೆಯವರು ಇಂಥ ಪ್ರಕಟಣಾ ಕಾರ್ಯ ಕೈಗೊಂಡಿರುವುದು ಸಾರ್ಥಕದ ಕೆಲಸ ಹಾಗೂ ಕರ್ನಾಟಕ ಜನಪದ ಸಂಸ್ಕೃತಿಯ ಮಹಾ ಕೊಡುಗೆಯಾಗಿದೆ.

ಪ್ರಧಾನ ಸಂಪಾದಕರು
**ಡಾ. ಅರುಣಕುಮಾರ ಬಿ ಸೋನಪ್ಪನವರ**
ಪ್ರಾಂಶುಪಾಲರು

**ಸಂಪಾದಕರ ನುಡಿ**

ಕರ್ನಾಟಕದಲ್ಲಿ ಏಳು ಜನಪದ ಮಹಾ ಕಾವ್ಯಗಳಿವೆ. ಅವುಗಳೇ ಸಿರಿ ಮಹಾಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ, ಮಲೆ ಮಾದೇಶ್ವರ ಕಾವ್ಯ, ಮೈಲಾರಲಿಂಗನ ಕಾವ್ಯ, ರೇಣುಕಾದೇವಿ ಎಲ್ಲಮ್ಮನ ಕಾವ್ಯ ಹಾಗೂ ಹಾಲು ಮತಸ್ಥರ ಕಾವ್ಯ ಈ ಕಾವ್ಯಗಳು ಅನೇಕ ರಾತ್ರಿಗಳ ಕಾಲ ಹಾಡುವಷ್ಟು ದೀರ್ಘವಾಗಿದ್ದು, ಗಾತ್ರ ಹಾಗೂ ವಿಷಯದಲ್ಲಿ ಮಹತ್ವ ಹೊಂದಿವೆ. ಈ ಜನಪದ ಮಹಾಕಾವ್ಯಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಭವದಿಂದ ಕೂಡಿವೆ. ಜನಪದ ಮಹಾಕಾವ್ಯಗಳು ಮೌಖಿಕ ಪರಂಪರೆಯಿಂದ ಮುಂದುವರೆಯುತ್ತಾ ಬಂದಿದೆ. ಅವುಗಳನ್ನು ಲಿಖಿತ ರೂಪದಲ್ಲಿ ಪ್ರಕಟಿಸಿದಾಗ ಕೆಲವು ಪರಿಮಿತಿಗಳು ಏರ್ಪಡುತ್ತವೆ. ಇದರಿಂದ ಅವುಗಳ ಚಲನಶೀಲ ಗುಣವು ಇಲ್ಲವಾಗುತ್ತದೆ. ಈ ಕಾವ್ಯಗಳ ಸಂವಹನ ಮತ್ತು ಸಂರಕ್ಷಣೆಯ ಕೆಲಸದಲ್ಲಿ ಹಾಡುಗಾರರು – ನಿರೂಪಕರು ಮುಖ್ಯವಾದ ಪಾತ್ರ ವಹಿಸುತ್ತಾರೆ. ಅವರು ನೀಡುವ ಪ್ರತಿಯೊಂದು ಪ್ರದರ್ಶನವೂ ಒಂದು ಹೊಸ ಪಠ್ಯಕ್ಕೆ ಜನ್ಮ ನೀಡುತ್ತಾರೆ. ಪ್ರತಿ ಗಾಯಕನೂ ತಾನು ಹಾಡುತ್ತಿರುವ ಕಾವ್ಯದ ತನ್ನದೇ ಆವೃತ್ತಿಯ ಜನಕನೂ ಕೂಡ ಹೌದು. ಅದು ಅವನಿಗೆ ತನ್ನ ಗುರು ಪರಂಪರೆಯಿಂದ ಬಂದ ಬಳುವಳಿಯಾಗಿರುತ್ತದೆ. ಗಾಯಕರಾದ ಸುಕ್ರಿ ಬೊಮ್ಮೇಗೌಡ, ದರೋಜಿ ಈರಮ್ಮ, ಸಿರಿಯಜ್ಜಿ, ಮಹದೇವಸ್ವಾಮಿ ಮತ್ತಿತರರು ಅತ್ಯಂತ ಮಹತ್ವ ಪೂರ್ಣವಾಗಿ ಹಾಡಿ ಜನಮನವನ್ನು ಮುಟ್ಟಿಸುವ ಕೆಲಸಮಾಡುತ್ತಿದ್ದಾರೆ.

ಮಹಾಕಾವ್ಯಗಳು ಶತಮಾನಗಳಿಂದ ರೂಪುಗೊಂಡ ನಾಗರೀಕತೆಯ ಚಿತ್ರಣವನ್ನು ಕಟ್ಟಿ ಕೊಡುತ್ತದೆ. ಅನೇಕ ಜನಪದ ಮಹಾಕಾವ್ಯಗಳ ಅಸ್ತಿತ್ವವಿರುವುದು ಒಂದು ನಿರ್ದಿಷ್ಟ ಸಮುದಾಯದ ನಂಬಿಕೆಗಳು ಮತ್ತು ಇತಿಹಾಸದ ಚೌಕಟ್ಟನ್ನು, ಸಂಸ್ಕೃತಿ ಪುರಾಣ ಮತ್ತು ಅಲಿಖಿತ ಇತಿಹಾಸಗಳ ಬೃಹತ್ ಭಂಡಾರ ಹಾಗೂ ಅಸ್ಮಿತೆಯ ಸಂಕೇತಗಳಾಗಿವೆ. ಅಕ್ಷರವೇ ಗೊತ್ತಿಲ್ಲದ ಬುಟಕಟ್ಟು ಜನಾಂಗದವರು ರಚಿಸಿದ ಇಪ್ಪತ್ತೆರಡು ಮಹಾಕಾವ್ಯಗಳು ಕನ್ನಡದ ದೊಡ್ಡ ಶಕ್ತಿ ಇಂತಹ ದೊಡ್ಡ ಪರಂಪರೆಯ ಮೌಖಿಕ ಮಹಾಕಾವ್ಯಗಳನ್ನು ನಿರ್ಲಕ್ಷಿಸುವ ಧೋರಣೆ ಸುಶಿಕ್ಷಿತರಲ್ಲಿದೆ. ಜನಪದ ಮಹಾಕಾವ್ಯಗಳಲ್ಲಿನ ಸತ್ವ ಮಹತ್ವವನ್ನು ಯುವ ಜನತೆಗೆ ಪರಿಚಯಿಸುವ ಕೆಲಸವಾಗಬೇಕು. ಮಾತೃ ಹೃದಯದ, ಪ್ರಕೃತಿ ಮತ್ತು ಜೀವಪರವಾದ ಈ ಮಹಾಕಾವ್ಯಗಳು ಕೋಟಿ ಕೋಟಿ ಜೀವರಾಶಿಗಳು ಬದುಕಬೇಕೆಂಬ ವಿಶಾಲ ಹೃದಯ ಈ ಜನಪದ ಕಾವ್ಯಗಳಲ್ಲಿದೆ. ಇಂತಹ ಕಾವ್ಯಗಳ ಅಧ್ಯಯನ, ಸಂಶೋಧನೆ, ಅವಲೋಕನವನ್ನು ಇಂದಿನ ಯಾಂತ್ರಿಕ ಜಗತ್ತಿನಲ್ಲಿರುವ ನಾವುಗಳು ಯಾವುದೇ ಪೂರ್ವಾಗ್ರಹ ಪೀಡಿತವಾಗದೆ ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿದಾಗ ಮಾಹಾಕಾವ್ಯಗಳಲ್ಲಿನ ಪರಂಪರೆ ಮತ್ತು ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗುತ್ತದೆ ಎಂಬ ಹಿನ್ನಲೆಯಲ್ಲಿಯೇ ಈ ವಿಚಾರ ಸಂಕಿರಣವನ್ನು ಆಯೋಜಿಸಲು ಸಾಧ್ಯವಾಯಿತು

ಕೆ.ಎಲ್.ಇ ಸಂಸ್ಥೆಯ ಸಪ್ತರ್ಷಿಗಳ ಕನಸು ಆಶಯಗಳನ್ನು ತಮ್ಮ ಕಾರ್ಯಧಕ್ಷತೆಯಿಂದ ಸುಸೂತ್ರವಾಗಿ ನೆರವೇರಿಸುತ್ತಿರುವ ಕಾರ್ಯಾಧ್ಯಕ್ಷರಾದ ಸನ್ಮಾನ್ಯ ಡಾ. ಪ್ರಭಾಕರ ಕೋರೇಜಿಯವರು ಮತ್ತು ಆಡಳಿತ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ ವಿಚಾರ ಸಂಕಿರಣ, ಕಾರ್ಯಾಗಾರ ಮತ್ತು ಸಮ್ಮೇಳನಗಳನ್ನು ಏರ್ಪಡಿಸಿ ಎಂದು ಸದಾ ಪ್ರೋತ್ಸಾಹ ನೀಡುತ್ತಿರುವ ಸ್ಥಾನಿಕ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ವಿಚಾರ ಸಂಕಿರಣ, ಸಂಶೋಧನೆ ಕುರಿತ ಯೋಜನೆಗಳಿಗೆ ಪ್ರಾಧ್ಯಾಪಕರನ್ನು ಹುರಿದುಂಬಿಸುವ ಬೆಂಗಳೂರಿನ ಕೆ.ಎಲ್.ಇ ಸಂಸ್ಥೆಯ ಎಸ್. ನಿಜಲಿಂಗಪ್ಪ ಕಾಲೇಜಿನ ಪ್ರಾಂಶುಪಾಲರಾದ ಡಾ. ಅರುಣಕುಮಾರ ಬಿ. ಸೋನಪ್ಪನವರ ಹಾಗೂ ಆಂತರಿಕ ಗುಣಮಟ್ಟ ಕೋಶದ ಹಾಗೂ UGC STRIDE ಸಂಚಾಲಕರಾದ ಡಾ. ಮಹಾನಂದ ಬಿ. ಚಿತ್ತವಾಡಗಿ ಇವರೀರ್ವರ ಸದಾ ಕ್ರಿಯಾಶೀಲತೆ ಮತ್ತು ತಮ್ಮ ಕಾರ್ಯ ನಿಷ್ಠೆಯಿಂದ ಇಂತಹ ಕೃತಿ ಹೊರಬರಲು ಸಾಧ್ಯವಾಯಿತು. ನಮ್ಮಂಥ ಎಷ್ಟೋ ಜನರಿಗೆ ಓದಲು, ಬರೆಯಲು, ನಿರಂತರವಾಗಿ ಕಲಿಕೆ ಹಾಗೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಕೆಲಸ ನಿರ್ವಹಿಸುತ್ತಿದ್ದಾರೆ. ಇವರಿಗೆ ಅನಂತಾನಂತ ಕೃತಜ್ಞತೆಗಳು.

ಕರ್ನಾಟಕ ಜನಪದ ಮಹಾಕಾವ್ಯಗಳು: ಪರಂಪರೆ ಮತ್ತು ಸಂಸ್ಕೃತಿ ವಿಷಯ ಕುರಿತ ರಾಷ್ಟ್ರ ಮಟ್ಟದ ವಿಚಾರ ಸಂಕಿರಣದ ಉದ್ಘಾಟನೆಯನ್ನು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಹಿ. ಚಿ. ಬೋರಲಿಂಗಯ್ಯ, ಸಂಪನ್ಮೂಲ ವ್ಯಕ್ತಿಗಳಾದ ಪ್ರೊ.ತಮಿಳ್ ಸೆಲ್ವಿ, ಪ್ರಾಧ್ಯಾಪಕರು ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ಡಾ.

ದುರ್ಗಾಪ್ರವೀಣ ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ. ಹಾಗೂ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಚೆಲುವರಾಜು ಅವರಿಗೂ ಶರಣು ಶರಣಾರ್ಥಿಗಳು ಪ್ರಬಂಧ ಮಂಡನಾಕಾರರ ಮೂರು ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದ ಡಾ.ಎಲ್.ಎನ್ ಮಂಜುನಾಥದ್, ಡಾ. ಚೆಲುವರಾಜು, ಡಾ.ಲವಕುಮಾರ್ ಅವರಿಗೂ ಕೃತಜ್ಞತೆಗಳು ತನ್ನ ಲಿಖಿತ ರೂಪದ ಪ್ರಬಂಧಗಳನ್ನು ಆನ್‌ಲೈನ್‌ನಲ್ಲಿ ಸಕಾಲಕ್ಕೆ ನೀಡಿ ಈ ಗ್ರಂಥದ ಪ್ರಕಟನೆಗೆ ಕಾರಣರಾದ ಹಿರಿಯ ವಿದ್ವಾಂಸರು, ವಿಮರ್ಶಕರು, ಸಂಶೋಧಕರು ಹಾಗೂ ಕಿರಿಯ ಬರಹಗಾರರಿಗೂ ಅನಂತಾನಂತ ಧನ್ಯವಾದಗಳು.

ಅತ್ಯಂತ ಕಡಿಮೆ ಅವಧಿಯಲ್ಲಿ ಇಷ್ಟೊಂದು ಬೃಹತ್ ಗ್ರಂಥವನ್ನು ಅದರಲ್ಲೂ ಸಂಕಲನ ಸಂಪಾದನೆ ಮಾಡುವುದು ಅಷ್ಟು ಸುಲಭದ ಮಾತಲ್ಲ. ಅದು ಸಾಕಾರಗೊಳ್ಳಲು ನನ್ನ ಜೊತೆ ಜೊತೆಗೆ ಸಹ ಸಂಪಾದಕರಾದ ಡಾ. ಜಿ.ಆಶಾ, ಪ್ರೊ.ಭುವನೇಶ್ವರಿ. ಜಿ, ಪ್ರೊ. ಮೋಹನ್.ಎಂ, ಪ್ರೊ. ವೆಂಕಟೇಶ್ ಟಿ.ಕೆ ಅವರ ಶ್ರಮವನ್ನು ನೆನೆಯದಿರಲಾರೆವು ಆದಷ್ಟು ಮಟ್ಟಿಗೆ ಅಕ್ಷರದೋಷ, ಡಿ.ಟಿ.ಪಿ ದೋಷರಹಿತವಾಗಿ ಗ್ರಂಥ ಸಂಪಾದನೆಗೆ ಹಗಲಿರುಳು ಶ್ರಮಿಸಿ ಕರಡು ಪ್ರತಿ ತಿದ್ದಿದ ಇವರಿಗೆಲ್ಲ ಹಾಗೂ ವಿದ್ಯಾರ್ಥಿ ಮಿತ್ರ ಹೆಚ್.ಎಂ ಕಾರ್ತಿಕ್‌ಗೆ ವಂದನೆಗಳು.

ಇಲ್ಲಿಯ ತಪ್ಪುಗಳನ್ನು ಮನ್ನಿಸಿ ಕ್ಷಮೆಯಿರಲಿ ಇಂಥ ಕೆಲಸದಲ್ಲಿದ್ದಾಗ ಅದರಲ್ಲೂ ಕಡಿಮೆ ಅವಧಿಯಲ್ಲಿ ಇಂಥ ಯೋಜನೆ ಕೈಗೊಂಡಾಗ ಸಣ್ಣ ತಪ್ಪಿನ ದೋಷ ಸಹಜ. ಒಳ್ಳೆಯದನ್ನು, ತಪ್ಪನ್ನು ಸಮಾನವಾಗಿ ಸಹೃದಯತೆಯಿಂದ ಸ್ವೀಕರಿಸುವಿರಿ ಎಂಬ ಆಶಯದೊಂದಿಗೆ ನನ್ನ ಸಂಪಾದಕೀಯ ನುಡಿಗೆ ಅಂತಿಮ ರೂಪ ನೀಡುತ್ತೇನೆ.

ಅರ್ಥಪೂರ್ಣವಾದ ಸುಂದರ ಮುಖಪುಟ ವಿನ್ಯಾಸಗೊಳಿಸಿದ ಶ್ರೀ ವೆಂಕಟೇಶ್ವರ ಪ್ರಿಂಟರ್ಸ್ ಅವರಿಗೂ ಕೃತಜ್ಞತೆಗಳು.

ಸಂಪಾದಕರು
**ಡಾ. ಸುರೇಶ ಕೆ.ಸಿ**
ಮುಖ್ಯಸ್ಥರು ಕನ್ನಡ ವಿಭಾಗ

# ಪರಿವಿಡಿ


| | | | |
|---|---|---|---|
| 1. | ಜನಪದ ಮಹಾಕಾವ್ಯದ ಸ್ವರೂಪ | – ಪ್ರೊ. ಹಿ.ಚಿ.ಬೋರಲಿಂಗಯ್ಯ | 1–4 |
| 2. | ಕನ್ನಡ ಜಾನಪದ ಮಹಾಕಾವ್ಯಗಳು ಒಂದು ಸಮೀಕ್ಷೆ | – ಪ್ರೊ. ತಮಿಳ್ ಸೆಲ್ವಿ | 5–11 |
| 3. | ತುಳು ಜನಪದ ಕಾವ್ಯಗಳಲ್ಲಿ ಪ್ರಕೃತಿ ಚಿತ್ರಣದ ಸ್ವರೂಪ | – ಡಾ.ಎಂ.ಎಸ್.ದುರ್ಗಾಪ್ರವೀಣ | 12–15 |
| 4. | ಕನ್ನಡ ಮೌಖಿಕ ಕಾವ್ಯ (ಬುರ್ರಕಥಾ) ಪರಂಪರೆಗೆ ದರೋಜಿ ಈರಮ್ಮನವರ ಕೊಡುಗೆ | – ಡಾ.ಚೆಲುವರಾಜು | 16–19 |
| 5. | ಜನಪದ ಕಲಾಪ್ರದರ್ಶನ ತಂತ್ರಗಳು ಮತ್ತು ಆಧುನಿಕ ರಂಗಭೂಮಿ | – ಡಾ.ಟಿ.ಎಚ್.ಲವಕುಮಾರ್ | 20–23 |
| 6. | ಜನಪದ ಮಹಾಕಾವ್ಯಗಳ ಸ್ವರೂಪ | – ಡಾ. ರವಿಶಂಕರ್ ಎ.ಕೆ | 24–28 |
| 7. | ಪುರುಷ ಪ್ರಧಾನ ವ್ಯವಸ್ಥೆಯ ಪ್ರತಿಭಟನೆಯ ಧ್ವನಿ – ಸಂಕಮ್ಮ | – ಡಾ. ಸುರೇಶ ಕೆ.ಸಿ | 29–32 |
| 8. | ಜನಪದ ಮಹಾಕಾವ್ಯಗಳಲ್ಲಿ ದೈವಿಕತೆ | – ಪ್ರೊ.ಚಂದ್ರಶೇಖರ್.ಎನ್ | 33–37 |
| 9. | ಮಲೆ ಮಾದೇಶ್ವರ ಮಹಾಕಾವ್ಯ: ಸಾಂಸ್ಕೃತಿಕ ಚರಿತ್ರೆ. | – ಡಾ. ವಿಜಯ ಕುಮಾರ್. ಎಚ್.ಜಿ | 38–42 |
| 10. | ಮಲೆಮಾದೇಶ್ವರ ಜನಪದ ಮಹಾಕಾವ್ಯದಲ್ಲಿ ಭಕ್ತ ಮತ್ತು ದೈವ ಇಂದಿನ ಗ್ರಹಿಕೆಗಳು | – ಡಾ. ನಾಗವೇಂದ್ರ ಸ್ವಾಮಿ | 43–49 |
| 11. | ಜನಪದ ಮಹಾಕಾವ್ಯ: ಮಂಟೇಸ್ವಾಮಿಕಾವ್ಯ: ಕೆಂಪಾಚಾರಿ ಸಾಲು ಒಂದು ವಿಮರ್ಶಾತ್ಮಕ ನೋಟ | – ವಿಜಯ್‌ಕುಮಾರ್. ಟಿ | 50–54 |
| 12. | ಜನಪದ ಮಹಾಕಾವ್ಯಗಳಲ್ಲಿ ಐತಿಹಾಸಿಕ ಪ್ರಜ್ಞೆ | – ಚರಣರಾಜ .ಜೆ ಹೆಚ್ | 55–58 |
| 13. | ಅಧಿಕಾರಶಾಹಿ ವ್ಯವಸ್ಥೆಗೆ ಸಂಕಮ್ಮನ ಸವಾಲು | – ಚೇತನಾ ಹೆಗಡೆ | 59–62 |
| 14. | ಜನಪದ ದೈವ ಮೈಲಾರಲಿಂಗ ಕುರಿತ ಕಥಾ ಪರಂಪರೆ | – ಡಾ. ಜಿ. ಆಶಾ | 63–65 |
| 15. | ನಿತ್ಯನೂತನ ಮಂಟೇಸ್ವಾಮಿ ಜನಪದ ಮಹಾಕಾವ್ಯ | – ಅಶ್ವಿನಿ ಬಾಯಿ ಕೆ | 66–69 |
| 16. | ಜನಪದ ಮಹಾಕಾವ್ಯಗಳ ಸಂಸ್ಕೃತಿ ಹಾಗೂ ಪರಂಪರೆ | – ಡಿ. ಅಬ್ದುಲ್ ನಿಶಾರ್ | 70–72 |
| 17. | ಜನಪದ ಮಹಾಕಾವ್ಯಗಳ ರಾಚನಿಕ ಮತ್ತು ಸಂವಹನ ಸ್ವರೂಪ | – ಶಾಂತಕುಮಾರ | 73–76 |
| 18. | ಜನಪದ ವೃತ್ತಿಗಾಯಕರು: ಕಂಸಾಳೆಯವರು | – ಲಕ್ಷ್ಮಿದೇವಿ.ಎನ್ | 77–80 |
| 19. | ಜನಪದ ಮಹಾಕಾವ್ಯಗಳಲ್ಲಿ ಪ್ರಾಣಿ ಮತ್ತು ಪಕ್ಷಿ ಜಗತ್ತು | – ಮಂಜುನಾಥ.ಡಿ.ಕೆ. | 81–85 |
| 20. | ಕನ್ನಡ ಜನಪದ ಮಹಾಕಾವ್ಯ ಮಲೆ ಮಾದೇಶ್ವರ : ಪ್ರತಿರೋಧದ ನೆಲೆಗಳು | – ಡಾ. ಮಲ್ಲಯ್ಯ ಸಂಡೂರು | 86–90 |
| 21. | ಜನಪದ ಮಹಾಕಾವ್ಯಗಳಲ್ಲಿ ಪವಾಡಗಳು | – ಡಾ.ಕೆ.ಪ್ರೇಮಕುಮಾರ | 91–94 |
| 22. | ಜನಪದ ಸಾಹಿತ್ಯದಲ್ಲಿ ಸ್ತ್ರೀ ಪಾತ್ರ ಅಂದು – ಇಂದು | – ನಾಗವೇಣಿ ಎನ್ | 95–99 |
| 23. | ಚಂದ್ರಶೇಖರ ಕಂಬಾರ ವಿರಚಿತ ಜನಪದ ಮಹಾಕಾವ್ಯ 'ಚಕೋರಿ' : ಭಾಷೆ ಮತ್ತು ಶೈಲಿ | – ಸಂದೇಶ್.ಎ.ಎಸ್. | 100–104 |
| 24. | ಜನಪದ ಸಾಹಿತ್ಯದಲ್ಲಿ – ದೇಸಿ ಸಂಸ್ಕೃತಿ | – ಪ್ರಕಾಶ ಬಿ. | 105–108 |
| 25. | ಜನಪದ ಮಹಾಕಾವ್ಯಗಳ ವೃತ್ತಿಗಾಯಕರು ಒಂದು ವಿಶ್ಲೇಷಣೆ | – ಪ್ರೊ. ಪುಷ್ಪ.ಎಂ | 109–114 |
| 26. | ಜನಪದ ಮಹಾಕಾವ್ಯಗಳಲ್ಲಿ ವಾದ್ಯಗಳ ಪರಿಕಲ್ಪನೆ | – ಡಾ. ಗುಡ್ಡಪ್ಪ ಜಿ. | 115–120 |
| 27. | ಜನಪದ ಮಹಾಭಾರತ | – ಡಾ. ಸುಮ ಆರ್. | 121–125 |
| 28. | ಶಿಷ್ಟ ದೈವಗಳನ್ನು ಸೋಲಿಸುವ ಜನಪದ ಮಹಾಕಾವ್ಯಗಳ ನಾಯಕರು | – ಸೈಯದ್ ಮುಯಿನ್ | 126–129 |
| 29. | ಶ್ರೀ ಮಲೆ ಮಾದೇಶ್ವರ ಮಹಾಕಾವ್ಯದಲ್ಲಿ ಸ್ತ್ರೀ ಪಾತ್ರಗಳ ಪ್ರಸ್ತುತತೆ | – ಪ್ರೊ. ಭುವನೇಶ್ವರಿ. ಜಿ | 130–133 |
| 30. | ಜನಪದ ಮಹಾಕಾವ್ಯಗಳಲ್ಲಿ ನಾಯಕಿಯರು | – ಡಾ. ಸೀಮಾ. ಎಸ್.ಆರ್ | 134–137 |
| 31. | ಜುಂಜಪ್ಪನ ಕಾವ್ಯ: ಮಹಿಳೆಯನ್ನು ಕಾಡುವ ಸತ್ವ ಪರೀಕ್ಷೆಗಳು | – ಡಾ.ಪುಷ್ಪಭಾರತಿ ಆರ್.ಎ | 138–142 |
| 32. | ಜನಪದ ಕಾವ್ಯಗಳಲ್ಲಿ ಹೆಣ್ಣು | – ಮೋಹನ್. ಎಂ | 143–146 |
| 33. | ಜನಪದ ಕಾವ್ಯಗಳಲ್ಲಿ ದೈವಿಕತೆ | – ವೆಂಕಟೇಶ್.ಟಿ.ಕೆ | 147–149 |
| 34. | ಮಲೆಮಹದೇಶ್ವರ ಜನಪದ ಮಹಾಕಾವ್ಯ: ಸಂಕಮ್ಮನ ಪ್ರತಿರೋಧದ ನೆಲೆ | – ಪ್ರತಿಮಾ ಎಂ ಸಿ | 150–152 |
| 35. | ಜಾನಪದ ಕಾವ್ಯದೊಳಗಿನ ಮಹಿಳೆ | – ಮಿಲನ್ ಎಂ. ಹೆಚ್ | 153–157 |
| 36. | ಮಲೆಮಹದೇಶ್ವರ ಕಾವ್ಯದ ಸಂಕಮ್ಮನ ಸಾಲು | – ರವಿ. ಎನ್ | 158–160 |

**37.** ಆಧುನಿಕ ಸಂವೇದನೆಯ ನಾಟಕ:
ಎಚ್. ಎಸ್. ಶಿವಪ್ರಕಾಶರ ಮಂಟೇಸ್ವಾಮಿ ಕಥಾಪ್ರಸಂಗ – ಡಾ. ತಾರಾಮಣಿ 161–166
**38.** ಜನಪದ ಮಹಾಕಾವ್ಯಗಳನ್ನು ಹಾಡುವ ವೃತ್ತಿಗಾಯಕರ
ಕಲೆ ಮತ್ತು ಬದುಕು – ಪ್ರೊ. ಹರೀಶ ಎಂ.ಸಿ 167–172
**39.** ಸಂಕಮ್ಮನ ಬಲಗೈ ಭಾಷೆ ಕವಟ್ಲು:
ಅಸ್ಮಿತೆಗಾಗಿ ಹೆಣ್ಣಿನ ಹೋರಾಟ – ರಶ್ಮಿ ಪಿ 173–176
**40.** ಜನಪದ ವೃತ್ತಿ ಗಾಯಕ ಸಂಪ್ರದಾಯ – ಅನಿತ ಕೆ.ವಿ 177–181
**41.** ಜನಪದ ವೃತ್ತಿಗಾಯಕರು: ಒಂದು ಅವಲೋಕನ – ಪ್ರಭಾವತಿ ಜೆ. 182–185
**42.** ಜನಪದ ವೃತ್ತಿಗಾಯಕರು – ಸುಜಾತ.ಎ 186–192
**43.** ಜನಪದ ಮಹಾಕಾವ್ಯಗಳ ರಾಚನಿಕ ಸ್ವರೂಪ – ಶೋಭಾರಾಣಿ.ಎನ್ 193–196
**44.** ಮಲೆಯ ಮಾದೇಶ್ವರ ಮಹಾಕಾವ್ಯದ ನಾಯಕಿಯಾಗಿ
ಸತ್ಯಶರಣೆ ಸಂಕಮ್ಮ – ಡಾ. ಅಶ್ವಿನಿ ನಾಯಕ್ 197–200
**45.** ಮಂಟೇಸ್ವಾಮಿ ಜನಪದ ಕಾವ್ಯದಲ್ಲಿ ಪವಾಡಗಳು:
ಸಂಕ್ಷಿಪ್ತ ವಿಶ್ಲೇಷಣೆ – ವೇಣುಗೋಪಾಲ್.ಆರ್ 201–204
**46.** ಅಮೋಘಸಿದ್ದ ಪರಂಪರೆಯ ವೈಶಿಷ್ಟ್ಯತೆ – ಸಾವಿತ್ರಿ ಮೋದಿ 205–208
**47.** ಜನಪದ ಮಹಾಕಾವ್ಯಗಳಲ್ಲಿ 'ವಿವಾಹ' ಒಂದು ಅವಲೋಕನ – ಡಾ. ಪ್ರೇಮಾ ಅಪಚಂದ 209–214
**48.** ಜನಪದ ಮಹಾಕಾವ್ಯಗಳ ವೃತ್ತಿಗಾಯಕರು – ಶಶಿಕಲಮ್ಮ. ಯು 215–218
**49.** ಜನಪದ ಮಹಾಕಾವ್ಯಗಳ ವೃತ್ತಿ ಗಾಯಕರು – ಡಾ. ಶಿವಗಂಗಾ ಯು. ಬಿಲಗುಂದಿ 219–221
**50.** ಜನಪದ ಮಹಾಕಾವ್ಯ: ಮಂಟೇಸ್ವಾಮಿ ಕಾವ್ಯ ಕುರಿತು
ಒಂದು ಅಧ್ಯಯನ – ವಿಜಯಲಕ್ಷ್ಮೀ. ಡಿ 222–225
**51.** ಜನಪದ ಮಹಾಕಾವ್ಯಗಳ ವೃತ್ತಿಗಾಯಕರು – ಶಾರದಮ್ಮ. ಎಂ .ಕೆ 226–231
**52.** ಕನ್ನಡ ಜನಪದ ಮಹಾಕಾವ್ಯಗಳು: ಒಂದು ಅಧ್ಯಯನ – ಡಾ. ಭಾಗ್ಯಮ್ಮ.ಜಿ 232–233
**53.** ಜನಪದ ಕಥೆಗಳಲ್ಲಿ ಪ್ರತಿನಿಧೀಕರಣಗೊಂಡ
ಸಾಂಸ್ಕೃತಿಕ ಮೌಲ್ಯಗಳು – ಲೋಹಿತ್.ಪಿ 234–238
**54.** ಜನಪದ ಒಗಟುಗಳ ವೈಶಿಷ್ಟ್ಯತೆಯ ಜೊತೆಗಿನ ಒಳ ನೋಟ – ಶಿವಾನಂದ 239–243

# 1. ಜನಪದ ಮಹಾಕಾವ್ಯದ ಸ್ವರೂಪ

ಪ್ರೊ. ಹಿ.ಚಿ.ಬೋರಲಿಂಗಯ್ಯ

ಭಾರತೀಯ ಕಾವ್ಯ ಹಾಗೂ ಕನ್ನಡ ಕಾವ್ಯಗಳ ಗೊತ್ತು ಗುರಿಗಳನ್ನು ನಿರ್ಧರಿಸುವಲ್ಲಿ ಚಿಂತನೆ ನಡೆಸಿರುವ ಭಾರತೀಯ ಪುರಾತನ ಲಾಕ್ಷಣಿಕರು ಮತ್ತು ಕನ್ನಡದ ಕಾವ್ಯಮೀಮಾಂಸಕರು ತಮ್ಮ ಚಿಂತನೆಗೆ ಮತ್ತು ಉದಾಹರಣೆಗೆ ಬಳಸಿಕೊಂಡದ್ದು ಕೇವಲ ಶಿಷ್ಟ ಕಾವ್ಯವನ್ನು ಮಾತ್ರ. ನನ್ನ ಪ್ರಕಾರ ಶಿಷ್ಟ ಎಂದರೆ ಕೇವಲ ಬರವಣಿಗೆಯ ರೂಪದ್ದು ಎಂದಷ್ಟೇ ಭಾವಿಸಬೇಕಾಗಿಲ್ಲ. ಲಿಪಿ ಬಲ್ಲವರು ರೂಪಿಸಿದ ಸಂಪ್ರದಾಯವಾದಿ ಚೌಕಟ್ಟಿನೊಳಗಿನ ಎಲ್ಲ ಒಪ್ಪಿತ ಮೌಲ್ಯಗಳ ಸಂಚಯವೇ ಶಿಷ್ಟ. ನಮ್ಮ ದೇಶದ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಶಿಷ್ಟ ಧೋರಣೆಯ ಸಮುದಾಯಗಳು ಮತ್ತು ಅವರನ್ನು ಪ್ರತಿಪಾದಿಸುವ ಸನಾತನವಾದಿ ಚಿಂತಕರು ತಮ್ಮದೇ ಶ್ರೇಷ್ಠ, ತಾವು ಹೇಳುವುದೇ ಅಂತಿಮ ಎಂಬ ಏಕಮುಖ ದಾರಿಯಲ್ಲಿ ನಡೆದಿದ್ದಾರೆ. ಅವರ ದೃಷ್ಠಿಯಲ್ಲಿ ಅದೇ ಹೆದ್ದಾರಿ ಉಳಿದವೆಲ್ಲ ಕವಲುದಾರಿಗಳು ಮಾತ್ರ. ಅವರ ಚಿಂನೆಗಳಿಗೆ ಪರ್ಯಾಯವಾಗಿ ಸಾಗುವ ಅಥವಾ ಸಮಾನಾಂತರವಾದ ಇತರೆ ದಾರಿಗಳ ಇರುವಿಕೆಯನ್ನು ಅವರು ಒಪ್ಪುವುದಿಲ್ಲ. ಸ್ಥಾಪಿತ ಮೌಲ್ಯಗಳನ್ನು ಸಾರುವ ಒಂದು ವರ್ಗದ ಸಂಸ್ಕೃತಿಯೇ ನಿಜವಾದ ಸಂಸ್ಕೃತಿ, ಉಳಿದುದೆಲ್ಲ ಅದರ ಪ್ರಭಾವದಿಂದ ರೂಪಿತವಾದದ್ದು ಎಂಬ ಧೊರಣೆ ಅವರದಾಗಿತ್ತು. ಇಡೀ ಭಾರತಕ್ಕೆ 'ಒಂದು ಸಂಸ್ಕೃತಿ' ಇದೆ. ಅದೇ 'ಹಿಂದೂ ಸಂಸ್ಕೃತಿ' ಎಂಬ ಏಕಮುಖಿ ಚಿಂತನೆ ಅವರ ಅಭಿಪ್ರಾಯಕ್ಕೆ ಕಾರಣವಿರಬಹುದು. ಆದರೆ ಈ ವಿಶಾಲ ನೆಲದ ವಿವಿಧ ಭಾಷೆಗಳು, ಅಲ್ಲಿನ ಜನರು, ಅವರ ಆಚಾರವಿಚಾರಗಳು, ಕಟ್ಟಿಕೊಂಡುಬಂದ ಸಾಂಸ್ಕೃತಿಕ ಸಂಗತಿಗಳು. ಆ ಮೂಲಕ ರೂಪಿಸಿಕೊಂಡು ಬಂದ ಮೌಲ್ಯಗಳು ಹಾಗೂ ಅವರ ಲೋಕದೃಷ್ಟಿಯನ್ನು ಅವಲೋಕಿಸಿದರೆ ಮೇಲಿನ ಶಿಷ್ಟ ಭಾವನೆ ಎಷ್ಟು ಮಿಥ್ಯವಾದದ್ದು ಎಂಬುದು ಗೊತ್ತಾಗುತ್ತದೆ.

ಮಹಾಕಾವ್ಯ ಎಂದರೆ ಹೀಗೇ ಇರಬೇಕು ಎಂಬ ಕಟ್ಟುಪಾಡಿನ ಒಂದು ಕಾಲವಿತ್ತು. ಸದ್ವಂಶಜನಾದ ಒಬ್ಬ ನಾಯಕ. ಉದಾತ್ತ ಗುಣ ಸ್ವಭಾವದ ರಾಜ, ಸದಾ ಕೆಟ್ಟದ್ದನ್ನೇ ಬಯಸುವ ಪ್ರತಿನಾಯಕರು, ಅಷ್ಟಾದಶವರ್ಣನೆ ಇತ್ಯಾದಿಗಳೆಲ್ಲ ಒಂದು ಕಾವ್ಯಕ್ಕೆ ಇರಲೇಬೇಕಾದ ಕಡ್ಡಾಯ ಅಂಶಗಳಾಗಿದ್ದವು. ಮಹಾಕಾವ್ಯ ಎಂದರೆ ಹೀಗಿರಬೇಕು ಎಂಬ ನಿರ್ದಿಷ್ಟ ಕಲ್ಪನೆಯಲ್ಲಿಯೇ ಯೋಚಿಸಿದ ಇವರೆಲ್ಲ ಜನಪದ ಮಹಾಕಾವ್ಯಗಳನ್ನು ಅವರ ಪರಧಿಯಲ್ಲಿ ತೆಗೆದುಕೊಳ್ಳಲೇ ಇಲ್ಲ. ಆದರೆ ಪಾಶ್ಚಾತ್ಯ ಮೌಖಿಕ ಮಹಾಕಾವ್ಯಗಳೆನಿಸಿದ ಕಾಲೇವಾಲ, ಗಿಲ್ಗಮಿಶ್ ಮತ್ತು ಬೋವುಲ್ಫ್‌ಗಳಂಥ ಕಾವ್ಯಗಳನ್ನು ಅಪ್ಪಟ ಕಾವ್ಯ ಎಂದು ಪರಿಗಣಿಸಿದ ಪಾಶ್ಚಾತ್ಯ ವಿದ್ವಾಂಸರು ಮಹಾಕಾವ್ಯಗಳ ಪಟ್ಟಿಯಲ್ಲಿ ಅವುಗಳನ್ನು ಸ್ಪಷ್ಟವಾಗಿ ದಾಖಲಿಸಿದರು. ಬಹುಶ: ಇಂತ ನಿಸ್ಪಕ್ಷಪಾತ ಧೋರಣೆ ಇದ್ದುದರಿಂದಲೇ ಸಿ.ಎಂ. ಬೋವ್ರನಂಥ ಒಬ್ಬ ಪ್ರಮುಖ ವಿದ್ವಾಂಸ ಈ ಮೌಖಿಕ ಮಹಾಕಾವ್ಯ ಮತ್ತು ಶಿಷ್ಟ ಮಹಾಕಾವ್ಯದ ಸ್ವರೂಪದ ಬಗ್ಗೆ ಚರ್ಚಿಸುತ್ತ 'ಈ ಎರಡೂ ಬಗೆಯ ಮಹಾಕಾವ್ಯಗಳಲ್ಲಿ ವಾಚಿಕ ಮಹಾಕಾವ್ಯವೇ ಶುದ್ಧವಾದ ಸಹಜಸ್ಫೂರ್ತವಾದ ನೇರವಾದ ನಿರರ್ಗಳವಾದ ನಾಗರೀಕತೆಯಿಂದ ಕಲುಷಿತವಾಗದ ಕವಿಯವಾಣಿ' ಎಂದು ಘೋಷಿಸಿದ. ಆದರೆ ನಮ್ಮಲ್ಲಿ ಇಂಥ ಅರಿವು ಮೂಡಲು ತಡವಾದದ್ದಾದರೂ ಯಾಕೆ? ಬಹುಶ: ರಾಮಾಯಣ ಮಹಾಭಾರತಗಳು ಮಾತ್ರ ನಮ್ಮ ದೇಶದ ಮಹಾಕಾವ್ಯಗಳು ಎಂಬ ಸಾರ್ವತ್ರಿಕ ಅಭಿಪ್ರಾಯ ನಮ್ಮದಾಗಿತ್ತು. ಈ ಎರಡೂ ಮೇರು ಕೃತಿಗಳಷ್ಟೇ ಇಡೀ ಭರತಖಂಡದ ಸಂಸ್ಕೃತಿಯನ್ನು ಪ್ರತಿನಿಧಿಸುವ ಶಕ್ತಿಯನ್ನು ಪಡೆದುಕೊಂಡಿವೆ ಎಂಬ ನಂಬಿಕೆಯೂ ಬಲವಾಗಿತ್ತು. ಭಾರತದಾದ್ಯಂತ ಅನೇಕ ಬುಡಕಟ್ಟುಗಳು ತಮ್ಮದೇ ಆದ ರಾಮಾಯಣ ಮಹಾಭಾರತಗಳ'ನ್ನು ಹಾಡಿಕೊಳ್ಳುತ್ತಿದ್ದರಾದರೂ ಶಿಷ್ಟ ಕಾವ್ಯಗಳ ಸ್ಥಾಪಿತ ಮೌಲ್ಯಗಳಿಗೆ ಅವು ವಿರುದ್ಧವಾಗಿದ್ದುದರಿಂದಾಗಿ ಅವುಗಳನ್ನು ಮಾನ್ಯ ಮಾಡಲಿಲ್ಲ. ಮಾಹಾಕಾವ್ಯ ಎಂದರೆ ಅದು ನೂರಾರು ಘಟನೆಗಳ ಸಂಕೀರ್ಣತೆಯಿಂದ ಕೂಡಿರುದಾದ್ದರಿಂದ ಅಕ್ಷರ ಬಲ್ಲವನು ಮಾತ್ರ ಅಂತಹದ್ದನ್ನು ರಚಿಸಬಲ್ಲನೆಂಬ ತಿಳುವಳಿಕಯೂ ಈ ನಿರ್ಲಕ್ಷ್ಯಕ್ಕೆ ಕಾರಣವಿರಬಹುದು.

ಭಾರತದ ಬಹುಮುಖ್ಯ ಕಾವ್ಯಗಳೆಂದು ಪರಿಗಣಿಸಲ್ಪಟ್ಟ ರಾಮಾಯಣ ಮಹಾಭಾರತಗಳು ಒಬ್ಬ ಕರ್ತೃವಿನಿಂದ ರಚಿಸಲ್ಪಟ್ಟ ಕೃತಿಗಳಾದರೂ ಜನಸಾಮಾನ್ಯರ ನಡುವೆ ಅವು ವಿಸ್ತಾರಗೊಂಡ ರೀತಿ ವಿಸ್ಮಯ ಹುಟ್ಟಿಸುವಂಥದ್ದೇ. ಮೂಲತ: ದೇವ ಭಾಷೆ ಎಂದು ಪರಿಗಣಿಸಲ್ಪಟ್ಟ, ಆದರೆ ಜನಸಾಮಾನ್ಯರ ನಡುವೆ ಇಂದು ಇಲ್ಲವಾಗಿರುವ ಭಾಷೆಗಳಲ್ಲಿ ರಚಿಸಲ್ಪಟ್ಟ ಈ ಕಾವ್ಯಗಳನ್ನು ವಿವಿಧ ದೇಶಭಾಷೆಗಳು ಅನುವಾದಿಸಿಕೊಂಡವು ಅಥವಾ ಪುನರ್‌ಸೃಷ್ಟಿ ಮಾಡಿಕೊಂಡವು. ಆಯಾ ನೆಲದ ಗುಣ ಸ್ವಭಾವಗಳನ್ನು ತಮ್ಮ ತಮ್ಮ ಶಕ್ತ್ಯಾನುಸಾರ ಕವಿಗಳು ಈ ಕಾವ್ಯಗಳಲ್ಲಿಯೇ ಪ್ರತಿಬಿಂಬಿಸಿದರಾದರೂ ತಮ್ಮವರಲ್ಲದ, ಇನ್ನೊಂದು ಭಿನ್ನ ಪ್ರದೇಶದ ವೈದಿಕ ವೀರರ ಕಥನವನ್ನಾಗಲೀ, ದಶಾವತಾರದ

ISBN – 978-93-5526-247-9

ಹಿನ್ನೆಲೆಯನ್ನಾಗಲೀ, ಆರ್ಯ ಸಂಸ್ಕೃತಿಯ ಗುಣ ವಿಶೇಷಗಳನ್ನಾಗಲೀ ಅಥವಾ ಅವರ ಸ್ಥಾಪಿತ ಮೌಲ್ಯಗಳನ್ನಾಗಲಿ ಬದಲಿಸಲು ಸಾಧ್ಯವಾಗಲಿಲ್ಲ. 'ಅಖಿಲ ಭಾರತ' ಪರಂಪರೆಯಲ್ಲಿ ಹರಿದು ಬಂದ ಈ ಎರಡು ಪುರಾಣ ಮಹಾಕಾವ್ಯಗಳು ಆಳುವ ವರ್ಗಗಳ ನಡುವಿನ ದ್ವೇಷ ವೈಷಮ್ಯಗಳನ್ನು ಪ್ರೀತಿ ಪ್ರೇಮಗಳನ್ನು, ಆ ಮೂಲಕ ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು ಕೇಂದ್ರವಾಗಿ ಇಟ್ಟುಕೊಂಡು ಬಂದವು. ಪಂಪನ ಭಾರತದಿಂದ ಹಿಡಿದು ಕುವೆಂಪುರವರ ರಾಮಾಯಣ ದರ್ಶನದವರೆಗೆ ಈ ಮಾತು ನಿಜ ಎಂದೇ ನನ್ನ ನಂಬಿಕೆ.

ಅದಕ್ಕೆ ಪ್ರತಿಯಾಗಿ ಸ್ಥಳೀಯ ಸಾಂಸ್ಕೃತಿಕ ವೀರರ ಕಥನಗಳನ್ನು, ಪವಾಡ ಪುರುಷರು, ಬೈರಾಗಿಗಳು, ಸಾಧಕರ ಮಹಿಮೆಗಳನ್ನು, ಅವರ ಜೀವನ ಪ್ರೀತಿಯ ವಿಶೇಷಗಳೆನಿಸಿದ ಮದ್ಯ, ಮಾಂಸ, ಮೈಥುನ, ಭಂಗಿಸೇವನೆಯಂಥ ನಿರಾಕರಿಸಲಾಗದ ವಿಚಾರಗಳನ್ನು, ಸ್ತ್ರೀ ಪ್ರಧಾನವಾದ ದ್ರಾವಿಡ ಮೂಲ ಮೌಲ್ಯಗಳನ್ನು ಪ್ರತಿನಿಧಿಸುವ ದೀರ್ಘ ಕಥಾನಕಗಳು ನಮ್ಮಲ್ಲಿವೆ. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲಂಥ ಶಕ್ತಿ ಪಡೆದವುಗಳು. ರಾಜಮಹಾರಾಜರ ಆಳ್ವಿಕೆಯ ವಿಧಾನಗಳೇ ನಮ್ಮ ಬಹುಪಾಲು ಇತಿಹಾಸಕಾರರ ಕಣ್ಣು ತೆರೆಸಿ ಜನಸಾಮಾನ್ಯರ ಇತಿಹಾಸಕ್ಕಾಗಿ ಒತ್ತಾಯಿಸಬಲ್ಲ, ಆ ಬಗೆಗಿನ ಅರಿವು ಮೂಡಿಸಬಲ್ಲ ಶಕ್ತಿ ಈ ಕಥನಗಳಿಗಿದೆ. ಪರಂಪರಾಗತವಾದ ಶಿಷ್ಟ ಮನಸ್ಸಿನ ನಂಬಿಕೆಗಳಿಗೆ ತದ್ವಿರುದ್ಧವಾದ ಈ ಕಥನಗಳು ತಮ್ಮದೇ ಮೌಲ್ಯಗಳನ್ನು, ಜೀವನ ದೃಷ್ಟಿಯನ್ನು ಹಾಗೂ ಅವರ ವಿವೇಕವನ್ನು ಹೇಳುತ್ತವೆ. ಜನಸಾಮಾನ್ಯರ ನಡುವಿನ ಸರಳ ವ್ಯಕ್ತಿತ್ವದ ಈ ಕಥನಗಳ ಸ್ವಾಭಿಮಾನಕ್ಕೆ ಕುಂದು ಬಂದಾಗ ಉಗ್ರವಾಗಿ ಪ್ರತಿಭಟಿಸಿ ನಿಲ್ಲಬಲ್ಲವರು. ಈ ನಾಯಕರಾದರೂ ಎಂಥವರು? ಮಾದಿಗನೆಂದು ಹೇಳಲಾಗುವ ಮಾದಪ್ಪ, ಹೊಲೆಯನೆಂದು ಕರೆಯಲಾಗುವ ಮಂಟೇಸ್ವಾಮಿ, ದನ ಕಾಯುವ ಅನಾಥ ಜುಂಜಪ್ಪ, ಕುರಿ ಕಾಯುವ ಮೈಲಾರಲಿಂಗ. ಕಾಡು ಮತ್ತು ನಾಡಿನ' ನಡುವೆ ಸಂಬಂಧ ಸ್ಥಾಪಿಸಿಕೊಳ್ಳಬಲ್ಲ ಇವರು ಪ್ರಕೃತಿಯಲ್ಲಿನ ದುಷ್ಟ ಮೃಗಗಳನ್ನು ಒಲಿಸಿಕೊಂಡು ಅವುಗಳನ್ನು ಸ್ನೇಹದಿಂದ ಕಾಣಬಲ್ಲವರು, ಬೇಟೆಗಾರರಂತೂ ಅಲ್ಲ ನಾಗರಿಕ ಸಮಾಜದ ಅಥವಾ ಪ್ರಭುತ್ವದ ದಬ್ಬಾಳಿಕೆಯಿಂದ ತಮ್ಮನ್ನು ನಂಬಿದ ಜನವರ್ಗಗಳನ್ನು ರಕ್ಷಿಸಬಲ್ಲವರು, ರಾಜ್ಯ ಆಳುವವರಂತೂ ಅಲ್ಲ! ದುಷ್ಟರು ಅಥವಾ ಹೆಡ್ಡರನ್ನು ಪಳಗಿಸಬಲ್ಲವರು, ಕೊಲ್ಲುವವರಲ್ಲ!

ಮಹಾಕಾವ್ಯಗಳು ಪ್ರತಿಪಾದಿಸುವ ಅಷ್ಟಾದಶ ವರ್ಣನೆ ಜನಪದ ಕಾವ್ಯದ ಉದ್ದೇಶವಲ್ಲ. ಕಂಡದ್ದನ್ನು ಕಂಡ ಹಾಗೆ ಹೇಳುವ ಪರಿಪಾಠ ಅವರದು. ಇದು ಬಾಣನ 'ಕಾದಂಬರಿ' ಕಾವ್ಯಲೋಕವಲ್ಲ. ಹಾಗೆಯೇ ಕುವೆಂಪು ಅವರ ಲಂಕೆಯ ವರ್ಣನೆಯೂ ಅಲ್ಲ. ಬದಲಾಗಿ ಕಾಡಿನ ಜನರ ಅವಿಭಾಜ್ಯ ಅಂಗವಾದ ಬೇಟೆ, ಆಹಾರ ಸಂಗ್ರಹಣೆ, ಪಶು ಸಂಗೋಪನೆ, ಹುಲಿ. ಚಿರತೆ, ಹಾವು, ಚೇಳುಗಳ ಸಹಜಲೋಕ ಅದು. ಇಷ್ಟೆಲ್ಲದರ ಹಿನ್ನೆಲೆಯಲ್ಲಿ ಒಂದು ಮಾತು ಹೇಳುವ ಅವಶ್ಯಕತೆ ಇದೆ. ಇಡೀ ರಾಮಾಯಣ ಒಂದು ಸಾಮ್ರಾಜ್ಯದ ವಿಸ್ತರಣೆಗೆ ಸಂಬಂಧಿಸಿದ್ದು. ರಾಮನ ಪಯಣವೇ ಸಾಮ್ರಾಜ್ಯ ವಿಸ್ತರಣೆಯ ತವಕದಿಂದ ಕೂಡಿದ್ದು. ಮಹಾಭಾರತ ಹಾಗೆ ವಿಸ್ತರಿಸಲ್ಪಟ್ಟ ಸಾಮ್ರಾಜ್ಯವನ್ನು ಹಂಚಿಕೊಳ್ಳುವ ತವಕಕ್ಕೆ ಸಂಬಂಧಿಸುತ್ತದೆ. ಒಂದುಕಡೆ ನೆಲೆಗೊಂಡು, ಒಂದು ನಾಗರಿಕತೆಯನ್ನು ಕಟ್ಟಿದ ನಂತರದ ಸ್ಥಿತಿಯನ್ನು ರಾಮಾಯಣ ಮಹಾಭಾರತಗಳು ಹೇಳುತ್ತವೆ. ಆದರೆ ಈ ಮೌಖಿಕ ಮಹಾಕಾವ್ಯಗಳಲ್ಲಿನ ಮೂಲತ: ಅಲೆಮಾರಿಗಳೂ ಬೈರಾಗಿಗಳೂ ಆದ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರರು ಒಂದು ಕಡೆ ನೆಲೆಗೊಳ್ಳುವ ತವಕದಲ್ಲಿ ಇರುವವರು. ಹೀಗಾಗಿ ಈ ಜನಪದ ಮಹಾಕಾವ್ಯಗಳ ವಸ್ತುವೇ ಒಂದುಕಡೆ ನೆಲೆಗೊಳ್ಳುವ ಪೂರ್ವದ ಸ್ಥಿತಿಯನ್ನೂ ಮತ್ತು ಆ ಸಂದರ್ಭದ ಘರ್ಷಣೆಗಳನ್ನೂ ಹೇಳುವಂಥದ್ದು. ಇರುವುದನ್ನು ವೈಭವಿಸುವ ಲಿಖಿತ ಮಹಾಕಾವ್ಯಗಳು ಕಾವ್ಯ ಸತ್ಯದ ಕಡೆಗೆ ಹೆಚ್ಚು ಗಮನ ಕೊಟ್ಟರೆ, ಇಲ್ಲದಿರುವುದಕ್ಕೆ ತುಡಿಯುವ ಜನಪದ ಮಹಾಕಾವ್ಯಗಳು ಜೀವನ ಸತ್ಯಕ್ಕೆ ಹೆಚ್ಚು ಒತ್ತು ಕೊಟ್ಟಿವೆ ಎನ್ನಿಸುತ್ತದೆ.

ಮೇಲುವರ್ಗದ ಸಂಸ್ಕೃತಿಗಳು ಪರಿಭಾವಿಸಿದ ರಾಮಾಯಣ ಮಹಾಭಾರತಗಳು ಶೂದ್ರಾತಿಶೂದ್ರರುಗಳಲ್ಲಿ ಏನಾಗಿದೆ ಎಂಬುವುದನ್ನು ನೋಡಿದಾಗ ಇನ್ನಷ್ಟು ಸತ್ಯಗಳು ನಮಗೆ ಗೊತ್ತಾಗುತ್ತವೆ. ಪಾತಿವ್ರತ್ಯದ ಮೌಲ್ಯವನ್ನು ಸಾರಿಹೇಳುವ ರಾಮಾಯಣ ಬುಡಕಟ್ಟುಗಳ ಕಲ್ಪನೆಯಲ್ಲಿ ಛಿದ್ರಗೊಂಡಿರುವದನ್ನು ನೋಡಬಹುದು. ಹಲವು ಸಾವಿರ ವರ್ಷಗಳಿಂದ ವೈದಿಕ ಮೌಲ್ಯಗಳ ಹೇರಿಕೆ ನಿರಂತರವಾಗಿ ಆಗುತ್ತ ಬಂದಿದ್ದರೂ ಇಂದಿಗೂ ತಮ್ಮ ತನವನ್ನು ಆಂತರಿಕವಾಗಿ ಉಳಿಸಿಕೊಂಡು ಬಂದ ಅನೇಕ ಸಮುದಾಯಗಳ ಸತತ ಸಂಘರ್ಷ ನಮ್ಮಲ್ಲಿ ಹೆಮ್ಮೆಯನ್ನುಂಟು ಮಾಡುತ್ತದೆ. ಹೊರಗಿನದನ್ನು ಎಷ್ಟು ಬೇಕೋ ಅಷ್ಟು ಪಡೆದು ವಿಕಾಸಗೊಳ್ಳುತ್ತಲೆ ತನ್ನ ಆಂತರಿಕ ಅಂತ:ಸತ್ವವನ್ನು

ISBN – 978-93-5526-247-9

ಜತನದಿಂದ ಕಾಪಾಡಿಕೊಳ್ಳುವ ಪ್ರಕ್ರಿಯೆಯನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಹಾಗೆ ತನ್ನ ತನವನ್ನು ನಾಶಪಡಿಸಿಕೊಳ್ಳಲು ಒಪ್ಪದ ನೆಲದ ಭಾಷೆಯ ಅನನ್ಯತೆ ಜನಪದ ಸಮುದಾಯಕ್ಕೆ ಇದೆ. ಆ ಅನನ್ಯತೆಯ ಸಮಷ್ಠಿ ರೂಪವೇ ಜನಪದ ಮಹಾಕಾವ್ಯ.

ನಮ್ಮ ಶಿಷ್ಟ ಪುರಾಣಗಳು ಅಥವಾ ಶಿಷ್ಟ ಕಾವ್ಯಗಳು ಕಟ್ಟಿಕೊಡುವ ಏಕರೂಪಿಯಾದ ಭಾರತೀಯ ಮೌಲ್ಯಗಳು ಜನಪದ ಮಹಾಕಾವ್ಯಗಳಲ್ಲಿ ಕಾಣಸಿಗದಿರಬಹುದು. ಆದರೆ ಒಂದು ನಿರ್ದಿಷ್ಟ ಭೂ ಪ್ರದೇಶದ ವಿಶಿಷ್ಟ ಸಂಸ್ಕøತಿ ವಲಯವೊಂದರಲ್ಲಿ ಭೌತಿಕವಾಗಿ ಮತ್ತು ಆಂತರಿಕವಾಗಿ ಕಂಡುಬರುವ ಒಂದು ಭಾಷಾ ಸಮುದಾಯದ ಅನನ್ಯ ಲೋಕದೃಷ್ಟಿಯ ಸೃಜನ ರೂಪಗಳಾಗಿ ಈ ಕಾವ್ಯಗಳನ್ನು ನಾವು ನೋಡಬೇಕು. ಆದ್ದರಿಂದ ಈ ಪ್ರಾತಿನಿಧಿಕ ಮಹಾಕಾವ್ಯಗಳನ್ನು ಸಾಂಸ್ಕøತಿಕವಾದ ಸಾಮಾಜಿಕವಾದ ಹಾಗೂ ರಾಜಕೀಯವಾದ ಬಹುನಿಟ್ಟಿನಿಂದ ನೋಡುವುದು ಅನಿವಾರ್ಯವಾಗುತ್ತದೆ.

ಇನ್ನು ಜನಪದ ಮಹಾಕಾವ್ಯದ ರೂಪ ಸ್ವರೂಪಗಳನ್ನು ಕುರಿತು ನಾವು ನೋಡಬಹುದು. ಇದುವರೆಗೆ ನಾವು ಈ ಹಿಂದಿನ ಅಧ್ಯಾಯದಲ್ಲಿ ನೋಡಿದ ಜನಪದ ಮೇಳಗಳ ಕಥನಗಳಂತೆ ಜನಪದ ಮಹಾಕಾವ್ಯ ಕೂಡ ಹಾಡುವ ಅಭಿನಯಿಸುವ ಕೇಳುವ ಮತ್ತು ನೋಡುವ ಒಂದು ದೃಶ್ಯ ರೂಪಕ. ಈ ಕಾವ್ಯಕ್ಕೆ ತನ್ನದೇ ಆದ ಸಿದ್ಧಾಂತವಿರುತ್ತದೆ. ಕನ್ನಡ ಜಾನಪದ ಕಾವ್ಯಕ್ಕೆ ಅಷ್ಟೇ ಅಲ್ಲ. ಪ್ರಪಂಚದ ಎಲ್ಲ ಜನಪದ ಕಾವ್ಯಗಳಿಗೂ ಅನ್ವಯಿಸುವ ಒಂದು ಸಿದ್ಧಾಂತವಿದೆ. ಅದನ್ನು 'ಸಾಂದರ್ಭಿಕ ಸಿದ್ಧಾಂತ' ಎಂದು ಕರೆಯುತ್ತಾರೆ. ಅಂದರೆ ಪ್ರತಿಯೊಂದು ಪ್ರದರ್ಶನವು ಒಂದಲ್ಲ ಒಂದು ರೀತಿಯಲ್ಲಿ ಭಿನ್ನವಾಗಿರುತ್ತದೆ ಎಂಬುದೇ ಆ ಸಿದ್ದಾಂತ. ಅಂದರೆ ಕಲಾವಿದನೊಬ್ಬ ಅಥವಾ ಮೇಳದವರು ತಮ್ಮ ಮುಂದೆ ಇರುವ ಪ್ರೇಕ್ಷಕ ಸಮೂಹದ ಹಿನ್ನೆಲೆಯನ್ನು ಅರಿತು ಅವರವರ ಅಭಿರುಚಿಗೆ ತಕ್ಕಂತೆ ಪ್ರದರ್ಶನವನ್ನು ನೀಡುತ್ತಾರೆ. ಅಲ್ಲದೆ ಅವರು ಪ್ರದರ್ಶಿಸುತ್ತಿರುವ ಸ್ಥಳ ಆ ಸ್ಥಳದ ಹಿನ್ನೆಲೆ ಅಲ್ಲಿನ ಸಮಕಾಲೀನ ಸಂಗತಿಗಳು ಸಾಂಸ್ಕøತಿಕ ವೈಶಿಷ್ಟ್ಯಗಳು ಇವೆಲ್ಲವನ್ನು ಆಗಿನ ತನ್ನ ಪ್ರದರ್ಶನದಲ್ಲಿ ಅಳವಡಿಸಿಕೊಳ್ಳುವ ಮೂಲಕ ತನ್ನ ಕಥಾನಿರೂಪಣೆಗೆ ಹೊಸಹೊಸದನ್ನು ಸೇರಿಸುತ್ತ ಹೋಗುತ್ತಾನೆ. ಆದ್ದರಿಂದಲೇ ಪ್ರತಿಯೊಂದು ಪ್ರದರ್ಶನವು ಒಂದಕ್ಕಿಂತ ಒಂದು ಭಿನ್ನವಾಗಿ ನವನವೋನ್ಮೇಷಶಾಲಿನಿ ಆಗುತ್ತ ಹೋಗುತ್ತದೆ. ಜನಪದ ಮಹಾಕಾವ್ಯದ ಪ್ರದರ್ಶನಕ್ಕೆ ಒಂದು ಆರಂಭ ಮತ್ತು ಅಂತ್ಯಗಳಿರುತ್ತವೆ. ಆರಂಭಕ್ಕೆ ಪ್ರಾರ್ಥನೆ ಅಂತ್ಯಕ್ಕೆ ಮಂಗಳ ಇರಲೇಬೇಕು. ಜನಪದ ಮಹಾಕಾವ್ಯದ ವಿವಿಧ ಘಟಕಗಳು 'ಸಾಲು' 'ಸಂದು' 'ಕವಟ್ಲು' 'ವಚನ' ಇತ್ಯಾದಿಯಾಗಿ ಸ್ವತಂತ್ರವಾಗಿ ವಿಂಗಡಣೆಯಾಗಿರುತ್ತದೆ. ಅಂದರೆ ಜನಪದ ಮಹಾಕಾವ್ಯವು ಒಮ್ಮೆಲೆ ಒಬ್ಬ ವ್ಯಕ್ತಿಯಿಂದ ರಚನೆಯಾದುದಲ್ಲ. ಒಂದೊಂದು ಘಟಕವು ಒಂದೊಂದು ಕಾಲಘಟ್ಟದಲ್ಲಿ ಅಥವಾ ಪ್ರತ್ಯೇಕ ಗಾಯಕರಿಂದ ರಚನೆಯಾಗಿರುತ್ತದೆ. ಹೀಗೆ ಭಿನ್ನ ಭಿನ್ನ ಕಾಲಘಟ್ಟಗಳಲ್ಲಿ ರಚಿತವಾದ ಸ್ವತಂತ್ರ ಕಥೆ ಕ್ರಮೇಣ ಒಬ್ಬ ಸಾಂಸ್ಕøತಿಕ ನಾಯಕನ ನೆಪದಲ್ಲಿ ಅವನನ್ನು ಕೇಂದ್ರಬಿಂದುವನ್ನಾಗಿ ಇಟ್ಟುಕೊಂಡು ಸುಸಂಬದ್ಧವಾಗಿ ಹೆಣೆಯಲ್ಪಡುತ್ತದೆ.

ಯಾವುದೇ ಜನಪದ ಮಹಾಕಾವ್ಯ ಜಗತ್ತಿನ ಉದಯದ, ಹಾಗೂ ಸಚರಾಚರ ಜೀವರಾಶಿಗಳ ಸೃಷ್ಟಿಯ ಕಥನಗಳ ಮೂಲಕ ಆರಂಭವಾಗುತ್ತದೆ. ಸಾಂಸ್ಕøತಿಕ ನಾಯಕನ ಹುಟ್ಟಿನ ಬಗ್ಗೆಯೂ ಕಥೆಗಳಿರುತ್ತವೆ. ಜನಪದ ಮಹಾಕಾವ್ಯ ಎಂದರೆ ಅದೊಂದು ಸಮಷ್ಠಿ ಪ್ರಜ್ಞೆಯ ಸಂಕೇತವಾಗಿ ಹಾಗೂ ಅವರ ಲೋಕ ದೃಷ್ಟಿಯ ಸಂಕೇತವಾಗಿ ನಿರ್ಮಾಣಗೊಳ್ಳುತ್ತದೆ. ಜನಪದ ಮಹಾಕಾವ್ಯದ ಬಹುತೇಕ ಕಥನ ನಾಯಕನ ಪಯಣವನ್ನು ಆಧರಿಸಿರುತ್ತದೆ. ಅದನ್ನು ಹಾಡುವ ಗಾಯಕರು ಪಂಥ ಪ್ರಸಾರಕರಾಗಿದ್ದು ಅವರು ಅಲೆಮಾರಿಗಳಾಗಿರುತ್ತಾರೆ. ಹೀಗೆ ಕಥನವನ್ನು ಪ್ರಸಾರಮಾಡುವ ಗಾಯಕರಿಗೆ ಆಯಾ ಸಾಂಸ್ಕøತಿಕ ನಾಯಕನ ಹೆಸರಲ್ಲಿ ಅಥವಾ ದೈವದ ಹೆಸರಲ್ಲಿ ದೀಕ್ಷೆಯನ್ನು ನೀಡಲಾಗಿರುತ್ತದೆ. ಹೀಗೆ ದೀಕ್ಷೆ ಪಡೆದ 'ಗುಡ್ಡರು' ಆ ಪರಪರೆಯ ಪೋಷಕರು ಮತ್ತು ಕಾವ್ಯವನ್ನು ಬೆಳೆಸುವ ನಿರ್ಮಾತೃಗಳಾಗಿರುತ್ತಾರೆ. ಆದ್ದರಿಂದ ಜನಪಕಾವ್ಯ ಪರಂಪರೆ ಎಂಬುದು ಗುರು ಶಿಷ್ಯ ಪರಂಪರೆಯೂ ಹೌದು. ಜನಪದ ಮಹಾಕಾವ್ಯದಲ್ಲಿ ಸಮುದಾಯಗಳ ಚರಿತ್ರೆ, ಐತಿಹ್ಯ ಮತ್ತು ಪುರಾಣಗಳು ಒಂದಕ್ಕೊಂದು ಸಂಬಂಧವಿಟ್ಟುಕೊಂಡು ಹೆಣೆಯಲ್ಪಟ್ಟಿರುತ್ತವೆ. ಆದಿಯಲ್ಲಿ ಅದೊಂದು ವಾಸ್ತವ ಘಟನೆ ಇರಬಹುದು. ನಂತರ ಅದೊಂದು ಕಲ್ಪಿತ ಚರಿತ್ರೆ. ತದನಂತರ ಅದಕ್ಕೆ ಐತಿಹ್ಯದ ರೂಪ ಉಂಟಾಗುತ್ತದೆ. ಐತಿಹ್ಯಕ್ಕೆ ಕಲ್ಪನೆಯ ಆವರಣ, ತದನಂತರ ಆ ಆವರಣಕ್ಕೆ ಪುರಾಣದ ಲೇಪನವಾಗುತ್ತದೆ.

ISBN – 978-93-5526-247-9

ಒಂದು ಸಮುದಾಯದ ಅಥವಾ ಒಂದು ನಿರ್ದಿಷ್ಟ ಪ್ರದೇಶದ ಜನ ಸಂಸ್ಕೃತಿಯ ಒಟ್ಟು ರೂಪವಾಗಿ ಜನಪದ ಮಹಾಕಾವ್ಯ ರೂಪುಗೊಳ್ಳುತ್ತದೆ. ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳು ಅಂತಹ ಒಂದು ಕಾವ್ಯ ನಿರ್ಮಾಣಕ್ಕೆ ಪ್ರೇರಕವಾಗಬಹುದು. ಒಂದು ಜನಪದ ಮಹಾಕಾವ್ಯ ಲಿಪಿಯೇ ಗೊತ್ತಿಲ್ಲದ ಅಥವಾ ಅದರ ಬಳಕೆ ಗೊತ್ತಿಲ್ಲದ ಮೌಖಿಕ ಜಗತ್ತಿನಲ್ಲಿ ಮಾತಿನ ರೂಪದಲ್ಲಿ ಜನ್ಮತಾಳುತ್ತದೆ. ಮಾತು ಅಥವಾ ಕಥೆ ಕಾಲಕ್ರಮೇಣ ಗೇಯತೆಯ ಕಾವ್ಯರೂಪ ತಾಳುತ್ತದೆ. ಆದಿಯಲ್ಲಿ ಅದು ಏಕ ವ್ಯಕ್ತಿಯಿಂದಲೇ ಸೃಷ್ಟಿಯಾಗಬಹುದು. ಆದರೆ ಅದು ಸ್ಥಳೀಯ ಘಟನೆಗಳನ್ನು, ಸ್ಥಳೀಯ ಮೌಲ್ಯಗಳನ್ನು ಒಳಗೊಳ್ಳುವ ಮೂಲಕ ಬಹುಬೇಗ ಆ ಸಮೂಹದ ಧ್ವನಿಯಾಗುತ್ತದೆ. ನಂತರದಲ್ಲಿ ಗಾಯಕ ಪರಂಪರೆಗೆ ದ್ರವ್ಯವಾಗಿ ಗಾರಕರ ಸೃಜನತೆಯ ಮೂಸೆಯಲ್ಲಿ ಬೆಂದುವಿಂದು ಮಹಾಕಾವ್ಯದ ಆಕಾರ ಪಡೆಯುತ್ತದೆ.

ಜನಪದ ಮಹಾಕಾವ್ಯ ತನ್ನ ಅತಿಮಾನಷ ಸಂಗತಿಗಳಿಂದಾಗಿ ವಾಸ್ತವದಲ್ಲಿ ಅಸಾಧ್ಯವಾದ ಸಂಗತಿಗಳನ್ನು ಕಲ್ಪನೆಯಲ್ಲಿ ಸಾಧ್ಯವಾಗಿಸುತ್ತದೆ. ಅದೊಂದು ಕನಸಿನ ಲೋಕ ಊಹಿಸಲು ಅಸದಳವಾದ ಘಟನೆಗಳು ಅಲ್ಲಿ ನಡೆಯಬಹುದು. ದುರ್ಬಲನಾದವನು ಆಶ್ಚರ್ಯಕರವಾಗಿ ನ್ಯಾಯ ಪಡೆಯಬಹುದು, ಪ್ರಬಲನಾಗಬಹುದು. ಇದು ಒಂದು ರೀತಿಯಲ್ಲಿ ಸಾಮಾನ್ಯ ಜನತೆಯ ಅಭೀಪ್ಸೆ ಮತ್ತು ಆಶಯ. ಇದು ಸಮಾಜದ ಅಸಹಾಯಕ ಜನತೆಯ ಕನಸುಗಳನ್ನು ಸಾಕಾರಗೊಳಿಸುವ ಒಂದು ಕಥನ ತಂತ್ರವೂ ಹೌದು. ಆ ಮೂಲಕ ಜನತೆಯಲ್ಲಿ ಆತ್ಮವಿಶ್ವಾಸ ತುಂಬುವ ಮತ್ತು ಸ್ವಾಭಿಮಾನ ತುಂಬುವ ಕಾರ್ಯವೂ ಹೌದು.

ಜನಪದ ಮಹಾಕಾವ್ಯದ ಮತ್ತೊಂದು ಆಶಯವೆಂದರೆ ಮನುಷ್ಯನ ಅಹಂಕಾರವನ್ನು ಅಳಿಸುವುದು. ಮಾನವೀಯತೆಯನ್ನು ಪುನರ್ ಸ್ಥಾಪಿಸುವುದು. ನಿಸರ್ಗವನ್ನು ಗೌರವಿಸುವುದು. ಪ್ರಾಣಿ ಪಕ್ಷಿಗಳನ್ನು ಮನುಷ್ಯರಂತೆಯೇ ಸಮಾನ ಪಾತ್ರಧಾರಿಗಳನ್ನಾಗಿಸುವುದು. ಸಚರಾಚರ ಜೀವರಾಶಿಗಳನ್ನು ಸಮಾನ ದೃಷ್ಟಿಯಿಂದ ನೋಡುವುದು. ನಮ್ಮನ್ನು ಮೀರಿದ ಅತೀಂದ್ರಿಯ ಶಕ್ತಿಯೊಂದಿದೆ, ಅದರಿಂದಾಗಿ ಅಂತ್ಯದಲ್ಲಿ ಸತ್ಯಕ್ಕೆ ಜಯ ಎಂಬ ವಿವೇಕ ತುಂಬುವುದು.

ಕನ್ನಡ ಜನಪದ ಮಹಾಕಾವ್ಯಗಳನ್ನು ಅನೇಕ ಶೈಲಿಗಳಲ್ಲಿ ಹಾಡಲಾಗುತ್ತದೆ. ಅಥವಾ ವಾಚಿಸಲಾಗುತ್ತದೆ. ಈ ಹಿಂದೆ ಜನಪದ ಕಾವ್ಯವನ್ನು ಹಾಡುಗಬ್ಬ ಅಥವಾ ವಾಚನಕಾವ್ಯ ಎಂದು ಹೆಸರಿಸಿದ್ದನ್ನು ಮತ್ತೆ ನೆನಪಿಸಿಕೊಳ್ಳಬಹುದು. ಚಂಪೂಶೈಲಿ(ಮಲೆಮಹಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ ಮತ್ತು ಕುಮಾರರಾಮ ಕಾವ್ಯ ಇತ್ಯಾದಿ) ರಗಳೆ ಶೈಲಿ (ಪಿರಿಯಾಪಟ್ಟಣದ ಕಾಳಗ), ತ್ರಿಪದಿ ಶೈಲಿ(ಮಹಿಳೆಯರೇ ಆಡುವ ಕೃಷ್ಣಗೊಲ್ಲರ ಕಾವ್ಯ), ಏಳೆಯ ಶೈಲಿ(ಮೈಲಾರಲಿಂಗನ ಕಾವ್ಯ), ನಾಟಕ ಶೈಲಿ(ಕರಪಾಲಮೇಳದ ಕಾವ್ಯ, ಗೊಂದಲಿಗರಕಾವ್ಯ), ಸರಳರಗಳೆಯ ಶೈಲಿ(ಜುಂಜಪ್ಪನ ಕಾವ್ಯ, ಎತ್ತಪ್ಪನ ಕಾವ್ಯ) ಹೀಗೆ ಹಲವು ಕಾವ್ಯ ಶೈಲಿಗಳನ್ನು ಕನ್ನಡ ಜನಪದ ಮಹಾಕಾವ್ಯಗಳಲ್ಲಿ ಗುರುತಿಸಬಹುದು. ಕಾವ್ಯದ ಆರಂಭದಿಂದ ಅಂತ್ಯದವರೆಗೆ ನೂರಾರು ಬಾರಿ ಪುನರಾವರ್ತನೆ ಆಗುವ ವಿವಿಧ ಬಗೆಯ ಪಲ್ಲವಿಗಳು ಕಾವ್ಯದ ಹಾಡುಗಾರಿಕೆಗೆ ಅಪೂರ್ವ ಸೊಗಸು ನೀಡುತ್ತವೆ. ಹಾಗೆಯೇ ಹಾಡುವ ಧಾಟಿಗಳು ಕಥನದ ಸನ್ನಿವೇಶಕ್ಕೆ ಅನುಗುಣವಾಗಿ ಬದಲಾಗುತ್ತವೆ. ಗಾರಕರು ಬಗೆಬಗೆಯ ದೇಸಿ ರಾಗಗಳನ್ನು ಕಾವ್ಯಕ್ಕೆ ಅನ್ವಯಿಸಿಕೊಂಡು ಹಾಡುತ್ತಾರೆ. ಒಂದೊಂದು ಕಾವ್ಯ ಸಂಪ್ರದಾಯಕ್ಕೂ ವಿಶಿಷ್ಟವಾದ ವಾದ್ಯ ವಿಶೇಷಗಳು ಹಾಗೂ ಕಲಾವಿದರ ವೇಷಭೂಷಣಗಳು ಹಾಗೂ ಪಾತ್ರಕ್ಕೆ ಪೂರಕವಾದ ಕಲಾವಿದರ ನರ್ತನ ಭಂಗಿಗಳು ಜನತೆಯಲ್ಲಿ ಅಪಾರ ಆಸಕ್ತಿಯನ್ನು ಹುಟ್ಟಿಸುವಲ್ಲಿ ನೆರವಾಗುತ್ತವೆ.

ಪ್ರತಿಯೊಂದು ಕಾವ್ಯವೂ ಅಥವಾ ಆ ಕಾವ್ಯದ ಸ್ವತಂತ್ರ ಘಟಕವೂ ಆರಾಧನೆಯ ಅಂಗವಾಗಿ ಅಥವಾ ಸಾಂಸ್ಕೃತಿಕ ಸಂದರ್ಭವೊಂದರ ದ್ಯೋತಕವಾಗಿ ಇಲ್ಲವೆ ಭಕ್ತರನ್ನು ಹೆಚ್ಚಿಸಿಕೊಳ್ಳುವ ಪಂಥ ಪ್ರಸಾರಕ್ಕಾಗಿ ಪ್ರದರ್ಶನಗೊಳ್ಳುತ್ತದೆ. ಕೇಳುವ ಜನತೆಯ ಮನಸ್ಸಿನಲ್ಲಿ ಪ್ರತಿಷ್ಠಾಪಿಸುವ ಉದ್ದೇಶದಿಂದ ಕಾವ್ಯ ಪುನರುಕ್ತಿಗೊಳ್ಳುತ್ತದೆ. ಯಾವುದೇ ಜನಪದ ಕಾವ್ಯದ ಪ್ರಧಾನ ಲಕ್ಷಣವೇ ಇದು. ಹಾಡುವ, ಕೇಳುವ ಮತ್ತು ಅಭಿನಯಿಸುವ ಈ ಮೌಖಿಕ ಕಾವ್ಯಕ್ಕೆ ಪುನರುಕ್ತಿ ಒಂದು ಸೊಗಸೂ ಹೌದು, ಅನಿವಾರ್ಯವೂ ಹೌದು.

(ಈ ಲೇಖನವನ್ನು "ದೇಸಿ ಕನ್ನಡ ಪರಂಪರೆ" – ಹಿ.ಚಿ ಬೋರಲಿಂಗಯ್ಯ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಈ ಕೃತಿಯ ಉದ್ಧೃತ ಭಾಗ)

## 2. ಕನ್ನಡ ಜಾನಪದ ಮಹಾಕಾವ್ಯಗಳು ಒಂದು ಸಮೀಕ್ಷೆ

**ಪ್ರೊ. ತಮಿಳ್ ಸೆಲ್ವಿ**

'ಮಹಾಕಾವ್ಯ'ಗಳು ಎಂದರೆ ಬಹುಜನರ ಅಭಿಪ್ರಾಯದಲ್ಲಿ ರಾಮಾಯಣ ಹಾಗೂ ಮಹಾಭಾರತ ಕಾವ್ಯಗಳಷ್ಟೇ. ಆದರೆ ಮೂಲದಲ್ಲಿ ಇವೂ ಕೂಡ ಜಾನಪದ ಮೂಲದಿಂದ ಹುಟ್ಟಿಕೊಂಡು ನಂತರ ಶಿಷ್ಟ ಸಾಹಿತ್ಯದೊಳಗೆ ಪ್ರವೇಶಿಸಿದ ಕಥೆಗಳೇ ಎನ್ನುವುದನ್ನು ನಾವು ಮರೆಯಬಾರದು. ರಾಮಾಯಣ ಮಹಾಭಾರತಗಳಷ್ಟೇ ಅಲ್ಲದೆ, ಜೈನಪುರಾಣಗಳೂ, ವಡ್ಡಾರಾಧನೆಯ ಕಥೆಗಳೂ, ಯಶೋಧರ ಚರಿತೆಯಂತಹ ಹಲವಾರು ಜೈನ ಕಥೆಗಳು ಕೂಡ ಮೂಲತಃ ಜಾನಪದ ಮೂಲದಿಂದಲೇ ಹುಟ್ಟಿದವು. ಇವುಗಳನ್ನು ಹೊರತು ಪಡಿಸಿ ಜನಪದರಲ್ಲಿ ಇನ್ನೂ ಹಲವಾರು ಧಾರ್ಮಿಕ ನಾಯಕರ ಕಥೆಗಳು ಪ್ರಚಲಿತದಲ್ಲಿವೆ. ರಾಮಾಯಣ ಮಹಾಭಾರತಗಳಲ್ಲಿ ರಾಜಮಹಾರಾಜರ ಕಥೆಗಳು ಇದ್ದರೆ, ಜನಪದರು ಸೃಷ್ಟಿಸಿರುವ ಈ ಕಥೆಗಳಲ್ಲಿ ಸಾಮಾನ್ಯ ಜನರ ಬದುಕಿನ ಸಂಗತಿಗಳು ಬೆರೆತುಕೊಂಡಿವೆ.

ರಾಮಾಯಣ – ಮಹಾಭಾರತ ಕಾವ್ಯಗಳು ಶಿಷ್ಟ ಕಾವ್ಯದೊಳಗೆ ಒಂದು ರೀತಿಯಲ್ಲಿ ಮೂಡಿ ಬಂದರೆ, ಜಾನಪದರಲ್ಲಿ ಅದಕ್ಕಿಂತ ವಿಭಿನ್ನವಾಗಿ ಹಲವಾರು ಬಗೆಯ ಸ್ಥಳೀಯ ನಂಬಿಕೆ, ಮಾಹಿತಿಗಳನ್ನು ತಮ್ಮೊಳಗೆ ಅಡಗಿಸಿಕೊಂಡು ಮೈದಾಳುತ್ತವೆ. ಭಾರತದಲ್ಲಿ ಎಷ್ಟು ಬಗೆಯ ಸಂಸ್ಕೃತಿ ಹಾಗೂ ಜನಸಮುದಾಯಗಳಿವೆಯೋ, ಅಷ್ಟೇ ಸಂಖ್ಯೆಯ ರಾಮಾಯಣ ಮಹಾಭಾರತಗಳನ್ನೂ ಜನಪದರಲ್ಲಿ ಕಾಣಬಹುದು. ಇದು ವಾಲ್ಮೀಕಿ ಕತೆಯಂತೆ ಶಿಷ್ಟವಲ್ಲದ, ಜೈನ ಬೌದ್ಧರಂತೆ ಕಲಾತ್ಮಕವೂ ಅಲ್ಲದ, ಸ್ಥಳೀಯ ನಂಬಿಕೆ ಆಚರಣೆಗಳನ್ನು ಬಿಂಬಿಸುವ ಹಲವಾರು ಜನಪದ ಪಠ್ಯಗಳನ್ನು ಇವುಗಳಲ್ಲಿ ಕಾಣಬಹುದು. ಉದಾಹರಣೆಗೆ ಮಧುಗಿರಿ ಜಿಲ್ಲೆಯಲ್ಲಿ ಚಿತ್ರಪಟ ರಾಮಾಯಣ ಎಂಬ ಒಂದು ರಾಮಾಯಣ ಕಂಡು ಬರುತ್ತದೆ. ಇದರಲ್ಲಿ ಅಯೋಧ್ಯೆಗೆ ಹಿಂದಿರುಗಿದ ಮೇಲೆ ಸೀತೆ, ಗುಟ್ಟಾಗಿ ಒಮ್ಮೆ ರಾವಣನ ಚಿತ್ರವನ್ನು ಬರೆಯುತ್ತಿರುತ್ತಾಳೆ. ರಾಮ ಬರುತ್ತಿದ್ದಾನೆಂದು ತಿಳಿದ ಕೂಡಲೇ ಅದನ್ನು ತನ್ನ ಹಾಸಿಗೆಯ ಅಡಿಯಲ್ಲಿ ಬಚ್ಚಿಡುತ್ತಾಳೆ. ರಾವಣನ ಆತ್ಮ ಅದರಲ್ಲಿ ಸೇರಿಕೊಂಡು, ಅದು ಕುಣಿಯುತ್ತಾ ಹೊರಗೆ ಬರುತ್ತದೆ. ಇದನ್ನು ನೋಡಿದ ರಾಮ ಸೀತೆಯನ್ನು ವನವಾಸಕ್ಕೆ ಅಟ್ಟುತ್ತಾನೆ. ಇನ್ನೊಂದು ಕತೆಯ ಪ್ರಕಾರ, ಕೈಕೆ–ಕೌಸಲ್ಯೆಯರೇ ಸೀತೆ ಹೀಗೆ ರಾವಣನ ಚಿತ್ರ ಬಿಡಿಸುವಂತೆ ಒತ್ತಾಯ ಮಾಡಿ, ನಂತರ ಅದನ್ನು ರಾಮನಿಗೆ ತೋರಿಸಿ ಅವಳ ಮೇಲೆ ಚಾಡಿ ಹೇಳಿ ಅವಳನ್ನು ಕಾಡಿಗಟ್ಟುತ್ತಾರೆ. ಹೀಗೆ ವಿಭಿನ್ನ ಕಥಾ ಸರಣಿಗಳನ್ನು ಜನಪದರು ತಮ್ಮ ರಾಮಾಯಣ–ಮಹಾಭಾರತಗಳಲ್ಲಿ ಕಟ್ಟಿಕೊಡುತ್ತಾರೆ.

ರಾಮಾಯಣ ಮಹಾಭಾರತಗಳನ್ನು ಹೊರತು ಪಡಿಸಿಯೂ, ಹಲವಾರು ಜಾನಪದ ಕಾವ್ಯಗಳನ್ನು ಕಾಣಬಹುದು. ಜನಪದರು ಹಾಡುವ ದೀರ್ಘವಾದ ಕಥಾಗುಚ್ಛಗಳನ್ನು ನಾವೀಗ 'ಜಾನಪದ ಮಹಾಕಾವ್ಯ'ಗಳು ಎಂದು ಕರೆಯುತ್ತಿದ್ದೇವೆ. ಆದರೆ ವಾಸ್ತವವಾಗಿ ಯಾರು ಅವುಗಳನ್ನು ಹಾಡುತ್ತಾರೋ, ಆ ಕಥೆಗಳನ್ನು ನಂಬುತ್ತಾರೋ ಆ ಜನರು ಅವುಗಳನ್ನು 'ಮಹಾಕಾವ್ಯ' ಎಂದು ಹೇಳುವುದಿಲ್ಲ. ಅಷ್ಟೇಕೆ, ಅವುಗಳನ್ನು 'ಕಾವ್ಯ' ಎಂದು ಕೂಡ ಹೇಳುವುದಿಲ್ಲ. ಅವರ ದೃಷ್ಟಿಯಲ್ಲಿ ಅವು ಏನಿದ್ದರೂ, 'ಮಾದಪ್ಪನ ಕಥೆ', 'ಜುಂಜಪ್ಪನ ಕಥೆ', 'ಮಂಟೇಸ್ವಾಮಿಯ ಪ್ರಸಂಗ'...ಗಳು ಅಷ್ಟೇ. ಈ ಕಥೆಗಳು ಒಂದು ಜನಸಮುದಾಯದ ನಂಬಿಕೆಗೆ, ಜೀವನ ದೃಷ್ಟಿಗೆ, ಆಚರಣೆಗೆ ಸಂಬಂಧಿಸಿದ್ದು ಹಾಗೂ ಅವು ಅವರ ಬದುಕಿನ ಭಾಗವೇ ಆಗಿರುವಂಥಹದ್ದು. ಆದರೆ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸುವ ನಮಗೆ ಅವು ಬದುಕಿನ ಕ್ರಮವಲ್ಲ. ಎಂದರೆ ನಮ್ಮದೇ ಸಂಸ್ಕೃತಿಯ, ನಮ್ಮದೇ ಭಾಷೆಯ, ನಮ್ಮದೇ ಪ್ರದೇಶದ ರಚನೆಗಳನ್ನು ಕೂಡ ನಾವು 'ಹೊರಗಿನವರಾಗಿ' ನಿಂತು ನೋಡುವ ದೃಷ್ಟಿಕೋನ ಇದೆಯಲ್ಲ ಇದು ನಮಗೆ ಪಾಶ್ಚಾತ್ಯರಿಂದ ಲಭಿಸಿದ್ದು.

'ಮಹಾಕಾವ್ಯ' ಎನ್ನುವ ಪದವನ್ನು ಎರಡು ರೀತಿಗಳಲ್ಲಿ ಅರ್ಥೈಸಬಹುದು. ಒಂದು: 'ನಿರ್ದಿಷ್ಟ ಗುಣ ಲಕ್ಷಣಗಳಿರುವ ಒಂದು ಸಾಹಿತ್ಯ ಪ್ರಕಾರದ ಹೆಸರು'. ಎರಡು: 'ಒಂದು ಕೃತಿಯ ಮೌಲ್ಯ ಹಾಗೂ ಮಹತ್ವವನ್ನು ತಿಳಿಸುವ ಪಾರಿಭಾಷಿಕ ಪದ'. 'ಜಾನಪದ ಮಹಾಕಾವ್ಯ' ಎನ್ನುವ ಪದ ಹುಟ್ಟಿಕೊಂಡಿದ್ದೇ ತೀರ ಇತ್ತೀಚೆಗೆ. ಆ ಕಥನಗಳನ್ನು ಕಟ್ಟಿದ ಜನಪದರಲ್ಲೇ ಇಲ್ಲದ ಈ ಪರಿಭಾಷೆ ರೂಪುಗೊಳ್ಳಲು ಕಾರಣ ಸಾಹಿತ್ಯವನ್ನು ಶಿಷ್ಟ ಮತ್ತು ಜಾನಪದ ಎಂದು ವಿಂಗಡಣೆ ಮಾಡಿಕೊಂಡು, ಅದರಲ್ಲಿ ಶಿಷ್ಟ ಸಾಹಿತ್ಯ ಶ್ರೇಷ್ಠವಾದುದು ಎಂದೂ; ಜಾನಪದ

ಅಷ್ಟೊಂದು ಶ್ರೇಷ್ಠ ಅಲ್ಲ ಎಂಬ ಮನೋಧರ್ಮವನ್ನೂ ಬೆಳೆಸಿಕೊಂಡದ್ದೇ ಮುಖ್ಯ ಕಾರಣ. ಶಿಷ್ಟ ಸಾಹಿತ್ಯದಲ್ಲಿ ಮಹಾಕಾವ್ಯಗಳು ಅತ್ಯಂತ ಮಹತ್ವದವು ಎಂದಾದರೆ; ಜಾನಪದವೂ ಅಷ್ಟೇ ಶ್ರೇಷ್ಠ ಎಂದು ಸಾಬೀತು ಪಡಿಸಲು ಇದರಲ್ಲೂ ಮಹಾಕಾವ್ಯ ಇದೆ ಎಂಬುದನ್ನು ನಿರೂಪಿಸುವ ಹಂಬಲದ ಪ್ರಯತ್ನವಾಗಿಯೇ ಜಾನಪದದಲ್ಲೂ ಮಹಾಕಾವ್ಯಗಳನ್ನು ಗುರುತಿಸಲು ನೋಡಿದ್ದು. ಈ ಮೂಲಕ ಕೀಳರಿಮೆಯನ್ನು ನಿವಾರಿಸಿಕೊಳ್ಳುವ ಮನೋಭಾವ ಇಲ್ಲಿ ಕೆಲಸ ಮಾಡಿದೆ.

ಜಾನಪದ ಸಾಹಿತ್ಯವನ್ನಿರಲಿ, ನಮ್ಮ ಹಿಂದಿನ ಯಾವ ಶಿಷ್ಟ ಕವಿಗಳು ಕೂಡ ತಮ್ಮ ಕೃತಿಗಳನ್ನಾಗಲೀ, ಇತರರ ಕೃತಿಗಳನ್ನಾಗಲೀ ಮಹಾಕಾವ್ಯಗಳು ಎಂದು ಕರೆದಿಲ್ಲ. ಪ್ರಬಂಧ, ಕಾವ್ಯ, ಸತ್ಕೃತಿ ಇತ್ಯಾದಿಗಳಾಗಿ ಹೇಳುತ್ತಾರಷ್ಟೆ. ಪಾಶ್ಚಾತ್ಯ ಚಿಂತನೆಯಲ್ಲಿ ಕಂಡು ಬರುವ 'ಎಪಿಕ್' ಎನ್ನುವ ಶಬ್ದದ ಸಂವಾದಿ ಪದವಾಗಿ ನಾವೀಗ ಮಹಾಕಾವ್ಯ ಎನ್ನುವ ಪದವನ್ನು ಬಳಸುತ್ತಾ, ಅದನ್ನು ನಮ್ಮ ಕಾವ್ಯಗಳಿಗೂ ಹೊಂದಿಸಲು ಮಾಡಿದ ಪ್ರಯತ್ನದ ಫಲವಾಗಿಯೇ ಮಹಾಕಾವ್ಯಗಳು ಯಾವುವು ಎಂಬುದನ್ನು ಗುರುತಿಸಲು ಹೊರಟದ್ದು.

ಕಾವ್ಯಗಳಲ್ಲಿ ಇಂತಹ ತರ–ತಮ ವಿಂಗಡಣೆಯೇ ಸರಿಯಲ್ಲ. ಸಾಹಿತ್ಯ ಪ್ರಕಾರಗಳಲ್ಲೂ ಶ್ರೇಷ್ಠ–ಕನಿಷ್ಠ ಎಂಬ ಕಲ್ಪನೆಯನ್ನು ಒಪ್ಪಿಕೊಂಡು, ಸಾಮಾಜಿಕ ಶ್ರೇಣೀಕರಣವನ್ನು ನೋಡುವ, ಸಮರ್ಥಿಸುವ ಮನೋಭಾವವನ್ನು ಇದು ಪ್ರತಿನಿಧಿಸುತ್ತದೆ. ಇದು ಆಯಾ ಸಂಸ್ಕೃತಿಯ ಹಿನ್ನೆಲೆಯೊಳಗೆ ಒಂದು ಕಾವ್ಯವನ್ನು ನೋಡುವ, ನೋಡಬೇಕಾದ ದೃಷ್ಟಿಕೋನವನ್ನೇ ಬದಲಾಯಿಸುತ್ತದೆ. ಏಕೆಂದರೆ ಜಾನಪದ ಮಹಾಕಾವ್ಯಗಳನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ಶಿಷ್ಟ ಮಹಾಕಾವ್ಯಗಳಿಗೆ ಸಂಬಂಧಿಸಿದ ಎಲ್ಲ ಲಕ್ಷಣಗಳನ್ನೂ ಇದಕ್ಕೆ ಆರೋಪಿಸಲು ಸಾಧ್ಯವಾಗುವುದಿಲ್ಲ.

ಬ್ರಿಟೀಷರು ಭಾರತಕ್ಕೆ ಕಾಲಿಟ್ಟ ಮೇಲೆ ಇಲ್ಲಿನ ಜನರಿಗೆ ವಸಾಹತು ಶಿಕ್ಷಣವನ್ನು ನೀಡಲು ಪ್ರಯತ್ನಿಸಿದ ದಿನಗಳಲ್ಲಿ ಅವರನ್ನು ಕಾಡಿದ ಮೊದಲ ಸಮಸ್ಯೆ ಇಲ್ಲಿನ ಜನರ ವೈವಿಧ್ಯಮಯ ಸಂಸ್ಕೃತಿಗಳು. ಅವರಿಗೆ ಅರ್ಥವೇ ಆಗದ ಅಗಾಧ ಪ್ರಮಾಣದ ನಂಬಿಕೆಗಳು, ಆಚರಣೆಗಳು, ಅವನ್ನೆಲ್ಲ ಬದುಕಿನಲ್ಲಿ ಅಳವಡಿಸಿಕೊಂಡು ಅನುಸರಿಸುವ ನಿರ್ದಿಷ್ಟ ಜನಸಮೂಹ ಇವೆಲ್ಲ ಅವರಿಗೆ ಅಚ್ಚರಿಯ ಸಂಗತಿಗಳಾಗಿದ್ದವು. ಇವುಗಳನ್ನೆಲ್ಲ ಅಧ್ಯಯನದ ವ್ಯಾಪ್ತಿಯೊಳಗೆ ತಂದುಕೊಳ್ಳಲು ಅವರು ರೂಪಿಸಿಕೊಂಡ ಕೆಲವು ಮಾದರಿಗಳೇ ಜನಪದರಿಗೂ ಅಧ್ಯಯನಕಾರರಿಗೂ ನಡುವೆ ವಿಭಿನ್ನ ಮನೋಭಾವ ಬೆಳೆಯಲು ಕಾರಣವಾಯಿತು.

ಜಾನಪದ ಮಹಾಕಾವ್ಯಗಳನ್ನು ಅವುಗಳ ಕಥಾವಸ್ತುವನ್ನು ಆಧರಿಸಿ ಪ್ರಮುಖವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು. ಒಂದು ಪೌರಾಣಿಕ ಕಥಾವಸ್ತುಗಳು; ಎರಡು: ಐತಿಹಾಸಿಕವಾಗಿ ನಡೆದಿರುವ ಕಥೆಗಳು. ಮೈಲಾರ ಮಹಾಲಿಂಗ, ಜುಂಜಪ್ಪ, ಹಾಲುಮತದ ಬೀರಪ್ಪ, ಎಲ್ಲಮ್ಮ ಮೊದಲಾದವರ ಕಾವ್ಯಗಳು ಪೌರಾಣಿಕ ಕಾವ್ಯಗಳು. ಇಲ್ಲಿ ಪೌರಾಣಿಕತೆಯೇ ಪ್ರಧಾನ. ಪುರಾಣಗಳಲ್ಲಿ ಬರುವ ಹಲವಾರು ದೇವಾನುದೇವತೆಗಳೂ ಇಲ್ಲಿ ಪ್ರವೇಶ ಪಡೆದುಕೊಳ್ಳುತ್ತಾರೆ. ಐತಿಹಾಸಿಕ ಕಾವ್ಯಗಳ ಕಥಾ ನಾಯಕರು ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದಲ್ಲಿ ಕಾಣಿಸಿಕೊಂಡ ಶರಣ ಕ್ರಾಂತಿಯ ನಂತರದ ಕಾಲಘಟ್ಟದಲ್ಲಿ ಬದುಕಿದ್ದವರು. ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಸಾವಳಗಿ ಶಿವಲಿಂಗ, ಕುಮಾರರಾಮ, ಗೋಣಿ ಬಸಪ್ಪ, ಕೊಟ್ಟೂರೇಶ್ವರ, ಮದ್ದಾನೇಶ್ವರ, ಗುಡಗುಂಡೇಶ್ವರ, ಮೌನೇಶ್ವರ, ತಿಪ್ಪೇಸ್ವಾಮಿ, ನಿರ್ವಾಣಸ್ವಾಮಿ ಮೊದಲಾದವರೆಲ್ಲರೂ ಶರಣ ಕ್ರಾಂತಿಯ ನಂತರ ಕಾಣಿಸಿಕೊಂಡೂ, ಶರಣರ ಪ್ರಭಾವಕ್ಕೆ ಒಳಗಾದವರು. ಇವಲ್ಲದೆ 'ಪಿರಿಯಾಪಟ್ಟಣದ ಕಾಳಗ' ಇತ್ಯಾದಿ ಕಾವ್ಯಗಳೂ ಐತಿಹಾಸಿಕ ಕಾವ್ಯಗಳೇ ಆಗಿವೆ. ಇವುಗಳ ಜೊತೆಗೆ ತುಳುನಾಡಿನಲ್ಲಿ ಕೋಟಿಚನ್ನಯ್ಯ ಮತ್ತು ಸಿರಿಯ ಕಥೆಗಳೂ ಕಂಡು ಬರುತ್ತವೆ. ಸಿರಿ ಕಾವ್ಯವು ಸ್ತ್ರೀಪ್ರಧಾನವಾದ ಏಕೈಕ ಮಹಾಕಾವ್ಯವೂ ಆಗಿದೆ. ಜೀ.ಶಂ.ಪ. ಅವರು 'ಮಲೆ ಮಾದೇಶ್ವರ' ಹಾಗೂ 'ಮಂಟೇಸ್ವಾಮಿಯ ಕಥೆ'ಗಳನ್ನು ಅವಳಿ ಮಹಾಕಾವ್ಯಗಳು ಎಂದು ಕರೆಯುತ್ತಾರೆ. ಇದನ್ನೇ ಅನುಸರಿಸಿ ಡಾ. ವಿವೇಕರೈ ಅವರು, 'ಕೋಟಿ ಚನ್ನಯ್ಯ' ಮತ್ತು 'ಸಿರಿ' ಕಾವ್ಯಗಳನ್ನು ತುಳುನಾಡಿನ ಅವಳಿ ಮಹಾಕಾವ್ಯಗಳು ಎಂದು ಕರೆಯುತ್ತಾರೆ. ಇದನ್ನು ತುಳುನಾಡಿನಲ್ಲಿ 'ಪಾಡ್ದನ' ಎಂದು ಕರೆಯುತ್ತಾರೆ. ಈ ಕಾವ್ಯಗಳಷ್ಟೇ ಅಲ್ಲದೆ ಜಾನಪದರಲ್ಲಿ ರಾಮಾಯಣ ಹಾಗೂ ಮಹಾಭಾರತದ ಕಥೆಗಳೂ ಕೂಡ ಶಿಷ್ಯ ಕಾವ್ಯಗಳಿಗಿಂತ ವಿಭಿನ್ನ ರೂಪದಲ್ಲಿ ಮೈದಾಳಿ, ಪ್ರಚಲಿತದಲ್ಲಿವೆ. ಈ ಯಾವ ನಾಯಕರೂ ತಮ್ಮ ತತ್ವ ಸಂದೇಶಗಳನ್ನು ನೇರವಾಗಿ ಬೋಧಿಸುವುದಿಲ್ಲ. ಅವರ ಬದುಕೇ ಸ್ವತಃ ಒಂದು ಸಂದೇಶವಾಗಿ ಕಾಣುತ್ತದೆ.

ಆಯಾ ಪ್ರದೇಶದ ಜನರು ತಮ್ಮತಮ್ಮ ಪ್ರದೇಶಗಳಲ್ಲಿದ್ದ ಅವತಾರ ಪುರುಷರು, ಸಾಧುಸಂತರು, ಜಂಗಮರು, ಸಾಮಾಜಿಕ ಕಾರ್ಯಕರ್ತರು, ಐತಿಹಾಸಿಕ ವೀರರನ್ನು ಕುರಿತು ಈ ಜಾನಪದ ಕಾವ್ಯಗಳನ್ನು ಕಟ್ಟಿ, ಅವುಗಳನ್ನು ಭಕ್ತಿಪೂರ್ವಕವಾಗಿ ಹಾಡುತ್ತಾ ಬಂದಿದ್ದಾರೆ. ಕರ್ನಾಟಕದಾದ್ಯಂತ ಇರುವ ನೂರಾರು ಹಾಡುಗಾರರು ಇವುಗಳನ್ನು ಶತಮಾನಗಳಿಂದ ಹಾಡುತ್ತಾ, ಕಲಿಸುತ್ತಾ, ಕೇಳಿಸುತ್ತಾ, ನೆನೆಯುತ್ತಾ ತಲೆಮಾರಿನಿಂದ ತಲೆಮಾರುಗಳಿಗೆ ಸಾಗಿಸುತ್ತಾ ಬಂದಿದ್ದಾರೆ. ಕೆಲವು ನಿರ್ದಿಷ್ಟ ಜನ ಸಮುದಾಯದವರು ಆಯಾ ಸಮುದಾಯದ ಸಾಂಸ್ಕೃತಿಕ ನಾಯಕರ ಕಥೆಗಳನ್ನು ಹಾಡುತ್ತಾರೆ. ಎಂದರೆ ಮಲೆಮಹದೇಶ್ವರ ಹಾಡನ್ನು ಗುಡ್ಡರು, ಕಂಸಾಳೆ ವಾದ್ಯದ ಜೊತೆಯಲ್ಲಿ ಹಾಡಿದರೆ; ನೀಲಗಾರರೆಂಬುವರು ತಂಬೂರಿಯ ಜೊತೆಯಲ್ಲಿ ಮಂಟೇಸ್ವಾಮಿಯ ಕಥೆಯನ್ನು ಹಾಡುತ್ತಾರೆ. ಜುಂಜಪ್ಪನ ಕಾವ್ಯವನ್ನು ಕಾಡುಗೊಲ್ಲರು ಚಿತ್ರದುರ್ಗ, ತುಮಕೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಾತ್ರಿಯಿಡೀ ಹಾಡುತ್ತಾರೆ. ಈ ಕಾವ್ಯಗಳನ್ನು ಕೆಲವೆಡೆ ಹಾಡಾಗಿ ಹಾಡಿದರೆ, ಕೆಲವೊಮ್ಮೆ ಕಾವ್ಯವಾಚನದ ಶೈಲಿಯಲ್ಲಿ ಕಾವ್ಯಾತ್ಮಕವಾಗಿಯೂ, ಗದ್ಯದ ಧಾಟಿಯಲ್ಲಿಯೂ, ಸಂಭಾಷಣೆಯಾಗಿಯೂ ಹೇಳುತ್ತಾ ಹೋಗುತ್ತಾರೆ.

ಜಾನಪದ ಮಹಾಕಾವ್ಯಗಳಲ್ಲಿ ಹೆಚ್ಚು ದೀರ್ಘವಾದುದೂ, ಪ್ರಸಿದ್ಧವಾದುದೂ ಮಲೆಮಹದೇಶ್ವರ ಕಥೆ, ಮಂಟೇಸ್ವಾಮಿಯ ಕಥೆ, ಜುಂಜಪ್ಪನ ಕಥೆ, ಮೈಲಾರ ಮಹಾಲಿಂಗನ ಕಥೆಗಳು. ಇವರೆಲ್ಲರೂ ಚಾರಿತ್ರಿಕ ವ್ಯಕ್ತಿಗಳಾಗಿದ್ದೂ, ಧಾರ್ಮಿಕ ನಾಯಕರಾಗಿ ಮಿಂಚಿದವರು. ಇವರಲ್ಲಿ ಮಲೆಯ ಮಾದಪ್ಪನ ಬಗೆಗಿನ ಚಾರಿತ್ರಿಕ ದಾಖಲೆಗಳು ಅಧಿಕೃತವಾಗಿ ದೊರೆತಿಲ್ಲ. ಮಿಣ್ಯಾದ ಗುರುಸಿದ್ಧಕವಿಯು ರಚಿಸಿರುವ 'ಮಹದೇಶ್ವರ ಚರಿತೆ' ಎಂಬ ಕಾವ್ಯವು ತಾಳೆಗರಿಯಲ್ಲಿ ದೊರಕಿದ್ದರೂ, ಅದು ಇಂದು ದೇವರಗುಡ್ಡರು ಹಾಡುವ 'ಮೌಖಿಕ ಮಾದಪ್ಪನ ಕಥೆ'ಗಿಂತ ಭಿನ್ನವಾದ ಹೆಚ್ಚಿನ ಮಾಹಿತಿಗಳನ್ನೇನೂ ನೀಡುವುದಿಲ್ಲ. ದೇವರಗುಡ್ಡರು ಮಾದಪ್ಪನ ಕಥೆಯನ್ನು ಹೇಳುವಾಗ, 'ಹುಟ್ಟಿದ್ದು ಉತ್ತರ ದೇಶ, ಬೆಳೆದದ್ದು ಕತ್ತಲ ರಾಜ್ಯ' ಎಂದು ಹೇಳುವ ಮಾತು ಗಮನಾರ್ಹ. ಕಥೆ ಕಟ್ಟುವ ಪ್ರಕ್ರಿಯೆಯೊಳಗೆ 'ಉತ್ತರ ದೇಶ' ಎನ್ನುವುದು ಒಂದು ಬಗೆಯ ಮಿಥ್ ಆಗಿದೆ. ಏಕೆಂದರೆ ಜಾನಪದ ಮಹಾ ಕಾವ್ಯಗಳ ನಾಯಕರ ಹುಟ್ಟು ನಿಗೂಢವಾದದ್ದು. ಅವರೆಲ್ಲ ಅತಿಮಾನುಷ ಶಕ್ತಿಗಳನ್ನು ಆವಾಹಿಸಿಕೊಳ್ಳುವುದರಿಂದ ಅವರ ಜನನ ಲೋಕರೀತಿಗಿಂತ ಭಿನ್ನವಾದುದು ಎಂದು ಇವರು ನಂಬುತ್ತಾರೆ. ಹಾಗಾಗಿಯೇ ಮಾದಪ್ಪ ತಾಯಿಯ ಬೆನ್ನು ಸೀಳಿಕೊಂಡು ಹುಟ್ಟಿದರೆ, ಮಂಟೇಸ್ವಾಮಿ 'ತಾವರ ಕಮಲ'ದಲ್ಲಿ ದುಂಬಿಯಾಗಿ ಜನ್ಮತಾಳುತ್ತಾನೆ ಎಂಬುದು ಕೂಡ ಇವರನ್ನು ಅತಿಮಾನುಷ ನೆಲೆಗೇರಿಸುವ ಪ್ರಯತ್ನಗಳೇ ಆಗಿವೆ.

ಈ ಕಥೆಗಳು ಹುಟ್ಟಿಕೊಳ್ಳುವ ಕಾಲಕ್ಕಾಗಲೇ ವಚನ ಯುಗ ಮುಗಿದು ಅದರ ಪ್ರಭಾವ ಅವರ ಅನುಯಾಯಿಗಳಲ್ಲಿ ಗಾಢವಾಗಿ ಬೆಳೆದು ಶರಣ ಚಿಂತನೆಗಳು ಸಾಂಸ್ಥಿಕ ರೂಪ ಪಡೆದುಕೊಂಡಿದ್ದವು. ವೀರಶೈವ ಧರ್ಮದ ಸೈದ್ಧಾಂತಿಕ ಹಿಡಿತ ಹಾಗೂ ಸಾಂಸ್ಥಿಕತೆಯ ವಿರುದ್ಧ ಹೋರಾಡುವ ಅನಿವಾರ್ಯತೆಯೂ ಆ ಕಾಲಕ್ಕಾಗಲೇ ಸೃಷ್ಟಿಯಾಗಿತ್ತು. ಆ ಕಾರಣದಿಂದಲೇ ಮಾದಪ್ಪ ಮಠಗಳಿಗೆ ಹೋಗಿ, ಅಲ್ಲಿ ಪವಾಡಗಳನ್ನು ಮಾಡಿ ಗೆಲ್ಲುತ್ತಾನೆ; ಮಂಟೇಸ್ವಾಮಿ ಶರಣರ ಲಿಂಗಗಳನ್ನು ಮಾಯ ಮಾಡಿ ಬಸವಣ್ಣನಿಗೇ ಗುರುವಾಗಿ, ಆತನನ್ನು ನೇರವಾಗಿ ಕಲ್ಯಾಣದಿಂದ ಕೈಲಾಸಕ್ಕೆ ಕಳುಹಿಸುತ್ತಾನೆ. ಇಲ್ಲಿ ಕಲ್ಯಾಣ ಮತ್ತು ಕೈಲಾಸಗಳು ಕೂಡ ಮಿಥ್‌ಗಳಾಗಿ ಬಳಕೆಯಾಗುತ್ತವೆ ಹಾಗೂ ಅದನ್ನೇ ಜನಪದರು 'ಉತ್ತರದಲ್ಲಿ ಹುಟ್ಟಿದ್ದು' ಎನ್ನುವ ಮೂಲಕ ಭೌತಿಕ ವಿವರಗಳಿಗೆ ದಕ್ಕದ ನೆಲೆಗಳನ್ನು ಪುರಾಣದ ಚೌಕಟ್ಟಿನೊಳಗೆ ಅಳವಡಿಸುತ್ತಾರೆ. ಇಲ್ಲಿ ಶರಣರ ಸಾಂಸ್ಥಿಕ ಹಾಗೂ ಬೌದ್ಧಿಕತೆಯ ನಡುವಿನ ಸಮರಸ ಅಥವಾ ವೈರುಧ್ಯವನ್ನಷ್ಟೇ ನಾವು ಗಮನಿಸಬೇಕೇ ಹೊರತು, ಕಾಲ–ಸ್ಥಳಗಳೆರಡೂ ಇಲ್ಲಿ ಗೌಣವಾಗುತ್ತವೆ. ಆದ್ದರಿಂದಲೇ ಈ ಕಥೆಗಳು ಥಟ್ಟನೆ ಯುಗಯುಗಾಂತಗಳನ್ನೂ ದಾಟಿ ನೇರವಾಗಿ ಕಲ್ಯಾಣದೊಳಗೆ ಪ್ರವೇಶ ಪಡೆದುಕೊಳ್ಳುತ್ತವೆ. ಉತ್ತರ ದೇಶವು ಸೃಷ್ಟಿಸುವ, ಪ್ರಭಾವಿಸುವ, ಪುರಾಣೀಕರಿಸುವ ವಿಷಯಗಳ ಜೊತೆಗೆ ಕಾಲಸ್ಥಳಗಳನ್ನು ದಾಟುವ ಕ್ರಿಯೆಗೂ ನೆರವಾಗುತ್ತದೆ.

ಇವರು 'ಬೆಳೆದದ್ದು ಕತ್ತಲ ರಾಜ್ಯದಲ್ಲಿ' ಎಂದು ಹೇಳುವುದು ಕೂಡ ಒಂದು ಮೆಟಾಫರ್. ಆ ಕತ್ತಲೆ ರಾಜ್ಯವು ಮೈಸೂರು, ಮಂಡ್ಯಗಳನ್ನೂ ಒಳಗೊಂಡಂತೆ ತಮಿಳುನಾಡಿಗೆ ಅಂಟಿಕೊಂಡಂತಿರುವ ಗಡಿ ಪ್ರಾಂತ್ಯಗಳನ್ನೊಳಗೊಂಡ ಪ್ರದೇಶ. ಈ ಪ್ರಾಂತ್ಯವು ಅತ್ಯಂತ ಫಲವತ್ತಾದ ಪ್ರದೇಶವಾಗಿದ್ದರೂ ಹಾಡುಗಾರರು ಇದನ್ನು ಕತ್ತಲ ರಾಜ್ಯವೆಂಬ ರೂಪಕದೊಳಗೆ ತಂದಿರುವುದೇಕೆ ಎಂಬುದನ್ನು ಗಮನಿಸಬೇಕು. ವೈದಿಕ ಸಂಸ್ಕೃತಿಯ ಆಚರಣೆ ಸಂಪ್ರದಾಯಗಳಿಂದಾಗಿ ನಿರಾಕರಣೆಗೆ ಒಳಗಾದ ಜನರ ಬದುಕಿನಲ್ಲಿ ಜೀವನೋತ್ಸಾಹವೇ ಕುಸಿದಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಈ

ISBN – 978-93-5526-247-9

ಸಾಂಸ್ಕೃತಿಕ ನಾಯಕರು ಆ ಶೂನ್ಯತೆಯನ್ನು ತುಂಬುವ ಕೆಲಸವನ್ನು ಮಾಡುತ್ತಾರೆ ಎಂಬುದನ್ನೂ ಇದು ಸಾಂಕೇಂತಿಕವಾಗಿ ಹೇಳುತ್ತಿರಬಹುದು.

ಕತ್ತಲ ರಾಜ್ಯದಲ್ಲಿ ಮಾದಪ್ಪ ಹಾಗೂ ಮಂಟೇಸ್ವಾಮಿಯರು ಮಾಡುವ ಎರಡು ಪ್ರಧಾನ ಕೆಲಸಗಳಲ್ಲಿ ಮೊದಲನೆಯದು ಒಕ್ಕಲುಗಳನ್ನು ಮಾಡಿಕೊಳ್ಳುವುದು ಮತ್ತು ಇನ್ನೊಂದು ಸಿಸುಮಕ್ಕಳನ್ನು ಪಡೆಯುವುದು. ಇಲ್ಲಿ 'ಒಕ್ಕಲು' ಎನ್ನುವ ಪದವೇ ಕೃಷಿ ಕೇಂದ್ರಿತವಾದುದು. ಬುಡಕಟ್ಟು ಸಮಾಜವು ಕೃಷಿ ಹಾಗೂ ಪಶು ಸಂಗೋಪನೆಗಳನ್ನು ಪ್ರಧಾನವಾಗಿ ಉಳ್ಳದ್ದು. 'ಜುಂಜಪ್ಪನ ಕಥೆ'ಯೊಳಗೆ ಕಾಡುಗೊಲ್ಲರ ಮನೆಯಲ್ಲಿ ಹಸು ಮನೆಯಲ್ಲೇ ಹಾಲು ಕೊಡುವುದಕ್ಕೆ ವ್ಯವಸ್ಥೆಯಾಗುತ್ತದೆ. ಈ ಕಾವ್ಯದಲ್ಲಿ ಹಸುಗಳೂ ಕೂಡ ಪಾತ್ರಗಳಾಗಿ ಬರುತ್ತವೆ. ಆದರೆ ಮಾದಪ್ಪನ ಕಥೆಯಲ್ಲಿ ಅದು ಸಾಕಿದ ಹಸು. ಎಂದರೆ ಕೃಷಿಯನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ವ್ಯವಸ್ಥೆಯನ್ನು ಪರಿವರ್ತಿಸಿಕೊಳ್ಳುತ್ತಿದ್ದ ಕಾಲವನ್ನು ಅದು ಸಂಕೇತಿಸುತ್ತದೆ. ಎಂದರೆ ಉತ್ತರದಿಂದ ದಕ್ಷಿಣಕ್ಕೆ ಬಂದ ಈ ಕೆಳವರ್ಗದ ನಾಯಕರು ತಾವು 'ನೆಲೆಗೊಳ್ಳುವ' ಅಥವಾ 'ಸ್ಥಿರಗೊಳ್ಳುವ' ಪ್ರಕ್ರಿಯೆಯಲ್ಲಿ ಈಗಾಗಲೇ ಒಂದು ಧಾರ್ಮಿಕ ವ್ಯವಸ್ಥೆಯೊಳಗಿದ್ದ ಜನರನ್ನು ತಮ್ಮತ್ತ ಸೆಳೆದುಕೊಳ್ಳಲು ಹಲವು ತಂತ್ರಗಳನ್ನು ಬಳಸಬೇಕಾಗುತ್ತದೆ, ಕೆಲವೊಮ್ಮೆ ಎದುರಿಸಿ ಹೋರಾಡುವ, ಉಪಾಯದಿಂದ ಜಯಿಸುವ ಕುತಂತ್ರಗಳನ್ನೂ ಮಾಡಬೇಕಾಗುತ್ತದೆ. ಮಾದಪ್ಪ ನೆಲೆಗೊಳ್ಳುವ ಪ್ರಕ್ರಿಯೆ ಮೊದಲಿಗೆ ಜುಂಜಪ್ಪನಿಂದ ಹನ್ನೆರಡು ಅಂಕಣದ ಗುಡಿ ಕಟ್ಟಿಸಿಕೊಳ್ಳುವ ಕಾರ್ಯದಿಂದ ಆರಂಭವಾಗುತ್ತದೆ. ಆಮೇಲೆ ಬೇವಿನ ಹಟ್ಟಿ ಕಾಳಮ್ಮನಿಂದ ಎಣ್ಣೆಸ್ನಾನಕ್ಕೆಂದು ಎಳ್ಳು ಕೇಳಿ, ಅವಳನ್ನು ಒಕ್ಕಲು ಮಾಡಿಕೊಳ್ಳಲು ಪ್ರಯತ್ನಿಸಿ ಅದು ಆಗದಿದ್ದಾಗ ಅವಳ ಮನೆಯನ್ನು ಸುಟ್ಟು 'ಪರುಸೆ' ನಡೆಸುತ್ತಾನೆ. ಹೀಗೆ ಇವರು ಒಕ್ಕಲುಗಳನ್ನು ಪಡೆಯುತ್ತಾ ಹೋಗುತ್ತಾರೆ. ಆಮೇಲೆ ಹೀಗೆ ಒಕ್ಕಲಾದವರನ್ನು ಕಾಪಾಡಿಕೊಳ್ಳುವ ಕಾರಣಕ್ಕಾಗಿ ಸಿಸು ಮಕ್ಕಳನ್ನು ಪಡೆಯುತ್ತಾರೆ.

ಇವರು ತಮ್ಮ ಒಕ್ಕಲಾದವರಿಗೆ ಎಂದರೆ ಭಕ್ತರಾದವರಿಗೆ ಆಶ್ರಯ ಕೊಡುತ್ತಾ, ಅವರನ್ನು ಕರುಣಿಸುತ್ತಾ, ಸಂತಾನ ಹೀನರಿಗೆ ಸಂತಾನ ಭಾಗ್ಯವನ್ನು ಕೊಟ್ಟು, ಹೀಗೆ ಜನಿಸಿದ ಮಕ್ಕಳನ್ನು ತಮ್ಮ ಸಿಸುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಈ ಸಿಸುಗಳು ಅವರ ಗುಡ್ಡರಾಗಿ, ತಮ್ಮ ಗುರು ಹೇಳಿಕೊಟ್ಟಿದ್ದನ್ನು ಜನಸಮುದಾಯದಲ್ಲಿ ಹರಡುತ್ತಾ ಹೋಗುತ್ತಾರೆ. ಮಹದೇಶ್ವರನಿಗಾಗಲೀ, ಮಂಟೇಸ್ವಾಮಿಗಾಗಲೀ ತಮ್ಮ ಶಿಷ್ಯರ ಮೂಲಕ ಸಂದೇಶ ಸಾರುವುದು ಮುಖ್ಯವಾಗಿತ್ತೇ ಹೊರತು, ಒಂದೆಡೆ ನಿಂತು ಗುಡಿಗುಂಡಾರಗಳನ್ನಾಗಲೀ, ದೇವಾಲಯಗಳನ್ನಾಗಲೀ ನಿರ್ಮಿಸುವುದು ಇವರ ಉದ್ದೇಶವಾಗಿರಲಿಲ್ಲ.

ಇನ್ನು, ಮಂಟೇಸ್ವಾಮಿಯನ್ನು ಅಲ್ಲಮನ ಅವತಾರವೆಂದೇ ಜನಪದರು ಭಾವಿಸುತ್ತಾರೆ. ಹೀಗಾಗಿ ಮಂಟೇಸ್ವಾಮಿಯನ್ನು ಬಸವಣ್ಣನ ಜೊತೆಯಲ್ಲಿ ಮುಖಾಮುಖಿ ಮಾಡಿಯೇ ಈ ಕಾವ್ಯ ಮುಂದುವರೆಯುತ್ತದೆ. ಅಲ್ಲಮನ ಅವತಾರವಾದ ಮಂಟೇಸ್ವಾಮಿ ಬಸವಣ್ಣನನ್ನು ಪರೀಕ್ಷಿಸುವ ಮೂಲಕ ಕಥೆ ಆರಂಭವಾಗುತ್ತದೆ. ಆಮೇಲೆ ಬಸವಣ್ಣನನ್ನೂ ಅನುಭವ ಮಂಟಪದ ಎಲ್ಲರನ್ನೂ ಬಿಟ್ಟು ತಾನು ಮಾತ್ರ ಒಂಟಿಯಾಗಿ 'ಕತ್ತಲ ರಾಜ್ಯ'ದ ಕಡೆಗೆ ಪ್ರಯಾಣ ಮಾಡುತ್ತಾನೆ. ಹಾಗೆ ಹೋಗುವಾಗ ದಾರಿಯುದ್ದಕ್ಕೂ ಹಲವಾರು ಪವಾಡಗಳನ್ನು ಮಾಡುತ್ತಾ, ತನ್ನ ಒಕ್ಕಲುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಾ ಸಾಗುತ್ತಾನೆ. ರಾಚಪ್ಪಾಜಿ, ಸಿದ್ಧಪ್ಪಾಜಿ, ದೊಡ್ಡಮ್ಮ ಮೊದಲಾದವರು ಇವನ ಒಕ್ಕಲುಗಳಾಗುತ್ತಾರೆ. ಶತ್ರುಗಳನ್ನು ಬಗ್ಗು ಬಡಿಯುತ್ತಾನೆ. ಈ ಎಲ್ಲ ಕಥನಗಳನ್ನೂ ನೀಲಗಾರರು ಬಿಡಿಬಿಡಿಯಾಗಿಯೂ ಹಾಡುತ್ತಾರೆ. ಸಂದರ್ಭಕ್ಕೆ ತಕ್ಕಂತೆ ಕಥಾನಕಗಳನ್ನು ಆರಿಸಿಕೊಂಡು ಹಾಡುವುದೂ ಉಂಟು.

ಮಲೆಯ ಮಾದೇಶ್ವರನನ್ನು ಶಿವನ ಅವತಾರವೆಂದೂ, ಮಂಟೇಸ್ವಾಮಿಯನ್ನು ಅಲ್ಲಮಪ್ರಭುವಿನ ಅವತಾರವೆಂದೂ ದಕ್ಷಿಣ ಕರ್ನಾಟಕದ ಭಕ್ತರು ನಂಬುವಂತೆಯೇ, ಮಧ್ಯ ಕರ್ನಾಟಕದಲ್ಲಿ ಜುಂಜಪ್ಪನನ್ನು ವೀರಭದ್ರನ ಅವತಾರವೆಂದು ಭಾವಿಸಿ ಕಥೆ ಕಟ್ಟಲಾಗಿದೆ. ಮಧ್ಯಕರ್ನಾಟಕದಲ್ಲಿ ಕಂಡು ಬರುವ ಎಲ್ಲ ಕಥೆಗಳೂ ಹೆಚ್ಚಾಗಿ ಪಶುಸಂಗೋಪನೆ ಹಾಗೂ ಸ್ತ್ರೀ ಸಂಬಂಧದ ಸುತ್ತಲೇ ಬೆಳೆಯುತ್ತವೆ. ಜುಂಜಪ್ಪನ ಕಾವ್ಯವನ್ನು 'ಗಣೆ' ವಾದ್ಯದ ಜೊತೆಯಲ್ಲಿ ಅನೇಕ ರಾತ್ರಿಗಳಲ್ಲಿ ಹಾಡಲಾಗುತ್ತದೆ. ಗಣೆ ಎಂಬುದು ಕೊಳಲಿನ ಮಾದರಿಯಲ್ಲಿರುವ ಊದುವ ಒಂದು ವಾದ್ಯ. ಒಬ್ಬರು ಇದನ್ನು ಊದಿದರೆ, ಇನ್ನೊಬ್ಬರು ಕಾವ್ಯವನ್ನು ಹಾಡುತ್ತಾರೆ. ಹಿಮ್ಮೇಳದವರೂ ಇರುತ್ತಾರೆ. ಈ ಕಾವ್ಯ ನಾಲ್ಕು ತಲೆಮಾರುಗಳ ಕಥಾನಕವನ್ನು ಹೊಂದಿದೆ. ಕಾಡುಗೊಲ್ಲರ ಐತಿಹಾಸಿಕ ವೀರನಾದ ಜುಂಜಪ್ಪನ ಸ್ಮಾರಕಗಳು ಇಂದಿಗೂ ತುಮಕೂರು ಹಾಗೂ ಸಿರಾ ತಾಲೂಕುಗಳಲ್ಲಿ ಕಂಡು ಬರುತ್ತಿದ್ದು, ಅವು ಕಾಡುಕೊಲ್ಲರ ಪೂಜಾ ಕೇಂದ್ರಗಳೂ ಆಗಿವೆ.

ISBN – 978-93-5526-247-9

ಹೀಗೆಯೇ ಉತ್ತರ ಕರ್ನಾಟದಲ್ಲಿ ದೊರೆತಿರುವ ಮಹಾಕಾವ್ಯ 'ಹಾಲುಮತ ಕಾವ್ಯ'. ಇದು ಉತ್ತರ ಕರ್ನಾಟಕದಲ್ಲಿನ ಮುಖ್ಯ ಸಮುದಾಯವಾದ ಕುರುಬ ಜನಾಂಗಕ್ಕೆ ಸೇರಿದ್ದು. ಇದೂ ಕೂಡ ಹಲವಾರು ಕಥೆಗಳನ್ನು ಒಳಗೊಂಡಿರುವ ಒಂದು ಕಥಾಗುಚ್ಚ. ಈ ಕಥೆಗಳ ಜೋಡಣೆಯಲ್ಲಿ ಕೆಲವೊಮ್ಮೆ ನಿಶ್ಚಿತತೆ ಅಥವಾ ಸಂಬಂಧ ಇರುವುದಿಲ್ಲ. ಕಾರಣ ಈ ಕಥೆಗಳನ್ನು ಅಗತ್ಯಕ್ಕೆ ತಕ್ಕಂತೆ ಅಲ್ಲಲ್ಲಿ ಬಿಡಿಬಿಡಿಯಾಗಿ ಹಾಡುವುದೇ ಆಗಿದೆ. ಬೇಕೆನಿಸಿದಲ್ಲಿ ಈ ಕಥೆಗಳು ಸಹಜವಾಗಿಯೇ ಬೆಳೆಯುತ್ತಾ ಹೋಗುತ್ತವೆ. ಬೀರಪ್ಪನೆಂಬ ನಾಯಕ ಹಾಲುಮತ ಕಾವ್ಯದ ನಾಯಕ. ಈತ ಸೃಷ್ಟಿಯ ಮೊದಲ ಮಾನವ. ಶಿವನೇ ಇವನ ಹುಟ್ಟಿಗೆ ಕಾರಣ. ಉಳಿದ ಜಾನಪದ ಕಾವ್ಯಗಳ ನಾಯಕರಂತೆಯೇ ಇವನ ಹುಟ್ಟೂ ಕೂಡ ಪೌರಾಣಿಕತೆಯನ್ನು ಪಡೆದುಕೊಳ್ಳುತ್ತದೆ. ಬೆಳೆಯುತ್ತಾ ದುಷ್ಟ ಶಿಕ್ಷೆ ಶಿಷ್ಟ ರಕ್ಷಣೆಯ ಕಾರ್ಯಗಳಲ್ಲಿ ಈತ ತೊಡಗುತ್ತಾನೆ. ಸೃಷ್ಟಿಯ ಉಗಮ, ಬೀರಪ್ಪನ ಜನನ, ಮಾಳಿಂಗರಾಯನ ವೃತ್ತಾಂತ, ಗುರು ವೀರಣ್ಣನ ಸೇವೆ, ಗಂಗಿ ಮಾಳಮ್ಮನ ಕಥೆ ಇತ್ಯಾದಿ ಹಲವಾರು ಕಥೆಗಳು ಇದರೊಳಗೆ ಅಡಕಗೊಂಡಿವೆ.

ಇನ್ನು ತುಳು ನಾಡಿನಲ್ಲಿ ಪ್ರಚಲಿತದಲ್ಲಿರುವ 'ಪಾಡ್ದನ'ಗಳೆಂದೇ ಖ್ಯಾತವಾಗಿರುವ 'ಕೋಟಿಚನ್ನಯ್ಯ' ಹಾಗೂ 'ಸಿರಿ' ಕಾವ್ಯಗಳೂ ಕೂಡ ಗಮನಾರ್ಹವಾದ ಜಾನಪದ ದೀರ್ಘ ಕಥನಕಾವ್ಯಗಳು. 'ಸಿರಿ' ಜಾನಪದಲ್ಲಿ ಕಂಡು ಬರುವ ಸ್ತ್ರೀ ಸ್ವಾತಂತ್ರ್ಯದ ಹೋರಾಟಗಾರ್ತಿ. ಮಕ್ಕಳಿರದ 'ಬಿರುಮಾಳ್ವ'ರಿಗೆ 'ಸಿರಿ' ಸಾಕುಮಗಳು. ತನ್ನ ತಂದೆ ಆಳ್ವರು ಅನಾರೋಗ್ಯದಿಂದ ಬಳಲುತ್ತಿರುವಾಗಲೂ, ಅವರು ಮರಣ ಹೊಂದಿದಾಗಲೂ ಬಾರದೇ ಇರುವ ಬಂಧುಗಳು ಆಮೇಲೆ ಬಂದು ಆಸ್ತಿಯನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಾರೆ. ಪಂಚಾಯಿತಿ ಸೇರುತ್ತದೆ. ಪಂಚಾಯಿತಿಯಲ್ಲಿ ಎಲ್ಲ ತಿಳಿದ ಗಣ್ಯರು ನ್ಯಾಯವನ್ನು ಒದಗಿಸುತ್ತಾರೆಂದೇ ಭಾವಿಸಿದ್ದ ಸಿರಿಗೆ ನಿರಾಸೆಯಾಗುತ್ತದೆ. ಲಂಚದ ವ್ಯಾಮೋಹಕ್ಕೆ ಸಿಕ್ಕಿದ ತೀರ್ಪುಗಾರರು ಸಿರಿಗೆ ನ್ಯಾಯ ಒದಗಿಸುವುದಿಲ್ಲ. ತನ್ನ ಮಗುವಾದ 'ಕುಮಾರ'ನನ್ನು ಎತ್ತಿಕೊಂಡು ಅವಳು ಮನೆಯಿಂದ ಹೊರ ನಡೆಯುತ್ತಾಳೆ. ಹಾಗೆ ಹೊರಬಂದ ಅವಳು ಆಳ್ವರ ಮನೆಯನ್ನು ಸಿಟ್ಟಿನಿಂದ ದಿಟ್ಟಿಸಿ ನೋಡಿದಾಗ ಇಡೀ ಮನೆಯೇ ಉರಿದು ಬೂದಿಯಾಗುತ್ತದೆ ಎನ್ನುವಲ್ಲಿ ಅವಳ ಸಿಟ್ಟು ಎಷ್ಟಿತ್ತು ಎಂಬುದೂ, ಅದೇ ಸಮಯದಲ್ಲಿ ಅವಳು ಸತ್ಯವಂತಳು ಎಂಬುದೂ ತಿಳಿಯುತ್ತದೆ. ಈ ಘಟನೆ ತಮಿಳಿನ 'ಸಿಲಪ್ಪದಿಕಾರಂ' ಕಾವ್ಯದಲ್ಲಿ ಕನ್ನಗಿಯು ಇಡೀ ಮಧುರೈ ನಗರವನ್ನು ಉರಿಸಿ ಸುಟ್ಟು ಹಾಕುವ ಮೂಲಕ ತನ್ನ ಸಿಟ್ಟನ್ನು ತೋರ್ಪಡಿಸುವುದನ್ನು ನೆನಪಿಸುತ್ತದೆ.

ಮಗನೊಂದಿಗೆ ಗಂಡನ ಮನೆಗೆ ಬಂದ ಸಿರಿ ಆಡುವ ಮಾತುಗಳು, ಆಕೆ ತೋರುವ ದಿಟ್ಟತನ, ಅವಳ ಆತ್ಮಸ್ಥೈರ್ಯಗಳು ಸ್ತ್ರೀ ಕುಲಕ್ಕೇ ಮಾದರಿಯಾಗುವಂತಹವು. ಅನರ್ಹ, ಬೇಜವಾಬ್ದಾರಿ ಗಂಡಿಗೆ ಹೆಣ್ಣೊಬ್ಬಳು ಸ್ವತಃ ತಾನೇ ವಿಚ್ಛೇದನ ಹೇಳುವ ಪ್ರಸಂಗ ತುಂಬ ಧೈರ್ಯವಂತ ಹೆಣ್ಣುಮಕ್ಕಳಿಗಷ್ಟೇ ಸಾಧ್ಯವಾಗುವುದು. ಇಷ್ಟ ಬಂದಂತೆ ಪರಸ್ತ್ರೀ ಸಂಗದಲ್ಲಿದ್ದ ಶ್ರೀಮಂತ ಗಂಡನ ನಡತೆಯ ವಿರುದ್ಧ ಕಿಡಿ ಕಾರಿ, ಆತ ಕಟ್ಟಿದ ತಾಳಿಯನ್ನು ಕಿತ್ತು ಆತನ ಮೇಲೇ ಎಸೆದು, ಏಕಾಂಗಿಯಾಗಿ ಬದುಕು ಕಟ್ಟಿಕೊಳ್ಳಲು ಹೊರಡುವ ಸಿರಿ ತುಳುನಾಡಿನ ವೀರವನಿತೆಯೇ ಆಗಿದ್ದಾಳೆ. ಈ ಕಥೆಯನ್ನು ನಿರೂಪಿಸುವಾಗ ಅವಳು ತೋರಿದ ಪವಾಡಗಳು, ಅವಳ ಇಚ್ಛಾಶಕ್ತಿ ಮತ್ತು ಮಾಂತ್ರಿಕತೆಗಳು ಅವಳ ಆತ್ಮಬಲವನ್ನು ನಿರೂಪಿಸುವ ಸಾಧನಗಳಾಗಿಯೇ ಬರುತ್ತವೆ.

'ಸಿರಿ' ಹೆಸರಿನ ಈ ದೀರ್ಘಕಾವ್ಯವನ್ನು ಡಾ.ವಿವೇಕರೈ ಮತ್ತು ಡಾ.ಚಿನ್ನಪ್ಪ ಗೌಡ ಅವರು ಸಂಗ್ರಹಿಸಿ, ಫಿನ್ಲೆಂಡಿನ ಡಾ. ಲೋರಿಹಾಂಕೋ ಅವರ ಜೊತೆ ಇಂಗ್ಲಿಷಿಗೂ ಭಾಷಾಂತರಿಸಿ ಪ್ರಕಟಿಸಿದ್ದಾರೆ.

ಹೀಗೆ ಕನ್ನಡದ ಜಾನಪದ ಮಹಾಕಾವ್ಯಗಳನ್ನು ಸಂಶೋಧಕರು ಗುರುತಿಸುತ್ತಾ ಬಂದಿದ್ದಾರೆ. ಕನ್ನಡದಲ್ಲಿ ಜಾನಪದ ಮಹಾಕಾವ್ಯಗಳನ್ನು ಮೊದಲಿಗೆ ಪರಿಚಯ ಮಾಡಿಕೊಟ್ಟವರು ಹಿರಿಯ ವಿದ್ವಾಂಸರಾದ ಜೀ.ಶಂ.ಪ. ಅವರು. ಇವರು, 'ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು' ಎನ್ನುವ ತಮ್ಮ ಪಿಎಚ್.ಡಿ., ಸಂಶೋಧನಾ ಪ್ರಬಂಧದಲ್ಲಿ ಮಲೆ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಈ ಮೂರೂ ದೊಡ್ಡ ಕಾವ್ಯಗಳ ಬಗ್ಗೆ ದೀರ್ಘವಾದ ವಿಶ್ಲೇಷಣೆಯನ್ನು ಮಾಡುತ್ತಾರೆ. ಜೊತೆಗೇ ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಮೈಲಾರಲಿಂಗನ ಕಾವ್ಯ ಹಾಗೂ ಎಲ್ಲಮ್ಮನ ಕಾವ್ಯಗಳನ್ನೂ ಪರಿಚಯಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಮೈಲಾರಲಿಂಗನ ಕಾವ್ಯವನ್ನು ಮೊದಲು ಸಂಗ್ರಹಿಸಿ ಪ್ರಕಟಿಸಿದವರು ಡಾ.ಎಂ.ಬಿ.ನೇಗಿನಹಾಳ ಅವರು. ಇವರ ನಂತರ ಮಹಾಕಾವ್ಯಗಳನ್ನು ಹೆಚ್ಚಾಗಿ ಸಂಗ್ರಹಿಸಿ ಪ್ರಕಟಿಸಿದವರು ಮೈಸೂರಿನವರೇ ಆದ ಜನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ ಅವರು. ಇವರು ಮಲೆಯ ಮಹದೇಶ್ವರ ಕಾವ್ಯದ ಜೊತೆಗೆ ಜನಪದ ಮಹಾಭಾರತ, ಪಿರಿಯಾಪಟ್ಟಣದ ಕಾಳಗ, ಬಸವಪುರಾಣ, ಕರಪಾಲ ಬಸವ ಪುರಾಣ ಇತ್ಯಾದಿ ಕಾವ್ಯಗಳನ್ನೂ ಸಂಪಾದಿಸಿ ಪ್ರಕಟಿಸಿದ್ದಾರೆ. ಕನ್ನಡ ಜಾನಪದ ಮಹಾಕಾವ್ಯಗಳ ಸಂಗ್ರಹ ಹಾಗೂ

ಪ್ರಕಟಣೆಯ ಕೆಲಸದಲ್ಲಿ ಹಂಪಿ ವಿಶ್ವವಿದ್ಯಾಲಯದ ಕೆಲಸ ಕೂಡ ಶ್ಲಾಘನೀಯವಾದುದು. ಪ್ರಮುಖ ಕಾವ್ಯಗಳಷ್ಟೇ ಅಲ್ಲದೆ, ಕುಮಾರ ರಾಮನ ಕಾವ್ಯ ಹಾಗೂ ಕಾಡುಗೊಲ್ಲರ ಕಾವ್ಯಗಳು ಈ ನಿಟ್ಟಿನಲ್ಲಿ ಉಲ್ಲೇಖಾರ್ಹವಾದವು. ಬೀರಪ್ಪನ ಕಥೆಯನ್ನು ಒಳಗೊಂಡಿರುವ 'ಹಾಲುಮತ ಕಾವ್ಯ'ವನ್ನು 2000ದಲ್ಲಿ ಸಂಪಾದಿಸಿಕೊಟ್ಟವರು ಡಾ. ವೀರಣ್ಣ ದಂಡೆಯವರು. ಇವರಲ್ಲದೆ ಡಾ.ಹೀ.ಚಿ.ಬೋರಲಿಂಗಯ್ಯ, ಡಾ. ಚೆಲುವರಾಜು ಅವರಂತಹ ಹಲವಾರು ಜಾನಪದ ತಜ್ಞರೂ ಕೂಡ ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡುವ ಮೂಲಕ ಜಾನಪದ ಕಾವ್ಯಗಳಿಗೂ, ಕಥನಗೀತೆಗಳಿಗೆ ನ್ಯಾಯ ಒದಗಿಸುವ ಪ್ರಯತ್ನ ಮಾಡಿದ್ದಾರೆ.

ಈ ಜಾನಪದ ಕಾವ್ಯಗಳಲ್ಲಿ ಆರಂಭದಲ್ಲಿ ನೋಡಿದ ಹಾಗೆ, ರಾಜಮಹಾರಾಜರ ಕಥೆಗಳಾಗಲೀ, ಅವರ ಮನೆತನದ ಒಳಗಿನ ಈರ್ಷೆ, ಜಗಳ, ಅಧಿಕಾರಕ್ಕಾಗಿ ಹೋರಾಟ, ಮತ್ಸರ, ಯುದ್ಧ, ಸಾವುನೋವುಗಳಾಗಲೀ ಕಂಡು ಬರುವುದಿಲ್ಲ. ಶಿಷ್ಟಕಾವ್ಯಗಳು ಮೇಲ್ವರ್ಗದ ಜನರ ಅಥವಾ ರಾಜಕುಟುಂಬಗಳ ಚರಿತ್ರೆಗಳು. ಆದರೆ ಜಾನಪದ ಕಾವ್ಯಗಳು ಜನಸಾಮಾನ್ಯರ ಕಥೆಗಳನ್ನು, ಅವರ ಸಮುದಾಯಕ್ಕೆ ಸೇರಿದ ಸಾಂಸ್ಕೃತಿಕ ನಾಯಕರ ಕಥೆಗಳನ್ನು ಹೇಳುತ್ತವೆ. ಮಲೆಯ ಮಾದೇಶ್ವರ ಹಾಗೂ ಮಂಟೇಸ್ವಾಮಿ ಇಬ್ಬರೂ ದಲಿತ ವರ್ಗದ ಹಿನ್ನೆಲೆಯನ್ನು ಉಳ್ಳವರು. ಮೈಲಾರಲಿಂಗ ಹಾಗೂ ಹಾಲುಮತ ಕಾವ್ಯದ ಬೀರಪ್ಪ ಇವರುಗಳು ಕುರುಬ ಜನಾಂಗದ ಸಾಂಸ್ಕೃತಿಕ ವೀರರು. ಜುಂಜಪ್ಪ ಗೊಲ್ಲರ ನಾಯಕ. ಕೋಟಿಚನ್ನಯ್ಯ ಮತ್ತು ಸಿರಿ ತುಳುನಾಡಿನ ಮೇಲ್ವರ್ಗಕ್ಕೆ ಸೇರಿದವರಾಗಿದ್ದರೂ ಪುರುಷಪ್ರಧಾನ ವ್ಯವಸ್ಥೆಯೊಳಗೆ ಸಿಲುಕಿ ನಲುಗಿದವರು.

ಈ ಸಾಂಸ್ಕೃತಿಕ ನಾಯಕರ ಜೊತೆಗೆ ಕಾಣಿಸಿಕೊಳ್ಳುವ ವ್ಯಕ್ತಿಗಳೂ ಕೂಡ ಸಾಮಾನ್ಯ ಜನರೇ ಆಗಿದ್ದಾರೆ. ಇವರು ಕುರಿ ಆಕಳು ಎಮ್ಮೆಗಳನ್ನು ಸಾಕುವ, ಅವುಗಳನ್ನೇ ತಮ್ಮ ಜೀವನಾಧಾರವನ್ನಾಗಿ ಉಳ್ಳವರು. ಎಂದರೆ ಹೈನುಗಾರಿಕೆ ಹಾಗೂ ಕೃಷಿ ಪ್ರಧಾನ ಸಂಸ್ಕೃತಿಯನ್ನು ಇವು ಕೇಂದ್ರವಾಗಿ ಹೊಂದಿವೆ. ಈ ನಾಯಕರು ತಮ್ಮ ಅಸಾಧಾರಣ ಅಥವಾ ಅಸಾಮಾನ್ಯ ಕ್ರಿಯೆಗಳ ಮೂಲಕ ಎಂದರೆ ಕಾವ್ಯಗಳು ಹೇಳುವಂತೆ ಪವಾಡಗಳನ್ನು ಮೆರೆಯುವ ಮೂಲಕ ತಮ್ಮ ಜನಾಂಗದ ಜನರನ್ನು ಒಲಿಸಿಕೊಳ್ಳುತ್ತಾ ತಮ್ಮ ಒಕ್ಕಲುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಹಾಗೂ ದುಷ್ಟರನ್ನು ಸೋಲಿಸುತ್ತಾ, ಅಗತ್ಯವಿದ್ದಲ್ಲಿ ಅವರನ್ನು ನಾಶ ಮಾಡುತ್ತಾ ತಮ್ಮ ನೆಲೆಯನ್ನು ಸ್ಥಿರಪಡಿಸಿಕೊಳ್ಳುತ್ತಾರೆ. ಆದರೆ ಈ ದುಷ್ಟರು ರಾಮಾಯಣ ಮಹಾಭಾರತಗಳಲ್ಲಿ ಬರುವಂತೆ ಅವರ ವೈಯಕ್ತಿಕ ದ್ವೇಷಿಗಳೇನೂ ಆಗಿರುವುದಿಲ್ಲ. ಇವರು ಸಮಾಜಘಾತುಕ ಶಕ್ತಿಗಳು. ಇವರೆಲ್ಲರನ್ನೂ ಲೋಕ ಕಲ್ಯಾಣಕ್ಕಾಗಿಯೇ ಇವರು ನಾಶ ಮಾಡುತ್ತಾರೆ. ಹೀಗೆ ಇವರ ದುಷ್ಟ ನಿಗ್ರಹ ಶಿಷ್ಟ ರಕ್ಷಣೆಯ ಕಾರ್ಯಗಳು ಸಾಮಾನ್ಯರ ಜೀವನವನ್ನು ನೆಮ್ಮದಿಮಯವಾಗಿ ಮಾಡುವುದಾಗಿರುತ್ತದೆಯೇ ಹೊರತು ತಮ್ಮ ಪ್ರತಿಷ್ಠೆಗಾಗಿಯೋ, ಅಧಿಕಾರಕ್ಕಾಗಿಯೋ, ಸ್ವಂತಕ್ಕಾಗಿಯೋ ಈ ಕೆಲಸಗಳು ಇಲ್ಲಿ ನಡೆಯುವುದಿಲ್ಲ. ಹಾಗಾಗಿಯೇ ಇವರು ಧಾರ್ಮಿಕ ಮಹಾಪುರುಷರಾಗಿಯೂ ಪರಿವರ್ತಿತರಾಗಿದ್ದಾರೆ.

ಹಾಲುಮತ ಕಾವ್ಯದ ಬೀರಪ್ಪ ಹಾಗೂ ಜುಂಜಪ್ಪನ ಕಾವ್ಯಗಳಲ್ಲಿ ಪಶುಸಂಗೋಪನೆ ಹಾಗೂ ಪಶುಸಾಕಾಣಿಕೆಗಳ ಚಿತ್ರಣವೂ ಕಂಡು ಬರುತ್ತದೆ. ದನಗಾಹಿಗಳ ಬದುಕಿನ ಜೊತೆಯಲ್ಲಿ ಇವರ ಬದುಕೂ ಅಡಗಿದೆ. ಈ ಎರಡೂ ಕಾವ್ಯಗಳಲ್ಲೂ ಒಂದು ಪ್ರಸಂಗ ಬರುತ್ತದೆ. ಸಮಯಕ್ಕೆ ಸರಿಯಾಗಿ ಮಳೆ ಬಾರದೆ ಬರಗಾಲ ಏರ್ಪಟ್ಟು ಜನರೂ ದನಕರುಗಳೂ ನೀರಿಗಾಗಿ ಹಾಹಾಕಾರ ಮಾಡುತ್ತಾರೆ. ಆಹಾರಕ್ಕೂ ಮೇವಿಗೂ ಪರದಾಟ ಕಾಣಿಸುತ್ತದೆ. ಆ ಸಂದರ್ಭದಲ್ಲಿ ಈ ಗುರುಗಳು ಹಾಗೂ ಅವರ ಶಿಷ್ಯರು ಅವರ ಸಂಕಟಗಳನ್ನು ಕಂಡು, ನೀರು, ಆಹಾರ, ಮೇವಿಗೆ ವ್ಯವಸ್ಥೆ ಮಾಡಲು ಹೆಣಗುತ್ತಾರೆ. ಸಮೃದ್ಧಿಯಾಗಿರುವ ಸ್ಥಳಗಳನ್ನು ಗುರುತಿಸಿ ಅಲ್ಲಿಗೆ ಇವರನ್ನು ಸಾಗಿಸಿ ಬದುಕು ಕಟ್ಟಿಕೊಡುತ್ತಾರೆ. ತಾವೂ ಅವರ ಜೊತೆಯಲ್ಲಿ ನಿಂತು ಅವರಿಗೆ ಸಹಕಾರಿಯಾಗಿ, ಹೆಗಲಿಗೆ ಹೆಗಲು ನೀಡುತ್ತಾರೆ. ಈ ಸಂದರ್ಭದಲ್ಲಿ ವಡ್ಡಾರಾಧನೆಯ ಭದ್ರಬಾಹು ಮುನಿಯ ಕಥೆಯನ್ನೂ ನಾವು ಗಮನಿಸಬಹುದು. ಉತ್ತರದಲ್ಲಿ ಬರಗಾಲ ಏರ್ಪಟ್ಟಾಗ ಅಲ್ಲಿನ ಮುನಿಗಳು ತಾವಿದ್ದ ಸ್ಥಳವನ್ನು ಬಿಟ್ಟು ದೂರ ಪ್ರಾಂತ್ಯಕ್ಕೆ ಹೋಗಲು ಸಿದ್ಧರಾಗುತ್ತಾರೆ. ಆಗ ಆ ಪ್ರಾಂತ್ಯದ ಅರಸನಾದ ಭದ್ರಬಾಹು ತನ್ನ ಮಗನಿಗೆ ರಾಜ್ಯವನ್ನು ವಹಿಸಿಕೊಟ್ಟು, ತಾನು ನಿರಾತಂಕವಾಗಿ ಈ ಮುನಿಗಳ ಜೊತೆ ರಾಜ್ಯದಿಂದ ಹೊರನಡೆಯುತ್ತಾನೆ. ತನ್ನ ಪ್ರಜೆಗಳು ಸಂಕಟವನ್ನೆದುರಿಸುತ್ತಿರುವ ಸಮಯದಲ್ಲಿ ಅವರ ಬಗ್ಗೆ ಏನೂ ಯೋಚಿಸದೆ, ಅವರಿಗೆ ಮಾರ್ಗದರ್ಶನ ಮಾಡದೆ ಬದುಕಿನಿಂದ ವಿಮುಖನಾಗುವ ಭದ್ರಬಾಹು ಅರಸ ಜೀವನದಿಂದ ಪಲಾಯನ ಮಾಡಿದರೆ; ಈ ಜಾನಪದ ವೀರರು ತಮ್ಮ ಜನರ ಜೊತೆಯಲ್ಲೇ ನಿಂತು ಅವರಿಗೆ ಬದುಕು

ISBN – 978-93-5526-247-9

ಕಟ್ಟಿಕೊಡುತ್ತಾರೆ. ಇದು ಇವರ ಜೀವದಯಾಪರ ನಿಲುವನ್ನು ತೋರಿಸುತ್ತವೆ. ಕಾವ್ಯದಲ್ಲಿ ಅಲ್ಲಲ್ಲಿ ನಡೆಯುವ ಪಶುಗಳನ್ನು ಅನಾರೋಗ್ಯಕ್ಕೆ ದೂಡುವ, ಆಹಾರವನ್ನು ಕೆಡಿಸುವ ಜೀವವಿರೋಧಿ ಕಾರ್ಯಗಳಿಗೆ ಇವರು ಸಮರ್ಥವಾಗಿಯೇ ಪ್ರತಿರೋಧ ಒಡ್ಡಿ ಅವುಗಳನ್ನು ಕಾಪಾಡಿಕೊಳ್ಳುವ ರೀತಿ ಸೋಜಿಗ ಮೂಡಿಸುತ್ತದೆ.

ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಬೀರಪ್ಪ ಮೊದಲಾದವರು ಧಾರ್ಮಿಕ ಮಹಾಪುರುಷರಾಗಿ, ಆಯಾ ಪ್ರದೇಶದ ಅದರಲ್ಲೂ ಮುಖ್ಯವಾಗಿ ಆಯಾ ಜನಾಂಗದ ಪ್ರಭಾವಿ ದೇವರುಗಳಾಗಿಯೂ ಪರಿವರ್ತಿತರಾಗಿದ್ದಾರೆ. ಇವರಿಗೆಲ್ಲ ನಿರ್ದಿಷ್ಟ ಜನಾಂಗದ ಭಕ್ತರು ಇದ್ದು, ಇವರಿಗಾಗಿ ವರ್ಷಕ್ಕೊಮ್ಮೆ ಜಾತ್ರೆ–ಉತ್ಸವಗಳನ್ನು ಆಚರಿಸುತ್ತಾರೆ. ಆ ಸಂದರ್ಭಗಳಲ್ಲಿ ಇವರ ಮಹಿಮೆಯನ್ನು ತಿಳಿಸುವ ಕಥೆಗಳನ್ನು ರಾತ್ರಿಯೆಲ್ಲ ಹಾಡುತ್ತಾರೆ.

ಈ ಜಾನಪದ ನಾಯಕರು ಕೆಲವು ನಿರ್ದಿಷ್ಟ ಜನಾಂಗದ ಜೊತೆಯಲ್ಲಿ ಗುರುತಿಸಿಕೊಂಡಿದ್ದರೂ, ಇವರ ಜಾತ್ರೆ ಉತ್ಸವಗಳಲ್ಲಿ ಎಲ್ಲ ಜನರು ಪಾಲ್ಗೊಳ್ಳುತ್ತಾರೆ, ಹರಕೆ ಹೊರುತ್ತಾರೆ, ಅವರಿಗಾಗಿ ನಡೆದುಕೊಳ್ಳುತ್ತಾರೆ. ಈ ಎಲ್ಲ ಕ್ರಿಯೆಗಳ ಮೂಲಕ ಇವರು ಜನಸಾಮಾನ್ಯರ ಬದುಕಿನಲ್ಲಿ ಬೆರೆತು ಹೋಗಿರುವುದನ್ನೂ ಕಾಣಬಹುದು.

ಫಿನ್‌ಲ್ಯಾಂಡಿನ ಜನಪದ ಮಹಾಕಾವ್ಯ 'ಕಲೆವಾಲಾ'. ಫಿನ್‌ಲ್ಯಾಂಡಿನ ಜನರು ಸುಮಾರು ಏಳುನೂರೈವತ್ತು ವರ್ಷಗಳ ಹಿಂದೆ ಪಾರತಂತ್ರ್ಯದಲ್ಲಿ ಸಿಲುಕಿ ನರಳುತ್ತಿದ್ದಾಗ ಅವರಲ್ಲಿ ಸ್ವಾತಂತ್ರ್ಯದ ಕನಸನ್ನು ಬಿತ್ತಿದ್ದೇ ಈ ಜಾನಪದ ಮಹಾಕಾವ್ಯ. ಅದರಲ್ಲಿ ಬರುವ, 'ನನ್ನ ದೇಶಕ್ಕಾಗಿ ನನ್ನ ಉಸಿರಿರುವವರೆಗೂ ಹೋರಾಡುತ್ತೇನೆ' ಎನ್ನುವ ವಾಕ್ಯವನ್ನೇ ಆ ಜನರು ತಮ್ಮ ಸ್ವಾತಂತ್ರ್ಯದ ಮಂತ್ರವನ್ನಾಗಿ, ಉದ್ಘೋಷವನ್ನಾಗಿ ಸ್ವೀಕರಿಸಿ ಜೀವದ ಹಂಗು ತೊರೆದು ಹೋರಾಡಿದರು, ತಮ್ಮನ್ನೇ ಬಲಿದಾನಗೈದುಕೊಂಡರು. ಇದೆಲ್ಲದರ ಫಲವಾಗಿ ಫಿನ್‌ಲ್ಯಾಂಡ್‌ಗೆ ಮುಕ್ತಿ ದೊರೆತು ಸ್ವಾತಂತ್ರ್ಯ ಲಭಿಸಿತು. ಹಾಗೆ ನೋಡಿದರೆ ಜಗತ್ತಿನ ಹಲವಾರು ದೇಶಗಳು ತಮ್ಮ ದೇಸೀ ಚಿಂತನೆಗಳ ಕಡೆಗೆ ಗಮನ ಹರಿಸಿದ್ದೇ ತಮ್ಮ ಅಸ್ತಿತ್ವಕ್ಕೆ ಧಕ್ಕೆಯೊದಗಿ, ತಾವು ಗಂಡಾಂತರದೊಳಗೆ ಸಿಲುಕಿ ಕೊಂಡಾಗ ತಾನೇ! ಭಾರತೀಯರೂ ಪಾರತಂತ್ರ್ಯದ ಕಪಿ ಮುಷ್ಠಿಯೊಳಗೆ ಸಿಲುಕಿದ್ದಾಗ ಗಾಂಧೀಜಿಯವರು ಜನರ ಸ್ವಾಭಿಮಾನವನ್ನು ಬಡಿದೆಬ್ಬಿಸಲು ಬಳಸಿಕೊಂಡಿದ್ದು ದೇಸೀ ಚಿಂತನೆಗಳನ್ನೇ. ಅಹಿಂಸೆ, ಅಸಹಕಾರ, ಖಾದಿ ಚಳವಳಿ, ಉಪ್ಪಿನ ಸತ್ಯಾಗ್ರಹ ಇವೆಲ್ಲವೂ ದೇಸೀ ಚಿಂತನೆಯೊಳಗೆ ಮೂಡಿದ ಆಯುಧಗಳೇ ಆಗಿದ್ದವೂ. ಆದರೂ ಸ್ವಾತಂತ್ರ್ಯಾ ನಂತರ ಈ ದೇಸೀ ಚಿಂತನೆ ಮತ್ತೆ ಹಿಂದೆ ಸರಿದು ಜಾಗತೀಕರಣದ ವಿಸ್ತೃತ ಬಲೆಯೊಳಗೆ ನಮ್ಮ ಸಾಂಸ್ಕೃತಿಕ ಲೋಕ ಅವನತಿಯ ಹಾದಿ ಹಿಡಿದಿರುವುದು ಒಂದು ದುರಂತವೇ ಸರಿ.

ಆದರೆ ಫಿನ್‌ಲ್ಯಾಂಡ್‌ನ ಜನರು ಇಂದು ಕಲೆವಾಲಾವನ್ನು ತಮ್ಮ ರಾಷ್ಟ್ರೀಯ ಕಾವ್ಯವವನ್ನಾಗಿ ಘೋಷಿಸಿದ್ದಾರೆ. ಈ ಕಾವ್ಯದ ಹೆಸರಿನಲ್ಲಿ ಒಂದು ದಿನವನ್ನು ದೇಶದ ರಜಾದಿನವನ್ನಾಗಿಯೂ ಗುರುತಿಸಲಾಗಿದೆ. ಇದು ಅವರ ದೇಸೀ ಪ್ರಜ್ಞೆಯ ಒಂದು ಭಾಗವೇ ಆಗಿದೆ.

ಕನ್ನಡದ ಜನಪದ ಮಹಾಕಾವ್ಯಗಳು ತಮ್ಮದೇ ಆದ ಬಹುಸಂಸ್ಕೃತಿಯನ್ನು ಸಾಬೀತುಪಡಿಸುತ್ತಾ, ಭಾರತ ದೇಶವು ವೈವಿಧ್ಯಮಯವಾದ ಸಾಂಸ್ಕೃತಿಕತೆಯನ್ನು ಮೈಗೂಡಿಸಿಕೊಂಡಿರುವ ದೇಶವಾಗಿದ್ದೂ, ಭಿನ್ನತೆಯೊಳಗೆ ಏಕತೆಯನ್ನು ಸಾಧಿಸಿರುವ ದೇಶವೆಂಬುದನ್ನು ಸಾರುತ್ತವೆ.

ಈ ಧಾರ್ಮಿಕ ಕಥೋಪಜೀವಿಗಳು ಒಂದು ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ ಕಥೆಯನ್ನು ಹಾಡಿ, ಅದರ ಮಹಿಮೆಯನ್ನು ಎತ್ತಿ ಹಿಡಿದು ಜನಸಮುದಾಯದಲ್ಲಿ ಧರ್ಮ, ಭಕ್ತಿ, ಶ್ರದ್ಧೆ, ನಿಷ್ಠೆ, ಜ್ಞಾನ, ತ್ಯಾಗಮನೋಭಾವಗಳನ್ನು ಬೆಳೆಸುತ್ತಿದ್ದಾರೆ. ಆಯಾ ದೇವರ ಒಕ್ಕಲಿನವರು ಜಾತ್ರೆ ಹಬ್ಬಗಳನ್ನೂ ಆಚರಿಸುವ ಮೂಲಕ ಭಾರತದ ವಿಶಿಷ್ಟ ಸಂಸ್ಕೃತಿ, ಪರಂಪರೆಯನ್ನೂ ಉಳಿಸುವ, ಬೆಳೆಸುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದ್ದಾರೆ.

***

## 3. ತುಳು ಜನಪದ ಕಾವ್ಯಗಳಲ್ಲಿ ಪ್ರಕೃತಿ ಚಿತ್ರಣದ ಸ್ವರೂಪ

**ಡಾ.ಎಂ.ಎಸ್.ದುರ್ಗಾಪ್ರವೀಣ**

ತುಳುವಿನ ಜನಪದ ಮಹಾಕಾವ್ಯಗಳಲ್ಲಿ ಕಂಡು ಬರುವ ಪ್ರಕೃತಿ ಚಿತ್ರಣವು ಬೆರಗು ಮೂಡಿಸುವಂತದಾಗಿದ್ದು ತತ್ಸಂಬಂಧೀ ಅಧ್ಯಯನಗಳನ್ನು ವಿಸ್ತರಿಸಿಕೊಳ್ಳುವ ದೃಷ್ಟಿಯಿಂದ ಈ ವಿವರಗಳಿಗೊಂದು ಪ್ರವೇಶಿಕೆಯನ್ನು ಒದಗಿಸಿಕೊಡುವುದು ಪ್ರಸ್ತುತ ಪತ್ರಿಕೆಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಮೊದಲನೆಯ ಭಾಗದಲ್ಲಿ ತುಳುವಿನ ಜನಪದ ಮಹಾಕಾವ್ಯಗಳಾಗಿ ಚರ್ಚೆಗೊಳಗಾಗಿರುವ[1], ಬಹು ಆಯಾಮಗಳಿಂದ ಅಧ್ಯಯನಕ್ಕೊಳಗಾಗಿರುವ ಸಿರಿ ಮಹಾಕಾವ್ಯ, ಕೋಟಿ ಚನ್ನಯಗಳ ಒಂದು ಪರಿಚಯಾತ್ಮಕ ಪ್ರವೇಶ ಮತ್ತು ಇಂದು ಲಭ್ಯವಿರುವ ಹಲವು ಪಠ್ಯಗಳಲ್ಲಿರುವ ಪ್ರಕೃತಿ ಚಿತ್ರಣದ ಸ್ವರೂಪವನ್ನು ಗ್ರಹಿಸಿಕೊಳ್ಳುವ ಬಗೆಯನ್ನು, ಎರಡನೆಯ ಭಾಗದಲ್ಲಿ ನಿರ್ದಿಷ್ಟವಾಗಿ ಮೌಖಿಕದಿಂದ ಬರಹರೂಪಕ್ಕೆ ಬಂದಿರುವ ಪ್ರಾರಂಭ ಘಟ್ಟದ ಪಠ್ಯಗಳಲ್ಲಿ ಪ್ರಕೃತಿ ಚಿತ್ರಣದ ಸ್ವರೂಪವನ್ನು ಕಂಡುಕೊಳ್ಳುವ, ತನ್ಮೂಲಕ ಕಾಲಮಾನದ ಹಾದಿಯಲ್ಲಾಗಿರುವ ಬದಲಾವಣೆಗಳನ್ನು ಗ್ರಹಿಸಿಕೊಳ್ಳುವೆಡೆಗೆ ಸಾಗುವ ಬಗೆಯನ್ನು ಸಂಕ್ಷಿಪ್ತವಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಇಲ್ಲಿ ತುಳು ಜನಪದ ಕಾವ್ಯಗಳ ಅಧ್ಯಯನ ಪರಂಪರೆ ಬೆಳೆದು ಬಂದ ಮಾರ್ಗವನ್ನು ನೆನಪಿಸಿಕೊಳ್ಳಬೇಕು.[2] ಈ ಅಧ್ಯಯನಗಳ ಅರಿವು ಪ್ರಸ್ತುತ ವಿಚಾರಕ್ಕೆ ತೆರೆದುಕೊಳ್ಳಲು ಅನುಕೂಲಕರ. ತುಳು ಜನಪದ ಮಹಾಕಾವ್ಯಗಳ ಅಧ್ಯಯನದ ಸಂದರ್ಭದಲ್ಲಿ ಕೆಲವೊಂದು ವಿಚಾರಗಳು ಮುಖ್ಯವಾಗುತ್ತವೆ. ತುಳುನಾಡು ಭೌಗೋಳಿಕವಾಗಿ–ಪ್ರಾಕೃತಿಕವಾಗಿ ಬಹು ಸಂಪದ್ಭರಿತವಾದ ಪ್ರದೇಶ. ಇಂದಿನ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹೀಗೆ ತುಳು ಭಾಷಿಕ ಪರಿಸರವನ್ನು ಬಿಂಬಿಸುವಂತಾದ್ದು ಈ ತುಳುನಾಡು ಎಂಬ ಪರಿಭಾಷೆ. ಶತಮಾನಗಳಿಂದಲೂ ಕಾಡು–ಕಡಲುಗಳು ಇಲ್ಲಿನ ಜನಪದ ಸಂವೇದನೆಯನ್ನು ರೂಪಿಸುತ್ತಾ ಬಂದಿವೆ.[3] ಅದು ಇಲ್ಲಿನ ಜನಪದ ಜಗತ್ತಿನ ಅಭಿವ್ಯಕ್ತಿಯಲ್ಲಿ ಸಮರ್ಥವಾಗಿ ಪ್ರತಿಫಲಿಸಿದೆ, ದೃಶ್ಯ–ಶ್ರವ್ಯ–ಮುದ್ರಿತ ಪಠ್ಯಗಳಲ್ಲಿ ಸಾಕ್ಷಿಗಳಾಗಿ ಉಳಿದುಕೊಂಡಿವೆ. ಈ ನಿಟ್ಟಿನಲ್ಲಿ ಪಾಡ್ದನಗಳು ಅಥವಾ ಸಂಧಿಗಳು ಬಹಳ ಮುಖ್ಯವಾಗಿ ಕಾಣಿಸಿಕೊಳ್ಳುತ್ತವೆ.

ಈ ಸಂದರ್ಭದಲ್ಲಿ ಕೋಟಿ ಚನ್ನಯ ಮತ್ತು ಸಿರಿ ಕಾವ್ಯಗಳು ವಿಶೇಷವಾಗಿ ಕಂಡುಬರುತ್ತವೆ. ಕೋಟಿ – ಚನ್ನಯ ಪಾಡ್ದನ ಅವಳಿ ವೀರರ ಕಥಾನಕವಾಗಿದ್ದು ಇಂದು ಶೋಷಿತ ಸಮುದಾಯದ ಸ್ವಾಭಿಮಾನದ ಪ್ರತೀಕವಾಗಿ ಕಂಡುಬರುತ್ತದೆ. ಇದನ್ನು 'ಬಂಟೆರೆ ಸಂಧಿ' ಎಂದೂ ಕರೆಯುವುದಿದೆ. ಈ ಪಾಡ್ದನದ ಒಳಗೇ ನಿರ್ದಿಷ್ಟ ಭಾಗಗಳು ದೇಯಿ ಬೈದೆತಿ ಸಂಧಿ, ಕೋಟಿ ಚನ್ನಯ ಸಂಧಿ, ಪೆರ್ಮಲೆ ಬಲ್ಲಾಳ ಸಂಧಿ ಇವು ಬಿಡಿಬಿಡಿಯಾಗಿಯೂ ಅಸ್ತಿತ್ವ ಉಳಿಸಿಕೊಂಡಿವೆ. ಅವು ಖಂಡ ಕಾವ್ಯಗಳ ಮಾದರಿಯಲ್ಲಿಯೂ ಬಹಳ ಜನಪ್ರಿಯವಾಗಿವೆ. (ನೋ: ವಾಮನ ನಂದಾವರ; 2001). ತುಳುನಾಡಿನ ವಿವಿಧ ಪ್ರದೇಶಗಳೊಂದಿಗೆ ಹೆಣೆದುಕೊಳ್ಳುವ ನಿರ್ದಿಷ್ಟ ಘಟನಾವಳಿಗಳು ಕೋಟಿ ಚನ್ನಯ ಕಾವ್ಯದ ಬೆಳವಣಿಗೆಗೆ ಮಾತ್ರವಲ್ಲ ಸಂಕೀರ್ಣತೆಗೂ ಕಾರಣವಾಗಿದೆ. ಸಮಕಾಲೀನ ಸಂದರ್ಭದಲ್ಲಿ ದೈವಗಳಾಗಿ ಕೋಟಿ ಚನ್ನಯರು ಆರಾಧನೆಗೊಳಗಾಗುವ ಬಗೆಯೂ ಗಮನಾರ್ಹವಾದುದು. (ನೋ: ದಾಮೋದರ ಕಲ್ಮಾಡಿ (ಸಂ); 2002) ಆಯಾ ಭೌತಿಕ ವಿವರಗಳೊಂದಿಗೆ ಸುದೀರ್ಘವಾಗಿ ಸಾಗುವ ಈ ಜೀವನಚಿತ್ರಣದ ಕಥಾನಕವು ಇಂದಿಗೂ ಜೀವಂತವಾಗಿರುವ ಆಚರಣೆಗಳೊಂದಿಗೆ ಬೆಸೆದುಕೊಂಡು ಅತ್ಯಂತ ಜನಪ್ರಿಯವಾಗಿದೆ.

ಅದೇ ರೀತಿ 'ಸಿರಿಯ ಪಾಡ್ದನ'ವು 'ಸಿರಿ ಸಂಧಿ'ಯಾಗಿಯೂ ಕಾಣಿಸುತ್ತದೆ. ಇಲ್ಲೂ ಅಬ್ಬಗೆ–ದಾರಗೆ ಸಂಧಿ ಬಿಡಿಯಾದ ಅಸ್ತಿತ್ವ ಉಳಿಸಿಕೊಂಡಿದೆ. ಸಿರಿ ಪಾಡ್ದನದ ಸತ್ಯನಪುರದ ಅಕ್ಕರಸು ಪೂಂಜೆದಿ ಕತೆಯಾಗಿ ಜನಪ್ರಿಯವಾಗಿದೆ. ಸಿರಿ ಕಾವ್ಯವು ಸ್ತ್ರೀ ಸ್ವಾತಂತ್ರ್ಯದ, ಸ್ವಾಭಿಮಾನದ ಪ್ರತೀಕವಾಗಿ ಕಂಡು ಬರುತ್ತದೆ. (ನೋ: ನಾವಡ ಎ.ವಿ.(ಸಂ); 1999) ಮೂರು ತಲೆಮಾರುಗಳ ಈ ಸುದೀರ್ಘ ಕಥಾನಕವು ನಮ್ಮ ಜನಪದ ಅಭಿವ್ಯಕ್ತಿಯ ಸಶಕ್ತ ಉದಾಹರಣೆಗಳಲ್ಲೊಂದು. ಅತ್ಯಂತ ಶ್ರದ್ಧೆ, ಭಕ್ತಿಗಳಿಂದ ಆರಾಧನೆಗೊಳಗಾಗುವ ಸಿರಿ, ಕುಮಾರ ಮೊದಲಾದವರು ಕೇವಲ ಕಥಾನಕದ ಪಾತ್ರಗಳಾಗಿ ಉಳಿಯದೆ ಇಂದಿಗೂ ದೈವಗಳಾಗಿ ಸಮುದಾಯದ ಭಾವಭಿತ್ತಿಯ ಭಾಗವಾಗಿದ್ದಾರೆ.

ಹರಿಗಡಿಯದ ನಂಬಿಕೆ, ಆಚರಣೆಗಳೊಂದಿಗೆ ಉಳಿದು ಬರುತ್ತಿರುವ ತುಳುನಾಡಿನ ಇವೆರಡೂ ಕಾವ್ಯಗಳು ಕರ್ನಾಟಕ ಮಾತ್ರವಲ್ಲದೆ ಭಾರತೀಯ ಸಂದರ್ಭದ ಜನಪದ ಅಧ್ಯಯನದಲ್ಲೂ ಗುರುತರ ಪಾತ್ರ ವಹಿಸುತ್ತಿವೆ. ತುಳು

ISBN – 978-93-5526-247-9

ಭಾಷೆಯ ಮೌಖಿಕ ಸಾಹಿತ್ಯವು ದೇಶ ವಿದೇಶಗಳ ವಿದ್ವಾಂಸರಿಗೆ ಬಹು ಅಚ್ಚರಿಯ ಸಂಗತಿಯಾಗಿ ಕಂಡಿರುವುದನ್ನು ಈ ಹಿನ್ನೆಲೆಯಲ್ಲಿ ಮತ್ತೆ ಗುರುತಿಸಬೇಕು. (ನೋ: ಚಿನ್ನಪ್ಪ ಗೌಡ ಕೆ; 1990) ಬಹು ಆಯಾಮಗಳ ಸಂಶೋಧನೆಗಳು ಇಲ್ಲಿ ನಡೆದಿರುವುದನ್ನು ಗಮನಿಸುವಾಗ ಜನಜೀವನದ ಮೂಲಶಕ್ತಿ ಸತ್ವ ಜನಪದ ದನಿಬನಿಗಳಾಗಿ ಮೌಖಿಕ ರೂಪದಲ್ಲಿ ಉಳಿದುಕೊಂಡು ಬಂದಿರುವಲ್ಲಿ ಸುತ್ತಲಿನ ಪ್ರಾಕೃತಿಕ ಸಂಪತ್ತಿನೊಂದಿಗೆ ಹೆಣೆದುಕೊಳ್ಳುವ ಬಗೆಯೂ ಮುಖ್ಯವಾಗುತ್ತದೆ, ಪ್ರಕೃತಿಯ ಚಿತ್ರಣವು ಬರುವ ಬಗೆಯಲ್ಲಿ ನೆಲದ ದನಿಗಳು ಸೇರಿಕೊಂಡಿರುತ್ತವೆ, ಅವು ಜೀವಜಾಲದ ವಿಕಸನದ ಹೆಜ್ಜೆಗುರುತುಗಳನ್ನು ಅರ್ಥ ಮಾಡಿಕೊಳ್ಳುವಲ್ಲಿಯೂ ಸಹಾಯಕವಾಗುತ್ತವೆ. ಪ್ರಕೃತಿಯ ಸೂಕ್ಷ್ಮ ನೆಲೆಗಳು ಮಾತಿನ ರೂಪದ ಭಾಗವಾಗಿ ಬರುವ ಬಗೆ ಮುಖ್ಯವಾಗುತ್ತದೆ. ಪಾಡ್ದನಗಳು ಸಾಮಾನ್ಯವಾಗಿ ತುಳುನಾಡಿನ ಭೂತಾರಾಧನೆಗೆ ಸಂಬಂಧಪಟ್ಟಿವೆಯಾದರೂ ಕೋಟಿ ಚನ್ನಯರನ್ನು, ಸಿರಿಯನ್ನು ಪಾಡ್ದನಗಳಲ್ಲಿ ಭೂತಗಳು ಎಂದು ಕರೆಯುವ ಪದ್ಧತಿ ಇಲ್ಲ. (ನೋ: ವಿವೇಕ ರೈ ಬಿ.ಎ; 1985) ಅಲ್ಲಿ ಅವರನ್ನು ಅತಿಮಾನುಷ ಶಕ್ತಿಗಳಾಗಿ ಆರಾಧಿಸುವ, ಪೂಜಿಸುವ ಪದ್ಧತಿ ಇದ್ದು ಆಗ ಈ ಸಂಬಂಧಿತ ಪಾಡ್ದನವನ್ನು ಹಾಡುವಂತಹುದು ಕಾಣಿಸುತ್ತದೆ. ಸ್ತ್ರೀಯರು ಶಕ್ತಿ ಸ್ವರೂಪಿಣಿಯರಾಗಿ ಆರಾಧನೆಗೊಳಾಗುವುದನ್ನು ಇಲ್ಲಿ ಪೂರಕವಾಗಿ ಗುರುತಿಸಿಕೊಳ್ಳಬೇಕು. (ನೋ: ಸಾವಿತ್ರಿ ಕೆ; 2006)

ತುಳು ಜನಪದ ಮಹಾಕಾವ್ಯಗಳಾಗಿ ಕೋಟಿ ಚನ್ನಯ, ಸಿರಿ ಕಾವ್ಯಗಳನ್ನು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಈ ಕಾವ್ಯಗಳಲ್ಲಿ ಕಾಣಿಸುವ ಪ್ರಕೃತಿ ಚಿತ್ರಣದ ಸ್ವರೂಪವನ್ನು ಎರಡು ವಿಧವಾಗಿ ಕಂಡುಕೊಳ್ಳಬಹುದು. ಮೊದಲನೆಯದು, ತುಳುವಿನ ಜನಪದ ಮಹಾಕಾವ್ಯಗಳಲ್ಲಿ ಒಟ್ಟು ನಿರೂಪಣೆಯ, ವರ್ಣನೆಯ ಭಾಗವಾಗಿ ಬರುವಂತಾದ್ದು. ಇದು ಒಟ್ಟು ಮಹಾಕಾವ್ಯದ ಮೇಲ್ಪದರದಲ್ಲಿ, ಮೊದಲ ಓದಿನಲ್ಲಿ, ಕೇಳುವಿಕೆಯಲ್ಲಿ ಕಂಡುಬರುವಂತಾದ್ದು– ಗಿಡ–ಮರ–ಬಳ್ಳಿ–ಪ್ರಾದೇಶಿಕ ಶ್ರೀಮಂತಿಕೆ, ಪ್ರಾಣಿ ಜಗತ್ತು– ಪಕ್ಷಿ ಜಗತ್ತು– ಕಾಡು –ಕಡಲಿನ ಅನುಸಂಧಾನದ ರೂಪಗಳು. ಉದಾಹರಣೆಗೆ ಕೋಟಿ ಚನ್ನಯ ಕಾವ್ಯದಲ್ಲಿ ಹಲವೆಡೆ ಬರುವ ವರ್ಣನೆಯ ಭಾಗಗಳನ್ನು ಗಮನಿಸಬಹುದು. ಬಿಲ್ಲವ ಸಮುದಾಯದ ಕೋಟಿ ಚನ್ನಯರ ಕಥಾನಕವು ಬೆಳವಣಿಗೆ ಹೊಂದುವ ಸಂದರ್ಭ, ದೇಯಿ ಬೈದೆತಿ ಹೆರಿಗೆ ನೋವು ಕಾಣಿಸಿಕೊಂಡು ತೆಂಗಿನಮರ ಹಿಡಿದುಕೊಂಡು ನಿಲ್ಲುವ ಸನ್ನಿವೇಶ, ಆಗ ಬುದ್ಯಂತನ ವ್ಯಂಗ್ಯ, ಮಕ್ಕಳ ಆಟದ ವರ್ಣನೆ, ಪ್ರಯಾಣದ ವಿವರ ಹೀಗೆ ವಿವಿಧ ಸನ್ನಿವೇಶಗಳಲ್ಲಿ ಕಾಣಿಸುವ ವಿವರಗಳು, ಹಾಗೆಯೇ ಸಿರಿ ಕಾವ್ಯದಲ್ಲಿ 'ಸುದೆ ದಾಟುವ ಸನ್ನಿವೇಶ', ಕುಮಾರ, ಅಬ್ಬಗೆ ದಾರಗೆಯ ವಿವಿಧ ಸಂದರ್ಭಗಳನ್ನು ಗುರುತಿಸಬೇಕು.

ಎರಡನೆಯದು, ನಿರ್ದಿಷ್ಟ ಆಚರಣೆಯ ಭಾಗವಾಗಿ– ಆರಾಧನಾ ಕ್ರಮದ ಅಂಗವಾಗಿ ಬರುವ ಪ್ರಕೃತಿ ಮನುಷ್ಯ ಸಂಬಂಧದ ಸ್ವರೂಪ. ಇದು ಒಟ್ಟು ಮಹಾಕಾವ್ಯದ ಒಳಪದರಗಳಲ್ಲಿ, ಸೂಕ್ಷ್ಮ ಓದಿನಲ್ಲಿ, ಆಲಿಸುವಿಕೆಯಲ್ಲಿ ಕಂಡುಬರುವಂತಾದ್ದು– ಹರಕೆ–ಆರಾಧನೆ– ಪೂಜೆ– ನಂಬಿಕೆ– ಆಚರಣೆಗಳ ಹಾಸುಹೊಕ್ಕಾಗಿ ಬರುವ ಚಿತ್ರಣಗಳು. ಉದಾಹರಣೆಗೆ 'ಸಿರಿ ಕಾವ್ಯ'ದಲ್ಲಿ ಲಂಕೆ ಲೋಕನಾಡಿನ ಸತ್ಯನಾಪುರದ ಅರಮನೆಯಲ್ಲಿದ್ದ ಬೆರ್ಮ ಆಳ್ವನಿಗೆ ಮಕ್ಕಳಿಲ್ಲದ ಕೊರಗು, ಕುಲದೈವವಾದ ಬೆರ್ಮೆರ್ ಒಂದು ದಿನ ಬ್ರಾಹ್ಮಣನ ರೂಪದಲ್ಲಿ ಬಂದು ಭಿಕ್ಷೆ ಬೇಡಿ, ಆಗ ಆದಿ ಆಲಡೆ ಪಾಳು ಬಿದ್ದಿರುವುದನ್ನು ತಿಳಿಸಿ ಅದನ್ನು ಜೀರ್ಣೋದ್ಧಾರ ಮಾಡಲು ಬೆರ್ಮಾಳ್ವನಿಗೆ ಹೇಳುವುದು, ಹಾಗೆ ಬೆರ್ಮಾಳ್ವ ಅಥವಾ ಅಜ್ಜೆರ್ ಸಂತತಿಗಾಗಿ ಆಲಡೆಯನ್ನು ಜೀರ್ಣೋದ್ಧಾರ ಮಾಡುವ ಸಂದರ್ಭ ಬರುತ್ತದೆ. ಈ ಭಾಗವನ್ನು ವಿಶೇಷವಾಗಿ ಗಮನಿಸಬೇಕು. ಸುಗ್ಗಿ ಹುಣ್ಣಿಮೆಯ ದಿನ ಜಾತ್ರೆಯನ್ನು ಏರ್ಪಡಿಸುವುದು, ಅರ್ಚಕರು ಆಗ ಪ್ರಸಾದ ರೂಪವಾಗಿ ಸಿಂಗಾರದ ಹೂವು, ಜೊತೆಗೆ ಆನೆ ಕಲ್ಲಿನಿಂದ ತೆಗೆದ ಗಂಧದ ಬಿಲ್ಲೆ ನೀಡುವುದು. ಅದನ್ನು ತಂದು ಬೆರ್ಮಾಳ್ವ ತನ್ನ ಅರಮನೆಯಲ್ಲಿ ಕಲ್ಲಕಲಂಬಿಯಲ್ಲಿ ಇಡುವುದು, ಅಲ್ಲಿ ಆ ಸಿಂಗಾರದ ಹೂ ಬಿಚ್ಚಿಕೊಂಡು ಅದರಲ್ಲಿ ಹೆಣ್ಣು ಮಗು ಕಾಣಿಸಿಕೊಳ್ಳುವಂತಾದ್ದು, ಸತ್ಯದ ಮಗು ಅದಾದುದರಿಂದ ಬೆರ್ಮಾಳ್ವ ಮಗುವಿಗೆ 'ಸತ್ಯನಾಲೋಕದ ಸಿರಿ' ಎಂಬ ಹೆಸರು ಇಡುವುದು ಗಮನಿಸಬೇಕು. ಭಿನ್ನ ಪಠ್ಯಗಳನ್ನು ಅಭ್ಯಸಿಸಿದಾಗಲೂ ಕತೆಯ ಹೊರವಿವರಗಳಿಗಿಂತಲೂ ಒಳಹೂರಣದಲ್ಲಿ ಅಡಕವಾಗುವ ಸಿಂಗಾರದ ಬಳಕೆ ಗಮನಾರ್ಹವಾಗಿ ಕಾಣಿಸುವಂತಾದ್ದಾಗಿದ್ದು ಇದು ಪ್ರಕೃತಿ ಸಂಬಂಧೀ ವಿವಿಧ ಚರ್ಚೆಗಳೆಡೆಗೆ ಕರೆದೊಯ್ಯುವಂತಾದ್ದು. ಕೋಟಿಚನ್ನಯ ಕಾವ್ಯದ ಪಠ್ಯದಲ್ಲಿ ಕಾಣಿಸುವ ದೇಯಿಯ ಸೀಮಂತದ ಚಿತ್ರಣದಲ್ಲಿ ಬರುವ 'ಬಂಗ ಬಾಳೆಯ ಕೊಡಿ ಎಲೆ'ಯನ್ನು ಇಲ್ಲಿ ಗುರುತಿಸಬೇಕು. ಅದರೊಂದಿಗೆ ಬರುವ ಮೇಲೋಗರದ ಬಗೆಗಳು, ಎಲೆ, ತಾವರೆ, ಕಾಡು, ಮರ, ಮೀನು ಇತ್ಯಾದಿ ವಿವರಗಳೂ ಈ ನೆಲೆಯವು.

ISBN – 978-93-5526-247-9

ಪಾಡ್ದನಗಳು, ಸಂಧಿಗಳು ಪ್ರಕೃತಿಯೊಂದಿಗೆ ಮಿಳಿತಗೊಳ್ಳುವ ಬಗೆಯಲ್ಲಿ ಪ್ರಾಣಿಮೂಲದ ದೈವಗಳು ಆರಾಧನೆಗೊಳಗಾಗುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಪಂಜುರ್ಲಿ ಭೂತ ಅಂದರೆ ಪಂಜಿಕುರುಳೆ –ಹಂದಿಯ ಮರಿ, ಪಿಲಿಚಾಮುಂಡಿ ಭೂತ ಅಂದರೆ ಹುಲಿ ಚಾಮುಂಡಿ, ನಂದಿಗೋಣ –ಕೋಣ ಹೀಗೆ ನಿಸರ್ಗದ ಶಕ್ತಿಗಳೊಂದಿಗೆ ಹೊಂದಿದ ಸಂಬಂಧವನ್ನು ಸೂಚಿಸುತ್ತವೆ. (ನೋ: ಅಮೃತ ಸೋಮೇಶ್ವರ; 1997) ಈ ಪ್ರಾಣಿಮೂಲದ ದೈವಗಳಲ್ಲೂ ಪ್ರಕೃತಿಯ ಸಂಬಂಧ ಬೆಸೆವ ಬಗೆ ಕಾಣಿಸುತ್ತದೆ. ಪ್ರಕೃತಿಯೊಂದಿಗಿನ ಈ ತಾದಾತ್ಮ್ಯವನ್ನು ಇಲ್ಲಿನ ಕಾವ್ಯಗಳಲ್ಲಿ ಹಲವು ನೆಲೆಯಲ್ಲಿ ಕಾಣಬಹುದು.

ತುಳುನಾಡಿನ ಮೌಖಿಕ ಕಾವ್ಯಗಳು ಕಥೆಯ ರೂಪದಲ್ಲಿ ಸಂಗ್ರಹಗೊಂಡು ಮುದ್ರಿತ ರೂಪಕ್ಕೆ ಬರುವ ವೇಳೆಗೆ ಕಥೆಯ ಮೂಲ ಆಶಯಕ್ಕೆ ಹೊಂದಿಕೊಂಡು ಕತೆಯ ನಿರೂಪಣೆಗನುಗುಣವಾಗಿ ಪ್ರಕೃತಿಯ ವಿವಿಧ ಅಂಶಗಳು ಬೆಸೆದುಕೊಂಡಿರುವುದನ್ನು ಇಲ್ಲಿ ಗುರುತಿಸಬೇಕು. ಹತ್ತೊಂಬತ್ತನೆಯ ಶತಮಾನದಲ್ಲಿ ತುಳುವಿನ ಜನಪದ ಕಾವ್ಯಗಳಿಗೆ ಸಂಬಂಧಪಟ್ಟಂತೆ ನಡೆದ ಬೆಳವಣಿಗೆಯೊಂದನ್ನು ಸಾಂದರ್ಭಿಕವಾಗಿ ಇಲ್ಲಿ ಗುರುತಿಸಬೇಕು. ಆ ಸಂದರ್ಭದಲ್ಲಿ ತುಳುನಾಡಿಗೆ ಬಂದಿದ್ದ ವಿದೇಶೀ ಅಧಿಕಾರಿಗಳು, ಮಿಶನರಿಗಳು ಈ ವಿಶಿಷ್ಟ ಪಠ್ಯಗಳನ್ನು ಕಂಡು ದಾಖಲಿಸಿದ ಮಾದರಿಗಳು ಮುಂದಿನ ಪ್ರಯತ್ನಗಳಿಗೆ ದಾರಿ ಮಾಡಿಕೊಟ್ಟಿತು. ಎ.ಮೆನ್ನರ್ ಅವರ ಪಾಡ್ದನೊಳು(1886) (ನೋ: ಅಗಸ್ಟ್ ಮೆನ್ನರ್; 2019 (ಮ.ಮು), ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಪ್ರಕಟವಾದ ಎ.ಸಿ.ಬರ್ನೆಲ್ ಸಂಪಾದನೆಯ ಡೆವಿಲ್ ವರ್ಷಿಪ್ ಆಫ್ ತುಳುವಾಸ್ (ನೋ: ನಾವಡ ಎ.ವಿ ಮತ್ತು ಡೆನ್ನಿಸ್ ಫರ್ನಾಂಡೀಸ್ (ಸಂ); 2008 (ಮ.ಮು) ಅಂದಿನ ದಾಖಲಾತಿಯ ಅನನ್ಯ ಮಾದರಿಗಳು. ಇವು ಮೌಖಿಕ ಕಾವ್ಯಗಳನ್ನು–ಪಾಡ್ದನಗಳನ್ನು ಕಥಾರೂಪದಲ್ಲೂ, ಭಾಗಶ: ಕಾವ್ಯದ ರೂಪದಲ್ಲೂ ಹಿಡಿದಿಟ್ಟ ಪ್ರಯತ್ನಗಳು. ಈಗ ಬೆನೆಟ್ ಜಿ.ಅಮ್ಮಣ್ಣ ಮತ್ತು ಡಾ.ಎಂ.ಎಸ್. ದುರ್ಗಾಪ್ರವೀಣ್ ಸಂಗ್ರಹಿಸಿರುವ ಹತ್ತೊಂಬತ್ತನೇ ಶತಮಾನದ ಹಸ್ತಪ್ರತಿಗಳಲ್ಲಿ ಇರುವ ಬೈದೆರುಳೆ ಸಂಧಿ, ಮಯಿಸಂದಾಯ ಸಂಧಿ ಮೊದಲಾದವು ಇದೇ ಸ್ವರೂಪದಲ್ಲಿ ಬಂದಂತವು. ಇಂತಹಾ ಪಠ್ಯಗಳಲ್ಲಿ ಕಾಣಿಸುವಂತಹಾ ಹಲವು ಅಂಶಗಳು ಪ್ರಕೃತಿ ಚಿತ್ರಣದ ದೃಷ್ಟಿಯಿಂದಲೂ ನಮಗೆ ಅತ್ಯಂತ ಮುಖ್ಯವಾಗುತ್ತವೆ. ಕೋಟಿ ಚನ್ನಯರ ಕಥಾನಕದಲ್ಲಿ ಬಲ್ಲಾಳನಿಗೆ ಬೇಟೆಯ ಸಂದರ್ಭದಲ್ಲಿ ಮುಳ್ಳು ಚುಚ್ಚಿದಾಗ ವೈದ್ಯನು ಔಷಧಕ್ಕಾಗಿ "ಅಕ್ಕಾಸೊಗು ಪೊತೀ ಕೊಡಿ। ಪಾತಾಲೊಗು ಪೊತ್ತಿ ಬೆರ್। ಮರ್ದ್ ಪಸೊಂಡೆ" ಎನ್ನುವಲ್ಲಿ ಔಷಧ ವಿವರವನ್ನು ಹೇಳಬಾರದೆಂಬ ಜನಪದ ವೈದ್ಯ ಸಂಬಂಧೀ ನಂಬಿಕೆಯೂ ಮಿಳಿತವಾಗುತ್ತದೆ. ಅದೇ ಮಾದರಿಯಲ್ಲಿ ಮುಂದೆ ಆ ವ್ರಣವನ್ನು ವಾಸಿ ಮಾಡುವ ತುಂಬು ಗರ್ಭಿಣಿ ದೆಯಿ ಬೈದೆದಿಯೂ "ಮೂಜಿ ಕುಂಜಗ್ ಪೊಯೊಳೂ ಮೂಜಿ ಪುಂಡಿ ಕೊಡಿ ಮಳ್‌ದ್। ಉಳಿಗೊದಯ ಕೈಟೆ ಕೊಳಿಯೊಳೂ" ಎನ್ನುವುದೂ ಮುಂದೆ ಬಲ್ಲಾಳನೇ ಆಕೆಯನ್ನು ಕರೆತರಲು ಪಲ್ಲಕಿಯನ್ನು ಕಳಿಸಿದಾಗ ತಾನು ನಡೆದುಕೊಂಡು ಹೋಗುವ, ಔಷಧವನ್ನು ಪಲ್ಲಕಿಯಲ್ಲಿರಿಸುವ ಸಂದರ್ಭದ "ಮೂಜಿ ಪುಂಡಿ ಕೊದಿ ಮಳುದು ಕೊಂಡೂದು। ಆಕಾಸೊದ ಕೊಡಿ ಪಾತಾಳಾದ ಬೆರ್ ಮಳುದ್ ಕೊಂಡೂ ಬರುವೊಳೂ। ಕೊಡಿ ಮಳ್‌ದ್ ಪೊತ್ತೂ ಪೊಡಿ ಮಳ್‌ತೊಳೂ। ಬೆರ್ ಮಳ್‌ದ್ ಕ'ಳೆತು ಪತ್ತೊಂಡೊಳೂ। ಮಳ್‌ದ್‌ದ ಪೆಟ್ಯ ಮಳ್‌ದ್‌ದ ಬುರುಡೆನು ದಂಡೆಡ್ ದಿಯ್ಯೊಳೂ" ಎಂಬುದೂ ಗಮನಾರ್ಹವಾದುದು. ಅನಾಥ ಬಾಲಕರಾದ ಕೋಟಿ ಚನ್ನಯರನ್ನು ಬೆಳೆಸಲು ಬಲ್ಲಾಳ ಹಾಲಿಗಾಗಿ ಹಸುವನ್ನೂ, ತುಪ್ಪಕ್ಕಾಗಿ ಎಮ್ಮೆಯನ್ನು ಕೊಟ್ಟನು ಎಂಬ ಸೂಚನೆಯ "ಪೆರ್‌ಗು ಪೆತ್ತಲಾ ಕೊರೊಡೂ। ನೆಯಿಕ್ ಯೆಂಮೆರ್ಲಾ ಕೊರ್ಯೆರ್।" ಎಂಬ ಸಾಲನ್ನು ಗಮನಿಸಬೇಕು. ಕೋಟಿ ಚನ್ನಯರಿಗೆ ಓದು ಬಹ ಕಲಿಸಲು ಏರ್ಪಾಡು ಮಾಡಲು ಹೊಯಿಗೆ ತರಿಸುವ "ಪೊಯ್ಯೆ ತರ್ಪಾಲ ಪೊಯ್ಯೆದ ಪೊಡಿ ಬರಲು ಕಲಪಾಲಾ। ಪಲಯಿ ಪತ್ತಲಾ ಪಲಾಯಿಾದ ಬರಉಗ್ ಪಾಡ್‌ಲಾ" ಎಂಬ ಅಂಶವನ್ನು ಪೂರಕವಾಗಿ ಗುರುತಿಸಬೇಕು. ಇಂತಹಾ ವಿವರಗಳೊಂದಿಗೆ ಬೆಸೆದುಕೊಳ್ಳುವ ನಂಬಿಕೆಗಳು, ವರ್ಣನೆಗಳು ಅನೇಕ ವಿಚಾರಗಳನ್ನು ತೆರೆದಿಡುತ್ತವೆ. ಕೌತುಕಕ್ಕೆ ಕಾರಣವಾಗುವ ಕೆಲವು ವಿವರಗಳೂ ಲಭ್ಯವಾಗುವುದಿದೆ. ಉದಾಹರಣೆಗೆ ಬರ್ನೆಲ್ ಸಂಗ್ರಹದ ಕೋಟಿ ಚನ್ನಯ ಕಥಾನಕದಲ್ಲಿ ಮೂರ್ತೆಗಾಗಿ ಕಾಡಿಗೆ ಒಂಟೆಯ ಮೇಲೆ ಕುಳಿತು ಹೋಗುವ ಚಿತ್ರಣ ಸಹಜ ಭೌಗೋಳಿಕ ವಿವರಗಳಿಗೆ ಹೊರತಾದುದಾಗಿರುವುದನ್ನು ಇಲ್ಲಿ ಉಲ್ಲೇಖಿಸಬೇಕು.[4]ಹಾಗೆಯೇ ಅಂದಿನ ಮೆನ್ನರ್, ಬರ್ನೆಲ್ ಸಂಗ್ರಹಗಳಲ್ಲಿ ಬರುವ ಬೈದೆರ್ಲು, ಕೋಟಿಚನ್ನಯದ ಅನೇಕ ಉದಾಹರಣೆಗಳು ನೆಲ, ಜಲ ಸಂಬಂಧೀ ಅನೇಕ ಅಂಶಗಳ ಅನಾವರಣಕ್ಕೆ ಕಾರಣವಾಗುತ್ತವೆ, ಪ್ರಕೃತಿ ಚಿತ್ರಣದ ಹಲವು ನೆಲೆಯ ಅಧ್ಯಯನಗಳಿಗೆ ದಾರಿಮಾಡಿಕೊಡುತ್ತವೆ.

**ಅಡಿಟಿಪ್ಪಣಿಗಳು**

1. ತುಳುವಿನಲ್ಲಿ ಜನಪದ ಕಾವ್ಯ , ಜನಪದ ಮಹಾಕಾವ್ಯ, ಲಾವಣಿ ಚಕ್ರಗಳ ಬಗೆಗಿನ ಚರ್ಚೆಯನ್ನೇ ಇನ್ನಷ್ಟು ಬೆಳೆಸುವ ಸಾಧ್ಯತೆಯಿದ್ದು ಪ್ರಸ್ತುತ ಪತ್ರಿಕೆಯ ಮಿತಿಯಲ್ಲಿ ಬಹುತೇಕ ವಿದ್ವಾಂಸರ ಚರ್ಚೆಗಳ ಹಿನ್ನೆಲೆಯಲ್ಲಿ, ಒಟ್ಟು ಕನ್ನಡದ ಮಹಾಕಾವ್ಯಗಳ ಚರ್ಚೆಗೆ ಅನುಕೂಲವಾಗುವಂತೆ ಸಾಂದರ್ಭಿಕವಾಗಿ ಮಹಾಕಾವ್ಯವೆಂಬ ಉಲ್ಲೇಖದೊಂದಿಗೆ ಮುಂದುವರೆಯಲಾಗಿದೆ
2. ಡಾ.ಬಿ.ಎ.ವಿವೇಕ ರೈ ಅವರ ತುಳು ಜನಪದ ಸಾಹಿತ್ಯ, ಡಾ.ಚಿನ್ನಪ್ಪ ಗೌಡ ಅವರ ಭೂತಾರಾಧನೆ ಜಾನಪದೀಯ ಅಧ್ಯಯನ, ಡಾ.ವಾಮನ ನಂದಾವರ ಅವರ ಕೋಟಿಚನ್ನಯ ಅಧ್ಯಯನ, ಪ್ರೊ.ಎ.ವಿ.ನಾವಡ ಅವರ ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ, ಡಾ.ಅಶೋಕ ಆಳ್ವ ಅವರ ಪ್ರಾಣಿ ಜನಪದ, ಪ್ರೊ.ಅಮೃತ ಸೋಮೇಶ್ವರ, ಕನರಾಡಿ ವಾದಿರಾಜ ಭಟ್ಟ, ಸುಶೀಲಾ ಉಪಾಧ್ಯಾಯ, ಡಾ.ಗಾಯತ್ರಿ ನಾವಡ, ಡಾ.ರಾಜಶ್ರೀ ರೈ, ಡಾ.ಸುಬ್ಬಣ್ಣ ರೈ, ಡಾ.ಪುರುಷೋತ್ತಮ ಬಿಳಿಮಲೆ, ಪ್ರೊ.ಹೈಡ್ರೂನ್ ಬ್ರೂಕ್ನರ್, ಪ್ರೊ.ಪೀಟರ್.ಜೆ.ಕ್ಲಾಸ್ ಹೀಗೆ ವಿವಿಧ ಅಧ್ಯಯನಕಾರರ ಸಂಶೋಧನೆಗಳನ್ನು ಇಲ್ಲಿ ಗುರುತಿಸಿಕೊಳ್ಳಬೇಕು.
3. 'ಆಕಾಶಬೆನ್ನಿ' 'ಕಡಲ್ ಬೆನ್ನಿ' ಮೊದಲಾದ ಪರಿಕಲ್ಪನೆಗಳು ಗಾದೆಗಳಲ್ಲಿ ಅಭಿವ್ಯಕ್ತಿಗೊಳ್ಳುವುದು ಇಲ್ಲಿ ಗುರುತಿಸಬೇಕಾದಂತಹುದು. ಬೆನ್ನಿ ಅಂದರೆ ವ್ಯವಸಾಯ ಎಂದರ್ಥ. ಮೂರ್ತೆ ಮತ್ತು ಮೀನುಗಾರಿಕೆಗಳ ಸಶಕ್ತ ಅಭಿವ್ಯಕ್ತಿ ಈ ಗಾದೆಯಲ್ಲಿದೆ. ಹೀಗಾಗಿ ಕಳೆದ ಶತಮಾನಗಳಲ್ಲಿ ಮೌಖಿಕದಿಂದ ಲಿಖಿತಕ್ಕೆ ಬಂದ ಗಾದೆಗಳನ್ನು ಇಲ್ಲಿ ಪೂರಕವಾಗಿ ಗುರುತಿಸಬೇಕು. ಜನಪದ ನುಡಿಗಟ್ಟಿನ ಭಾಗವಾಗಿ ಇವುಗಳ ಗಮನಿಸುವಿಕೆ ಬಹಳ ಮುಖ್ಯ, ಅವುಗಳು ಸಂಪೂರ್ಣವಾಗಿ ಅಥವಾ ಭಾಗಶ: ಕಾವ್ಯಾತ್ಮಕ ಅಭಿವ್ಯಕ್ತಿಯ ಭಾಗವಾಗಿ ಬಂದಿರುವ ಅಥವಾ ಬರದಿರುವ ಎರಡೂ ಸಂದರ್ಭಗಳನ್ನು ಗುರುತಿಸಿಕೊಳ್ಳಬೇಕು, ಆಗ ಒಂದು ಪರಿಪೂರ್ಣತೆ ದಕ್ಕುತ್ತದೆ.
4. ಅದೇ ರೀತಿ ಈ ಕಥಾನಕಗಳು ಕಥೆಯ ರೂಪದಲ್ಲಿ ಬರುವ ಬಗೆಯೂ ಅಧ್ಯಯನಾರ್ಹವಾದುದು. ಉದಾಹರಣೆಗೆ ಪಂಜೆ ಮಂಗೇಶರಾಯರ 'ಕೋಟಿ ಚನ್ನಯ' ಈ ಸಂಬಂಧವಾದ ಸೃಜನಶೀಲ ವಿವರಣೆಗಳ ಸೇರ್ಪಡೆ, ಮೂಲ ವಿವರಗಳ ಕೈಬಿಡುವಿಕೆಗಳನ್ನು ಗಮನಿಸಬೇಕು, ಇದರ ಮುನ್ನುಡಿಯಲ್ಲಿ ಇರುವ ತತ್ಸಂಬಂಧೀ ವಿವರಗಳನ್ನು ನೋಡಬಹುದು.

**ಪರಾಮರ್ಶನ ಗ್ರಂಥಗಳು**


1. ಅಗಸ್ಟ್ ಮೆನ್ನರ್; 2019 (ಮ.ಮು); ಪಾಡ್ದನೊಳು; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
2. ಅಮೃತ ಸೋಮೇಶ್ವರ; 1997; ತುಳು ಪಾಡ್ದನ ಸಂಪುಟ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಉಪಾಧ್ಯಾಯ ಯು.ಪಿ. ಮತ್ತು ಸುಶೀಲಾ ಪಿ.ಉಪಾಧ್ಯಾಯ; 2002; ಫೋಕ್ ರಿಚುವಲ್ಸ್ ಆಫ್ ದಿ ತುಳುವ ರೀಜನ್ ಆಫ್ ಕೋಸ್ಟಲ್ ಕರ್ನಾಟಕ; ಆರ್.ಆರ್.ಸಿ., ಉಡುಪಿ
4. ಚಿನ್ನಪ್ಪ ಗೌಡ ಕೆ; 1990; ಭೂತಾರಾಧನೆ ಜಾನಪದೀಯ ಅಧ್ಯಯನ, ಮದಿಪು ಪ್ರಕಾಶನ, ಮಂಗಳಗಂಗೋತ್ರಿ
5. ದಾಮೋದರ ಕಲ್ಮಾಡಿ (ಸಂ); 2002; ಕೋಟಿ ಚೆನ್ನಯ ಪಾರ್ದನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ,
6. ನಾವಡ ಎ.ವಿ. (ಸಂ), 1999, ಗಿಡಿಕೆರೆ ರಾಮಕ್ಕ ಮುಗ್ಗೇರ್ತಿ ಕಟ್ಟಿದ ಸಿರಿ ಪಾಡ್ದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
7. ನಾವಡ ಎ.ವಿ ಮತ್ತು ಡೆನ್ನಿಸ್ ಫರ್ನಾಂಡೀಸ್ (ಸಂ); 2008 (ಮ.ಮು); ಡೆವಿಲ್ ವರ್ಶಿಪ್ ಆಫ್ ತುಳುವಾಸ್ ಫ್ರಂ ದಿ ಪೇಪರ್ಸ್ ಆಫ್ ಲೇಟ್ ಎ.ಸಿ.ಬರ್ನೆಲ್; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು
8. ಪಂಜೆ ಮಂಗೇಶ ರಾವ್ ; 1924; ಕೋಟಿ ಚನ್ನಯ; ಬಾಲ ಸಾಹಿತ್ಯ ಮಂಡಲ ಲಿಮಿಟೆಡ್, ಕೊಡಿಯಾಲಬೈಲ
9. ವಾಮನ ನಂದಾವರ; 2001; ಕೋಟಿ ಚೆನ್ನಯ ಜಾನಪದೀಯ ಅಧ್ಯಯನ; ಹೇಮಾಂಶು ಪ್ರಕಾಶನ,
10. ವಿವೇಕ ರೈ ಬಿ.ಎ; 1985; ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
11. ಸಾವಿತ್ರಿ ಕೆ.; 2006; ನಂಬಿದ ಸತ್ಯಗಳು–ಸ್ತ್ರೀಭೂತಗಳ ಚಾರಿತ್ರಿಕ ಅಧ್ಯಯನ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ


**ಅಪ್ರಕಟಿತ ಹಸ್ತಪ್ರತಿ**


1. ಬೆನೆಟ್ ಜಿ.ಅಮ್ಮಣ್ಣ ಮತ್ತು ದುರ್ಗಾಪ್ರವೀಣ ಎಂ.ಸ್. (ಸಂ); ಬೈದೆರುಳೆ ಸಂಧಿ


***

# 4. ಕನ್ನಡ ಮೌಖಿಕ ಕಾವ್ಯ (ಬುರ್ರಕಥಾ) ಪರಂಪರೆಗೆ ದರೋಜಿ ಈರಮ್ಮನವರ ಕೊಡುಗೆ

ಡಾ.ಚೆಲುವರಾಜು

ಸದಾ ನಗುಮುಖವುಳ್ಳ ಮಹಾಕಾವ್ಯಗಳ ಗಣಿ ದರೋಜಿ ಈರಮ್ಮ. ಕರ್ನಾಟಕದ ಜಾನಪದ ಆಸ್ತಿ ಎಂದರೆ ತಪ್ಪಾಗಲಾರದು. ಜಾನಪದ ಕ್ಷೇತ್ರದಲ್ಲಿ ಸುಕ್ರಿ ಬೊಮ್ಮಗೌಡ, ದರೋಜಿ ಈರಮ್ಮ ಇನ್ನೂ ಮುಂತಾದವರ ಸಾಲಿನಲ್ಲಿ ನಿಲ್ಲುವ ಅತಿ ಗಣ್ಯ ವ್ಯಕ್ತಿಗಳು ಎಂದರೂ ತಪ್ಪಾಗಲಾರದು. ಪ್ರಕೃತಿ ಮತ್ತು ಮನುಷ್ಯರ ನಡುವಿನ ಅಗಾಧ ಸಂಪತ್ತನ್ನು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿ ಬಳಸಿಕೊಂಡರು. ಇಳಿ ವಯಸ್ಸಿನಲ್ಲಿಯೂ ಸರಿಸುಮಾರು 12 ಮಹಾಕಾವ್ಯಗಳನ್ನು ಹಾಡುವ ಅಥವಾ ಹೇಳುವ ಕಲೆಗಾರಿಕೆ ದರೋಜಿ ಈರಮ್ಮನವರದು. ಅಕ್ಷರ ಲೋಕಕ್ಕೆ ಒಂದು ದೊಡ್ಡ ಸವಾಲು ಎನ್ನಬಹುದು. ಭಾಷಾವಿಜ್ಞಾನದಲ್ಲಿ ಅಭ್ಯಾಸ ಮಾಡುವವರಿಗೆ ದರೋಜಿ ಈರಮ್ಮನ ಕಾವ್ಯಗಳು ಒಂದು ಒಳ್ಳೆಯ ಉದಾಹರಣೆ ಆಗಬಲ್ಲವು ಎನ್ನಬಹುದು. ಮರಳಿನ ಮೇಲೆ ಕಾಲಿನಿಂದ ಧ್ಯಾನಿಸುತ್ತಾ ಅಕ್ಷರ ಕಲಿತೆ ಎನ್ನುತ್ತಾರೆ ದರೋಜಿ ಈರಮ್ಮ. ತೆಲುಗು ಮತ್ತು ಕನ್ನಡ ದ್ರಾವಿಡ ಸಂಸ್ಕೃತಿಗಳನ್ನ ಮೈಗೂಡಿಸಿಕೊಂಡಂತವರು. ತೆಲುಗು ಮತ್ತು ಕನ್ನಡ ಸಂಸ್ಕೃತಿಯ ಪ್ರಮುಖ ಉದಾಹರಣೆ ಕುಮಾರರಾಮನ ಕಾವ್ಯ. ನಾಡಿನ ವೈಚಾರಿಕತೆಯ ಹಿರಿಮೆಯನ್ನ ಹೆಚ್ಚಿಸಿದಂತವಳು ದರೋಜಿ ಈರಮ್ಮ. ಅಕ್ಷರ ಸಂಸ್ಕೃತಿಯಿಂದ ವಂಚಿತಳಾದ ಈರಮ್ಮ ಹೇಗೆ ಅಕ್ಷರ ಪ್ರಪಂಚವನ್ನೇ ತನ್ನೆಡೆಗೆ ಸೆಳೆದದ್ದು ಒಂದು ಮಹಾನ್ ಅದ್ಬುತ. ಮಹಾಕಾವ್ಯಗಳಲ್ಲಿ ಅಗಣಿತ ರಸಾನುಭವವನ್ನು ತಂದುಕೊಡುವ ಶಕ್ತಿ ತನ್ನ ಮಹಾಕಾವ್ಯಗಳಿಗಿದೆ. ತನ್ನ ಊರು ಮತ್ತು ಹಳ್ಳಿಯ ಬಗ್ಗೆ ಅಪಾರ ನಂಬಿಕೆ. ಆ ನಂಬಿಕೆಯಿಂದಲೇ ಏನನ್ನಾದರೂ ಸಾಧಿಸುವೆನೆಂಬ ಛಲ ಈರಮ್ಮನವರಲ್ಲಿ ಕಾಣಬಹುದು. ಮಹಾಕಾವ್ಯಗಳಿಗಿರಬಹುದಾದ ವಸ್ತು, ಬಂಧ ಮತ್ತು ಬದ್ಧತೆಯನ್ನು ಕಾಣಬಹುದು. ಪ್ರತೀ ಹಳ್ಳಿಗೆ ಹಾಡಲು ಹೋದಾಗ ಮಕ್ಕಳು ಮನೆಯಲ್ಲಿ ಕಥೆಯನ್ನ ಕೇಳಲು ಇಷ್ಟ ಪಡುತ್ತಾರೆ.ಮಗಳು ಗಂಡನ ಮನೆಗೆ ಹೋಗುತ್ತಾಳೆ. ತನ್ನ ಹಾಡನ್ನು ಕೇಳಬೇಕೆಂಬ ಆಸೆಯನ್ನು ವ್ಯಕ್ತಪಡಿಸುತ್ತಾಳೆ ದಯವಿಟ್ಟು ಬನ್ನಿ ಎಂದು ಕೇವಲ ವೀಳ್ಯದೆಲೆ ಕೊಟ್ಟು ಆಹ್ವಾನಿಸಿದರೆ ಸಾಕು ಸಂತೋಷದಿಂದ ಹೋಗುತ್ತಿದ್ದರು ದರೋಜಿ ಈರಮ್ಮನವರು. ಹಳ್ಳಿಯ ಜನರಲ್ಲಿ ಒಂದು ನಂಬಿಕೆ ಈರಮ್ಮ ನಮ್ಮ ಹಳ್ಳಿಗೆ ಬಂದು ಹಾಡಿದರೆ ಮಳೆ ಬರುತ್ತದೆ ಊರಿನ ದನ ಕರುಗಳ ಆರೋಗ್ಯ ಆಯಸ್ಸು ಲಭಿಸುತ್ತದೆ ಎಂಬುದು ಜನಪದರ ನಂಬಿಕೆ.

ವೀರ ಪರಂಪರೆ ಮತ್ತು ಐತಿಹಾಸಿಕ, ಪುರಾಣ, ಕಥೆ ಹಾಗೂ ವರ್ತಮಾನಕ್ಕೂ ಸಲ್ಲುವಂತದ್ದೇ ಈರಮ್ಮನ ಮಹಾಕಾವ್ಯಗಳು. ಜನಪದರ ಆಚರಣೆಗಳು ವಿಚಾರಗಳನ್ನು ದೇಸೀಯತೆಯನ್ನು ಕಾವ್ಯಗಳಲ್ಲಿ ಅಡಕಗೊಳಿಸಿದ್ದಾರೆ. ಇದರಿಂದ ನಾಡಿನ ಬೌದ್ಧಿಕತೆ ಹೆಚ್ಚಿದೆ ಎನ್ನಬಹುದು. ಡಾ.ಚೆಲುವರಾಜುರವರು ಅಭಿಪ್ರಾಯ ಪಡುವಂತೆ ಬಳ್ಳಾರಿಯ ಕಾರ್ಯಕ್ರಮದಲ್ಲಿ ಆಯೋಜಿಸಿದ್ದ 'ದರೋಜಿ ಈರಮ್ಮನ ವೇದಿಕೆ' ಕಲಾವಿದರಿಗೆ ಸಿಗುವ ಗೌರವ ಮನ್ನಣೆ ಎಂತಲೇ ಹೇಳಬಹುದು. ಮಹಿಳಾಪರವಾದ ಸ್ತ್ರೀಪರವಾದ ಕಾವ್ಯಗಳು ದರೋಜಿ ಈರಮ್ಮನವರಲ್ಲಿ ಕಾಣಬಹುದು. ಬಹುತೇಕ ಈರಮ್ಮನವರ ಕಾವ್ಯದಲ್ಲಿ ಮಹಿಳಾ ಸಂವೇದನೆ ಜೊತೆಗೆ ಜೀವನಾನುಭವ, ಲೋಕಾನುಭವ, ಕಾವ್ಯ, ವಿಸ್ಮೃತಿ ಕಾವ್ಯಗಳಲ್ಲಿ ಮತ್ತು ಪಾತ್ರಗಳಲ್ಲಿ ಮೇಳೈಸಿಕೊಂಡಿವೆ ಎಂದರೆ ತಪ್ಪಾಗಲಾರದು.

ಜಾನಪದ ಎನ್ನುವುದೇ ಒಂದು ವಿಶ್ವವಿದ್ಯಾಲಯವಿದ್ದಂತೆ ಅದಕ್ಕಾಗಿಯೇ ಕರ್ನಾಟಕ ಸರ್ಕಾರ ಒಂದು ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಇಲ್ಲಿ ಕಥೆ ಐತಿಹ್ಯ ಪುರಾಣ ಮಹಾಕಾವ್ಯ, ಖಂಡಕಾವ್ಯ, ಒಗಟು, ಗಾದೆ, ತ್ರಿಪದಿ, ತತ್ವಪದ, ಮಾರ್ನುಡಿ, ಪ್ರಾರ್ಥನೆ, ಹರಕೆ, ಆಕಳಿಕೆ ನುಡಿ, ತೂಕಡಿಕೆ ನುಡಿ, ಅಲಂಕಾರಿಕ ಭಾಷೆ, ಗ್ರಾಮೀಣ ಕಸುಬುಗಳು, ಉಡುಗೆ ತೊಡುಗೆಗಳು ಆಚಾರ ವಿಚಾರಗಳು ಇತ್ಯಾದಿಗಳನ್ನು ಜನಪದ ಸಾಹಿತ್ಯ ಹೇಳಿಕೊಡುತ್ತದೆ. ನಿರ್ವಿಗಾಮಿಯಾದ ಮಾನವ ಇಂದು ಗಗನಗಾಮಿಯಾಗಿ ಬೆಳೆದಿದ್ದಾನೆ. ಕೌಟುಂಬಿಕ ಸಂಬಂಧದಿಂದ ನಿಜವಾದ ಸುಖ ನೆಮ್ಮದಿ ಸಾಧ್ಯವೆಂಬುದಕ್ಕೆ ದರೋಜಿ ಈರಮ್ಮ ಮತ್ತು ದರೋಜಿ ಈರಮ್ಮನವರ ಕಾವ್ಯಗಳೇ ಸಾಕ್ಷಿ ಎನ್ನಬಹುದು.

ಬುರ್ರಕಥಾ ಕಲಾ ಪ್ರಕಾರವು ಆಂದ್ರಪ್ರದೇಶದಲ್ಲಿ ಅತ್ಯಂತ ಹೆಚ್ಚಿನ ಮಟ್ಟಿಗೆ ಪ್ರಸಿದ್ಧಿಯನ್ನು ಪಡೆದಂತಹ ಕಲಾ ಪ್ರಕಾರ. ಕರ್ನಾಟಕದಲ್ಲಿನ ಯಕ್ಷಗಾನ ಬಯಲಾಟಗಳಿದ್ದಂತೆ ಬುರ್ರಕಥಾ ಅಲ್ಲಿನ ಜನರ ಮನೆಯ ಮಾತಾಗಿಬಿಟ್ಟಿದೆ. ಕನ್ನಡದಲ್ಲಿನ 'ಹರಿಕಥೆ' ಪ್ರಕಾರವು ತೆಲುಗಿನಲ್ಲಿನ ಮತ್ತು ಉತ್ತರ ಕರ್ನಾಟಕದ ಕಡೆಯ 'ಬುರ್ರಕಥೆ'ಯು ಎರಡೂ ಒಂದೇ ಆಗಿದೆ. ಕರ್ನಾಟಕ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶಗಳಾದ ಬಳ್ಳಾರಿ, ಯಾದಗಿರಿ, ರಾಯಚೂರು,

ISBN – 978-93-5526-247-9

ಕಲ್ಬುರ್ಗಿ, ಕೊಪ್ಪಳ, ಬೀದರ್ ಮುಂತಾದ ಕಡೆಗಳಲ್ಲಿ ಬುರ್ರಕಥಾ ಹಾಡುವ ಸಮುದಾಯವನ್ನು ಕಾಣಬಹುದು. ಈ ಕಲೆಯ ವಾರಸುದಾರರೆಂದರೆ ಅಲೆಮಾರಿ ಬುಡಕಟ್ಟಿನ ಬುಡಗ ಜಂಗಮ ಸಮುದಾಯದವರು. ಇವರನ್ನು ಜಂಗಾಲರು, ಬೇಡ/ಬುಡಗ ಜಂಗಾಲರು, ಬುರ್ರಕಥೆಯವರು, ವೇಷಗಾರು, ಹಗಲು ವೇಷಗಾರರು ಎಂದು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಈ ಬುರ್ರಕಥೆಯನ್ನು ಪ್ರಮುಖ ದ್ರಾವಿಡ ಭಾಷೆಗಳಾದ ತೆಲುಗು, ಕನ್ನಡ, ಬುಡ್ಗ, ಹಿಂದಿ ಆಯಾಯಾ ಪ್ರಾದೇಶಿಕ ಭಾಷೆಗಳಲ್ಲಿ ಹಾಡುತ್ತಾರೆ. ಇದರ ಉದ್ದೇಶ ಜನಸಾಮಾನ್ಯರಿಗೆ ನೀತಿ ಸಂದೇಶಗಳನ್ನು ನೀಡುವ ಮತ್ತು ಮನರಂಜನೆಯ ಉದ್ದೇಶಕ್ಕಾಗಿ ಮತ್ತು ಹಾಸ್ಯವನ್ನು ಹೊಂದಿರುವ ಕಲಾಪ್ರಕಾರ ಇದಾಗಿದೆ. ಇದು ಸಂಗೀತ ಸಾಹಿತ್ಯ, ನೃತ್ಯ, ನಾಟಕ, ಅಭಿನಯ ಹೀಗೆ ವಿವಿಧ ಆಯಾಮಗಳನ್ನು ಹೊಂದಿರುವ ಕಲಾಪ್ರಕಾರ. ಕನ್ನಡದ ಚಂಪೂ ಕಾವ್ಯದಂತೆ ಬುರ್ರಕಥೆಗಳು ಗದ್ಯ, ಪದ್ಯ ಮಿಶ್ರಿತವಾಗಿರುತ್ತವೆ. ಯಾವ ರಂಗ ಸಜ್ಜಿಕೆಯ ಅವಶ್ಯಕತೆ ಇಲ್ಲದೆ ಬಯಲಿನಲ್ಲಿಯೇ ಪ್ರದರ್ಶನಗೊಳ್ಳುವ ಕಲಾಪ್ರಕಾರ. ಅನಕ್ಷರಸ್ಥ ಜನರಿಗೆ ನಾಡಿನ ಜನತೆಯ ಪರಿಚಯ, ಇತಿಹಾಸ, ರಾಜಪ್ರಭುತ್ವದ ಸಂಸ್ಕೃತಿಗಳನ್ನು ಪರಿಚಯಿಸುವುದು. ರಾಜಕೀಯ ಚಿಂತನೆಗಳನ್ನು ಬಿತ್ತರಿಸುವುದೇ ಬುರ್ರಕಥೆಯ ಮುಖ್ಯ ಉದ್ದೇಶ. ಬುರ್ರಕಥಾ ಕಲಾವಿದರು ಆಯಾ ಕಾಲಘಟ್ಟಗಳ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಸ್ಥಿತ್ಯಂತರಗಳಿಗನುಗುಣವಾಗಿ ಶೈವೇತರ ಕಥಾ ವಸ್ತುಗಳು, ರಾಜಕೀಯ ಕಥಾ ವಸ್ತುಗಳು, ಜಾತ್ಯಾತೀತ ಕಥಾ ವಸ್ತುಗಳನ್ನು ಬುರ್ರಕಥೆಗಳಿಗೆ ಅಳವಡಿಸಿಕೊಳ್ಳುತ್ತಿದ್ದರು.

ಶ್ರೀಮತಿ ದರೋಜಿ ಈರಮ್ಮನವರು ಬುಡುಗ ಜಂಗಮ ವರ್ಗದ ಕಲಾವಿದೆ. ಈರಮ್ಮನವರ ಹುಟ್ಟೂರು ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲೂಕಿನ ಹಳೆದರೋಜಿ. ತಂದೆ ಆಶ್ವಿಲಾಲಪ್ಪ ತಾಯಿ ಜಂಬಲಮ್ಮ. ಅಂದಾಜು 1932ರಲ್ಲಿ ಜನಿಸಿದ ಇವರು ಇಳಿ ವಯಸ್ಸಿನಲ್ಲೂ ಸಹ ಕಂಠದ ಸಂಗೀತ ಸಿರಿಯಿಂದ ಕೇಳುಗರನ್ನು ಮಂತ್ರ ಮುಗ್ಧಳಾಗಿಸುತ್ತಿದ್ದಳು. ಈರಮ್ಮನವರು ಹಾಡುತ್ತಿದ್ದರೆ ಹಗಲು–ರಾತ್ರಿಗಳು ಕಳೆಯುವುದೇ ತಿಳಿಯುತ್ತಿರಲಿಲ್ಲ. ಅವರ ಕಂಠಕ್ಕೆ ಅಂತಹ ಅದ್ಭುತ ಶಕ್ತಿ ಇತ್ತು. ಈರಮ್ಮನವರು ತನ್ನ ತಂದೆ–ತಾಯಿ ಜೊತೆಗೆ ತನ್ನ ಅಜ್ಜ ಅಶ್ವೀಜಂಬಣ್ಣ ಹಾಗೂ ಅಜ್ಜಿ ಸುಂಕಲಮ್ಮ ಅವರನ್ನು ನೆನಪಿಸಿಕೊಳ್ಳುತ್ತಿದ್ದರು. ಇವರ ವೈವಾಹಿಕ ಜೀವನ ಅಷ್ಟೇನು ಸುಖಕರವಾಗಿರಲಿಲ್ಲ. ಇವರ ಗಂಡನ ಹೆಸರು ರಾಮಚಂದ್ರಪ್ಪ ಸಿರಗುಪ್ಪ ತಾಲೂಕಿನ ಹೊಸಹಳ್ಳಿಯವರು. ಇವರಿಗೆ ಇಬ್ಬರು ಹೆಂಡತಿಯರು. ಈರಮ್ಮ ಮತ್ತು ಕಮಲಮ್ಮ. ಈರಮ್ಮನವರಿಗೆ ಒಬ್ಬಳೇ ಒಬ್ಬ ಹೆಣ್ಣುಮಗಳು ಈಕೆಯನ್ನು ತನ್ನ ಅಣ್ಣನ ಮಗನಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಕಮಲಮ್ಮನವರಿಗೆ ಮೂರು ಹೆಣ್ಣು ಮತ್ತು ಮೂರು ಗಂಡು ಮಕ್ಕಳು. ಗಂಡ ಸತ್ತನಂತರ ತನ್ನ ತವರು ಮನೆ ಹಳೇ ದರೋಜಿಯಲ್ಲಿಯೇ ವಾಸವಾಗಿದ್ದರು. 'ಎರಡು ದಿನ ಕತ್ಲು, ಎರಡು ದಿನ ಬೆಳಕು ಎಲ್ಲಾವನ್ನು ಅನುಭವಿಸಬೇಕು, ಕಷ್ಟ ಸುಖ ಯಾರನ್ನೂ ಬಿಟ್ಟಿಲ್ಲ ಆದ್ರೆ ಇಂತಹ ಪ್ರೀತಿ ಮಾಡೋ ಜನ ಸಿಕ್ತಾರಾ? ಅವರು ನನ್ನ ಮೇಲೆ ಬಹಳ ವಿಶ್ವಾಸ ಪ್ರೀತಿ ಇಟ್ಟಿದ್ದಾರೆ' ಎಂತಲೇ ಪ್ರೀತಿಯ ಸಹಬಾಳ್ವೆ ಮಾಡುತ್ತಿದ್ದ ಈರಮ್ಮನವರು ಮನೆಯ ಹತ್ತಿರ ಯಾರೇ ಬಂದರೂ ತನ್ನ ಕೈಲಾದ ಆತಿಥ್ಯವನ್ನು ನೀಡಿ ಕಳುಹಿಸುತ್ತಿದ್ದರು. ಹೀಗೆ ಮೌಖಿಕ ಪರಂಪರೆಯ 'ಜೀವಂತ ದಂತಕತೆ'ಯಾಗಿದ್ದ ಈರಮ್ಮನವರು 82ರ ಇಳಿ ವಯಸ್ಸಿನಲ್ಲಿ ದಿನಾಂಕ 12.08.2014ರಂದು ದೇಹವನ್ನು ಫಲವಂತಿಕೆಯ ಮಣ್ಣಲ್ಲಿ ಮಣ್ಣಾಗಲು ಇಹಲೋಕ ತ್ಯಜಿಸಿದರು.

ಧರ್ಮ, ಪುರಾಣ, ಐತಿಹಾಸಿಕ ಸಂಗತಿಗಳು, ಪ್ರತಿ ಸಂಸ್ಕೃತಿಯನ್ನು ಸೃಷ್ಟಿಸುವ ಶಕ್ತಿಯನ್ನು ಹೊಂದಿರುವ ಹತ್ತು ಹಲವು ಜನಪದ ಮಹಾ ಕಾವ್ಯಗಳನ್ನು ಈರಮ್ಮನವರು ಹಾಡುತ್ತಾರೆ. ಇವರನ್ನು ಜನಪದ ಮಹಾಕಾವ್ಯಗಳ ಗಣಿ ಎಂದರೂ ತಪ್ಪಾಗಲಾರದು. ಹಾಡುವ ಪರಂಪರೆಯನ್ನು ಮುಂದುವರೆಸಬೇಕೆಂಬ ಮಹದಾಸೆಯನ್ನು ಹೊಂದಿದ್ದ ಇವರು ಹೊಟ್ಟೆಪಾಡಿಗಾಗಿ ಈ ಕಲೆಯ ಹಾದಿಯನ್ನೇ ನಂಬಿ ಬದುಕಿದ್ದವರು. ಈರಮ್ಮನವರಿಗೆ ತನ್ನದೆಂದು ಹೇಳಿಕೊಳ್ಳುವ ಮನೆ, ಹೊಲ, ಆಸ್ತಿ ಯಾವುದೂ ಇಲ್ಲದಿದ್ದರೂ ಬುರ್ರವಾದ್ಯಗಳಾದ ತಂಬೂರಿ, ಡಿಮ್ಮಿ, ಗಗ್ಗಲಿ, ಕಥೆಗಳು, ಕೇಳುಗರೇ ಇವರ ಅಪರಿಮಿತವಾದ ಆಸ್ತಿ. ಕನ್ನಡ, ತೆಲುಗು, ಬುಡಗ, ಹಿಂದಿ ಮಾತನಾಡುವ ಈರಮ್ಮನವರು ಹೆಚ್ಚಾಗಿ ಕನ್ನಡದಲ್ಲಿ ಹಾಡುತ್ತಿದ್ದರು, ಹಲವೊಮ್ಮೆ ತೆಲುಗಿನಲ್ಲೂ ಹಾಡುತ್ತಿದ್ದರು. ಕಲಾಪ್ರದರ್ಶನ ನೀಡುವಾಗ ಶ್ರೀಮತಿ ಶಿವಮ್ಮ ಮತ್ತು ಪಾರ್ವತಮ್ಮನವರನ್ನು ಸೇರಿಸಿಕೊಳ್ಳುತ್ತಿದ್ದರು.

ISBN – 978-93-5526-247-9

ವಿದ್ವಾಂಸರು ಈಗಾಗಲೇ ದರೋಜಿ ಈರಮ್ಮ ಹಾಡಿರುವ 13 ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿದ್ದಾರೆ. ಪ್ರೊ.ಕೆ.ಎಂ.ಮೇತ್ರಿಯವರು ಕುಮಾರರಾಮನ ಕಾವ್ಯ, ಕೃಷ್ಣಗೊಲ್ಲರಕಾವ್ಯ ಮತ್ತು ಎಲ್ಲಮನ ಕಾವ್ಯ, ಪ್ರೊ.ಸ.ಚಿ.ರಮೇಶರವರು ಸ್ಯಾಸಿ ಚಿನ್ನಮ್ಮನ ಕಾವ್ಯ ಮತ್ತು ಮಾರ್ವಾಡಿ ಶೇಷ, ಪ್ರೊ.ಚಲುವರಾಜರವರು ಬಾಲನಗಮ್ಮನ ಮಹಾಕಾವ್ಯ ಮತ್ತು ಚಂದ್ರಾವತಿ(ಬಲಿಚಕ್ರವರ್ತಿ) ಕಾವ್ಯವನ್ನು, ವೇಷಗಾರು ರಾಮಾಂಜನೇಯ ಅವರು ಬೊಬ್ಬಿಲಿ ನಾಗಿರೆಡ್ಡಿ ಮತ್ತು ಗಂಗಿ ಗೌರಿ ಕಾವ್ಯವನ್ನು ಡಾ.ಮುದೇನೂರು ನಿಂಗಪ್ಪನವರು ಬರೆದಿರುವ 'ಬುರ‍್ರಕಥಾ ಈರಮ್ಮ' ಅಲೆಮಾರಿ ಆತ್ಮಕಥನ ಎಂಬ ಪುಸ್ತಕ ಪ್ರಕಟಣೆಗೊಂಡಿದೆ. ಸಾರೀಕಾದೇವಿ ಎಲ್ ಕಾಳಗಿ ಅವರು ಪ್ರೊ.ಕೆ.ಎಂ.ಮೇತ್ರಿಯವರ ಮಾರ್ಗದರ್ಶನದಲ್ಲಿ ಬುರ‍್ರಕಥಾ ಈರಮ್ಮನವರ ಬಗ್ಗೆ ಪಿ.ಹೆಚ್.ಡಿ. ಮಹಾಪ್ರಬಂಧ ಬರೆದು ಪ್ರಕಟಿಸಿದ್ದಾರೆ. ಈರಮ್ಮನವರ ಸಾಧನೆ ಮತ್ತು ವ್ಯಕ್ತಿತ್ವವನ್ನು ಗುರುತಿಸಿ ಸರ್ಕಾರ ವಿವಿಧ ಸಂಘ ಸಂಸ್ಥೆಗಳು ಪ್ರಶಂಸನೀಯ ಪತ್ರಗಳನ್ನು, ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ ಗೌರವ ನೀಡಿದೆ. ರಾಜ್ಯೋತ್ಸವ ಪ್ರಶಸ್ತಿ, ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ, ಜಾನಪದಶ್ರೀ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಮುಂದಿನ ಪೀಳಿಗೆಗೆ ಬದಲಾದ ಸಾಮಾಜಿಕ ವ್ಯವಸ್ಥೆ ಒಗ್ಗಿಕೊಳ್ಳಬೇಕೆಂದರೆ ದರೋಜಿ ಈರಮ್ಮನವರ ಜೀವನ ಸಾಧನೆ ಬಿಂಬಿಸುವ ಕೆಲಸವಾಗಬೇಕಿದೆ. ಸ್ವತಃ ಅವರ ಕುಟುಂಬ ವರ್ಗ 2013–14 ಸಾಲಿನಲ್ಲಿ ನಾಡೋಜ ಬುರ‍್ರಕಥಾ ಈರಮ್ಮ ಫೌಂಡೇಶನ್ ಟ್ರಸ್ಟ್ ಸ್ಥಾಪಿಸಿದ್ದಾರೆ. ಇವರ ಅಡಿಯಲ್ಲಿ ಕರ್ನಾಟಕ ಜಾನಪದ ವಿ.ವಿ., ಹಂಪಿ ವಿ.ವಿ. ಒಂದು ವಿಚಾರ ಸಂಕಿರಣ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ ಮತ್ತು ಈ ಟ್ರಸ್ಟಿನ ಅಡಿಯಲ್ಲಿ ಅನೇಕ ಜನಪದ ಕಾರ್ಯಕ್ರಮಗಳು ಅನುಚೂನವಾಗಿ ನಡೆದುಕೊಂಡು ಬರುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜಾನಪದ ಕ್ಷೇತ್ರದಲ್ಲಿ ವಿಶೇಷವಾಗಿ ಬುರ‍್ರಕಥಾ ಕಲಪ್ರಕಾರದಲ್ಲಿ ಅನುಪಮ ಸೇವೆಯನ್ನು ಸಲ್ಲಿಸಿದ ಹಿರಿಯ ಸಂಶೋಧಕರಿಗೆ ಹಾಗೂ ಕಲಾವಿದರಿಗೆ ನಾಡೋಜ ದರೋಜಿ ಈರಮ್ಮ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸುವ ಕೆಲಸ ಮಾಡುತ್ತಿದೆ. ಅವರ ನಿಧನದ ನಂತರ ಪ್ರತಿ ವರ್ಷದ ಆಗಸ್ಟ್ 12ರಂದು ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ.

ಭಾರತದ ಬಹು ಮುಖ್ಯ ಮಹಾಕಾವ್ಯಗಳೆಂದೇ ಪರಗಣಿಸಲ್ಪಟ್ಟಿರುವ ಮತ್ತು ನಮ್ಮ ನಡುವೆ ಇರುವ ರಾಮಾಯಣ ಮತ್ತು ಮಹಭಾರತಗಳು ಒಬ್ಬ ಕರ್ತೃವಿನಿಂದ ರಚಿಸಲ್ಪಟ್ಟ ಕಾವ್ಯಗಳಾದರೂ ಜನಸಾಮಾನ್ಯರ ನಡುವೆ ಅವು ವಿಸ್ತಾರಗೊಂಡ ರೀತಿ ಎಲ್ಲರನ್ನೂ ವಿಸ್ಮಯ ಹುಟ್ಟಿಸುವಂತವೇ ಆಗಿವೆ. ದೇವ ಭಾಷೆ ಎಂದೇ ಪರಿಗಣಿಸಲ್ಪಟ್ಟ ಆದರೆ ಜನಸಾಮಾನ್ಯರ ನಡುವೆ ಇಂದು ಇಲ್ಲವಾಗಿರುವ ಭಾಷೆಯಲ್ಲಿ ರಚಿಸಲ್ಪಟ್ಟ ಈ ಕಾವ್ಯಗಳನ್ನು ವಿವಿಧ ದೇಶಭಾಷೆಗಳು ಅನುವಾದಿಸಿಕೊಂಡವು ಎನ್ನಬಹುದು. ಹೇಗೆಂದರೆ ಆಯಾ ನೆಲದ ಗುಣ ಸ್ವಭಾವಗಳನ್ನು ತಮ್ಮ ತಮ್ಮ ನೆಲದ ಅಗತ್ಯಗಳಿಗನುಗುಣವಾಗಿ ಆಯಾ ಕಾಲದ ಕವಿಗಳು ಈ ಕಾವ್ಯಗಳಲ್ಲಿಯೇ ಪ್ರತಿಬಿಂಬಿಸದರಾದರೂ ತಮ್ಮವರಲ್ಲದ ಇನ್ನೊಂದು ಭಿನ್ನ ಪ್ರದೇಶದ ವೈದಿಕ ವೀರರ ಕಥನವನ್ನಾಗಲಿ, ದಶಾವತಾರದ ಹೆನ್ನೆಲೆಯಾಗಲಿ, ಆರ್ಯ ಸಂಸ್ಕೃತಿಯ ಗುಣವಿಶೇಷಗಳನ್ನಾಗಲೀ ಅಥವಾ ಅವರ ಸ್ಥಾಪಿತ ಮೌಲ್ಯಗಳನ್ನಾಗಲೀ ಬದಲಿಸಲು ಸಾಧ್ಯವಾಗಲಿಲ್ಲ. ಅಖಿಲ ಭಾರತ ಪರಂಪರೆಯಲ್ಲಿ ಹರಿದುಬಂದ ಈ ಎರಡೂ ಪುರಾಣ ಕಾವ್ಯಗಳು ಆಳುವ ವರ್ಗಗಳ ನಡುವಿನ ದ್ವೇಷ ವೈಶಮ್ಯಗಳನ್ನು, ಪ್ರೀತಿ–ಪ್ರೇಮಗಳನ್ನು ಮತ್ತು ಆ ಮೂಲಕ ಸಾಮ್ರಾಜ್ಯಶಾಹಿ ವಿಸ್ತರಣೆಯನ್ನು ಕೇಂದ್ರವಾಗಿ ಇಟ್ಟುಕೊಂಡವುಗಳೇ ಆಗಿವೆ. ಇವುಗಳನ್ನೇ ಮೌಲ್ಯಗಳೆಂದು ಒಪ್ಪಿ ನಮ್ಮ ದೇಶ ಭಾಷಾ ಕಾವ್ಯಗಳು ಪೋಷಿಸಿಕೊಂಡು ಬಂದವು. ಇದಕ್ಕೆ ಉದಾಹರಣೆ ಪಂಪನ ಪಂಪಭಾರತದಿಂದ ಹಿಡಿದು ಕುವೆಂಪುರವರ ರಾಮಾಯಣ ದರ್ಶನ ಹಾಗೂ ಸುಜನಾರವರ ಯುಗಸಂಧ್ಯಾ, ಇತ್ತೀಚಿನ ಎಂ.ವೀರಪ್ಪಮೊಯ್ಲಿಯವರ ಸೀತಾನ್ವೇಷಣ ಮತ್ತು ಕುಂ.ವೀರಭದ್ರಪ್ಪನವರ ಹನುಮದರ್ಶನದವರೆಗೂ ನಡೆದುಕೊಂಡು ಬಂದಿದೆಯೆಂದರೆ ತಪ್ಪಾಗಲಾರದು.

ಕುಮಾರರಾಮ ಐತಿಹಾಸಿಕ ವ್ಯಕ್ತಿಯಾದರೂ ಆ ವೀರನನ್ನು ನಮ್ಮ ಜನಪದರು ಕಂಡ ಬಗೆ ಬೇರೆ. ಬಹುಶಃ ವಿಜಯನಗರ ಇತಿಹಾಸದಲ್ಲಿ ಕುಮಾರರಾಮನಷ್ಟು ಜನಮನದಲ್ಲಿ ಉಳಿದು ಪುರಾಣದ ವ್ಯಕ್ತಿಯಾದ ವೀರ ಇನ್ನೊಬ್ಬನಿಲ್ಲ. ಬಳ್ಳಾರಿ ಜಿಲ್ಲೆಯ ಬುಡಗ ಜಂಗಾಲರು ಅಥವಾ ವೇಷಗಾರರು ತಮ್ಮ ಬುರ‍್ರಕಥಾ ಮಾದರಿಯಲ್ಲಿ ಕನ್ನಡದಲ್ಲಿ ಹಾಡಿರುವ ಈ ಕಾವ್ಯ ಅತ್ಯಂತ ವಿಶಿಷ್ಟವಾದದ್ದು. ಜಟಿಂಗೇಶ್ವರಸ್ವಾಮಿ ನೀಡುವ ಬಾಳೆ ಹಣ್ಣಿನ ವರ ಪ್ರಸಾದಕ್ಕೆ ಇಬ್ಬರು ವೀರರು ಜನ್ಮಿಸುತ್ತಾರೆ. ಹಣ್ಣು ತಿಂದ ರಾಣಿಯ ಹೊಟ್ಟೆಯಲ್ಲಿ ಕುಮಾರರಾಮ ಹುಟ್ಟಿದರೆ, ಹೋಲಿಕೆ ರಾಮ ಸಿಪ್ಪೆ ತಿಂದ ದಾಸಿಯ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಆರಂಭದಲ್ಲಿಯೇ ಅಪವಾದಕ್ಕೆ ಗುರಿಯಾಗುವ ದಾಸಿ ಅದನ್ನು ಪರಿಹರಿಸಿಕೊಳ್ಳುತ್ತಾಳೆ. ಆದರೆ ಅವಳ ಮಗ ಹೋಲಿಕೆರಾಮ, ಕುಮಾರರಾಮನಷ್ಟೇ ವೀರನಾದರೂ ದಾಸಿಯ

ISBN – 978-93-5526-247-9

ಮಗನಾದ ಕಾರಣಕ್ಕೆ ಹಲವು ರೀತಿಯ ಶೋಷಣೆಗೆ ಒಳಗಾಗುತ್ತಲೇ ಹೋಗುತ್ತಾನೆ. ವಿಜಯನಗರ ಸಾಮ್ರಾಜ್ಯದ ಸಂದರ್ಭದ ಹಲವು ಬುಡಕಟ್ಟುಗಳು ಕುಮಾರ ರಾಮನನ್ನು ತಮ್ಮ ಸಾಂಸ್ಕೃತಿಕ ವೀರನನ್ನಾಗಿ ಪರಿಗಣಿಸಿ ಅವನ ಅಣತಿಯಂತೆ ನಡೆಯುತ್ತಾರೆ. ಇವತ್ತಿಗೂ ಅನೇಕ ಕೆಳವರ್ಗಗಳಿಂದ ಪೂಜೆಗೊಳ್ಳುತ್ತಿರುವ ಕುಮಾರರಾಮ ಹಾಗೂ ದೊಂಬರ ಕನ್ಯೆ ಎಂದು ಹೇಳಲಾಗುವ ರತ್ನಾಜಿ ಹಾಗೂ ಅವಳ ಸುತ್ತ ಹೆಣೆದ ಕಾಮದ ಕಥೆ ಈ ಕಾವ್ಯದಲ್ಲಿ ಬಿನ್ನರೂಪದಲ್ಲಿ ಪ್ರಸ್ತಾಪಿಸಲ್ಪಡುತ್ತವೆ. ಇತಿಹಾಸದ ಘಟನೆ ಜನಪದರ ಬಾಯಲ್ಲಿ ಕಾವ್ಯವಾದಾಗ ಸಹಜವಾಗಿ ಅದು ಜನಸಾಮಾನ್ಯರ ಪರ್ಯಾಯ ಇತಿಹಾಸದಂತೆ ಕಂಡುಬರುತ್ತದೆ. ಇಂಥ ಒಂದು ಪರ್ಯಾಯ ಇತಿಹಾಸದ ಆಶಯ ಹೊತ್ತ ಈ ಕಾವ್ಯ ಹಲವು ಜನವರ್ಗಗಳು ವಿಜಯನಗರದ ಜೊತೆಗೆ ಇಟ್ಟುಕೊಂಡ ಸಂಬಂಧ ಮತ್ತು ಭಾವನೆಗಳನ್ನು ಪ್ರತಿಬಿಂಬಿಸುತ್ತದೆ.

ತಲೆತಲಾಂತರದಿಂದ ಈ ಕಾವ್ಯಗಳನ್ನು ಹಾಡುವ ಸಂಪ್ರದಾಯವಿದ್ದು ಅವರ ತಂದೆತಾತರು ತೆಲುಗಿನಲ್ಲಿ ಹಾಡಿರುವುದನ್ನು ತಿಳಿದುಕೊಂಡ ಈರಮ್ಮ ಪ್ರಪ್ರಥಮವಾಗಿ ಕನ್ನಡದಲ್ಲಿ ಕನ್ನಡಿಗರಿಗೇ ಸಮರ್ಪಿಸಿರುವುದು ನಮ್ಮಪುಣ್ಯ. ಈ ಎಲ್ಲಾ ಕಾವ್ಯಗಳಲ್ಲೂ ಅಲ್ಲಲ್ಲಿ ಬಾಯಿತಪ್ಪಿ ತೆಲುಗು ಪದಗಳು ನುಸುಳಿಸರುವುದನ್ನು ಕಾಣಬಹುದು. ಅವರು ಕಾವ್ಯದ ಆರಂಭದಲ್ಲಿ ಪ್ರಾರ್ಥನೆ ಮಾಡಿ ಅನಂತರ ನೇರ ಕಾವ್ಯದ ಹಾಡಿಗೆ ಪಾದಾರ್ಪಣೆ ಮಾಡುವುದುಂಟು.

***

ISBN – 978-93-5526-247-9

# 5. ಜನಪದ ಕಲಾಪ್ರದರ್ಶನ ತಂತ್ರಗಳು ಮತ್ತು ಆಧುನಿಕ ರಂಗಭೂಮಿ

**ಡಾ.ಟಿ.ಎಚ್.ಲವಕುಮಾರ್**

ಆಧುನಿಕತೆ ಎನ್ನುವುದು ಮುಖ್ಯವಾಗಿ ನಮ್ಮ ಅನುಭವಕ್ಕೆ ದಕ್ಕುವುದು ಅದರ ಆರ್ಥಿಕ ಅಥವಾ ಭೌತಿಕ ಆಯಾಮಗಳಿಂದ. ಸಮುದಾಯಗಳ ವೇಶಭೂಷಣ, ಆಹಾರಕ್ರಮ, ನಡೆ–ನುಡಿಗಳ ಬದಲಾವಣೆ ಇಲ್ಲೆಲ್ಲಾ ಅದರ ಪ್ರಭಾವಗಳನ್ನು ನಾವು ಗಮನಿಸಬಹುದು. ಪ್ರತಿಯೊಂದು ಜೀವನ ಕ್ರಮವೂ ಕಾಲಾಂತರದಲ್ಲಿ ನೈಸರ್ಗಿಕ ಮತ್ತು ಸಮುದಾಯಗಳ ಅಸ್ತಿತ್ವದ ಕಾರಣಕ್ಕೆ ಬದಲಾಗುತ್ತಲೇ ಇರುತ್ತದೆ. ಆದರೆ ಜಾಗತೀಕರಣದ ಹಿನ್ನೆಲೆಯ ಆರ್ಥಿಕ ಆಯಾಮದ ಆಧುನಿಕತೆ ಬಾಹ್ಯವಾಗಿ ಅಲ್ಲದೆ ನಮ್ಮ ಅಂತರಂಗವನ್ನೂ ನಿಧಾನಕ್ಕೆ ಪಲ್ಲಟಗೊಳಿಸುತ್ತಿದೆ .

ಅತೀವ ಯುಕ್ತಿಕತೆ, ಸಂಪನ್ಮೂಲಗಳ ಕ್ರೋಢೀಕರಣ, ಜನಪ್ರಿಯತೆಯ ವ್ಯಾಮೋಹ, ಏಕಾಂತತೆ, ಆಚರಣೆಗಳಿಂದ ದೂರ ಉಳಿಯುವಿಕೆ. ಕ್ರಿಯಾಹೀನವಾದ ಅತೀ ಬೌದ್ಧಿಕತೆ ಇವೆಲ್ಲಾ ಜಾಗತೀಕರಣದ ಹಿನ್ನೆಲೆಯ ಆಧುನಿಕತೆಯ ಪ್ರಬಾವವೇ ಆಗಿದೆ. ಈ ಆಧುನಿಕತೆಯ ಭಾಗವಾಗಿಯೇ ಬಂದಿರುವ ಶಿಕ್ಷಣ ಸಹ ಸಮುದಾಯಗಳಿಂದ ವ್ಯಕ್ತಿಯನ್ನು ಬೇರ್ಪಡಿಸಿಯೇ ನೋಡುತ್ತದೆ. ಹಾಗಾಗಿಯೇ ಇಲ್ಲಿ ವ್ಯಕ್ತಿಯೂ ಸಹ ಕಲಿಕೆಯ ಹಾದಿಯಲ್ಲಿ ಸಮಾಜವನ್ನು ಹೊರಗಿಟ್ಟೇ ಬೆಳೆಯುತ್ತಾನೆ. ತಂತ್ರಜ್ಞಾನ ಈ ನಡೆಯನ್ನ ಇನ್ನಷ್ಟು ವೇಗಗೊಳಿಸಿದೆ. ತಂತ್ರಜ್ಞಾನ ಮತ್ತು ಶಿಕ್ಷಣ ತಳ–ಸಮುದಾಯಗಳ ಸಣ್ಣಮಟ್ಟಿಗಿನ ಚಲನೆಗೆ ಕಾರಣವಾದರೂ ಸಹ ಆಧುನಿಕಗೊಂಡ ಸರ್ಕಾರಗಳು ಅದನ್ನು ಸಾಧ್ಯವಾದಷ್ಟೂ ವ್ಯಾಪಾರೀಕರಣ ಮಾಡಲು ಯೋಜಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಎ.ವಿ ನಾವಡರು ಹೇಳುವಂತೆ "ಜಾನಪದ ಒಂದು ಅಧ್ಯಯನದ ಶಾಖೆಯಾಗಿ ಗಮನಕ್ಕೆ ಬಂದುದೇ ಹೊರಗಣ ಜಗತ್ತಿನಿಂದ. ಅಲ್ಲಿನ ಕೈಗಾರಿಕಾ ಕ್ರಾಂತಿಯ ಮೂಲಕ. ಈ ಪ್ರಕ್ರಿಯೆಯಿಂದಾಗಿ ಏರ್ಪಟ್ಟ ನಗರ ಕೇಂದ್ರಿತ ಜೀವನ ವಿಧಾನದಲ್ಲಿ ಏನನ್ನೋ ಕಳೆದುಕೊಳ್ಳುತ್ತಿದ್ದೇವೆಂಬ ಅತಂತ್ರ ಭಾವನೆ ನಮ್ಮೊಳಗೂ ಕಾಲಿಟ್ಟು ನಮ್ಮ ನೆಲದ ಸಂಸ್ಕೃತಿಯನ್ನು ಬೇಗನೇ ಸಂಗ್ರಹಿಸಬೇಕು ಎನ್ನುವ ಉತ್ಸಾಹ ಇದಕ್ಕೆಲ್ಲಾ ಕಾರಣ' 1

ಮೊದಲಿಗೆ ವಸಾಹತು ದೊರೆಗಳು ಮತ್ತು ಮಿಷನರಿಗಳ ಮೂಲಕ ಸ್ಥಳೀಯತೆಯನ್ನು ಅರ್ಥಮಾಡಿಕೊಳ್ಳುವ ಸಹಜ ಕುತೂಹಲ ಮತ್ತು ದಾಖಲೀಕರಣದ ಉದ್ದೇಶದಿಂದ ಶುರುವಾದ ಕನ್ನಡದ ಜನಪದ ಅಧ್ಯಯನಗಳ ವ್ಯಾಪ್ತಿ ಈಗ ವಿಸ್ತಾರಗೊಂಡು ಸಮಕಾಲೀನ ಸಮಾಜದ ಅನೇಕ ತೊಡಕುಗಳು ಮತ್ತು ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳುವ ಬಹುದೊಡ್ಡ ಪರಿಕರಗಳಾಗಿವೆ. ಅಷ್ಟೇ ಅಲ್ಲದೆ ಮಂಟೇಸ್ವಾಮಿ, ಜುಂಜಪ್ಪ ತರದ ಜನಪದ ಮಹಾಕಾವ್ಯಗಳು ಮತ್ತು ಇನ್ನೂ ಅನೇಕ ಕಥೆಗಳು, ಜನಪದ ನಾಯಕರು ಮತ್ತು ಹಾಡುಗಳು ಹೊಸ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರತಿರೋಧಗಳ ಮತ್ತು ಸಮುದಾಯಗಳ ಅಸ್ಮಿತೆಯ ಪ್ರತೀಕಗಳಾಗಿ ಸಮುದಾಯಗಳ ಕ್ರಿಯಾಶೀಲತೆಯ ಜೀವಸೆಲೆಯಾಗಿವೆ.

### ಜನಪದ ಕಲಾ ಪ್ರದರ್ಶನಗಳು ಮತ್ತು ಅದರ ಸಾಧ್ಯತೆಗಳು

ಸಾಮಾನ್ಯವಾಗಿ ಜನಪದ ವಿದ್ವಾಂಸರು ಗುರುತಿಸುವಂತೆ 'ಕುರಿತೋದದೆಯೂ ಕಾವ್ಯಪ್ರಯೋಗ ಪರಿಣತಮತಿಗಳಾದ' ಜನಪದರ ಆಚರಣೆಗಳ ಮುಖ್ಯ ಉದ್ದೇಶ ನಿಸರ್ಗದ ಆರಾಧನೆ, ದುಷ್ಟ–ಶಕ್ತಿಗಳ ವಶೀಕರಣ, ಅಸದೃಷ ಶಕ್ತಿಗಳನ್ನು ತೃಪ್ತಿಪಡಿಸುವುದು. ಈ ಸಂದರ್ಭದಲ್ಲಿ ಆಚರಣೆಗಳ ಪ್ರಮುಖ ಭಾಗವಾಗಿ ಪ್ರದರ್ಶನಗೊಳ್ಳುವ ಜನಪದ ಕುಣಿತ, ಹಾಡು, ಮಾತುಕತೆ ಹೀಗೆ ಅನೇಕ ವಿಧದ ಜನಪದ ಪ್ರದರ್ಶನ ಕಲೆಗಳು ನಿರ್ವಹಿಸುವ ಪಾತ್ರವೇನು? ಆ ಕಲಾವಿದರ ತಯಾರಿ ಹೇಗೆ? ಮತ್ತು ಅವುಗಳ ಮೂಲಕ ಆಧುನಿಕ ರಂಗಭೂಮಿ ಪಡೆಯಬೇಕಾದುದೇನು? ಜನಪದರ ಪ್ರದರ್ಶನಗಳಿಗೂ ನಾಟಕ ಪ್ರದರ್ಶನಗಳಿಗೂ ಇರುವ ಮೂಲಭೂತ ವ್ಯತ್ಯಾಸ ಮತ್ತು ಸಾಮ್ಯತೆಗಳೇನು? ಈ ವ್ಯತ್ಯಾಸಗಳು ಕೇವಲ ದೃಶ್ಯ ಮತ್ತು ಶಬ್ಧದ ವ್ಯತ್ಯಾಸಗಳೋ ಅಥವಾ ಸಂವೇಧನೆಯಲ್ಲೂ ವ್ಯತ್ಯಾಸವಿದೆಯೋ? ಒಂದು ಜೀವಂತ ಸಮುದಾಯದ ಜೀವಂತ ಕಲೆಯನ್ನು ರಂಗಭೂಮಿಯಲ್ಲಿ ಕೇವಲ ಆಂಶಿಕವಾಗಿ ಮತ್ತು ಆ ಸಮುದಾಯದ ಯಾವ ಪಾಲ್ಗೊಳ್ಳುವಿಕೆ ಅಥವಾ ಅನುಮತಿಯೂ ಇಲ್ಲದೆ ಹೇಗೆ ಬೇಕಾದರೂ ಬಳಸುವ ಅಧಿಕಾರ ಆಧುನಿಕ ರಂಗಭೂಮಿ ಅಥವಾ ಸಿನಿಮಾಗಳಿಗೆ ಇದೆಯೇ? ಇವೆಲ್ಲಾ ಇಂದಿನ ಮುಖ್ಯ ಪ್ರಶ್ನೆಗಳಾಗಿವೆ. ಮತ್ತು ಈ ಪ್ರಶ್ನೆಗಳು ಹುಟ್ಟಿಸಬಹುದಾದ ಇನ್ನಷ್ಟು ಪ್ರಶ್ನೆಗಳು ಮತ್ತು ಉತ್ತರಗಳು ಆಧುನಿಕ

ರಂಗಭೂಮಿಗೊಂದು ಸಾಮುದಾಯಿಕ ಘನತೆಯನ್ನು ತಂದುಕೊಡಬಲ್ಲದು ಮತ್ತು ಸಮುದಾಯಗಳ ಹತ್ತಿರ ಕೊಂಡೊಯ್ಯಬಹುದು .

ಹಾಗಾದರೆ ಆಧುನಿಕ ರಂಗಭೂಮಿಗೆ ಆ ತರದ ಸಾಮುದಾಯಿಕ ಘನತೆ ಇಲ್ಲವೇ? ಇವತ್ತಿನ ಆಧುನಿಕ ರಂಗಭೂಮಿಯ ಹುಟ್ಟಿನ ಮೂಲ ಜನಪದವೇ ಆಗಿಲ್ಲವೇ? ಈ ಪ್ರಶ್ನೆಗಳನ್ನು ಈ ಸಂಧರ್ಭದಲ್ಲಿ ನಾವು ಬಗೆಹರಿಸಬೇಕಾಗುತ್ತದೆ. ಸಾಂಪ್ರದಾಯಿಕ ಅರ್ಥದಲ್ಲಿ ರಂಗಭೂಮಿ ಅನ್ನುವುದು ಒಂದು ಸಾಮುದಾಯಿಕ ಕ್ರಿಯೆಯೇ ಆಗಿದೆ. ಕ್ರಿಯಾವಿಧಿ ರಂಗಭೂಮಿ, ಆಚರಣಾತ್ಮಕ ರಂಗಭೂಮಿ, ಹಲವು ನಾಟಕೀಯ ಪ್ರದರ್ಶನಗಳು ಸಮುದಾಯದ ಭಾಗವೇ ಆಗಿದ್ದವು. ಇಷ್ಟೆಲ್ಲದರ ನಡುವೆಯೂ ನಾವು ಆಧುನಿಕ ರಂಗಭೂಮಿಯನ್ನು ಬೇರೆಯಾಗಿಯೇ ಗ್ರಹಿಸಬೇಕು .

ಇವತ್ತಿನ ರಂಗಭೂಮಿಯನ್ನು ಸಾಮುದಾಯಿಕ ಕಲೆ, ಜನರನ್ನು ಒಟ್ಟಿಗೆ ಕೂಡಿಸುವ ಸಾಂಸ್ಕೃತಿಕ ಜವಾಬ್ದಾರಿಯ ಕಲೆ ಎಂದೆಲ್ಲಾ ಕರೆದರೂ ಸಹ ಅದು ಮೂಲಭೂತವಾಗಿ ಸಮುದಾಯದ ಹೊರಗಿನ ವ್ಯಾಪಾರೀ ಕಲೆಯೇ ಆಗಿದೆ. ಮನರಂಜನೆಯೇ ಅದರ ಮೂಲ ಉದ್ದೇಶವಾಗಿರುವುದರಿಂದ ಸಿನಿಮಾದಂತೆ ಅದೊಂದು ಉದ್ಯಮ ಕೂಡ ಆಗಿದೆ. ಆದರೆ ಎಷ್ಟೇ ಕಮರ್ಶಿಯಲ್ ಆದರೂ ಸಹ ಜನಪದ ಪ್ರದರ್ಶನ ಕಲೆಗಳು ನಮ್ಮ ಸಂಸ್ಕೃತಿಯ ಭಾಗವಾಗಿಯೇ ಕಾಣುತ್ತವೆ.

ಈ ಹಿನ್ನೆಲೆಯಲ್ಲಿ ರಂಗಭೂಮಿ ತಾನು ಜನಸಮುದಾಯದ ಧನಿಯಾಗಬೇಕಾದರೆ ಭಾರತದ ಸಾಂವಿಧಾನಿಕ ಮೌಲ್ಯಗಳನ್ನು ಮತ್ತು ತಳಸಮುದಾಯಗಳ ಅನುಭವವನ್ನು ಒಳಗೊಂಡಿರಬೇಕಾಗುತ್ತದೆ. ಜಾತಿ ಮತ್ತು ಮತಗಳ ಮೌಢ್ಯಗಳಾಚೆ ನಿಂತು, ಸರ್ವೋದಯ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಪೂರಕವಾಗಿರಬೇಕಾಗುತ್ತದೆ. ಅಂತಹ ಸಾಮುದಾಯಿಕತೆ ಜನಪದರ ಬದುಕಿನ ಒಳಗೇ ಇರುವುದರಿಂದ ಜನಪದ ಕಲಾವಿದನಿಗಿಂತ ರಂಗ ಕಲಾವಿದನ ತಯಾರಿ ಹೆಚ್ಚು ಬೌದ್ಧಿಕವೂ ನೆಲ–ನಿಷ್ಟವೂ ಆಗಿರಬೇಕಾಗುತ್ತದೆ.

**ಜನಪದರ ಸಾಮುದಾಯಿಕತೆ ಮತ್ತು ರಂಗಭೂಮಿ**

ಆಧುನಿಕ ರಂಗಭೂಮಿ ಬಹುತೇಕ ನಿರ್ದೇಶಕನ ರಂಗಭೂಮಿಯಾಗಿದೆ. ಅದೆಷ್ಟೇ ಪ್ರಬುದ್ಧ ನಟರಿದ್ದರೂ ಅಲ್ಲಿ ಕೊನೆಗೂ ನಿರ್ದೇಶಕನ ದೃಷ್ಟಿಕೋನವೇ ಪ್ರಧಾನವಾಗಿರುತ್ತದೆ. ನಟರ ವಿಸ್ತರಣೆಗಳು ಕೇವಲ ಅಲಂಕಾರಿಕವಾಗಿರುತ್ತದೆ ಅಷ್ಟೇ. ಹಾಗಾಗಿಯೇ ಅದೆಷ್ಟೋ ರಂಗ ತಂಡಗಳಲ್ಲಿ ಒಂದು ಹಂತವಾದ ಮೇಲೆ ನಟರು ಅಲ್ಲೇ ಉಳಿಯುವುದು ಕಷ್ಟ. ಕೇವಲ ಪರ್ಯಾಯ ಅಥವಾ ಸೈದ್ಧಾಂತಿಕ ಆಶಯದ ರಂಗಭೂಮಿ ಅಥವಾ ಬೀದಿ ರಂಗಭೂಮಿ ಹೊರತುಪಡಿಸಿದರೆ ಇಲ್ಲವೇ ಇಲ್ಲ ಎನ್ನುವಷ್ಟು ರಂಗ ತಂಡಗಳು ಮಾತ್ರ ಅಸ್ತಿತ್ವದಲ್ಲಿವೆ. ಆದರೆ ಜನಪದರ ತಂಡಗಳಿಗೆ ಆ ಸಮಸ್ಯೆ ಇಲ್ಲ ಅಲ್ಲಿ ಬೌದ್ಧಿಕತೆಗಿಂತ ಕೂಡುವಿಕೆ, ಸಾಮುದಾಯಿಕತೆ ಮತ್ತು ಕಲೆಕ್ಟೀವ್ ವಿಸ್ಡಂಗೆ ಹೆಚ್ಚು ಮಾನ್ಯತೆ ಇರುತ್ತದೆ. ಇದಕ್ಕೆ ಕಾರಣ ಬಹುಷಃ ಜನಪದ ಕಲೆಗಳು ಕಲಿಕೆ ಮತ್ತು ಪ್ರದರ್ಶನದ ತಯಾರಿ ಹಾಗೂ ಜನಪದರಿಗಿರುವ ಸಮಷ್ಟಿ ಪ್ರಜ್ಞೆ ಮತ್ತು ಆಶು ವಿಸ್ತರಣೆಯ ಸಾಧ್ಯತೆಗಳೇ ಆಗಿವೆ.

ಬಡವರಮನೆಜ್ಯೋತಿ
ಬಲಿಗಾರಮನೆಯಜ್ಯೋತಿ
ಸತ್ತವರಮನೆಜ್ಯೋತಿ
ಹೆತ್ತವರಮನೆಜ್ಯೋತಿ. 2

ಹೀಗೆ ಎಲ್ಲಾ ಜಾತಿ ಜನಾಂಗದವರಿಂದ ಸಂಕಲಿತವಾದ ಜನಪದರಿಂದ ಆಧುನಿಕ ರಂಗಭೂಮಿ ಕಲಿಯುವುದು ಸಾಕಷ್ಟಿದೆ. ಬಾಹ್ಯದಲ್ಲಿ ಏನೇ ಬದಲಾದರೂ ಸಹ ಅವರ ಸಾಂಸ್ಕೃತಿಕ ಆವರಣದಲ್ಲಿ ನೆಲ ಮೂಲದ ತಮ್ಮ ಆದರ್ಶಗಳನ್ನು ಭಾವಿಸುವಲ್ಲಿ ಅವರು ರಾಜಿಯಾಗಿಲ್ಲ. ಆವಾಹನೆ ಮತ್ತು ವಿಸರ್ಜನೆ ಇವು ಜನಪದ ಪ್ರದರ್ಶನಗಳ ಭಾಗವಾಗಿದೆ. ಇದರ ನಡುವಿನ ಆಟವೇ ನಾಟಕ ಅಥವಾ ಬಯಲಾಟ. ಯಕ್ಷಗಾನದಲ್ಲೂ ಸಹ ಬಾಲಗೋಪಾರರ ಆಗಮನ ಮತ್ತು ನಿರ್ಗಮನ ಪ್ರದರ್ಶನದ ಭಾಗವೇ ಆಗಿರುತ್ತದೆ. ಆದರೆ ನಾಟಕ ಅನ್ನುವುದು ನಾವೆಷ್ಟೇ ಹೇಳಿದರೂ ವಿಸ್ತರಣೆಗೆ ಸ್ವಲ್ಪ ಹಿಂಜರಿಯುತ್ತದೆ. ಇಲ್ಲಿ ಪ್ರತಿ ಪ್ರದರ್ಶನ ಹೊಸದೇ ಅನ್ನಿಸುವಷ್ಟು ಸಾಧ್ಯತೆಗಳು

ISBN – 978-93-5526-247-9

ಕಡಿಮೆ. ಹಾಗೇ ಜನಪದ ಆಚರಣೆ ಪಾಲ್ಗೊಳ್ಳುವವರನ್ನು ಒಳಗು ಮಾಡಿಕೊಂಡಂತೆ ಆಧುನಿಕ ರಂಗದಲ್ಲಿ ಆಗುವುದಿಲ್ಲ. ಅಲ್ಲಿ ಬಳಕೆಯಾಗುವ ಪ್ರತಿಯೊಂದು ತಂತ್ರವೂ ನಾಟಕದಿಂದ ಪ್ರೇಕ್ಷಕನ್ನು ದೂರ ತಳ್ಳುತ್ತಿರುತ್ತದೆ. ನೀನು ನಮ್ಮವನಲ್ಲ ಅನ್ನುವುದನ್ನು ಅದು ಸದಾ ಹೇಳುತ್ತಿರುತ್ತದೆ.

ಜನಪದ ಬಯಲಾಟಗಳ ವಿಧೂಷಕ ಮತ್ತು ಸೂತ್ರಧಾರ ಸದಾ ಆಶು ವಿಸ್ತರಣೆ ನಡೆಸುತ್ತಾರೆ . ಅವರು ಪ್ರದರ್ಶನವೊಂದರ ಜಾಗೃತವಾಹಕರು. ಇದರ ಮತ್ತೂ ವಿಶೇಷವೆಂದರೆ ಜನಪದರ ಧ್ವನಿಯಲ್ಲೇ ತಾಳಗಳ ವಿಸ್ತರಣೆ ನಡೆಯುತ್ತಿರುತ್ತದೆ ಹಾಗೆಯೇ ವೇಷಭೂಷಣದ ವಿಚಾರದಲ್ಲೂ ಸಹ, ಸೇಡಿಯಾಪು ಕೃಷ್ಣಭಟ್ಟರು ಯಕ್ಷಗಾನದಲ್ಲಿ ಗಮನಿಸಿರುವಂತೆ 'ವೇಷ ರಚನಾ ಶೈಲಿಯು ಆಯಾ ಪಾತ್ರದ ಸ್ವಭಾವ–ಗುಣ–ಶೀಲಗಳನ್ನು ಅಭಿವ್ಯಕ್ತಿಸುವುದೇ ಆಗಿದೆ. ಆ ಕಾರಣದಿಂದಲೇ ಕುಂತಿಯ ಮಕ್ಕಳೇ ಆದರೂ ಭೀಮಾರ್ಜುನರ ವೇಷಭೂಷಣ ಭಿನ್ನವಾಗಿರುತ್ತದೆ'. ರಂಗಭೂಮಿಯಲ್ಲಿ ಇದು ಸಾಂಕೇತಿಕವಾಗಿರುತ್ತದೆಯಾದರೂ ಜನಪದರ ಪ್ರಯೋಗಶೀಲತೆ ಎದುರು ಅದು ಸಪ್ಪೆಯಾಗಿರುತ್ತದೆ ಅದಕ್ಕೂ ಕಾರಣ ಅಂದರೆ ಅಲ್ಲಿ ಎಲ್ಲಿಂದಲೋ ಕಲಿತು ತುರುಕುವ ಮಂದಿಯೇ ಹೆಚ್ಚು. ಬಹುತೇಕ ಅಲ್ಲಿ ಸ್ಥಳೀಯತೆ ಇರುವುದಿಲ್ಲ ಆದರೆ ಜನಪದರಲ್ಲಿ ಸ್ಥಳೀಯತೆಯನ್ನು ಬಿಟ್ಟು ಇತರೆಯನ್ನು ಹುಡುಕಬೇಕೆನ್ನುವಷ್ಟು ಗೌಣವಾಗಿರುತ್ತದೆ.

**ಆಧುನಿಕ ರಂಗಭೂಮಿಯ ಮರೆತ ಬೇರುಗಳು**

ಸಮಕಾಲೀನ ರಂಗಭೂಮಿಯ ಬಹುದೊಡ್ಡ ಮಿತಿ ಅದರ ಸಾಮಾಜಿಕ ಪಾಲ್ಗೊಳ್ಳುವಿಕೆಯಾಗಿದೆ. ಯಾವುದೇ ಸಾರ್ವಜನಿಕ ನಡೆ ಅದು ತನ್ನ ಆತ್ಯಂತಿಕತೆಯಲ್ಲಿ ರಾಜಕೀಯವೇ ಆಗಿರುತ್ತದೆ. ಹಾಡುವಾಗ, ನರ್ತಿಸುವಾಗ ಅಥವಾ ಏನನ್ನೂ ಮಾಡದೇ ಸುಮ್ಮನಿರುವಾಗಲೂ ನಾವು ಯಾವುದೋ ಒಂದು ಸಿದ್ಧಾಂತ ಅಥವಾ ಒಂದು ಉದ್ದೇಶಗಳ ವಾಹಕಗಳಾಗಿರುತ್ತೇವೆ. ಹಾಗಿರುವಾಗ ಕಲಾವಿದನಿಗೆ ಈ ಅರಿವು ಬಹಳ ಮುಖ್ಯ. ಜನಪದ ಕಲಾವಿದನೊಬ್ಬ ಸಮುದಾಯವೊಂದರಲ್ಲಿ ತನ್ನ ಕಲೆ ಪ್ರದರ್ಶಿಸುವಾಗ ಅವನಿಗೆ ತನ್ನ ಪ್ರದರ್ಶನದ ಪರಂಪರೆ ಮತ್ತು ಪ್ರಸ್ತುತ ಪ್ರದರ್ಶನದ ಸಾಮುದಾಯಿಕ ಮಹತ್ವ ಅವನ ಪ್ರಜ್ಞೆಯಲ್ಲಿ ಜಾಗೃತವಾಗಿರುತ್ತದೆ. ಆ ಕಾರಣಕ್ಕೆ ಅವನು ಆ ಪ್ರದರ್ಶನ ಪೂರ್ವದ ಎಲ್ಲಾ ತಯಾರಿ ಮತ್ತು ಆಚರಣೆಗಳನ್ನು ಶಿರಸಾವಹಿಸಿ ಮಾಡಿರುತ್ತಾನೆ. ಆದರೆ ಆಧುನಿಕರಿಗೆ ಆ ಗೊಡವೆ ಇರುವುದಿಲ್ಲ ಆದರೂ ಅವನು ಸಾರ್ವಜನಿಕವಾಗಿ ಪ್ರಸ್ತುತವಾಗಲು ಏನಾದರು ಹಿನ್ನೆಲೆ ಮತ್ತು ಪ್ರೇರಣೆ ಬೇಕೆಬೇಕು. ಕೇವಲ ಮನರಂಜನೆ ಮಾತ್ರ ಉದ್ದೇಶವಾದರೆ ಅದು ಸಿನಿಮಾವನ್ನು ದಾಟಿ ಹೋಗಲಾರದು. ಆದರೆ ರಂಗಭೂಮಿ ಮನುಷ್ಯರ ಕಲೆ ಅದಕ್ಕೆ ರಕ್ತಮಾಂಸದ ಸಂಬಂಧವಿದೆ. ಇನ್ನೊಬ್ಬ ಜೀವಂತ ಮನುಷ್ಯ ತನ್ನದೇ ರೂಪವನ್ನು ನಟನಲ್ಲಿ ಕಾಣುತ್ತಿರುತ್ತಾನೆ. ಅವನೊಳಗೆ ಅರಿಸ್ಟಾಟಲ್ ಹೇಳುವಂತೆ 'ಭಯ ಮತ್ತು ಕರುಣೆ ಉಕ್ಕಿಸಬೇಕು' ಅಥವಾ ಬ್ರೆಕ್ಟ್ ಹೇಳುವಂತೆ 'ಆತನನ್ನು ಚಿಂತೆಗೆ ಹಚ್ಚಬೇಕು'. ಕೇವಲ ರಂಜನೆಗೆ ಅಲ್ಲಿ ಅವಕಾಶ ಕಡಿಮೆ ಅಥವಾ ಅದು ಕೇವಲ ಗಿಮಿಕ್ಕಿನ ರಂಗಭೂಮಿ ಆಗುತ್ತದೆ. ನಮ್ಮ ಅನೇಕ ರಂಗ ಶಾಲೆಗಳು ಈ ಗಿಮಿಕ್ಕಿನ ಗಿಳಿ ಪಾಠ ಶಾಲೆಗಳಾಗಿರುವುದು ದುರಂತ. ಕೇವಲ ಹಾಸ್ಯವನ್ನೇ ಗುರಿಯಾಗಿಸಿಕೊಂಡವರಿಂದ ರಂಗಭೂಮಿ ಏನನ್ನೂ ಪಡೆಯಲಾರದು ಅಂಥವರು ಬ್ರೆಕ್ಟ್ ಹೇಳುವಂತೆ– "The worst illiterate is the political illiterate, he doesn't hear, doesn't speak, nor participates in the political events. He doesn't know the cost of life, the price of the bean, of the fish, of the flour, of the rent, of the shoes and of the medicine, all depends on political decisions. The political illiterate is so stupid that he is proud and swells his chest saying that he hates politics.' ಹಾಸ್ಯಾಸ್ಪದ ರಾಜಕೀಯ ಅನಕ್ಷರಸ್ತರಾಗುತ್ತಾರೆ ಮತ್ತು ಜನರನ್ನು ಹಿಂಸೆ ಮತ್ತು ಸ್ಥಗಿತತೆಯ ಕಡೆ ಕೊಂಡೊಯ್ಯುತ್ತಾರೆ. ಈ ಹಿನ್ನೆಲೆಯಲ್ಲಿ ರಂಗಭೂಮಿ ಕನಿಷ್ಟ ಜನಪದರ ನೆಲಮೂಲ ಸಿದ್ಧಾಂಥವನ್ನು ಅನುಕರಿಸಬೇಕಾಗುತ್ತದೆ.

ಆಧುನಿಕ ರಂಗಭೂಮಿಯ ಬಹುಮುಖ್ಯ ಸಮಸ್ಯೆ ಎಂದರೆ ಇಲ್ಲಿ ಬದಲಾವಣೆಗಳಿಗೆ ಹೆಣಗುವ ಸ್ಥಿತಿ ಇದೆ ಆದರೆ ಇದು ಹೀಗೆಯೇ ಇರಲಿಲ್ಲ. ಕನಿಷ್ಟ ಜನಪದ ನಾಟಕ ಅಥವಾ ಬಯಲಾಟಗಳನ್ನೇ ಗಮನಿಸಿದರೂ ಅಲ್ಲಿನ ಸ್ಥಿತಿ ಭಿನ್ನವಾಗಿದೆ. ಉದಾಹರಣೆಗೆ ಉತ್ತರ ಕರ್ನಾಟಕದ ಪ್ರಖ್ಯಾತ ಬಯಲಾಟವಾದ 'ಸಂಗ್ಯಾಬಾಳ್ಯಾ' ನಾಟಕ ವಿವಾಹೇತರ

ISBN – 978-93-5526-247-9

ಲೈಂಗಿಕತೆ ಬಗ್ಗೆ ರಚನೆಯಾಗಿದ್ದರೂ ಸಹ ತನ್ನೆಲ್ಲಾ ಸಂಗೀತ ಮತ್ತು ಮಾತುಗಳ ಸಮ್ಮೋಹನದ ನಡುವೆಯೂ ಆ ಕಾಲದ ಕೋರ್ಟು ಕಛೇರಿಗಳ ಪ್ರಸ್ತಾವ ತಂದು ಆ ಕಾಲಕ್ಕೆ ಕನ್ನಡಿಯಾಗುತ್ತದೆ .

ಹಾಗೆಯೇ ಅಪರಾಳ ತಮ್ಮಣ್ಣ ಮತ್ತು ಸಿರಗುಪ್ಪಿ ಸದಾಶಿವಪ್ಪರಿಂದ ರಚಿತವಾದ 'ಶ್ರೀಕೃಷ್ಣಪಾರಿಜಾತ'ವನ್ನು ಕುಲಗೋಡು ತಮ್ಮಣ್ಣ ಅವರು ನಾಟಕೀಕರಿಸುವಾಗ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿರುವುದನ್ನು ಜನಪದ ವಿದ್ವಾಂಸರು ಗಮನಿಸಿದ್ದಾರೆ. ಮೂಲದಲ್ಲಿ ಇಲ್ಲದ ಎಷ್ಟೋ ಅಂಶಗಳನ್ನು ನಮ್ಮ ಜನಪದರು ಬಳಕೆ ಮಾಡುತ್ತಾರೆ ,ಮಂಟೇಸ್ವಾಮಿ ಅಂತಹ ಕಾವ್ಯಗಳಲ್ಲಿ ನೀಲಗಾರರು ಇಂಗ್ಲೀಷ್ ಪದವನ್ನು ಲೀಲಾಜಾಲವಾಗಿ ಕನ್ನಡದ ಜಾಯಮಾನಕ್ಕಕೆ ಒಗ್ಗಿಸಬಲ್ಲರು, ಹಾಗೆ ಮಾಡುವಾಗಲೂ ಅದೊಂದು ಅನುಕರಣೆಯಾಗದೇ ಆಶು ವಿಸ್ತರಣೆಯಾಗಿ ಜನ ಮನ್ನಣೆ ಪಡೆಯುತ್ತದೆ. ಈ ಮನ್ನಣೆ ಜನಪದರಿಗೆ ಸಾಧ್ಯವಾಗಿರುವುದು ಅವರ ಕಲಾ ನಿಷ್ಠೆ ಮತ್ತು ಅದನ್ನು ಸಮುದಾಯದ ಒಳಗೆನಿಂತು ಮಾಡುತ್ತಿರುವುದರಿಂದ.

ಆದರೆ ನಮ್ಮ ಆಧುನಿಕ ರಂಗದಲ್ಲಿ ಬಳಕೆಯಾಗುವ ಅತಿ ಬೌದ್ಧಿಕ ತಾಂತ್ರಿಕ ಅಳವಡಿಕೆಗಳು ಜನರನ್ನು ತಲುಪಬೇಕಾದ ರೀತಿಯಲ್ಲಿ ತಲುಪದೆ ಬರೀ ಗೀಳಿನ ಪ್ರದರ್ಶನಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ಆಧುನಿಕ ರಂಗಭೂಮಿ ಜನಪದರಿಂದ ನಿಷ್ಠೆ ಮತ್ತು ಸಾಮುದಾಯಿಕತೆಯನ್ನು ಕಲಿಯಬೇಕಿದೆ. ಆದರೆ ಸಮುದಾಯಗಳಿಂದ ದೂರ ಈಗಾಗಲೇ ಇದು ನಡೆದಿರುವುದರಿಂದ ಮತ್ತು ಹೆಚ್ಚು ಹೆಚ್ಚು ವ್ಯಾವಹಾರಿಕವಾಗಿ ಬೆಳೆಯುತ್ತಿರುವುದರಿಂದ ಸದ್ಯಕ್ಕೆ ತನ್ನದೇ ಸಮಾನತೆಯ ಆಶಯದ ಸಿದ್ಧಾಂತಗಳ ನೆರವಿಂದ ಆಧುನಿಕ ರಂಗಭೂಮಿ ಜನಮಾನಸದಲ್ಲಿ ನೆಲೆಯಾಗಬೇಕಿದೆ.

**ಅಡಿಟಿಪ್ಪಣಿ**

1. ನಾವಡ. ಎ.ವಿ., ಕರ್ನಾಟಕ ಸಂಶೋಧನಾ ಜಾನಪದ. ಸಂ. ನಾವಡ. ಎ. ವಿ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ. ಗೋಟಗೋಡಿ.2014 :ಪುಟ

2. ಇಂದ್ವಾಡಿ ವೆಂಕಟೇಶ. ಮಂಟೇಸ್ವಾಮಿ ಕಾವ್ಯ. ಪ್ರಸಾರಾಂಗ. ಹಂಪಿ ವಿಶ್ವವಿದ್ಯಾಲಯ 2012

***

## 6. ಜನಪದ ಮಹಾಕಾವ್ಯಗಳ ಸ್ವರೂಪ

ಡಾ. ರವಿಶಂಕರ್ ಎ.ಕೆ

ಮನುಷ್ಯನ ಸೃಷ್ಟಿಯೊಂದಿಗೆ ಪ್ರಾರಂಭವಾದ ಜನಪದವು ಇಂದಿಗೂ ಅವನ ಬದುಕಿನ ಭಾಗವಾಗಿದೆ. ಆದರೆ ಜನಪದದ ಸ್ವರೂಪ ನಿತ್ಯವೂ ಬದಲಾಗುತ್ತಿರುವ ಸಂಜೀವಿನಿ. ಪ್ರಪಂಚದ ಎಲ್ಲಾ ಸಾಹಿತ್ಯಗಳು ತನ್ನ ಪರಿಸರದ ಜನಪದ ಬೇರುಗಳಿಂದ ಚಿಗುರೊಡೆದು ತನ್ನ ಬೆಳವಣಿಗೆಯ ಶಿಸ್ತಿನಲ್ಲಿ ಹೊಸ ಹೆಸರುಗಳನ್ನು ಪಡೆದಿವೆ. ಹಾಗಾದರೆ ಎಲ್ಲಾ ಮಹಾಕಾವ್ಯಗಳ ತಿರುಳು ಜನಪದ ಸ್ವರೂಪದ ಆಂಶಿಕ ರಚನೆಯನ್ನು ಒಳಗೊಂಡಿರುತ್ತದೆ. ಭಾರತೀಯ ಪರಿಸರದಲ್ಲಿ ಸೃಷ್ಟಿಗೊಂಡಿರುವ ರಾಮಾಯಣ, ಮಹಾಭಾರತ ಹಾಗೂ ಪಂಚಮಹಾಕಾವ್ಯಗಳ ಕಥೆಯು ಜನಪದರ ಬದುಕಿನಿಂದಲೇ ರಚನೆಯಾಗಿದೆ. ಆದರೆ ಕಾವ್ಯದ ರಚನೆಯು ಆಯಾ ಭಾಷಾ ಚೌಕಟ್ಟಿನಲ್ಲಿ ಬಂದಿಯಾಗಿದೆ. ಎಲ್ಲಾ ಕಾವ್ಯಗಳ ಸೃಷ್ಟಿಯು ಜನಪದ ಕಥೆಗಳಿಂದಲೇ ರಚನೆಯಾಗಿರುತ್ತದೆ.

ಒಂದು ಮಹಾಕಾವ್ಯವನ್ನು ಯಾವ ಯಾವ ಸ್ವರೂಪದಿಂದ ಗಮನಿಸಬಹುದು ಎಂದಾಗ ಒಂದು ತಾಂತ್ರಿಕ ಚಿಂತನೆಯು ನಮ್ಮಲ್ಲಿ ಮೂಡುತ್ತದೆ. ಈ ಚೌಕಟ್ಟಿನ ಸ್ವರೂಪವನ್ನು ಸಂಸ್ಕೃತ ಸಾಹಿತ್ಯ ನಮಗೆ ಪರಿಚಯಿಸಿತು. ಈ ಮಾನಂದಂಡದಲ್ಲಿ ನಮ್ಮ ಕನ್ನಡದ ಪಂಪನಾದಿಯಿಂದ ಕುವೆಂಪು ತನಕ ಶಿಸ್ತು ಬದ್ಧಕಾರ್ಯಗಳು ಜರುಗಿದವು. ಆದರೆ ಮಹಾಕಾವ್ಯದ ಸ್ವರೂಪ ಹೇಗೆ ಸೃಷ್ಟಿಗೊಂಡಿತು ಎಂಬುದನ್ನು ಜಿ.ಎಸ್ ಶಿವರುದ್ರಪ್ಪ ಅವರ ಚಿಂತನೆಯ ಮೂಲಕ ನಿರ್ವಚಿಸುವುದು ಸೂಕ್ತವೆನಿಸುತ್ತದೆ.

"ನಾಗರಿಕತೆಯ ವಿಕಾಸದ ಒಂದು ಹಂತದಲ್ಲಿ, ಸಮಾಜ ವ್ಯವಸ್ಥೆಗೊಂಡು ಮೌಲ್ಯಗಳು ರೂಪುಗೊಂಡ ಪರಿಸರದಲ್ಲಿ ಯಾವ ವ್ಯಕ್ತಿ ತನ್ನ ಕಾಲದ ಮೌಲ್ಯಗಳ ಪ್ರತಿನಿಧಿಯೆಂಬಂತೆ ಎದ್ದು ನಿಲ್ಲುತ್ತಾನೆಯೋ ಮತ್ತು ವಿರುದ್ಧ ಶಕ್ತಿಗಳೊಡನೆ ಹೋರಾಡಿ, ತನ್ನ ಸಮಾಜದ ಆತ್ಮಗೌರವ – ಪ್ರತಿಷ್ಠೆಗಳ ಪ್ರತಿನಿಧಿಯಂತೆ ತೋರುತ್ತಾನೋ ಅವನು ಆ ಸಮಾಜದ ನಾಯಕನಾಗುತ್ತಾನೆ; ವೀರನಾಗುತ್ತಾನೆ. ಧೈರ್ಯಶಾಲಿಯೂ, ಬುದ್ಧಿವಂತನೂ, ನಿಸ್ವಾರ್ಥನೂ ಆದ ಇಂತಹ ವ್ಯಕ್ತಿ ಮಾನವ ಸಮಾಜದ ಪ್ರತಿನಿಧಿಯಾಗಿ, ಮಾರ್ಗದರ್ಶಿಯಾಗಿ, ಸಂರಕ್ಷಕ ಶಕ್ತಿಯಾಗಿ, ಆರಾಧ್ಯ ವ್ಯಕ್ತಿಯಾಗಿ ಗೋಚರಿಸುತ್ತಾನೆ. ಇಂತಹ ಪರಿಸರದಲ್ಲಿ ಹುಟ್ಟಿಕೊಳ್ಳುತ್ತಾರೆ– ರಾಮ, ಅರ್ಜುನ, ಯುಧಿಷ್ಠಿರ, ಹೆಕ್ಟರ್, ಒಡಿಸಿಯಸ್, ಅಖಿಲೀಸ್ ಇಂಥವರು. ಮುಂದಿನವರ ಪಾಲಿಗೆ ಇವರ ನಡವಳಿಕೆಗಳು ಆದರ್ಶವಾಗುತ್ತವೆ. ಇಂತಹ ವೀರರನ್ನು ಕುರಿತು, ಅವರ ಬದುಕು ಹಾಗೂ ಸಾಹಸಗಳನ್ನು ಕುರಿತು ಜಾನಪದ ಗೇಯ ರೂಪದ ಲಾವಣಿಗಳು ಅಥವಾ ವೀರಗಾಥೆಗಳು ಹುಟ್ಟಿಕೊಳ್ಳುತ್ತವೆ. ಈ ವೀರಗಾಥೆಗಳು ಬಾಯಿಂದ ಬಾಯಿಗೆ ಸಾಗುತ್ತಾ, ಚಾರಣರಿಂದ ಅಥವಾ ಸಂಚಾರೀಗಾಯಕರಿಂದ ಅಥವಾ ಕುಶೀಲವರಿಂದ ದೇಶದ ವಿವಿಧ ಭಾಗಗಳಲ್ಲಿ ಪ್ರಸಾರವಾಗುತ್ತವೆ. ಈ ಸಂಚಾರೀ ಗಾಯಕರು ತಾವು ಕೇಳಿದ ಕಥೆಗೆ ಬಣ್ಣಕಟ್ಟಿ, ಅದಕ್ಕೆ ತಮ್ಮದೇ ಆದ ಇನ್ನೂ ಕೆಲವು ಸಂಗತಿಗಳನ್ನು ಸೇರಿಸುತ್ತಾ, ಕಥೆಯ ವೈವಿಧ್ಯತೆಗಳಿಗೂ, ಭಿನ್ನತೆಗಳಿಗೂ ಕಾರಣರಾಗುತ್ತಾರೆ. ಹೀಗಾಗಿ ಮೊದಲು ಬಿಂದು ರೂಪವಾದ ಒಂದು ವಾಸ್ತವ ಕಥಾಸಂಗತಿ, ಬೇರೆ ಬೇರೆಯ ರೂಪಗಳನ್ನು ತಾಳಿದ ಕಥಾಪುಂಜಗಳಾಗಿ ಮುಂದುವರಿಯುತ್ತದೆ. ಇಂತಹ ಕಥಾಪುಂಜಗಳನ್ನೆ 'ವೀರಗಾಥಾ ಚಕ್ರ' (Ballad cycles) ಎನ್ನುತ್ತಾರೆ. ಹೀಗೆ ಗ್ರಾಮೀಣ ಕವಿಗಳಿಂದ ಹುಟ್ಟಿಕೊಂಡು ತೋಂಡೀಸಂಪ್ರದಾಯ (Oral tradition) ದಲ್ಲಿ ಬಂದ ಈ ಗಾಥೆಗಳು ವಿವಿಧ ಕಥಾಚಕ್ರಗಳಾಗಿ ಚಲಿಸುತ್ತಾ ಚಲಿಸುತ್ತಾ ಕಡೆಗೆ ಒಬ್ಬ ಶಕ್ತನಾದ ಕವಿಯ ಆಯಸ್ಕಾಂತ ಪ್ರತಿಭೆಯೊಳಗೆ ಕೂಡಿಕೊಂಡು ಒಂದು ಮಹಾಕಾವ್ಯವಾಗಿ ರೂಪುಗೊಳ್ಳುತ್ತದೆ. 'ಇಲಿಯಡ್' 'ಒಡೆಸ್ಸಿ'ಗಳು ರೂಪುಗೊಂಡದ್ದು ಹೀಗೆ; 'ರಾಮಾಯಣ' 'ಮಹಾಭಾರತ'ಗಳು ರೂಪುಗೊಂಡದ್ದು ಹೀಗೆ; ಇಂಗ್ಲೆಂಡಿನ 'ಬೀವುಲ್ಫ್' ರೂಪುಗೊಂಡದ್ದು ಹೀಗೆ; ಫಿನ್ಲೆಂಡಿನ 'ಕಾಲೇವಾಲ' ರೂಪುಗೊಂಡದ್ದು ಹೀಗೆ."ಈ ರೀತಿಯಲ್ಲಿ ಎಲ್ಲಾ ಮಹಾಕಾವ್ಯಗಳ ಉಗಮವು ಜನಪದ ಸೃಷ್ಟಿಯ ಸ್ವರೂಪದಿಂದಲೇ ಗುರ್ತಿಸಿದ್ದಾರೆ.

ಈ ಶಿಷ್ಟ ಮಹಾಕಾವ್ಯವು ತನ್ನದೇ ಸ್ವರೂಪವನ್ನು ನಿರ್ದೇಶಿಸುತ್ತದೆ. ಅದು ಕಥಾ ನಾಯಕನ ವರ್ಣನೆಗೆ, ಸುಖಕ್ಕೆ, ಹೋರಾಟಕ್ಕೆ ಅನುಕೂಲವಾಗುವಂತೆ ನಿರ್ಮಿತಗೊಂಡಿವೆ. ಅಷ್ಟದಶಾವರ್ಣನೆಗಳು ಈ ವಿಚಾರಗಳನ್ನು ಸ್ಪಷ್ಟಪಡಿಸುತ್ತವೆ. ನಾಲ್ಕು ಪುರುಷಾರ್ಥಗಳ ವಿವರ, ದುಷ್ಟರ ನಿಂದನೆ, ಶಿಷ್ಟರ ವರ್ಣನೆ, ಸೂರ್ಯೋದಯ, ಚಂದ್ರೋದಯ ಹೀಗೆ ಪ್ರಕೃತಿಯ ವಿವಿಧ ವರ್ಣನೆಗಳು, ಭಾವನೆಗಳು ಹೀಗೆ ಹದಿನೆಂಟು ವಿಚಾರಗಳು ಇರಬೇಕೆಂದು

ISBN – 978-93-5526-247-9

ಲಾಕ್ಷಣಿಕರು ಚಿಂತನೆ ನಡೆಸಿದ್ದನ್ನು ಕುವೆಂಪುನಂತಹ ಮಹಾಕವಿಗಳು ಜನಪದ ಮಹಾಕಾವ್ಯ ಮಾದರಿಯನ್ನು ಅನುಸರಿಸಿ, ಈ ಶಿಷ್ಟ ಪರಂಪರೆಯನ್ನು ಕಳಚುತ್ತಾರೆ. ಹಾಗಾದರೆ ಈ ಜನಪದ ಮಹಾಕಾವ್ಯದ ಲಕ್ಷಣಗಳು ಇವೆಯೇ? ಇದ್ದರೆ ಯಾವ ಅಂಶಗಳಿಂದ ಸ್ವರೂಪಗೊಂಡಿವೆ ಎಂಬುದನ್ನು ಚರ್ಚಿಸೋಣ.

ಜನಪದ ಮಹಾಕಾವ್ಯಗಳ ಅಧ್ಯಯನವು ಮೂರು ಮಾದರಿಗಳಲ್ಲಿ ನಡೆದಿದೆ. ಪಾಶ್ಚಾತ್ಯ ಜನಪದ ಮಹಾಕಾವ್ಯಗಳು, ಭಾರತೀಯ ಮಹಾಕಾವ್ಯಗಳು ಹಾಗೂ ಕನ್ನಡ ಜನಪದ ಮಹಾಕಾವ್ಯಗಳ ಅಧ್ಯಯನ ಮಾದರಿಯಲ್ಲಿ ಗಮನಿಸಬಹುದು. ಈ ಅಧ್ಯಯನ ಮಾದರಿಯನ್ನು ನಮ್ಮ ಕನ್ನಡ ಮಹಾಕಾವ್ಯಗಳ ಸಂಪಾದನೆಯಲ್ಲಿ ಸುದೀರ್ಘ ಪ್ರಸ್ತಾವನೆಯೊಂದಿಗೆ ಚರ್ಚಿಸಲಾಗಿದೆ. ಇವುಗಳ ಅಧ್ಯಯನದೊಂದಿಗೆ ಲಭಿಸುವ ಸ್ವರೂಪವೆಂದರೆ ಜನಪದವು ಬುಡಕಟ್ಟು ಮಾದರಿಯ ಜನಸಮುದಾಯವು ಸಂಸ್ಕೃತಿಯಂತೆ ಕಂಡುಕೊಂಡ ಸಾಹಿತ್ಯದಿಂದ ಶ್ರೀಮಂತ ನೆಲೆಯ ಇಲ್ಲವೆ ನಾಗರೀಕ ನೆಲೆಯ ಜನಸಮುದಾಯವು ಸ್ಥಾಪಿತ ಮೌಲ್ಯಗಳಲ್ಲಿ ನಿರೂಪಿಸಿದ ಪದ್ಧತಿಗಳ ತನಕ ಒಂದೇ ಮಾದರಿಯ ಸ್ವರೂಪ ಅಭಿವ್ಯಕ್ತಗೊಳ್ಳುತ್ತದೆ.

ಪಾಶ್ಚಾತ್ಯರು ಗುರ್ತಿಸುವ ಮಹಾಕಾವ್ಯದ ಎರಡು ಪ್ರಕಾರದಲ್ಲಿ ವಾಚಿಕ ಮಹಾಕಾವ್ಯವೇ ಮೊದಲನೆಯದು. ಇದು ತೋಂಡಿ ಸಂಪ್ರದಾಯದ ವಾಕ್ಪರಂಪರೆಯಿಂದ ಬಂದುದು. ಇದಕ್ಕೆ ನಿರ್ದಿಷ್ಟವಾದ ಕವಿ ಎಂಬುದಾಗಲಿ, ಬದಲಾವಣೆಗೆ ಒಳಪಡದ ಶ್ಲೋಕ ರೂಪವಾಗಲಿ ಇರುವುದಿಲ್ಲ. ಪರಿಸರವು ಅಪೇಕ್ಷಿಸುವ ಕಾಲ–ಧರ್ಮಗಳಿಗೆ ಅನುಗುಣವಾಗಿ ಸೃಷ್ಟಿಗೊಂಡ ಕಥೆಯೇ ಜನಪದ ಸಾಹಿತ್ಯದ ವಸ್ತು. ಈ ಕಥೆಯಿಂದ ಎಲ್ಲಾ ಬಗೆಯ ಜನಪದ ಪ್ರಕಾರಗಳು ಸೃಷ್ಟಿಗೊಂಡವು. ಈ ಕಥಾ ಭೂಮಿಕೆಯನ್ನು ಬಾಯಿಂದ ಬಾಯಿಂದ ತಮ್ಮ ಪರಿಸರ, ಕಾಲ, ನೆನಪಿನ ಶಕ್ತಿಗೆ ಅನುಗುಣವಾಗಿ ಭಕ್ತಿಯಿಂದ ಸಾಗಿಸಿದ ಸಾಹಿತ್ಯವಿದು. ಇಲ್ಲಿ ಬದಲಾವಣೆಗೆ, ಸ್ವೀಕಾರಕ್ಕೆ ಸಂಪೂರ್ಣ ಅವಕಾಶವಿದೆ. ಪಾಶ್ಚಾತ್ಯರು ಗುರ್ತಿಸುವ ಎಪಿಕ್ ಅನ್ನು ವೀರಕಾವ್ಯ(ಹಿರಾಯಿಕ್ ಪೊಯೆಂ) ಎಂದು ಕರೆಯುವಾಗ ಜನಪದ ಬೇರಿನ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತವೆ. ಇಲಿಯಡ್ ಮಹಾಕಾವ್ಯದ ಗ್ರೀಕ್ ವೀರ ಅಖಿಲಸ್; ಈನಿಯಡ್ ಮಹಾಕಾವ್ಯದ ಏನಿಯಸ್ ಅಫ್ರೋಡೈಟಳ ಮಗ; ಪ್ಯಾರಡೈಸ್ ಲಾಸ್ಟ್‌ನ ಆಡಮ್ ಪಾತ್ರವು, ಕ್ರಿಸ್ತ ಪಾತ್ರಗಳ ಚರಿತ್ರೆಯು ಜನಪದ ಕಥೆಗಳ ಹಿನ್ನಲೆಯಲ್ಲಿಯೇ ನಿರೂಪಿತವಾಗಿವೆ. 1849ರಲ್ಲಿ ಎಲಿಯಾನ್ ಲೂನಾರ್ಟ್ ಅವರು ಮೂಲ ಫಿನಿಶ್ ಭಾಷೆಯಲ್ಲಿ ಸಂಗ್ರಹಿಸಿದ 'ಕಲೆವಲ' ಕೃತಿಯು ಪ್ರಪಂಚದ ಜನಪದ ಲೋಕದಲ್ಲಿಯೇ ವಿಶಿಷ್ಟ ಸಂಗ್ರಹವಾಗಿ ಅಧ್ಯಯನಕ್ಕೆ ಒಳಪಟ್ಟಿದೆ. ಈ ಎಪಿಕ್ ಮೂಲದಲ್ಲಿ ಇಂದಿಗೂ ಜಾನಪದ ಚಹರೆಗಳು ಜೀವಂತವಾಗಿರುವುದೆಂದರೆ ಎಪಿಕ್ ಥಿಯೇಟರ್‌ನಲ್ಲಿ ಹಾಗೂ ಅದರ ಮುಂದುವರೆದ ರಂಗಭೂಮಿಯ ಇಂದಿನ ಲಕ್ಷಣಗಳಲ್ಲಿ ಗುರ್ತಿಸಬಹುದು. ಇವು ಇಂದಿಗೂ ಹೇಳುತ್ತಿರುವ ಗ್ರೀಕ್ ಕಥೆಗಳು ಜನಪದದ ಕಥೆಗಳೇ ಆಗಿವೆ. ಇವುಗಳು ಬಿತ್ತರಿಸುವ ಎಲ್ಲಾ ಲಕ್ಷಣಗಳು ಜನಪದ ಮಹಾಕಾವ್ಯದ ಸ್ವರೂಪವನ್ನು ಮುಕ್ತವಾಗಿ ತಿಳಿಸುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ನಿರೂಪಿತವಾದ ಎಲ್ಲಾ ಧರ್ಮಗಳ ಕಥೆಗಳೂ ಕೂಡ ಜನಪದ ಮಹಾಕಾವ್ಯಗಳ ಚಿಕ್ಕ ಚಿಕ್ಕ ಬೇರುಗಳಾಗಿ ಅಸ್ಥಿತ್ವವನ್ನು ನಿರೂಪಿಸುತ್ತವೆ.

ಸಿ.ಎಂ ಬೋವು ಅವರು ನಿರೂಪಿಸುವ ವ್ಯಾಖ್ಯಾನದಂತೆ ಶಿಷ್ಟ ಹಾಗೂ ಜನಪದ ಮಹಾಕಾವ್ಯಗಳಲ್ಲಿ "ಈ ಎರಡು ಬಗೆಯ ಮಹಾಕಾವ್ಯಗಳಲ್ಲಿ ವಾಚಿಕ ಮಹಾಕಾವ್ಯವೇ ಶುದ್ಧವಾದ, ಸಹಜ, ನೇರ, ನಿರರ್ಗಳ, ನಾಗರೀಕತೆಯಿಂದ ಕಲುಷಿತವಾಗದ ಕವಿವಾಣಿ" ಎಂದು ಜನಪದ ಮಹಾಕಾವ್ಯದ ಮಹತ್ವವನ್ನು ತಿಳಿಸುತ್ತಾನೆ. ಹಾಗಾದರೆ ಈ ಭಾರತೀಯ ಪರಂಪರೆಯೂ ಸೇರಿ ಜನಪದ ಮಹಾಕಾವ್ಯವು ನಿರೂಪಿಸುವ ಸ್ವರೂಪವನ್ನು ಹೀಗೆ ತಿಳಿಯಬಹುದು. ಕನ್ನಡದ ಜನಪದ ಮಹಾಕಾವ್ಯಗಳ ಕುರಿತು ಸುದೀರ್ಘ ಇತಿಹಾಸವನ್ನೇ ಸೃಷ್ಟಿಸಿದವರು ಜಿ.ಶಂ. ಪರಮಶಿವಯ್ಯ ಇವರು ನೀಡುವ ಜನಪದ ಪರಂಪರೆಯ ಲಕ್ಷಣಗಳ ಅಧ್ಯಯನದ ನಂತರದ ಕೆಲವು ವಿಚಾರಗಳನ್ನು ಇಲ್ಲಿ ಚರ್ಚಿಸಬಹುದು. ಈ ಸ್ವರೂಪವು ತಾರ್ಕಿಕ ಚಿಂತನೆಗಳನ್ನೂ ಚರ್ಚಿಸುತ್ತದೆ.

1. ಅಷ್ಟದಶಾವರ್ಣನೆಯು ಇಲ್ಲದೇ ಅದಕ್ಕೂ ಮಿಗಿಲು ಅಂಶಗಳು ಜನಪದದಲ್ಲಿ ಪರಿಸರ ಹಾಗೂ ಹಾಡುಗನ ಪ್ರಕೃತಿಯ ಮೇರೆಗೆ ಬಂದು ಹೋಗುತ್ತದೆ.

2. ಇಲ್ಲಿ ಸಾಂಸ್ಕೃತಿಕ ನಾಯಕರು ವೀರತನವನ್ನು ಹೊಂದಿದ್ದರೂ ಹಲವು ಉಪನಾಯಕರೂ ತಮ್ಮದೇ ಆದ ವೀರತನದ ಮೂಲಕ 'ನಾಯಕ' ಪ್ರಧಾನತೆಯನ್ನು ಕಳಚುತ್ತವೆ. ದೇವರು, ಜನಾಂಗ ಪ್ರಧಾನತೆಯ ಮೇರೆಗೆ ನಾಯಕತ್ವವನ್ನು ಹೇಳುತ್ತಿದ್ದರೂ ಅದರ ಸುತ್ತಲೂ ಉಪನಾಯಕತ್ವದ ಗುಣಗಳು ನಿಚ್ಚಳವಾಗಿ ಬೆಳಗುತ್ತವೆ.

ISBN – 978-93-5526-247-9

3. ಶಿಷ್ಟ ಮಹಾಕಾವ್ಯದಲ್ಲಿ ಜನಪದದ ಅಂಶಗಳು ಸಂಪೂರ್ಣವಾಗಿ ಬೆರೆತುಹೋಗಿರುತ್ತವೆ. ಆದರೆ ಜನಪದದೊಳಗೆ ಶಿಷ್ಟ ಲಕ್ಷಣಗಳು ಒಂದಿನತೂ ನುಸುಳಲಾರವು.

4. ಲಾವಣಿ, ಕಥನಗೀತೆ, ಸುದೀರ್ಘ ಹಾಡುಗಳೇ ಮಹಾಕಾವ್ಯದ ಸ್ಥಾನವನ್ನು ಪಡೆಯುತ್ತವೆ. ಜನಪದ ಮಹಾಕಾವ್ಯವು ಹಾಡುಗನ ದೃಷ್ಟಿಯಿಂದ ಮುಗಿಯುತ್ತದೆ. ಎಷ್ಟು ದಿನಗಳು ಬೇಕಾದರೂ ಹಾಡನಲ್ಲ ಗಾಯಕರು ನಮ್ಮಲ್ಲಿ ಜನಪದ ಮಾಹಾಕಾವ್ಯದ ಶಕ್ತಿಯನ್ನು ವಿಸ್ತರಿಸಿಹೋಗಿದ್ದಾರೆ.

5. ಜನಪದ ಮಹಾಕಾವ್ಯದಲ್ಲಿ ವಸ್ತುಗಳು, ಪ್ರಾಣಿ–ಪಕ್ಷಿಗಳೂ ಕೂಡ ಮಾತನಾಡಬಲ್ಲವು. ಅತಿಮಾನುಷ ಶಕ್ತಿಯು ಮನುಷ್ಯ ಶಕ್ತಿಯನ್ನು ಮೀರಿ ಕೆಲವು ಸಂಕೇತ, ರೂಪ ಭಾಷೆಗಳ ಮೂಲಕ ಎಲ್ಲಾ ಕಥೆಗಳಲ್ಲೂ ಒಂದು ರೀತಿಯ ಸಾಂಘಿಕ ಸ್ವರೂಪಕ್ಕೆ ಒಳಗಾಗಿರುತ್ತದೆ.

6. ಮೌಖಿಕ ಪರಂಪರೆಯಲ್ಲಿ ಬಂದ ಜನಪದ ಮಹಾಕಾವ್ಯಗಳು ಪರಿಸರದಿಂದ ಪರಿಸರಕ್ಕೆ ಬದಲಾವಣೆಯನ್ನೂ, ಸ್ವೀಕಾರವನ್ನೂ ಪಡೆಯುತ್ತಾ ಸ್ಥಳೀಯ ದೇವರು, ನಾಯಕ–ನಾಯಕಿಯ ಶಕ್ತಿಯ ಮೇಲೆ ಪ್ರಭಾವಿಸುತ್ತಾ ಹೊಸಬಗೆಯ ರೂಪಾಂತರಗಳನ್ನು ಸಾಧಿಸುವುದೇ ಪ್ರಮುಖ ಲಕ್ಷಣವಾಗಿದೆ.

7. ಹಲವು ಕಥನಗೀತೆಗಳು, ಲಾವಣಿಗಳು ಹಾಗೂ ಖಂಡಕಾವ್ಯಗಳು ಸೇರಿ ಒಂದು ಮಹಾಕಾವ್ಯವನ್ನು ನಿರೂಪಿಸುತ್ತವೆ. ಕೆಲವೊಮ್ಮೆ ಒಂದು ಜನಪದಗೀತೆಯೂ ಕೂಡ ಬಹುದೊಡ್ಡ ಮಹಾಕಾವ್ಯವನ್ನು ಸೃಷ್ಟಿಸಬಲ್ಲದು. ಏಕೆಂದರೆ ಜನಪದ ಸಾಹಿತ್ಯದ ಬೆಳವಣಿಗೆಯು ಅತ್ಯಂತ ಸುದೀರ್ಘ ಹಾಗೂ ವಿಶಾಲವಾಗಿದೆ. ಅಮೇರಿಕಾದ ಜನಪದ ಚಿಂತಕ ಸ್ಟುಹರ್ಟ್ ಬ್ಲಾಕ್ ಬರ್ನ್ ಅವರು ಭಾರತೀಯ ಜನಪದವನ್ನು ಎ.ಕೆ ರಾಮಾನುಜನ್ ಅವರ ಜೊತೆಯಲ್ಲಿ ಸುದೀರ್ಘವಾಗಿ ಅಧ್ಯಯನ ನಡೆಸಿದ್ದಾರೆ. ಅವರ ಈ ವ್ಯಾಖ್ಯಾನವು ಅತ್ಯಂತ ಮಹತ್ವಪೂರ್ಣವಾದುದು.

"Indian Oral Epics Are Characterized By Several Formal Features That Literary And Folklore Scholars Have Identified With The Epic Genre Wordwide.. Epic Is Narrative, It Is Poetic And It Is Heroic"

ಒಟ್ಟಾರೆಯಾಗಿ ಜನಪದ ಮಹಾಕಾವ್ಯದ ಸ್ವರೂಪವನ್ನು ಗ್ರಹಿಸುವಾಗ ಜನಪದ ಮಹಾಕಾವ್ಯವನ್ನು ಸ್ಪಷ್ಟಗೊಳಿಸಿಕೊಳ್ಳುವುದು ಮುಖ್ಯ ಚಿಂತನೆಯಾಗಿದೆ. ಪ್ರಪಂಚದ ಎಲ್ಲಾ ಮಹಾಕಾವ್ಯಗಳು ಜನಪದ ಬೇರಿನಿಂದ ಸೃಷ್ಟಿಗೊಂಡ ವಿಭಿನ್ನ ಚಿಗುರುಗಳ ಎಂಬುದನ್ನು ತಿಳಿಯುವುದು ಹಾಗೂ ಜನಪದ ನೆಲೆಯಲ್ಲಿ ಉಳಿದ ಎಲ್ಲಾ ಬಗೆಯ ಕಥನಪರಂಪರೆಯು ಕಾವ್ಯಮಾದರಿಯಲ್ಲಿ ನಿರೂಪಿಸುವ ಸ್ವರೂಪವೇ ಈ ಜನಪದ ಮಹಾಕಾವ್ಯದ ಸ್ವರೂಪವೆಂದು ನಿರ್ಧರಿಸಬಹುದು.

ಕರ್ನಾಟಕದಲ್ಲಿ ಜನಪ್ರಿಯ ಇರುವ ಜನಪದ ಮಹಾಕಾವ್ಯಗಳು

**1. ಮಂಟೇಸ್ವಾಮಿ ಕಾವ್ಯ**

ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ, ಹಾಸನ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ ಈ ಆರು ಜಿಲ್ಲೆಗಳ ಸಂಕೇತವಾಗಿ ದಕ್ಷಿಣ ಕರ್ನಾಟಕದ ವಿಶೇಷ ಸಂಸ್ಕೃತಿಯೇ ಮಂಟೇಸ್ವಾಮಿ ಕಾವ್ಯಪರಂಪರೆ. ಮಂಟೇಸ್ವಾಮಿ ಕುರಿತು 'ನೀಲಗಾರರು' ಹೇಳುವ ಇತಿಹಾಸ ಮಹಾಕಾವ್ಯದ ಎಲ್ಲಾ ಪರಿಧಿಗಳನ್ನು ಮೀರಿ ನಿಂತಿದೆ. 12ನೇ ಶತಮಾನದ ವಚನಕಾರರೊಂದಿಗೆ ಅದರಲ್ಲೂ ಅಲ್ಲಮಪ್ರಭುವಿನೊಂದಿಗೆ ಜೊತೆಯಾಗುವ ಮಂಟೇಸ್ವಾಮಿ ಕಥನವು ಅತ್ಯಂತ ಪ್ರಾಚೀನ ಕುರುಹಗಳ ಪವಾಡಗಳ ಕಥೆಯಾಗಿದೆ. ಮಂಟೇಸ್ವಾಮಿಯ ಶಿಷ್ಯನಾದ ಸಿದ್ದಪ್ಪಾಜಿಯು ಕೇಳುವ ಕಬ್ಬುಣದ ಭಿಕ್ಷಾಕ್ಕೆ ಒಂಬತ್ತು ಪವಾಡಗಳ ಶಿಕ್ಷೆ ನಡೆಯುವ ಪ್ರಸಂಗವು ವಿಶೇಷವಾದುದು. ಮಂಟೇಸ್ವಾಮಿಯ ಶಿಷ್ಯರ ಕ್ಷೇತ್ರಗಳು ಇಂದಿಗೂ ಪ್ರಸಿದ್ಧಿ ಪಡೆದಿವೆ. ಕೊಳ್ಳೆಗಾಲ ತಾಲ್ಲೂಕಿನ ಚಿಕ್ಕಲ್ಲೂರು ಶ್ರೀಕ್ಷೇತ್ರದಲ್ಲಿ ಸಿದ್ದಪ್ಪಾಜಿಯ ನೆಲೆ, ಮಟ್ಟಹಳ್ಳಿಯಲ್ಲಿ ದೊಡ್ಡಮ್ಮತಾಯಿ ಮತ್ತು ಫಲಾರದಯ್ಯಯರ ನೆಲೆ, ಕಾವೇರಿ ದಡದ ಕಪ್ಪಡಿಯಲ್ಲಿ ರಾಚಪ್ಪಾಜಿ ಮತ್ತು ಚೆನ್ನಾಜಮ್ಮರ ನೆಲೆ ಹೀಗೆ ಮೊದಲಾದ ಶಿಷ್ಯರಿಗೆ 'ನೀವು ಮೆರೆಯುವ ದೇವರು ಆಗಿ ನಾನು

ISBN – 978-93-5526-247-9

ಮರೆಯುವ ದೇವರಾಗುವೆ' ಎಂದು ಸಿದ್ದಪ್ಪಾಜಿಯು ಕಂಡಾಯ ಹರಸುವ ಹಲವು ಪ್ರಸಂಗಗಳು ಸುದೀರ್ಘವಾದ ಮಹಾಕಾವ್ಯ ಸ್ವರೂಪವನ್ನು ತಿಳಿಸುತ್ತವೆ.

**2. ಮಲೆಮಾದೇಶ್ವರ ಕಾವ್ಯ**

ಮಲೆ ಮಾದೇಶ್ವರನ ಕಾವ್ಯವು 1750ರಿಂದ 1999ರ ತನಕವೂ ವಿವಿಧ ಕಡೆ ವಿವಿಧ ಮಾದರಿಯಲ್ಲಿ ದೊರೆತಿರುವ ಮಹಾಕಾವ್ಯವಾಗಿದೆ. ಶಿಷ್ಟ ಕಾವ್ಯಪರಂಪರೆಯಲ್ಲಿ 1750ರಲ್ಲಿ ಕೊಳ್ಳೆಗಾಲ ತಾಲ್ಲೂಕಿನ ಮಾದೇಶ್ವರ ಬೆಟ್ಟದ ಮಿಣ್ಯಗ್ರಾಮದ ಗುರುಸಿದ್ಧ ಕವಿಯ 'ಮಾದೇಶ್ವರ ಸಾಂಗತ್ಯ'. 1836ರಲ್ಲಿ ದೊರೆತ ದೇವಚಂದ್ರನ 'ರಾಜಾವಳಿ'ಕಥೆಯಲ್ಲಿ ಮಾದೇಶ್ವರನ ಕುರಿತು ಉಲ್ಲೇಖವಿದೆ. ಫ.ಗು ಹಳಕಟ್ಟಿ ಅವರ ಸಂಗ್ರಹಿಸಿದ 1932ರಲ್ಲಿ ಪ್ರಕಟವಾದ 'ನಿರಂಜನ ವಂಶ ರತ್ನಾಕರ' ಕೃತಿಯಲ್ಲಿ, 1933ರಲ್ಲಿ ಕುಂತೂರಿನ ಸಿ. ಸಂಗಪ್ಪ ಶಾಸ್ತ್ರೀಗಳು ರಚಿಸಿದ 'ಶ್ರೀ ಸುತ್ತೂರು ಸಿಂಹಾಸನ ಗುರುಪರಂಪರೆ' ಎಂಬ ಭಾಮಿನಿ ಷಟ್ಪದಿ ಕೃತಿಯಲ್ಲಿ ಉಲ್ಲೇಖವಿದೆ. ಮೈಸೂರು, ತುಮಕೂರು, ಮಂಡ್ಯ, ಬೆಂಗಳೂರು ಈ ಜಿಲ್ಲೆಗಳಲ್ಲಿ ಪ್ರಮುಖವಾಗಿ ಹಾಡುವ ಗಾಯಕರು ಹಲವಾರು ರೀತಿಯಲ್ಲಿ ಮಲೆಯ ಮಾದೇಶ್ವರ ಮಹಾಕಾವ್ಯವನ್ನು ಹಗಲು ರಾತ್ರಿ ಹಾಡಿದ್ದಾರೆ.

**3. ಮೈಲಾರಲಿಂಗನ ಕಾವ್ಯ**

ಬಳ್ಳಾರಿ ಜಿಲ್ಲೆಯ ಹೀರೆಮೈಲಾರವು ಸಾಂಸ್ಕೃತಿಕವಾಗಿ ವಿಶೇಷತೆಗಳನ್ನು ಒಳಗೊಂಡಿದೆ. ಇಲ್ಲಿನ ಮೈಲಾರದೇವರ ಕುರಿತು ಹಲವು ವೀರಗಲ್ಲು, ಮಾಸ್ತಿಗಲ್ಲು, ಶಾಸನಲಿಪಿಗಳು ಚರಿತ್ರೆಯನ್ನು ತೆರೆದಿಡುತ್ತವೆ. ರಾಕ್ಷಸರ ನಾಶಕ್ಕಾಗಿ ಜೀವನವನ್ನು ಮುಡುಪಿಟ್ಟ ಮೈಲಾರದೇವರ ಕಥೆಯನ್ನು ಹೇಳುತ್ತದೆ. ಒಟ್ಟು ಹತ್ತು ಕಡೆ ಮೈಲಾರ ಕ್ಷೇತ್ರದ ವಿಶೇಷತೆಗಳಿವೆ. ಮೈಲಾರಲಿಂಗನ ಕಥೆಯಲ್ಲಿ ಪವಾಡಗಳೇ ಹಲವು ಕಂಡುಬರುತ್ತವೆ. ಗೊರವರ ಆಚರಣೆಯಲ್ಲಿ ಈ ಕಾವ್ಯವು ಅತ್ಯಂತ ಭಕ್ತಿಯಿಂದ ಸಾಗುತ್ತದೆ.

**4. ಸಿರಿ ಪಾಡ್ದನ ಮತ್ತು ಕೋಟಿ ಚೆನ್ನಯ್ಯ**

ಸಿರಿ ಪಾಡ್ದನವು ದಕ್ಷಿಣ ಕನ್ನಡದ ಜನಪ್ರಿಯ ಜನಪದ ಮಹಾಕಾವ್ಯ. ತುಳುನಾಡಿನ ಮಹಾಕಾವ್ಯವಾಗಿ ಸಿರಿ ಮಹಾಕಾವ್ಯವನ್ನು, ಕೋಟಿಚೆನ್ನಯ್ಯ ಕಥೆಯನ್ನು ಇಂದಿಗೂ ಗೌರವಿಸುತ್ತಿದ್ದಾರೆ. ತುಳುನಾಡಿನ ಸತ್ಯಾನಂದಪುರದ (ಕಾರ್ಕಳ ತಾಲ್ಲೂಕು) ಬೆರ್ಮಾಳ್ವ ಎಂಬ ಶ್ರೀಮಂತನ ಭಕ್ತಿ ಹಾಗೂ ಅಪೇಕ್ಷಿತ ದೈವ ಫಲವೇ ಈ ಸಿರಿ ಈ ಸಿರಿಯು ಬದುಕಿನ ಧೀಮಂತಿಕೆ ಹಾಗೂ ಕಾಂತಪೂಂಜನ ಹೀನಗುಣದ ವಿರುದ್ಧ ನಡೆಸಿದ ಹೋರಾಟ ಇಲ್ಲಿ ವಿಶೇಷವಾದುದು. ಹೆಣ್ಣು ಸೃಷ್ಟಿಯೂ, ಸರ್ವನಾಶದ ಸಂಕೇತವೂ ಹೌದು ಎಂಬ ವಿಶೇಷತೆಯನ್ನು ತಿಳಿಸುವ ಮಹಾಕಾವ್ಯವಿದು.

ಕೋಟಿ ಚೆನ್ನಯ್ಯನ ಕಥೆಯು ಒಂದು ವೀರ ಮಹಾಕಾವ್ಯವಾಗಿದೆ. ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ಹಾಗೂ ಪುತ್ತೂರು ಗಡಿಭಾಗದಲ್ಲಿ 450ವರ್ಷಗಳ ಹಿಂದೆ ನಡೆದಿದೆ ಎನ್ನಬಹುದಾದ ಕಥೆಯು ಇಂದಿಗೂ ಜನಪದ ಸಿರಿಯಾಗಿ ಉಳಿದ ಮಹಾಕಾವ್ಯ. ಕೋಟಿ ಮತ್ತು ಚೆನ್ನಯ್ಯ ಎಂಬ ಅವಳಿ ವೀರರು ಶೋಷಿತರ ಪರವಾಗಿ ಹೋರಾಡಿ ಮಡಿದ ಸಾಹಸದ ಕಥೆಯಿದು. ಇದು ಇಂದು ದಕ್ಷಿಣ ಕನ್ನಡದಲ್ಲಿ ಭೂತಾರಾಧನೆಯಾಗಿ ಪ್ರತಿ ಮನೆಯ ಪದ್ಧತಿಯಾಗಿ ಆಚರಣೆಯಾಗುತ್ತಿದೆ.

**5. ಜುಂಜಪ್ಪನ ಕಾವ್ಯ**

ಜನಪದ ಮಹಾಕಾವ್ಯಗಳಲ್ಲಿಯೇ ಕಥೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಬಹಳ ಮಹತ್ವದ ಸ್ಥಾನವನ್ನು ಪಡೆದಿರುವ ಕಾವ್ಯವಿದು. ಜುಂಜಪ್ಪನೆಂಬ ಸಾಂಸ್ಕೃತಿಕ ನಾಯಕನ ಕುರಿತಾದ ಗದ್ಯ ಹಾಗೂ ಪದ್ಯ ಮಿಶ್ರಿತವಾದ ಶೈಲಿಯನ್ನು ಹೊಂದಿದೆ. ಮೂರು ತಲೆಮಾರಗಳ ಕಥೆಯನ್ನು ಒಳಗೊಂಡಿರುವ ಈ ಮಹತ್ವದ ಕಾವ್ಯವು ಸಂಸ್ಕೃತಿಗಿಂತ ಆಚರಣೆಯ ಪ್ರಾಧಾನ್ಯತೆಯನ್ನು ಹೊಂದಿದೆ. ಏಳುಜನ ಅಣ್ಣ–ತಮ್ಮಂದಿರ ಜೊತೆಗೆ ಅವರ ತಂಗಿಯೊಂದಿಗೆ ಕಥೆಯ ಚಿತ್ರಣವು ವಂಶ ಪರಂಪರೆಯಂತೆ ಸಾಗುತ್ತಾ ಜುಂಜಪ್ಪನಲ್ಲಿ ಅನಾವರಣಗೊಳ್ಳುತ್ತದೆ. ಈ ಮಹಾಕಾವ್ಯದ ವಿಶೇಷತೆಯೆಂದರೆ ಕಾಡುಗೊಲ್ಲರ ನಿತ್ಯಬದುಕಿನ ಅನಾವರಣವನ್ನು 'ನಮ್ಮ ಮನೆಯ ಕಥೆ' ಎಂಬಂತೆ ಚಿತ್ರಿಸಿರುವುದು ಆ ಸಮುದಾಯವು ಇಂದಿಗೂ ಅರಾಧಿಸಲು ಕಾರಣವಾಗಿದೆ. ಗಣೆಯವರು ಅಥವಾ ಕಾಣಿಕೆಯವರು ಎಂದರೆ

ISBN – 978-93-5526-247-9

ಕಾಡುಗೊಲ್ಲ ಸಂಪ್ರದಾಯದ ಜುಂಜಪ್ಪನ ಭಕ್ತರು. ಇವರು ಜುಂಜಪ್ಪನ ಕಾವ್ಯವನ್ನು ತಮ್ಮದೇ ವಿಶಿಷ್ಟ ದಾಟಿಯಲ್ಲಿ ಸುದೀರ್ಘವಾದ ಮಟ್ಟುಗಳಲ್ಲಿ ಹಾಡಬಲ್ಲರು.

ಜನಪದ ಮಹಾಕಾವ್ಯಗಳ ಕುರಿತು ಅಧ್ಯಯನ ಮಾಡುವವರು ಎರಡು ಮಾದರಿಯಲ್ಲಿ ಪ್ರವೇಶಿಸುತ್ತಾರೆ. ಒಂದು ಚರಿತ್ರಾ ಮಾದರಿಯಾದರೆ ಮತ್ತೊಂದು ಜಿಜ್ಞಾಸೆಯ ಮಾದರಿಯಾಗಿದೆ. ಈ ಚರಿತ್ರಾ ಮಾದರಿಯನ್ನು ಈಗಾಗಲೇ ಕಂಡುಕೊಂಡಿದ್ದೇವೆ. ನಮ್ಮ ವಿಶ್ವವಿದ್ಯಾಲಯಗಳ ಕಟ್ಟಡದ ಶಕ್ತಿಯಂತೆ ಕೆಲವರು ಮೂಲ ಸಾಹಿತ್ಯದ ಚಹರೆಗಳನ್ನು ಸೂಕ್ತವಾಗಿ ಸಂಪಾದಿಸಿ, ವ್ಯಾಖ್ಯಾನಿಸಿ ನಮ್ಮ ಅಧ್ಯಯನಕ್ಕೆ ನೀಡಿದ್ದಾರೆ. ಇನ್ನೂ ಎರಡನೆಯ ವಿಧಾನ ನಮ್ಮದು. ಪ್ರತಿನಿತ್ಯವೂ ಆಧುನಿಕ ಒತ್ತಡಗಳಿಗೆ ಸಿಲುಕಿ ನಾಶದ ಜೊತೆಗೆ ಪರಿವರ್ತನೆಗೊಳ್ಳುತ್ತಿರುವ ಜನಪದ ಸಾಹಿತ್ಯ ಕುರಿತು ಸಾಂಸ್ಕೃತಿಕ ಸವಾಲುಗಳು ನಮ್ಮ ಮುಂದಿವೆ ಇವುಗಳೇ ನಮ್ಮ ಪ್ರಸ್ತುತ ಚಲನಶೀಲ ಮಹಾಕಾವ್ಯದ ಸ್ವರೂಪವಾಗಿ ಕಾಣುತ್ತದೆ.

**ಅಧ್ಯಯನ ಕೃತಿಗಳು :**


1. The Kalevala., John Martin Crawford., Cincinnati The Robert Clarke Company., 1898
2. ಮಲೆಯ ಮಾದೇಶ್ವರ., ಸ್ವಾಮಿ ಬಿ.ಎಸ್(ಸಂ)., ದಾಮಿನಿ ಸಾಹಿತ್ಯ ಬೆಂಗಳೂರು., 2001
3. ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯಪರಂಪರೆ., ಅಂಬಳಿಕೆ ಹಿರಿಯಣ್ಣ., ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ., 2014
4. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ., ಶಂಕರನಾರಾಯಣ ತೀ.ನಂ, ವೆಂಕಟೇಶ ಎಂ.ಎನ್(ಸಂ)., ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ., 2014
5. ಹಾಲುಮತ ದರ್ಶನ., ಜೋಶಿ ಶಂ.ಬಾ., ವಸಂತ ಮುದ್ರಣಾಲಯ, ಧಾರವಾಡ., 1960


***

## 7. ಪುರುಷಪ್ರಧಾನ ವ್ಯವಸ್ಥೆಯ ಪ್ರತಿಭಟನೆಯಧ್ವನಿ – ಸಂಕಮ್ಮ

**ಡಾ. ಸುರೇಶ ಕೆ.ಸಿ**

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿನ ಬಗ್ಗೆ ಇರುವ ಪರಿಕಲ್ಪನೆಗಳಲ್ಲಿ ಶೀಲ, ಚಾರಿತ್ರ್ಯ, ಪಾತಿವ್ರತ್ಯಾ, ತ್ಯಾಗ ಬಲಿದಾನಗಳೇ ಶ್ರೇಷ್ಠ ಎಂಬ ವಿಚಾರಗಳಿವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಅಭಿವ್ಯಕ್ತಿಯನ್ನು ದಾಖಲಿಸದೇ ಅವಳನ್ನು ಮರೆಗೆ ತಳ್ಳಿ ಸ್ತ್ರೀ; ಕೇವಲ ಲೈಂಗಿಕತೆ, ಗರ್ಭಧಾರಣೆ, ತಾಯ್ತನ, ಲಾಲನೆ–ಪಾಲನೆಗಳಂತಹ ಚಟುವಟಿಕೆಗಳೇ ಅವಳ ಆದ್ಯಕರ್ತವ್ಯ. ಮತ್ತು ವಿವಿಧ ಚಟುವಟಿಕೆಗಳಲ್ಲಿ ಮುಖ್ಯ ಪಾತ್ರವಹಿಸುತ್ತಿದ್ದ ಹೆಣ್ಣು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಟಸ್ಥಳಾಗಲು, ಮೌನವಾಗಲು ಕಾರಣಗಳ ಹುಡುಕಾಟಕ್ಕೆ ಸ್ತ್ರೀವಾದಿ ಅಧ್ಯಯನ ಮುನ್ನೆಲೆಗೆ ಬಂದಿದೆ.

ಹೆಣ್ಣಿನ ಬದುಕಿನಲ್ಲಿ ಪಾತಿವ್ರತ್ಯ ಮತು ತಾಯ್ತನ ಬಹು ಮುಖ್ಯವಾದ ಆಶಯ. ಈ ಆಶಯವನ್ನ ಪ್ರಮಾಣೀಕರಿಸುವವನು ಮಾತ್ರ ಪುರುಷನೆಂಬುದನ್ನು ಮರೆಯಬಾರದು. ಜೊತೆಗೆ ಶಿಕ್ಷಿಸುವ ಸಾಮಾಜಿಕ ಹೊಣೆಗಾರಿಕೆಯನ್ನು ಪಡೆದಿರುವವನು. ಗಂಡನ ಮರಣಾನಂತರ ಉರಿವಚಿತೆಯಲ್ಲಿ ತಾನೂ ಬೆಂದು ಹೋಗುವಂಥ ಸಹಗಮನ ಪದ್ಧತಿಯನ್ನು ಹುಟ್ಟು ಹಾಕಿ ಹೆಣ್ಣಿಗಿರುವ ಬದುಕುವ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದು ಒಂದುಕಡೆಯಾದರೆ "ತಾಯ್ತನ" ಎಂಬುದು ಮಹಿಳೆಗೆ ನಿಸರ್ಗದ ವಿಶಿಷ್ಟ ಕೊಡುಗೆ. ಇಂಥ ಕೊಡುಗೆಯನ್ನು ಗೌರವಿಸಬೇಕಾದ ವ್ಯವಸ್ಥೆ, ಹೆಣ್ಣಿಗೆ ಹೆಚ್ಚುಗಾರಿಕೆಯಿಂದ ಕಾಣದೇ ಅಲ್ಲಿ ದೋಷವನ್ನು ಹುಡುಕುವ ಪ್ರಯತ್ನಮಾಡಿತು ಎಂದರೆ ತಪ್ಪಾಗಲಿಕ್ಕೆ ಇಲ್ಲ "ಬಂಜೆ" ಎಂಬ ಶಬ್ದಕ್ಕೆ ಹೆಣ್ಣು ಬೆಚ್ಚುತ್ತಾಳೆ, ಭಯ ಪಡುತ್ತಾಳೆ. ತನ್ನ ಬದುಕು 'ಬಾಳೆಲೆಯ ಹಾಸ್ಯುಂಡು ಬೀಸಿ ಒಗದಾಂಗ' ಎಂದು ಸಂಕಟ ಪಡುತ್ತಾಳೆ. ತನ್ನ ಬಂಜೆತನಕ್ಕೆ ಗಂಡಿನ ದೈಹಿಕ ದೋಷವಿದ್ದರೂ ಸರಿಯೇ ಪುರುಷಪ್ರಧಾನ ಸಮಾಜ ಅರಣ್ಯ ಮುಚ್ಚಿಟ್ಟು ಗಂಡಿನ ಮರುಮದುವೆ, ಅನೈತಿಕ ಸಂಬಂಧ ಮೊದಲಾದ ಹೀನ ಸಂಸ್ಕೃತಿ ಬೆಳೆಸಲು ಕಾರಣವಾಗುತ್ತದೆ. ಆದರೆ "ಬಂಜೆ" ಎಂಬ ಪಟ್ಟವನ್ನು ಹೆಣ್ಣಿನ ತಲೆಗೆಕಟ್ಟಿ ಅವಳನ್ನು ನಿಕೃಷ್ಟವಾಗಿ ಕಾಣುವ ವ್ಯವಸ್ಥೆ ರೂಪುಗೊಂಡಿರುವುದನ್ನು ಕಾಣಬಹುದು ಹೀಗೆ ಪುರುಷಪ್ರಧಾನ ವ್ಯವಸ್ಥೆ ಏನೂ ಅರಿಯದ ಹೆಣ್ಣನ್ನು ಅಂದಿನಿಂದಲೂ ಶೋಷಣೆಗೆ ಒಳಗಾಗುತ್ತಲೇ ಬಂದಿದೆ. ಶೋಷಣೆಯ ಹಲವು ರೂಪಗಳನ್ನು ಕಂಡು ಪುರುಷನ ಕೌರ್ಯವನ್ನು ಪ್ರಶ್ನಿಸಿ, ಪ್ರತಿಭಟಿಸಿ ತನ್ನ ಸ್ವಾತಂತ್ರ್ಯ ಬದುಕಿಗಾಗಿ ಹಪಾಹಪಿಸುವ ವಿವರಗಳು ನಮ್ಮ ಜನಪದ ಸಾಹಿತ್ಯದಲ್ಲಿರುವುದನ್ನು ಕಾಣಬಹುದು.

ಕನ್ನಡ ಜನಪದ ಮಹಾಕಾವ್ಯಗಳಲ್ಲಿ ಹೆಣ್ಣಿನ ಶೀಲ ಹಾಗೂ ಪಾತಿವ್ರತ್ಯಕ್ಕೆ ಹೆಚ್ಚಿನ ಮಾನ್ಯತೆಕೊಟ್ಟಿದ್ದರೂ ಹೆಣ್ಣಿನ ಶೋಷಣೆಯ ವಿರುದ್ಧದ ಪ್ರತಿಭಟನೆಯನ್ನು, ಸಮಾನತೆಗೆ ಪ್ರಾಶಸ್ತ್ಯಕೊಟ್ಟಿರುವುದನ್ನು ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಕುಮಾರರಾಮ, ಮಾಳಿಂಗರಾಯ, ಮೈಲಾರಲಿಂಗ, ಬುಡಕಟ್ಟು ಮಹಾಕಾವ್ಯಗಳಾದ ಜನಪದ ರಾಮಾಯಣ, ಜನಪದ ಮಹಾಭಾರತ ಮುಂತಾದ ಬುಡಕಟ್ಟು ಮೌಖಿಕ ಮಹಾಕಾವ್ಯಗಳಲ್ಲಿ ಸ್ತ್ರೀ ಶೋಷಣೆಯ ವಿರುದ್ಧ ಧ್ವನಿಯೆತ್ತಿವೆ. ಅಲ್ಲದೇ ಸ್ತ್ರೀ ಸ್ವಾಯತ್ತತೆ, ಸ್ವಾತಂತ್ರಗಳನ್ನು ಪುರಸ್ಕರಿಸಿವೆ. ಹೆಣ್ಣಿನ ಸಹಜ ನಿಲುವು, ಸ್ತ್ರೀಶಕ್ತಿ ಕೇಂದ್ರಗಳ ನಿಜವಾದ ಅರಿವಿಗಾಗಿ ಸ್ತ್ರೀಪಾತ್ರಗಳ ಅಧ್ಯಯನಕ್ಕಾಗಿ ಮಲೆಯ ಮಾದೇಶ್ವರಕಾವ್ಯದ ಸಂಕಮ್ಮನನ್ನು ಆಯ್ದುಕೊಳ್ಳಲಾಗಿದೆ.

ಪುರುಷ ಪ್ರಧಾನ ನಿರ್ಮಿತ ವ್ಯವಸ್ಥೆಯಲ್ಲಿ ಬೆಂದು ನರಳುವ ಹಾಗೂ ಇದೇ ಸ್ತ್ರೀಕುಲದ ಸ್ವಾಭಿಮಾನವನ್ನು ಮತ್ತು ಸ್ತ್ರೀಯ ಮಾನಸಿಕ ಸ್ಥೈರ್ಯವನ್ನು ಮಲೆಮಾದೇಶ್ವರಕಾವ್ಯದ ಸಂಕಮ್ಮ ಹಾಗೂ ಬೇವಿನ ಹಟ್ಟಿ ಕಾಳಮ್ಮನಲ್ಲಿ ಕಾಣಬಹುದು. ಇವೆರಡೂ ಮಾತ್ರ ಪ್ರಧಾನ ವ್ಯಕ್ತಿತ್ವಗಳು.

ಮಲೆ ಮಾದೇಶ್ವರಕಾವ್ಯದ "ಸಂಕಮ್ಮನ ಸಾಲು" ಪುರುಷ ಪ್ರಭುತ್ವವನ್ನು ನುಚ್ಚುನೂರು ಮಾಡಿ; ಮೆರೆದ ಹೆಣ್ಣೊಬ್ಬಳ ಕಥೆಯನ್ನು ಹೇಳುತ್ತದೆ. ಇಲ್ಲಿ ಸೋಲಿಗರ ನೀಲಯ್ಯನ ಹೆಂಡತಿ ಸಂಕಮ್ಮ ಸ್ಫುರದ್ರೂಪಿ ಸೋಲಿಗ ನೀಲೇಗೌಡನು ಜುಂಜೇಗೌಡನ ಕಿರಿಯಮಗಳು ಸತ್ಯಶರಣೆ ಸಂಕಮ್ಮನನ್ನು ತಾನೇ ನೋಡಿ ಮದುವೆಯಾಗಿ, ಒಂದು ವರ್ಷವಾದರೂ ಮಕ್ಕಳಾಗದಿರಲು ಸಂಕಮ್ಮನ ಓರಗಿತ್ತಿಯರು, ಅತ್ತಿಗೆ, ನಾದಿನಿಯರು ಸಂಗಡಗಾತಿಯರು ಕೂಡಿಕೊಂಡು "ಇವಳು ಹುಟ್ಟಿ ಬಂದು ಮೂವತ್ತು ಮಂಡೇ ಮಾರಿ ಹನ್ನೆರಡು ಮೈಯಾನ ಬಣ್ಣಕಡವಿಲ್ಲ ಮೊಖದಕಲೆಯೇ ತಪ್ಪಲಿಲ್ಲ ಧಟ್ಟಾಧರಣಿ ಸಂಕೆಣ್ಣು ಹುಟ್ಟು ಬಂಜೆ ಸಂಕೆಣ್ಣಲ್ಲಿ ಮಕ್ಕಳ ಫಲವೇ ಮೊದಲಿಲ್ಲ ಎದ್ದು

ISBN – 978-93-5526-247-9

ಮುಖವ ನೋಡಿದರೆ ನಾವು ಬಂಜೆರಾಗುವೆವು ಸಂಗಡ ದನಗಳ ಕಾದರೆ ದನಗಳು ಬಂಜೇರಾಗುವುವು ಮಾಡಿದ ಅಡುಗೆ ಉಂಡಾರೆ ನಾವು ಬಂಜೆರಾಗುವೆವು (ಡಾ. ಕೇಶವನ್ ಪ್ರಸಾದ್, ಮಲೆ ಮಾದೇಶ್ವರ ಪ್ರಸಾರಾಂಗ ಹಂಪಿ 1997 ಪುಟ 142) ಹೀಗೆ ನಾನಾ ರೀತಿಯಲ್ಲಿ ಸಂಕಮ್ಮನನ್ನು ನಿಂದಿಸುತ್ತಾರೆ. "ತಾಯ್ತನ" ಜನಪದ ಸಾಹಿತ್ಯದಲ್ಲಿ ಸ್ಪಷ್ಟವಾಗಿ ವೇದ್ಯವಾಗುವುದು; ಮಕ್ಕಳಿಲ್ಲದ ಬಂಜೆ ಹೆಣ್ಣುಗಳ ಗೋಳಿನಲ್ಲಿ. ಮಕ್ಕಳು ಬೇಕೆಂಬುದು ವೈಯಕ್ತಿಕ ಅಭೀಪ್ಸೆಯಲ್ಲ ಅದು ನಮ್ಮ ಧಾರ್ಮಿಕ ಸಾಮಾಜಿಕ ನಂಬಿಕೆಯು ಹೌದು ಬಂಜೆತನ ಎಂಬುದು ಜನ್ಮಜನ್ಮಾಂತರದ ಪಾಪದ ಫಲ ಎಂದು ಹಿಂದೂಧರ್ಮದ ನಂಬಿಕೆಗನುಗುಣವಾಗಿ ಜನಪದರ ಸ್ತ್ರೀಯರ ಎದುರು ರೂಪುಗೊಂಡಿದೆ. ಹೆಣ್ಣಿನ ಬದುಕಿನ ಬಂಜೆತನದ ದುಃಖಕ್ಕೆ ಮೀಸಲಾದ ದುಃಖ ಇನ್ನೊಂದಿಲ್ಲ. ಬಂಜೆಯಾದವಳು ಈ ಸಮಾಜದ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಅನುಭವಿಸುವ ಅವಮಾನ, ಬಹಿಷ್ಕಾರಗಳನ್ನು ಬಂಜೆಯ ದಾರುಣ ದುಃಖವನ್ನು ಜನಪದ ಸಾಹಿತ್ಯ ವಿಧ ವಿಧವಾಗಿ ಅಭಿವ್ಯಕ್ತಿ ಪಡಿಸಿದೆ.

ಚುಚ್ಚು ಮಾತುಗಳನ್ನು ಕೇಳಿ ಹೆಚ್ಚು ದಿನ ಒಟ್ಟಿಗೆ ಇರುವುದು ಉಚಿತವಲ್ಲವೆಂದು ತಿಳಿದು ನೀಲೇಗೌಡ ಮಡದಿಯೊಡನೆ ಮೂಡುಮಳೆ ಕಾಡಿಗೆ ಬಂದು ನಿರ್ಜನ ಪ್ರದೇಶವೊಂದರಲ್ಲಿ ಸೊಪ್ಪಿನ ಒಂಟಿಗುಡಿಸಲನ್ನು ಕಟ್ಟಿಕೊಂಡು ಅಲ್ಲಿ ವಾಸಮಾಡತೊಡಗಿದ. ನೀಲೆಗೌಡನಿಗೆ (ತನ್ನ ಕುಲ ಪದ್ಧತಿಯಂತೆ ಒಂಭತ್ತು ತಿಂಗಳ ಬೇಟೆಗೆ ಹೋಗಬೇಕಾಗುತ್ತದೆ) ಭಯದ, ಆತಂಕದ ವಿಚಾರವಲ್ಲ. ನೀಲಯ್ಯನಿಗೆ ನಿಜವಾದ ಆತಂಕವೆಂದರೆ ಕುಲದ ಪದ್ಧತಿಯಂತೆ ಮನೆಗೊಬ್ಬರು ಒಂಭತ್ತು ತಿಂಗಳ ಆಹಾರ ಸಂಗ್ರಹಣೆ ಮತ್ತು ಬೇಟೆಗೆ ಹೊರಡಬೇಕಾದಾಗ ಒಬ್ಬಳೇ ಮಡದಿಯನ್ನು ಅಷ್ಟು ದೀರ್ಘಕಾಲ ಬಿಟ್ಟು ಹೋಗಬೇಕಲ್ಲ ಎಂಬ ಆತಂಕ. ಕುಲದ ಹಿರಿಯರ ಆದೇಶದಂತೆ ಒಂಭತ್ತು ತಿಂಗಳು ಬೇಟೆಗೆ ಹೊರಟ ನೀಲಯ್ಯ ರೂಪವತಿಯಾದ ತನ್ನ ಹೆಂಡತಿಯ ಪಾತಿವ್ರತ್ಯದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾನೆ. ಸಂಕಮ್ಮನ ಬಂಜೆತನಕ್ಕೆ ತಾನೇ ಕಾರಣನಿರಬಹುದೆಂಬ ಒಳದನಿ ಅವನನ್ನು ಇಂತಹ ಅನುಮಾನಕ್ಕೆ ದೂಡಿರಬಹುದು.

ಫಲಾಪೇಕ್ಷೆಯ ತೀವ್ರ ಹಂಬಲದಲ್ಲಿರುವ ಸಂಕಮ್ಮ ಸಹಜವಾಗಿ ಯಾರಿಗಾದರೂ ತನ್ನ ಗೈರುಹಾಜರಿಯಲ್ಲಿ ಒಲಿದುಬಿಡಬಹುದೆಂಬ ಅನುಮಾನ ಅವನಿಗಿದೆ. ಅದಕ್ಕೆ ಹೆಂಡತಿಯ ಮಾತಿನಲ್ಲಿ ಅವನಿಗೆ ನಂಬಿಕೆ ಇದೆ. ಅದಕ್ಕಾಗಿ ಅವನು ಸಂಕಮ್ಮನನ್ನು ಭಾಷೆಕೊಡುವಂತೆ ಕೇಳುತ್ತಾನೆ. ಇಲ್ಲಿಂದಕಥೆ ಬೇರೆಯದೇ ತಿರುವನ್ನು ಪಡೆಯುತ್ತದೆ. ಇದು ಪರಸ್ಪರರ ಸ್ವಾಭಿಮಾನವನ್ನು ಕೆರಳಿಸುವ ಪ್ರಶ್ನೆಯಾಗಿದೆ. ಏನು ತಪ್ಪು ಮಾಡದೇ ಭಾಷೆ ಕೊಡುವ ಅಗತ್ಯವೇನು? ಎಂಬುದು ಸಂಕಮ್ಮನ ವಾದ. ಹೇರಲಾಗುತ್ತಿರುವ ಪುರುಷಪ್ರಧಾನ ಸಮಾಜದ ಕಟ್ಟುಪಾಡಿನ ಮೌಲ್ಯಗಳನ್ನು ಸಂಕಮ್ಮ ಇಲ್ಲಿ ತೀವ್ರವಾಗಿ ಪ್ರತಿಭಟಿಸುತ್ತಿದ್ದಾಳೆ. ನೀಲಮ್ಮನ ಅನುಮಾನಕ್ಕೆ ಮನಸ್ಸು ರೋಸಿ ಹೋಗುತ್ತದೆ. ನೀನು ಕೊಟ್ಟಿರುವತೆರ ಹಿಂತೆಗೆದುಕೊಂಡು ತನ್ನನ್ನು ಬಿಟ್ಟುಬಿಡು ಎನ್ನುವ ನಿರ್ಧಾರಕ್ಕೂ ಹೋಗುತ್ತಾಳೆ. ಸ್ವಾತಂತ್ರ್ಯವಿಲ್ಲದ ಇಂಥ ಸಂಬಂಧವನ್ನು ಕಡಿದುಕೊಳ್ಳಲೂ ಸಿದ್ಧಳಿದ್ದಾಳೆ. ಮದುವೆ ಎಂಬ ಒಪ್ಪಿತ ವ್ಯವಸ್ಥೆಯನ್ನು ಸ್ವೀಕರಿಸಿಯೂ ಅದಕ್ಕೆ ಅಷ್ಟೊಂದು ಮಹತ್ವಕೊಡದೆ ಬುಡಕಟ್ಟೊಂದರ ಪ್ರತಿನಿಧಿಯಾಗಿ ಸಂಕಮ್ಮ ಇಲ್ಲಿ ಕಾಣಿಸಿಕೊಳ್ಳುತ್ತಾಳೆ. ಅವರ ದೃಷ್ಟಿಯಲ್ಲಿ ಮದುವೆಯೆಂಬುದು ಕೂಡಿಬಾಳುವ ಸಂಕೇತವೇ ಹೊರತು ಅಧಿಕಾರ ಸ್ಥಾಪಿಸುವ ಸಾಂಪ್ರಧಾಯಿಕ ವಿಧಿ ಅಲ್ಲ. ಅದಕೆ ಕ್ರಮೇಣವಾಗಿ ತನ್ನ ಯಯಜಮಾನ್ಯತೆಯನ್ನು ಭದ್ರಪಡಿಸಿಕೊಳ್ಳುವ ಮೂಲಕ ಏಕ ಸ್ವಾಮ್ಯತೆ ಮೆರೆಯಲು ಹೊಂಚು ಹಾಕುವ ಪುರುಷ ಪ್ರಧಾನ ಸಮಾಜದ ಪ್ರತಿನಿಧಿಯಾಗಿ ಇಲ್ಲಿ ನೀಲಯ್ಯನನ್ನು ಗುರುತಿಸಬೇಕಾಗುತ್ತದೆ. ಅವನಿಗೆ ಸಂಕಮ್ಮ ಕೇವಲ ಹೆಣ್ಣಾಗಿ ಅಥವಾ ಹೆಂಡತಿಯಾಗಿ ಮಾತ್ರಕಾಣುತ್ತಿಲ್ಲ ಸಂಕಮ್ಮ ನೀಲಯ್ಯನ ಆಸ್ತಿಯಾಗಿದ್ದಾಳೆ. ಅವಳು ನೀಲಯ್ಯನ ರಕ್ತವನ್ನು ಮಾತ್ರ ಹಂಚಿಕೊಂಡು ಹುಟ್ಟುಬೇಕಾದ ಮಕ್ಕಳಿಗೆ ತಾಯಿಯಾಗಬೇಕಾಗಿದೆ. ಇಲ್ಲಿ ಹೆಣ್ಣು ಮುಕ್ತತೆಗೆ ಹಾತೊರೆದರೆ ಗಂಡು ಕಟ್ಟುಪಾಡಿನ ಬೇಲಿಯಲ್ಲಿ ಭದ್ರಪಡಿಸಿ ತೊಡಗಿದೆ. ಹಾಗಾಗಿ ಇಲ್ಲಿ ಮುಕ್ತತೆ ಮತ್ತು ಪಾವಿತ್ರ್ಯತೆ ಎಂಬ ಮೌಲ್ಯಗಳ ನಡುವಿನ ಸಂಘರ್ಷವಾಗಿ ಕಾಣಿಸಿಕೊಳ್ಳತೊಡಗುತ್ತದೆ. ಮುಕ್ತತೆಯನ್ನು ಬಯಸುವ ಮಾತೃ ಮೂಲ ಸಂಸ್ಕೃತಿಯ ಪಳೆಯುಳಿಕೆಯಾಗಿ ಸಂಕಮ್ಮ ಗೋಚರಿಸುತ್ತಾಳೆ. ಆದರೆ ಒಂದು ಬುಡಕಟ್ಟು, ಪುರುಷ ಪ್ರಧಾನ ವ್ಯವಸ್ಥೆಗೆ ಅವಸ್ಥಾಂತರಗೊಳ್ಳುತ್ತಿರುವ ಸಂದರ್ಭದ ಪ್ರತೀಕವಾಗಿ ನೀಲಯ್ಯ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಪರಸ್ಪರ ವಿರುದ್ಧವಾದ ಎರಡು ಮೌಲ್ಯಗಳ ನಡುವಿನ ಸಂಘರ್ಷ ಇಲ್ಲಿ ಗಮನ ಸೆಳೆಯುತ್ತದೆ. ಇದೇ ಈ ಪ್ರಕರಣ ಹೇರಲಾಗುತ್ತಿರುವ ಪುರುಷ ಪ್ರಧಾನ ಮೌಲ್ಯಗಳನ್ನು ಸಂಕಮ್ಮ ತೀವ್ರವಾಗಿ ನಿರಾಕರಿಸುವುದನ್ನು ದಾಖಲಿಸುತ್ತದೆ. ಈ ನಿರಾಕರಣೆ ಮದುವೆಯ ಸಾಂಪ್ರಾದಾಯಿಕ ಚೌಕಟ್ಟನ್ನು ಮೀರಿ ಪಾತಿವ್ರತ್ಯಕ್ಕೆ ಹೊಸ ಅರ್ಥವನ್ನು ಒದಗಿಸುವಲ್ಲಿ

ISBN – 978-93-5526-247-9

ಕಾರಣವಾಗುತ್ತದೆ. ಸಂಕಮ್ಮನನ್ನು ಮಾತೃಪ್ರಧಾನ ಬುಡಕಟ್ಟೊಂದರ ಹೆಣ್ಣು ಶಕ್ತಿಯಾಗಿ, ನೀಲಯ್ಯನನ್ನು ಪಿತೃ ಪ್ರಧಾನ ಸಮಾಜದ ಪುರುಷನ ಪ್ರತಿನಿಧಿಯಾಗಿ ಕಾಣಬಹುದು.

ಆದರೂ ನೀಲಯ್ಯ ಪುರುಷ ಪ್ರಧಾನವಾದ ವ್ಯವಸ್ಥೆಗೆ ಬದ್ಧನಾಗಿ ನಿಲ್ಲುವುದಿಲ್ಲ. ಭಾಷೆಕೊಡಲು ನಿರಾಕರಿಸಿದ ಸಂಕಮ್ಮನನ್ನು ಬೆತ್ತಲಾಗಿಸಿ ಬಳ್ಳಿಗಳಿಂದ ಕೈಕಾಲು ಕಟ್ಟಿ ಬೋರಲಾಗಿ ಬೀಳಿಸಿ ಎಲೆಗಳಿಂದ ಮುಚ್ಚಿ ಗುಡಿಸಿಲ ಮುಂದೆ ಎಪ್ಪತ್ತೇಳು ಮಂಡಲ ಬರೆದು, "ಚೀಟಿ" ಬರೆದು ಮುಂದಿಟ್ಟನು, ಕಾವಲಿಗೆ ರಾಕ್ಷಸಿ ಗೊಂಬೆಗಳನ್ನು ಮಾಡಿ ಬಾಗಿಲಲ್ಲಿ ನಿಲ್ಲಿಸಿದನು. ಇನ್ನು ಇಲ್ಲಿಯಾರು ಸುಳಿಯುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡು ಬೇಟೆಗೆ ನಡೆದನು.

ಗಂಡನ ಹಿಂಸೆಯಿಂದ ದುಃಖಿತಳಾದ ಸಂಕಮ್ಮತನ್ನ ತಂದೆಯ ಮನೆದೇವರಾದ ಮಾದಯ್ಯನನ್ನು ಮೊರೆಯಿಡುತ್ತಾಳೆ. ಮಾದಯ್ಯನಾದರೂ ನರಲೋಕದಲ್ಲಿ ಎಲ್ಲೋ ಹೆಣ್ಣು ಗೋಳಾಡುತ್ತಿರುವಳೆಂದು ಬರಗವನ್ನೇರಿ ಸಂಕಮ್ಮನ ಗುಡಿಸಲ ಮುಂದೆ ಬಂದನು. ಮಾದೇವನೆ ಮನೆಯ ಬಾಗಿಲಿಗೆ ಬಂದಿದ್ದಾನೆಂದು ತಿಳಿದು ಸಂಕಮ್ಮ ಒಳಗೊಳಗೆ ಕಣ್ಣೀರಿಡುತ್ತಾಳೆ. ಹೊರಗೆ ಬರುವಂತಿಲ್ಲ ಮೈಮೇಲೆ ಬಟ್ಟೆಯಿಲ್ಲ ಗಂಡನು ಕೈಕಾಲು ಕಟ್ಟಿ ಉರುಳಿಸಿರುತ್ತಾನೆ.

ನೀಲಯ್ಯನಾದರೂ ಮಾಟಗಾರ, ನಾನಾ ರೀತಿಯ ಮಂಡಲ ಬರೆದು ಕಟ್ಟು ಕಟ್ಟಳೆಗಳನ್ನು ಮಾಡಿ ಹಾವು, ಚೇಳು, ರಾಕ್ಷಸರನ್ನು ಕುಲದ ಬೇಟೆಗೆ ಹೋಗಿದ್ದಾನೆ. ಆ ಎಲ್ಲ ಕಟ್ಟುಕಟ್ಟಳೆಗಳನ್ನು ನಿರರ್ಥಕಗೊಳಿಸಿ ಮಾದೇಶ್ವರ ಒಳಹೋಗಬೇಕು ಇದು ಮಾದೇಶ್ವರನಿಗೆ ಅಸಾಧ್ಯವಾದುದೇನು ಅಲ್ಲ. ಯಾಕೆಂದರೆ ಮಾದೇವ ಮೋಡಿಕಾರರ ಗುರು. ಮಂತ್ರ ವಿದ್ಯೆಗಳು ಸಕಲ ವಿದ್ಯೆಗಳು ಗೊತ್ತಿರುವ ಮಹಾ ಮಾಂತ್ರಿಕ. ಮೋಡಿಗೆ ಪ್ರತಿಮೋಡಿ ಮಾಡಿ ಕ್ಷಣಾರ್ಧದಲ್ಲಿ ನಿರರ್ಥಕಗೊಳಿಸಬಲ್ಲ ಮಹಾ ವಿದ್ಯೆಕಾರ. ಎಲ್ಲ ಮಂಡಲ, ಕಟ್ಟುಪಾಡುಗಳೆಲ್ಲವನ್ನು ನಿರರ್ಥಕಗೊಳಿಸಿ ಸಂಕಮ್ಮಳನ್ನು ಸಮೀಪಿಸುತ್ತಾನೆ. ಅವಳ ಮೈಮೇಲಿನ ಮುಳ್ಳು ಬಳ್ಳಿಗಳನ್ನು ಇಲ್ಲವಾಗಿಸಿ, ಬೆತ್ತಲೆಯ ದೇಹಕ್ಕೆ ವಸ್ತ್ರವನ್ನು ದಯಪಾಲಿಸುತ್ತಾನೆ.

ಸಂಕಮ್ಮ ನೀಲಯ್ಯನ ಮಾಟ, ಮಂಡಲದಿಂದ ಬಿಡಿಸಿಕೊಂಡಳೆಂದರೆ ತನ್ನ ಪಾತಿವ್ರತ್ಯದ ಸಂಕೋಲೆಯಿಂದ ಬಿಡಿಸಿಕೊಂಡಲೆಂದೇ ಅರ್ಥ. ಭಾಗ್ಯಕೊಟ್ಟ ಭಗವಂತನಿಗೆ ಭಿಕ್ಷೆಕೊಡಲು ಮುಂದಾದಾಗ ಮಾದೇವ ಬಂಜೆಯ ಕೈಯ ಭಕ್ತಿಯನ್ನು ನಿರಾಕರಿಸುತ್ತಾನೆ. ಬಂಜೆಯು ನೀಡಿದ ಭಿಕ್ಷೆಯನ್ನು ತೆಗೆದುಕೊಂಡು ತಾನು ಕೈಲಾಸಕ್ಕೆ ಹೋಗಿ ಏಳೇಳು ಕೋಟಿ ಪರಿಷೆ ಬಂದಾಗ ಅದನ್ನ ಅವರಿಗೆ ಹಂಚಿದರೆ ಅವರೂ ಬಂಜೆಯರಾಗುತ್ತಾರೆ ಎನ್ನುತ್ತಾನೆ.

ಇಂತ ಯಾವ ಕಷ್ಟಗಳೂ ಕೂಡ ಮಕ್ಕಳ ಅಭೀಪ್ಸೆಯ ತಾಯ್ತನದ ಮುಂದೆ ತೃಣಸಮಾನವಾಗಿ ಕಂಡ ಸಂಕಮ್ಮನೆ ಮಾದಯ್ಯನನ್ನು ಮಕ್ಕಳ ಫಲವನ್ನು ಕೊಡು ಎಂದು ಕೇಳಿಕೊಳ್ಳುತ್ತಾಳೆ.

ಮಕ್ಕಳ ಫಲ ನೀನು ಕೊಟ್ರೆ ಸರಿ
ಇಲ್ಲದೆ ಹೋದ ಪಕ್ಷದಲ್ಲಿ
ನಿಮ್ಮ ಪಾದದ ಮ್ಯಾಲೆ ಬಿದ್ದು
ಪ್ರಾಣವಾದರೆ ಬುಡತೀನಿ

ಎಂದು ಅಂಗಲಾಚಿದಾಗ

ಕೇಳು ಕೇಳು ನನ ಕಂದ ಸಂಕಮ್ಮ
ಮಕ್ಕಳ್ ಫಲ ಕೊಡೋದ್ಕೆ
ನಾನೇನು ಇಸ್ಣು ಬ್ರಮ್ಮ ಈಸ್ಪುರ ಕೆಟ್ಟೋದ್ನ
ಯಾರ ಮಕ್ಕಳ ತಂದು ನಿನ್ನೊಟ್ಟೇಲಿ ಕೊಡ್ಲಿ ಕಂದಮ್ಮ

ಒಣಮರವನ್ನು ನೆಟ್ಟು ಪಾತಿಕಟ್ಟಿ ಪಾತಿತುಂಬ ನೀರೂ ಬಣ್ಣರ ಜಿಗ್ರಿ ಹೊಂಡದ ಕಂದ" ಎಂದ
(ಡಾ. ಪಿ.ಕೆ. ರಾಜಶೇಖರ ಮಲೆಯ ಮಾದೇಶ್ವರ ಪುಟ 633 ಕನ್ನಡ ಅಧ್ಯಯನ ಸಂಸ್ಥೆ ಮೈಸೂರು 1976)

ISBN – 978-93-5526-247-9

ಮೇಲಿನ ಮಾತುಗಳು ತುಂಬಾ ಅರ್ಥ ಗರ್ಭಿತವಾಗಿದೆ. ಮಕ್ಕಳ ಫಲ ಕೊಡ್ತೀನಿ ನನಗೇನು ಕೊಡ್ತಿ ಕಂದಮ್ಮ ಎಂದಾಗ ಹೆಣ್ಣಾಗಲಿ ಗಂಡಾಗಲಿ ಹುಟ್ಟಿದ ಒಂಭತ್ತೆ ದಿನಕ್ಕೆ ನಿನಗೆ ಭಿಕ್ಷೆ ಕೊಟ್ಟು ಬಿಡ್ತಿನಿ ಎಂದು ಸಂಕಮ್ಮ ಮಾತು ಕೊಡುತ್ತಾಳೆ.

ಜೋಡಿ ಮಕ್ಕಳ ಕೊಟ್ಟಾರೆ ನಿಮ್ಮ
ಮುತ್ತಿನ ಜೋಳಗೆ ದಾನ ನೀಡುವೆನೋ

(ಡಾ. ಕೇಶವನ ಪ್ರಸಾದ್ ಮಲೆ ಮಾದೇಶ್ವರ ಪ್ರಸಾರಾಂಗ ಹಂಪಿ 1997 ಪುಟ 252)

ಸಂಕಮ್ಮನ ಭರವಸೆಯಂತೆ ಕಾಡುಬೆಂಡೆ ಕಾಯಿಯಲ್ಲಿ 'ಪಿಂಡುಪರಸಾದ' ಕೊಟ್ಟು ಅವಳ ರಕ್ಷಣೆಗೆ ಮನೆಯಲ್ಲಿ ಬಿಳಿಪಲ್ಲಿಯಾಗಿ ಮಾದೇಶ್ವರ ಉಳಿಯುತ್ತಾನೆ, ಹುಟ್ಟುವ ಮಕ್ಕಳನ್ನು ಕುಲವನ್ನು ತನ್ನ ಪಂಥಕ್ಕೆ ಸೇರಿಸಿಕೊಳ್ಳುವುದು ಮಾದೇವನಿಗೆ ಮುಖ್ಯ. ಹಾಗಾಗಿ ಸಂಕಮ್ಮಳ ಮಕ್ಕಳಾದ ಕಾರಯ್ಯ–ಬಿಲ್ಲಯ್ಯ ಮಾದೇಶ್ವರನ ಸೇವೆಗೆ ಮೀಸಲಾದವರಾಗಿ ದೀಕ್ಷೆ ಪಡೆದು ಗುಡ್ಡರಾಗುತ್ತಾರೆ. ಮಾದೇಶ್ವರ ಇದನ್ನು ಸಾಧಿಸುವುದಕ್ಕಾಗಿ ಮಕ್ಕಳ ಫಲಕೊಡಲು ಒಪ್ಪುವ ಮೊದಲೆ ಮಕ್ಕಳನ್ನು ತನಗೆ ಮೀಸಲು ಬಿಡುವ ಭಾಷೆಪಡೆಯುತ್ತಾನೆ. ಮಾದೇಶ್ವರ ಈ ಉದ್ದೇಶಕ್ಕೆ ನೆರವಾಗುವ ಬೇಟೆ, ಭಾಷೆ, ಮಾಟ ಮುಂತಾದ ಆಶಯಗಳು ಬುಡಕಟ್ಟು ಕಾವ್ಯವೊಂದರ ಅಂತಃಸತ್ವವನ್ನು, ತೆರೆದಿಡುವ ರೀತಿಯನ್ನು ನೋಡಿದಾಗ ಪ್ರಾಚೀನ ಜೀವನ ಪದ್ಧತಿಯ ಸಾಂಸ್ಕೃತಿಕ ಪಳೆಯುಳಿಕೆಗಳು ಇವತ್ತಿಗೂ ಬೆಳಕು ಚೆಲ್ಲತ್ತಾ ಹೋಗುತ್ತದೆ.

ಮಾದೇಶ್ವರ ಕಾವ್ಯದಲ್ಲಿನ ಸಂಕಮ್ಮನ ಸಾಲುಗಳು ಜನಪ್ರಿಯವಾದ ಕಥಾಭಾಗವಾಗಿದೆ. ಸಂಕಮ್ಮನ ಸಾಲು ಸೋಲಿಗರ ಆಹಾರ ಸಂಗ್ರಹಣೆಯ ವಿಧಾನದ ಬಗ್ಗೆ ಬೆಳಕು ಚೆಲ್ಲುತ್ತದೆ. ಕಾಡಿನ ಜೀವಿಗಳ ಸೋಲಿಗ ದಂಪತಿಗಳ ಕಥೆಯಿದು. ಸೋಲಿಗರ ನೀಲಯ್ಯ ಒಬ್ಬ ಪಶುಪಾಲಕ, ಈತನ ಮಡದಿ ಸಂಕಮ್ಮ ಹುಟ್ಟು ಬಂಜೆ. ಇವರಿಬ್ಬರ ನಡುವೆ ಮಾದೇಶ್ವರನ ಪ್ರವೇಶ. ಸಂಕಮ್ಮನ ಮನವೊಲಿಸಿಕೊಳ್ಳುವುದರ ಮೂಲಕ ತನ್ನ ಒಕ್ಕಲನ್ನು ಪಡೆಯುವುದೂ ಆಗಿದೆ. ಈ ಸಂಕಮ್ಮನ ಸಾಲುಗಳನ್ನು ಕುರಿತು ಡಾ. ಹಿ.ಚಿ ಬೋರಲಿಂಗಯ್ಯನವರು ಈ ರೀತಿ ಪಟ್ಟಿ ಮಾಡಿದ್ದಾರೆ. "ಪ್ರಮುಖವಾಗಿ ಏಳುಸಂಗತಿಗಳನ್ನು ಗಮನಿಸಬಹುದಾಗಿದೆ. 1. ಸೋಲಿಗರಬೇಟೆ. 2. ಬೇಟೆಯ ಅವಧಿ. 3. ಸಂಕಮ್ಮನ ಫಲಾಪೇಕ್ಷೆ 4. ನೀಲಯ್ಯನ ಅನುಮಾನ 5.ಮಾಟದ ಪ್ರಾಮುಖ್ಯತೆ. 6.ಮಕ್ಕಳ ಭಾಗ್ಯ ನೀಡುವ ಕ್ರಿಯೆ 7. ಹುಟ್ಟಿದ ಮಕ್ಕಳನ್ನು ಮೀಸಲುಬಿಡುವ ಒಪ್ಪಂದವು ಪ್ರಮುಖವಾಗಿದೆ." ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಒಟ್ಟಿನಲ್ಲಿ ಸಂಕಮ್ಮನು ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುವ ಗಟ್ಟಿಗಿತ್ತಿಯಾಗಿ, ಮಾತೃ ಪ್ರಧಾನ ವ್ಯವಸ್ಥೆಯ ಪ್ರತಿರೂಪವಾಗಿ ಕಂಡುಬರುತ್ತಾಳೆ. ಸ್ತ್ರೀ ಸ್ವಾತಂತ್ರ್ಯ ಬಯಸುವ ಇಂದಿನ ಕಾಲಕ್ಕೆ ಸಂಕಮ್ಮ ಕಿಡಿಯಾಗಿ ಕಾಣಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಸ್ತ್ರೀಯನ್ನು ಕೇವಲ ಕಾಮದ ದೃಷ್ಟಿಯಿಂದ ಕಾಮವನ್ನು ತಣಿಸುವ ಸಾಧನವೆಬಂತೆ, ಭೋಗವಸ್ತುವಿನಂತೆ, ಮಕ್ಕಳನ್ನು ಹಡೆಯುವ ಯಂತ್ರವೆಂಬ ಮನೋಭಾವ ಬದಲಾಗಿ; ಇಂದು ಹೆಣ್ಣಿನ ನಡೆಯುತ್ತಿರುವ ಶೋಷಣೆ, ಅತ್ಯಾಚಾರ ಮೊದಲಾದ ಗಂಡಾಂತರಗಳು ತೊಲಗಿ ಹೆಣ್ಣಿಗೂ ನಮ್ಮಂತೆಯೆ ಜೀವ ಮತ್ತು ಮನಸ್ಸಿದೆ, ಆಸೆ ಆಕಾಂಕ್ಷೆಗಳಿವೆ; ಪುರುಷನಿಗೆ ಸಮಾನವಾಗಿ ಜೀವಿಸುವ ಹಕ್ಕಿದೆ ಎಂಬ ಸಮಾನತೆಯ ಭಾವ ಮೂಡುವವರೆಗೆ ಸಂಕಮ್ಮ ಪುರುಷಪ್ರಧಾನ ವ್ಯವಸ್ಥೆಯ ಒಂದು ಕಿಡಿಯಾಗಿ ಗೋಚರಗೊಂಡ ಇವಳು ಸ್ತ್ರೀ ಪ್ರಪಂಚದಲ್ಲಿ – ಸಮಾಜದಲ್ಲಿ ಕಾಳ್ಗಿಚ್ಚಾಗಿ ವ್ಯಾಪಿಸುವ ಸಂದರ್ಭ ಎಂದು ಬರುವುದೋ ಎಂಬ ನಿರೀಕ್ಷೆಯಲ್ಲಿ...

**ಪರಾಮರ್ಶನ ಗ್ರಂಥಗಳು**


1. ಡಾ.ರಾಜಶೇಖರ ಪಿ.ಕೆ(ಸಂ)–ಮಲೆಯ ಮಾದೇಶ್ವರ, ಸಂಪುಟ 1 ಮತ್ತು 2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ;2006
2. ಡಾ.ಕೇಶವನ್ ಪ್ರಸಾದ್.ಕೆ (ಸಂ) ಮಲೆಯ ಮಾದೇಶ್ವರ ಒಂದು ಅಧ್ಯಯನ,ನವೀನ ಪ್ರಕಾಶನ, ಬೆಂಗಳೂರು, 1996
3. ಡಾ.ಚೆಲುವರಾಜು–ಕನ್ನಡ ಜನಪದ ಮಹಾಕಾವ್ಯಗಳ ಪರ್ಯಾಯ ವಿವೇಚನೆ,ನಾಗರತ್ನ ಪ್ರಕಾಶನ,2011


***

## 8. ಜನಪದ ಮಹಾಕಾವ್ಯಗಳಲ್ಲಿ ದೈವಿಕತೆ

ಪ್ರೊ. ಚಂದ್ರಶೇಖರ್.ಎನ್

ಜನಪದವೆಂಬುದು ಸಜೀವ ಸಂಬಂಧಗಳ, ಸಜಾತೀಯ ಭಾವನೆಗಳಿಂದ ಅವಿರ್ಭೂತಗೊಂಡ ಸಾಹಿತ್ಯ ಪ್ರಕಾರ. ಇಲ್ಲಿ ದೇಶ, ಕಾಲ, ಭಾಷೆ ಹಾಗೂ ನೆಲ–ಜಲಗಳ ಹಂಗಿಲ್ಲ, ತಾನು ಉಂಡದ್ದನ್ನು ಇತರರಿಗೂ ಉಣಬಡಿಸುವ, ಕಂಡದ್ದನ್ನು ಪರರಿಗೂ ತೋರುಗೊಡುವ ಮನೋ ಭೂಮಿಕೆಯಲ್ಲಿ ಹುಟ್ಟಿಕೊಂಡದ್ದೇ ಜನಪದ.

ಭವದ ಭಯವಿಲ್ಲದ ನಿರ್ಭಯ ಚೆಲುವಂಗೆ ನಾನೊಲಿದೆ
ಕುಲ, ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆನವ

ಎಂಬ ಅಕ್ಕಮಹಾದೇವಿಯವರ ವಚನದ ಸಾಲಿನಂತೆ ತನ್ನ ಅಲೌಕಿಕ ಪತಿಯಾದ ಚೆನ್ನಮಲ್ಲಿಕಾರ್ಜನನಿಗೆ ಅಕ್ಕ ತನ್ನನ್ನು ಅರ್ಪಿಸಿಕೊಂಡಂತೆ ಜನಪದವು ಕುಲ–ಮತ, ವರ್ಣ–ವರ್ಗಗಳ ಯಾವ ಹಂಗೂ ಇಲ್ಲದ, ನಿಗರ್ವಿತನದಿಂದ ಕೂಡಿದ ಮುಗ್ಧ ಮನಸ್ಸುಗಳಲ್ಲಿ ಜೀವನಪ್ರೀತಿಯನ್ನ ತುಂಬಿ, ಅವರೆದೆಗಳಲ್ಲಿ ಸಮತೆಯ ಹಣತೆಯನ್ನು ಹಚ್ಚಿತಾವು ಮಾಡುವ ಕಾಯಕದಲಿ ನಿಷ್ಠೆ, ಪ್ರಾಮಾಣಿಕತೆ ಹಾಗೂ ಪರೋಪಕಾರಿ ಮೌಲ್ಯಗಳನ್ನ ಬಿತ್ತಿ ಅವರನ್ನು ಅಮರರನ್ನಾಗಿಸಿದೆ.

ಜನಪದವು ಒಂದು ಸೀಮಾತೀತವಾದ ಸಾಹಿತ್ಯ ಪ್ರಕಾರವಾಗಿದ್ದು, ನಿರ್ಧಿಷ್ಟ ಚೌಕಟ್ಟಿಗೊಳಪಡಿಸಿ ನೋಡುವ ಕ್ರಮ ಸಂಕುಚಿತವೆನಿಸಬಹುದು. ಕಾರಣ ಭೌಗೋಳಿಕ ಪ್ರದೇಶ ಯಾವುದೇ ಆಗಿರಲಿ ಅಲ್ಲಿಯೂ ಒಂದು ಮಾನವ ಸಂಸ್ಕೃತಿ ಅಸ್ತಿತ್ವದಲ್ಲಿರುತ್ತದೆಯಲ್ಲವೇ? ಅದಕ್ಕೊಂದು ಭಾಷೆ, ಅದರಲ್ಲಷ್ಟು ಭಾವನೆಗಳು ಮಿಳಿತಗೊಂಡು ತನ್ನದೇ ಆದ ಸಾಂಸ್ಕೃತಿಕ ಪರಂಪರೆಗೆ ನಾಂದಿಯಾಗಿರುತ್ತದೆ ಹಾಗೂ ಅನನ್ಯ ಅನುಭವದೊಂದಿಗೆ ಬದಲಾವಣೆಗೆ ಒಗ್ಗಿಕೊಂಡು ಅಲ್ಲಿನ ಬದುಕ–ಬವಣೆಗಳನ್ನು ಅರಿಯುವ ಕಾರ್ಯಕ್ಕೆ ಜನಪದವು ಕೈದೀವಿಗೆಯಾಗಿದೆ.

ಜಾಗತೀಕರಣದ ಸಂದರ್ಭದಲ್ಲಿಂದು ಅನ್ವಯಿಕ, ತೌಲನಿಕ ಮತ್ತು ತಾಂತ್ರಿಕ ಜ್ಞಾನಶಿಸ್ತುಗಳ ನಡುವೆ ಮಾನವಿಕಶಾಸ್ತ್ರಗಳೇ ಮಬ್ಬಾಗಿರುವಾಗ ಇನ್ನು ಭಾಷೆ ಹಾಗೂ ಸಾಹಿತ್ಯದ ಪರಿಕರಗಳನ್ನು ಆಧುನಿಕ ಸಮಾಜದಲ್ಲಿ ಪರಿಣಾಮಕಾರಿಯಾಗಿ ಬಳಸುವ ಅತಿಜರೂರಿನ ಕೆಲಸವಾಗ ಬೇಕಿರುವುದು ನಮ್ಮ ಅರಿವಿಗೆ ಬರದೇ ಇರಲು ಸಾಧ್ಯವಿಲ್ಲ. ಹೀಗಿರುವಾಗ ಮತ್ತದೇ ಹಳೇ ಬೇರಿಗೆ ನೀರೆರೆದು ಗೊಬ್ಬರ ಹಾಕಿ ಹೊಸ ಚಿಗುರನ್ನ ಪಡೆಯುವ ಕಾರ್ಯ ಜತನದಿಂದ ಮಾಡಬೇಕಿದ್ದು ಇದಕ್ಕೆ ಹೊಸ ತಲೆಮಾರಿನ ಸಂಯೋಜನೆಯು ಅಗತ್ಯವಾಗಿದೆ. ಜನಪದರಲ್ಲಿನ ನೆಲಮೂಲ ಚಿಂತನೆ ಹಾಗೂ ತಮ್ಮ ಬದುಕಿನ ವಿವಿಧ ನಿಯೋಗಗಳಾದ ಕುಟುಂಬ, ಸಮುದಾಯ, ವೃತ್ತಿ–ಪ್ರವೃತ್ತಿಗಳೊಂದಿಗಿನ ಅವರ ತಾಧ್ಯಾತ್ಮ ಎಷ್ಟು ಅವಿಚ್ಛಿನ್ನವಾದುದು ಎಂಬುದನ್ನು ಮನಗಾಣಬೇಕಿದೆ.

ಜನಪದ ಮಹಾಕಾವ್ಯಗಳು (Folk epics) ಅವು ರಚನೆಗೊಂಡ ಪರಿಸರ, ಭಾಷೆ, ಆಯಾ ಪ್ರದೇಶ ಹಾಗೂ ಸಾಂಸ್ಕೃತಿಕ ನಾಯಕರ ಸಾಧನೆ ಹಾಡು–ಪಾಡುಗಳನ್ನು ಕಾವ್ಯದ ಮೂಲಕ ಕಟ್ಟಿಕೊಡುವುದಾಗಿದೆ. ಪ್ರತಿಯೊಂದು ಸಮಾಜದಲ್ಲೂ ಸಾಮಾಜಿಕ ಏಣಿ ಶ್ರೇಣಿಗಳಿದ್ದು ಅವು ತನ್ನದೇ ಆದ ಸಾಂಸ್ಕೃತಿಕ ತಳಹದಿಯ ಮೇಲೆ ರೂಪುಗೊಂಡಿರುತ್ತವೆ. ಆಯಾ ಸಮುದಾಯಗಳು ಒಳಗೊಂಡಿರುವ ಪಾರಂಪರಿಕ ಜ್ಞಾನ ಮತ್ತು ತಿಳುವಳಿಕೆಗಳು ಅವರ ಕಾವ್ಯಭಾಷೆಯ ಮೂಲಕ ಹೊರ ಸಮಾಜಕ್ಕೆ ಪರಿಚಯಗೊಳ್ಳುತ್ತವೆ ಹಾಗೂ ಕರ್ನಾಟಕದಲ್ಲಿ ಮಹಾಕಾವ್ಯಗಳ ಪರಂಪರೆ ದೊಡ್ಡದಾಗಿದೆ. ಜುಂಜಪ್ಪನಕಾವ್ಯ, ಮಲೆಯ ಮಹದೇಶ್ವರನಕಾವ್ಯ, ಮಂಟೇಸ್ವಾಮಿಕಾವ್ಯ, ಹಾಲುಮತದಕಾವ್ಯ ಹೀಗೇ ಆಯಾ ಪ್ರಾದೇಶಿಕ ವೈವಿಧ್ಯತೆಗಳಿಂದ ಕೂಡಿದ ಈ ಪ್ರತಿಯೊಂದು ಕಾವ್ಯಗಳು ಸಂಸ್ಕೃತಿಗಳ ಅಧ್ಯಯನಕ್ಕೆ ಹೊಸದಿಕ್ಕನ್ನು ಸೂಚಿಸುವುದರಲ್ಲಿ ಅನುಮಾನವಿಲ್ಲ. ಏಕೆಂದರೆ ಇಲ್ಲಿ ಜನಪದರು ನಿರ್ಮಿಸಿಕೊಂಡಿರುವ ಕಾವ್ಯದ ಭಾಷೆ, ಶೈಲಿ,ತಂತ್ರ ಮತ್ತು ಸಾಮಾಜಿಕ ಆಯಾಮಗಳು ಆ ಕಾವ್ಯದ ಗೆಲುವಿಗೆ ಕಾರಣವಾಗುತ್ತದೆ.

ಜನಪದ ಕಾವ್ಯಗಳಲ್ಲಿ ಕಾವ್ಯದ ಕೇಂದ್ರ ವ್ಯಕ್ತಿ ಒಬ್ಬನಿದ್ದು ಇದರ ಸುತ್ತ ಮೇಳೈಸಿಕೊಂಡ ಇತರ ಪಾತ್ರಗಳು ಪ್ರಧಾನ ಪಾತ್ರವನ್ನು ಹೊಗಳುವ, ಅದರ ಮಹತ್ವವನ್ನು ತಿಳಿಸುವ ಕೆಲಸ ಮಾಡುತ್ತವೆ. ಮಹಾಕಾವ್ಯಗಳೆಂದರೆ ಯಾವುದೋ ಪುರಾಣಕಾಲದ ಶಿಷ್ಟ ರಚನೆಗಳಲ್ಲ ಜನಪದರಲ್ಲಿ ಈ ಪರಿಕಲ್ಪನೆಯೂ ಇಲ್ಲ. ಕಾರಣ ಇದು ಮೌಖಿಕ ಪರಂಪರೆಯಿಂದ ಕೂಡಿದ್ದು ಹಾಡು, ಪದ, ಕಥೆಗಳ ಮೂಲಕ ವ್ಯಕ್ತಗೊಳ್ಳುತ್ತದೆ. ಹೀಗೆ ಬೆಳೆದಂತಹ ಕಾವ್ಯ ಕೇವಲ

ISBN – 978-93-5526-247-9

ಒಬ್ಬ ವ್ಯಕ್ತಿಯದಾಗಿರದೆ ಸಮಷ್ಠಿಯ ಸ್ವತ್ತಾಗಿದೇ ಮುಂದೆ ಆ ಭಾಷಿಕ ಸಮುದಾಯದ ಸಂಸ್ಕೃತಿಯ ಪ್ರತೀಕವಾಗಿ ಮೂಡಿಬರುತ್ತದೆ ಇವುಗಳನ್ನೇ ಮಹಾಕಾವ್ಯಗಳು ಎನ್ನಬಹುದು. ಬಹುಕವಿ ಕೃತವಾದ ಇದನ್ನು ವಿಕಾಸಶೀಲ ಮಹಾಕಾವ್ಯ ಎಂದೂ ಕೆಲವರು ಗುರುತಿಸಿದ್ದಾರೆ.

ಜನಪದ ಮಹಾಕಾವ್ಯವು ಜನಪದದ ಇತರೆ ಪ್ರಕಾರಗಳಂತೆ ಯಾವುದೇ ಒಂದು ಪ್ರಸಂಗದಿಂದ ಆರಂಭಗೊಂಡು ವ್ಯಕ್ತಿಯಿಂದ ವ್ಯಕ್ತಿಗೆ ಮುಟ್ಟಿ, ಆಯಾ ಸಾಂದರ್ಭಿಕ ಬದಲಾವಣೆಗೆ ಮೈಯೊಡ್ಡಿ ವಿಕಾಸ ಹೊಂದುತ್ತಾ ಹೋಗಿ ತನ್ನಲ್ಲಿ ಹಲವಾರು ಮಾರ್ಪಾಡುಗಳಿಗೆ ಹಾಗೂ ನಾವೀನ್ಯತೆಗೆ ಕಾರಣವಾಗಿ ಹೊಸರೂಪವನ್ನು ಪಡೆದುಕೊಳ್ಳುತ್ತದೆ. ಕಥಾನಕಗಳನ್ನು ಹಾಡುವ ಗಾಯಕರು ವಿಭಿನ್ನ ವೀರರ, ಸಾಧಕರ, ಪವಾಡ ಪುರುಷರಿಗೆ ಸಂಬಂಧಿಸಿದ ಪ್ರಸಂಗಗಳನ್ನು ಎಳೆಯಾಗಿ ಜೋಡಿಸಿ ಅದನ್ನು ಮಹಾಕಾವ್ಯವಾಗಿ ರೂಪಗೊಳಿಸುತ್ತಾರೆ.

ಮೌಖಿಕ ಮಹಾಕಾವ್ಯದಲ್ಲಿ ಇತಿಹಾಸ, ಐತಿಹ್ಯ ಮತ್ತು ಪುರಾಣ ಎಂಬ ಮೂರು ಅಂಶಗಳು ಪ್ರಧಾನವಾಗಿದ್ದು, ಒಬ್ಬ ವ್ಯಕ್ತಿ ಒಂದು ಸಮಾಜ ಮತ್ತು ಸಂಸ್ಕೃತಿಯ ರಕ್ಷಣೆಗೆ ಹೋರಾಡಿದ್ದರೆ ಜನರಲ್ಲಿ ಅವನ ಬಗೆಗೆ ಗೌರವಾದರಗಳು ಬೆಳೆದು ಅವನ ವ್ಯಕ್ತಿತ್ವ ಅಸಮಾನ್ಯ ಮಟ್ಟಕ್ಕೇರಿ ಕಾಲಾನಂತರ ಅವನ ಬಗೆಗಿನ ಭಯ, ಭಕ್ತಿಗಳು ವಿಕಾಸಹೊಂದುತ್ತಾ ಹೋಗಿ ಆ ವ್ಯಕ್ತಿಯನ್ನು ದೈವತ್ವಕ್ಕೇರಿಸುವುದು ಸ್ವಾಭಾವಿಕ. ಹಾಗಾಗಿ ಜನಪದ ಮಹಾಕಾವ್ಯವು ನಾಯಕಕೇಂದ್ರಿತ ಕಥೆಯಾಗಿದ್ದು ಆಯಾ ಪ್ರಾದೇಶಿಕವಾಗಿ ಇಂತಹ ಮಹಾಪುರುಷರನ್ನು ಪರಿಚಯಿಸುವ ಕೆಲಸವಾಗಿದ್ದು ಸಾಮಾನ್ಯ ಜನಜೀವನದ ವಾಸ್ತವ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನವಿರುವ ಕಾರಣ ಜನಪದ ಮಹಾಕಾವ್ಯವು ವಿಶಿಷ್ಟವೆನಿಸಿ ಎಲ್ಲಾ ಕಾಲಕ್ಕೂ ಪ್ರಸ್ತುತವೆನಿಸುತ್ತದೆ.

ಜನಪದ ಮಹಾಕಾವ್ಯದ ಸ್ವರೂಪವನ್ನು ಕುರಿತು ಸಿ.ಎನ್.ರಾಮಚಂದ್ರನ್‌ರವರ ಅಭಿಪ್ರಾಯದಂತೆ ಶಿಷ್ಟ ಹಾಗೂ ಜನಪದ ಮಹಾಕಾವ್ಯಗಳಲ್ಲಿ ಕೆಲ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರ್ತಿಸಿ ಈ ಮೌಖಿಕ ರಚನೆಗಳನ್ನು ಮಹಾಕಾವ್ಯ ಎಂದು ಗುರ್ತಿಸುವುದಕ್ಕಿಂತ 'ಕಥನಕಾವ್ಯ'ವಾಗಿ ಅಭ್ಯಸಿಸಬಹುದು ಎನ್ನುತ್ತಾರೆ.

**ದೈವಿಕತೆಗೆ ಸಂಬಂಧಿಸಿದಂತೆ ನಮ್ಮ ಭಾಗದಲ್ಲಿ ಪ್ರಚಲಿತವಾಗಿರುವ ಹೆಣ್ಣು ದೇವತೆಗಳ ಕಥೆಗಳು**

**ದೊಡ್ಡಮ್ಮನಕಥೆ :–** ಶಿವನ ಮಗಳ ರೂಪವಾದ ದೊಡ್ಡಮ್ಮಗ್ರಾಮದೇವತೆಯಾಗಿ ಜನರ ಕಷ್ಟ ನಿವಾರಣೆಗಾಗಿ ಅವತರಿಸಿ ಬರುವ ಸನ್ನಿವೇಶವನ್ನು ಜನಪದರು ಕಾವ್ಯದ ಮೂಲಕ ಕಟ್ಟಿ ಹಾಡಿದ್ದು ಇಂದಿಗೂ ಈ ಆಚರಣೆಗಳು ಜೀವಂತವಾಗಿರುವುದನ್ನಿಲ್ಲಿ ವಿವರಿಸಲಾಗಿದೆ.

ದೊಡ್ಡಮ್ಮ ಎಂಬೋಳು ದೊಡ್ಡವ್ಳು ಚಿಕೌಳು
ಕಣ್ಣು ನಮ್ಮೇಲೆ ಬಿಡಬೇಡಾ–ಮಹಾತಾಯಿ
ಕಣ್ಣೇನಲ್ಲವ್ಳೆಯಮದುರ್ಗಿ

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಕಾಕಚೊಕ್ಕಂಡಹಳ್ಳಿ ನನ್ನೂರು. ರೇಷ್ಮೆ ಕೃಷಿ ಮತ್ತು ಹೈನುಗಾರಿಕೆ ಆಧಾರಿತ ಕುಟುಂಬಗಳಿದ್ದು ಬರಗಾಲ, ಕಾಯಿಲೆ–ಕಸಾಲೆ, ಸಾವು–ನೋವು, ಮೂಕ ಜೀವಗಳು ಆಯತಪ್ಪೋದು ಜಾಸ್ತಿ ಆದಾಗ ಗ್ರಾಮದ ಪ್ರಮುಖರು ಊರ ಚಾವಡಿಯ ಬಳಿ ಸಭೆ ಸೇರಿ ದೈವಕಾರ್ಯಗಳನ್ನು ಕೈಗೊಳ್ಳುವ ತೀರ್ಮಾನ ಮಾಡುತ್ತಾರೆ. ಅದರ ಭಾಗವಾಗಿ ಗ್ರಾಮ ಸೇವಕ (ಊರತೋಟಿ)ನೂ ಆ ಸಭೆಯ ಭಾಗವಾಗಿದ್ದು ಅಲ್ಲಿನ ವಿಚಾರಗಳನ್ನು ಊರಿನ ಬೀದಿ ಬೀದಿಗಳಲ್ಲಿ ತಮಟೆ ಬಾರಿಸುವ ಮೂಲಕ ಮನೆ ಮನೆಗೂ ಸುದ್ದಿಯನ್ನು ಸಾರಿ ಬರುತ್ತಾನೆ. ಆ ನಂತರಪೂಜಾ ಕಾರ್ಯಗಳಿಗೆ ತಗಲುವ ವೆಚ್ಚವನ್ನು ಭರಿಸಲು ಮನೆಗೊಂದಿಷ್ಟು ಪ್ರಮಾಣದ ವರವೆ(ಹಣ)ಯನ್ನು ಸಂಗ್ರಹಿಸಿ ಮುಂದಿನ ಕೆಲಸಗಳಿಗೆ ಚಾಲನೆ ನೀಡುವರು.

ಅತ್ತಾಗ್ಸಾರೆಂದ್ರೇ ಇತ್ತಾಗ್ಸಾರಿದ್ನೋ
ಎತ್ತಾಗ್ಸಾರಿದ್ನೋ ತಳ್ವಾರ–ಗೋಡಾನ್ಮಾನೆ
ಅಕ್ಕೀ ಹೊಂಬಾಳೆ ಬರ್ಲಿಲ್ಲಾ

ISBN – 978-93-5526-247-9

ಎಂಬ ಸಾಲುಗಳು ಗ್ರಾಮದ ಪೂಜಾ ವಿಧಿ ವಿಧಾನಗಳು ಸುಸೂತ್ರವಾಗಿ ನಡೆಯಲು ಊರತೋಟಿಯ ಪಾತ್ರವೇನೆಂಬುದನ್ನು ವಿವರಿಸುತ್ತದೆ. ಕಾರಣದೇವಿಯ ಪೂಜೆಗೆ ಊರಿನ ಮುಖ್ಯಸ್ಥ(ಗೌಡ)ನ ಮನೆಯ ಅಕ್ಕಿ ಹೊಂಬಾಳೆ ಮುಖ್ಯವಾಗಿರುತ್ತವೆ. ಅವು ಸಕಾಲಕ್ಕೆ ತಲುಪದೆ ಹೋದರೆ ತೋಟಿಯ ಕಾರ್ಯದಲ್ಲಿ ಯಾವುದಾದರೂ ಲೋಪವಾದಾಗ ಅಲ್ಲಿನ ಆಚರಣೆಗೆ ಅಡಚಣೆಯುಂಟಾಗುತ್ತದೆ ಎಂಬುದನ್ನು ಸೂಚಿಸುತ್ತದೆ.

ಕೂಗಳತೆ ದೂರದಲ್ಲಿರುವ ನಮ್ಮ ಗ್ರಾಮಪಂಚಾಯ್ತಿ ಕೇಂದ್ರಸ್ಥಾನ ಭಕ್ತರಹಳ್ಳಿಯಲ್ಲಿನ ಒಳ್ಳೇ ನೀರು (ಸಿಹಿ ನೀರು)ಕುಂಟೆಯ ಬಳಿ ವಾಸವಾಗಿರುವ ದೊಡ್ಡಮ್ಮದೇವಿ ಹಾಗೂ ಆ ಊರಿನ ಪಕ್ಕದಚೌಡ ಸಂದ್ರಗ್ರಾಮದಲ್ಲಿ ನೆಲೆಸಿರುವ ಸಪ್ಪಲಮ್ಮದೇವಿಯರನ್ನು ಊರಿಗೆ ಕರೆತಂದು ಅವರಿಗೆ ಮೂರು ವಾರಗಳ ಕಾಲ ನಿತ್ಯಪೂಜೆ ಮಾಡಿ, ಪ್ರತಿ ಮನೆಯಲ್ಲೂ ತಣುವು ಮುದ್ದೆ ಶಾಸ್ತ್ರ ಮಾಡಿಕೇಡನ್ನು ಊರಿಂದ ಹೊರಹಾಕುವ ಪದ್ಧತಿಯಂತೆ ಅವುಗಳನ್ನು ಊರ ಹೊರಗಿನ ನೀರಿರುವ ಜಾಗದಲ್ಲಿ ಬಿಟ್ಟುಪೂಜೆ ಮಾಡಿ ಬರುತ್ತಾರೆ. ಇದಾದ ನಂತರದೇವಿ, ಕಲ್ಲು ನೀರುಕರಗೋ ಸಮಯ ಅಂದ್ರೆ ದೇವತೆಗಳ ಸಂಚರಿಸೋ ಸಮಯದಾಗ ಊರೆಲ್ಲಾ ಸಂಚರಿಸಿ ಊರಲ್ಲಿ ಶಾಂತಿ ನೆಮ್ಮದಿ ನೆಲೆಸುವಂತೆ ಮಾಡುತ್ತಾಳೆ ಅದರ ಭಾಗವಾಗಿ ಅವಳು...

ಹಾರವ್ವರಗೇರೀಗೆ ಹೋದಾಳು ದೊಡ್ಡಮ್ಮಾ  
ನಾಗಾಳ ಹೂವಾ ಮಡ್ಲಾಲ್ಲಿ- ಕಟ್ಕಂಡು  
ನಾರೀರ್ಗ್ಗೊಂದೊಂದಾ ಕೊಡ್ತಾಳೆಅಂದರೆ..

ನಮ್ಮ ಭಾರತೀಯ ಆಚರಣೆಗಳಲ್ಲಿ ಹೆಣ್ಣು ದೇವತೆಗಳು ಶಕ್ತಿಸ್ವರೂಪಿಣಿಯರು, ಆದರೆ ನಮ್ಮ ಮನೆಯ ಮಡದಿಯರು ಮತ್ತು ಸಹೋದರಿಯರನ್ನು ಹೊರತುಪಡಿಸಿ, ಯಾಕೆಂದರೆ ಅವರು ಗಂಡು ಸಂತಾನದ ಮುಂದೆ ಅಶಕ್ತರು ಎಂಬ ಮನಸ್ಥಿತಿಯಿರುವುದರಿಂದಲೇ. ಹಾಗೆಯೇ ಮುತ್ತೈದೆತನವನ್ನು ಪುರುಷನ ಅಸ್ತಿತ್ವ ಅಥವಾ ಜೀವಂತಿಕೆಯೊಡನೆ ಮುಡಿಹಾಕಿ ಆಚರಿಸಲಾಗುತ್ತದೆ ಅದರ ಭಾಗವಾಗಿಯೇ ಇಲ್ಲಿ ದೊಡ್ಡಮ್ಮದೇವಿಯೂ ಕೂಡಾ ತನ್ನ ಮಡಿಲಲ್ಲಿನ ಹೂವನ್ನು ಹೆಣ್ಣುಮಕ್ಕಳಿಗೆ ನೀಡುತ್ತಿರುವುದು ಅವರ ಮಾಂಗಲ್ಯ ಭಾಗ್ಯದ ಗಟ್ಟಿತನಕ್ಕಾಗಿ ಎಂಬುದರ ಸಂಕೇತವಾಗಿದೆ.

ಒಂದು ಸೂಕ್ತವಾದ ದಿನನಿಗದಿ ಮಾಡಿ ಊರೋರೆಲ್ಲಾ ಸೇರಿ ಅವರ ಶಕ್ತ್ಯಾನುಸಾರ ಜಾತ್ರೆಮಾಡಿ ಅಮ್ಮನೋರಿಗೆ ಜೋಡಿ ತಂಬಿಟ್ಟು ದೀಪ ಬೆಳಗಿ ಮಾಂಸದಡಿಗೆ ಮಾಡಿ ನೆಂಟರಿಷ್ಟರನ್ನೆಲ್ಲಾ ಕರೆದು ಊಟ ಹಾಕಿ ನೆಮ್ಮದಿಯಾಗಿ ದೇವರುಗಳಿಗೆ ಸೀರೆ-ಕುಪ್ಪಸ, ಅಕ್ಕಿ-ಬೇಳೆ, ಬೆಲ್ಲ-ಕೊಬ್ಬರಿಬಟ್ಟಲು ತಂದುಮಡಿಲು ತುಂಬಿ ಅವರನ್ನು ತಮ್ಮ ಮೂಲ ಸ್ಥಾನಕ್ಕೆ ಸಾಗುಹಾಕುವ ಕೆಲಸ ಬಹು ಶ್ರದ್ಧೆಯಿಂದ ಮಾಡುತ್ತಾರೆ.

**ಕೊಂತ್ಯಮ್ಮನಕಥೆ:-**

ಪುರಾಣದಕಥೆಯ ಪಾತ್ರದಾರಿಯಾದ ಪಾಂಡವರ ಮಾತೆ ಕುಂತೀದೇವಿಯನ್ನು ಮಹಾಭಾರತ ಪ್ರಸಂಗದಲ್ಲಿ ಕಷ್ಟ, ಸತ್ಯ, ನಿಷ್ಠೆ ಹಾಗೂ ಧರ್ಮ ವಿಜಯದ ದ್ಯೋತಕವಾಗಿ ಬಿಂಬಿಸಲಾಗಿದೆ. ಪುರಾಣದ ಪಾತ್ರಗಳನ್ನು ದೈವತ್ವಕ್ಕೇರಿಸಿ ಮಹಾಕಾವ್ಯಗಳಲ್ಲಿ ಆಕೆಯು ಅನುಭವಿಸಿದ ಸಮಸ್ಯೆಗಳಿಗೆ ಸಾಮಾಜಿಕ ಮೌಲ್ಯವೆಂಬ ಮುದ್ರೆ ಒತ್ತಲಾಯಿತು.

ಹಾದಿ ಬೀದಿಯ ಬಟ್ಟೆಯ  
ಚಿಂದಿಯನ್ನೆತ್ತಿಕೊಂಡು-ಕೊಂತ್ಯಮ್ಮ  
ಹೊಲೆವದಕೆಚೂಜಿಲ್ಲದೆ- ಕೊಂತ್ಯಮ್ಮ  
ಹೊಲಿವದಕೆದಾರಿಲ್ಲದೆ  
ಅಪ್ಪಸಣಬನೆ ದಾರ- ಕೊಂತ್ಯಮ್ಮ  
ಸಣ್ಣಗೆಎಡದುಕಂಡು  
ಹಂಚಿಕಡ್ಡಿಯ ಮುರುದು - ಕೊಂತ್ಯಮ್ಮ  
ಚೂಜಿಯ ಮಾಡದಳೊ..

ಅಂದರೆ ತಾನು ಐದುಜನ ಮಕ್ಕಳನ್ನು ಕಟ್ಟಿಕೊಂಡು ಕಾಡು–ಕಣಿವೆಗಳಲ್ಲಿ ಬದುಕನ್ನು ನಡೆಸಿದ ಪರಿಹಾಗೂ ಹಸಿವು ಅವರನ್ನು ಕಾಡಿದ ರೀತಿಯನ್ನು ನಾವಿಲ್ಲಿಕಾಣಬಹುದು. ಈ ಮೂಲಕ ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಕಷ್ಟ ಸಹಿಷ್ಣತೆಯನ್ನು ಒಂದು ನೈತಿಕಮೌಲ್ಯವನ್ನಾಗಿ ಮಾಡಿ ಸ್ತ್ರೀ ಸಮಾಜಕ್ಕೆ ಕೆಲವು ಕಟ್ಟುಪಾಡುಗಳನ್ನು ಹಾಕಿ ಅವಳ ಸ್ವಾತಂತ್ರ್ಯವನ್ನು ಹರಣಗೊಳಿಸುವ ಕಾರ್ಯವಾಗಿದೆ ಎಂಬುದು ನನ್ನ ವಾದ. ಬೇಡಿತಂದ ಆಹಾರ, ಹರಿದ ಬಟ್ಟೆ, ಬೆಟ್ಟದ ಗುಹೆಯಡಿಯ ಆಶ್ರಯಸ್ಥಾನ ಮುಂತಾದ ಸವಾಲುಗಳನ್ನು ಪವಾಡಗಳ ರೀತಿಯಲ್ಲಿ ಈ ಪುರಾಣ ಪುರುಷರು ಮೆಟ್ಟಿ ನಿಲ್ಲುವುದು ಇವರಲ್ಲಿನ ದೈವಿಕ ಗುಣಗಳನ್ನು ಲೋಕಕ್ಕೆ ಸಾರುವ ಕೆಲಸವನ್ನು ಈ ಜನಪದ ಮಹಾಕಾವ್ಯಗಳು ಮಾಡಿವೆ. ಅದರ ಭಾಗವಾಗಿ ಇದೇ ಸಂದರ್ಭದಲ್ಲಿ ಕುಂತೀ ಪುತ್ರರಿಂದ ನಡೆದ ಪವಾಡಗಳನ್ನು ಈ ಕೆಳಗಿನಂತೆ ಗುರ್ತಿಸಬಹುದು.

ಗಂಜಿಯಕಾಯಿಸಲೆಂದುಕೊಂತ್ಯಮ್ಮ
ಸುತ್ತಾಮುತ್ತಾ ನೋಡಿದಳು
ಮಡಕೆಗಳೆ ಮೊದಲೇಇಲ್ಲ
ಬೆಂಕಿ ಎಂಬೋದುಇಲ್ಲ
ತಾಯಿದುಖಃವ ನೋಡಿದ
ತನ್ನ ಬಾಣವತೆಗುದಾನೆ–ಅರ್ಜುನ
ಅರೆಯಕಲ್ಲಿಗೆ ಹೊಡೆದ
ಬೆಂಕಿಯಕೊಟ್ಟನಲ್ಲೆಕೊಂತ್ಯಮ್ಮಗೆ

ನಂತರ ಕಲ್ಲಿನ ಬಾಂಡಲೆಯನ್ನೂ ತನ್ನ ತಾಯಿಗೆ ನೀಡುತ್ತಾನೆ. ಇಲ್ಲಿ ಗಮನಿಸಬಹುದಾದ ಸಂಗತಿಯೆಂದರೆ ಇಷ್ಟೆಲ್ಲಾ ಪವಾಡ ಹಾಗೂ ಮಾಯೆಯನ್ನು ಹೊಂದಿದ್ದ ಮಹಿಮಾ ಪುರುಷರಿಗೇಕೆ ಇಂತಹ ಸ್ಥಿತಿ ಒದಗಿಬಂತು ಎಂದಾಗ ಮತ್ತೆ ಇವೆಲ್ಲಾ ಅವರತ್ಯಾಗ ಗುಣವನ್ನು ಜನಪ್ರಿಯಗೊಳಿಸುವ ಹಾಗೂ ಆ ಪಾತ್ರಗಳನ್ನು ಚಿರಸ್ಥಾಯಿಗೊಳಿಸುವ ಕಾರ್ಯಕ್ಕೆ ನಾಂದಿಯಾಯಿತೆನ್ನಬಹುದು. ಸಾಮಾನ್ಯವಾಗಿ ಹಸುಗೂಸುಗಳು ನಿದ್ರಿಸುವಾಗ ಸಣ್ಣಗೆ ನಗುವುದು ಸಹಜ ಆದರೆ ಇಲ್ಲಿ ಲೋಕಮಾತೆಯಾದ ಕೊಂತ್ಯಮ್ಮನೇ ಈ ಮಕ್ಕಳನ್ನು ನಗಿಸುವ ಅಳಿಸುವ ಕೆಲಸಮಾಡುತ್ತಾಳೆ ಎಂದು ನನ್ನಜ್ಜಿ ಹೇಳುತ್ತಿದ್ದದ್ದು ಇಂದಿಗೂ ನಮ್ಮ ಜನಪದರ ಗಾಢವಾದ ನಂಬಿಕೆಗಳಿಗೆ ಸಾಕ್ಷಿಯಾಗಿದೆ.

**ಸ್ಯಾಸಿ ಚಿನ್ನಮ್ಮನಕಥೆ:–**

ಈ ಕಥೆಯು ಉತ್ತರಕರ್ನಾಟಕದ ಭಾಗದಲ್ಲಿ ಸೊಸೆ ಎಂಬುದು ಆಡುಮಾತಿನಲ್ಲಿ 'ಸ್ಯಾಸಿ'ಎಂಬುದಾಗಿ ಬಳಕೆಗೆ ಬಂದಿದೆ ಎಂಬುದು ತಜ್ಞರ ಅಭಿಪ್ರಾಯ. ಮೂಲತಃ ಶೈವ ಸಂಸ್ಕೃತಿಯ ಅತ್ತೆಗೌಡ ನಾಗಮ್ಮನಿಂದ ವೈದಿಕ ಸಂಸ್ಕೃತಿಯ ಸೊಸೆ ಚಿನ್ನಮ್ಮ ಅನುಭವಿಸುವ ಶಿಕ್ಷೆ, ಕಿರುಕುಳಗಳ ಒಟ್ಟು ಸಾರ ಹಾಗೂ ಆಕೆಯಜನನ, ನಾಮಕರಣ, ವಿದ್ಯಾಭ್ಯಾಸ, ವಿವಾಹ ಮತ್ತು ಅತ್ತೆಮನೆ ವಾಸದ ವಿವಿಧ ಘಟ್ಟಗಳನ್ನು ಕುರಿತು ಭಾವನಾತ್ಮಕ ವಿವರಣೆ ನೀಡುವುದರೊಂದಿಗೆ ನೋಡುಗರಲ್ಲಿ ಕಥಾನಾಯಕಿಯ ವ್ಯಕ್ತಿತ್ವದ ಅಚ್ಚೊತ್ತುತ್ತಾರೆ. ಅತ್ತೆಯಕಾಟದಿಂದ ಬೆಸತ್ತ ಚಿನ್ನಮ್ಮ ತನ್ನ ನೆಂಟರಿಗೂ, ಮನೆದೇವರು ವೆಂಕಟೇಶ್ವರನಿಗೂ ಶಾಪ ಹಾಕುತ್ತಾಳೆ ಆಗ ಕೊರವಂಜಿ ವೇಷದಲ್ಲಿ ವೆಂಕಟೇಶ್ವರನು

ಕೂದಲಿಗೊಂದು ಮುತ್ತಾವು ಪೋಣಿಸ್ಯಾನಮ್ಮಾ
ಬೆಳ್ಳಿ ಕುಬಸ ಬಲಗಾರ ಸೀರೆ ತಾ ಮಾಡ್ಯಾನಮ್ಮಾ
ನಾನೂರು ಮೊಳತಾಳಿ ಕಟ್ಯಾನಮ್ಮ
ಬೆಳ್ಳಿ ಬಳಿ ಅರಿಶಿಣ ಬಳಿ ಹಾಕ್ಯಾನಮ್ಮ

ಎಂಬಂತೆ ಮೇಲಿನ ಪೋಷಾಕನ್ನು ಧರಿಸಿ ಪ್ರತ್ಯಕ್ಷವಾಗಿ ಅವಳ ಮೊರೆಯಾಲಿಸುತ್ತಾನೆ. ಆದರೆ ದಕ್ಷಿಣ ಭಾಗದಲ್ಲಿ ಅದರಲ್ಲೂ ಗಡಿ ಜಿಲ್ಲೆಗಳಾದ ನಮ್ಮ ಕೋಲಾರ ಮತ್ತು ಚಿಕ್ಕಬಳ್ಳಾಪುರ ಭಾಗದಲ್ಲಿ 'ಸಾಸುಲ ಸಿನ್ನಮ್ಮ' ಎಂಬ ಹೆಸರಿನ ತೆಲುಗು ಅವತರಣಿಕೆಯ ನಾಟಕವಾಗಿ ಇದು ಇಂದಿಗೂ ಪ್ರದರ್ಶನಗೊಳ್ಳುತ್ತದೆ. ಹಬ್ಬ, ಜಾತ್ರೆ, ಕರಗ ಹಾಗೂ ಉತ್ಸವಗಳ ವೇಳೆ ಈ ಕಥೆಗಾರರಿಗೆ ಹೆಚ್ಚು ಬೇಡಿಕೆಯಿರುತ್ತದೆ ಈ ಕಥೆಯ ಪಾತ್ರಧಾರಿಗಳು ಹೆಚ್ಚು ಮುಳಬಾಗಿಲು

ISBN – 978-93-5526-247-9

ಮತ್ತು ಶ್ರೀನಿವಾಸಪುರ ತಾಲೂಕಿನ ವಿವಿಧ ಹಳ್ಳಿಗಳಿಗೆ ಸೇರಿದವರಾಗಿರುತ್ತಾರೆ. ಆದರೆ ಇಲ್ಲಿ ಸ್ವಾರಸ್ಯವಿರುವುದು ತಿಥಿ ಕಾರ್ಯಗಳಾದಾಗ. ಹೌದು, ಸಾವಾದ ಮನೆಯಲ್ಲಿ ನೋವಿನಾ ಛಾಯೆಯಿದ್ದು ಆ ವ್ಯಕ್ತಿಯ ಅಗಲಿಕೆ ಕುಟುಂಬದ ಸಮತೋಲನವನ್ನೇ ಬುಡಮೇಲು ಮಾಡಿರುತ್ತದೆ. ಹೀಗಿರುವಾಗ ತಿಂಗಳ ಹಾಗೂ ವರ್ಷದ ತಿಥಿಯ ಸಂದರ್ಭದಲ್ಲಿ ತಮ್ಮ ಸಂಬಂಧಿಕರು ಈ ನಾಟಕವನ್ನು ಆಯೋಜಿಸಿ ಸತ್ತವರ ಗುಣಗಾನ ಮಾಡುವುದರೊಂದಿಗೆ ದೈವತ್ವಕ್ಕೇರಿಸಿ ಅವರಗೈರನ್ನು ಮರೆಸುವಂತೆ ಹಾಸ್ಯ ಮಿಶ್ರಿತ ಸಂಭಾಷಣೆಯಿಂದ ನೆರೆದವರನ್ನು ರಂಜಿಸುವ ಕೆಲಸ ಮಾಡುತ್ತಾರೆ. ಅಂತೆಯೇ ಈ ನಾಟಕವನ್ನು ಅಹೋರಾತ್ರಿ ಪ್ರದರ್ಶನಗೊಂಡು, ಒಟ್ಟಾರೆ ಈ ಆಚರಣೆಗಳು ಎಲ್ಲಾ ಕಾಲಕ್ಕೂ ಚಾಲ್ತಿಯಲ್ಲಿದ್ದು ಆಯಾ ಸಂದರ್ಭಕ್ಕನುಸಾರವಾಗಿ ಮರುಹುಟ್ಟು ಪಡೆಯುತ್ತಲೇ ಇರುತ್ತವೆ.

**ಪರಾಮರ್ಶನ ಗ್ರಂಥಗಳು**

1.ಎಸ್.ಜಿ.ಸಿದ್ಧರಾಮಯ್ಯ ಮತ್ತು ಕೆ.ಆರ್. ಸಂಧ್ಯಾರೆಡ್ಡಿ 'ಸುವರ್ಣ ಜನಪದಕಾವ್ಯ'–ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

2.ಡಾ.ವೀರಣ್ಣದಂಡೆ ಮತ್ತು ಡಾ.ಶ್ರೀಪಾದಶೆಟ್ಟಿ 'ಸುವರ್ಣ ಜಾನಪದ ಲೇಖನಗಳು'–ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

3.ಜೀ.ಶಂ.ಪರಮಶಿವಯ್ಯ 'ಜಾನಪದ ಖಂಡಕಾವ್ಯಗಳು'–ಸಾಗರ್ ಪ್ರಕಾಶನ, ಬೆಂಗಳೂರು.

4.ವಕ್ತೃ :– ನನ್ನಜ್ಜಿ. ಮುನಿಯಮ್ಮ(89)ವರ್ಷ, ಕಾಕಚೊಕ್ಕಂಡಹಳ್ಳಿ, ಶಿಡ್ಲಘಟ್ಟ ತಾಲ್ಲೂಕು.

***

ISBN – 978-93-5526-247-9 

# 9. ಮಲೆ ಮಾದೇಶ್ವರ ಮಹಾಕಾವ್ಯ: ಸಾಂಸ್ಕೃತಿಕ ಚರಿತ್ರೆ.

**ಡಾ. ವಿಜಯ ಕುಮಾರ್. ಎಚ್.ಜಿ.**

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಾಕಾವ್ಯಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ.ಶಿಷ್ಟ ಸಾಹಿತ್ಯದ ಆರಂಭದ ಕಾಲಘಟ್ಟದಲ್ಲಿ ರಚಿತವಾದ ಕನ್ನಡದ ಎಲ್ಲಾ ಸಾಹಿತ್ಯ ಕೃತಿಗಳನ್ನು ಮಹಾಕಾವ್ಯಗಳೆಂದೇ ರೂಢಿಗತವಾಗಿ ಪರಿಗಣಿಸಲಾಗಿದೆ.ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯದ ರೂಪಗಳು ಮಹಾಕಾವ್ಯ ಅಷ್ಟೇ ಅಲ್ಲದೆ ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಮೀಮಾಂಸೆ, ಆತ್ಮಕಥೆ, ಅಂಕಣ ಬರಹ, ಪ್ರವಾಸ ಸಾಹಿತ್ಯ, ಪ್ರಬಂಧ ಸಾಹಿತ್ಯಹೀಗೆ ಹಲವಾರು ಕವಲುಗಳಾಗಿ ವಿಂಗಡಣೆಯಾಗಿದೆ.ಶಿಷ್ಟ ಸಾಹಿತ್ಯದಲ್ಲಿರುವಂತೆ ಜನಪದ ಸಾಹಿತ್ಯದಲ್ಲಿಯೂ ಸಹ ಕಾವ್ಯ, ಕಥೆ, ಗಾದೆ, ಒಗಟು, ಕಥನಗೀತೆ ಲಾವಣಿ, ಖಂಡಕಾವ್ಯ, ಮಹಾಕಾವ್ಯ ಹೀಗೆ ಹಲವು ಪ್ರಕಾರಗಳನ್ನು ಗುರುತಿಸಬಹುದಾಗಿದೆ.

ಇವುಗಳಲ್ಲಿ ಜನಪದ ಮಹಾಕಾವ್ಯಗಳು ತಮ್ಮ ವಿಷಯ, ವಸ್ತು, ಗಾತ್ರ, ಸ್ವರೂಪ, ಲಕ್ಷಣ, ವಿಶಿಷ್ಟ ಗಾಯನ ಸಂಪ್ರದಾಯ ಮುಂತಾದ ಹಲವು ದೃಷ್ಟಿಗಳಿಂದ ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನವೂ ವಿಶಿಷ್ಟವೂ ಸಂಕೀರ್ಣವೂ ಆಗಿದೆ. ನಮ್ಮ ಜನಪದ ಸಾಹಿತ್ಯದಲ್ಲಿ ಮಲೆ ಮಾದೇಶ್ವರ ಕಾವ್ಯ, ಮಂಟೆಸ್ವಾಮಿ ಕಾವ್ಯ, ಮೈಲಾರಲಿಂಗನ ಕಾವ್ಯ, ಎಲ್ಲಮ್ಮನ ಕಾವ್ಯ, ಜುಂಜಪ್ಪನ ಕಾವ್ಯ, ಮಹಾಕಾವ್ಯಗಳ ಸಾಲಿನಲ್ಲಿ ನಿಲ್ಲುತ್ತವೆ. ಇವುಗಳನ್ನು ಧಾರ್ಮಿಕ ಮಹಾಕಾವ್ಯಗಳು ಪರಂಪರೆಗೆ ಸೇರುತ್ತವೆ. ಸುದೀರ್ಘ ಕಥನಗಳನ್ನು ಒಳಗೊಂಡಿರುವ ಇವು ನಮ್ಮ ಜನಸಾಮಾನ್ಯರ ಸಾಂಸ್ಕೃತಿಕ ಬದುಕಿನ ಹಲವು ಮುಖಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಈ ಮಹಾಕಾವ್ಯಗಳ ನಾಯಕ ನಾಯಕಿಯರು ಜನಸಾಮಾನ್ಯರ ಮಧ್ಯದಿಂದಲೇ ಬಂದವರು.ಜನಸಾಮಾನ್ಯರ ನೋವು ನಲಿವುಗಳಿಗೆ ಸ್ಪಂದಿಸಿ, ಅವರ ಸಂಕಷ್ಟಗಳನ್ನು ಪರಿಹರಿಸುವವರು.ಆದ್ದರಿಂದ ತಲೆಮಾರಿನಿಂದ ತಲೆಮಾರಿಗೆ, ಒಂದು ಸಂಸ್ಕೃತಿಯ ನಿರ್ಮಾತೃಗಳಾಗಿ, ಸಂಸ್ಕೃತಿಯ ವಾಹಕರಾಗಿ, ಜನಸಾಮಾನ್ಯರ ನಾಲಿಗೆಯ ಮೇಲೆ ನಲಿದಿದ್ದಾರೆ.

ಚರಿತ್ರೆ–ಸಾಹಿತ್ಯ–ಜಾನಪದ ಇವು ಒಂದಕ್ಕೊಂದು ಪೂರಕವಾದವುಗಳೇ ಆಗಿರುತ್ತವೆ. ಆದರೆ ಶಿಷ್ಟ ಸಾಹಿತ್ಯಕ್ಕೆ ದೊರೆತ ಮನ್ನಣೆ ಜನಪದ ಸಾಹಿತ್ಯಕ್ಕೆ ದೊರೆಯದಿರುವುದು ವಿಪರ್ಯಾಸವೇ ಸರಿ. 19ನೇ ಶತಮಾನದ ಆರಂಭದವರೆಗೂ ಜಾನಪದ ಕ್ಷೇತ್ರ ಅಜ್ಞಾತವಾಗಿಯೇ ಉಳಿದಿತ್ತು.ನಂತರ ಜನಪದ ಸಾಹಿತ್ಯದಲ್ಲಿ ಅಡಗಿರುವ ಚಾರಿತ್ರಿಕ, ಸಾಂಸ್ಕೃತಿಕ ವೈಶಿಷ್ಟ್ಯಗಳು ಚರಿತ್ರಕಾರರನ್ನು ಬೆರಗಾಗಿಸಿದವು. ಅಲ್ಲಿಂದ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನ, ಸಂಶೋಧನೆಗಳು ಪ್ರಾರಂಭವಾದವು. ಅವುಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕೀರ್ಣಗಳು ನಡೆದು ಜಾನಪದ ಕ್ಷೇತ್ರದಲ್ಲಿ ದೊರೆಯುವ ಅನೇಕ ಚಾರಿತ್ರಿಕ ವಿಷಯಗಳಿಗೆ ವಿಶೇಷ ಗಮನ ಹರಿಸಲಾಯಿತು.

ಜನಪದ ಮಹಾಕಾವ್ಯಗಳು, ಲಾವಣಿಗಳು, ಮಧ್ಯಕಾಲೀನ ಚರಿತ್ರೆಯನ್ನು ಪುನರ್ ಸೃಷ್ಟಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಚರಿತ್ರೆಯಲ್ಲಿ ಅಲಕ್ಷತೆಗೆ ಒಳಗಾದ ಹಲವು ಧೀಮಂತ ವ್ಯಕ್ತಿತ್ವಗಳು, ಜನಸಾಮಾನ್ಯರ ಹಾಗೂ ನಾಡು ನುಡಿಯ ಹಿತರಕ್ಷಣೆಗಾಗಿ ಹೋರಾಡಿದ ಅವರ ಹೋರಾಟದ ಬದುಕುಗಳ ಹಲವು ರೋಚಕ ಘಟನೆಗಳು ಜನಪದ ಸಾಹಿತ್ಯದ ಮೂಲಕ ಮುಂಚೂಣಿಗೆ ಬಂದು ನಮ್ಮ ನವ ಚರಿತ್ರೆಯ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿವೆ.

ಚರಿತ್ರೆ ಯಾವಾಗಲೂ ನಿಖರವಾದ ದಾಖಲೆಗಳನ್ನು ಬಯಸುತ್ತದೆ. ಆದ್ದರಿಂದ ಶಿಷ್ಟ ಸಾಹಿತ್ಯದ ಮೂಲಕ ಈ ಸಮಾಜದ ಪ್ರತಿಷ್ಠಿತ ವರ್ಗಗಳು ತಮ್ಮ ಹಿತಾಸಕ್ತಿಗಾಗಿ ನಿರ್ಮಿಸಿಕೊಂಡು ಬಂದಿರುವ ಸಾಮಾಜಿಕ ಧಾರ್ಮಿಕ ಆರ್ಥಿಕ ರಾಜಕೀಯ ಚಟುವಟಿಕೆಗಳನ್ನೇ ಚರಿತ್ರೆಯೆಂದು ಸ್ವೀಕರಿಸಿದ್ದೇವೆ. ಇಂದಿಗೂ ರಾಜ ಮಹಾರಾಜರ ವೈಯಕ್ತಿಕ ಜೀವನ, ಅವರ ವಂಶಾವಳಿಗಳು, ಅವರ ದಿಗ್ವಿಜಯಗಳು, ಅರಮನೆಯ ಖಾಸಗಿ ಜೀವನಗಳನ್ನೇ ಚರಿತ್ರೆಯೆಂದು ಪರಿಗಣಿಸಿದ್ದೇವೆ. ವೇದ ಪುರಾಣಗಳಲ್ಲಿ ಉಲ್ಲೇಖಿಸಿದ ವರ್ಣಾಶ್ರಮ ಪದ್ಧತಿಯನ್ನು ನಮ್ಮ ಸಾಮಾಜಿಕ ವ್ಯವಸ್ಥೆಯನ್ನಾಗಿ ಧಾರ್ಮಿಕ ಆಚರಣೆಗಳನ್ನಾಗಿ ಒಪ್ಪಿಕೊಂಡಿದ್ದೇವೆ. ಈ ಚರಿತ್ರೆಯಲ್ಲಿ ಬರೀ ಪಟ್ಟಭದ್ರ ಹಿತಾಸಕ್ತಿಗಳ, ಪುರೋಹಿತಶಾಹಿ ಚಿಂತನೆಗಳೇ ತುಂಬಿವೆ. ಇವುಗಳಲ್ಲಿ ಎಲ್ಲಿಯೂ ಜನಸಾಮಾನ್ಯರ ಚರಿತ್ರೆ ಪ್ರವೇಶ ಪಡೆಯಲೇ ಇಲ್ಲ. ಜನಸಾಮಾನ್ಯರ ಸಾಂಸ್ಕೃತಿಕ ಬದುಕು ಚರಿತ್ರೆಯಲ್ಲಿ ಸ್ಥಾನ ಪಡೆಯಲು ಪ್ರಭುತ್ವ ಮತ್ತು ಪುರೋಹಿತಶಾಹಿ ವ್ಯವಸ್ಥೆ

ISBN – 978-93-5526-247-9

ಅವಕಾಶವನ್ನು ನೀಡಲೇ ಇಲ್ಲ. ಆದರೆ ಈ ಎಲ್ಲ ಜನಸಾಮಾನ್ಯರ ಸಾಂಸ್ಕೃತಿಕ ಬದುಕು, ಜನಪದ ಸಾಹಿತ್ಯದಲ್ಲಿ ಕಾಲದಿಂದ ಕಾಲಕ್ಕೆ ತಲೆಮಾರುಗಳಿಂದ ತಲೆಮಾರುಗಳಿಗೆ ವರ್ಗಾವಣೆಯಾಗುತ್ತಾ ಬಂದಿದೆ.ಜನಕೇಂದ್ರಿತ ಚರಿತ್ರೆಯನ್ನು ಶಿಷ್ಟ ಸಾಹಿತ್ಯ ಅತ್ಯಂತ ಪ್ರಜ್ಞಾಪೂರ್ವಕವಾಗಿಯೇ ನಿರ್ಲಕ್ಷಿಸಿಕೊಂಡು ಬಂದಿದೆ. ಶಿಷ್ಟ ಸಾಹಿತ್ಯ ತನ್ನ ಒಡಲಲ್ಲಿ ಪೋಷಿಸಿಕೊಂಡು ಬಂದಿರುವ ಪ್ರಭುತ್ವ ಕೇಂದ್ರಿತ ಸಾಂಸ್ಕೃತಿಕ ಚರಿತ್ರೆಗೆ ಪ್ರತಿರೋಧವಾಗಿ ಜನಪದ ಸಾಹಿತ್ಯ ಜನಕೇಂದ್ರಿತ ಸಾಹಿತ್ಯವನ್ನು ಪೋಷಿಸಿದ ಜನಪದರು ತಮ್ಮ ಸಾಂಸ್ಕೃತಿಕ ಚರಿತ್ರೆಯನ್ನು ತಮ್ಮದೇ ಸಾಹಿತ್ಯದಲ್ಲಿ ನಿರ್ಮಿಸಿಕೊಂಡಿದ್ದಾರೆ. ಅಲಕ್ಷತೆಗೆ ಒಳಗಾದ ಅಲಕ್ಷಿತ ಸಮುದಾಯಗಳ ಚರಿತ್ರೆ ಅಲಕ್ಷಿತ ಸಮುದಾಯಗಳಿಂದಲೇ ಸ್ಥಾಪಿತವಾಗಿರುವುದು ಒಂದು ಚಾರಿತ್ರಿಕ ದಾಖಲೆಯೇ ಸರಿ.

ಕನ್ನಡ ಜನಪದ ಮಹಾಕಾವ್ಯಗಳು ಇಂಥ ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನೇ ವಸ್ತುವಾಗಿಸಿಕೊಂಡಿವೆ. ಈ ಮಹಾಕಾವ್ಯಗಳಲ್ಲಿ ಬರುವ ನಾಯಕರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ತುಳಿತಕ್ಕೆ ಒಳಗಾದವರು ಆಗಿದ್ದಾರೆ. ಅಲ್ಲದೆ ಸಮಾಜದ ಅತ್ಯಂತ ತಳ ಸಮುದಾಯದ ಪ್ರತಿನಿಧಿಗಳಾಗಿ ಬಂದು ತಮ್ಮದೇ ಆದ ಚರಿತ್ರೆಯನ್ನು ಸೃಷ್ಟಿಸಿದ್ದಾರೆ.

ಈ ಮಹಾಕಾವ್ಯಗಳ ಪರಂಪರೆಯಲ್ಲಿ ಮಲೆ ಮಾದೇಶ್ವರನ ಕಾವ್ಯವು ಅತ್ಯಂತ ಮಹತ್ವಪೂರ್ಣವಾದದ್ದು. ಇದು ಧಾರ್ಮಿಕ ಮಹಾಕಾವ್ಯವೆಂದು ಗುರ್ತಿಸಲ್ಪಟ್ಟಿದ್ದರೂ ಸಹ ಈ ಕಾವ್ಯ ಹಲವು ಮಹತ್ವದ ಚಾರಿತ್ರಿಕ, ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಕಥಾವಸ್ತು, ಆಚರಣಾ ವಿಧಾನ, ಗಾಯನ ಸಂಪ್ರದಾಯಗಳ ದೃಷ್ಟಿಯಿಂದಲೂ ಅತ್ಯಂತ ಗಮನಾರ್ಹ. ಇದರಲ್ಲಿ ಮುಖ್ಯವಾಗಿ 7ಸಾಲುಗಳ ಸುಧೀರ್ಘ ಕಥನಗಳಿವೆ. ಈ ಕಾವ್ಯದ ನಾಯಕನನ್ನು ಜನಪದರು ಮಾದಪ್ಪ, ಮಾದಯ್ಯ, ಮಾದೇಶ, ಮಾದೇಶ್ವರ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಾದೇಶ್ವರ ನಮ್ಮ ಕನ್ನಡ ಪರಂಪರೆಯಲ್ಲಿ ಒಬ್ಬ ಪೌರಾಣಿಕ ವ್ಯಕ್ತಿಯಾಗಿ, ಸಾಂಸ್ಕೃತಿಕ ನಾಯಕನಾಗಿ, ಚಾರಿತ್ರಿಕ ವ್ಯಕ್ತಿಯಾಗಿ ಏಕಕಾಲಕ್ಕೆ ಗುರುತಿಸಿಕೊಂಡಿದ್ದಾನೆ. ಆದ್ದರಿಂದ ಈ ಮಹಾಕಾವ್ಯವನ್ನು ಧಾರ್ಮಿಕ, ಸಾಂಸ್ಕೃತಿಕ, ಚಾರಿತ್ರಿಕ ಹಿನ್ನೆಲೆಯಲ್ಲಿ ಚರ್ಚಿಸಬಹುದಾದ ಸಾಧ್ಯತೆಗಳಿವೆ. ಇಲ್ಲಿ ಮಲೆ ಮಾದೇಶ್ವರ ಮಹಾಕಾವ್ಯದ ಚಾರಿತ್ರಿಕ ಅಂಶಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಮಾದೇಶ್ವರನ ಹುಟ್ಟಿನ ಬಗ್ಗೆ ಯಾವುದೇ ಚಾರಿತ್ರಿಕ ದಾಖಲೆಗಳು ಲಭ್ಯವಿಲ್ಲ. ಬಹುತೇಕ ಎಲ್ಲ ಕಾವ್ಯಗಳ ನಾಯಕರ ಹುಟ್ಟಿನ ಬಗ್ಗೆ ಸಾಕಷ್ಟು ಗೊಂದಲಗಳಿವೆ. ಅದಾಗ್ಯೂ ಇವರು ತಳಸಮುದಾಯವೊಂದರ ಪ್ರತಿನಿಧಿ ಎಂಬುದಂತೂ ಸ್ಪಷ್ಟ.ಇಲ್ಲಿ ಮಾದಯ್ಯ ಎಂಬ ಹೆಸರೇ ಇದನ್ನ ಪುಷ್ಟಿಕರಿಸುತ್ತದೆ.ಶ್ರವಣ ದೊರೆ ಸಾಲಿನಲ್ಲಿ ಶ್ರವಣ ದೊರೆ ಮಾದೇಶ್ವರನನ್ನು ಮಾದಿಗ ಸಮುದಾಯದವನೆಂದು ಹೀಯಾಳಿಸುತ್ತಾನೆ. ಅಲ್ಲದೆ ಮಾದಿಗ ಎಂಬ ಸಮುದಾಯ ಇಂದಿಗೂ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕಂಡು ಬರುವ ಸಮಾಜದ ಒಂದು ಸಮುದಾಯವಾಗಿದೆ.ಆದ್ದರಿಂದ ಹೆಸರೇ ಸೂಚಿಸುವಂತೆ ಮಾದೇಶ್ವರ ಒಂದು ಶೋಷಿತ ಸಮುದಾಯದ ಪ್ರತಿನಿಧಿಯಾಗಿ ಬಂದು ಪ್ರಭುತ್ವವನ್ನು ವಿರೋಧಿಸಿ ಅದರೊಂದಿಗೆ ಸಂಘರ್ಷ ನಡೆಸಿದವನು.ಆದರೆ ಇಂದು ಮಾದೇಶ್ವರನ ಹುಟ್ಟಿನ ಬಗೆಗೆ ಪುರಾಣ ಕಥೆಯನ್ನು ಹೆಣೆಯಲಾಗಿದೆ. ಏಕೆಂದರೆ ಮಾದೇಶ್ವರನ ಒಕ್ಕಲು ಅಥವಾ ಅವನ ಕಾವ್ಯವನ್ನು ಹಾಡುವ ಗುಡ್ಡರು ನಮ್ಮ ದೈವವನ್ನು ಶಿಷ್ಟ ದೈವಗಳ ಶ್ರೇಷ್ಠ ಸಾಲಿನಲ್ಲಿ ನಿಲ್ಲಿಸುವ ಪ್ರಯತ್ನದಿಂದ ಈ ಪುರಾಣಗಳೂ ಸೃಷ್ಟಿಯಾಗಿವೆ. ಈ ಪುರಾಣ ಕಥೆಗಳು ನಂಬಲು ಅಷ್ಟು ಅರ್ಹವಲ್ಲದ ವಿಷಯಗಳನ್ನು ಒಳಗೊಂಡಿದೆ.ಶಿಷ್ಟರಂತೆ ಜನಪದರು ತಮ್ಮ ದೈವವಾದ ಮಾದೇಶ್ವರರ ಜನನವನ್ನು ಅಸಹಜ ರೀತಿಯಲ್ಲಿ ಸೃಷ್ಟಿಸಿದ್ದಾರೆ. ಮೊದಲು ಮಾದೇಶ್ವರ ಅಲೆಮಾರಿಯಾಗಿದ್ದು ತನ್ನ ತಂದೆ ತಾಯಿಯರು ಯಾರು ಎಂಬುದು ಸಹ ತಿಳಿದಿರುವುದಿಲ್ಲ. ನಂತರ ಶರಣ ದಂಪತಿಗಳಾದ ಉತ್ತರಾಜಮ್ಮ, ಚಂದ್ರಶೇಖರಮೂರ್ತಿಯರ ಮಗನಾಗಿ ಜನಿಸುತ್ತಾನೆ. ಆದರೆ ಇವರ ಜನನ ಎಲ್ಲಾ ಸಾಮಾನ್ಯರಂತೆ ಜನನೇಂದ್ರಿಯದಿಂದ ನಡೆಯುವುದಿಲ್ಲ.ಇವರು ಉತ್ತರಾಜಮ್ಮನ ಬಲ ಭುಜದಿಂದ ಜನಿಸುತ್ತಾರೆ. ಜನನೇಂದ್ರಿಯ ಮಲಮೂತ್ರಗಳನ್ನು ಹೊರಹಾಕುವುದರಿಂದ ಅದನ್ನು 'ಹೊಲೆ' ಎಂದು,ಅಂತಹ ಅಂಗಗಳಲ್ಲಿ ಜನಿಸಿದವರು ಶ್ರೇಷ್ಠರಲ್ಲಎಂಬ ಕಲ್ಪನೆಗಳು ನಮ್ಮ ಪುರಾಣಗಳಲ್ಲಿವೆ. ಆದ್ದರಿಂದ ಶಿಷ್ಟ ದೈವಗಳಂತೆ ತಮ್ಮ ಜನಪದ ದೈವಗಳು ಸಹ ಶ್ರೇಷ್ಠವೆಂದು ಪ್ರತಿಪಾದಿಸುವ ನಿಟ್ಟಿನಲ್ಲಿ ಮಾದೇಶ್ವರರ ಜನನವನ್ನು ಪುರಾಣೀಕರಿಸುವುದು ಇಲ್ಲಿ ಗಮನಾರ್ಹ. ಚಾರಿತ್ರಿಕವಾಗಿ ಮಾದೇಶ್ವರ ಜನಸಾಮಾನ್ಯರ ನಡುವೆ ಬಾಳಿ ಬದುಕಿದ ತಳ ಸಮುದಾಯವೊಂದರ ಪ್ರತಿನಿಧಿ ಎಂಬುದಂತು ಸ್ಪಷ್ಟ.

ಮಾದೇಶ್ವರ ಕಾವ್ಯದ ಆರಂಭದ ತಾಳುಗತೆಯಲ್ಲಿ ಕೆಲವು ಚಾರಿತ್ರಿಕ ವ್ಯಕ್ತಿಗಳಿಗೂ ಮಾದೇಶ್ವರನಿಗೂ ಸಂಬಂಧ ಕಲ್ಪಿಸಲಾಗಿದೆ.ಮಾದೇಶ್ವರನ ಕಾಲ 12ರಿಂದ 15ನೇ ಶತಮಾನವೆಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. 12ನೇ ಶತಮಾನದಲ್ಲಿ ಶರಣ ಚಳುವಳಿಯ ಮೂಲಕ ಸಮಾಜೋ–ಧಾರ್ಮಿಕ ಚಳುವಳಿಯನ್ನು ಹುಟ್ಟು ಹಾಕಿದ ಶರಣರೊಂದಿಗೆ ಮಾದೇಶ್ವರನಿಗೂ ಸಂಬಂಧವನ್ನು ಕಲ್ಪಿಸಿದ್ದಾರೆ.ಮಾದೇಶ್ವರ ಬಸವಾದಿ ಶರಣರನ್ನು ಪರೀಕ್ಷಿಸಿ ನೋಡುತ್ತಾನೆ. ಇದೊಂದು ಕಲ್ಪಿತ ಪುರಾಣವಾಗಿದೆಯೇ ಹೊರತು ಅದಕ್ಕೆ ಯಾವುದೇ ಚಾರಿತ್ರಿಕ ಆಧಾರಗಳಿಲ್ಲ. ಶರಣರ ಯಾವೊಂದು ವಚನಗಳಲ್ಲಿಯೂ ಮಾದೇಶ್ವರನ ಬಗ್ಗೆ ಸ್ಪಷ್ಟ ಉಲ್ಲೇಖಗಳಿಲ್ಲ. ಆದರೂ ಜನಪದರು ಮಾದೇಶ್ವರನನ್ನು 12ನೇ ಶತಮಾನದ ಶರಣರ ಸಾಲಿಗೆ ಸೇರಿಸಿದ್ದಾರೆ.ಈ ಮೂಲಕ ಅವನನ್ನು ಒಬ್ಬ ಚಾರಿತ್ರಿಕ ವ್ಯಕ್ತಿಯಾಗಿ ಬಿಂಬಿಸುವ ಪ್ರಯತ್ನ ಇಲ್ಲಿ ನಡೆದಿದೆ.

ಮಲೆಮಾದೇಶ್ವರನ ಮಹಾಕಾವ್ಯ ಹಲವು ಚಾರಿತ್ರಿಕ ಘಟ್ಟಗಳ ಸಾಂಸ್ಕೃತಿಕ ಸ್ಥಿತ್ಯಂತರಗಳ ಮೇಲೆ ಬೆಳಕು ಚೆಲ್ಲುತ್ತದೆ.ಮಾನವ ತಾನು ಬೆಳೆದು ಬಂದ ಪ್ರತಿಯೊಂದು ಹಂತವನ್ನು ಈ ಕಾಲದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಮುಖ್ಯವಾಗಿ ಮೂರು ಮುಖ್ಯ ಚಾರಿತ್ರಿಕ ಘಟ್ಟಗಳನ್ನು ಗುರುತಿಸಬಹುದು. ಮೊದಲನೇ ಹಂತ ಬೇಟೆ ಮತ್ತು ಆಹಾರ ಸಂಗ್ರಹಣೆ.ಎರಡನೆಯ ಹಂತ ಪಶುಪಾಲನೆ ಮತ್ತು ಕೃಷಿ ಚಟುವಟಿಕೆ. ಮೂರನೆಯದು ಜಮೀನ್ದಾರಿ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆ.ಇವು ಮಾನವನ ಪ್ರಗತಿ ಹಂತಗಳು ಆಗಿವೆ. ಮಾನವ ಜನಾಂಗದ ಉಗಮದ ಕಾಲದಿಂದಲೂ ಬೇಟೆ ಮತ್ತು ಆಹಾರ ಸಂಗ್ರಹಣೆ ಮೊದಲ ಹಂತವಾಗಿದೆ.ಸಂಕಮ್ಮನ ಸಾಲಿನಲ್ಲಿ ಸೋಲಿಗರ ಬುಡಕಟ್ಟು ಸಾಂಸ್ಕೃತಿಕ ಆಚರಣೆಗಳು ಅವರ ಬದುಕಿನ ಕ್ರಮಗಳು ಈ ಹಂತಕ್ಕೆ ಸೇರಿವೆ. ಸೋಲಿಗ ಬುಡಕಟ್ಟುಗಳಲ್ಲಿ ವರ್ಷದಲ್ಲಿ ಒಂಬತ್ತು ತಿಂಗಳು ಬೇಟೆ ಮತ್ತು ಆಹಾರ ಸಂಗ್ರಹಣೆಗೆ ಹೋಗುತ್ತಾರೆ. ಇಲ್ಲಿ ಪ್ರಾಣಿ ಬೇಟೆಯ ಜೊತೆ ವಿವಿಧ ರೀತಿಯ ಜೇನು ಬೇಟೆಯ ಬಗ್ಗೆ ಉಲ್ಲೇಖಿಸಲಾಗಿದೆ. ಇಡೀ ವರ್ಷಕ್ಕೆ ಸಾಲುವಷ್ಟು ಮುಖ್ಯವಾದ ಆಹಾರ ಧಾನ್ಯಗಳನ್ನು, ಗಿಡಮೂಲಿಕೆಗಳನ್ನು ಸಹ ಸಂಗ್ರಹಿಸುತ್ತಾರೆ. ಆಹಾರ ಸಂಗ್ರಹಣೆ ಎಂಬುದು ಎಲ್ಲಾ ಕಾಲದಲ್ಲಿಯೂ ಕಂಡುಬರುವ ಚಾರಿತ್ರಿಕ ಹಂತವಾಗಿದೆ.

ಮಾತೃ ಮೂಲೀಯ ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದ ಬುಡಕಟ್ಟು ಸಮುದಾಯಗಳು ಪುರುಷಪ್ರಧಾನ ವ್ಯವಸ್ಥೆಯತ್ತ ಹೊರಳುತ್ತಿರುವುದರ ಸೂಚನೆಗಳು ಈ ಕಾಲದಲ್ಲಿ ದೊರೆಯುತ್ತವೆ. ಬುಡಕಟ್ಟು ಸಮುದಾಯಗಳ ಕುಟುಂಬದಲ್ಲಿ ಹಾಗೂ ಸಮುದಾಯದಲ್ಲಿ ಸ್ತ್ರೀಗೆ ವಿಶೇಷ ಸ್ಥಾನ ಕಲ್ಪಿಸಲಾಗಿತ್ತು. ಅವಳಿಗೆ ಎಲ್ಲ ರೀತಿಯ ಸ್ವಾತಂತ್ರ್ಯಗಳಿದ್ದವು, ಸಂಗಾತಿಯ ಆಯ್ಕೆಯಿಂದ ಮಕ್ಕಳನ್ನು ಪಡೆಯುವವರೆಗೂ ಅವಳಿಗೆ ಆಯ್ಕೆಗಳಿದ್ದವು.ನಂತರ ಕಾಲ ಬದಲಾದಂತೆ ಸ್ತ್ರೀ ಸಂಪತ್ತಿನ ಸಂಕೇತವಾಗಿ ಬದಲಾಗುತ್ತಾ ಬಂದಿದ್ದಾಳೆ.ಸಂಕಮ್ಮನ ಸಾಲಿನಲ್ಲಿ ನೀಲಯ್ಯನು ಸಂಕಮ್ಮನನ್ನು ತೆರ ಕೊಟ್ಟು ವಿವಾಹ ಮಾಡಿಕೊಂಡಿರುತ್ತಾನೆ. ಅವಳ ಎಲ್ಲಾ ಸ್ವಾತಂತ್ರಗಳನ್ನು ಪ್ರತಿಬಂಧಿಸುತ್ತಾನೆ. ಅವನು ಬೇಟೆಗೆ ಹೋಗುವ ಸಂದರ್ಭದಲ್ಲಿ ಅವಳು ಬೇರೆ ಯಾರನ್ನಾದರೂ ಅರಸಿ ಹೋದಾಳೆಂದು, ಅವಳನ್ನು ಅನುಮಾನಿಸಿ, ಅವಳನ್ನು ಅನೇಕ ಸಂಕಷ್ಟಗಳಿಗೆ ಒಳಗುಮಾಡಿ ಅವಳ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಪ್ರತಿಬಂಧಿಸುತ್ತಾನೆ. ಅವಳನ್ನು ಸ್ತ್ರೀಯಾಗಿ ಪರಿಗಣಿಸದೆ ಒಂದು ಸಂಪತ್ತಾಗಿ ನೋಡುತ್ತಾನೆ. ಅವಳು ಬೇರೆಯವರ ಪಾಲಾಗುವುದನ್ನು ಸಹಿಸುವುದಿಲ್ಲ. ಅವಳನ್ನು ತನ್ನ ವಶದಲ್ಲಿ ಇಟ್ಟುಕೊಳ್ಳಲು ಮಾಟ–ಮೋಡಿಯಂತಹ ತಾಂತ್ರಿಕ ವಿದ್ಯೆಗಳನ್ನು ಪ್ರಯೋಗಿಸುತ್ತಾನೆ. ಚರಿತ್ರೆಯಲ್ಲಿ ನಡೆದ ಇಂತಹ ಹಲವು ಸಾಂಸ್ಕೃತಿಕ ಪಲ್ಲಟಗಳು ಪುರುಷಪ್ರಧಾನ ವ್ಯವಸ್ಥೆ ಸ್ತ್ರೀಯರ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಹತ್ತಿಕ್ಕಿ ತಮ್ಮ ಪ್ರಾಬಲ್ಯ ಮೆರೆಯುವುದನ್ನು ಇಲ್ಲಿ ಸೂಕ್ಷ್ಮವಾಗಿ ಅವಲೋಕಿಸಬಹುದು.

ಎರಡನೇ ಚಾರಿತ್ರಿಕ ಘಟ್ಟ ಪಶುಪಾಲನೆ–ಕೃಷಿ ಜೀವನ. ಈ ಹಂತದಲ್ಲಿ ಮಾನವ ಅತ್ಯಂತ ಬುದ್ಧಿವಂತ ಪ್ರಾಣಿ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಪ್ರಾಣಿಗಳನ್ನು ತನ್ನ ಅನುಕೂಲಕ್ಕಾಗಿ ಪಳಗಿಸಿ, ಅವುಗಳನ್ನು ಸಾಕಲು ಪ್ರಾರಂಭಿಸುತ್ತಾನೆ. ಹಸು, ಕುರಿಯಂತಹ ಸಾಧು ಪ್ರಾಣಿಗಳನ್ನು ಸಾಕುವುದರಿಂದ ತಾನು ಆಹಾರವನ್ನು ಹುಡುಕುತ್ತಾ ಅಲೆಯುವುದು ತಪ್ಪಿತು.ಆಹಾರದ ಜೊತೆಗೆ ಅವುಗಳ ಚರ್ಮದಿಂದ ಗಾಳಿ, ಮಳೆ, ಚಳಿ, ಬಿಸಿಲುಗಳಿಂದ ತನ್ನ ದೇಹವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಯಿತು. ನೀರು ಹುಲ್ಲುಗಾವಲುಗಳು ಸಮೃದ್ಧವಾಗಿದ್ದ ಸ್ಥಳಗಳಲ್ಲಿ ನೆಲೆ ನಿಲ್ಲಲು ಪ್ರಾರಂಭಿಸಿದ. ಅಲೆಮಾರಿ ಜೀವನದಿಂದ ಗ್ರಾಮಜೀವನಕ್ಕೆ ಕಾಲಿಟ್ಟ.ಮಾದೇಶ್ವರ ಕಾವ್ಯದಲ್ಲಿ ಅವರು ಸಮುದಾಯ ಜೀವನ ನಡೆಸುವುದರ ಬಗ್ಗೆ ಉಲ್ಲೇಖಗಳಿವೆ. ಸಂಕಮ್ಮನ ಸಾಲಿನಲ್ಲಿ ಬುಡಕಟ್ಟು ಸೋಲಿಗರು, ಪೋಡುಗಳನ್ನು

ISBN – 978-93-5526-247-9 

ನಿರ್ಮಿಸಿಕೊಂಡಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ಮದುವೆ ಬೇಟೆಯಂತಹ ಶುಭ ಸಮಾರಂಭಗಳಲ್ಲಿ ಈ ಎಲ್ಲಾ ಪೋಡಿನ ಜನರು ಒಗ್ಗೂಡುತ್ತಾರೆ.ದಟ್ಟವಾದ ಅರಣ್ಯಗಳಲ್ಲಿ ಸಮತಟ್ಟಾದ ಪ್ರದೇಶಗಳಲ್ಲಿ ಈ ಪೋಡುಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಈ ಸಂದರ್ಭದಲ್ಲೇ ಪಶುಪಾಲನೆಯ ಜೊತೆಗೆ ಕೃಷಿ ಚಟುವಟಿಕೆಯಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಸಂಕಮ್ಮನ ಸಾಲಿನಲ್ಲಿ ನೀಲೇಗೌಡನ ಮೊದಲ ಮಕ್ಕಳು ಕೃಷಿಯಲ್ಲಿ ತೊಡಗಿದರೆ, ನೀಲಯ್ಯ ಪಶುಪಾಲನೆಯಲ್ಲಿ ತೊಡಗಿರುತ್ತಾನೆ. ಹಾಗೆ ಬೇವಿನಹಟ್ಟಿ ಕಾಳಮ್ಮನ ಕಥೆಯಲ್ಲಿ ಕಾಳಮ್ಮ ರೈತ ಮಹಿಳೆಯಾಗಿ ಕೃಷಿಯಲ್ಲಿ ತೊಡಗಿದರೇ ಕಾಳಮ್ಮನ ಗಂಡ ಪಶುಪಾಲನೆಯಲ್ಲಿ ನಿರತನಾಗಿದ್ದಾನೆ. ಹಾಲಂಬಾಡಿ ಜುಂಜೇಗೌಡ ಮತ್ತು ಅವನ ಮಕ್ಕಳೆಲ್ಲ ಪಶುಪಾಲನೆಯಲ್ಲಿ ತೊಡಗಿರುವುದನ್ನು ಗಮನಿಸಬಹುದು. ಬುಡಕಟ್ಟು ಸಮುದಾಯಗಳು ಪಶುಪಾಲನೆಯ ಜೊತೆಗೆ ಕೃಷಿಯಲ್ಲಿ ತೊಡಗಿ ಆರ್ಥಿಕ ಸ್ವಾವಲಂಬನೆ ಸಾಧಿಸಿರುವುದನ್ನು ಇಲ್ಲಿ ಗಮನಿಸಬಹುದು. ನೀಲೇಗೌಡನ ಮೂವರು ಮಕ್ಕಳು ಕೃಷಿಯಲ್ಲಿ ತೊಡಗಿದ್ದಾರೆ.ಬೇವಿನ ಹಟ್ಟಿ ಕಾಳಮ್ಮ ಒಬ್ಬ ರೈತ ಮಹಿಳೆ. ಇವಳು ಕುಟುಂಬ ನಿರ್ವಹಣೆಯ ಜೊತೆಗೆ ಕೃಷಿಯಲ್ಲಿಯೂ ಸಾಧನೆ ಮಾಡಿದ್ದಾಳೆ. ಕೃಷಿಯನ್ನು ಆರಂಭದಲ್ಲಿ ಅನ್ವೇಷಿಸಿದ್ದು ಮಹಿಳೆ ಎಂಬ ಚಾರಿತ್ರಿಕ ಸತ್ಯ ಇಲ್ಲಿ ಸ್ಪಷ್ಟವಾಗಿದೆ. ಕುಟುಂಬದ ಆರ್ಥಿಕ ಸದೃಢತೆಯಲ್ಲಿ ಮಹಿಳೆಯ ಪಾತ್ರ ತುಂಬಾ ಹಿರಿದಾದುದು ಎಂಬುದು ಈ ನಿದರ್ಶನದಿಂದ ಸಾಬೀತಾಗಿದೆ. ಪಶುಪಾಲನೆ ಹಾಗೂ ಕೃಷಿ ಎರಡು ಹಂತಗಳು ಇಲ್ಲಿ ಒಟ್ಟಿಗೆ ಅನಾವರಣಗೊಂಡಿವೆ. ಹೆಣ್ಣು, ಭೂಮಿ, ಪಶುಗಳು ಸಂಪತ್ತಿನ ಸಂಕೇತಗಳಾಗಿದ್ದವು. ಇವುಗಳನ್ನು ಯಾರು ಹೆಚ್ಚು ಹೊಂದಿರುತ್ತಾರೋ ಅವರು ಶ್ರೀಮಂತರಾಗಿದ್ದು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಹೊಂದಿರುತ್ತಿದ್ದರು. ಇಂತಹ ಶ್ರೀಮಂತ ಕುಟುಂಬಗಳನ್ನು ತನ್ನ ಒಕ್ಕಲು ಮಾಡಿಕೊಂಡರೆ ಅವರ ಇಡೀ ಸಮುದಾಯವೇ ಒಂದು ದೈವದ ಒಕ್ಕಲಾಗುತ್ತಿದ್ದರು. ಇಂತಹ ಶ್ರೀಮಂತ ಕುಟುಂಬಗಳನ್ನೂ ಒಕ್ಕಲಾಗಿ ಪಡೆಯುವ ಕಥೆಗಳ ಜತೆಗೆ ಅಂದಿನ ಸಾಂಸ್ಕೃತಿಕ ಚರಿತ್ರೆಯನ್ನು ಈ ಕಾವ್ಯಗಳು ಧ್ವನಿಸುತ್ತವೆ.

ಮಧ್ಯಕಾಲೀನ ಚರಿತ್ರೆಯ ಸಂದರ್ಭದಲ್ಲಿ ಜಮೀನ್ದಾರಿ ವ್ಯವಸ್ಥೆ ಹಾಗೂ ಸಾಮ್ರಾಜ್ಯಶಾಹಿ ವ್ಯವಸ್ಥೆಗಳು ಹೆಚ್ಚು ಅಸ್ತಿತ್ವಕ್ಕೆ ಬಂದಿವೆ. ಬೇವಿನ ಹಟ್ಟಿ ಕಾಳಮ್ಮನ ಕಾವ್ಯ ಜಮೀನ್ದಾರಿ ವ್ಯವಸ್ಥೆಯೊಂದರ ಪತನವಾಗಿ ಕಂಡುಬರುತ್ತದೆ. ಕಾಳಮ್ಮ ಕೃಷಿ ಕುಟುಂಬದ ಹೆಣ್ಣುಮಗಳು, ಇವಳಲ್ಲಿ ಸಾಕಷ್ಟು ಭೂಮಿ ಇದೆ. ಅದಕ್ಕೆ ತಕ್ಕಂತೆ ಸಾಕಷ್ಟು ಜೀತದಾಳುಗಳು ಅವಳಲ್ಲಿ ಕೆಲಸ ಮಾಡುತ್ತಿದ್ದಾರೆ.ಕಾಳಮ್ಮ ಅತ್ಯಂತ ಜಿಪುಣೆ.ಬೇಡಿ ಬಂದವರಿಗೆ ಒಂದು ಕಾಳನ್ನು ದಾನ ಮಾಡದವಳು. ಇನ್ನು ಆಳುಕಾಳುಗಳಿಗೆ ಪುಕ್ಕಟೆಯಾಗಿ ಕೊಡುವವಳಲ್ಲ. ಸಂಪತ್ತನ್ನು ಶೇಖರಿಸಿಡುವವಳೇ ಹೊರತು ಸಂಪತ್ತನ್ನು ಹಂಚುವವಳಲ್ಲ. ಸಮಾಜದ ಅಧಿಕ ಸಂಪತ್ತು ಇವಳದ್ದೇ ಆಗಿದೆ. ಆ ಜಮೀನ್ದಾರಿ ವ್ಯವಸ್ಥೆಯನ್ನು ಮುರಿಯುವ ಪ್ರಯತ್ನವನ್ನು ಈ ಕಾವ್ಯದಲ್ಲಿ ಮಾಡಲಾಗಿದೆ. ಅಂತೆಯೇ ಶ್ರವಣ ದೊರೆ ಸಾಲಿನಲ್ಲೇ ಬರುವ ಶ್ರವಣನು ಪಾಳೇಗಾರಿಕೆ ವ್ಯವಸ್ಥೆಯೊಂದರ ಪ್ರತಿನಿಧಿ. ಇವನು ಸಮಾಜ ಶೋಷಕನಾಗಿ ಇಲ್ಲಿ ಚಿತ್ರಿತನಾಗಿದ್ದಾನೆ. ಇವನ ಊಳಿಗದಲ್ಲಿ ಅನೇಕರು ನರಳಿದ್ದಾರೆ. ಇವರೆಲ್ಲ ಸಮಾಜದ ಕೆಳಸ್ತರದ ಜನರಾಗಿರುತ್ತಾರೆ.ಇಂತ ಸಮುದಾಯಗಳು ಶ್ರವಣನ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಶೋಷಣೆಗೆ ಒಳಗಾಗಿದ್ದಾರೆ. ಇಲ್ಲಿ ಮಾದೇಶ್ವರ ಶೋಷಿತ ಸಮುದಾಯಗಳ ಪ್ರತಿನಿಧಿಯಾಗಿ ಶ್ರವಣನ ಪ್ರಭುತ್ವ ವ್ಯವಸ್ಥೆಯನ್ನು ವಿರೋಧಿಸುತ್ತಾನೆ. ಸಾಮ್ರಾಜ್ಯಶಾಹಿ ವ್ಯವಸ್ಥೆಯೊಂದನ್ನು ಮುರಿಯುವುದೇ ಇಲ್ಲಿನ ಮುಖ್ಯ ಆಶಯವಾಗಿದೆ.ಇಂತಹ ಜಮೀನ್ದಾರಿ, ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಪತನಗೊಳಿಸಿದ ಮಾದೇಶ್ವರ ಶಿಷ್ಟ ಸಾಹಿತ್ಯದಲ್ಲಿ ಚರಿತ್ರೆಯಲ್ಲಿ ಪ್ರವೇಶ ಪಡೆಯಲೇ ಇಲ್ಲ. (ವ್ಯವಸ್ಥೆ ಇಂತಹ) ಮಧ್ಯಕಾಲೀನ ಸಂದರ್ಭದಲ್ಲಿ ಪ್ರಭುತ್ವವೇ ತನ್ನ ಹಿತಾಸಕ್ತಿಗಾಗಿ ಪಾಳೇಗಾರಿಕೆ ಹಾಗೂ ಜಮೀನ್ದಾರಿ ವ್ಯವಸ್ಥೆಯನ್ನು ಪೋಷಿಸಿಕೊಂಡು ಬಂದಿರುತ್ತಾರೆ. ಇಂತಹ ವ್ಯವಸ್ಥೆಯನ್ನು ವಿರೋಧಿಸಿದವರ ಚರಿತ್ರೆಯನ್ನು ಒತ್ತಾಯಪೂರ್ವಕವಾಗಿಯೇ ನಾಶ ಮಾಡಲಾಗಿರುತ್ತದೆ. ಇಂತಹ ಚರಿತ್ರೆಗಳು ಜನಪದ ಮಹಾಕಾವ್ಯ–ಲಾವಣಿಗಳ ಮೂಲಕ ಸಾಂಸ್ಕೃತಿಕ ಚರಿತ್ರೆಯಾಗಿ ನಮ್ಮ ನಡುವೆ ಹರಿದು ಬಂದಿರುತ್ತದೆ.

ಮಲೆಮಹದೇಶ್ವರನ ಮಹಾಕಾವ್ಯ ಒಂದು ಭೌಗೋಳಿಕ ಪರಿಸರದಲ್ಲಿ ವಾಸಿಸುವ ಜನ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಅನಾವರಣಗೊಳಿಸುತ್ತದೆ. ಪ್ರಾಚೀನದಲ್ಲಿ ಅಲೆಮಾರಿಗಳಾಗಿದ್ದ ಬುಡಕಟ್ಟು ಸಮುದಾಯಗಳು ಮಧ್ಯಕಾಲೀನ ಸಂದರ್ಭದಲ್ಲಿ ಒಂದು ಕಡೆ ನೆಲೆನಿಂತು ತಮ್ಮದೇ ಆದ ಗ್ರಾಮ, ಸಂಸ್ಕೃತಿಯನ್ನು ನಿರ್ಮಿಸಿಕೊಂಡಿದ್ದಾರೆ. ಬೇಟೆಯ ಜೊತೆಗೆ ಪಶುಪಾಲನೆಯನ್ನು, ನಂತರ ಕೃಷಿಯನ್ನು ಹಂತಹಂತವಾಗಿ ತಮ್ಮ ವೃತ್ತಿಗಳಾಗಿ ಬದಲಾಯಿಸಿಕೊಂಡಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ. ಜನಪದ ಮಹಾಕಾವ್ಯಗಳು ಒಂದು ನೆಲ ಮೂಲ

ISBN – 978-93-5526-247-9

ಸಂಸ್ಕೃತಿಯನ್ನು ಅಷ್ಟೇ ಅಲ್ಲದೆ, ಅದರಲ್ಲಿನ ಸೂಕ್ಷ್ಮ ಚಾರಿತ್ರಿಕ ಅಂಶಗಳನ್ನು ಸಹ ಅನಾವರಣಗೊಳಿಸುತ್ತದೆ. ಇಲ್ಲಿ ಮಾನವ ವಿವಿಧ ಹಂತಗಳಲ್ಲಿ ವಿಕಾಸ ಹೊಂದಿರುವುದರ ಜೊತೆಗೆ ಸಮಕಾಲೀನ ಸಂದರ್ಭದಲ್ಲಿ ತಾನು ಅನುಸರಿಸುತ್ತಿರುವ ಸಂಸ್ಕೃತಿ, ಆಚರಣೆ, ಸಂಪ್ರದಾಯ, ವೃತ್ತಿಗಳು, ಸಾಂಸ್ಕೃತಿಕ ಚರಿತ್ರೆಯಾಗಿ ನಿಲ್ಲುತ್ತವೆ. ಚರಿತ್ರೆಯೆಂದರೆ ರಾಜಮಹಾರಾಜರ ದಿಗ್ವಿಜಯ ಕೀರ್ತಿ ಪ್ರತಿಷ್ಠೆಗಳಷ್ಟೇ ಅಲ್ಲ. ಜನಸಾಮಾನ್ಯರು ತಮ್ಮ ಅಸ್ತಿತ್ವಕ್ಕಾಗಿ ವ್ಯವಸ್ಥೆಯೊಡನೆ ಸಂಘರ್ಷ ನಡೆಸಿರುವುದು ಚರಿತ್ರೆಯಾಗುತ್ತದೆ.ಇಂಥ ಹೋರಾಟದ ಘಟನೆಗಳು ಶಿಷ್ಟಸಾಹಿತ್ಯದ ಚರಿತ್ರೆಯೊಳಗೆ ಪ್ರವೇಶ ಪಡೆಯುವುದಿಲ್ಲ. ಬದಲಾಗಿ ಜನಸಾಮಾನ್ಯರ ಸಾಮಾಜಿಕ ಚರಿತ್ರೆಯಾಗಿ, ಲಾವಣಿ, ಕಥನಗೀತೆ, ಮಹಾಕಾವ್ಯಗಳ ರೂಪದಲ್ಲಿ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲ್ಪಡುತ್ತದೆ. ಇವು ಒಂದು ನಾಡಿನ, ಒಂದು ಪ್ರದೇಶದ, ಒಂದು ಜನಾಂಗದ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ.

***

ISBN – 978-93-5526-247-9

## 10. ಮಲೆಮಾದೇಶ್ವರ ಜನಪದ ಮಹಾಕಾವ್ಯದಲ್ಲಿ ಭಕ್ತ ಮತ್ತು ದೈವ : ಇಂದಿನ ಗ್ರಹಿಕೆಗಳು

ಡಾ. ನಾಗವೇಂದ್ರ ಸ್ವಾಮಿ

ಮಲೆಮಾದೇಶ್ವರ ಜನಪದ ಮಹಾಕಾವ್ಯದಲ್ಲಿ ಮಾದೇಶ್ವರನು ಭಕ್ತರನ್ನು ಪೊರೆಯುವುದು, ತನಗೆ ಇಷ್ಟವಾದ ಭಕ್ತರನ್ನು ಹೇಗಾದರೂ ಮಾಡಿ ತನ್ನ ಒಕ್ಕಲನ್ನಾಗಿಸಿಕೊಳ್ಳಲು 'ಭಕ್ತಪ್ರಿಯ'ನಾದ ಮಾದೇಶ್ವರನ ಕ್ರಿಯೆ–ಪ್ರತಿಕ್ರಿಯೆಗಳನ್ನು ಜನಪದರು ಚಿತ್ರಿಸಿರುವ ರೀತಿ. ತನ್ನೊಂದಿಗೆ ಇದ್ದ ಇತರೆ ದೈವಗಳೊಂದಿಗಿನ ಕೊಡುಕೊಳ್ಳುವಿಕೆ, ಘರ್ಷಣೆ, ಅಂತರ್ ಸಂಬಂಧದ ಬೆಸುಗೆ, ಸಾಮರಸ್ಯಗಳನ್ನು ಇಲ್ಲಿ ಕಾವ್ಯದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲು ಪ್ರಯತ್ನಿಸಲಾಗಿದೆ.

ಮಡುಕೊತೊರೆ ಮಲ್ಲಯ್ಯನ ಒಕ್ಕಲಾದ ಸರಗೂರಿನ ರಾಮವ್ವ, ಮೂಗಪ್ಪರನ್ನು ಮಾದೇಶ್ವರನು ಒಕ್ಕಲು ಪಡೆಯುತ್ತಾನೆ. 'ಸರಗೂರಪ್ಪನ ಮಗನು ಮೂಗ್ದ್ಯಾವ್ರು ದಾಸಪ್ಪನ ಮಗಳು ರಾಮವ್ವೆ ನನ್ಗೆ ತಕ್ಕಾದ ಒಕ್ಲು ಕಾಣಪ್ಪ' ಎಂದು ಬ್ಯಾಡ್ರು ಕನ್ನಪ್ಪಂಗೆ ಹೇಳಿ, ದೇವಾಂಗದ ಶೆಟ್ರವೇಷದಲ್ಲಿ ಶಾಸ್ತ್ರ ಹೇಳುವನಾಗಿ ಸರಗೂರಿಗೇ ಬಂದ ಮಾದಪ್ಪನ ಮುಂದೆ, ತನ್ನ ಮಗನ ಮದುವೆಗೆ ನಿರ್ಧರಿಸಿದ್ದ ಸರಗೂರಪ್ಪನವರ ಮನೆಯವರು ಹೀಗೆ ಕೇಳುತ್ತಾ,' ಶನುವಾರ ಚಪ್ರ ಆಗ್ಬೇಕು ಭಾನುವಾರ ಧಾರೆ ಆಗ್ಬೇಕು...ಅಂದಾಗ, ಮಾದಪ್ಪನು' ಆಯತ್ವಾರ ಚಪ್ರ ಆಗಿ ಸ್ವಾಮಾರ ಧಾರೆ ಮಾಡ್ಬುಟ್ರೆ' ಎನ್ನುತ್ತಾನೆ. ಆಗ ಸರಗೂರಪ್ಪನ ಮನೆಯವರು ಅದಕ್ಕೆ ಒಪ್ಪದೆ, 'ನಾವು ಆ ಮಾದೇವುನೊಕ್ಲಾದಂಗಾ ಐತದೆ / ನಾವ್ ನೋಡುದ್ರೆ ಶ್ರೀಮನ್ನಾರಾಯಣ ಸ್ವಾಮಿ ಒಕ್ಲು / ಮುಡುಕ್ತೊರೆ ಮಲ್ಲಪ್ಪನೊಕ್ಲು' ಎನ್ನುತ್ತಾ, ಮದುವೆಯ ದಿವ್ಸ ನಮ್ಮಂದೇವ್ರುರ್ಗಳಾದ ಆದಿನಾರಾಯ್ಣ ಅರುಳ್ಕೋಟೆ ಹನುಮಂತು ಕಮ್ರಿ ಹುಚ್ಚಯ್ಯ ಕೊಂಗಳ್ಳಿ ಮಲ್ಲಪ್ಪ ಮುಡುಕ್ತೊರೆ ಮಲ್ಲಪ್ಪ ಮೇಲ್ಕೋಟೆ ಚೆಲುವ್ರಾಯಸ್ವಾಮಿ ರಾಡ್ಬಾಗ್ಲು ಪರುಸ್ರಾಮು ಭೋಗನಂಜುಂಡೇಶ್ವರ ಇಂತಿಂತೆ ದೇವ್ರೆಲ್ಲ ಬತ್ತರೆ ಬುಧ್ಧಿ.'– ಎಂದೆಲ್ಲಾ ಹೇಳಿದರೂ ಮಾದಪ್ಪನು ನಂತರ ಮುಡುಕುತೊರೆ ಮಲ್ಲಪ್ಪನ ಸ್ನೇಹದಿಂದ, ಬಿಳಿಗಿರಿ ರಂಗಪ್ಪನ ಉಪಸ್ಥಿತಿಯಲ್ಲೇ ಅವರನ್ನು ಒಕ್ಕಲು ಪಡೆಯುತ್ತಾನೆ. (529–532) (ಪುಟ 928 ಸರಗೂರಯ್ಯನ ಸಾಲು, ಮಲೆಯ ಮಾದೇಶ್ವರ, ಸಂ2, ಪಿ.ಕೆ. ರಾಜಶೇಖರ)

ಇಲ್ಲಿ ಮಾದಪ್ಪನನ್ನು ಕಾಡುದೇವರು ಎಂದು ತಿಳಿಸಲು, ಮುಂದೆ ಸರಗೂರಯ್ಯನನ್ನು ಒಕ್ಕಲನ್ನಾಗಿ ಮಾಡಿಕೊಳ್ಳುವ ಸಂದರ್ಭವನ್ನು ವಿವರಿಸಲು, ಕಂಸಾಳೆಯ ಜನಪದರು ವೈಷ್ಣವ, ಶೈವ ದೇವತೆಗಳನ್ನೆಲ್ಲಾ ಸಮಾಗಮ ಮಾಡಿ, ಒಂದು ರೀತಿಯ ಧಾರ್ಮಿಕ ಸಮನ್ವಯವನ್ನು ಸಾಧಿಸುತ್ತಾರೆ. ಸರಗೂರಯ್ಯನ ಮನೆದೇವರು ಶೈವದೈವವಾದ ಮುಡುಕುತೊರೆ ಮಲ್ಲಪ್ಪನನ್ನು ಜೊತೆಗೆ ವೈಷ್ಣವದೇವರಾದ ಆದಿ ನಾರಾಯಣನನ್ನು ಮನೆದೇವರಾಗಿ ಸ್ವೀಕರಿಸಿದ್ದಾರೆ. ಅಂದರೆ ಶೈವ–ವೈಷ್ಣವ ಎರಡೂ ದೈವಕ್ಕೂ ನಡೆದುಕೊಳ್ಳುತ್ತಾರೆ, ಕೊಂಗಳ್ಳಿ ಮಲ್ಲಪ್ಪ ಮಾದೇಶ್ವರನ ಸಮಕಾಲೀನ. ಜೊತೆಗೆ ಅವನ ಮಿತ್ರನೆಂದು, ತಮ್ಮನೆಂದು ನಂಬುತ್ತಾರೆ ; ಅವನೂ ಕಾಡಿನಲ್ಲಿರುವ ಕಾಡುದೈವವೇ. ಆದರೂ ಮಾದಪ್ಪನ ಬಗ್ಗೆ ಮೂಗಯ್ಯನ ಮದುವೆಯಲ್ಲಿ ಸೋಬಾನ ಹಾಡುವರನ್ನು ಸರಗೂರಯ್ಯನ ಹೆಂಡತಿ ಖಡಾಖಂಡಿತವಾಗಿ ವಿರೋಧಿಸುವುದು ವೈರುದ್ಧವೇ? ಜನಪದ ಹಾಡುಗಾರರು ತಮ್ಮ ಕಲ್ಪನೆಯಲ್ಲಿ ಇವನ್ನು ಗಮನಿಸದೆ ಮಾದಪ್ಪನನ್ನು ಉಳಿದು ಎಲ್ಲ ದೈವಗಳ ಕಾಂಪ್ಲೆಕ್ಸ್ ಅನ್ನು ಕಟ್ಟಿದ್ದಾರೆಯೇ? ಮಾದಪ್ಪನ ಹೆಗ್ಗಳಿಕೆಯನ್ನು ತರಲು ಪೂರ್ವಬಾವಿಯಾಗಿ ಈ ಸಂಗತಿಗಳನ್ನು ರೋಚಕವಾಗಿಸಲು ಹೀಗೆ ಕಾವ್ಯ ಕಟ್ಟಲಾಗಿದೆಯೇ? ಅಥವಾ ಹೇಗೆ ಪರಿಭಾವಿಸಬೇಕು. ಮಾದಪ್ಪ ತನ್ನ ಭಕ್ತರನ್ನು ಒಕ್ಕಲನ್ನು ಹೆಚ್ಚು ಮಾಡಿಕೊಳ್ಳುವ ಭಕ್ತಪ್ರಿಯ. ಅದನ್ನು ಸಂಘರ್ಷದಿಂದಲೋ, ಒಲಿದೋ, ಸಾಮರಸ್ಯ, ಒಪ್ಪಂದದಿಂದಲೋ ಪಡೆಯುತ್ತಾನೆ.

ಹಾಗೆಯೇ ಸಂಕಮ್ಮನನ್ನು ಕಾಪಾಡಿ, ಸಂತಾನ ಭಾಗ್ಯವನ್ನು ಕರುಣಿಸಿ ಕಾರಯ್ಯ, ಬಿಲ್ಲಯ್ಯರನ್ನು ಪಡೆಯುತ್ತಾನೆ. ಬೇವಿನ ಕಾಳಮ್ಮನಿಗೆ ಒಲಿದು ಶ್ರೀಮಂತಿಕೆಯನ್ನು ನೀಡಿ ನಂತರ ಅವಳು ಇವನಿಗೆ ಭಕ್ತಿ ತೋರದೆ ಅಹಂಕಾರದಿಂದ ತನ್ನ ಶ್ರೀಮಂತಿಕೆಯನ್ನು ಮೆರೆದಾಗ ಅವಳನ್ನು ಸುಟ್ಟು ಭಸ್ಮ ಮಾಡುವ ಮಾದಪ್ಪ, ಸೋಲಿಗರು ಮತ್ತು ಬೇಡ ಕಂಪಣರ ದೈವವಾಗಿ, ತಳ ಸಮುದಾಯಗಳ ಸ್ವಾಭಿಮಾನದ ಸಂಕೇತವಾಗಿ 'ಇವನಮ್ಮವ ಇವ ನಮ್ಮವನೆಂದು' ಕರೆಯಿಸಿಕೊಳ್ಳುತ್ತಾನೆ. ಸಿಂಗನಲ್ಲೂರು ಬಸವನಿಗೆ 'ನನ್ನ ಜಾತ್ರೆಗೆ ಬರುವ ಪರುಸೆ ನಿನಗೂ ಪೂಜೆ ಮಾಡುತ್ತಾರೆ, ನೀನು ಇಲ್ಲೇ ಕಟ್ಟೆ ಬಸವಯ್ಯನಾಗಿ ನೆಲೆಗೊಳ್ಳು' ಎಂದು, ಕೌದಳ್ಳಿಯ ಕಿವುಡು ಮಾರಿ ಮೂಗು

ISBN – 978-93-5526-247-9

ಮಾರಿಯರಿಗೂ ಮೂರು ಕಾಸಿನ ಧೂಪವನ್ನು ತನ್ನ ಪರುಸೆಯ ಭಕ್ತರು ಹಾಕುತ್ತಾರೆಂದು ಭರವಸೆ ನೀಡಿ ಸಮಾಧಾನ ಮಾಡುತ್ತಾನೆ.

ದುಷ್ಟ ನಿಗ್ರಹನಾಗಿ ಶ್ರಮಣನನ್ನು ಕೊಂದ ನಂತರ ಅವನಿಗೆ ಎಲ್ಲರೂ ಕಲ್ಲುಹಾಕಿ ಎಂದಾಗ ಬೇರೆಲ್ಲಾ ದೈವಗಳು ಕಲ್ಲು ಹಾಕಿದರು. ಬಿಳಿಗಿರಿ ರಂಗನಾಥ ಅಲ್ಲಿಂದ ಓಡಿ ಬರುತ್ತಾನೆ. ಆಗ ರಂಗನಾಥನನ್ನು ಒಡ್ಡಿನಲ್ಲಿ ತಡೆದು ನಿಲ್ಲಿಸುತ್ತಾನೆ, ಇನ್ನೊಂದು ರೀತಿಯಲ್ಲಿ ರಂಗನಾಥನ ಪ್ರವೇಶವೇನಿದ್ದರೂ ಆ ಒಡ್ಡುವಿನ ತನಕ ಮಾತ್ರ. ಮುಂದೆ ತನ್ನದೇ ಏಳ್ಮಲೆ ಎಂಬ ಭೌಗೋಳಿಕ–ಧಾರ್ಮಿಕ ಗಡಿ ಎಂಬ ಒಪ್ಪಂದವಾಗಿರಬಹುದಾದ ಸಾಧ್ಯತೆಯೂ ಇದೆ. ಜುಂಜೇಗೌಡನ ಊರಿನ ಸಮೀಪ ರಂಗನಾಥ ದೈವವಿದೆಯಾದರೂ, ಅನ್ಯ ದೈವವಾದ ರಂಗನಾಥನನ್ನು ನಿರ್ದಿಷ್ಟ ಅಂತರದಲ್ಲಿಟ್ಟು, ತನ್ನ ಅನನ್ಯತೆಯನ್ನು ತನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಅನ್ಯದೈವದ ಮಿತಿಯನ್ನು ತಿಳಿಸುವ ರೀತಿ ಇದಾಗಿದೆ. ಸರಗೂರಿನ ಮೂಗಪ್ಪನನ್ನು ಒಕ್ಕಲು ಮಾಡಿಕೊಳ್ಳುವಾಗ ಮಲ್ಲಪ್ಪನೊಂದಿಗಿದ್ದ ರಂಗಪ್ಪನ ಸ್ನೇಹದ ಹೊಂದಾಣಿಕೆಗಾಗಿ ರಂಗಪ್ಪನಿಗೆ ಮಾದಪ್ಪನು 'ಬೆಳಗಿನ ಮೊದಲ ಪೂಜೆ ನಿನಗೆ ಮಾಡ್ಬಿಟ್ಟು, ಮಧ್ಯಾಹ್ನದ ಪೂಜೆ ನನಗೆ ಮಾಡಲಿ'ಎಂದು ಹೇಳುತ್ತಾನೆ. ಈ ಮಾತುಗಳೂ ರಂಗಪ್ಪನನ್ನು ಒಲಿಸಿಕೊಳ್ಳುವ ಬಗೆಯೂ ಆಗಿದೆ. ರಂಗನಾಥನ ಒಡ್ಡಿನಲ್ಲಿ ತಾಳಬೆಟ್ಟದಿಂದ ಬರುವ ಜನ ಅಲ್ಲಿ ಕೆಲ ಕ್ಷಣ ನಿಂತು ವಿಶ್ರಾಂತಿ ಪಡೆದು ಹೊರಡುತ್ತಾರೆ. ಇದನ್ನು ಜನಪದರು ತಮ್ಮ ಕಲ್ಪನೆಯಲ್ಲಿ ತಳಕು ಹಾಕಿರುವ ಸಾಧ್ಯತೆ ಇದೆಯಾದರೂ ಸಾಮರಸ್ಯದ ಮೌಲ್ಯವನ್ನು ಕಟ್ಟಿರುವ ಜನಪದರನ್ನು ಮೆಚ್ಚಬೇಕು.

"ಉಗೇ ಮಾತ್ಮಲಯ" ಮಾದೇಶ್ವರನ ಭಕ್ತರ ಬಾಯಲ್ಲಿ ಉಳಿದು ಬಂದಿರುವ ಸಾಂಸ್ಕೃತಿಕ ಕುರುಹುಗಳು:

ಒಂದು ಕಾಲಘಟ್ಟದ ಸಾಂಸ್ಕೃತಿಕ ನಾಯಕರನ್ನು, ಸನ್ನಿವೇಶಗಳನ್ನು ಅರಿಯಬೇಕಾದರೆ ಅದನ್ನು ಕೇವಲ ಭಾವನಾತ್ಮಕ ಏಕರೂಪಿ ನೆಲೆಯಲ್ಲಿ ಗ್ರಹಿಸದೆ ಹಲವು ಮಗ್ಗಲುಗಳಲ್ಲಿ ನಡೆದಿರಬಹುದಾದ ಸಾಮಾಜಿಕ, ರಾಜಕೀಯ ಅನಿವಾರ್ಯತೆಗಳು, ಧಾರ್ಮಿಕ ಹಿನ್ನೆಲೆ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪಲ್ಲಟ, ಸ್ಥಿತ್ಯಂತರಗಳನ್ನು ಎಚ್ಚರಿಕೆಯಿಂದ ಗ್ರಹಿಸುವುದು ಅವಶ್ಯ. ದಾಖಲೆಗಳಲ್ಲಿ ಸಿಗದ ಸಂಕೀರ್ಣ ವಿಚಾರಗಳನ್ನು ತಿಳಿಯುವುದು ಸುಲಭ ಸಾಧ್ಯವಲ್ಲದಿದ್ದರೂ ಒಮ್ಮುಖವಾಗಿ ನೋಡದೆ ಬಹುಮುಖೀ ನೆಲೆಯಲ್ಲಿ ಸಾಗಿದರೆ ಒಂದಿಷ್ಟು ಹಿಡಿಯಬಹುದೇನೋ.

ಮಾದಪ್ಪ ಉತ್ತರದೇಶದಿಂದ ಬಂದವನು ಎಂಬುದು ಮಂಟೇಸ್ವಾಮಿಗಳಿಗೆ ಅನ್ವಯಿಸಿದ ಹಾಗೆ ಮಾದಪ್ಪನಿಗೆ ಅನ್ವಯವಾಗುವುದಿಲ್ಲ. ಇಲ್ಲಿ ಉತ್ತರ ದೇಶ ಎಂಬುದು ಕಾವ್ಯ ಪ್ರತಿಮೆಯಾಗಷ್ಟೇ ಉಳಿದುಕೊಂಡಿದೆ. ಭೀಮನಕೊಲ್ಲಿಯಿಂದ ಏಳುಮಲೈಯವರೆಗೆ ಮಾತ್ರ ಅವನ ಸಂಚಾರ ಕಂಡುಬರುತ್ತದೆ'. (ಪ್ರಸ್ತಾವನೆ, ಮಲೆಯ ಮಾದಪ್ಪನ ಮಹಾಕಾವ್ಯ, ಸಂ. ಡಾ. ವೆಂಕಟೇಶ ಇಂದ್ವಾಡಿ, ಕನ್ನಡ ವಿ.ವಿ, ಹಂಪಿ, 2008) ಎನ್ನುವುದು ಒಮ್ಮುಖವಾದ ಅಭಿಪ್ರಾಯವಾಗುತ್ತದೆ. ಮಾದಪ್ಪನನ್ನು ಚರಿತ್ರೆಗೆ, ಕಾಲಕ್ಕೆ, ನಿರ್ದಿಷ್ಟ ಸಮುದಾಯಕ್ಕೆ ಸೀಮಿತಗೊಳಿಸುವುದು ಇಂದಿನ ಅಧ್ಯಯನದ ತುರ್ತೇನಲ್ಲ. ಕಾಲಾತೀತ, ಸೀಮಾತೀತ ನೆಲೆಯಲ್ಲಿ ಮಾದಪ್ಪನ ಜನಪದ ಕಾವ್ಯವನ್ನು ಗ್ರಹಿಸಬೇಕಾಗಿದೆ, ಜೊತೆಗೆ ಕಂಸಾಳೆಗಾರರನ್ನು, ಶಿಷ್ಟ ಸಾಹಿತ್ಯದ ವಿವರಗಳನ್ನು, ಭಕ್ತರ ನಂಬಿಕೆ ಹಾಗೂ ಪರಂಪರೆಯನ್ನು ನಿರಾಕರಿಸಿದಂತಾಗುತ್ತದೆ.

ಜನಪದ ಮಹಾಕಾವ್ಯದಲ್ಲಿನ ವಿಚಾರಗಳು ಅವನ ಪವಾಡಗಳು, ಅವುಗಳ ಆಶಯ, ಸಾಂಸ್ಕೃತಿಕ ಅಸ್ಮಿತೆ. ಇವೆಲ್ಲ ಅಕಾಡೆಮಿಕ್ ವಲಯಕ್ಕೆ ಮುಖ್ಯವಾಗುತ್ತದೆ. ಈ ಎರಡು ವಲಯದವರೂ ಒಂದು ರೀತಿಯಲ್ಲಿ ಅವನನ್ನು ಕಾಲಾತೀತ, ಸೀಮಾತೀತವಾಗಿಯೇ ಗ್ರಹಿಸುವುದು ಸೂಕ್ತವೆನಿಸುತ್ತದೆ.

ತಮ್ಮ ಇಷ್ಟದ ಜನಪದ ಸಾಂಸ್ಕೃತಿಕ / ಧಾರ್ಮಿಕ ನಾಯಕ / ದೈವಗಳನ್ನು ಆರಾಧಿಸುವ ಭಕ್ತ ಮನಸ್ಸಿಗೆ ನಂಬಿಕೆ, ಆಚರಣೆ, ಅಪೇಕ್ಷೆ ಇವುಗಳೇ ಮುಖ್ಯವಾಗುತ್ತವೆ. ಆ ಮೂಲಕ ನಿರ್ದಿಷ್ಟ ದೈವ ವಿವಿಧ ನೆಲೆಗಳಲ್ಲಿ ಬೆಳೆಯುತ್ತಾ ಹೋಗುತ್ತಾನೆ; ಸೀಮಾತೀತನಾಗುತ್ತಾನೆ. ಆಧುನಿಕತೆ ತಾಂತ್ರಿಕತೆಯ ಈ ದಿನಮಾನಗಳಲ್ಲೂ ದಿನ ನಿತ್ಯದ ಬದುಕಿನಲ್ಲೂ ಮುಂದುವರೆಯುತ್ತಾ ಬೆಳೆಯುತ್ತಾ ಹೋಗುತ್ತಾನೆ. ಆದರೂ ಮಾದೇಶ್ವರನು ಎಲ್ಲಿಂದ ಬಂದನು ಎಂಬ ಬಗ್ಗೆ ಭಿನ್ನ ನಿಲುವುಗಳು ಕೇಳಿಬರುತ್ತವೆ.

ISBN – 978-93-5526-247-9

ಹೆಚ್ಚಿನ ಕಂಸಾಳೆಯವರು ಮಾದಪ್ಪನು ಶ್ರೀಶೈಲದಿಂದಲೇ ಬಂದನೆಂದೂ, 'ಉತ್ತರದೇಶ'ದ ಕಡೆಯಿಂದ ಬಂದನೆಂದೂ ಅದು ಶ್ರೀಶೈಲವೇ ಎಂದು ಭಕ್ತರೂ, ಜನಪದರು ನಂಬಿದ್ದಾರೆ. ಆದರೆ ಮಂಟೇಸ್ವಾಮಿಯು ನದಿ ಮೂಲದ ಹಾದಿಯಲ್ಲಿ ಬಂದಂತೆ, ಮಾದೇಶ್ವರನು ಕಾಡಿನ ಮೂಲಕವೇ ಚರಿಸಿದ ಮಾರ್ಗವಾಗಿತ್ತು. ಭೀಮನ ಕೊಲ್ಲಿಯು ಮಾದೇಶ್ವರ ಪಯಣಿಸಿದ ಉತ್ತರದ ದೇಶ; ಅದು ನಡುಮಲೆಯಿಂದ (ಈಗಿನ ಮಾದೇಶ್ವರ ಬೆಟ್ಟ) ಉತ್ತರ ದಿಕ್ಕಿಗಿದೆ. ಹಾಗಾಗಿ ಹತ್ತಿರದ ಭೀಮನಕೊಲ್ಲಿಯೇ ಅವನ ಉತ್ತರ ದೇಶ ಅಲ್ಲಿಂದ ಮುಂದೆ ಅವನ ಅನೇಕ ತೋರು ಗದ್ದುಗೆಗಳಿವೆ ನಂತರ ನಡುಮಲೆ ತಲುಪಿದ ಎಂದು ವೆಂಕಟೇಶ ಇಂದ್ವಾಡಿ ಅವರು ಅಭಿಪ್ರಾಯಪಡುತ್ತಾರೆ. ಅದನ್ನೇ ಎಲ್ಲೆಡೆ ನಂಬುವಂತೆ ಹೇಳಲಾಗುತ್ತಿದೆ; ಬರೆಯಲಾಗುತ್ತಿದೆ.

ಮಲೆ ಮಾದೇಶ್ವರ ಬೆಟ್ಟಕ್ಕೆ ಪ್ರಯಾಣ ಮಾಡುವಾಗ ತಾಳಬೆಟ್ಟ, ಮಲೆ ಮಾದೇಶ್ವರ ಬೆಟ್ಟದ ದೇವಸ್ಥಾನದ ಸುತ್ತಲೂ ದೇವರ ದರ್ಶನಕ್ಕಾಗಿ ನಿಂತಿರುವಾಗ, ದಾಸೋಹ ಭವನಕ್ಕೆ ಚಲಿಸುವಾಗ ಭಕ್ತಾದಿಗಳು, 'ಆನುಮಲೆ ಜೇನುಮಲೆ। ಗುಂಜುಮಲೆ ಗುರುಗುಂಜುಮಲೆ। ಎಪ್ಪತ್ತೇಳು ಮಲೆಯಲ್ಲಿ। ಆನುಮಲೆ ಹಾಸುಕೊಂಡು। ಜೇನುಮಲೆ ಹೊದ್ದುಕೊಂಡು। ಎಪ್ಪತ್ತೇಳು ಮಲೆಯನ್ನು ಸುರುಳಿ ಸುತ್ತಿ। ತಲೆದಿಂಬನ್ನಾಗಿ ಮಾಡಿಕೊಂಡು। ಒರಗಿರುವಂತಾ। ನಮ್ಮಪ್ಪಾಜಿ ಏಳ್ಮಲೆ ಹೆತ್ತಯ್ಯನ। ಪಾದುಕ್ಕೊಂದ್ಸಲ ಉಘೇ ಅನ್ರಪ್ಪ। ಉಘೇ (ಪಿ.ಕೆ. ರಾಜಶೇಖರ (ಸಂ), ಮಲೆಯ ಮಾದೇಶ್ವರ, ಸಂ2) ಎಂದೆಲ್ಲಾ ಹೇಳುತ್ತಾ, ನಂತರ 'ಉಘೇ ಮಾತ್ಮಲಯ' ಎನ್ನುತ್ತಾರೆ. ಇದು 'ಉಘೇ ಮಹಂತ ಮಲ್ಲಯ್ಯ' ದ ಸವಕಳಿ। ಅಪಭ್ರಂಶದ ಜನಪದೀಯ ಉಚ್ಚಾರಣೆ. ಇದು ಮಾದೇಶ್ವರನ ಮತ್ತೊಂದು ಹೆಸರೇ? ಎಲ್ಲೂ ಈ ಬಗ್ಗೆ ಉಲ್ಲೇಖವಿಲ್ಲ. ಆಶ್ಚರ್ಯವೆಂಬಂತೆ ದೇ.ಜ.ಗೌ.ಅವರು ಸಂಪಾದಿಸಿ, ಸಾಹಿತ್ಯ ಅಕಾದೆಮಿಯವರು ಪ್ರಕಾಶಿಸಿರುವ 'ಜನಪದ ಗೀತಾಂಜಲಿ'ಯಲ್ಲಿ 'ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲ। ನಾ ಮಾಡೆನೆಂಬ ಅಳವಿಲ್ಲ– ಮಲ್ಲಯ್ಯ। ನೀ ನಡಿಸು ನನ್ನ ಸರುವೆಲ್ಲ'. (ಪು42, 1978 ಸ್ತುತಿ ಗೀತೆಗಳು, ದೇ.ಜ.ಗೌ) ಎಂದಿದೆ.

ಮರಿದೇವರು> ಮಾದಪ್ಪ> ಮಾಯ್ಕಾರ ಮಾದೇವ> ಏಳುಮಲೆಯ ಒಡೆಯ>ಮಾದೇಶ> ಮಾದೇಶ್ವರ> ಮಹದೇಶ್ವರ ಹೀಗೆಲ್ಲಾ ಕರೆಯಲ್ಪಡುವವನೇ ವಿನಃ ಮಲ್ಲಯ್ಯನೆಂದು ಅಲ್ಲ. ಹಾಗಾದರೆ ಈ ಮಹಂತಮಲ್ಲಯ್ಯ ಯಾರು? ಯಾವುದಾದರೂ ಗುರುವೇ? ಮಾದಪ್ಪನ ಸಮಕಾಲೀನನೆಂದು ಹೇಳಲಾಗುವ ಕೊಂಗಳ್ಳಿ ಮಾದಪ್ಪ(ಮಲ್ಲಯ್ಯ)ನೆ? ಮುಡುಕುತೊರೆ ಮಲ್ಲಿಕಾರ್ಜುನ(ಮಲ್ಲಯ್ಯ)ನೆ? ಜನಪದ ಮತ್ತು ಶಿಷ್ಟ ಕಾವ್ಯಗಳಲ್ಲಿ ಕುಂತೂರಿನ ಪ್ರಭುದೇವರೇ ಮಾದಪ್ಪನ ಗುರುಗಳು ಎಂದು ಚಿತ್ರಿಸಿವೆ. ಇನ್ನು ಸುತ್ತೂರಿಗೆ ಹೋದಾಗಲೂ ಅಲ್ಲಿನ ಗುರುಗಳ ಹೆಸರಾವುವೂ ಈ ಹೆಸರಿಗೆ ಹೋಲುವುದಿಲ್ಲ. ಅರ್ದನಳ್ಳಿಗೂ ಹೋಗಿದ್ದನೆಂದು ಕೆಲವು ಕಡೆ ಉಲ್ಲೇಖವಿದೆ. ಅಲ್ಲಿನ ಗುರು ಪರಂಪರೆಯಲ್ಲಿ ಈ ಹೆಸರಿನ ಪ್ರಸ್ತಾಪವಿಲ್ಲ. ಹಾಗಾದರೆ ಈ ಉಘೇ ಮಾತ್ಮಲ್ಲಯ್ಯ ಯಾರು? ಮಾದಪ್ಪನ ಗುರುಗಳಿಂದ ಬಂದಿತೆ? ಅವನ ಕಾಲದಲ್ಲೇ ಇದ್ದ ಅವನ ಜೊತೆಗಾರರು ಹೇಳುತ್ತಿದ್ದರೆ? – ಹೀಗೆ ಹತ್ತು ಹಲವು ಪ್ರಶ್ನೆಗಳು ಬರುತ್ತವೆ. ಆದರೆ ಇದಕ್ಕೂ ಮಾದಪ್ಪನ ಶ್ರೀಶೈಲ ನಂಟಿಗೆ ತಳಕು ಹಾಕುತ್ತದೆ. ಏಕೆಂದರೆ ಶ್ರೀಶೈಲದ ಭಕ್ತಾದಿಗಳು ಈಗಲೂ 'ಉಘೇ ಮಹಂತ ಮಲ್ಲಯ್ಯ' ಎಂದು ಚೆನ್ನಮಲ್ಲಿಕಾರ್ಜುನನ್ನು ಭಕ್ತಿಯಿಂದ ಉದ್ಗಾರ ಮಾಡುತ್ತಾರೆ. ಇದರಿಂದ ಮಾದೇಶ್ವರನು ಅಲ್ಲಿ ಅಥವಾ ಅದರ ಸುತ್ತಮುತ್ತಲ ಪ್ರದೇಶದಲ್ಲಿ ಜನಿಸಿದ್ದವನಾಗಿರಬೇಕು. ಒಂದುವೇಳೆ ಭೀಮನಕೊಲ್ಲಿಯಿಂದಲೇ ಪಯಣ ಬೆಳೆಸಿದ್ದಾನೆಂದು ಭಾವಿಸಿದರೂ ನಂತರದ ಕಾಲದಲ್ಲಿ ಸುತ್ತೂರಿನಿಂದ ಕುಂತೂರು ಮಠಕ್ಕೆ ಬರುವ ಮೊದಲು ಅಥವಾ ಆನಂತರ ಮಾದಪ್ಪನು ಅವನೊಬ್ಬನೆ ಅಥವಾ ಸಹಚರರೊಂದಿಗೆ ಶ್ರೀಶೈಲಕ್ಕೆ ಹೋಗಿರಬೇಕು. ಕರ್ನಾಟಕದ ಭಕ್ತ ಮನಸ್ಸುಗಳು ನಾಥ, ಕಾಳಾಮುಖಿ, ಪಶುಪತಿ ಮೊದಲಾದ ಶೈವ ಪಂಥದವರು ಹನ್ನೆರಡನೆ ಶತಮಾನದ ಶರಣರು ಸಿದ್ಧರಾಮರು ಅಕ್ಕಮಹಾದೇವಿ, ಅಲ್ಲಮನೂ ಸೇರಿದಂತೆ, ಬಳ್ಳಿಗಾವಿಯ ಸುತ್ತಮುತ್ತಲಿನ ಜನ, ಆಂಧ್ರ ಹಾಗೂ ಮಹಾರಾಷ್ಟ್ರದ ಭಾಗಗಳಿಂದ ಆಗಿನಿಂದಲೂ ಮತ್ತು ಈಗಲೂ ಶ್ರೀಶೈಲಕ್ಕೆ ಧಾರ್ಮಿಕ / ಆಧ್ಯಾತ್ಮಿಕ ಪಯಣ ಹೋಗುತ್ತಾರೆ. ತೋಂಟದ ಸಿದ್ಧಲಿಂಗರೂ ಅಲ್ಲಿಗೆ ಹೋಗಿದ್ದರು; ಅಲ್ಲಿ ಅನೇಕ ವೀರಶೈವ ಮಠಗಳಿವೆ. ಅದು ಬೌದ್ಧ, ಜೈನ, ಆಜೀವಕ, ಸ್ಮಾರ್ತ, ಶಾಕ್ತ, ವೈದಿಕ ಮೊದಲಾದ ಧಾರ್ಮಿಕ ಪರಂಪರೆಗಳ ಕರ್ಮಕ್ಷೇತ್ರವೂ ಆಗಿತ್ತು. ಹಾಗಾಗಿ ಮಾದೇಶ್ವರನು ಲಿಂಗಧಾರಣೆಗೆ ಮೊದಲು ಅಥವಾ ಆನಂತರ ಶ್ರೀಶೈಲಕ್ಕೆ ಹೋಗಿರಬಹುದಾದ ಸಾಧ್ಯತೆ ಇದೆ. ಅದರ ಪರಂಪರೆಯ ಕುರುಹಾಗಿ ಅವನ ಕಾಲದಲ್ಲಿಯೇ ಅಥವಾ ಆ ನಂತರ ಭಕ್ತರ ಜನಪದರ ಬಾಯಲ್ಲಿ ಇಲ್ಲಿಯವರೆಗೆ ಜಾತಿ ಮತಗಳ ಹಂಗಿಲ್ಲದೆ 'ಉಗೇ ಮಾತ್ಮಲಯ' ಉಳಿದು ಬಂದಿದೆ ಎನ್ನಬಹುದಾಗಿದೆ.

ISBN – 978-93-5526-247-9

'ಮಾದೇಶ್ವರ ಸೂರ್ಯರಶ್ಮಿ ಪ್ರವೇಶಿಸದಷ್ಟು ದಟ್ಟವಾದ ಅರಣ್ಯದ ಅಲೆಮಾರಿ ಬದುಕು ನಡೆಸುತ್ತಿದ್ದ ಬೇಟೆಗಾರರ ಒಂದು ಪೋಡಿನಲ್ಲಿ ಜನಿಸದವರಲ್ಲ. ಶ್ರೀಶೈಲದಿಂದ ವಲಸೆ ಬಂದು ಅಲ್ಲಿ ನೆಲೆಸಿದವರು.' (ಪು115. ಮಲೆ ಮಾದೇಶ್ವರ: ಸಾಂಸ್ಕೃತಿಕ ಮುಖಾಮುಖಿ, ಡಾ.ಎಸ್.ವಿದ್ಯಾಶಂಕರ) 'ಮಾದೇಶ್ವರನ ಈ ಏಳಿಗೆಗೆ ಸಹಕಾರಕ್ಕೇ ಕಾರಣ ಈತನೂ ಸಹ ಶ್ರೀಶೈಲ ಮೂಲದ ಶೈವ ಸಿದ್ಧ ಪಂಥದ ಪ್ರತಿಪಾದಕ ಎಂಬುದು. ಮುಡುಕುತೊರೆ ಮಲ್ಲಯ್ಯ ಸಹ ಶ್ರೀಶೈಲ–ಮೈಲಾರ ಮೂಲದ ಶೈವ ಪಂಥದವ' (ಪು131, ಮಲೆ ಮಾದೇಶ್ವರ ಕಾವ್ಯ: ಸಾಂಸ್ಕೃತಿಕ ವಾಸ್ತವಗಳು, ಮಹದೇವ ಶಂಕನಪುರ)– ಈ ಇಬ್ಬರ ಮಾತುಗಳು ಮಾದೇಶ್ವರನಿಗೆ ಶ್ರೀಶೈಲದ ನಂಟಿತ್ತು ಎಂಬುದನ್ನು ಪುಷ್ಟೀಕರಿಸುತ್ತದೆ. ಅಷ್ಟೇಕೆ ಕೆಲ ಭಕ್ತರ ಮನೆದೇವರು ಮುಡುಕುತೊರೆ ಭ್ರಮರಾಂಭ ಸಮೇತ ಮಲ್ಲಿಕಾರ್ಜುನನ ಜೊತೆಗೆ ಮಾದೇಶ್ವರನ ಒಕ್ಕಲಾಗೂ ಇದ್ದಾರೆ, ಇಲ್ಲಿ ಅಂತರ್ ಸಂಬಂಧಗಳೂ, ಒಳಸಂಬಂಧಗಳೂ ಅನುಸಂಧಾನಗಳು ಏರ್ಪಟ್ಟಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಜನಪದ ತ್ರಿಪದಿಯೊಂದರಲ್ಲಿ;

ಮುಡುಕುತೊರೆಯಲ್ಲಿ ಮಡವಾಳ್ದ ಮರಹುಟ್ಟಿ

ತಲಕಾಡ್ಗೆ ಬೇರು ಹರಿದಾವೋ ಮಾದಯ್ನು

ಗಿರಿಯಲ್ಲಿ ಮೊಗ್ಗು ಸುರಿದಾವೋ (ನಾಗವೇಂದ್ರ ಸ್ವಾಮಿ ಚಿದರವಳ್ಳಿ, ನನ್ನೂರು–ನನ್ನೋರು, ಪುಟ 82, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2000) – ಎನ್ನುವ ಜನಪದಕಾರ ತನ್ನ ಕಲ್ಪನೆಯನ್ನು ಹರಿಯಬಿಡುತ್ತಾ, ಮುಡುಕುತೊರೆಯಲ್ಲಿ ಮರಹುಟ್ಟಿ ತಲಕಾಡಿನವರೆಗೂ ಅದರ ಬೇರುಚಾಚಿ, ಮುಂದೆ ಮಾದಯ್ಯನ ಗಿರಿಯಲ್ಲಿ ಮೊಗ್ಗು ಸುರಿಸಿದ್ದಾನೆ. ಇದನ್ನು ಹೀಗೂ ಅರ್ಥೈಸಿಕೊಳ್ಳಬಹುದು. ಮಲ್ಲಯ್ಯನ ಪರಂಪರೆಯು ತಲಕಾಡಿನ ಮೂಲಕ ಸಾಗಿ ಮಾದಪ್ಪನ ಗಿರಿಯಲ್ಲಿ ಮೊಗ್ಗಾಗಿ ಘಮ್ಮೆಂದಿದೆ; ಕೆಲ ಕಂಸಾಳೆ ಸಂಕಥನಗಳಲ್ಲಿ ಮಾದಪ್ಪನು ಸುತ್ತೂರಿನ ಹೊಳೆಸಾಲಿನಲ್ಲೇ ಬಂದು, ತಲಕಾಡು, ಹೆಮ್ಮಿಗೆ, ಕಲ್ಲೂರು ಮೊದಲಾದೆಡೆಗಳಲ್ಲಿ ಆಡುತ್ತಾ, ಕುಂತೂರಿನ ಶಂಭುಲಿಂಗನ ಬೆಟ್ಟಕ್ಕೆ ಹೋದನೆಂದೂ ಇರುವುದು ಭಕ್ತ ಮಾನಸದಲ್ಲಿ ಅಚ್ಚು ಮೂಡಿರಬಹುದು. ಮಲ್ಲಪ್ಪ ಮತ್ತು ಮಾದಪ್ಪನಿಗಿರಬಹುದಾದ ಒಳ ಸಂಬಂಧಗಳನ್ನು ಇದು ಸೂಚಿಸುತ್ತಿರಬಹುದೇ ಯೋಚಿಸಬೇಕಾದ ಸಂಗತಿ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಹಳ್ಳಿಯ ಹಾಡುಗಳು' (1938), ಇಂದುವಾಡಿ ಪುಟ್ಟಮಲ್ಲಪ್ಪನವರ 'ಎಪ್ಪತ್ತೇಳು ಮಲೆಯೊಳಗೆ ನಾಟ್ಯವಾಡುತ್ತಿರುವ ಮಾಯಕಾರ ಮಾದೇಶ್ವರನ ಚರಿತ್ರೆ' (1954), ಬಿ. ಶಿವಮೂರ್ತಿಶಾಸ್ತ್ರಿಗಳ 'ಶ್ರೀ ಮಾದೇಶ್ವರ ಚರಿತ್ರೆ' (1954), ಪಿ.ಕೆ.ರಾಜಶೇಖರ ಅವರು ಎರಡು ಸಂಪುಟಗಳಲ್ಲಿ ಸಂಪಾದಿಸಿರುವ 'ಮಲೆಯ ಮಾದೇಶ್ವರ' (1973) ಕೃತಿಗಳೂ ಸೇರಿದಂತೆ ಎಲ್ಲಿಯೂ ಮಾದಪ್ಪನನ್ನು ಮಲ್ಲಯ್ಯನೆಂದು ಉಲ್ಲೇಖಿಸಿಲ್ಲ ಎಂಬುದು ಗಮನಾರ್ಹ.

ಶ್ರೀಶೈಲದಿಂದ ಭೀಮನಕೊಲ್ಲಿಗೆ ಬಂದ ಮಾದಪ್ಪ ನಂತರ ಭೀಮನಕೊಲ್ಲಿಯಿಂದಲೇ ಸುತ್ತೂರು, ಅರ್ದಳ್ಳಿ ನಡುಮಲೆಗೆ ಹೋಗಿರಬಹುದಾದ ಸಾಧ್ಯತೆಯೂ ಇದೆ. ಮಾದಪ್ಪ ಒಬ್ಬ ಜನಪದ ಸಾಂಸ್ಕೃತಿಕ, ಧಾರ್ಮಿಕ ನಾಯಕ. ಅವನು ಶ್ರೀಶೈಲಕ್ಕೆ ಹೋಗಿ ಬಂದಿದ್ದರೂ, ಹೋಗದಿದ್ದರೂ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಈಗಿನ ಅಧ್ಯಯನದ ಗ್ರಹಿಕೆಗಳ ಸ್ವರೂಪ ಬದಲಾಗಿದ್ದರೂ ಈ ಬಗ್ಗೆ ಬಹುಮುಖೀ ನೆಲೆಯಲ್ಲಿ ಚಿಂತಿಸಿ ಅವುಗಳಿಗೆ ಉತ್ತರ ಕಂಡುಕೊಳ್ಳದಿದ್ದರೆ ಅದು ಒಮ್ಮುಖ ಅಭಿಪ್ರಾಯವಾಗುತ್ತದೆ. ಹಾಗಾಗಿ ಈಗ ಇದರ ಜಾಡನ್ನು ಹಿಡಿದು ಸೂಕ್ಷ್ಮ ಅಧ್ಯಯನ, ಸಂವಾದಗಳ ಮೂಲಕ ಸರ್ವ ಸಮ್ಮತವಲ್ಲದಿದ್ದರೂ ಸಮಂಜಸವಾದ ಉತ್ತರ ಕಂಡುಕೊಳ್ಳಬೇಕಿದೆ.

ಶ್ರೀಶೈಲಕ್ಕೆ ಹೋಗುವ ಜನರು ಕಂಬಿಗೆ(ಕೋಲಿಗೆ) ಕಾವಡಿ(ನೆಲವು)ಗಳನ್ನು ತೂಗಿಬಿಟ್ಟು ಅವುಗಳಲ್ಲಿ ತಮಗೆ ಬೇಕಾದ ಸಾಮಾಗ್ರಿಗಳನ್ನು ಕೊಂಡ್ಯೊತ್ತಿದ್ದರು. ಪರುವತ ಲಿಂಗನಿಗೆ ಹೋಗಲಾಗದ ಜನರು ತಮ್ಮ ಹರಕೆ, ಮುಡಿಪುಗಳನ್ನು ಮಲ್ಲಯ್ಯನಿಗೆ ಮುಟ್ಟಿಸಿರೆಂದು ಯಾತ್ರಿಕರಿಗೆ ಕೊಡುತ್ತಿದ್ದರು. ಬರು ಬರುತ್ತಾ ಈ ಯಾತ್ರಿಕರು ತಮ್ಮ ಕಂಬಿಗಳಲ್ಲಿಯೇ ಮಲ್ಲಯ್ಯ ನೆಲಸಿ ಪರುವತಗಿರಿಗೆ ಕರೆದೊಯ್ದನೆಂದು ಹೇಳುತ್ತಾ ಬಂದಿದ್ದಾರೆ. ಈ ಕೋಲಾದ ಕಂಬ ಕಾವಡಿಗಳೇ ಬೇರೆ ರೂಪತೊಟ್ಟು ಇಂದಿನ 'ಕಂಬಿಯ ಮಲ್ಲಯ್ಯ'ನೇ ಆದವೆಂದು ಕಂಡುಬರುತ್ತದೆ.

ISBN – 978-93-5526-247-9

ಕರ್ನಾಟಕಕ್ಕೆ ಶ್ರೀಶೈಲದೊಂದಿಗೆ ಇರುವ ನಂಟನ್ನು ಗಮನಿಸುವುದು ಅಗತ್ಯ. ಆಗ 'ಉಫೇ ಮಹಂತ ಮಲ್ಲಯ್ಯ'ದ ಹಿನ್ನೆಲೆಯನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. " ಕೇಶಿರಾಜ, ಇಳಿಯಾಳ ಬೊಮ್ಮಯ್ಯ, ಬಾಹೂರ ಬೊಮ್ಮಯ್ಯ, ರಾಗದ ಸಂಕಣ್ಣ ಇವರು ಪೆರ್ಮಡಿ ಕಾಲದವರು. ಈ ರಾಜನು 1070 ರಿಂದ 1126ರವರೆಗೆ ಅಂದರೆ ಬಸವಣ್ಣನ ಮೊದಲು ರಾಜ್ಯವಾಳಿದನು'. (ಫ.ಗು.ಹಳಕಟ್ಟಿ, ಶಿವಶರಣರ ಚರಿತ್ರೆಗಳು– ಭಾಗ–2, ಪ್ರಸ್ತಾವನೆ) ಕಲ್ಯಾಣದಲ್ಲಿ ಕ್ರಾಂತಿಯಾಗಲು ಅಲ್ಲಮಪ್ರಭು, ಅಕ್ಕಮಹಾದೇವಿ, ರುದ್ರಮುನಿ ಮೊದಲಾದ ಶಿವಶರಣರು ಶ್ರೀಶೈಲವನ್ನು ಸೇರಲು, ಈ ಕಂಬಿಯ ಕಾಯಕವು ವೀರಶೈವ ಧರ್ಮವನ್ನು ಹಬ್ಬಿಸಲು ನೆರವಾಯಿತು. "ಕರ್ನಾಟಕದಿಂದ ಭಕ್ತ ಜಂಗಮರ ಪರಸೆಗಳು ಅಸಂಖ್ಯಾತವಾಗಿ ಶ್ರೀಶೈಲಕ್ಕೆ ಯಾವಾಗಲೂ ಹೋಗುತ್ತಿದ್ದುದು ಶಿವಶರಣರ ಚರಿತ್ರೆಗಳಿಂದ ತಿಳಿದುಬರುತ್ತದೆ. ಹೀಗೆ ಕ್ಷೇತ್ರಸ್ಥಾನಗಳಿಗೆ ದೂರ ದೂರ ದೇಶಗಳಿಂದ ಧಾರ್ಮಿಕ ಪುರುಷರು ಬರುತ್ತಿರುವುದರಿಂದ ಅವರಲ್ಲಿ ಪರಸ್ಪರ ವಿಚಾರ ವಿನಿಮಯಗಳಾಗಲು ಸಂಧಿಯು ದೊರೆಯುತ್ತದೆ. ಆದ್ದರಿಂದ ಇಂಥ ಸ್ಥಾನಗಳು ಧರ್ಮ ಪ್ರಸಾರಕ್ಕೆ ಬಹಳ ಅನುಕೂಲವಾದವುಗಳು". (ಫ.ಗು.ಹಳಕಟ್ಟಿ, ಶಿವಶರಣರ ಚರಿತ್ರೆಗಳು, ಭಾಗ–2, ಪುಟ335,)

ವಾಲಗಗಳೆಂದರೆ ದೀವಟಿಕೆಗಳನ್ನೆತ್ತಿ, ಮಲ್ಲಿಕಾರ್ಜುನನ ಬಿರುದಾವಳಿಗಳನ್ನು ಕೊಂಡಾಡಿ ಉಗ್ಗಡಣೆಗಳನ್ನು ಮಾಡುವುದು. ಹಾಡುಗಳೂ ಮಂಗಳಾರತಿಗಳೂ ಹರಕೆಗಳೂ ಜಾನಪದದಲ್ಲಿ ಹೇರಳವಾಗಿವೆ. 'ಉಗ್ಗಳಿಸುವುದು'

1".ಶಿವಶಿವೊ ಹಾಲಮಲ್ಲಯ್ಯ, ಓಲಮಲ್ಲಯ್ಯ, ಸಕ್ಕರಿಸಲುಗಾರ ಮಲ್ಲಯ್ಯ। ಮಹಾಂತ ಮಲ್ಲಯ್ಯ ಉಘೇ ಉಘೇ !

2. ಹಾಲಗಿರಿ, ಮೇಲಗಿರಿ, ಸಿದ್ಧಗಿರಿ ಸಿಂಹಾಸನಗಿರಿ, ಶ್ರೀಪಾದಕೆ। ಮಹಾಂತ ಮಲ್ಲಯ್ಯ ಉಘೇ ಉಘೇ !

3. ಗಂಗಾನ ಪಳಿ ಡೆಂಗ ಮಲ್ಲಯ್ಯ ಶ್ರೀಪಾದಕೆ। ಮಹಾಂತ ಮಲ್ಲಯ್ಯ ಉಘೇ ಉಘೇ !

4. ಕಡೆಬಾಗಿಲ ಕರವೀರಭದ್ರ ಶ್ರೀಪಾದಕೆ। ಮಹಾಂತ ಮಲ್ಲಯ್ಯ ಉಘೇ ಉಘೇ !

ಜಯನಮಃ ಪಾರ್ವತಿ ಪತಿ ಹರ ಹರ ಮಹಾದೇವಿ॥" (ಬಿ.ಎಸ್.ಗದ್ದಗಿ ಮಠ, ಕನ್ನಡ ಜಾನಪದ ಗೀತೆಗಳು, 1952ರ ಮಹಾಪ್ರಬಂಧ ಮೂಲ ಕೃತಿ)– ಇಲ್ಲಿ ಶ್ರೀಶೈಲಕ್ಕೆ ಸಿದ್ಧಗಿರಿಯೆಂದೂ ಕರೆದಿದ್ದಾರೆ. ರೇವಣ ಸಿದ್ದೇಶ್ವರನಿಂದ ಕೊಲ್ಹಾಪುರದಲ್ಲಿ ಭಂಗ ಹೊಂದಿದ ಗೋರಕ್ಷಕನು, ಬಹುತರವಾಗಿ ಶ್ರೀಶೈಲ ಸಿದ್ಧರ ಆಶ್ರಯಕ್ಕೆ ಬಂದು ನಿಂತಿರಬಹುದು. ಮುಂದೆ ಶಿವಶರಣರು ಶ್ರೀಶೈಲವನ್ನು ತಮ್ಮ ಪೀಠಸ್ಥಾನವನ್ನಾಗಿ ಮಾಡಿಕೊಂಡು ಶಿವಾನುಭವವನ್ನು ಸಾರಹತ್ತಲು ಅಲ್ಲಿದ್ದ ಸಿದ್ಧರೆಲ್ಲರೂ ವೀರಶೈವರಾಗಿ ಹೋಗಿರಬಹುದು. ಯಾಕೆಂದರೆ ಗೋರಕ್ಷಕನ ನಂತರ ಶ್ರೀಶೈಲದಲ್ಲಿ ಸಿದ್ಧರ ಸುಳಿವೇ ಕಂಡುಬರುವುದಿಲ್ಲ ಎಂಬ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಮೇಲಿನ ಹಾಡಿನಲ್ಲಿ 'ಮಹಂತ ಮಲ್ಲಯ್ಯನಿಗೆ ಉಘೇ ಉಘೇ' ಎಂಬ ಭಕ್ತರ–ಜನಪದರ ಉದ್ಗಾರವನ್ನು ಮಲೈ ಮಾದೇಶ್ವರ ಬೆಟ್ಟದಲ್ಲಿ ಮಾದೇಶ್ವರನ 'ಆನುಮಲೆ ಜೇನು ಮಲೆ। ಗುಂಜುಮಲೆ ಗುರುಗುಂಜುಮಲೆ। ಎಪ್ಪತ್ತೇಳು ಮಲೆಯಲ್ಲಿ' (ಹಾಲಗಿರಿ(ಮಲೆ), ಮೇಲಗಿರಿ(ಮಲೆ), ಸಿದ್ಧಗಿರಿ(ಮಲೆ), ಸಿಂಹಾಸನಗಿರಿ(ಮಲೆ)– ಇಲ್ಲಿ ಪದಗಳು ಮತ್ತು ಹಾಡುವ ಶೈಲಿ ಬದಲಾಗಿದೆ. ಆದರೂ ಯಾವುದೋ ರೀತಿಯಲ್ಲಿ ಸಾಮ್ಯತೆಯಿದೆ ಎನಿಸುತ್ತದೆ!) ಇದರ ನಂತರ ಹೇಳುವ 'ಉಗೇ ಮಾತ್ಮಲಯ' (ಮಹಾಂತ ಮಲ್ಲಯ್ಯ ಉಘೇ–ಇಲ್ಲಿ ಉಘೇ ಮೊದಲಾಗಿದೆ ಅಷ್ಟೆ.) ಸಾಮ್ಯತೆ ಇದೆಯಲ್ಲವೇ?!.

ಮಲೆ ಮಾದೇಶ್ವರ ಜನಪದ ಮಹಾಕಾವ್ಯವು ಪ್ರಾದೇಶಿಕತೆಯ ಅನನ್ಯತೆಯನ್ನು, ಅಲ್ಲಿರುವ ಪುರಾತನ ಮಾನವ ಸೃಷ್ಟಿ, ಪಶುಪಾಲನೆ, ಕೃಷಿ ಸಂಸ್ಕೃತಿ, ಮಹಿಳಾ ಪ್ರಾಧಾನ್ಯತೆಯ ಸ್ಥಿತ್ಯಂತರ. ಪ್ರಾದೇಶಿಕ ಭಾಷೆಯ ಸೊಗಡು–ಸೊಬಗು, ತಳ ಸಮುದಾಯಗಳಿಗೆ ಸ್ವಾಭಿಮಾನವನ್ನು ನೀಡಿದ ಬಗೆ, ಜೈನವಿರೋಧಿಕರಣ, ಶೈವ/ಸಿದ್ಧ/ಮಲ್ಲ/ ವೀರಶೈವ ಸಂಸ್ಕೃತಿಗಳ ಪುಷ್ಟೀಕರಣ,(ನಂದಿ, ಗರುಡ, ರಕ್ಕಸ, ರಾವಳ, ನಾಗ, ಸಿದ್ಧ, ಮಲ್ಲ ಮೊದಲಾದವು ದ್ರಾವಿಡ ಜನಾಂಗದ ಒಳ ಪಂಗಡಗಳಾಗಿಬಹುದೆ? ಎಂಬ ಅನುಮಾನ ಬರುವುದು'. –ಬಿ.ಎಸ್.ಗದ್ದಗಿ ಮಠ, ಕರ್ನಾಟಕ ಜಾನಪದ ದರ್ಶನ, ಪು24). ಜನಪದದ ಅಸ್ಮಿತೆ –ಇವೇ ಮೊದಲಾದ ವಿಷಯಗಳನ್ನು ಒಪ್ಪಿಕೊಂಡೂ ಮಾದೇಶ್ವರನಿಗೂ ಶ್ರೀಶೈಲಕ್ಕೂ ಪಾರಂಪರಿಕ ನಂಟಿದೆ–ಒಳ ಸಂಬಂಧವಿದೆ ಎಂಬ ವಿಷಯಕ್ಕೆ ಮಾತ್ರ ಇಲ್ಲಿ ನನ್ನ ವಿಷಯವನ್ನು

ಸೀಮಿತಗೊಳಿಸಿದ್ದೇನೆ. ಹಾಲಮಲ್ಲಯ್ಯ, ಓಲಮಲ್ಲಯ್ಯ ಈ ಪದಗಳ ಛಾಯೆಯಿರುವುದನ್ನೂ ಗಮನಿಸಿಬಹುದಾಗಿದೆ. 'ಭೀಮನಕೊಳ್ಳದ, ಭೀಮೇಶ್ವರ ಶ್ರೀಪಾದಕೆ। ಮಹಾಂತ ಮಲ್ಲಯ್ಯ ಉಘೇ ಉಘೇ!' – ಇಲ್ಲಿನ 'ಭೀಮನಕೊಳ್ಳ' – ಹೆಚ್.ಡಿ.ಕೋಟೆಯ'ಭೀಮನ ಕೊಲ್ಲಿ'ಗೂ ಸಾಮ್ಯತೆ ಇದೆಯಲ್ಲವೆ? ಇವೆಲ್ಲಾ ವಿವರಗಳು ಕಾಕತಾಳೀಯವೇನಲ್ಲ. ಈ ಬಗ್ಗೆ, "ಮಾದಪ್ಪ ಎಚ್.ಡಿ, ಕೋಟೆಯ ಬಳಿಯಿರುವ ಭೀಮನಕೊಲ್ಲಿಯವನು ಎಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಶ್ರೀಶೈಲದಲ್ಲಿಯೂ ಭೀಮನಕೊಲ್ಲಿ ಎಂಬುದಿದೆ. ಆ ಹೆಸರೇ ಇಲ್ಲಿ ಚಾಲ್ತಿಗೆ ಬಂದಿತೆ? ಮಂಟೇಸ್ವಾಮಿಯ ಮೂಲಕ್ಷೇತ್ರ ಕೆಲೂರು ಕೊಳ್ಳೆಗಾಲದ ಬಳಿ ಚಿಕ್ಕ ಕೆಲೂರು (ಜನರು ಚಿಕ್ಕಕಲ್ಲೂರು ಎನ್ನುತ್ತಾರೆ) ಆಗಿ ಪರಂಪರೆಯು ಸ್ಮರಿತಗೊಂಡಂತೆ ಇದೂ ಆಗಿಬಾರದೇಕೆ ಎಂಬ ಕುತೂಹಲ ಹುಟ್ಟುತ್ತದೆ" ಎಂಬ ಬಂಜಗೆರೆ ಜಯಪ್ರಕಾಶರ (ಪು35, ಮಲೆಮಹದೇಶ್ವರ ಕಾವ್ಯದ ಸಾಮಾಜಿಕ, ರಾಜಕೀಯ ಸಂಘರ್ಷಗಳು– ಕೆಲವು ಟಪ್ಪಣಿ) ಅಭಿಪ್ರಾಯ ಸಮಂಜಸವಾಗಿಯೇ ಇದೆ. ಇದನ್ನು ಮೇಲಿನ ಉಲ್ಲೇಖಗಳೂ ಸ್ಪಷ್ಟಪಡಿಸುತ್ತವೆ.

'ಮಾದೇಶ್ವರನಿಗೆ ಮಾದಯ್ಯ, ಮಾದಪ್ಪ ಎಂಬುವು ಪರ್ಯಾಯ ನಾಮಗಳೇ ಹೊರತು ಮಲ್ಲಯ್ಯ ಎಂಬುದಲ್ಲ. ಅದು ಶ್ರೀಶೈಲ ಮಲ್ಲಿಕಾರ್ಜುನನ ಪರ್ಯಾಯನಾಮ. ಆ ದೇವನನ್ನು ಮಲ್ಲೇಶನೆಂದು ಕರೆಯುತ್ತಿದ್ದರು ಎಂಬುದು ಶ್ರೀಪತಿ ಪಂಡಿತನು ಶ್ರೀಶೈಲ ಮಲ್ಲಿಕಾರ್ಜುನನ ಭಕ್ತನಾದ ಮೇಲೆ ಕ್ರಿ.ಶ 1400ರಲ್ಲಿ ಬೆಜವಾಡದ ಸ್ಕಂದ ದೇವಾಲಯವನ್ನು ಮಲ್ಲೇಶ್ವರ ದೇವಾಲಯವಾಗಿ ಮಲ್ಲೇಶ್ವರ ಪರಿವರ್ತಿಸಿದನೆಂಬುದನ್ನು ಸಮರ್ಥಿಸುತ್ತದೆ. ಮುಡುಕುತೊರೆ ಮಲ್ಲಿಕಾರ್ಜುನನು ಮಲ್ಲಪ್ಪ ಎಂದು ಕರೆಸಿಕೊಳ್ಳುತ್ತಿರುವುದನ್ನೂ, ಕೊಂಗಳ್ಳಿ ಮಲ್ಲಪ್ಪನು ಮಲ್ಲಿಕಾರ್ಜುನನೆಂದು ಕರೆಸಿಕೊಳ್ಳುತ್ತಿರುವುದನ್ನು ನೆನಪಿಗೆ ತಂದುಕೊಳ್ಳಬಹುದು' (ಹ.ಜ.ಶಿವಶಂಕರಪ್ಪ, ಮಾದೇಶ್ವರ ಸಮೀಕ್ಷೆ, ಪು321) ಎಂಬ ಮಾತುಗಳೂ ನನ್ನ ಮೇಲಿನ ವಿಶ್ಲೇಷಣೆಯನ್ನು ಎತ್ತಿ ಹಿಡಿಯುತ್ತದೆ. ಜೊತೆಗೆ ಮಾದೇಶ್ವರರ ದೀಕ್ಷಾ ಗುರುಗಳಾದ ಕುಂತೂರಿನ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳ ಹೆಸರು ಮಲ್ಲಯ್ಯನೆಂದೂ ಅಗಿರಲು ಸಾಧ್ಯವಿಲ್ಲ.

ಮೇಲಿನ ಎಲ್ಲಾ ವಿಚಾರಗಳಿಂದ ಮಾದೇಶ್ವರನು ಶ್ರೀಶೈಲದಿಂದ ಬಂದಿರುತ್ತಾನೆ. ಯಾವ ವಯಸ್ಸಿನಲ್ಲಿ, ಹೇಗೆ ಎಂಬೆಲ್ಲಾ ವಿಚಾರಗಳ ಬಗ್ಗೆ ಇನ್ನಷ್ಟು ಅಧ್ಯಯನದ ಅವಕಾಶವಿದೆ. ಒಟ್ಟಿನಲ್ಲಿ ಜನಪದ ಮಹಾಕಾವ್ಯಗಳು ಕಾಲ್ಪನಿಕ ಕೃತಿಗಳಾಗಿದ್ದರೂ, ಅದು ಆಳದಲ್ಲಿ ಚಾರಿತ್ರಿಕ ಅಂಶಗಳನ್ನು, ಘಟನೆಗಳನ್ನು ಅಡಗಿಸಿಕೊಂಡಿರುತ್ತವೆ. ಆದರೆ ಅವು ರೂಢಿಗತವಾದ ದಾಖಲೆಗಳಾಗದೆ ಕಾವ್ಯ ಪುರಾಣಗಳಾದಂತೆ ಚರಿತ್ರೆಯು ಐತಿಹ್ಯದಲ್ಲಿ ಪವಾಡಗಳಲ್ಲಿ ಅಡಗಿರುತ್ತದೆ. ಅದನ್ನು ನಮ್ಮದೇ ಪರಿಭಾವನೆಗಳ ಹೆಣಿಗೆಯಲ್ಲಿ 'ಇದಮಿತ್ಥಂ' ಎಂದು ಹೇಳಲಾಗದು. ಇದು ಸಮಷ್ಟಿ ಪ್ರಜ್ಞೆಯೊಂದಿಗೆ ನಿರಂತರ ಹುಡುಕಾಟದೊಂದಿಗೆ ನಡೆಯುವ ಪ್ರತಿಕ್ರಿಯೆ–ಪ್ರಕ್ರಿಯೆ ಆಗಿರುತ್ತದೆ.

'ಹಾಡುವ, ಕೇಳುವ' ಮಾದೇಶ್ವರ ಜನಪದಮಹಾಕಾವ್ಯವು ಇತಿಹಾಸದಿಂದ ಐತಿಹ್ಯವಾಗುತ್ತಾ, ಪುರಾಣವಾಗುತ್ತಾ, ಕಾವ್ಯವಾಗಿ, ವಿಶ್ಲೇಷಣೆ ವಿಮರ್ಶೆ ಚಿಂತನೆ– ಹೀಗೆ ನಾನಾ ನೆಲೆಗಳಲ್ಲಿ ಬೆಳೆದಿದೆ; ಬೆಳೆಯುತ್ತಿದೆ. ಇಂದು 'ಓದುವ ವ್ಯಾಖ್ಯಾನಿಸುವ' ಕಾವ್ಯವನ್ನಾಗಿಸಿದಂತೆಲ್ಲಾ ನಮ್ಮೆಲ್ಲಾ ಅನಿಸಿಕೆಗಳನ್ನು ಹೇರದೆ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗಿದೆ. ಇನ್ನೂ ಎಷ್ಟೋ ವಿಚಾರಗಳು ಪದಗಳ ನಡುವೆ, ಜನಪದರ ನಡುವೆ ಹೊರಬರದೆ ಅಡಗಿ ಕುಳಿತಿರುವುದೂ ಸಾಧ್ಯ. ಇವೆಲ್ಲವನ್ನೂ ಸಹೃದಯರೂ ಪ್ರಾಜ್ಞರೂ ಮುಕ್ತ ಮನಸ್ಸಿನಿಂದ 'ಕಾಣ'ಬೇಕಿದೆ: ದರ್ಶಿಸಬೇಕಿದೆ.

ಪರಾಮರ್ಶನ ಗ್ರಂಥಗಳು

1. ರಾಜಶೇಖರ ಪಿ.ಕೆ.(ಸಂ), ಮಲೆಯ ಮಾದೇಶ್ವರ, ಸಂಪುಟ1 ಮತ್ತು 2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 2006

2. ಡಾ. ಬಿ.ಎಸ್.ಸ್ವಾಮಿ, ಮಲೆಯ ಮಾದೇಶ್ವರ–ಒಂದು ಅಧ್ಯಯನ, ನವೀನ ಪ್ರಕಾಶನ, ಬೆಂಗಳೂರು, 1993

3. ಡಾ. ವೆಂಕಟೇಶ ಇಂದ್ವಾಡಿ(ಸಂ), ಮಲೆಯ ಮಾದಪ್ಪನ ಮಹಾಕಾವ್ಯ– ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, 2008

4. ಕೇಶವನ್ ಪ್ರಸಾದ್.ಕೆ.(ಸಂ), ಮಲೆ ಮಾದೇಶ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

5. ಎಸ್.ವಿದ್ಯಾಶಂಕರ, ಗ್ರಂಥೋಕ್ತ ಮಾದೇಶ್ವರ, ಶ್ರೀ ಮಾದೇಶ್ವರ ಸ್ವಾಮಿಯ ಇತಿಹಾಸ ಸಂಶೋಧನಾ ಸಂಸ್ಥೆ, 1979

6. ವಿದ್ವಾನ್ ಹ. ಜ. ಶಿವಶಂಕರಪ್ಪ, ಮಾದೇಶ್ವರ ಸಮೀಕ್ಷೆ, ಶ್ರೀ ಮಾದೇಶ್ವರ ಸ್ವಾಮಿಯ ಇತಿಹಾಸ ಸಂಶೋಧನಾ ಸಂಸ್ಥೆ, 1980

7. ಹಿ.ಚಿ. ಬೋರಲಿಂಗಯ್ಯ, ಕರ್ನಾಟಕ ಜನಪದ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018

8. ಬಿ.ಎಸ್. ಗದ್ದಗೀಮಠ, ಕರ್ನಾಟಕ ಜಾನಪದ ದರ್ಶನ, ಸರ್ಪನ್ ಪ್ರಕಾಶನ, ಧಾರವಾಡ, 2017

***

# 11. ಜನಪದ ಮಹಾಕಾವ್ಯ : ಮಂಟೇಸ್ವಾಮಿಕಾವ್ಯ : ಕೆಂಪಾಚಾರಿ ಸಾಲು ಒಂದು ವಿಮರ್ಶಾತ್ಮಕ ನೋಟ

**ವಿಜಯ್‌ಕುಮಾರ್. ಟಿ**

'ಮಹಾಕಾವ್ಯ' ಎಂದಕೂಡಲೇ ನಮಗೆ ನೆನಪಾಗುವುದು ನಮ್ಮ ನಾಡಿನ ಶಿಷ್ಟ ಮಹಾಕಾವ್ಯಗಳೆನಿಸಿರುವ 'ರಾಮಾಯಣ' ಮತ್ತು 'ಮಹಾಭಾರತ'ಗಳು.ಇವು ಜಗತ್ಪ್ರಸಿದ್ಧಿಯನ್ನು ಪಡೆದುಕೊಂಡಿರುವುದಲ್ಲದೆ ಜಗತ್ತಿನ ನಾನಾ ಭಾಷೆಗಳಿಗೆ ತರ್ಜುಮೆಯಾಗಿರುವುದೂ ಹೌದು. ಕಾಲಕಾಲಕ್ಕೆ ಬೇರೆ ಬೇರೆ ಸಾಹಿತಿಗಳ ಮರುಸೃಷ್ಟಿಗೊಳಪಟ್ಟು ಮಾರ್ಪಾಡುಗಳನ್ನು ಹೊಂದಿರುವುದೂ ಹೌದು. ಈ ಮಹಾಕಾವ್ಯಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನಾನಾ ವಿಚಾರಗಳು ಅಡಕವಾಗಿರುವುದು ಸತ್ಯವಾಗಿದೆ. ಆದರೆ ಈ ಇವುಗಳಲ್ಲಿ ಕಂಡುಬರುವ ಪಾತ್ರಗಳಾಗಲೀ, ಸಂಸ್ಕೃತಿಯಾಗಲೀ ಶಿಷ್ಟತನದ ಜಾಡಿನಲ್ಲೇ ಸಾಗುವುದನ್ನು ಕಾಣಬಹುದಾಗಿದೆ. ಪ್ರಾರಂಭದಲ್ಲಿ ಏಕವ್ಯಕ್ತಿಯಿಂದ ರೂಪಿಸಲ್ಪಟ್ಟ ಈ ಕಲಾಕೃತಿಗಳು ಕಾಲಕಾಲಕ್ಕೆ ಸಮಯ, ದೇಶಗಳಿಗನುಸಾರವಾಗಿ ರಚನಕಾರನ ಅನುಭವ ಮತ್ತು ಅಭಿವ್ಯಕ್ತಿ ಸಾಮರ್ಥ್ಯಕ್ಕನುಗುಣವಾಗಿ ತಮ್ಮ ಬದಲಾದ ರೂಪಗಳನ್ನು ತಳೆದಿರುವುದನ್ನೂ ಕಾಣಬಹುದಾಗಿದೆ.

ಆದರೆ ಜನಪದ ಮಹಾಕಾವ್ಯಗಳು ಹಾಗಲ್ಲ. ಇಲ್ಲಿ ಸಾಮಾನ್ಯ ಸಮುದಾಯದಿಂದ ಬಂದ ಅಥವಾ ತಳಸಮುದಾಯದಿಂದ ಬಂದ ವ್ಯಕ್ತಿತ್ವವು ನಾಯಕ ಪಾತ್ರ ವಹಿಸುತ್ತದೆ. ಸಮಾಜದ ಜನಸಾಮಾನ್ಯರ ಹಾಗೂ ಕಡುಬಡವರ, ದುಡಿಯುವ ವರ್ಗದವರ ಬದುಕು–ಬವಣೆ ಹಾಗೂ ಅಲ್ಲಿನ ಆಚರಣೆಗಳು ಜನಪದ ಮಹಾಕಾವ್ಯದ ವಸ್ತು ಹಾಗೂ ರಂಗಭೂಮಿಯ ಅಲಂಕಾರಗಳಾಗಿ ವಿಜೃಂಭಿಸುತ್ತವೆ. ಜನಪದ ಮಹಾಕಾವ್ಯದಲ್ಲಿ ಬಿತ್ತರಗೊಳ್ಳುವ ಸಂಸ್ಕೃತಿಯು ಒಂದು ಸಮುದಾಯದ ಆಚಾರ–ವಿಚಾರಗಳನ್ನು ಒಳಗೊಂಡಿದ್ದು 'ಭಾರತೀಯ ಸಂಸ್ಕೃತಿ' ಎಂಬ ಮಹಾಸಾಗರಕ್ಕೆ ನಾನಾ ತೊರೆಯಾಗಿ ಹರಿದು ಬಂದು ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ.

ಕನ್ನಡ ಜನಪದ ಮಹಾಕಾವ್ಯಗಳ ಲೋಕದಲ್ಲಿ ಪ್ರಸಿದ್ಧಿ ಪಡೆದಿರುವ ಅನೇಕ ಜನಪದ ಮಹಾಕಾವ್ಯಗಳಲ್ಲಿ 'ಮಂಟೇಸ್ವಾಮಿ' ಮಹಾಕಾವ್ಯವೂ ಸಹ ಒಂದಾಗಿದೆ. ಜನಪದ ಮಹಾಕಾವ್ಯವೆಂದ ಮೇಲೆ ಅದರ ಸೃಷ್ಟಿಯ ಮೂಲವನ್ನು ಇದಂಇತ್ಥಂಎಂದು ಹೇಳಲಾಗದು. ಹಾಗೆಯೇ ಅದೊಂದು ಮೌಖಿಕ ಪರಂಪರೆಯಿಂದ ಬಂದಿರುವ ಮಹಾಕಾವ್ಯವಾದ್ದರಿಂದ ನಾಡಿನ ಅನೇಕ ಭಾಗಗಳಲ್ಲಿರುವ ನೀಲಗಾರರು ಇದನ್ನು ಹಾಡುತ್ತಾರೆ. ಅವರು ಪಡೆದುಕೊಂಡಿರುವ ಜ್ಞಾನದ ಅನುಸಾರ ಹಾಗೂ ಅವರು ಹಾಡುವುದನ್ನು ಕೇಳಲು ನೆರೆದಿರುವ ಪ್ರೇಕ್ಷಕರ ಪ್ರಮಾಣ ಹಾಗೂ ಪ್ರತಿಕ್ರಿಯೆಗನುಸಾರವಾಗಿ ಅವರ ಹಾಡಿನ ದೀರ್ಘತೆ ನಿರ್ಧಾರವಾಗುತ್ತದೆ.

ಜನಪದ ಮಹಾಕಾವ್ಯಗಳ ವಸ್ತು ಜನಸಾಮಾನ್ಯರ ಬದುಕನ್ನೇ ಮುಖ್ಯ ಭೂಮಿಕೆಯನ್ನಾಗಿ ಹೊಂದಿರುವುದರಿಂದ ಹಾಗೂ ಎಲ್ಲರಿಗೂ ಅರ್ಥವಾಗಬಹುದಾದ ಅವರದೇ ಆದ ಆಡುಭಾಷೆಯಲ್ಲಿ ರಚಿತವಾಗಿರುವುದರಿಂದ ಸಾಮಾನ್ಯರನ್ನೂ ಸುಲಭವಾಗಿ ತಲುಪಬಲ್ಲವಾಗಿವೆ. ಅದರಲ್ಲಿನ ಸನ್ನಿವೇಶಗಳು ಜನರ ದಿನನಿತ್ಯದ ಘಟನೆಗಳಂತೆ ಭಾಸವಾಗುವುದರಿಂದ ಅದು ಯಾರದೋ ಕಥೆ ಎನಿಸದೆ ಅವರ ನಡುವಿನ ಕಥೆಯೇ ಎಂದು ಒಪ್ಪಿಕೊಳ್ಳಬಹುದಾಗಿದೆ. ಅವರ ನಡುವಿನ ಸಂಸ್ಕೃತಿಯೇ ಅಲ್ಲಿನ ಜೀವಾಳವಾಗಿದ್ದು ಅವುಗಳ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತವೆ. ಈ ಮೂಲಕ ಜನಪದರಲ್ಲಿ ತಮ್ಮ ಪೂರ್ವಜರ ಆಚರಣೆ ಹಾಗೂ ನಂಬಿಕೆಗಳಲ್ಲಿ ಶ್ರದ್ಧೆ ಇಡುವಂತೆ ಪ್ರೇರೇಪಿಸುತ್ತವೆ.

ಪ್ರಸ್ತುತ ಲೇಖನದಲ್ಲಿ ಮಂಟೇಸ್ವಾಮಿ ಕಾವ್ಯವನ್ನು ಅಧ್ಯಯನದ ವ್ಯಾಪ್ತಿಯಲ್ಲಿರಿಸಿಕೊಂಡು ಅದರಲ್ಲಿ ಬರುವ "ಕೆಂಪಾಚಾರಿ ಸಾಲು" ಎಂಬ ಭಾಗವನ್ನು ವಿಮರ್ಶೆಗೆ ಒಳಪಡಿಸಲಾಗಿದೆ. ಮಂಟೇಸ್ವಾಮಿ ಕಾವ್ಯವನ್ನು ನಾಡಿನ ಅನೇಕ ಭಾಗದ ನೀಲಗಾರರು ತಮಗೆ ತಿಳಿದಿರುವಂತೆ ಹಾಡುತ್ತಾರೆ. ಇಲ್ಲಿ ಪ್ರೊ.ಹಿ.ಚಿ.ಬೋರಲಿಂಗಯ್ಯನವರು ಸಂಪಾದಿಸಿರುವ "ಮಂಟೇಸ್ವಾಮಿ" ಕೃತಿ ಹಾಗೂ ಡಾ.ವೆಂಕಟೇಶ ಇಂದ್ವಾಡಿ ಅವರು ಸಂಪಾದಿಸಿರುವ "ಮಂಟೇಸ್ವಾಮಿಕಾವ್ಯ–ಓದುಪಠ್ಯ" ಇವುಗಳ ಆಧಾರದ ಮೇಲೆ ಈ ಲೇಖನ ರಚನೆಯಾಗಿದೆ.

ISBN – 978-93-5526-247-9

ಮಂಟೇಸ್ವಾಮಿಕಾವ್ಯದಲ್ಲಿನ ಅಧ್ಯಾಯಗಳನ್ನು ಇಲ್ಲಿ 'ಸಾಲು' ಎಂದು ಕರೆಯಲಾಗಿದ್ದು ಬಹುಶಃ ಇದು ಹಾಡು ಕಾವ್ಯವಾಗಿರುವುದರಿಂದ ಹಾಗೆ ಕರೆದಿರಬಹುದು ಎನ್ನಬಹುದಾಗಿದೆ. ಧರೆಗೆದೊಡ್ಡವರು ಎನಿಸಿಕೊಂಡಿರುವ ಮಂಟೇಸ್ವಾಮಿಗಳು ಈ ಕಾವ್ಯದ ಮುಖ್ಯ ಪಾತ್ರಧಾರಿಯಾಗಿದ್ದು ಅವರ ಸೂತ್ರಧಾರಿಕೆಯಲ್ಲಿ ನಡೆಯುವ ಪ್ರಸಂಗ ಇದಾಗಿದೆ. ನೀಲಗಾರರು ಧರೆಗೆದೊಡ್ಡವರ ಕಥೆಯನ್ನು ಉತ್ತರದೇಶದ ಕಥೆ, ಕತ್ತಲ ರಾಜ್ಯದಕಥೆ ಎಂದು ಎರಡು ಭಾಗಗಳಾಗಿ ಮಾಡಿಕೊಂಡಿದ್ದಾರೆ. ಉತ್ತರದ ಕಲ್ಯಾಣದಲ್ಲಿ ನಡೆಯುವ ಕಥೆಯನ್ನು ಉತ್ತರದೇಶದ ಕಥೆ ಎಂತಲೂ, ದಕ್ಷಿಣ ಭಾಗದಲ್ಲಿ ನಡೆಯುವ ಕಥೆಯನ್ನು ಕತ್ತಲ ರಾಜ್ಯದಕಥೆ ಎಂತಲೂ ಕರೆಯಲಾಗಿದೆ. ಉತ್ತರದಿಂದ ತಮ್ಮ ಶಿಷ್ಯಪಡೆಯೊಡನೆ ಬಂದ ಮಂಟೇಸ್ವಾಮಿಗಳು ಮೈಸೂರು ಭಾಗವನ್ನು ತಲುಪಿದಾಗ ನಡೆಯುವ ಪ್ರಸಂಗಗಳ ಮಾಲೆಯನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಈ ಸಂದರ್ಭದಲ್ಲಿ ಕತ್ತಲ ರಾಜ್ಯದ ಕಥೆಯ ಮೂರು ಮುಖ್ಯ ಕ್ರಿಯೆಗಳಾಗಿ 1.ತಳಭಿಕ್ಷೆ, 2.ಮಗನಭಿಕ್ಷೆ, ಮತ್ತು 3.ಕಬ್ಬಿಣಭಿಕ್ಷೆಗಳನ್ನು ಕಾಣಬಹುದಾಗಿದೆ.

ಉತ್ತರದಿಂದ ನಡೆದುಬಂದ ಈ ಸಾಂಸ್ಕೃತಿಕ ತಂಡ ಕತ್ತಲ ರಾಜ್ಯದಲ್ಲಿ ನೆಲೆಯಾಗುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಮಠ ಮನೆ ಕಟ್ಟುವುದಕ್ಕೆ ಜಾಗ ಪಡೆಯುವುದನ್ನು ತಳಭಿಕ್ಷವೆಂದೂ ಆ ತಳದಲ್ಲಿ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಶಿಷ್ಯನನ್ನು ಪಡೆಯುವುದಕ್ಕೆ ಮಗನ ಭಿಕ್ಷವೆಂದೂ ಮತ್ತು ಪಾತಾಳ ಬಾವಿಯನ್ನು ತೋಡಿ ಮಠ ಮನೆಕಟ್ಟಲು ಬೇಕಾದ ಕಬ್ಬಿಣವನ್ನು ಪಡೆಯುವುದಕ್ಕೆ ಕಬ್ಬಿಣ ಭಿಕ್ಷವೆಂದೂ ಈ ಕಾವ್ಯದಲ್ಲಿ ಸಾಂಕೇತಿಕವಾಗಿ ಕರೆದುಕೊಂಡಿದ್ದಾರೆ.

ಪ್ರಸ್ತುತ ಕೆಂಪಾಚಾರಿಯ ಸಾಲು 'ಮಗನಭಿಕ್ಷ'ದ ಅಂಗವಾಗಿ ಬರುತ್ತದೆ. ಕತ್ತಲ ರಾಜ್ಯದಲ್ಲಿ ನೆಲೆಯಾಗುವ ಸಲುವಾಗಿ ಅಲ್ಲಿ ಮಠಮನೆಕಟ್ಟಲು ಬೊಪ್ಪೇಗೌಡನಪುರವನ್ನು ಸ್ಥಳಭಿಕ್ಷವಾಗಿ ಪಡೆದು, ಆ ತಳದಲ್ಲಿ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಶಿಷ್ಯನನ್ನಾಗಿ ಕೆಂಪಾಚಾರಿಯನ್ನು ಪಡೆಯುವ ಸಲುವಾಗಿ ಮಾರಳ್ಳಿಗೆ ಬಂದ ಸಂದರ್ಭದಲ್ಲಿ ಈ ಘಟನೆಜರುಗುತ್ತದೆ.

ಮಾರಳ್ಳಿಯ ಬಾಚಿ ಬಸವಣ್ಣಾಚಾರಿ ಹಾಗೂ ಮುದ್ದಮ್ಮ ದಂಪತಿಗಳ ಏಳನೇ ಮಗನಾಗಿ ಕೆಂಪಾಚಾರಿ ಹುಟ್ಟಿರುತ್ತಾನೆ. ಮೂಲತಃಕಡುಬಡವರಾಗಿದ್ದ ಈ ದಂಪತಿಗಳಿಗೆ ಕೆಂಪಾಚಾರಿಯಜನನದ ನಂತರ ಶ್ರೀಮಂತಿಕೆ ದೊರೊಯುತ್ತದೆ. ಅದನ್ನು

"ಮುತ್ತು ಮೂಗಳವಾಯ್ತು
ರತ್ನ ನಾಗಳವಾಯ್ತು
ಮೊರದ ಬಂಗಾರವಾಯ್ತು
ಮುತ್ತಿನ ಮುಂಬಾಗ್ಲು
ರತ್ನದತೊಲಗಂಬಾ....."ಮೊದಲಾದ ಸಾಲುಗಳಲ್ಲಿ ಅರಿಯಬಹುದಾಗಿದೆ.

ಇಂತಹ ಅಪೂರ್ವ ಭಾಗ್ಯಕ್ಕೆ ಕಾರಣನಾದ ಕೆಂಪಾಚಾರಿಯನ್ನು 'ಮಗನಭಿಕ್ಷ'ವಾಗಿ ಕೇಳಲು ಬಂದ (ಮಂಟೇಸ್ವಾಮಿ) ಧರೆಗೆದೊಡ್ಡವರನ್ನು ವಿರೋಧಿಸಿ ವಾಪಸು ಕಳುಹಿಸುವ ಸಹಜ ಪ್ರತಿಕ್ರಿಯೆ ನಡೆಯುತ್ತದೆ.ಈ ಸಂದರ್ಭದಲ್ಲಿ ಧರೆಗೆದೊಡ್ಡವರ ಗೆಜ್ಜೆಸದ್ದನ್ನು ಕೇಳಿ ಬೆದರಿದ ಹಸು ಹಾಲಿನ ಪಾತ್ರೆಯನ್ನು ಒದ್ದು ಹಾಲು ಚೆಲ್ಲುತ್ತದೆ. ಹಾಲು ಕರೆಯುತ್ತಿದ್ದ ಮುದ್ದಮ್ಮನೂ ಒಂದೆಡೆ ಬೀಳುತ್ತಾಳೆ. ಇದರಿಂದ ಕೋಪಗೊಂಡ ಮುದ್ದಮ್ಮನು ಧರೆಗೆದೊಡ್ಡವರನ್ನು "ನಾನು ಮಂಟ್ಕಂಡಂಗ ನಿನ್ನ ಮನ ಮಂಟೋಗ್ಲಿ ಮುಂದಕ್ಕಾಹೋಗಪ್ಪಾ" ಎಂದು ಬೈಯುತ್ತಾಳೆ. ಅವಳ ಈ ಬೈಗುಳಕ್ಕೆ ಪ್ರತಿಕ್ರಿಯೆಯಾಗಿ ತಾನು ಈವರೆಗೂ ಪಡೆದುಕೊಂಡಿರುವ ಹೆಸರುಗಳ ಜೊತೆಗೆ ಈಕೆಯ ಬೈಗುಳದಲ್ಲಿ ಅಡಕವಾಗಿದ್ದ ಹೆಸರನ್ನೂ ಸ್ವೀಕರಿಸಿ "ಮಂಟೇಸ್ವಾಮಿ" ಎಂದು ನಾಮಕರಣಗೊಳ್ಳುತ್ತಾರೆ. ಈ ಘಟನೆಯಲ್ಲಿ ಗಮನಿಸಬಹುದಾದ ಮುಖ್ಯಾಂಶವೆಂದರೆ ಅಪಾರ ಶಕ್ತಿವಂತರಾಗಿದ್ದರೂ ಸಹ ಅದರ ಬಗ್ಗೆ ಗರ್ವ, ಅಹಂಕಾರ ಪಡದೇ ಸ್ತ್ರೀಯೊಬ್ಬಳ ಬೈಗುಳಕ್ಕೆ ಅವಮಾನ ತಾಳಿ ಮುಳಿಯದೇ ಅದನ್ನು ಸಕಾರಾತ್ಮವಾಗಿ ಸ್ವೀಕರಿಸಬೇಕಾದ ಉದಾರಗುಣ. ಅಧಿಕಾರ ಬಂದಾಗ ಅಹಂಕಾರ ತಾಳುವ ಪ್ರಸ್ತುತ ಸಂದರ್ಭದಲ್ಲಿ ಅದನ್ನು ನಿಗ್ರಹಿಸಿ ಸ್ಥಿತಪ್ರಜ್ಞರಾಗಿರುವ (ಮನಸ್ಥಿತಿಯ) ಆದರ್ಶವನ್ನು ಇಲ್ಲಿ ಗಮನಿಸಬಹುದಾಗಿದೆ.

ISBN – 978-93-5526-247-9

ಈ ಸಂದರ್ಭದಲ್ಲಿ ತಮ್ಮ ಈವರೆಗಿನ ಹೆಸರುಗಳನ್ನು ಧರೆಗೆದೊಡ್ಡವರು ಹೇಳಿಕೊಳ್ಳುತ್ತಾರೆ. ಅವರ ಆದಿಸಂಗಮೇಶ್ವರ, ಉತ್ತರದೇಶದ ಸಿದ್ದ, ಜ್ಯೋತಿಲಿಂಗಯ್ಯ, ಕಲ್ಯಾಣದಯ್ಯ, ಧರೆಗೆದೊಡ್ಡವರು, ಕೊಡಾಲಾದಯ್ಯ, ಮಾಗುರು, ಅಲ್ಲಮಪ್ರಭು ಮೊದಲಾದ ಹೆಸರುಗಳನ್ನು ಗಮನಿಸಿದಾಗ ಒಬ್ಬ ಸಿದ್ಧಪುರುಷನು ತನ್ನ ಲೀಲಾಸ್ಥಳಗಳಲ್ಲಿ ಇಷ್ಟೊಂದು ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ ಎಂದಮೇಲೆ ಆ ಒಂದೊಂದು ಹೆಸರಿಗೂ ಒಂದೊಂದು ಸಮುದಾಯದ ಭಕ್ತರು, ಶರಣರು, ಅನುಯಾಯಿಗಳು ಇರಲೇಬೇಕು. ಅವರೆಲ್ಲರೂ ಪ್ರತ್ಯೇಕವಾಗಿ ಪ್ರತ್ಯೇಕ ಹೆಸರುಗಳಿಂದ ಅವರನ್ನು ಕಾಣುತ್ತಾರೆ. ಇಲ್ಲಿ "ದೇವನೊಬ್ಬ ನಾಮಹಲವು" ಎಂಬ ಮಾತನ್ನು ಸ್ಮರಿಸಬಹುದಾಗಿದೆ. ಒಬ್ಬನೇ ದೇವನು ಅನೇಕ ರೂಪಗಳಲ್ಲಿ ಬಿತ್ತರವಾಗಿದ್ದಾನೆ ಎಂದು ಹೇಳುವ ಈ ಮಾತು ಇಲ್ಲಿ ಸಾಕ್ಷ್ಯರೂಪ ಪಡೆಯುತ್ತದೆ. ಅದ್ವೈತ ತತ್ವದ ಸುಳಿವು ಕಾಣಸಿಗುತ್ತದೆ.

ಕಥೆಯು ಮುಂದುವರಿದುಕಬ್ಬಿಣ ಕಛೇರಿಯೊಳಗೆ ಅಧಿಕಾರದಲ್ಲಿರುವ ಕಿರಿಯ ಮಗ ಕೆಂಪಾಚಾರಿಯನ್ನು ಸತಿಪತಿಯರಿಬ್ಬರೂ ಒಪ್ಪಿದಾನ ಮಾಡಬೇಕೆಂದು ಕೇಳಿದಾಗ ಮಂಟೇಸ್ವಾಮಿಯನ್ನು ಅವಮಾನಿಸಿ ಕಳುಹಿಸುತ್ತಾರೆ. ಈ ಸಂದರ್ಭದಲ್ಲಿ ಮಂಟೇಸ್ವಾಮಿಯು "ವಂಚನಕಾರ ಮುಂಡೇ ಲಕ್ಷಮಿಇವೊತ್ತು ನಿನ್ನ  ಮನಲಿ ಇದ್ದರಾ ಇನ್ನೊಬ್ಬರ ಮನಗ ಮುಂದಲವರ್ಷಕ ಹೊರಟುಹೋಯ್ತದಾ" ಎಂಬ ಮಾತು ಪಂಪನ ಆದಿಪುರಾಣದಲ್ಲಿ ಬರುವ "..ಭಟಖಡ್ಗ ಮಂಡಲೋತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿರಾಜ್ಯಲಕ್ಷ್ಮಿ" ಎಂಬ ಸಾಲನ್ನು ನೆನಪಿಸುತ್ತದೆ. ಎಂದರೆ ಐಶ್ವರ್ಯವೆಂಬುದು ಶಾಶ್ವತವಾದುದಲ್ಲ ಎಂಬುದು ಈ ಸಾಲುಗಳ ಹಿಂದಿನ ಮರ್ಮವಾಗಿದೆ.

ಅಂತಹ ಐಶ್ವರ್ಯವನ್ನು ಖಂಡಿಸುತ್ತಾ ಮಂಟೇಸ್ವಾಮಿ "ನಿನ್ನ ಅರಮನೆಯಲ್ಲಿರುವ ಮುತ್ತುರತ್ನವೆಲ್ಲಾ ನನ್ನ ಮಠಮನೆಯ ಮುಗ್ಗಲು ಜೋಳ, ಮಾಡದರಾಗಿ" ಎಂದು ಛೇಡಿಸುತ್ತಾರೆ. ಇದು ಸಂಪತ್ತನ್ನು ತಿರಸ್ಕರಿಸುವ ಸಿದ್ಧರ ಪರಂಪರೆಯ ಧೋರಣೆಯನ್ನು ತಿಳಿಸಿಕೊಡುತ್ತದೆ. ಈ ಮರ್ಮವನ್ನರಿಯದ ಮುದ್ದಮ್ಮ ದಂಪತಿಗಳು ತಮ್ಮ ಮಗನ ಬದಲಾಗಿ ಇತರ ಧನಕನಕಗಳನ್ನು ನೀಡುವುದಾಗಿ ಹೇಳುತ್ತಾ ಮಂಟೇಸ್ವಾಮಿಯವರನ್ನು ಸಾಗಿಹಾಕಲು ಪ್ರಯತ್ನಿಸುವ ವೇಳೆಯಲ್ಲಿ "ಭಿಕ್ಷಕ ಬಂದವರು ಬಿಸಿ ಅನ್ನ ಕೇಳ್ದಂಗಾ" ಎಂಬ ಗಾದೆಯ ಪ್ರಯೋಗವನ್ನೂ ಕಾಣಬಹುದಾಗಿದೆ. ಇಲ್ಲಿ ಲೌಕಿಕ ಜಗತ್ತಿನ ಬಂಧನಗಳಿಂದ ಆಕರ್ಷಿತರಾದ ಪೋಷಕರು ಮಗನಾದ ಕೆಂಪಾಚಾರಿಯನ್ನು ಸಿದ್ಧಪುರುಷನಾಗಿಸುವ ಮಂಟೇಸ್ವಾಮಿಯ ಆಶಯವನ್ನುಒಪ್ಪುವುದಿಲ್ಲ. ಅವರಿಗೆ ಪ್ರಾಪಂಚಿಕ ಭೋಗಗಳೇ ಹಿರಿಯ ಆದರ್ಶಗಳಾಗಿ ಕಾಣುತ್ತವೆ. ಇಲ್ಲಿ ಮಾನವನು ಸಂಪತ್ತಿನ ಮಾಯೆಗೆ ಒಳಗಾಗಿ ತನ್ನ ಜೀವನದ ಉನ್ನತೀಕರಣವನ್ನು ಕಡೆಗಣಿಸುವ ಅಂಶವನ್ನು ಗಮನಿಸಬಹುದಾಗಿದೆ. ಅಲ್ಲದೇ ಈ ದಂಪತಿಗಳಿಗೆ ಕೇವಲ ಐಶ್ವರ್ಯವೇ ಮುಖ್ಯವಾಗಿರಬೇಕೆಂದು ತೋರುತ್ತದೆ. ಈ ಸನ್ನಿವೇಶದ ಚರ್ಚೆಗಳು ಮುಂದುವರಿದು "ಆರು ಮಕ್ಕಳ ರಕ್ತ ಕಕ್ಕಾ ಸತ್ರುವಾ, ಈ ಕೆಂಪಚಾರಿಕೊಡದಿಲ್ಲಾ" ಎಂಬ ಮಾತುಗಳಲ್ಲಿ ಇದನ್ನು ಗಮನಿಸಬಹುದು. ಎಂದರೆ ಮಂಟೇಸ್ವಾಮಿಗೆ ಕೆಂಪಾಚಾರಿಯನ್ನು ಒಪ್ಪಿಸದೇ ಇರುವುದಕ್ಕೆ ಕಾರಣ ಆತನೊಂದಿಗಿರುವ ಪುತ್ರವಾತ್ಸಲ್ಯವಲ್ಲ; ಅದು ಆತನು ಅವರ ಐಶ್ವರ್ಯಕ್ಕೆ ಕಾರಣನಾದವನು ಎಂಬ ಕಾರಣಕ್ಕೆ ಮಾತ್ರ ಎಂಬುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಕೆಂಪಾಚಾರಿಯು ಇತರೆ ಆರು ಮಕ್ಕಳಲ್ಲಿ ಒಬ್ಬನಾಗಿದ್ದರೆ ಸಲೀಸಾಗಿ ಆತನನ್ನು ದಾನವಾಗಿ ಕೊಡುತ್ತಿದ್ದರು ಎನಿಸುತ್ತದೆ. ಅಲ್ಲದೆ ಮಾನವ ಸಂಬಂಧಗಳು ಧನಮೂಲದಿಂದ ಗುರ್ತಿಸಿಕೊಳ್ಳುವ ಒಂದು ಧೋರಣೆ ಇಲ್ಲಿ ಸಾಬೀತಾಗಿರುವುದನ್ನು ಕಾಣಬಹುದಾಗಿದೆ.

ಮುಂದೆ ಕೆಂಪಾಚಾರಿಯನ್ನು ಭೇಟಿಯಾಗಲು ಕಬ್ಬಿಣದ ಕಛೇರಿಯ ಬಳಿಗೆ ಬಂದ ಮಂಟೇಸ್ವಾಮಿಯವರಿಗೆ ಅಲ್ಲಿದ್ದಕೆಂಪಾಚಾರಿಯ ವೈಭವ ಗೋಚರವಾಗುತ್ತದೆ. ಅದನ್ನು

"ಹತ್ತು ಬೆರಳಿಗೂ
ಮುತ್ತಿನಉಂಗುರ
ತಾಮ್ರದಚಡವಾ

ಕಾಲಲ್ಲಿ ಮೆಟುಕೊಂಡು.."ಎಂಬಿತ್ಯಾದಿ ಸಾಲುಗಳಲ್ಲಿ ಕಾಣಬಹುದಾಗಿದೆ. ಅಲ್ಲಿಗೆ ಬಂದ ಮಂಟೇಸ್ವಾಮಿಗಳು ಅರವತ್ತಾರು ಆಳುಗಳನ್ನು ಅಧೀನರನ್ನಾಗಿಸಿ ಕೆಲಸ ಮಾಡಿಸುತ್ತಿದ್ದ ವೈಭವಪೂರಿತ ಕೆಂಪಾಚಾರಿಯನ್ನು ಏಕವಚನದಿಂದ

ISBN – 978-93-5526-247-9

"ಹೇ ಕೆಂಪಾಚಾರಿ" ಎಂದುಕೂಗಿದಾಗ ಅವನಿಗೆ ಸಹಜವಾಗಿ ಕೋಪ ಬರುತ್ತದೆ. ಇದೇ ಮೊದಲಾಗಿ ಅವರಿಬ್ಬರಲ್ಲಿ ಮಾತಿನ ಚಕಮಕಿ ನಡೆಯುತ್ತದೆ. ಇವರಿಬ್ಬರ ನಡುವಿನ ಈ ಸಂಭಾಷಣೆ ನಮಗೆ ಹಲವಾರು ನಂಬಿಕೆಗಳ ಕುರಿತಾದ ಮರುಚಿಂತನೆಗೆ ಅವಕಾಶ ನೀಡುತ್ತದೆ.

"ಹೇ ಜಂಗಮ,ದೇವ್ರುತ್ರಿಷ್ಣ ಮಾಡ್ದವ್ರು ನಾವು. ಒಂದು ಕರಿಕಲ್ಲತರತ್ತೀವಿ. ಕಾಲಲ್ಲಿ ಮೆಟ್ಟಕೊಂಡುದೊಡ್ಡ ಉಳಿಯ ತಗಂಡು, ಚಿಕ್ಕ ಸುತ್ಗತಕ್ಕಂಡು ವಿಗ್ರಹ ಮಾಡ್ತೀವಿ. ನಾವು ಮಾಡಿದ ವಿಗ್ರಹತಕ್ಕಂಡು ಮನೆ ದೇವ್ರು ಅಂತ ಪೂಜಿಸಿಕೊಂಡು....ನನಗೆ ವರಕೊಡುದೇವ್ರು ಅಂತ ಬಿದ್ದು ಬಿದ್ದು ಕೇಳ್ತಿಯಾ.." ಎಂಬ ಕೆಂಪಾಚಾರಿಯ ಮಾತು, ದೇವರು–ವಿಗ್ರಹ ಪೂಜೆ ಮುಂತಾದ ನಂಬಿಕೆಗಳ ಕುರಿತು ಓದುಗರು/ಕೇಳುಗರು ವ್ಯಾಖ್ಯಾನ ಹುಡುಕುವಂತೆ ಮಾಡುತ್ತವೆ. ಎಲ್ಲೋ ಬಿದ್ದಿದ್ದಕಲ್ಲಿಗೆ ನಮಗೆ ಇಷ್ಟವಾಗುವ ದೇವರ'ರೂಪ ನೀಡಿ, ಆ ರೂಪಕ್ಕೊಂದು ಹೆಸರುಕೊಟ್ಟು ಪೂಜಿಸುತ್ತೇವೆ. ಕಲ್ಲಿನಲ್ಲಿ ದೇವರನ್ನು ಕಾಣುವ ಜನರ ನಂಬಿಕೆಯನ್ನು ಈ ಸಾಲುಗಳು ವಿಮರ್ಶೆಗೆ ಗುರಿಮಾಡುತ್ತವೆ. ಮುಂದುವರಿದ ಕೆಂಪಾಚಾರಿ "ದೇವದೇವ್ರಗೆಲ್ಲಾ ನಾವೇ ಮೊದಲ ದೇವ್ರು" ಎಂದು ಹೇಳುವಾಗ ಅಲ್ಲಿ "ಅಹಂ ಬ್ರಹ್ಮಾಸ್ಮಿ", "ಈಶಾವಾಸ್ಯಮಿದಂ ಶರೀರಂ" ಮುಂತಾದ ಹೇಳಿಕೆಗಳು ನೆನಪಾಗುತ್ತವೆ. ಮನುಷ್ಯನು ತನ್ನೊಳಗಿನ ದೈವತ್ವವನ್ನು ಅರಿಯಬೇಕೆಂಬ ಜಿಜ್ಞಾಸೆ ಇದಾಗಿರಬಹುದು ಎನಿಸುತ್ತದೆ. ಈ ಮೊದಲಾಗಿ ಮುಂದುವರಿಯುವ ಕೆಂಪಾಚಾರಿಯ ಮಾತುಗಳಲ್ಲಿ ಮನುಷ್ಯನು ತನ್ನ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು ಆತನ ಅಧೀನಕ್ಕೆ ಬರುವ ಕಾರ್ಯಗಳಲ್ಲಿ ಸರ್ವಾಧಿಕಾರವನ್ನು ಸಾಧಿಸಬೇಕೆಂಬ ಹಂಬಲ ಗೋಚರವಾಗುತ್ತದೆ.

ಮಂಟೇಸ್ವಾಮಿಯವರು 'ಕೆಂಡ' ಬೇಕೆಂದು ಕೇಳುವ ಸಂದರ್ಭಕ್ಕೆ "ನಿನಗೊಂದು ಕೆಂಡಕೊಟ್ಟರೆ ನನಗೊಂದು ಉರಿಕಡಿಮೆಯಾಗುತ್ತದೆ" ಎಂದು ಉತ್ತರಿಸುವ ಕೆಂಪಾಚಾರಿಯ ಮಾತುಗಳಲ್ಲಿ ಆತನ ವಾಣಿಜ್ಯಕೇಂದ್ರಿತ ಮನೋಭಾವ (ಬಿಸ್ನೆಸ್ ಮೈಂಡೆಡ್ನೆಸ್) ವ್ಯಕ್ತವಾಗಿದೆ. ಹೇಗೆ ವ್ಯಾಪಾರಗಾರನೊಬ್ಬನುತನ್ನ ವ್ಯಾಪಾರದಲ್ಲಿ ಸರ್ವಲಾಭವನ್ನು ಬಯಸುತ್ತಾನೋ ಅಂತಹ ನಿಲುವನ್ನು ಕೆಂಪಾಚಾರಿಯ ಈ ಮಾತುಗಳಲ್ಲಿ ಮತ್ತು "ಗ್ವಾಡೆ ಬೆರಣಿಯ ನಿಮ್ಮಜ್ಜಮ್ಮತಟ್ಟಿ ಮಡಗಿಲ್ಲ, ಬಾಚಿಚೆಕ್ಕೆಯ ನಿಮ್ಮಜ್ಜಯ್ಯಕೆತ್ತಿಲ್ಲ" ಎಂಬ ಮಾತುಗಳಲ್ಲಿ ಕಾಣಬಹುದಾಗಿದೆ. ಇಷ್ಟು ಹೇಳಿದ ನಂತರ ಕೆಂಪಾಚಾರಿಯು ಮಂಟೇಸ್ವಾಮಿಯವರನ್ನು ಅವಮಾನಿಸುವ ಸಲುವಾಗಿ "ಹಿಡಿಯೋ ಪರದೇಸಿ ನಿನ್ನ ಎರಡೂ ಕೈಯಾ" ಎಂದು ಹೇಳಿ ಅವರ ಕೈ ಮೇಲೆ ಉರಿಯುವ ಕೆಂಡವನ್ನಿಡುವ ಸಾಹಸಕ್ಕೆ ಕೈ ಹಾಕುತ್ತಾನೆ. ಆ ವೇಳೆಗೆ ಮಂಟೇಸ್ವಾಮಿ ತಮ್ಮ ಪವಾಡವನ್ನು ತೋರಿಸುವ ಸಂದರ್ಭ ಎದುರಾಗುತ್ತದೆ. ಉರಿಯುವ ಕೆಂಡವನ್ನು ಕೈಯಲ್ಲಿ ಹಿಡಿದು ಭಂಗಿ ಸೇದಲು ಪ್ರಾರಂಭಿಸುವ ಮಂಟೇಸ್ವಾಮಿ ತಮ್ಮ "ಕಪ್ಪು ಧೂಳ್ತ" ತೆಗೆದು ಕೆಂಪಾಚಾರಿಯ ಮೇಲೆ ಪ್ರಯೋಗಿಸುತ್ತಾರೆ. ಅದರ ಪರಿಣಾಮವಾಗಿ ಅವನಿಗೆ "ಹುಚ್ಚು–ಬೆಪ್ಪು" ಹಿಡಿಯುತ್ತದೆ. ಮಂಟೇಸ್ವಾಮಿಯವರು ಭಂಗಿಸೇದಿ ಹೊರಬಿಟ್ಟ ಹೊಗೆಯ ಪರಿಣಾಮವು ಕೆಂಪಾಚಾರಿಗೆ ಮತ್ತಷ್ಟು ಹುಚ್ಚು ಹೆಚ್ಚಾಗುವಂತೆ ಮಾಡುತ್ತದೆ. ಈ ಸಂದರ್ಭದಲ್ಲಿ ಆ ಹೊಗೆಯು ನೀಲಿಯಂತೆ ವರ್ತಿಸುತ್ತದೆ ಎಂದು ಹೇಳಲಾಗಿದೆ. ಅಲ್ಲದೆ ಅದರಲ್ಲಿ 88 ಬಗೆಯ ನೀಲಿಗಳಿರುವ ಉಲ್ಲೇಖವನ್ನು ಕಾಣಬಹುದಾಗಿದೆ. ಇಲ್ಲಿ ನೀಲಿ ಎಂಬುದು ಒಂದು ಬಗೆಯ "ಡ್ರಗ್" ಎಂಬ ಅರ್ಥದಲ್ಲಿ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ.

ಈ ಹೊತ್ತಿಗೆಕೆಂಪಾಚಾರಿಯು ಅಧೀನಪಡಿಸಿಕೊಂಡಿದ್ದ 66ಜನ ಕಾರ್ಮಿಕರನ್ನು ಮಂಟೇಸ್ವಾಮಿಯವರು ಸ್ವತಂತ್ರಗೊಳಿಸುತ್ತಾರೆ. ಆಗ ಲಕ್ಷಿಕನ ಮಗನಾಗಿದ್ದ ಕೆಂಪಾಚಾರಿಯು ನಿರ್ಗತಿಕ ಹುಚ್ಚನಂತಾಗಿರುತ್ತಾನೆ. ಸೆರೆಯಾಳುಗಳಂತಿದ್ದ ಕಾರ್ಮಿಕರು ಸ್ವತಂತ್ರರಾಗುತ್ತಾರೆ. ಇದು ಮಂಟೇಸ್ವಾಮಿಯು ಪವಾಡ ಪುರುಷರಾಗಿದ್ದರು ಎಂಬುದರ ಜೊತೆಗೆ ಅವರ ಈ ನಡೆಯಲ್ಲಿ ಮಾರ್ಕ್ಸ್‌ವಾದಿ ಕುರುಹುಗಳನ್ನೂ ಕಾಣಬಹುದಾಗಿದೆ. ಈ ಮೊದಲೇ ಹೇಳಿರುವಂತೆ ಐಶ್ವರ್ಯವೆಂಬುದು ಚಂಚಲ ಸ್ವಭಾವದಿಂದ ಕೂಡಿದುದೆಂದೂ ಅದರ ನೆಲೆ ಕ್ಷಣದಿಂದಕ್ಷಣಕ್ಕೆ ಬದಲಾಗುವ ಸ್ವರೂಪದ್ದು ಎಂಬುದು ಸ್ಪಷ್ಟವಾಗಿದೆ.

ಇಷ್ಟು ಪ್ರಸಂಗ ನಡೆದ ನಂತರ ಕೆಂಪಾಚಾರಿಯನ್ನು ಆತನ ಚಾರಿತ್ರ್ಯ ಶುದ್ಧಿಗಾಗಿ "ಕಾಳಿಂಗನ ಗವಿ"ಗೆ ತಳ್ಳುವುದರೊಂದಿಗೆ ಈ "ಸಾಲು" ಮುಕ್ತಾಯಕಾಣುತ್ತದೆ. ಇಲ್ಲಿ ಕಾಳಿಂಗನ ಗವಿಯು ಒಂದು ವ್ಯಕ್ತಿತ್ವ ಶುದ್ಧಿಯ ನೆಲೆಯಾಗಿ, ತಪಸ್ಸಿನ ನೆಲೆಯಾಗಿ ಗೋಚರವಾಗುತ್ತದೆ.

ಒಟ್ಟಾರೆಯಾಗಿ "ಕೆಂಪಾಚಾರಿಯ ಸಾಲು" ಭಾಗವು ಮಂಟೇಸ್ವಾಮಿಕಾವ್ಯದ ಬಹುಮುಖ್ಯ ಭಾಗವಾಗಿ ಸ್ಥಾನ ಪಡೆದುಕೊಂಡಿದ್ದು ಮುಂದೆ ಲೋಕವಂದ್ಯ ಸಿದ್ದಪ್ಪಾಜಿಯಾಗಿ ಪರಿವರ್ತನೆಗೊಳ್ಳುವ ಕೆಂಪಾಚಾರಿಯ ಪೂರ್ವಾಶ್ರಮದ ಮಾಹಿತಿಯನ್ನು ನಮಗೆ ತಿಳಿಸುತ್ತದೆ. ಅಷ್ಟೇ ಅಲ್ಲದೆ ಇದೊಂದು ವ್ಯಕ್ತಿತ್ವ ವಿಕಸನದ ಕುಲುಮೆಯಾಗಿ ಕಂಡುಬರುತ್ತದೆ. "ಐಶ್ವರ್ಯಕ್ಕಿಂತ, ಆಡಂಬರಕ್ಕಿಂತ ಆದರ್ಶವೇ ಮೇಲು" ಎಂಬ ತತ್ವವನ್ನು ಸಾಬೀತು ಮಾಡಲು ಹೊರಟ ನಿದರ್ಶನವಾಗಿ ಕಂಡುಬರುತ್ತದೆ. ದೇವರು, ನಂಬಿಕೆ, ವಿಗ್ರಹ ಪೂಜೆ ಮುಂತಾದ ಗಹನವಾದ ವಿಚಾರಗಳ ಕುರಿತು ಓದುಗರು ಕೇಳುಗರು ಚಿಂತಿಸಬೇಕಾದ ಜಿಜ್ಞಾಸೆಯನ್ನು ಮುಂದಿಡುತ್ತದೆ. ಒಂದು ಪರಂಪರೆಯ ಕಾಪಾಡುವಿಕೆಗಾಗಿ ನಡೆಯಬಹುದಾದ ಪವಾಡ ಅಥವಾ ಅದ್ಭುತ ಘಟನೆಗಳ ಅವತರಣಿಕೆಯನ್ನು ವೇದ್ಯಗೊಳಿಸುತ್ತದೆ.

**ಆಕರ ಗ್ರಂಥಗಳು**


1. ಮಂಟೇಸ್ವಾಮಿಕಾವ್ಯ– ಓದುಪಠ್ಯ – ಸಂ. ಡಾ. ವೆಂಕಟೇಶಇಂದುವಾಡಿ. ಪ್ರಸಾರಾಂಗಕನ್ನಡ ವಿಶ್ವವಿದ್ಯಾಲಯ, ಹಂಪಿ, 2012
2. ಮಂಟೇಸ್ವಾಮಿ – ಸಂ. ಬೋರಲಿಂಗಯ್ಯ. ಹಿ. ಚಿ. ಪ್ರಸಾರಾಂಗಕನ್ನಡ ವಿಶ್ವವಿದ್ಯಾಲಯ, ಹಂಪಿ, 1997
3. ಆದಿಪುರಾಣ ಸಂಗ್ರಹ–ಎಲ್. ಗುಂಡಪ್ಪ,


****

ISBN – 978-93-5526-247-9

## 12. ಜನಪದ ಮಹಾಕಾವ್ಯಗಳಲ್ಲಿ ಐತಿಹಾಸಿಕ ಪ್ರಜ್ಞೆ

(ಮಹದೇಶ್ವರಕಾವ್ಯವನ್ನು ಅನುಲಕ್ಷಿಸಿ)

**ಚರಣರಾಜ ಜೆ. ಹೆಚ್**

ಒಂದುರಾಷ್ಟ್ರದ ಸಮಷ್ಟಿ ಪ್ರಜ್ಞೆಯ ಪ್ರತೀಕವಾಗಿ ಆ ರಾಷ್ಟ್ರದ ಔನ್ನತ್ಯದ ಸಂಕೇತವಾಗಿ ಆವಿರ್ಭವಿಸುವ ಕೃತಿಯನ್ನು ನಾವು 'ಮಹಾಕಾವ್ಯ' ಎಂದು ಕರೆಯುತ್ತೇವೆ. ಈ ಕೃತಿ ಏಕ ಕವಿಕೃತವಾಗಿರದೆ ಸಮಷ್ಟಿಕೃತವಾಗಿರುವುದರಿಂದ ಇದನ್ನು 'ಜನಪದ ಮಹಾಕಾವ್ಯ' ಎಂದುಕರೆಯುತ್ತೇವೆ. ಜನಪದಕಾವ್ಯ ಅಕ್ಷರಸ್ಥರ ಬೆಳೆಯಲ್ಲ, ಬದಲಿಗೆ ಅನಕ್ಷರಸ್ಥರ ಬೆಳೆಯಾಗಿದೆ. ಈ ನೆಲದ, ಈ ಮಣ್ಣಿನ, ಈ ನಾಡಿನ ಜನಜೀವನದ ಸಂಸ್ಕೃತಿಯ ಅಸ್ಮಿತೆಯ ಪ್ರತೀಕವಾಗಿದೆ. ಮಾನವ ತನ್ನ ಆಲೋಚನ ಕ್ರಮಗಳು, ಚಿಂತನೆಯ ರೀತಿಯು ಬದಲಾದಂತೆ ಭಾಷೆಯನ್ನು ದುಡಿಸಿಕೊಂಡು ಇನ್ನಷ್ಟು ಪಕ್ವವಾದ, ಮಾಗಿದ ಅನುಭವಗಳೊಂದಿಗೆ ಪದಗಳನ್ನು ಕಟ್ಟತೊಡಗಿದನು. ಈ ದೃಷ್ಟಿಯಿಂದ ಅಭಿನಯಗಾರನನ್ನು, ಕೇಳುಗನನ್ನು ಮತ್ತು ನೋಡುಗನನ್ನು ಒಟ್ಟಿಗೆ ಇಟ್ಟುಕೊಳ್ಳುವ ವೈಶಿಷ್ಟ್ಯತೆ ಜನಪದಕ್ಕಿದೆ. ಆದ್ದರಿಂದ ಇಂತಹ ವೈಶಿಷ್ಟ್ಯತೆಯನ್ನು ಪಡೆದ ಈ ಕಾವ್ಯ ನಿತ್ಯ ಚಲನಶೀಲವಾದುದ್ದಾಗಿದೆ.

ಭಾರತದ ಇತಿಹಾಸ ಬಹುತೇಕ ಪುರಾಣವಾಗಿದ್ದರೆ, ಭಾರತದ ಬಹುತೇಕ ಜನಪದ ಕಾವ್ಯಗಳು ಐತಿಹಾಸಿಕ ಚರಿತ್ರೆಗಳಾಗಿವೆ. ಜನಪದ ಸಮುದಾಯಗಳಿಗೆ ಐತಿಹಾಸಿಕ ನಾಯಕನನ್ನು ಅಥವಾ ಘಟನೆಯನ್ನು ಕೊಂಡಾಡುವುದು, ಪುರಾಣೀಕರಿಸುವುದು, ಪವಾಡ ದೃಷ್ಟಿಯಿಂದ ನೋಡುವುದು ಅಥವಾ ಅವುಗಳನ್ನು ವಾಕ್‌ಸಂಪ್ರದಾಯದಲ್ಲೇ ಇಡುವುದು ವಾಡಿಕೆಯಯಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮೌಖಿಕ ಪರಂಪರೆಯನ್ನು ನೋಡಬೇಕಾಗಿದೆ. ಹಾಗಾಗಿ ಈ ಕಾವ್ಯದಲ್ಲಿ ಬರುವ ಪುರುಷರೆಲ್ಲರು ಪವಾಡ ಪುರುಷರು, ಸಾಧಕರು, ಆಧ್ಯಾತ್ಮಿಕ ಗುರುಗಳು ಹಾಗೂ ಚರಿತ್ರೆಯ ನಾಯಕರಾಗಿರುತ್ತಾರೆ.

ಕರ್ನಾಟಕದ ಜಾನಪದೀಯ ಮಹಾಕಾವ್ಯಗಳನ್ನು ಅವಲೋಕಿಸುವುದಾದರೆ ಪ್ರಮುಖವಾಗಿ ಮಾದೇಶ್ವರಕಾವ್ಯ, ಮಂಟೇಸ್ವಾಮಿಕಾವ್ಯ, ಸೌದತ್ತಿ ಎಲ್ಲಮ್ಮನಕಾವ್ಯ, ಜುಂಜಪ್ಪನಕಾವ್ಯ, ಮೈಲಾರ ಲಿಂಗನ ಕಾವ್ಯ ಸಂಪ್ರದಾಯವನ್ನು ಗುರುತಿಸ ಬಹುದಾಗಿದೆ. ಈ ಕಾವ್ಯ ಪರಂಪರೆಯಲ್ಲಿ ಮಾದೇಶ್ವರಕಾವ್ಯವನ್ನು ಚಾರಿತ್ರಿಕ ದೃಷ್ಟಿಯಿಂದ ನೋಡಬೇಕೆ? ಅಥವಾ ಭೌದ್ಧಿಕ ದೃಷ್ಟಿಯಿಂದ ನೋಡಬೇಕೆ? ಎಂಬುದು ಜಿಜ್ಞಾಸೆಯ ವಿಷಯವಾಗಿದೆ.

ಪ್ರಥಮವಾಗಿ ಮಾದಪ್ಪ ಚಾರಿತ್ರಿಕ ವ್ಯಕ್ತಿಯೇ? ಅಥವಾ ಆಧ್ಯಾತ್ಮಿಕ ವ್ಯಕಿಯೇ? ಎಂಬ ಗೊಂದಲವಿದೆ. ಹಾಗಿದ್ದರೂ ಮಾದಪ್ಪ ಐತಿಹಾಸಿಕ ಮಹತ್ವವುಳ್ಳ ಚಾರಿತ್ರಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪ್ರತಿನಿಧಿಯಾಗಿದ್ದಾನೆ. ದೊರೆತ ಆಧಾರಗಳನ್ನು ಗಮನಿಸಿದರೆ ಮೇಲಿನ ಅಂಶಗಳನ್ನು ಕೆಲವು ದಾಖಲೆಗಳು ಸ್ಪಷ್ಟೀಕರಿಸುತ್ತವೆ. ಸಂಗಪ್ಪ ಶಾಸ್ತ್ರಿಗಳ 'ಸುತ್ತೂರು ಸಿಂಹಾಸನದ ಗುರುಪರಂಪರೆ' (1933) ಎಂಬ ಕೃತಿಯ ಪ್ರಕಾರ ಸಿದ್ಧನಂಜ ದೇಶಿಕರ ಕಾಲದಲ್ಲಿ (1170–1240) ಮಾದೇಶ್ವರರು ಸುತ್ತೂರಿಗೆ ಬಂದಿದ್ದರು ಎಂಬ ಮಾಹಿತಿಯಿದೆ. ಕ್ರಿ.ಶ 1345 ರಲ್ಲಿ ರಚಿತವಾಗಿದೆಯೆನ್ನಲಾದ ಹರದನಹಳ್ಳಿಯ ತಾಮ್ರ ಶಾಸನದಲ್ಲಿ ಮಾದೇಶ್ವರರ ಪ್ರಸ್ತಾಪವಿದೆಯಾದರೂ ಅದರ ಕಾಲ ಸಂದೇಹಾಸ್ಪದವಾಗಿದೆ. ಈ ಶಾಸನದ ಪ್ರಕಾರ ಹರದನಹಳ್ಳಿಯ ಮಠದ ಮೂರನೇಯ ಮಠಾಧೀಶನಾಗಿದ್ದೂ, ಕ್ರಿ.ಶ 11 ನೇ ಶತಮಾನದ ಉತ್ತರಾರ್ಧ ಹಾಗೂ ಕ್ರಿ.ಶ 12ನೇ ಶತಮಾನದ ಪೂರ್ವಾರ್ಧ ಎಂದು ಗುರುತಿಸಬಹುದಾಗಿದೆ. ಕ್ರಿ.ಶ 1761ರ ಹೈದರಾಲಿಯ ಒಂದು ತಾಮ್ರ ಶಾಸನದಲ್ಲಿ ಮಾದೇಶ್ವರರ ಬಗ್ಗೆ ಹೆಚ್ಚಿನ ವಿವರಗಳಿವೆ. ಆದರೆ ಆತನ ಮೂಲದ ಬಗ್ಗೆ ಮಾಹಿತಿ ದೊರಕುವುದಿಲ್ಲ.

ಸಂಗಪ್ಪ ಶಾಸ್ತ್ರಿಗಳ 'ಸುತ್ತೂರು ಸಿಂಹಾಸನದ ಗುರುಪರಂಪರೆ' (1933) ಎಂಬ ಕೃತಿಯ ಪ್ರಕಾರ ಸಿದ್ಧನಂಜ ದೇಶಿಕರ ಕಾಲದಲ್ಲಿ (1170–1240) ಮಾದೇಶ್ವರರು ಸುತ್ತೂರಿಗೆ ಬಂದಿದ್ದರು ಎಂಬ ವಿಚಾರ ಸಂಧಿಗ್ಧವಾಗಿದೆ. ಈತಕ್ರಿ.ಶ 12ನೇಯ ಶತಮಾನದ ಕಲ್ಯಾಣದ ಶೂನ್ಯಪೀಠದ ಗುರುಪರಂಪರೆಯಲ್ಲಿ ಬಂದ ಆರನೆಯ ಪೀಠಾಧಿಪತಿಯಾಗಿದ್ದಾನೆ. ಇವನ ಹೆಸರು ನಿರ್ಮಾಯ ಗಣೇಶ್ವರನೆಂದೂ ಇದರ ಕನ್ನಡರೂಪವೇ ಮಾದೇಶ್ವರ. ಇವನು ಕ್ರಿ.ಶ 14ನೇ ಶತಮಾನದಲ್ಲೆ ಬಂದು ಹೋದವನು ಎನ್ನಲಾಗಿದೆ. ಹಾಗಾಗಿ ಈತನ ಬಗ್ಗೆ ಹೆಚ್ಚಿನ ವಿಷಯ ತಿಳಿದು ಬಂದಿಲ್ಲ. ಗುರುಸಿದ್ಧ ಕವಿಯ 'ಮಾದೇಶ್ವರ ಸಾಂಗತ್ಯ'ದಲ್ಲಿ ಈತ ಮೈಸೂರು ಜಿಲ್ಲೆಯ ಸುತ್ತೂರು ಹಾಗೂ ಪ್ರಭುಲಿಂಗನ ಬೆಟ್ಟದಲ್ಲಿ

ISBN – 978-93-5526-247-9

ಸ್ವಲ್ಪ ಕಾಲದವರೆಗೆ ವಾಸವಿದ್ದು ಅನೇಕ ಪವಾಡಗಳನ್ನು ಮೆರೆದಂತೆ ಪ್ರಸ್ತಾಪವಿದೆ. ಈಗಲೂ ಮಾದೇಶ್ವರನ ಶಿವಯೋಗ ಸಮಾಧಿ ಪೂರ್ವ ಘಟ್ಟಗಳಲ್ಲಿ ಅಂದರೆ ಕೊಳ್ಳೆಗಾಲ ತಾಲ್ಲೂಕಿನ ಕಾವೇರಿ ತೀರದ ನಡುಮಲೆಯಲ್ಲಿದೆ ಎಂಬ ಪ್ರತೀತಿಯಿದೆ.

ಮಾದೇಶ್ವರನ ಕಾವ್ಯದಲ್ಲಿ 'ಶ್ರವಣ ಪ್ರಸಂಗ' ಮಾದೇಶ್ವರ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ. ಮೈಸೂರಿನ ಒಡೆಯರ ಕಾಲದ ಆಸ್ಥಾನದ ಕವಿ ದೇವಚಂದ್ರನು ತನ್ನ 'ರಾಜವಳಿ ಕಥೆ' ಯಲ್ಲಿ ಮಾದೇಶ್ವರರು ಭಾಮಕೀರ್ತಿಯೆಂಬ ಜಿನಮುನಿಯನ್ನು ಲಾಕ್ಷವ ಪಾದುಕಂ ತೊಡಿಸಿ ಕಾದ ಅತೆಯ ಮೇಲೆ ಕೊಂದು ಕುಂತೂರು ಮಠದ ಜೋಳಿಗೆ ಒಡೆಯರಿಗೆ ರಾಜ್ಯವನ್ನು ಕೊಡಿಸಿದ ಪ್ರಸ್ತಾಪ ಬರುತ್ತದೆ. ಈ ಘಟನೆಯು ಆ ಹೊತ್ತಿನ ಜೈನ ಮತ್ತು ಶೈವರ ಮತೀಯ ಸಂಘರ್ಷದ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದು ಮಾದೇಶ್ವರಕಾವ್ಯದ ಶ್ರವಣದೊರೆ ಸಾಲಿನೊಡನೆ ಈ ಪ್ರಸಂಗದ ಹೋಲಿಕೆ ಸ್ಪಷ್ಟವಾಗಿ ತೋರುತ್ತದೆ. ಆ ಸಂದರ್ಭದಲ್ಲಿ ಮಾದೇಶ್ವರರು ಈ ಭಾಗಕ್ಕೆ ಆಗಮಿಸಿದಾಗ ಇಲ್ಲಿ ಪ್ರಾಬಲ್ಯದಲ್ಲಿದ್ದ ಜೈನಧರ್ಮ ಅವನತಿಗೊಂಡು ಶೈವಧರ್ಮದ ಪುನರುತ್ಥಾನವಾದಂತೆ ತೋರುತ್ತದೆ. ಈ ಕಥೆಯಲ್ಲಿ ಕವಿ ದೇವಚಂದ್ರನು ಮಾದೇಶ್ವರನ ಜಾತಿಯ ಕುರಿತಾಗಿ ಈತ 'ಮಾದಿಗರ ಹುಡುಗ' ಎಂದು ಹೇಳಿರುವುದು ವಿಶೇಷವಾಗಿದೆ.

ಈ ಕಾವ್ಯದಲ್ಲಿ ಮಾದೇಶ್ವರ ತನ್ನ ತಂದೆ–ತಾಯಿರನ್ನು ಪಡೆದ ಪ್ರಸಂಗ ಮತ್ತು ಕಲ್ಯಾಣದ ಬಸವಣ್ಣ ನೀಲಮ್ಮ ಇವರ ದೃಢವನ್ನು ಪರೀಕ್ಷಿಸಿದ ಪ್ರಸಂಗಗಳು ಕಾವ್ಯದ ಮುಖ್ಯ ಪರದೆಯ ಹೊರಗೆ ಘಟಿಸುತ್ತವೆ. ಉತ್ತರಾಜಮ್ಮನನ್ನು ಬಿಟ್ಟರೆ ಕಲ್ಯಾಣದಲ್ಲಿ ಬಸವೇಶ್ವರ ನೀಲಮ್ಮ ಇವರಿಗೆ ಮಾದೇಶ್ವರ ಕಾಣಿಕೊಳ್ಳುವ ಭಾಗವು ಪ್ರಕ್ಷಿಪ್ತವಾಗಿದ್ದೂ ಮಂಟೇಸ್ವಾಮಿ ಕಾವ್ಯದೊಂದಿಗೆ ಸಂಬಂಧವನ್ನು ಹೊಂದಿರುವ ಕಾರಯ್ಯ ಮತ್ತು ಬಿಲ್ಲಯ್ಯರೆಂಬುವವರು ಸೋಲಿಗ ಶಂಕಮ್ಮನ ಮಕ್ಕಳೆಂದು ಜನಪದ ಕಾವ್ಯ ಚಿತ್ರಿಸುತ್ತದೆ. ಕೆಲವು ಮೂಲಗಳ ಪ್ರಕಾರ ಕಾರಯ್ಯನೊಬ್ಬನೆ ಸೋಲಿಗ ಭಕ್ತನಾಗಿದ್ದಾನೆ. ಬಿಲ್ಲಯ್ಯನು ಕುರುಬ ಜಾತಿಗೆ ಸೇರಿದವನು. ಈ ಬಿಲ್ಲಯ್ಯನಿಗೆ ಕುಂತೂರು ಮಠದಲ್ಲಿ ದೀಕ್ಷೆಯಾಗುತ್ತದೆ. ಈತ ಮಹದೇಶ್ವರ ಕ್ಷೇತ್ರದಲ್ಲಿರುವ ತಮಡಿಗಳ ಮೂಲ ಪುರುಷನೆಂದು ಹೇಳಲಾಗುತ್ತದೆ. ಹಾಗೆಯೆ ಮಾದೇಶ್ವರರ ಜೊತೆಯಲ್ಲಿ ಬಂದ ಸಂಸಾರಿ ಸಂಗಪ್ಪನು ಮಾದೇಶ್ವರ ಗಿರಿಯ ಮೇಲೆ ಒಂದು ಮಠ ಸ್ಥಾಪಿಸಿದನು. ಈ ಮಠಕ್ಕೆ ಸಾಲೂರು ಮಠ ಎಂಬ ಹೆಸರು ಬಂದಿತು. ಈ ದಾಸೋಹ ಮಠ ಇಂದಿಗೂ ಮಾದೇಶ್ವರನ ಭಕ್ತರಾದ ದೇವರ ಗುಡ್ಡರಿಗೆ ದೀಕ್ಷೆಯನ್ನು ಕೊಡುವ ಮಠವೆಂದು ಪ್ರಸಿದ್ಧಿಯನ್ನು ಪಡೆದಿದೆ.

ಮಾದೇಶ್ವರನ ಜನ್ಮ ವೃತ್ತಾಂತವನ್ನು ಕಾವ್ಯದ ಹಿನ್ನೆಲೆಯಲ್ಲಿ ನೋಡಿದಾಗ ಈತನ ಪಾಲಕರು ಶ್ರೀ ಚಂದ್ರಶೇಖರ ಮೂರ್ತಿ ಹಾಗೂ ಉತ್ತರಾಜಮ್ಮ ಎಂಬುವವರಾಗಿದ್ದಾರೆ. ಈ ದಂಪತಿಗಳು ಮೊದಲ ಬಾರಿಗೆ ಮಾದೇಶ್ವರನನ್ನು ಶ್ರೀಶೈಲದ ಮಲ್ಲಿಕಾರ್ಜುನಸ್ವಾಮಿಯ ಸನ್ನಿಧಿಯಲ್ಲಿ ನೋಡಿದರಂತೆ ಆ ನಂತರ ಸುತ್ತೂರು, ಕುಂತೂರು ಮಠಗಳ ಮಾರ್ಗವಾಗಿ ಪ್ರಸ್ತುತ ಈಗಿರುವ ಮಹದೇಶ್ವರನ ದೇವಾಸ್ಥಾನದ ಪ್ರದೇಶಕ್ಕೆ ಬಂದು ಅಲ್ಲೇ ಬೀಡು ಬಿಟ್ಟನಂತೆ. ಬಾಲಕ ಮಾದೇಶ್ವರನು ಬೆಟ್ಟದಲ್ಲಿ ಸಿಕ್ಕ ಹುಲಿಯನ್ನೆ ತನ್ನ ನೆಚ್ಚಿನ ವಾಹನವನ್ನಾಗಿ ಮಾಡಿಕೊಂಡು ಬೆಟ್ಟವನ್ನು ತಿರುಗುತ್ತಾ ತನ್ನನ್ನು ನಂಬಿದವರನ್ನು ಸಲುಹಿದ ಎಂಬ ವಿಚಾರ ಜನಪದ ಕಾವ್ಯದಲ್ಲಿ ವೇದ್ಯವಾಗಿದೆ.

ಪವಾಡ ಪುರುಷನಾದ ಮಹದೇಶ್ವರನು ಹರದನಹಳ್ಳಿಯ ಮಠದ ಮೂರನೆ ಮಠಾಧೀಶನಾಗಿದ್ದನೆಂದು ಕೆಲವು ಆಧಾರಗಳಿಂದ ತಿಳಿಯುತ್ತದೆ. ಈತ ಐತಿಹಾಸಿಕ ವ್ಯಕ್ತಿಯಾಗಿದ್ದು ಇವನನ್ನು ಕುರಿತು ಸಮಗ್ರ ಚರಿತೆಯನ್ನು ಹೇಳುವ ಜನಪದ ಕಾವ್ಯವು ಮೌಖಿಕ ಸಂಪ್ರದಾಯದಲ್ಲಿದೆ. ಜನಪದ ಕಾವ್ಯವನ್ನು ಹೊರತುಪಡಿಸಿದರೆ ಈತನ ಕುರಿತಾದ ಆಧಾರಗಳೆಲ್ಲವೂ ಇನ್ನೂರು–ಮುನ್ನೂರು ವರ್ಷಗಳ ಇತ್ತೀಚಿನವುಗಳಾಗಿವೆ. ಮಹದೇಶ್ವರನನ್ನು ಕುರಿತಾಗಿ ಇತರೆ ಆಧಾರಗಳಿಗಿಂತ ಜನಪದ ಕಾವ್ಯ ಹೆಚ್ಚು ಮಾಹಿತಿಯನ್ನು ಒದಗಿಸುತ್ತದೆ. ಈ ಕಾವ್ಯವನ್ನು ಮಾದೇಶ್ವರನ ಭಕ್ತರಾದ ದೇವರಗುಡ್ಡರು ಅದೆಷ್ಟೋ ವರ್ಷಗಳಿಂದ ಪರಂಪರಾನುಗತವಾಗಿ ಹಾಡಿಕೊಂಡು ಬಂದಿದ್ದಾರೆ. ಈ ದೇವರ ಗುಡ್ಡರು ಹಾಡಿರುವ ಕಾವ್ಯವನ್ನು ಗಮನಿಸಿದಾಗ ಮಹದೇಶ್ವರನಿಗೆ ಸಂಬಂಧಿಸಿದ ಅನೇಕ ಘಟನೆಗಳು ತೆರೆದುಕೊಳ್ಳುತ್ತವೆ.

ಮೊದಲು ಮಾದೇಶ್ವರನು ಬೇವಿನ ಕೊಲ್ಲಿಯಲ್ಲಿ ಕಾಣಿಸಿಕೊಂಡು ಹಾಲು ಮತಸ್ಥರಾದ ಹಲಗೆಗೌಡ ಮಹಾದೇವಮ್ಮ ದಂಪತಿಗಳಿಗೆ ಹರಸಿದನೆಂದೂ, ಮಾಲಂಗಿಯಲ್ಲಿ ಮಕ್ಕಳಾಟಿಕೆಯ ಮಾರಯ್ಯನಾಗಿ ಆ ನಂತರ ಕರ್ನಾಟಕದ ಉತ್ತರ ಭಾಗದ ಕಲ್ಯಾಣಕ್ಕೆ ಹೋಗಿ ಅಲ್ಲಿ ಶ್ರೀ ಚಂದ್ರಶೇಖರಮೂರ್ತಿ ಮತ್ತು ಉತ್ತರಾಜಮ್ಮ

ISBN – 978-93-5526-247-9

ಎಂಬುವವರಿಗೆ ಮಗನಾಗಿ ಕರ್ನಾಟಕದ ದಕ್ಷಿಣ ದಿಕ್ಕಿಗೆ ಹೊರಟು ಸುತ್ತೂರು, ಕುಂತೂರು ಮಠಗಳಲ್ಲಿ ಪವಾಡಗಳನ್ನು ಮಾಡಿ ಏಳು ಮಲೆಯಲ್ಲಿ ನೆಲೆಸಿದನು. ದೇವತೆಗಳನ್ನು ಸೆರೆಯಲ್ಲಿಟ್ಟು ಅಹಂನಿಂದ ಮೆರೆಯುತ್ತಿದ್ದ ಶ್ರವಣರಾಜನ್ನು ನರಚಮ್ಮಾವುಗೆಯ ಪ್ರಸಂಗದಲ್ಲಿ ಕೊಂದು ದೇವತೆಗಳನ್ನು ಸೆರೆಯಿಂದ ಬಿಡಿಸಿದನು. ಆಲಂಬಾಡಿಯ ಹಾಲುಮತಸ್ಥನಾದ ಜುಂಜೇಗೌಡನನ್ನು ತನ್ನ ಪವಾಡಗಳಿಂದ ಗೆದ್ದು ಭಕ್ತನನ್ನಾಗಿ ಮಾಡಿಕೊಂಡು ಆತನಿಂದ ತನಗಾಗಿ ಮಹದೇಶ್ವರ ಕ್ಷೇತ್ರದಲ್ಲಿ ಗುಡಿಯನ್ನು ಕಟ್ಟಿಸಿಕೊಂಡನು. ಪೂರ್ವದ ಬೆಟ್ಟ ಶ್ರೇಣಿಯಲ್ಲಿ ವಾಸವಾಗಿರುವ ಸೋಲಿಗ ಆದಿವಾಸಿ ಮಹಿಳೆ ಶಂಕಮ್ಮನಿಗೆ ಮಾದೇಶ್ವರ ಒಲಿಯುತ್ತಾನೆ. ಗಂಡನಾದ ನೀಲೆಗೌಡನು ಕೊಡುವ ಕಷ್ಟಗಳಿಂದ ಆಕೆಯನ್ನು ಬಿಡುಗಡೆಗೊಳಿಸಿ ಕಾರಯ್ಯ ಮತ್ತು ಬಿಲ್ಲಯ್ಯ ಎಂಬ ಮಕ್ಕಳನ್ನು ಕರುಣಿಸಿ ಅವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡನು.

ಮನೆಗೆ ಬಂದವರೆಲ್ಲರಿಗೂ ವಿಷದ ಕಜ್ಜಾಯವನ್ನು ಹಾಕಿ ಕೊಲ್ಲುತ್ತಿದ್ದ ಇಕ್ಕೇರಿ ದೇವಮ್ಮ ಎಂಬುವವಳ ಮನೆಗೆ ಮಹದೇಶ್ವರನು ಹೋಗಿ ಅವಳ ಮಗನನ್ನು ಅದೆ ವಿಷದ ಕಜ್ಜಾಯದಿಂದ ಕೊಂದು ಆಕೆಗೆ ಬುದ್ದಿಯನ್ನು ಕಲಿಸಿದನು. ತಾನೆ ಕೊಟ್ಟ ವರದಿಂದ ಶ್ರೀಮಂತಳಾದ ಬೇವಿಕಾಳಿಯು ಕೃಪಣಳಾಗಿ ದರ್ಪದಿಂದ, ಅಟ್ಟಹಾಸದಿಂದ ಮೆರೆಯತೊಡಗಿದಳು. ಆಗ ಮಹದೇಶ್ವರನು ಅವಳನ್ನು ಪರೀಕ್ಷೆಗೆ ಒಳಪಡಿಸಿ ಆಕೆಯಲ್ಲಿದ್ದ ಎಲ್ಲಾ ಸಂಪತನ್ನು ಮಣ್ಣುಪಾಲು ಮಾಡಿದನು. ಮುಂದೆ ಸರಗೂರಿನ ರಾಮವ್ವೆಯ ಮಗನಾದ ಮೂಗಪ್ಪ ಎನ್ನುವವನನ್ನು ಪವಾಡಗಳಿಂದ ಗೆದ್ದು ತನ್ನ ಎಣ್ಣೆ ಸ್ನಾನದ ಸೇವೆಗಾಗಿ ಶಿಷ್ಯನನ್ನಾಗಿ ಮಾಡಿಕೊಂಡನು. ಇದಿಷ್ಟು ದೇವರು ಗುಡ್ಡರು ಹಾಡುವ ಮಾದೇಶ್ವರ ಕಾವ್ಯದಲ್ಲಿರುವ ಕಥಾನಾಂಶಗಳು ಇವುಗಳನ್ನು ಸಾಲುಗಳೆಂದು ಕರೆಯಲಾಗಿದೆ. ಒಟ್ಟು ಏಳು ಸಾಲುಗಳಲ್ಲಿ ಕಾವ್ಯ ಕ್ರಮವಾಗಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ.

ಮಹದೇಶ್ವರ ಕಾವ್ಯವನ್ನು ಚಾರಿತ್ರಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ನೋಡಿದಾಗ ಪ್ರಮುಖವಾಗಿ ಮೂರು ಹಂತಗಳನ್ನು ಗುರುತಿಸಬಹುದು. ಮೊದಲನೆಯದಾಗಿ ಆದಿವಾಸಿ ಬುಡಕಟ್ಟು ಸಮುದಾಯವಾದ ಸೋಲಿಗರ ಪ್ರಾಚೀನ ಜೀವನ ಪದ್ಧತಿ, ಅವರ ನಂಬಿಕೆಗಳು ಮತ್ತು ಮೌಲ್ಯಗಳು ಅನಾವರಣಗೊಂಡಿದೆ. ಹಾಗೆಯೆ ಮುಂದಿನ ದಿನಗಳಲ್ಲಿ ತಾವೆ ನಂಬಿದ ನಂಬಿಕೆಗಳಲ್ಲಿ ಉಂಟಾಗುವ ಸಂಘರ್ಷವನ್ನು ಗಮನಿಸಿದಾಗ ಈ ಸಂದರ್ಭದಲ್ಲಿ ಮಾನವನ ಜೀವನದ ಆರ್ಥಿಕತೆಯ ಚಿಂತನೆಯ ಹಂತವೆಂದು ತಿಳಿಯಬಹುದು. ಜೊತೆಗೆ ಇದನ್ನು ಆಹಾರ ಸಂಗ್ರಹಣೆಯ ಬಗೆಗಿನ ಸಾಂಸ್ಕೃತಿಕ ಚರಿತ್ರೆಯೂ ಎನ್ನಬಹುದಾಗಿದೆ. ಇಲ್ಲಿ ಸ್ತ್ರೀ ಸ್ವಾತಂತ್ರ್ಯದ ವಿಚಾರವು ಮುನ್ನೆಲೆಗೆ ಬರುತ್ತದೆ. ಮಾತೃ ವ್ಯವಸ್ಥೆಯ ಪ್ರತಿನಿಧಿಯಾದ ಸೋಲಿಗರ ಸಂಕಮ್ಮನ ಗೆಲುವು ಪುರುಷ ವ್ಯವಸ್ಥೆಯ ಪ್ರತಿನಿಧಿಯಾದ ನೀಲಯ್ಯನ ಸೋಲು ಆ ಕಾಲದ ಸಾಮಾಜಿಕ ವ್ಯವಸ್ಥೆಯ ಸಂಘರ್ಷಗಳನ್ನು ಕಟ್ಟಿಕೊಡುತ್ತದೆ.

ಎರಡನೆಯದಾಗಿ ಮಾನವ ಒಂದೆಡೆ ನೆಲೆ ನಿಂತು ಆಹಾರ ಸಂಗ್ರಹಣೆಯ ಕಾಲ ಮುಗಿದು ತಾನು ಸಂಪಾದಿಸಿದ ವಸ್ತುಗಳ ಮೇಲಿನ ಒಡೆತನದ ಪ್ರಶ್ನೆ ಉದ್ಭವವಾಗುತ್ತದೆ. ಇಲ್ಲಿ ಪಶು ಸಂಗೋಪನೆ, ಕೃಷಿ ಹಾಗೂ ಭೂಮಿಯ ಮೇಲಿನ ಹಕ್ಕಿನ ಕುರಿತಾದ ಆರ್ಥಿಕ ಹಂತವು ಆರಂಭವಾಗುತ್ತದೆ. ಒಂದೆಡೆ ನೆಲೆ ನಿಂತು ಕೃಷಿಯ ಕಡೆ ಮುಖಮಾಡಿದ ಕುರುಬರು, ಅವರ ಒಡತಿಯಾದ ಬೇವಿನ ಹಟ್ಟಿ ಕಾಳಮ್ಮ ಸ್ವಾಭಿಮಾನದ ಸಂಕೇತವಾಗಿದ್ದಳು. ಆದರೆ ಸ್ವಾಭಿಮಾನಿಯ ದರ್ಪವನ್ನು ಒಪ್ಪದ ಮಾದಪ್ಪ ಶಿಕ್ಷೆಯ ರೂಪದಲ್ಲಿ ಆಕೆಯ ಎಲ್ಲಾ ಸಂಪತ್ತನ್ನು ನಾಶಮಾಡುವನು. ಮೇಲ್ನೋಟಕ್ಕೆ ಬೇವಿನ ಹಟ್ಟಿ ಕಾಳಮ್ಮ ಸೋತಳಾದರೂ ಪರೋಕ್ಷ ಗೆಲುವು ಅವಳದೆ ಆಗಿದೆ. ಇಲ್ಲಿ ಮಹದೇಶ್ವರ ಮತ್ತು ಬೇವಿನ ಹಟ್ಟಿ ಕಾಳಿಯ ನಡುವಿನ ಸಂಘರ್ಷ ಭೂಮಿಯ ಮೇಲಿನ ಒಡೆತನದ ಕುರಿತಾಗಿದೆ ಎಂಬುದನ್ನು ಗಮನಿಸಬಹುದು.

ಸಾಮ್ರಜ್ಯ ಸ್ಥಾಪನೆಯ ಮಹತ್ವಾಕಾಂಕ್ಷೆ ಮೂರನೆಯದಾಗಿದೆ, ಮಾನವನ ಆಹಾರ ಸಂಗ್ರಹಣೆ, ಪಶು ಸಂಗೋಪನೆ ಮತ್ತು ಕೃಷಿಗೆ ಸಂಬಂಧಿಸಿದ ಭೂಮಿಯ ಮೇಲಿನ ಹಕ್ಕಿನ ನಂತರ ಮುಂದುವರೆದ ಭಾಗವೆ ಸಾಮ್ರಜ್ಯ ಶಾಹಿ ಮನೋಭಾವದ ತವಕವಾಗಿದೆ. ಇದರ ಪ್ರತೀಕವಾಗಿ ಕಾವ್ಯದಲ್ಲಿ ಶ್ರವಣದೊರೆ ಸಾಲು ಕಾಣಿಸಿಕೊಳ್ಳುತ್ತದೆ. ಇಲ್ಲಿ ಶ್ರವಣದೊರೆ ದೇವತೆಗಳನ್ನೆಲ್ಲಾ ಸೆರೆ ಹಿಡಿದುತನ್ನ ಸಾಮ್ರಾಜ್ಯಶಾಹಿ ಮನಸ್ಥಿತಿಯಿಂದ ಹಿಂಸೆಯನ್ನು ಕೊಡುತ್ತಿರುತ್ತಾನೆ. ಆತನ ಸೊಕ್ಕಿನ ಅಧಿಕಾರವನ್ನು ಮಹದೇಶ್ವರ ಶಿಕ್ಷೆ ಕೊಡುವ ಮೂಲಕ ಕೊನೆಗಾಣಿಸುತ್ತಾನೆ.

ISBN – 978-93-5526-247-9

ಈ ಹಿನ್ನೆಲೆಯಲ್ಲಿ ಸಮಗ್ರ ಕಾವ್ಯವನ್ನು ಅವಲೋಕನ ಮಾಡಿದಾಗ ಸಂಕಮ್ಮನ ಸಾಲು ಒಂದು ಪೋಡಿನ ಕಥೆಯಾಗಿ, ಬೇವಿನ ಹಟ್ಟಿ ಕಾಳಮ್ಮನ ಸಾಲು ಗ್ರಾಮದ ಕಥೆಯಾಗಿ ಮತ್ತು ಶ್ರವಣದೊರೆಯ ಸಾಲು ಸಾಮ್ರಾಜ್ಯದ ಕಥೆಯಾಗಿ ಕಂಡು ಬರುತ್ತದೆ. ಐತಿಹಾಸಿಕ ದೃಷ್ಟಿಯಿಂದ ನೋಡಿದಾಗ ಈ ಕತೆಗಳು ಬೇರೆ ಬೇರೆ ಕಾಲಮಾನದ ಕಥೆಗಳಾಗಿವೆ. ಪ್ರತಿ ಹಂತದಲ್ಲೂ ಮಾದಪ್ಪನನ್ನು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ನಾಯಕನನ್ನಾಗಿ ಬೆಸೆಯಲಾಗಿದೆ. ಕಾವ್ಯದ ಉದ್ದಕ್ಕೂ ಆತ ಆಧ್ಯಾತ್ಮಿಕ ನಾಯಕನಾಗಿರುವುದಂತೂ ಸತ್ಯ. ಹಾಗೆಯೆ ಕಾವ್ಯವನ್ನು ಸೂಕ್ಮವಾಗಿ ಗಮನಿಸಿದಾಗ ಅನೇಕ ಸನ್ನಿವೇಶಗಳು ಐತಿಹಾಸಿಕ ಘಟನೆಗಳಾಗಿ ಕಾಣುವುದರೊಂದಿಗೆ ಪ್ರಾಚೀನ ಜನ ಜೀವನದ ಚರಿತ್ರೆಯಾಗಿ ಇಡಿ ಕಾವ್ಯ ಕಾಣಿಸುತ್ತದೆ.

***

# 13. ಅಧಿಕಾರಶಾಹಿ ವ್ಯವಸ್ಥೆಗೆ ಸಂಕಮ್ಮನ ಸವಾಲು

ಚೇತನಾ ಹೆಗಡೆ

ಜನಪದ ಸಾಹಿತ್ಯ ಮಾನವ ಸಂಸ್ಕೃತಿಯ ಹೆಜ್ಜೆ ಗುರುತುಗಳನ್ನು ಶೋಧಿಸುವಲ್ಲಿ ಬಹುಮುಖ್ಯ ಆಕರವಾಗಿದೆ. ಈ ಸಾಹಿತ್ಯ ನೆಲದ ಗುಣವನ್ನು ಹೀರಿಕೊಂಡು ಜನ ಸಂಸ್ಕೃತಿಯ ಪ್ರತೀಕವಾಗಿ ಅನನ್ಯ ಲೋಕ ಸೃಷ್ಟಿಯನ್ನು ಬಿಂಬಿಸುತ್ತದೆ. ಕಾಲಗರ್ಭದಲ್ಲಿ ಹುದುಗಿ ಹೋದ ಹೆಣ್ಣಿನ ಅಗೋಚರ ಚರಿತ್ರೆಯನ್ನು ದಾಖಲಿಸುತ್ತದೆ. ಮೌಖಿಕ ಪರಂಪರೆಯಾದ ಜಾನಪದವನ್ನು ಗಮನಿಸಿದಾಗ ಸ್ತ್ರೀ ಶೀಲ, ಪಾತಿವ್ರತ್ಯಗಳ ಸಂರಕ್ಷಕಿ, ಮಾತೃತ್ವ, ಸತೀತ್ವ, ಗೃಹಿಣಿತ್ವ, ಬಹುಪತ್ನಿತ್ವ, ವಿನಯ, ತ್ಯಾಗ, ವಿಧೇಯತೆ ಮುಂತಾದ ಸ್ಥಾಪಿತ ಮಾದರಿತ್ವದ ಬಲೆಗಳಲ್ಲಿ ಸಿಲುಕಿ ನರಳಿದರೂ ಅವನ್ನು ಒಪ್ಪಿತ ಸ್ತ್ರೀ ಸಮುದಾಯ ಒಂದೆಡೆಯಾದರೆ, ಎಲ್ಲ ಒತ್ತಡಗಳನ್ನು ಮೀರಿ ತನ್ನ ಅಸ್ತಿತ್ವಕ್ಕಾಗಿ ಹೋರಾಡಿದ, ವ್ಯವಸ್ಥೆ ನಿರ್ದೇಶಿಸಿದ ಮೌಲ್ಯದ ಬೇಲಿಯನ್ನು ಮೀರಿದ, ಸಮಾಜದ ನಂಬಿಕೆಯನ್ನು ಹುಸಿಗೊಳಿಸಿದ ಸ್ತ್ರೀ ಸಮುದಾಯ ಇನ್ನೊಂದೆಡೆ ಮುಖಾಮುಖಿಯಾಗುತ್ತದೆ. ಎರಡೂ ವಿಭಿನ್ನ ದೃಷ್ಟಿಕೋನಗಳು ಮೌಖಿಕ ಪರಂಪರೆಯಲ್ಲಿ ಹಾಸುಹೊಕ್ಕಾಗಿವೆ. ಪಿತೃ ಪ್ರಧಾನ ವ್ಯವಸ್ಥೆಯ ನಡೆಗಳು ತನ್ನ ಅಸ್ತಿತ್ವವನ್ನು ಹತ್ತಿಕ್ಕುತ್ತಿದೆ ಎಂಬುದು ಅರಿವಾದಾಗ ಅದನ್ನು ವಿರೋಧಿಸುವ ಹಲವು ಸ್ತ್ರೀ ಮಾದರಿಗಳನ್ನು ನೋಡಬಹುದಾಗಿದೆ. ಇಂತಹ ಸ್ತ್ರೀ ಮಾದರಿಗಳು ಸಮಾಜ, ಸಂಸ್ಕೃತಿ, ಪರಂಪರೆಗಳೊಂದಿಗೆ ಹಾಸುಹೊಕ್ಕಾಗಿ ಬೆರೆತುಹೋಗಿರುವ ಲಿಂಗ ಪೂರ್ವಗ್ರಹವನ್ನು ಒಡೆದು ಹೊಸ ಬದುಕನ್ನು ಕಟ್ಟುವ ನೆಲೆಯಲ್ಲಿ, ಹೆಣ್ಣಿನ ಅಸ್ಮಿತೆಯನ್ನು ಎತ್ತಿಹಿಡಿಯುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

"ಬಾಳೆ ಕಡಿದಾರೆ ತೋಟ ಹಾಳಾಗಬಲ್ಲಾದೆ,
ಬಾಳಿಸಲಾರದೆ ಮಡದೀಯ ಬಿಟ್ಟಾರೆ,
ಬಾಳೆಹಣ್ಣೇನೆ ಕೊಳಿಯಾಕೆ"[1]

ಎಂಬುದು ಜನಪದ ಹೆಣ್ಣು ಮಗಳು ವ್ಯವಸ್ಥೆಗೆ ನೀಡುತ್ತಿರುವುದು ಸ್ವತಂತ್ರವಾದ, ದಿಟ್ಟತನದ ಮನೋಭಾವನೆಯ ಅಭಿವ್ಯಕ್ತಿ ಮಾತ್ರವಲ್ಲದೆ ಸವಾಲು ಕೂಡ ಹೌದು. ಇಲ್ಲಿನ ಸ್ತ್ರೀ ಕ್ರಿಯಾಶೀಲ ಶಕ್ತಿಯಾಗಿ ತನ್ನ ಬದುಕಿನ ನಿರ್ಧಾರವನ್ನು ತೆಗೆದುಕೊಳ್ಳುವ ತನ್ನ ಅಸ್ಮಿತೆಯನ್ನು ಸ್ಥಾಪಿಸುವ ಶಕ್ತಿ ಹೊಂದಿದ್ದಾಳೆ. ಇಂತಹ ಒಂದು ಸ್ವಾಯತ್ತ ಅಭಿವ್ಯಕ್ತಿಗೆ ಸಂಕಮ್ಮ ಉದಾಹರಣೆಯಾಗುತ್ತಾಳೆ. ಸಂಕಮ್ಮ ಯಾಜಮಾನ್ಯತೆಯ ಒಳಗಿನ ಮೂಕ ಮಾದರಿಯಲ್ಲ ಅದನ್ನು ಮೀರಿ ನಿಂತು ಅರಳಿದ ಹೆಣ್ತನವಾಗಿದ್ದಾಳೆ. ಸಂಸ್ಕೃತಿಯ ಆಚೆಗಿನ ಸ್ತ್ರೀ ಶಕ್ತಿಯ ಭಿನ್ನ ಧ್ವನಿಯನ್ನು ಸಂಕಮ್ಮನ ಬದುಕಲ್ಲಿ ಕಾಣಲು ಸಾಧ್ಯವಿದೆ.

ಮಲೆಯ ಮಾದೇಶ್ವರ ಕಾವ್ಯದಲ್ಲಿ 'ಸಂಕಮ್ಮ' ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ, ಸ್ವಾಭಿಮಾನವನ್ನು ಕಾಯ್ದುಕೊಳ್ಳುವ ಬಗೆ ವಿಶಿಷ್ಟವಾದುದು. ಸಮಾಜದ ದೃಷ್ಟಿಯಲ್ಲಿ ಬಂಜೆಯ ಪಟ್ಟಕ್ಕೆ ಒಳಗಾಗಿ ಅನಾದರಕ್ಕೊಳಗಾಗುವ ಸಂಕಮ್ಮ ಗಂಡ ನೀಲಯ್ಯನ ಪ್ರೀತಿಯ ಆಸರೆಯ ನಂಬಿಕೆಯಲ್ಲಿದ್ದವಳು. ಸೋಲಿಗರಲ್ಲಿ ವರ್ಷಕ್ಕೊಂದು ಸಾರಿ ಹೆಜ್ಜೇನು ಮಲೆಗೆ, ಹೆಜ್ಜೇನು ಬೇಟೆಗೆ ಹೋಗಬೇಕಾದದ್ದು ಕುಲದ ಆಚಾರ. ಮನೆಗೊಂದಾಳು ಬೇಟೆಗೆ ಹೋಗದಿದ್ದರೆ ಅಂಥವರಿಗೆ ಬೆಂಕಿ – ನೀರು ಕೊಡದೆ ಕುಲದಿಂದ ಹೊರಗೆ ಹಾಕುತ್ತಾರೆ. ಕುಲದ ನಿರ್ಬಂಧಗಳನ್ನು ಮೀರಲಾಗದ ಸ್ಥಿತಿ ನೀಲಯ್ಯನದು. ಅವಿಭಕ್ತ ಕುಟುಂಬದಿಂದ ಬೇರೆ ಬಂದ ನೀಲಯ್ಯ ಸುಂದರಿ ಪತ್ನಿ ಒಬ್ಬಳನ್ನೇ ಬಿಟ್ಟು ಒಂಬತ್ತು ತಿಂಗಳು ಬೇಟೆಗೆ ಹೋಗಲು ಅನುಮಾನಿಸುತ್ತಾನೆ.

ತನ್ನ ಅನುಪಸ್ಥಿತಿಯಲ್ಲಿ ಅವಳು ಬೇರೆಯವರೊಂದಿಗೆ ಅನೈತಿಕ ಸಂಬಂಧಕ್ಕೆ ಕೈಚಾಚಿದರೆ ಎಂಬ ಭಾವವನ್ನು ನೀಲಯ್ಯ ಪ್ರಕಟಿಸಿದಾಗ ದಾಂಪತ್ಯದ ನಂಬಿಕೆಯ ತಳಹದಿ ಬೀಳುವ ಸೂಚನೆ ಸಂಕಮ್ಮಳನ್ನು ದಿಗ್ಭ್ರಮೆಗೊಳಿಸುತ್ತದೆ. ಪ್ರೀತಿಯ, ನಂಬಿಕೆಯ ಬೇರುಗಳು ಸಡಿಲಗೊಂಡು ಅನುಮಾನ ಎದ್ದು ಕುಣಿದಾಗ, ಹಲವು ವರ್ಷಗಳ ದಾಂಪತ್ಯ ಜೀವನದಲ್ಲೂ ಇಂತಹ ಮಿಥ್ಯಾರೋಪ ಎದುರಿಸುವ ಪ್ರಸಂಗ ಬರುತ್ತದೆ. ಪತ್ನಿ ಭಾಷೆ ನೀಡಿದರೆ ಅವಳನ್ನು ನಂಬಲು ನೀಲಯ್ಯ ಸಿದ್ಧನಾಗಿದ್ದಾನೆ. ಯಾವ ತಪ್ಪನ್ನೂ ಮಾಡದೆ ತನ್ನನ್ನು ತಾನು ನಿರೂಪಿಸಿಕೊಳ್ಳುವ ಅಗತ್ಯವಿಲ್ಲವೆಂಬುದು

ISBN – 978-93-5526-247-9

ಸಂಕಮ್ಮನ ತರ್ಕ. ಪರಸ್ಪರವಾದ ವಿವಾದಲ್ಲಿ ನಿರತರಾದ ದಂಪತಿಗಳು ತಮ್ಮ ತಮ್ಮ ನಿಲುವಿಗೆ ಬದ್ಧರಾಗುತ್ತಾರೆ. ಇದು ಇಬ್ಬರ ಸ್ವಾಭಿಮಾನವನ್ನು ಕೆರಳಿಸುವ ಪ್ರಶ್ನೆಯಾಗುತ್ತದೆ.

ಕುಲದೋರ್ನೆಲ್ಲಕೂಡ್ಸಯ್ಯ
ನ್ಯಾಯಾನಾದ್ರೆ ಮಾಡ್ಸಯ್ಯ
ತೆಪ್ಪೊನೆಪ್ಪತೋರ್ಸಯ್ಯ
ನೀನು ಕಟ್ಟಿದತೆರುವತಕ್ಕಂಡಲ್ಲೆ
ಬುಟ್ಟುಬುಡಯ್ಯ ಮಡದೀಯ[2]

ಎಂದು ಸಂಕಮ್ಮ ತನ್ನನ್ನು ವಿನಾಕಾರಣ ಅನುಮಾನಿಸುವ ಗಂಡನಿಗೆ ಸವಾಲು ಹಾಕುತ್ತಾಳೆ. ಒಂಟಿ ಹೆಣ್ಣಿನ ಮೇಲೆ ತನ್ನ ಅಣ್ಣಂದಿರು, ಬಳೆಗಾರ ಸೆಟ್ಟಿ, ಮುತ್ತಿನ ಸೆಟ್ಟಿ, ಆಟನಕಾರ, ಮಾಟನಕಾರ, ಬುಡಬುಡಿಕೆಯವನು ಮುಂತಾದವರು ಕಣ್ಣು ಹಾಕಬಹುದು. ಅವಳನ್ನು ಮರುಳುಗೊಳಿಸುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತಪಡಿಸಿದ ನೀಲಯ್ಯ, ಅತ್ತೀಯ ಹೂವು, ಬಿಳಿ ಕಾಗೆ, ಮೀನ ಹೆಜ್ಜೆಯಂತಹ ಅಸಾಧ್ಯವಾದ ಸಂಗತಿಗಳನ್ನಾದರೂ ಕಾಣಲು ಸಾಧ್ಯವಿದೆ. ಯಾವುದೇ ಕಾರಣಕ್ಕೂ ಹೆಣ್ಣಿನ ಮನಸ್ಸನ್ನು ನಂಬಲು ಸಾಧ್ಯವಿಲ್ಲ ಎಂದು ಪ್ರತಿಕ್ರಿಯೆ ನೀಡುತ್ತಾನೆ. ಸಂತಾನದ ತೀವ್ರ ಹಂಬಲದಲ್ಲಿರುವ ಸಂಕಮ್ಮ ಫಲಾಪೇಕ್ಷೆಯ ಆಸೆಗೆ ಬೇರೆಯವರಿಗೆ ಒಲಿಯಬಹುದೆಂಬ ಅನುಮಾನ ನೀಲಯ್ಯನಿಗಿದೆ. ಪತಿಯ ಶಂಕೆಗೆ ರೋಸಿ ತನ್ನನ್ನು ಬೇಟೆಗೆ ಕರೆದೊಯ್ಯಲು ಸಂಕಮ್ಮ ಒತ್ತಾಯಿಸುತ್ತಾಳೆ.

ನನ್ನ ಬಂಜೆ ಕೈನ ಭಾಷೆಕೊಟ್ಟುದ್ದೇಆದ್ರೆ
ಗಂಡಂಗೂ ಕೆಟ್ಟುದಾಯ್ತದೆ ಯಜಮಾನ
ಅಂಥೆ ಅನುಮಾನ ನಿಮಗೆ ಬಂದುದೇ ಆದ್ರೆ
ನನ್ನನು ನಿಮ್ಮಜೊತೇಲಿ ಹೆಜ್ಜೇನು ಮಲೆಗೆ
ಹೆಜ್ಜೇನು ಬ್ಯಾಟೆಗೆ ಕರೆಕೊಂಡ್ಹೋಗಿ[3]

ಮನೆಗೊಂದಾಳಂತೆ ಪುರುಷರು ಬೇಟೆಗೆ ಹೊರಟಾಗ ಪತ್ನಿಯನ್ನು ಕರೆದೊಯ್ಯಲು ನೀಲಯ್ಯ ಸಮ್ಮತಿಸಲಾರ. ತನ್ನ ಅನುಮಾನವನ್ನು ಅನ್ಯರ ಮುಂದೆ ತೋರ್ಪಡಿಸಿ ಅವಮಾನ, ಅಪಹಾಸ್ಯ ಅಥವಾ ಅನುಕಂಪಕ್ಕೆ ಒಳಗಾಗಲಾರ. ಬಲಗೈ ಮುಟ್ಟಿ ಭಾಷೆ ನೀಡಿದರೆ ಮಾತ್ರ ನಂಬುವೆ ಎಂದು ಪತಿ ಅಭಿವ್ಯಕ್ತಿಸಿದಾಗ, ಪ್ರೇಮ, ನಂಬಿಕೆಗಳು ಅರ್ಥರಹಿತ ಎನ್ನಿಸಿ ತನ್ನ ಮನಃಸಾಕ್ಷಿಯನ್ನು ಮೀರಲು ಸಂಕಮ್ಮ ಸಿದ್ಧಳಾಗುವುದಿಲ್ಲ. ಆಣೆ, ಭಾಷೆಗಳ ಮೂಲಕ ತನ್ನ ಸತ್ಯ ಪಾತಿವ್ರತ್ಯವನ್ನು ಪರೀಕ್ಷೆಗೆ ಒಳಪಡಿಸುವ ರೀತಿಯನ್ನು ತನ್ನ ಗೌರವಕ್ಕೆ ಕುಂದು ಎಂಬ ಅರಿವಿನ ಜೊತೆಯಲ್ಲಿ ಆಕೆ ನಿರಾಕರಿಸುತ್ತಾಳೆ.

"ಅಯ್ಯೋ ಯಜಮಾನ ಯಾರೂ ಕಟ್ಟಬಾರದತೆರ ನೀವ್‌ಕಟ್ಟಿದೀರಾ?
ಯಾರು ಮುಟ್ಟಸ್ ಬಾರದ ಮುಟ್ಟುವಳಿ ಮುಟ್ಟಿಸಿದಿರ್ಯಾ
ನೀನು ಕಟ್ಟಿದತೆರವತಕ್ಕಯ್ಯ, ನನ್ನ ಹಟ್ಟಿನಿಂದಾಚಿಗೆ ಕಳುವಯ್ಯ
ನಿನ್ನದಾರ್ಯ ನೀನು ನೋಡಯ್ಯ
ನನ್ನದಾರ್ಯ ನಾನು ನೋಡ್ತೀನಿ
ನಾನು ಬಲ್ಗಯ್ ಮುಟ್ಟಿ ಭಾಷೆಕೊಡುವಂತ ಮಗಳಲ್ಲ
ಹೋಗೋ ಯಜಮಾನ"[4]

ಎಂದು ನಿರಾಕರಿಸುವಲ್ಲಿ ತನ್ನನ್ನು ಅಪನಂಬಿಕೆಯ ದೃಷ್ಟಿಯಲ್ಲಿ ಬೆತ್ತಲುಗೊಳಿಸುತ್ತಿರುವ ಪುರುಷನ ಅಧಿಕಾರದ ವಿರುದ್ಧ ಅವಳ ಪ್ರತಿಭಟನೆ ಇದೆ. ತನ್ನ ಪ್ರೇಮ, ನಿಷ್ಠೆ, ಸಂವೇದನೆಗಳು ಭಾಷೆಯ ಅಡಿಯಲ್ಲಿ ನಿಂತಿರುವುದನ್ನು ಗಮನಿಸಿದ ಸಂಕಮ್ಮನ ಸ್ವಪ್ರಜ್ಞೆ ಜಾಗೃತವಾಗಿ ಅಂಜಿಕೆ, ಅಳುಕು ಮಾಯವಾಗಿ ಬಂದಿದ್ದನ್ನು ಎದುರಿಸಬಲ್ಲೆ ಎಂಬ

ನಿಲುವು ಮೂಡುತ್ತದೆ. ತನ್ನ ಅಭಿಮಾನವನ್ನು ಒತ್ತೆಯಿಟ್ಟು ಆತನ ಪರೀಕ್ಷೆಗೆ ತನ್ನನ್ನು ಒಡ್ಡಿಕೊಳ್ಳಲು ಸಿದ್ಧಳಾಗದಿರುವ ಪರಿ ಕಂಡುಬಂದಿದೆ. ಸಂಕಮ್ಮ ತನ್ನ ಮಾತನ್ನು ಮೀರಿ ದಿಟ್ಟವಾಗಿ ಉತ್ತರಿಸುವುದು ನೀಲಯ್ಯನ ಅಹಂಗೆ ಪೆಟ್ಟು ಬೀಳುತ್ತದೆ. ಹೊರ ಜಗತ್ತಿನ ಸಂಪರ್ಕದಿಂದ ಆಕೆಯನ್ನು ಪ್ರತ್ಯೇಕವಾಗಿರಿಸಿ, ಹಿಂಸಿಸಿ, ನಿರ್ಬಂಧಗಳನ್ನು ಹೇರಿದ್ದರೂ ಅದೆಲ್ಲದರ ನೆಲೆಯಿಂದಾಚೆಗೆ ಮಕ್ಕಳಿಲ್ಲದ ಸಂಕಮ್ಮ ಮಾದೇಶ್ವರನಿಂದ ಆ ಕೊರತೆಯನ್ನು ತುಂಬಿಕೊಳ್ಳುತ್ತಾಳೆ. ಪುರುಷಾಧಿಕಾರವನ್ನು ನಿರಾಕರಿಸುವ ಸಂಕಮ್ಮ ಮಾದೇಶ್ವರನಿಂದ ಮಗುವನ್ನು ಪಡೆಯುವ ಕ್ರಿಯೆ ಸಾಂಕೇತಿಕವಾಗಿದ್ದು, ಅದು ಹಾದರವೆನಿಸುವುದಿಲ್ಲ. ನೀಲಯ್ಯ ಒಡ್ಡುವ ದಿವ್ಯಗಳನ್ನು ಎದುರಿಸಿ, ನೀಲಯ್ಯನ ಮನ:ಪರಿವರ್ತಿಸಿ ಅವನೊಂದಿಗೆ ಬದುಕನ್ನು ಮುಂದುವರಿಸುತ್ತಾಳೆ. ಈ ಮೂಲಕ ತನ್ನ ಸಂಸಾರವನ್ನು ಉಳಿಸಿಕೊಂಡು ಅಲ್ಲಿ ತನ್ನ ಅಸ್ಮಿತೆಯನ್ನು ಛಾಪಿಸುತ್ತಾಳೆ.

ಪತ್ನಿಯನ್ನು ಆಸ್ತಿಯೆಂಬಂತೆ ಪರಿಗಣಿಸಿ ತನ್ನ ಏಕಸ್ವಾಮ್ಯತೆಯನ್ನು ಸಾಧಿಸಲು ಹೊರಡುವ ಪುರುಷನ ಮನ:ಸ್ಥಿತಿಗೆ ವಿರುದ್ಧವಾದ ಚಲನೆಯನ್ನು ಸಂಕಮ್ಮನ ವರ್ತನೆಯಲ್ಲಿ ಗಮನಿಸಬಹುದಾಗಿದೆ. "ಇಲ್ಲಿ ಹೆಣ್ಣು ಮುಕ್ತತೆಯನ್ನು ಬಯಸಿದರೆ ಗಂಡು ಕಟ್ಟುಪಾಡಿನ ಬೇಲಿಯನ್ನು ಭದ್ರಪಡಿಸತೊಡಗುತ್ತಾನೆ. ಇದು ಅವಸ್ಥಾಂತರದಲ್ಲಿ ನಿರ್ಮಾಣಗೊಂಡ ಸಮಾಜವೊಂದರ ಬೇಕು ಬೇಡಗಳ ಸಂಘರ್ಷ, ಆಸೆ ಅದು ಮುವಿಕೆಗಳ ಸಂಘರ್ಷ ಮತ್ತು ಮುಕ್ತತೆ ಹಾಗೂ ಪಾತಿವ್ರತ್ಯವೆಂಬ ಮೌಲ್ಯಗಳ ನಡುವಿನ ಸಂಘರ್ಷ"[5]. ಪಾತಿವ್ರತ್ಯದ ಪರಿಕಲ್ಪನೆಯೆಂಬ ಚೌಕಟ್ಟನ್ನು ಮೀರಿ ಮಕ್ಕಳನ್ನು ಪಡೆಯುವ ಸಂಕಮ್ಮನ ನಿಲುವು ಸಮಾಜ ನಿರ್ಮಿತ ಬಂಜೆತನದ ಕೂಪದಿಂದ ಮುಕ್ತಳಾಗುವ ಹಾತೊರಿಕೆಯ ಜೊತೆಯಲ್ಲಿ ನೀಲಯ್ಯನ ನಿರ್ಬಂಧಗಳಿಗೆ, ಹಿಂಸೆ, ದೌರ್ಬಲ್ಯಗಳಿಗೆ ಅವಳು ನೀಡುವ ಪ್ರತಿಭಟನೆಯ ಧೋರಣೆಯೂ ಹೌದು.

ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಕಂಠಸ್ಥ ಮಾಧ್ಯಮ ತನ್ನಲ್ಲಿನ ಸತ್ವತೆಯಿಂದ ಇಂದಿಗೂ ಪ್ರಸ್ತುತವಾದ ಸಾಹಿತ್ಯ. ಅಂತರಂಗದ ಭಾವಗಳು ಪ್ರಕಟವಾಗಿ ವಿಭಿನ್ನ ಜನಾಂಗಗಳ ಸಂಸ್ಕೃತಿ, ಸಾಮಾಜಿಕ ರೀತಿ, ನೀತಿ, ಜೀವನ ಶೈಲಿ, ಬದುಕಿನ ಒಳ ನೋಟಗಳನ್ನು ಜನಪದ ಸಾಹಿತ್ಯ ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹೆಣ್ಣಿನ ಅಧೀನತೆ, ತಲ್ಲಣಗಳು, ಅವಳ ಒಳತೋಟಿ ಜನಪದ ಸಾಹಿತ್ಯದ ಒಂದು ಆಯಾಮವಾದರೆ ತನ್ನ ಮೇಲಿನ ನಿರ್ಬಂಧಗಳನ್ನು ಮೀರಿ ಸಾಂಪ್ರದಾಯಿಕ ಸತೀತ್ವದ ಮಾದರಿಗೆ ಮುಖಾಮುಖಿಯಾಗುವುದು ಇನ್ನೊಂದು ಆಯಾಮವಾಗುತ್ತದೆ.

ಸಮಾಜೋ-ಸಂಸ್ಕೃತಿ ಹೇರಿದ ಕಟ್ಟು ಪಾಡುಗಳ ಅಭೇದ್ಯ ಕೋಟೆಯಲ್ಲಿ ಬಿರುಕನ್ನು ಮೂಡಿಸಲು ಸಮರ್ಥರಾದ ಸ್ತ್ರೀ ಮಾದರಿಗಳು ಗಣನೀಯವಾಗಿದೆ. ಹೆಣ್ಣಿನ ಧ್ವನಿಯ ದಾಖಲಾತಿ ಇಲ್ಲದ ಶಿಷ್ಟ ಸಾಹಿತ್ಯಕ್ಕೆ ಜಾನಪದ ಸಾಹಿತ್ಯದ ಮಹಿಳಾ ದಾಖಲಾತಿ ಪ್ರತ್ಯುತ್ತರವಾಗಿದೆ. ಪ್ರಧಾನ ವ್ಯವಸ್ಥೆ ಹೇರಿರುವ ಮೌಲ್ಯಗಳಿಂದ ಜರ್ಜರತೆಗೊಳಗಾದ ಸ್ತ್ರೀ, ವ್ಯವಸ್ಥೆಯ ಒಳಗಿದ್ದೇ ಪ್ರತಿರೋಧದ ಶಕ್ತಿಯನ್ನು ಮೈಗೂಡಿಸಿಕೊಂಡಿದ್ದಾಳೆ. ಮೌಖಿಕ ಪರಂಪರೆಯ ಸ್ತ್ರೀ ಮಾದರಿಗಳ ಪ್ರಕಟಿಸುವ ಸ್ಥೈರ್ಯದಲ್ಲಿ ಮಾತೃ ಪ್ರಧಾನ ಸಂಸ್ಕೃತಿಯ ಪಳೆಯುಳಿಕೆಯನ್ನು ಗುರುತಿಸಬಹುದು. ಇಲ್ಲಿನ ಸ್ತ್ರೀ ಮಾದರಿಗಳು ಸಿದ್ಧ ಮಾದರಿಯ ಗ್ರಹೀತಗಳನ್ನು ಮುರಿದು ತಮ್ಮ ಮಾರ್ಗಗಳನ್ನು ಸೃಷ್ಟಿಸಿಕೊಳ್ಳಬಲ್ಲವು.

**ಅಡಿ ಟಿಪ್ಪಣಿಗಳು :**


1. ವಿಜಯಾದಬ್ಬೆ, 1989, ಮಹಿಳೆ, ಸಾಹಿತ್ಯ, ಸಮಾಜ, ರಚನಾ ಪ್ರಕಾಶನ, ಮೈಸೂರು, ಪು 3.
2. ಚಕ್ಕೆರೆ ಶಿವಶಂಕರ್,2008, ಜಾನಪದ ತಿಳಿವಳಿಕೆ, ಸಾಗರ ಪ್ರಕಾಶನ, ಬೆಂಗಳೂರು, ಪು 383
3. ಚಕ್ಕೆರೆ ಶಿವಶಂಕರ್,2008, ಜಾನಪದ ತಿಳಿವಳಿಕೆ, ಸಾಗರ ಪ್ರಕಾಶನ, ಬೆಂಗಳೂರು, ಪು 384
4. ಹಿ.ಚಿ.ಬೋರಲಿಂಗಯ್ಯ, 2018, ಕರ್ನಾಟಕ ಜನಪದ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ,ಪು 68.
5. ಹಿ.ಚಿ.ಬೋರಲಿಂಗಯ್ಯ, 2018, ಕರ್ನಾಟಕ ಜನಪದ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ,ಪು 69.

**ಪರಾಮರ್ಶನ ಗ್ರಂಥಗಳು:**

1. ಪಿ.ಕೆ.ರಾಜಶೇಖರ, 1973, ಮಲೆಮಾದೇಶ್ವರ, ಸಂಯುಕ್ತ ಪ್ರಕಾಶನ, ಮೈಸೂರು.

2..ಹಿ.ಚಿ.ಬೋರಲಿಂಗಯ್ಯ, 2018, ಕರ್ನಾಟಕಜನಪದ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ.

3. ಬಿ.ಎಸ್. ಸ್ವಾಮಿ,2006, ಜಾನಪದ ಐಸಿರಿ, ದಾಮಿನಿ ಸಾಹಿತ್ಯ, ಬೆಂಗಳೂರು.

4. ಎ.ವಿ.ನಾವಡ,2015, ಜಾನಪದ ಶೋಧ, ಅಸ್ಮಿತೆ ಪ್ರಕಾಶನ, ಮಂಗಳೂರು.

5. ಚಕ್ಕೆರೆ ಶಿವಶಂಕರ್,2008, ಜಾನಪದ ತಿಳಿವಳಿಕೆ, ಸಾಗರ ಪ್ರಕಾಶನ, ಬೆಂಗಳೂರು.

6. ವಿಜಯಾದಬ್ಬೆ, 1989, ಮಹಿಳೆ, ಸಾಹಿತ್ಯ, ಸಮಾಜ, ರಚನಾ ಪ್ರಕಾಶನ, ಮೈಸೂರು.

7. ಮೊಗಳ್ಳಿ ಗಣೇಶ್, 2006, ಮೌಖಿಕಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

8. ಪ್ರೊ.ಅಂಬಳಿಕೆ ಹಿರಿಯಣ್ಣ (ಪ್ರ.ಸಂ), 2014, ಕರ್ನಾಟಕ ಸಂಶೋಧನಾ ಜಾನಪದ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೊಡಿ,

9. ಎನ್. ಭಕ್ತವತ್ಸಲ ರೆಡ್ಡಿ (ಪ್ರ.ಸಂ) 2004, ಜಾನಪದಅಧ್ಯಯನ: ಸೈದ್ಧಾಂತಿಕದೃಷ್ಟಿ, ಭಾರತೀಯ ಭಾಷೆಗಳ ಜಾನಪದ ಸಂಘ,

***

ISBN – 978-93-5526-247-9

# 14. 'ಜನಪದದೈವ ಮೈಲಾರಲಿಂಗ' ಕುರಿತಕಥಾ ಪರಂಪರೆ

ಡಾ. ಜಿ. ಆಶಾ

ಮೈಲಾರ ಮತ್ತು ದೇವರಗುಡ್ಡ ಗ್ರಾಮಗಳಲ್ಲಿ ನೆಲೆಸಿರುವ 'ಮೈಲಾರಲಿಂಗ' ಮತ್ತು 'ಗುಡ್ಡದಯ್ಯ' ಎಂಬ ನಾಮಾಂಕಿತ ಗೊಂಡಿರುವ ಪ್ರಸಿದ್ಧವಾಗಿರುವ ಈ ದೇವನು ಕರ್ನಾಟಕದ ಸುಪ್ರಸಿದ್ಧ 'ಜನಪದದೈವ' ವಾಗಿದ್ದಾನೆ. ಈ ದೈವಕ್ಕೆ ಸಂಬಂಧಿಸಿದಂತೆ ಮೈಲಾರಲಿಂಗ ಕುರಿತ ಜನಪದ ಸಾಹಿತ್ಯವನ್ನು ಕಥೆ, ಗೀತೆ, ಗಾದೆ ಮತ್ತು ಒಗಟುಗಳೆಂಬ ನಾಲ್ಕು ಪ್ರಕಾರಗಳಲ್ಲಿ ವಿವೇಚಿಸಬಹುದಾಗಿದೆ. ಮೈಲಾರಲಿಂಗವನ್ನು ಕುರಿತು ಜನಪದ, ಜಾನಪದ ಪುರಾಣ ಇರದಿದ್ದರೂ, ಕಥನಗೀತ ರೂಪದಲ್ಲಿ ಖಂಡಕಾವ್ಯಗಳು ಲಭ್ಯವಿವೆ. ಈ ಖಂಡ ಕಾವ್ಯಗಳಲ್ಲಿ ಒಂದೆರಡನ್ನು ಬಿಟ್ಟರೆ ಉಳಿದೆಲ್ಲವೂ ಈವರೆಗೂ ಜನಪದ ನಾಲಿಗೆಯಲ್ಲಿಯೇ ಮೌಖಿಕ ಸಾಹಿತ್ಯವಾಗಿ ಉಳಿದು ಆಶ್ರಯ ಪಡೆದಿದೆ.

**ಮೈಲಾರಲಿಂಗ ಮತ್ತುತಿರುಪತಿತಿಮ್ಮಪ್ಪನ ಪದ**

ಇದೊಂದು ಸುಧೀರ್ಘವಾದ ಕಥನಗೀತೆಯಾಗಿದೆ. ಮೈಲಾರಲಿಂಗಪ್ಪ ತನ್ನ ಮದುವೆಗಾಗಿ, ತಿರುಪತಿ ತಿಮ್ಮಪ್ಪನಿಂದ 'ಏಳುಕೋಟಿ' ಸಾಲ ಮಾಡಿದ್ದ, ಮಾಡಿದ್ದ ಆ ಸಾಲ ತೀರಿಸಲು ಒತ್ತಾಯ ಬಂದಾಗ, ತನ್ನ ಕೌಶಲ್ಯ ಪ್ರದರ್ಶಿಸಿ ಅಲ್ಲಿಂದ ಜಾರಿಕೊಳ್ಳುವನು. ಹಾಸ್ಯ ಈ ಕಥನಗೀತೆಯ ವಸ್ತುವಾಗಿದೆ. ಮೈಲಾರ ಲಿಂಗನ ದರ್ಶನ, ಜಾತ್ರೆಗೆ ಬರುವ ಭಕ್ತರು ಹಾಕುವ ಉದ್ಘೋಷ–'ಏಳುಕೋಟಿ, ಏಳುಕೋಟಿಗೋ.....'ಎಂಬುದು "ಏಳುಕೋಟಿ ಕೂಡಲಿಲ್ಲ, ಮೈಲಾರಲಿಂಗನ ಸಾಲ ಹರಿದಿಲ್ಲ" ಎಂಬುದು ಆ ಪ್ರಾಂತ್ಯದ ಪ್ರಚಲಿತ ಗಾದೆಯಾಗಿ ಉಳಿದಿದೆ. ಜಾತ್ರೆಗೆ ಏಳುಕೋಟಿ ಜನ ಸೇರಿದಾಗ ಆ ಸಾಲ ತೀರುತ್ತದೆಂಬ ಮಾತು ಇಲ್ಲಿದೆ. ಅಂತೆಯೇ "ಮಂದಿ ಕರಕೊಂಡು ಮೈಲಾರಕ ಬಾ" ಎಂಬ ಗಾದೆ ಮಾತೂ ಕೂಡಾ ಈ ಕಥೆಯ ಹಿನ್ನೆಲೆಯನ್ನು ನಮಗೆ ತಿಳಿಸುತ್ತದೆ.

ದೇಸತಿರಿಗಿ ಬ್ಯಾಸತ್ತು ಬಂದಂತ ಮೈಲಾರನಿಗೆ ಕದ ತೆಗೆಯದ 'ಗಂಗವ್ವ' ಮೊದಲ ಹೆಂಡತಿ (ಸಿರಿಗಂಗೆ) ಸಿಟ್ಟಿನಿಂದ ಮತ್ತೊಂದು ಹೆಣ್ಣಿನ ಮನಿಗ್ಹೋದ್ಹೊ ಮಾರಾಯ ಬಂದ ದಾರಿಯಲ್ಲೆ ಹೊರಟು ಹೋಗು ಎಂದು ಹೇಳಿದರೆ ಮತ್ತೊಂದು ಹೆಣ್ಣನ್ನು ತರದಿದ್ದರೆ ಸಿರಿಗಂಗೆ ಗುಡದಯ್ಯನಲ್ಲೆ– ಎಂದು ಪ್ರತಿಜ್ಞೆ ಮಾಡುತ್ತಾನೆ. ಅದರಂತೆ ಮೈಲಾರಲಿಂಗ ಕುರುಬರ ಮನೆಯಲ್ಲಿ ದುಡಿದ ಮಾಯೆಯಿಂದ ಮಾಳವ್ವನನ್ನು ಮದುವೆಯಾಗಿ ತರುತ್ತಾನೆ. ಗಂಗವ್ವ, ಮಾಳವ್ವರು ಬಂದ ಭಕ್ತರಿಗೆ ಅನ್ನ ಕರುಣಿಸಲು ಸಿರಿಗಂಗೆ (ಗಂಗವ್ವ) ಸಂತಾನ ಕರುಣಿಸಲು ಕುರುಬರ ಮಾಳವ್ವ ಎಂಬಂತೆ ಕ್ಷೇತ್ರದಲ್ಲಿ ತಮ್ಮ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂದು ಪುರುಷನೊಬ್ಬ ಹೆಣ್ಣುಗಳನ್ನೇಕ ಆಳುವುದು, ಕದ್ದುತರುವುದು, ಗೆದ್ದುತರುವುದು ಪೌರುಷ ಇವು ಗಂಡಿನ ಸಂಕೇತವಾಗಿತ್ತು. ಅಷ್ಟೆ ಅಲ್ಲ ಸಮಾಜಿಕ ಅಂತಸ್ತು ಆಗಿತ್ತು. ಅಂತೆಯೇ ಜನಪದ ದೇವತೆ ಮೈಲಾರಲಿಂಗನಲ್ಲು ಈ ಸ್ವಭಾವವನ್ನು ಕಾಣಲಾಗಿದೆ.

"ನಮ್ಮ ಜನಪದರು ದೇವರುಗಳನ್ನು ತಮ್ಮಂತೆಯೇ ಕಲ್ಪಿಸಿಕೊಂಡು ತಮ್ಮ ಬೇಕು ಬೇಡಗಳನ್ನು ಅವರಿಗೂ ಅನ್ವಯಿಸಿದ್ದಾರೆ. ಅಂತೆಯೇ ದೇವರು 'ಮೈಮೆ' ಉಳ್ಳ ಶಕ್ತಿಶಾಲಿ ಮಾಯಾವಿಯಾಗಿದ್ದಾನೆ. ಅವರು ಮನಸ್ಸು ಮಾಡಿದರೆ ಲೋಕದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ. ಬಹುಪಾಲು ಜನಪದ ದೇವತೆಗಳು ನಮ್ಮಂತೆಯೇ ಹಸಿವು, ನೀರಡಿಕೆವುಳ್ಳವರು, ಸ್ತ್ರೀ ಲೋಲರು, ಬಹುಪತ್ನೀಯರು, ಪ್ರಶಂಸನಾ ಪ್ರಿಯರು, ಕಲಾಪ್ರಿಯರೂ ಆಗಿದ್ದಾರೆ" (ಶ್ರೀ ಎನ್. ತಪಸ್ವೀಕುಮಾರ್)

ಮೈಲಾರಲಿಂಗನ ಹಾಡುಗಳನ್ನು ಹೇಳುವ 'ಗೊರವರು' ಹೆಚ್ಚಿನ ವಾದ್ಯಗಳ ಸಹಾಯವಿಲ್ಲದೆ, ಕೈಯಲ್ಲಿ ಗಂಟೆ ಮತ್ತು ಡಮರು ಹಿಡಿದು, ಬಹು ಸುಶ್ರಾವ್ಯವ್ಯವಾಗಿ ಹಾಡುತ್ತಾರೆ. ದೇವರಗುಡ್ಡ ಮೈಲಾರಗಳಲ್ಲಿ ಹುಣ್ಣಿಮೆ ಜಾತ್ರಾ ಮಹೋತ್ಸವಗಳಲ್ಲಿ, ರಾತ್ರಿಯಿದೇ ಇಂಥ ಪದಗಳನ್ನು ಅಪ್ರಯತ್ನ ಪೂರ್ವಕವಾಗಿ ಕೇಳಬಹುದು. ಅದೇ ರೀತಿ ಮೈಲಾರಲಿಂಗನ್ನು ಕುರಿತು ಜನಪದ ಸಾಹಿತ್ಯದಲ್ಲಿ ಪವಾಡಗಳನ್ನು ಮಾಡುವ ಕಂಚೆ ವೀರರು ಹೇಳುವ 'ಒಡಪು'ಗಳು ದೇವರ ಶೌರ್ಯ, ಧೈರ್ಯ, ಸಾಹಸಗಳನ್ನು ಬಿತ್ತರಿಸುತ್ತವೆ. ಕುರುಬರ ಡೊಳ್ಳಿನ ಹಾಡುಗಳಲ್ಲೂ ಮೈಲಾರಲಿಂಗನ ಪದಗಳಿವೆ.

ISBN – 978-93-5526-247-9 

ಮೈಲಾರಲಿಂಗನನ್ನು ಕುರಿತ ಐತಿಹ್ಯವನ್ನು ನೋಡಲಾಗಿ ಅವು ಐತಿಹಾಸಿಕ ಮತ್ತು ಅರ್ಧ ಐತಿಹಾಸಿಕ ಸಂಗತಿಗಳಾಗಿವೆ. ದೇವಾಲಯದಲ್ಲಿ ಗುಡ್ಡದಯ್ಯನ ಜೋಡಿ ಚರ್ಮದ ಪಾದರಕ್ಷೆಗಳನ್ನು ಇಡಲಾಗಿದೆ. ಪ್ರತಿವರ್ಷ ಕಾರ ಹುಣ್ಣಿಮೆಯಂದು ಹಳೆಯದನ್ನು ತೆಗೆದು ಹೊಸದನ್ನು ಇಡುವುದು ಅನೂಚಾನವಾಗಿ ನಡೆದು ಬಂದಿದೆ. ಈ ಸಂಗತಿಯ ಹಿನ್ನೆಲೆಯನ್ನು ಗಮನಿಸಿದಾಗ ಇಲ್ಲಿ ನಮಗೊಂದು ಐತಿಹ್ಯ ಕಂಡು ಬರುವುದು. ಗುಡದಯ್ಯ ಪ್ರತಿ ರಾತ್ರಿ ಈ ಪಾದರಕ್ಷೆ ಧರಿಸಿ, ತನ್ನ ವೇಶ್ಯೆಯರ ಮನೆಗಳಿಗೆ ಹೋಗಿ ಬರುತ್ತಾನೆ, ಅವನು ಹಾಗೆ ಹೋಗಿ ಬರುವ ಪರಿಣಾಮವಾಗಿ ಒಂದು ವರ್ಷದಲ್ಲಿ ಜೋಡುಗಳು ಸವೆದು ಹೋಗುತ್ತವೆಂದು ಹೇಳುತ್ತಾರೆ. ಜನಪದ ದೈವವಾಗಿರುವ ಮೈಲಾರಲಿಂಗನನ್ನು ಕುರಿತಂತೆ ಗದ್ಯ ಕಥಾ ರೂಪ ಸಿಗದೆ ನಿರಾಸೆಯಾಗುತ್ತದೆ.

ಮೈಲಾರಲಿಂಗನ್ನು ಕುರಿತಂತೆ ಒಂದು ಯಕ್ಷಗಾನವೂ ಇದೆ. ಮಣಿಕಾಸುರ, ಮಲ್ಲಾಸುರರೆಂಬ ರಾಕ್ಷಸರನ್ನು ಸಂಹಾರ ಮಾಡುವವನು ಮೈಲಾರಲಿಂಗನಾಗಿದ್ದು ಇದು ಇತ್ತೀಚೆಗೆ ಸೃಷ್ಠಿಯಾಗಿರಬಹುದೆಂದು ಕಂಡು ಬರುತ್ತದೆ.

**ಸ್ಥಳ ಪುರಾಣ**

ಕರ್ನಾಟಕದ ಬಳ್ಳಾರಿ ಜಿಲ್ಲೆ, ಹೂವಿನಹಡಗಲಿ ತಾಲ್ಲೂಕಿನ ಮೈಲಾರದಲ್ಲಿರುವ ದಂಪತಿಗಳ ವೀರಗಲ್ಲು, ಮಾಸ್ತಿಗಲ್ಲು, ಶಾಸನಗಳು, ಲಿಪಿಗಳು ದೊರೆತಿವೆ. ಹಿರೇ ಮೈಲಾರ ಕ್ಷೇತ್ರದಲ್ಲಿ ದೊರೆತಿರುವ ಶಾಸನಗಳ ಪ್ರಕಾರ– ಅಸುರರ ನಾಶಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಮೈಲಾರ ದೇವರು ಬದುಕಿದ ಬಾಳಿದ ಪವಿತ್ರ ಸ್ಥಳವಾಗಿದೆ. ರಾಣೆಬೆನ್ನೂರು ಬಳಿಯಿರುವ ದೇವರಗುಡ್ಡದ ಮೇಲೆ ಮೈಲಾರಲಿಂಗನ ದೇವಸ್ಥಾನವಿದೆ, ಜನರಿಗೆ ತೊಂದರೆ ಕೊಡುತ್ತಿದ್ದ 'ಮಣಿ ಮಲ್ಲಾಸುರ' ಎಂಬ ರಾಕ್ಷಸನನ್ನು ಈಶ್ವರನು ಗೊರವನ ವೇಷದಲ್ಲಿ ಬಂದು ಸಂಹರಿಸದನೆಂದು ಕಥೆಯಿದೆ.

ಮಣಿ ಮಲ್ಲಾಸುರ ಬ್ರಹನನ್ನು ಕುರಿತು ತನಗೆ ಯಾರಿಂದಲೂ ಸಾವು ಬಾರದಿರುವಂತೆ ವರ ಬೇಡುತ್ತಾನೆ. ಆದರೆ ಬ್ರಹ್ಮ ಇದಕ್ಕೆ ಕಿವಿಗೊಡನು. ಆಗ ಶಿವನ'ನ್ನು ಕುರಿತು ಕೇಳಲಾಗಿ ಶಿವ ಕುಪಿತನಾಗಿ ತಲೆ ಕೊಡವುತ್ತಾನೆ, ಶಿವನ ತಲೆಯಿಂದ 'ತುಪ್ಪದ ಮಾಳಮ್ಮ' ಎಂಬ ಹೆಣ್ಣು ಜನಿಸಿ, ರಾಕ್ಷಸನನ್ನು ಕೊಲ್ಲಲು ಉದ್ಯುಕ್ತಳಾಗುತ್ತಾಳೆ. ಆಕೆಯಿಂದ ಕೊಲ್ಲಲು ಸಾಧ್ಯವಾಗದೆ, ಶಿವನೇ ಗೊರವರ ವೇಷದಲ್ಲಿ ಬಂದು ರಾಕ್ಷಸನನ್ನು ಕೊಂದು ತುಪ್ಪದ ಮಾಳಮ್ಮನನ್ನು ಮದುವೆಯಾಗುತ್ತಾನೆ.

ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತ್ತೊಂದು ಕಥೆಯಿದ್ದು 'ಗಂಗೆಮಾಳಮ್ಮ' ಎಂಬಾಕೆ ತನ್ನ ಏಳು ಜನ ಅಣ್ಣ ತಮ್ಮಂದಿರಿಗೆ ಊಟ ಹೊತ್ತು ಹೋಗುತ್ತಿರುವಾಗ, ಶಿವ ಗೊರವನ ವೇಷದಲ್ಲಿ ಬಂದು ಅವಳ ಬಳಿ ನಿಲ್ಲುತ್ತಾನೆ. ಇದನ್ನು ಕಂಡ ಏಳು ಜನ ಅಣ್ಣ ತಮ್ಮಂದಿರು, ತಮ್ಮ ಬಳಿಯಿದ್ದ ಎರಡು ನಾಯಿಗಳನ್ನು ಅವನ ಕಡೆಗೆ ಛೂ ಬಿಡುತ್ತಾರೆ. ಆ ನಾಯಿಗಳು ಗೊರವನ ಬಳಿ ಬಂದು ಹಾಗೆಯೇ ನಿಲ್ಲುತ್ತವೆ. ಆ ಗೊರವ ಗಂಗೆ ಮಾಳವ್ವನ್ನು ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಆಗ ಆ ಅಣ್ಣ ತಮ್ಮಂದಿರು ಐದು ಪವಾಡಗಳನ್ನು ಮಾಡಿ ತೋರಿಸಿದಾಗ ಮದುವೆ ಮಾಡುವುದಾಗಿ ಹೇಳುತ್ತಾರೆ.

ಆಗ ಗೊರವ– ಸರಪಳಿ ಪವಾಡ
ಶೂಲದ ಪವಾಡ
ಗೋವದ ಪವಾಡ
ಅಲಗು ಪವಾಡ
ಶಿರಸಿ ಪವಾಡ

ಮಾಡಿ ತೋರಿಸಿ ಗಂಗೆ ಮಾಳವ್ವನನ್ನು ಮದುವೆಯಾಗುತ್ತಾನೆ. ಇಂದಿಗೂ ಶ್ರೀ ಕ್ಷೇತ್ರದಲ್ಲಿ ಮೈಲಾರಲಿಂಗನ ಭಕ್ತರು 'ಪವಾಡ' ಮಾಡುವುದಾಗಿ ಹರಸಿಕೊಳ್ಳುವುದು. ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿನ ಪ್ರಮುಖ ಆಕರ್ಷಣೆಯಾಗಿದ್ದು, ಅತ್ಯಂತ ರೋಮಾಂಚಕಾರಿಯಾಗಿವೆ. ಗೊರವರು ಎಂಬ ವೃತ್ತಿಗಾಯಕರು ಈ ಮೈಲಾರಲಿಂಗ ಕ್ಷೇತ್ರಕ್ಕೆ ಸಂಬಂಧಪಟ್ಟವರಾಗಿದ್ದು, ತಲೆಗೆ ಕರಡಿ ಚರ್ಮದ ಟೋಪಿ, ಕೈಯಲ್ಲಿ ಡಮರು, ಪಿಳ್ಳಂಗೋವಿ, ಕೊರಳಿಗೆ

ISBN – 978-93-5526-247-9

ರುದ್ರಾಕ್ಷಿ ಹಾರ, ,,,,,,,, ಭಿಕ್ಷಾಪಾತ್ರೆ (ಡೋಣಿ)(ದೋಣಿ), ಹೊಕ್ಕುಳಿನವರೊ ಹುಲಿಚರ್ಮ, ತೋಳಿಗೆ ಬಳೆ, ಕಾಲಿಗೆ ಗೆಜ್ಜೆ, ಕೊರಳಿಗೆ ಕವಡೆ ಧರಿಸಿಕೊಂಡಿರುತ್ತಾರೆ. ಮೈಲಾರಲಿಂಗನ ರೋಚಕ ಪವಾಡಗಳನ್ನು ಮಾಡುತ್ತಾ, ಗೊರವರ ಕುಣಿತ ನೃತ್ಯ ಮಾಡುತ್ತಾ ಕಥಾ ಪರಂಪರೆಯನ್ನು ಇವರು ಉಳಿಸಿಕೊಂಡು ಬಂದಿದ್ದಾರೆ.

ಪರಾಮರ್ಶನ ಗ್ರಂಥಗಳು:

1. ಮೈಲಾರಲಿಂಗ ಪರಂಪರೆ – ಎಫ್. ಓ. ಹಳ್ಳಿಕೇರಿ
2. ಮೈಲಾರಲಿಂಗ – ವಿಕಿಪೀಡಿಯಾ
3. ಮೈಲಾರಲಿಂಗ ಕುರಿತು ಜನಪದ ಸಾಹಿತ್ಯ – ಕಣಜ

***

ISBN – 978-93-5526-247-9

# 15. ನಿತ್ಯನೂತನ ಮಂಟೇಸ್ವಾಮಿ ಜನಪದ ಮಹಾಕಾವ್ಯ

**ಅಶ್ವಿನಿ ಬಾಯಿ ಕೆ**

ಮಹಾಕಾವ್ಯ ಎಂದಾಕ್ಷಣ ಶಿಷ್ಟ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಕೃತಿಗಳು ನಮ್ಮೆದುರಿಗೆ ಸುಳಿದಾಡುತ್ತದೆ. ಆದರೆ ಜನಪದ ಮಹಾಕಾವ್ಯವೂ ಬುಡಕಟ್ಟುಗಳ ಜೀವಂತಿಕೆಯ ಸೆಲೆ ಎಂಬುದರಲ್ಲಿ ಎರಡು ಮಾತಿಲ್ಲ. ಇವು ಮೌಖಿಕ ಮಹಾಕಾವ್ಯಗಳಾಗಿ ಸಮಷ್ಠಿ ಪ್ರಜ್ಞೆಯನ್ನು ಅಳವಡಿಸಿಕೊಂಡು ತಲೆಮಾರಿನಿಂದ ತಲೆಮಾರಿಗೆ ಸಾಗುತ್ತ ಬಂದಿದೆ. ಜನಪದ ಕಾವ್ಯವೆಂಬುದು ಏಕ ಕವಿಕೃತವಾಗದೆ ಸಮಷ್ಟಿ ಕೃತವಾಗಿರುತ್ತದೆ. ಜನಪದ ಮಹಾಕಾವ್ಯವೆಂಬುದು ಹಲವು ಜನಸಮುದಾಯ ಬುಡಕಟ್ಟುಗಳ ಧ್ವನಿಯಾಗಿ ಜನಾಂಗಗಳ ಪ್ರತಿನಿಧಿಯಾಗಿ ಜನವಾಣಿಯಾಗಿ ಬಾಯಿಂದ ಬಾಯಿಗೆ ಹರಿದುಕೊಂಡು ತನ್ನದೇ ಆದ ವಿಶಿಷ್ಟತೆಗಳನ್ನು ಅಳವಡಿಸಿಕೊಂಡು ಜನಮನವನ್ನು ಸೂರೆಗೊಳ್ಳುತ್ತ ಬೆಳೆದುಬಂದಿದೆ. ಜನಪದ ಮಹಾಕಾವ್ಯವು ಪಾಶ್ಚಾತ್ಯರ ನಿಲುವುಗಳಿಗೆ ನಿಲುಕುವಷ್ಟು ತನ್ನದೇ ಆದ ಸೊಗಡನ್ನು ಹೊಂದಿದೆ. ಜನಪದ ಮಹಾಕಾವ್ಯವು ಒಟ್ಟಾರೆ ಅನೇಕ ಜನಾಂಗ/ಬುಡಕಟ್ಟುಗಳ ಸಂಸ್ಕೃತಿಯ ಪ್ರತೀಕವಾಗಿ ರೂಪತಾಳಿದೆ. ಪರಂಪರಾನುಗತ ರೂಢಿ ಸಂಪ್ರದಾಯ ನಡವಳಿಕೆ ಸಾಂಸ್ಕೃತಿಕ ನೆಲೆಯನ್ನು ಒಳಗೊಳ್ಳುವುದರ ಜೊತೆಗೆ ಸಾಂಸ್ಕೃತಿಕ ಆಚಾರ-ವಿಚಾರಗಳನ್ನು ಪ್ರತಿಬಿಂಬಿಸುತ್ತದೆ.

**ವಿಷಯ ವಿಶ್ಲೇಷಣೆ**

ಮಂಟೇಸ್ವಾಮಿ ಜನಪದ ಮಹಾಕಾವ್ಯ ತನ್ನದೇ ಆದ ವಿಶಿಷ್ಟತೆಯನ್ನು ಒಳಗೊಂಡಿದೆ. ಮೌಖಿಕ ಸಂಸ್ಕೃತಿಯ ಮುಖೇನ ಸಮೃದ್ಧವಾಗಿ ಬೆಳೆದುಬಂದಿದೆ. ಮಂಟೇಸ್ವಾಮಿ ಮಲೇಮಹದೇಶ್ವರಂತಹ ಸಾಂಸ್ಕೃತಿಕ ನಾಯಕರನ್ನು ಇಂದಿನ ವೈಚಾರಿಕ ಜಗತ್ತಿನ ನಡುವೆ ಅನುಸಂಧಾನ ಮಾಡುವ ಮೂಲಕ ಮೌಖಿಕ ಪರಂಪರೆಗಳ ಸಾಂಸ್ಕೃತೀಕರಣದ ಭಾಗವಾಗಿದೆ. ಇಲ್ಲಿ ವಚನ ಚಳುವಳಿಯ ವಿಭಿನ್ನ ನೆಲೆಗಳನ್ನು ಗಮನಿಸಬಹುದಾಗಿದೆ. ಜನಪದ ಮಹಾಕಾವ್ಯಗಳಲ್ಲಿಯೇ ಮಂಟೇಸ್ವಾಮಿ ಕಾವ್ಯವು ವಿಶಿಷ್ಟವಾದ ಆಯಾಮವನ್ನು ಅಳವಡಿಸಿಕೊಂಡು ಸಾಗಿದೆ. ಸಾಹಿತ್ಯ ಮತ್ತು ಸಂಸ್ಕೃತಿಯ ನಡುವೆ ಅವಿನಾಭಾವ ಸಂಬಂಧವನ್ನು ಈ ಕಾವ್ಯವು ಹುಟ್ಟುಹಾಕಿದೆ. ಜನಪದ ಮಹಾಕಾವ್ಯಗಳು ಬೆಳೆದು ಬಂದಿರುವುದೇ ಮೌಖಿಕ ಸಂಸ್ಕೃತಿಯ ನೆಲೆಯಾಗಿ ಜನಪದರ ಉಸಿರಾಗಿ ಉಳಿದಿರುವ ಮಹಾಕಾವ್ಯಗಳು ಕಾವ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಿದ್ದಾರೆ. ಮಂಟೇಸ್ವಾಮಿ ಕಾವ್ಯ ಬುಡಕಟ್ಟು ಸಂಸ್ಕೃತಿಯ ಅನಾವರಣ ಮಾಡುವುದರ ಜೊತೆ, ಆ ಸಮುದಾಯದ ಅವಿಭ್ಯಾಜ್ಯ ಅಂಗವಾಗಿರುವುದು ಕಾಣುತ್ತೇವೆ. ಮಂಟೇಸ್ವಾಮಿ ಕಾವ್ಯ ಸಂಕೇತಗಳ ಮುಖೇನ ಸಂವಾದ ನಡೆಸುತ್ತಾ ಸಾಗುತ್ತದೆ. ಇಲ್ಲಿ ಜನಪದದ ಹೊಸ ಹೊಸ ತಾತ್ವಿಕತೆಯ ಆಲೋಚನೆಗಳು ಕಂಡುಬರುತ್ತದೆ. ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯದ ಬೆಳಕಾಗಿ ಈ ಕಾವ್ಯ ಪರಂಪರೆ ಬೆಳೆದು ಬಂದಿದೆ ಎಂದರೆ ತಪ್ಪಾಗದು. ತಾತ್ಸರಕ್ಕೆ ಒಳಗಾದ ಬುಡಕಟ್ಟುಗಳು ಮಂಟೇಸ್ವಾಮಿಯ ಪರಂಪರೆಯನ್ನು ಇಂದಿಗೂ ಸಹ ಸಾಗಿಸಿಕೊಂಡು ಬಂದಿದೆ. ಮಂಟೆಸ್ವಾಮಿಯು ಜಗತ್ ಸೃಷ್ಠಿಸಬಲ್ಲ ಮಹಾನ್ ಪವಾಡ ಪುರುಷನಾಗಿದ್ದು ಆತ್ಮ ಲಿಂಗದ ಶ್ರೇಷ್ಠತೆಯನ್ನು ಜಗತ್ತಿಗೆ ತೋರಿಸಿಕೊಟ್ಟವನು ಎಂಬುದು ಕಾವ್ಯದಿಂದ ತಿಳಿದು ಬರುತ್ತದೆ.

ಮಂಟೇಸ್ವಾಮಿ ಮಹಾಕಾವ್ಯ ನೀಲಗಾರರೆಂಬ ವೃತ್ತಿಗಾಯಕರಿಂದ ಪ್ರಚುರದಲ್ಲಿದೆ. ತಮ್ಮ ಗಾಯನದ ಮುಖೇನ ಮಂಟೇಸ್ವಾಮಿಯ ಜೀವನ ವೃತ್ತಾಂತ, ಪರಂಪರೆ, ಪವಾಡಗಳನ್ನು ಸಾದರಪಡಿಸುವರು. ಇವರನ್ನು ಮಂಟೇಸ್ವಾಮಿ, ಮಂಟೇದಯ್ಯ ಎಂಬ ಹೆಸರುಗಳಿಂದ ಗುರುತಿಸುವರು. ಜಗತ್ತಿಗೆ ಸಂಬಂಧಪಟ್ಟಂತಹ ಚಿಂತನೆಗಳನ್ನು ಈ ಕಾವ್ಯವು ಜನಪದದ ನೆಲೆಯಲ್ಲಿ ಬಿತ್ತರಿಸಿದೆ. ಒಂದು ರೀತಿಯ ಸ್ಫೋಟಕ ಕಾವ್ಯವಾಗಿ ಕಂಡುಬರುವ ಈ ಕಾವ್ಯವು ದಮನಿತರ ಬದುಕಿನ ಸೆಲೆಯಾಗಿದೆ. ಜಗತ್ತಿನ ದೃಷ್ಟಿಯಲ್ಲಿ ಅನಕ್ಷರಸ್ಥರೇ ಈ ಮಂಟೇಸ್ವಾಮಿ ಮಹಾಕಾವ್ಯವನ್ನು ಸೃಷ್ಟಿಸಿದ್ದಾರೆ. ಆದರೂ ಅಲ್ಲಿ ತಂದಿರುವಂತಹ ಒಂದೊಂದು ಸನ್ನಿವೇಶ ಪರಿಕಲ್ಪನೆಗಳು ವೈಶಿಷ್ಟಪೂರ್ಣವಾಗಿದೆ.

ಮಂಟೇಸ್ವಾಮಿ ಜನಪದ ಮಹಾಕಾವ್ಯವು ಮೌಖಿಕರೂಪದಲ್ಲಿ ಜೀವಂತಿಕೆಯ ಸೆಲೆಯಾಗಿ ಅವರ ಉಸಿರಿನ ಅವಿಭಾಜ್ಯ ಅಂಗವಾಗಿ ಕಂಡುಬಂದಿದೆ. ನೀಲಗಾರರು ಮಂಟೇಸ್ವಾಮಿಯ ಕಾವ್ಯವನ್ನು ತಮ್ಮ ಹಾಡಿನ ಮೂಲಕ ಅಭಿವ್ಯಕ್ತಪಡಿಸುವ ರೀತಿ ರೋಮಾಂಚನಕಾರಿಯಾದದ್ದು. ಅವರು ಮಂಟೇಸ್ವಾಮಿಗಳ ಶಿಷ್ಯ ಪರಂಪರೆ, ಪವಾಡಗಳು, ಅವರು ನೆಲೆಸಿದ ಒಂದೊಂದು ಊರುಗಳ ಪರಿಚಯವನ್ನು ತಮ್ಮ ಗಾಯನದ ಮೂಲಕವೇ ಮಾಡುತ್ತಾರೆ.

ISBN – 978-93-5526-247-9 

ಮಂಟೇಸ್ವಾಮಿಗಳಿಗೆ ಮಂಟೇದಯ್ಯ, ಧರೆಗೆ ದೊಡ್ಡವರು, ಪರಂಜ್ಯೋತಿ ಎಂದು ಕರೆಯುತ್ತಾರೆ. ಅಲ್ಲದೆ 12ನೇ ಶತಮಾನದ ಶರಣ ಚಳುವಳಿ ಹಾಗೂ ಅಲ್ಲಮಪ್ರಭುವಿಗೂ ಒಂದು ರೀತಿಯ ಸಂಬಧ ಕಲ್ಪಿಸುವುದರಿಂದ ಅವರನ್ನು ಪ್ರಭುದೇವರು, ಪ್ರಭುಸ್ವಾಮಿ ಎಂದೂ ಕರೆಯುವುದುಂಟು. ಜಾತಿ ಶ್ರೇಣಿಕರಣವನ್ನು ತೊಡೆದು ಹಾಕುವ ಪ್ರಯತ್ನವನ್ನು ಇಲ್ಲಿ ಗಮನಿಸಬಹುದು. ಕೆಳವರ್ಗದವರನ್ನು ಮೇಲಸ್ತರಕ್ಕೆ ತರುವ ಪ್ರಯತ್ನ ಕುಲಸಂಸ್ಕೃತಿ/ಪರಂಪರೆಯ ಹಿನ್ನಲೆಯಲ್ಲಿ ಕಾಣಬಹುದಾಗಿದೆ. ಮಂಟೇಸ್ವಾಮಿ ತನ್ನ ಕುಲದ ಕುಲದೈವನಾಗಿ ಪ್ರತಿಬಿಂಬಿತನಾಗುತ್ತಾನೆ. ಮಂಟೇಸ್ವಾಮಿ ಜನಪದ ಮಹಾಕಾವ್ಯ ಸಂಪ್ರದಾಯ ಪ್ರತಿಸಂಸ್ಕೃತಿಯ ಅತ್ಯುತ್ತಮ ಆಕರವಾಗಿದೆ. ಆಧ್ಯಾತ್ಮಿಕ ನೇತಾರನಾಗಿಯೂ ಗುರುತಿಸಿಕೊಳ್ಳುತ್ತಾನೆ.

ಜನಪದ ಮಹಾಕಾವ್ಯದಲ್ಲಿ ಬರುವಂತಹ ಒಂದೊಂದು ಸಾಲುಗಳು ತನ್ನದೇ ಆದ ಮಹತ್ವ ಪೂರ್ಣ ವಿಚಾರಗಳನ್ನು ಒಳಗೊಳ್ಳುವ ಮುಖೇನ ಜನಪದರ ಸಂಸ್ಕೃತಿಯೊಂದಿಗೆ ಅಲ್ಲಿನ ಪರಿಸರ, ಕಪಟತೆ, ಮುಗ್ಧತೆ, ಅಹಂಕಾರ, ಅಧಿಕಾರದ ದರ್ಪ, ಶಿಷ್ಯರನ್ನು ಪಡೆಯುವ ರೀತಿ, ಗುರುಪರಂಪರೆ, ಪವಾಡಗಳ ಸಾದೃಶ್ಯತೆ ಎಲ್ಲವನ್ನು ಸಹ ಜನಪದ ಶೈಲಿಯಲ್ಲಿಯೇ ಪ್ರಚುರ ಪಡಿಸುತ್ತವೆಯಾದರೂ ಇಂದಿನ ಸಮಕಾಲೀನ ಸಂದರ್ಭಕ್ಕೆ ಅವುಗಳಲ್ಲಿ ಕೆಲವು ಸನ್ನಿವೇಶಗಳು ಪಕ್ಕಾಗುತ್ತದೆ(ಸರಿಹೊಂದುತ್ತದೆ). ಈ ಮಹಾಕಾವ್ಯದಲ್ಲಿ ಬರುವಂತಹ ಸಾಲುಗಳೆಂದರೆ

1. ಜಗತ್ತು ಸೃಷ್ಟಿಯ ಸಾಲು

   ಪರಂಜ್ಯೋತಿ ಸ್ವರೂಪನಾದ ಮಂಟೇಸ್ವಾಮಿ ತಮ್ಮ ಬಲಭಾಗದಿಂದ ಉತ್ತರೇಶನ್ನು ಎಡ ಭಾಗದಿಂದ ಮಹೇಶನ್ನು ಪಡೆದುಕೊಳ್ಳುವರು ಕಾಲಜ್ಞಾನದ ಹೊತ್ತಿಗೆ ತಾಮ್ರದ ಚಿಪ್ಪೋಡವನ್ನು ಹಿಡಿದ ಇವರು ಉತ್ತರೇಶ ಮಹೇಶನನ್ನು ಹೊನ್ನ ಹುತ್ತದಲ್ಲಿ ಪವಡಿಸುವರು. ತನ್ನ ಸ್ವರೂಪದ ಬಗ್ಗೆ ಇವರಿಗೆ ಅರಿವು ಮೂಡಿಸುವರು. ಕಾವ್ಯ ಜ್ಞಾನದ ಹೊತ್ತಿಗೆ ಹಿಡಿದು ಹೊರಟ ಅವರು ಜೋಳಿಗೆಯಿಂದ ಮಂತ್ರದ ಗಟ್ಟಿ ತೆಗೆದು ನಾಗರ ಬೆತ್ತದಿಂದ ಎರಡಗಿಸಿ ಭೂಮಿ ಆಕಾಶವನ್ನು ಸೃಷ್ಠಿಸುವರು. ಆದಿಶಕ್ತಿ ಶಾಪ ನೀಡುತ್ತಾರೆ. ಸಕಲ ಜೀವ ರಾಶಿಗಳನ್ನು ಸೃಷ್ಟಿಸಿ ಧರೆಗೆದೊಡ್ಡವರೆಂಬ ಬಿರುದು ಪಡೆದರು. ತ್ರಿಮೂರ್ತಿ ಪರಿಕಲ್ಪನೆಯೂ ಇಲ್ಲಿ ಮೂಡಿ ಬಂದಿದೆ.

2. ಕಲ್ಯಾಣ ಪಟ್ಟಣದ ಸಾಲು :

   ಇಲ್ಲಿ ಕಲ್ಯಾಣಕ್ಕೆ ಹೆಚ್ಚಿನ ಮಹತ್ವವಿದೆ. ಮಂಟೇಸ್ವಾಮಿ ಮಹಾಕಾವ್ಯ ಆರಂಭವಾಗುವುದೆ ಕಲ್ಯಾಣ ಪಟ್ಟಣದಿಂದ. ಅಲ್ಲಮಪ್ರಭು ಸ್ವರೂಪಿಯಾಗಿ, ಬಸವಣ್ಣ ಮತ್ತು ಅವನ ಪತ್ನಿಯರ ಭಕ್ತಿ ಪರೀಕ್ಷೆಗೆ ಬರುವ ಸನ್ನಿವೇಶ ಅವರ ವೇಷಭೂಷಣ ರೋಚಕವಾದದು.

3. ರಾಚಪ್ಪಾಜಿ ಸಾಲು
4. ಬೊಪ್ಪಗೌಡನಪುರದ ಸಾಲು
5. ಕೆಂಪಾಚಾರಿ ಸಾಲು
6. ಫಲಾರದಯ್ಯನ ಸಾಲು
7. ಕಲಿಪುರುಷನ ಸಾಲು
8. ಸಿದ್ದಪ್ಪಾಜಿ ಸಾಲು

ಹೀಗೆ ಪ್ರತಿಯೊಂದು ಸಾಲುಗಳು ಸಹ ವಿಭಿನ್ನ ರೀತಿಯಜನಪದ ಸನ್ನಿವೇಶದೊಂದಿಗೆ ಚಿತ್ರಿತವಾಗಿದೆ.

ಮಂಟೇಸ್ವಾಮಿಯು "ಧರೆಗೆದೊಡ್ಡವರಾಗಿ"ಯೇ ಎಲ್ಲೆಡೆ ಬಿತ್ತರಗೊಂಡಿದ್ದಾರೆ. ಅವರು ಪಟ್ಟಭದ್ರ ಸಂಸ್ಕೃತಿಗೆ ವಿರುದ್ಧವಾದ ಕೆಳವರ್ಗದ ಅಸ್ತಿತ್ವವನ್ನು ಪುನರ್ ಸ್ಥಾಪಿಸುವ ಉದ್ದೇಶದಿಂದ ಪ್ರತಿ ಸಂಸ್ಕೃತಿಯ ನಿರ್ಮಾಣ ಮಾಡುವ ಉದ್ದೇಶವನ್ನು ಹೊಂದಿರುವುದು ತಿಳಿದುಬರುತ್ತದೆ. ಈ ನಿಟ್ಟಿನಲ್ಲಿ ಮಲೆಮಾದೇಶ್ವರ, ಜುಂಜಪ್ಪ, ಮೈಲಾರಲಿಂಗ, ಮಂಟೇಸ್ವಾಮಿ ಇವರೆಲ್ಲ ಜನಪದ ನಾಯಕರಾಗಿ ಮತ್ತು ಪವಾಡ ಪುರುಷರಾಗಿ ಬಿತ್ತರಗೊಳ್ಳುತ್ತಾರೆ.

ಮಂಟೇಸ್ವಾಮಿಯು ಜಗತ್ತನ್ನು ಸೃಷ್ಟಿಸುವ ದಿವ್ಯ ಪುರುಷನಾಗಿ, ಪರಂಜ್ಯೋತಿ ಸ್ವರೂಪಿಯಾಗಿ ಕಂಡು ಬರುತ್ತಾನೆ. ಆತ ಒಬ್ಬ ಪವಾಡ ಪುರುಷನಾಗಿ ಆಧ್ಯಾತ್ಮಿಕ ನೇತಾರನಾಗಿ ಆತ್ಮ ಲಿಂಗದ ಮಹತ್ವವನ್ನು ತಿಳಿಯಪಡಿಸುವ ದಿವ್ಯ ಶಕ್ತಿಯಾಗಿ ಕಂಡುಬರುತ್ತಾನೆ. ಈತ ಯಾವುದೇ ಮಾಟ-ಮಂತ್ರಗಳಿಗೆ ಮೊರೆ ಹೋಗದೆ ಪವಾಡಗಳನ್ನು

ISBN – 978-93-5526-247-9

ಮಾಡುವ ಮೂಲಕವೇ ತನ್ನ ಶಿಷ್ಯ ಪರಂಪರೆಯನ್ನು ವೃದ್ಧಿಸಿಕೊಂಡು ಜನಪದ ನಂಬಿಕೆಗಳಿಗೆ ಗ್ರಾಹ್ಯವಾಗಿ ಸಾಗುತ್ತಾನೆ. ಮಂಟೇಸ್ವಾಮಿಯು ಜುಂಜಪ್ಪ, ಮಾದೇಶ್ವರನಿಗಿಂತ ಹಲವು ಪಟ್ಟು ಭಿನ್ನವಾಗಿ ಕಂಡರೂ ಸಹ ಈ ಜನಪದ ನಾಯಕರ ಚಿಂತನೆ, ಕೆಳವರ್ಗದ ಅಸಮಾನತೆಯನ್ನು ತೊರೆದು ಅದಕ್ಕೆ ಪ್ರತಿಯಾಗಿ ಸಮಾನತೆಯನ್ನು ಸ್ಥಾಪಿಸುವುದೇ ಆಗಿದೆ.

ಮಂಟೇಸ್ವಾಮಿಯು ಜಗತ್ ಸೃಷ್ಟಿಕರ್ತನಾಗಿಇಡೀ ಬ್ರಹ್ಮಾಂಡ ಸೃಷ್ಟಿಸಬಲ್ಲಂತಹ ಮಹಾನ್ ಚೇತನವಾಗಿ ಪ್ರತಿಬಿಂಬಿತನಾಗಿರುವುದು ವಿಶೇಷ. ಶಿವ, ವಿಷ್ಣು, ಬ್ರಹ್ಮ ಇವರುಗಳ ಸೃಷ್ಟಿಗೂ ಮಂಟೇಸ್ವಾಮಿಯೇ ಕಾರಣವಿರಬಹುದು ಎಂಬಂತೆ ಭಾಸವಾಗುತ್ತದೆ. ಈ ದೇವರುಗಳಿಗಿಂತ ಮಂಟೇದಯ್ಯನನ್ನು ಎತ್ತರದ ಸ್ಥಾನದಲ್ಲಿ ನಿಲ್ಲಿಸಿರುವುದು ಜನಪದರ ಒಂದು ಅದ್ಭುತ ಕಲ್ಪನೆಯಾಗಿದೆ. ಒಟ್ಟಾರೆ ಲೋಕದ ಸೃಷ್ಟಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಂಟೇದ ಲಿಂಗಯ್ಯನವರು ಮಾಡುವಂತಹ ಮಾತೃ ಮೂಲೀಯವಾದ ಕಲ್ಪನೆಯು ವಿಶಿಷ್ಟವಾದುದುದೇ ಆಗಿದೆ. ಇಲ್ಲಿ ಮಾತೃ ಮೂಲೀಯ ಎಂಬುದು ಜಗತ್ತನ್ನು ಪ್ರತಿನಿಧಿಸುವಂತಹುದೇ ಆಗಿದೆ.

ಮಂಟೇಸ್ವಾಮಿ ಕಾವ್ಯವು ಮಂಟೇಸ್ವಾಮಿಯು ಕಲ್ಯಾಣ ಪಟ್ಟಣವನ್ನು ಪ್ರವೇಶಿಸುವ ಮೂಲಕವೇ ಆರಂಭವಾಗುತ್ತದೆ. ಅವರು ಕಲ್ಯಾಣ ಪಟ್ಟಣ ಪ್ರವೇಶ ಮಾಡುವ ರೀತಿಯೇ ಒಂದು ವಿಶಿಷ್ಟ. ಈತ ಕಲ್ಯಾಣ ಪಟ್ಟಣಕ್ಕೆ ಪ್ರವೇಶಿಸಿದ್ದು ಅಸಹ್ಯಕರ ವೇಷದಲ್ಲಿ. ಇದನ್ನು ಕಂಡ ಕಲ್ಯಾಣದ ಶರಣರು ಈತನಿಂದ ದೂರ ಸರಿಯುವುದೂ ಮುಖ್ಯ ಘಟನೆಯಾಗಿದೆ. ಇಲ್ಲಿ 12ನೇ ಶತಮಾನದ ಬಸವಣ್ಣ–ನೀಲಾಂಬಿಕೆಯರ ಪರಿಕಲ್ಪನೆ ಅವರ ಭಕ್ತಿಯ ಪರಾಕಾಷ್ಠೆ ಕಂಡು ಅವರನ್ನು ಮಂಟೇಸ್ವಾಮಿ ಪರೀಕ್ಷೆಗೆ ಒಡ್ಡುವ ರೀತಿ ಎಲ್ಲವೂ ವಿಚಿತ್ರವಾದುದು ಮತ್ತು ವಿಶಿಷ್ಟವಾದುದಾಗಿದೆ. ಅಲ್ಲಿನ ಶರಣರ ಕಪಟ ಭಕ್ತಿ, ಲಿಂಗ ಮಾಯವಾಗುವಿಕೆ, ಆತ್ಮ ಲಿಂಗದ ಶೋಧನೆ, ಒಂದೊಂದು ಸನ್ನಿವೇಶವು ಅರ್ಥಗರ್ಭಿತವಾಗಿ ಒಡಮೂಡಿದೆ. ಶರಣರ ದರ್ಪವನ್ನು ಅಳಿದು ತನಗೆ ಬೇಕಾದವರನ್ನು ಶಿಶು ಮಕ್ಕಳನ್ನಾಗಿ ಪಡೆಯುವ ಬಗೆ ಎಲ್ಲವೂ ಅದ್ಭುತವಾದ ಒಂದು ಚಿತ್ರದಂತೆ ಗೋಚರವಾಗುತ್ತದೆ. ಕಲ್ಯಾಣ ಪಟ್ಟಣವನ್ನು ಅಜ್ಞಾನದಿಂದ ಜ್ಞಾನದ ಬೆಳಕಿನೆಡೆಗೆ ತರುವ ಪ್ರಯತ್ನವನ್ನು ಮಂಟೇಸ್ವಾಮಿ ಬಸವಣ್ಣವರ ಮುಖೇನ ಮಾಡಿಸಲು ಪ್ರಯತ್ನಿಸುವುದು ವಿಶೇಷವಾಗಿ ಕಂಡು ಬಂದಿದೆ. ಇಲ್ಲಿ ಕೆಳವರ್ಗದವರ ಶೋಷಣೆಯನ್ನು ತಡೆದು ಅವರನ್ನು ಒತ್ತೊಟ್ಟಿಗೆ ತರುವ ಪ್ರಯತ್ನ ಹಾಗೂ ತುಳಿತಕ್ಕೆ ಒಳಗಾದವರ ತಳ ಸಮುದಾಯದ ಚಿಂತನೆ ಭಕ್ತಿಯ ಪರಾಕಾಷ್ಠೆ ಬಳಕೆಗೆ ತರುವ ಪ್ರಯತ್ನವನ್ನು ಕಾಣುತ್ತೇವೆ.

ಮಂಟೇಸ್ವಾಮಿಗಳು ತಮ್ಮ ಶಿಶು ಮಕ್ಕಳನ್ನು ಪಡೆಯುವ ಸಂದರ್ಭದ ಒಂದೊಂದು ಧಾರ್ಮಿಕ ಸಂಕಥನಗಳೊಂದಿಗೆ ಹೊಸದಾದ ಜನ ಸಮುದಾಯಗಳ ಪರಿಚಯವಾಗುವುದರ ಜೊತೆಗೆ ಹೊಸದಾದ ಸಾಲು ಸಾಲು ಸಂಕಥನಗಳು ರೂಪುಗೊಳ್ಳುತ್ತ ಸಾಗುವುದೇ ವಿಶೇಷವಾದುದು. ಸಾಂಸ್ಕೃತಿಕತೆಯು ಪಲ್ಲಟಗೊಂಡಂತೆ ಹೊಸದಾದ ಮತ್ತೊಂದು ಆಧ್ಯಾತ್ಮಿಕತೆ ಜನಪದರಲ್ಲಿ ಒಡ ಮೂಡುತ್ತ ಸಾಗುವುದು ಇಲ್ಲಿ ಕಂಡುಬರುತ್ತದೆ. ಮಂಟೇಸ್ವಾಮಿಯು ಎಲ್ಲಿಯೂ ಸಹ ಹಿಂಸಾವಾದಿಯಾಗಿ ಕಾಣದೇ ಅಹಿಂಸೆಯನ್ನೇ ಪ್ರತಿಪಾದಿಸುವ ಮೂಲಕ ಪವಾಡಗಳನ್ನು ಎಸಗುತ್ತಲೇ ತನ್ನ ಶಿಶುಮಕ್ಕಳನ್ನು ಸಂಪಾದಿಸುವ ರೀತಿ ಮಹತ್ವ ಪೂರ್ಣವಾದುದು. ಆತ ಅಧಿಕಾರ, ದರ್ಪ, ಅಹಂಕಾರಗಳಿಗೆ ಒಳಗಾಗದೆ, ಅವುಗಳನ್ನು ಮುರಿಯುವ ಪ್ರಯತ್ನ ಮಾಡಿ ಯಶಸ್ವಿಯಾಗಿ ಹೊರಬರುತ್ತಾನೆ. ಈ ಮೂಲಕ ಮಾನವೀಯ ಭಾವನೆಯನ್ನು ಹೊರ ಹೊಮ್ಮಿಸುತ್ತಾನೆ. ಜನಪರವಾದ ಕಾಳಜಿಯ ಮುಖೇನ ಎತ್ತರಕ್ಕೆ ಬೆಳೆಯುವ ಪ್ರಯತ್ನ ಮಾಡುವುದರೊಂದಿಗೆ ತನ್ನ ಶಿಷ್ಯ ಪರಂಪರೆಯನ್ನು ತನಗಿಂತಲೂ ಹೆಚ್ಚಿನ ಉತ್ತುಂಗ ಮಟ್ಟದಲ್ಲಿ ಬೆಳೆಸುವ ಪ್ರಯತ್ನ ಮಾಡುವುದು ವಿಶಿಷ್ಟವಾದುದೇ ಆಗಿದೆ.

ಮಂಟೇಸ್ವಾಮಿ ಕಾವ್ಯದಲ್ಲಿ ಬರುವಂತಹ ರಾಚಪ್ಪಾಜಿಯ ಸಾಲಿನ ಮೋಡಿಯ ವಿಚಾರಗಳು, ಫಲಾರದಯ್ಯನ ಸಾಲಿನ ರೋಚಕವಾದಂತಹ ನರ ಬಲಿ ಮತ್ತು ಬಲಿಯಾಗುವ ಹುಡುಗ ಫಲಾರದಯ್ಯನಾಗುವ ಸಂದರ್ಭ. ದೊಡ್ಡಮ್ಮ ತಾಯಿಯ ಕಾಲ ಜ್ಞಾನದ ವಿಚಾರ, ಕೆಂಪಾಚಾರಿಯು ಕಾಳಿಂಗನ ಗವಿಯಲ್ಲಿದ್ದು ಸಿದ್ದಪ್ಪಾಜಿಯಾಗಿ ಹೊರಬಂದ ವಿಚಾರ ಎಲ್ಲವೂ ರೋಚಕವಾಗಿ ಕಂಡು ಬರುವುದರೊಂದಿಗೆ ಸಿದ್ದಪ್ಪಾಜಿಯ ಪವಾಡಗಳು ಮಹತ್ವ ಹೊಂದುವ ರೀತಿ ಆತ ಪಾತಾಳ ಬಾವಿಯನ್ನು ಮಂಟೇಸ್ವಾಮಿಗಳಿಗೆ ಸಿದ್ಧ ಮಾಡಲು ಪಾಂಚಾಳರ ಬಳಿ ಹೋಗಿ ಕಬ್ಬಿಣದ ಭಿಕ್ಷೆ ಬೇಡಿದಾಗ ಅವರು ಒಡ್ಡುವ ಪರೀಕ್ಷೆಗಳಿಗೆ ಸಿದ್ದನಾಗಿ ಅವುಗಳನ್ನೆಲ್ಲಾ ತನ್ನ ಪವಾಡಗಳ ಮುಖೇನ ಸಾಧ್ಯಗೊಳಿಸುವ

ISBN – 978-93-5526-247-9

ರೀತಿ ಅವರು ತೋರುವ ದರ್ಪ ಮುರಿದು ಬರುವುದು. ಎಲ್ಲವೂ ವೈವಿಧ್ಯಮಯವಾಗಿ ಕಂಡು ಬಂದಿದೆ. ಮೊದಲು ಕೆಂಪಾಚಾರಿಯಾಗಿದ್ದ ಸಿದ್ದಪ್ಪಾಜಿಯು ತನ್ನ ಸರ್ವಸ್ವವಾದ ಅಧಿಕಾರ, ದರ್ಪ, ಅಹಂಕಾರ ತೊರೆದು ಹಾಕುವ ರೀತಿಯು ವಿಶೇಷವಾಗಿದೆ. ಇದಕ್ಕೆ ಮಂಟೇಸ್ವಾಮಿಗಳು ಮಾಡುವ ಪ್ರಯತ್ನ ವಿಶಿಷ್ಟವಾದದು. ಮಂಟೇಸ್ವಾಮಿ ಕಾವ್ಯವು ಕಲ್ಯಾಣ ಪಟ್ಟಣದಿಂದ ಆರಂಭವಾಗಿ ವಿಜಯನಗರ, ಸಖರಾಯಪಟ್ಟಣ, ಚೆನ್ನಪಟ್ಟಣ, ಕುಂದೂರು ಮಠಕ್ಕೆ ಬಂದು ಕೊನೆಗೆ ಬೊಪ್ಪಣ ಪುರದಲ್ಲಿ ನೆಲೆಯೂರುತ್ತಾರೆ. ಮಂಟೇಸ್ವಾಮಿ ಜನಪದ ಮಹಾಕಾವ್ಯವು ಇಂದಿಗೂ ಸಹ ಬೊಪ್ಪಣಪುರ, ಕುಂದೂರಬೆಟ್ಟ, ಹಲಗೂರು, ನಿಡುಘಟ್ಟ, ಕಪ್ಪಡಿ, ಮಳವಳ್ಳಿ, ಚೆನ್ನಪಟ್ಟಣ ಮುಂತಾದವುಗಳ ಕಡೆ ಹಾಡುವುದು, ಕಥೆಯ ರೂಪದಲ್ಲಿ ಹೇಳುವುದು ರೂಢಿಯಲ್ಲಿದೆ. ನೀಲಗಾರರೇ ಈ ಮಂಟೇಸ್ವಾಮಿ ಜನಪದ ಮಹಾಕಾವ್ಯ ಪರಂಪರೆಯನ್ನು ಬೆಳೆಸಿಕೊಂಡು ಬಂದಿರುವುದು ವಿಶಿಷ್ಟವಾದುದು.

ಒಟ್ಟಾರೆ ಮಂಟೇಸ್ವಾಮಿ ಜನಪದ ಮಹಾಕಾವ್ಯವು ಸಾಹಿತ್ಯ ಮತ್ತು ಸಂಸ್ಕೃತಿಯ ನೆಲೆಯೊಂದಿಗೆ ಜನಪದದ ನಂಬಿಕೆ, ಪವಾಡ, ಗುರುಶಿಷ್ಯ ಪರಂಪರೆ, ಭಕ್ತಿಯ ಪರಾಕಾಷ್ಠೆ, ಮಾನವೀಯ ಮೌಲ್ಯ, ಸಂಸ್ಕೃತಿಯ ವಿಶಿಷ್ಟತೆ, ಸಮಕಾಲೀನ ಪ್ರಜ್ಞೆಯೊಂದಿಗೆ ಮೂಡಿ ಬಂದಿರುವುದು ಒಂದು ಒಳ್ಳೆಯ ವಿಚಾರವಾಗಿದೆ. ಜನಪದವು ಎಂದಿಗೂ ಬರಿದಾಗದ ಒಂದು ಅಕ್ಷಯ ನಿಧಿ. ಶೋಧಿಸುತ್ತಾ ಸಾಗಿದರೆ ಹೊಸ ಒಳಹುಗಳು ಸಿಗುತ್ತಲೇ ಹೋಗುತ್ತದೆ. ಹೀಗಾಗಿಯೇ ಹಿಂದಿಗೂ, ಇಂದಿಗೂ, ಮುಂದಿಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ಸಂಶೋಧನಾ ಕ್ಷೇತ್ರದಲ್ಲಿ ಮತ್ತೆ ಮತ್ತೆ ಚರ್ಚಿತ ವಿಷಯವಾಗಿ ಮುಂದುವರಿಯುತ್ತಲೇ ಸಾಗುತ್ತಿದೆ. ಇದು ಇನ್ನಷ್ಟು ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಕೋನದೊಂದಿಗೆ ಆಧಾರ ಸಹಿತವಾಗಿ ಶೋಧಗೊಳ್ಳಲಿ ಎಂಬುದೇ ನನ್ನ ಆಶಯ ಹಾಗೂ ಮುಂದಿನ ಪ್ರಯತ್ನ. ಹೀಗೆ ಮಂಟೇಸ್ವಾಮಿ ಮಹಾಕಾವ್ಯವು ಅದರ ಸತ್ವದಿಂದ ನಿತ್ಯ ನೂತನವಾಗಿ ಪ್ರವಹಿಸುತ್ತಿದೆ.

**ಆಕರಗ್ರಂಥಗಳು :**


1. ಮಂಟೇಸ್ವಾಮಿ : ಪ್ರೊ.ಹಿ.ಚಿ. ಬೋರಲಿಂಗಯ್ಯ
2. ಮಂಟೇಸ್ವಾಮಿಕಾವ್ಯ : ಡಾ.ವೆಂಕಟೇಶ್‌ಇಂದ್ವಾಡಿ
3. ಮಂಟೇಸ್ವಾಮಿಕಾವ್ಯ : ಕನ್ನಡ ವಿಶ್ವವಿದ್ಯಾಲಯ, ಹಂಪಿ
4. ಜನಪದ ಮಹಾಕಾವ್ಯಧರೆಗೆದೊಡ್ಡೋರು ಮಂಟೇಸ್ವಾಮಿ : ಸಂ:ಡಾ.ಪಿ.ಕೆ.ರಾಜಶೇಖರ.


***

ISBN – 978-93-5526-247-9

# 16. ಜನಪದ ಮಹಾಕಾವ್ಯಗಳ ಸಂಸ್ಕೃತಿ ಹಾಗೂ ಪರಂಪರೆ

**ಡಿ. ಅಬ್ದುಲ್ ನಿಶಾರ್**

ಒಟ್ಟು ರಾಷ್ಟ್ರ ಜೀವನವನ್ನೆ ಸಮಗ್ರವಾಗಿ ಬಿಂಬಿಸುವ ಕಾವ್ಯಗಳನ್ನು ಮಹಾಕಾವ್ಯಗಳು ಎಂದು ಪರಿಗಣಿಸಲಾಗುತ್ತದೆ. ವಾಕ್ ಪರಂಪರೆಯ ಮಹೋನ್ನತ ರಚನೆಗಳನ್ನು ಕೂಡ ಮಹಾಕಾವ್ಯಗಳು ಎಂದು ಗುರುತಿಸುವ ಪರಿಪಾಠ ಈಚಿನದು. ವಾಸ್ತವವಾಗಿ, ಮೌಖಿಕ ಮಹಾಕಾವ್ಯದ ಪರಿಕಲ್ಪನೆ, ಅದನ್ನು ಹಾಡುವ ಮತ್ತು ಕೇಳುವ ಜನರಲ್ಲಿ ಇಲ್ಲ. ಇಂದಿಗೂ ಅವರಲ್ಲಿ ಹಾಡು ಪದ, ಕಥೆ ಎಂಬ ಪ್ರಯೋಗಗಳೇ ಚಾಲ್ತಿಯಲ್ಲಿವೆ. (ಕನ್ನಡ ವಿಷಯ ವಿಶ್ವಕೋಶ ಪು.607,)

ಜನಪದ ಮಹಾಕಾವ್ಯಗಳು ಜಗತ್ತಿನಾದ್ಯಂತ ಇಂದು ಅಧ್ಯಯನಕ್ಕೆ ಒಳ ಪಡಲು ವಿಶೇಷ ಕಾರಣಗಳಿವೆ. ಜನಪದ ಮಹಾಕಾವ್ಯಗಳ ಅಧ್ಯಯನ ಆರಂಭವಾದುದು ರೊಮ್ಯಾಂಟಿಕ್ ಯುಗದಲ್ಲಿ, ತಮ್ಮ ದೇಶಾಭಿಮಾನವನ್ನು ಎತ್ತಿ ಹಿಡಿಯಲು, ತಮ್ಮವರನ್ನು ಒಗ್ಗೂಡಿಸಲು, ತಮ್ಮ ಪರಂಪರೆಯ ಭವ್ಯತೆಯನ್ನು ನಿಚ್ಚಳವಾಗಿ ಎತ್ತಿ ತೋರಿಸಲು ಜನಪದ ಮಹಾಕಾವ್ಯಗಳನ್ನು ಬಳಸಿಕೊಳ್ಳಲಾಯಿತು. ಜನಪದ ಮಹಾಕಾವ್ಯಗಳಿಗೆ ಪ್ರಾಮುಖ್ಯತೆ ಬಂದುದು ಈ ಕಾರಣಕ್ಕಾಗಿಯೇ. ಹಾಗೆಯೆ ಅವುಗಳ ಸಂಗ್ರಹಣೆ ಹಾಗೂ ಈ ರೀತಿಯಲ್ಲಿ ಅವನ್ನು ಬಳಸಿಕೊಳ್ಳಲು ಪ್ರಯತ್ನ ಪಟ್ಟದ್ದು ಜನಪದ ಮಹಾಕಾವ್ಯಗಳ ಕುರಿತ ಅಧ್ಯಯನಕ್ಕೆ ನಾಂದಿ ಹಾಡಿದಂತಾಗಿದೆ. ಜರ್ಮನಿಯ ತತ್ವಶಾಸ್ತ್ರಜ್ಞ ಹರ್ಡರ್‌ನ ರಮ್ಯ ರಾಷ್ಟ್ರೀಯವಾದ ಜನಪದ ಮಹಾಕಾವ್ಯಗಳ ಅಸ್ತಿತ್ವವನ್ನು ಗುರುತಿಸಲು ಮತ್ತು ಅದರ ಸಂಗ್ರಹಕ್ಕೆ ತೊಡಗಲು ಪ್ರೇರಣೆಯನ್ನು ನೀಡಿತು. ಆದರೆ ಜನಪದ ಮಹಾಕಾವ್ಯವೊಂದನ್ನು ಸಂಗ್ರಹಿಸಿ, ಸಂಪಾದಿಸಿ ಅದರ ಬಗ್ಗೆ ಅಧ್ಯಯನಗಳನ್ನು ನಡೆಸಿದವರು ಫಿನ್ಲೆಂಡಿನ ಜಾನಪದ ವಿದ್ವಾಂಸರು. ಫಿನ್ಲೆಂಡಿನ ಜನಪದ ಮಹಾಕಾವ್ಯ ಕಲೇವಾಲ ಜಗತ್ತಿನ ಇತರೆ ದೇಶಗಳ ಜನಪದ ಮಹಾಕಾವ್ಯಗಳ ಸಂಗ್ರಹ, ಸಂಪಾದನೆ ಹಾಗೂ ಅಧ್ಯಯನಗಳಿಗೆ ಪ್ರೇರಣೆಯನ್ನು ನೀಡಿದೆ. ಈ ಬಗೆಯ ಅಧ್ಯಯನ ಪೂರ್ವ ಯುರೋಪಿನ ದೇಶಗಳಲ್ಲಿ, ರಷ್ಯಾ, ಚೈನಾ, ಜಪಾನ್, ಆಫ್ರಿಕಾ, ದಕ್ಷಿಣ ಅಮೇರಿಕಾ ಹಾಗೂ ಭಾರತ ಮೊದಲಾದ ದೇಶಗಳಲ್ಲಿ ಮುಂದುವರಿದಿದೆ. ಸಾಹಿತ್ಯಾಧ್ಯಯನ ಕ್ಷೇತ್ರದಲ್ಲಿ ಬಹಳ ಕಾಲ ಶಿಷ್ಟ ಮಹಾಕಾವ್ಯಗಳನ್ನು ಮಾತ್ರ ಪರಿಗಣಿಸಿ, ಜನಪದ ಮಹಾಕಾವ್ಯಗಳನ್ನು ಕಡೆಗಣಿಸಲಾಗಿತ್ತು. ಆದರೆ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಶಿಷ್ಟ ಮಹಾಕಾವ್ಯಗಳಂತೆಯೇ ಜನಪದ ಮಹಾಕಾವ್ಯಗಳ ಅಧ್ಯಯನವೂ ಅಗತ್ಯ ಎಂಬ ತಿಳುವಳಿಕೆ ಮೂಡಿತು.

ಜನಪದ ಮಹಾಕಾವ್ಯ ಇದನ್ನು ಹಾಡುವ ಮತ್ತು ಕೇಳುವ ಜನರಲ್ಲಿ ಸಹಜವಾಗಿ ಇರುವಂತಹದಲ್ಲ, ಈ ಪರಿಕಲ್ಪನೆಯನ್ನು ಜಾನಪದ ವಿದ್ವಾಂಸರು ಶಿಷ್ಟ ಮಹಾಕಾವ್ಯಗಳ ಮಾದರಿಯಲ್ಲಿ ಅಧ್ಯಯನದ ಸಲುವಾಗಿ ರೂಪಿಸಿಕೊಂಡರು. ಇದು ಅವರು ರೂಪಿಸಿಕೊಂಡ ವಿಶ್ಲೇಷಣಾತ್ಮಕ ಪ್ರಕಾರ. ವಿದ್ವಾಂಸರು ಯಾವುದನ್ನು ಜನದ ಮಹಾಕಾವ್ಯ ಎನ್ನುತ್ತಾರೋ ಅದನ್ನು ಹಾಡುವವರು ಮತ್ತು ಕೇಳುವವರು ಹಾಡು, ಪದ, ಕಥೆ ಎಂದು ಕರೆಯುತ್ತಾರೆ. ಸಹಜವಾಗಿ ಇವರು ವರ್ಗಿಕರಿಸುವ ರೀತಿಯಲ್ಲಿ ಇದು ಸಾಂಸ್ಕೃತಿಕ ಪ್ರಕಾರ. (ಪು,172)

**ಜನಪದ ಮಹಾಕಾವ್ಯದ ಸ್ವರೂಪ**

ಜನಪದ ಮಹಾಕಾವ್ಯದ ಸ್ವರೂಪವನ್ನು ಸ್ಥೂಲವಾಗಿ ಈ ರೀತಿ ವಿವರಿಸಬಹುದು.

1. ಮೌಖಿಕ ಪರಂಪರೆಯಲ್ಲಿ ಯಾವ ಪ್ರಕಾರವೂ ಏಕ ಕರ್ತೃವಲ್ಲ. ಅಂತೆಯೇ ಮಹಾಕಾವ್ಯ ಕೂಡ. ಇದರ ಒಂದೊಂದು ಭಾಗವು ಸುದೀರ್ಘ ಎನ್ನಬಹುದಾದ ಅವಧಿಯಲ್ಲಿ ರಚಿತವಾಗಿ ನಿರಂತರ ಪುನರ್ ಸೃಷ್ಟಿ ಕಾರ್ಯಕ್ಕೆ ಗುರಿಯಾಗುವುದು ವಾಡಿಕೆ.
2. ಜನಪದ ಮಹಾಕಾವ್ಯ ಪ್ರಧಾನವಾಗಿ ಹಾಡುವಂಥದಾದುದರಿಂದ ಅದರ ಪ್ರದರ್ಶನ ಶ್ರೋತೃಗಳ ಸಮಕ್ಷಮದಲ್ಲೇ ಜರುಗಬೇಕು. ಹಾಡುಗಾರಿಕೆ ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲೆ ನಡೆಯುವುದು ರೂಢಿ. ಜಾತ್ರೆ ಉತ್ಸವ ಸಂದರ್ಭಗಳಲ್ಲಿ ಮಾತ್ರ ಹಗಲು ರಾತ್ರಿಯ ಭೇದವಿಲ್ಲದೆ ಪ್ರದರ್ಶನಗಳು ನಡೆಯುತ್ತವೆ.

ISBN – 978-93-5526-247-9

3. ಜನಪದ ಮಹಾಕಾವ್ಯಗಳು ಸುವಿಸ್ತಾರ ರಚನೆಗಳಾದ್ದರಿಂದ ಇವುಗಳ ಬಿಡಿ ಕಥಾನಕಗಳನ್ನಷ್ಟೆ ಹಾಡಿ ಪ್ರದರ್ಶನ ನೀಡುವುದು ಕ್ರಮ. ಇಲ್ಲಿ ಪ್ರದರ್ಶನದ ಸಂದರ್ಭ, ಹಾಡುಗಾರಿಕೆ ನಡೆಸಿಕೊಡುವವರ ಸಾಮರ್ಥ್ಯ ಹಾಗೂ ಶೋತೃಗಳ ಆಸಕ್ತಿ ಗಣನೆಗೆ ಬರುತ್ತದೆ.
4. ಈ ಮಹಾಕಾವ್ಯಗಳ ನಾಯಕರು ಸಾಂಸ್ಕೃತಿಕ ವೀರರಾಗಿದ್ದು ಒಂದು ಗೊತ್ತಾದ ಪ್ರದೇಶ ಮತ್ತು ಸಮಾಜಕ್ಕೆ ಸಂಬಂಧಿಸಿದವರು. ಈ ವೀರರಿಗೆ ಸಂಬಂಧಿಸಿದ ಅವಶೇಷಗಳು, ಸ್ಥಳೀಯ ಐತಿಹ್ಯಗಳು ಇವು ಆ ಪ್ರದೇಶದಲ್ಲಿ ಲಭ್ಯವಾಗಿರುವುದು. ಮೈಸೂರು, ಮಂಡ್ಯ, ಬೆಂಗಳೂರು ಪ್ರದೇಶಗಳಲ್ಲಿ ಮಲಯ ಮಾದೇಶ್ವರ, ಮಂಟೆಸ್ವಾಮಿ ಜನಪ್ರಿಯರೆನಿಸಿದರೆ ಬೆಳಗಾವಿ ಬಳ್ಳಾರಿ ಮತ್ತು ಗುಲಬರ್ಗಾಗಳಲ್ಲಿ ಮೈಲಾರಲಿಂಗ, ಧಾರವಾಡ ಬೆಳಗಾವಿ ಮತ್ತು ವಿಜಾಪುರಗಳಲ್ಲಿ ಏಳು ಕೊಳ್ಳದ ಎಲ್ಲಮ್ಮ ಹೀಗೆ ಪ್ರಾದೇಶಿಕ ಚೌಕಟ್ಟೊಂದು ಕಥಾ ನಾಯಕರ ಪ್ರಭಾವಕ್ಕೆ ಒಳಗಾಗಿದೆ. ಹೀಗಾಗಿ ಆಯಾ ಸಾಂಸ್ಕೃತಿಕ ಗುಂಪಿನ ವೀರರ ಕತೆ ಆಯಾ ಪ್ರದೇಶಕ್ಕಷ್ಟೆ ಸೀಮಿತವಾಗಿರುತ್ತದೆ. ಈ ದೃಷ್ಟಿಯಿಂದ ಮಹಾಕಾವ್ಯಗಳೆಲ್ಲ ಅವ್ಯಾಪಕ ಸಂಸ್ಕೃತಿಯ ಸೃಷ್ಟಿಗಳು ಎನಿಸಿಕೊಳ್ಳುತ್ತವೆ.
5. ಜನಪದ ಮಹಾಕಾವ್ಯಗಳು ಸಾಮಾನ್ಯವಾಗಿ ಬಿಡಿ ಪ್ರಸಂಗಗಳ ಕಥಾ ಗುಚ್ಛಗಳಾಗಿರುತ್ತವೆ. ಒಂದೊಂದು ಪ್ರಸಂಗವು ಒಂದೊಂದು ಬೈಠಕ್‌ಗೆ ಅಳವಡಿಸುವಷ್ಟು ದೀರ್ಘತೆಯನ್ನು ಹೊಂದಿದೆ. ಕತೆ ಮಾಡುವ ಸಂದರ್ಭದಲ್ಲಿ ಪಾಲ್ಗೊಳ್ಳುವ ಶೋತೃ ವರ್ಗ ಕೂಡ ಪ್ರತಿಯೊಂದು ಬೈಠಕ್‌ಗೂ ಬೇರೆಯಾಗುವ ಸಂಭವವಿರುತ್ತದೆ. ಈ ಕಾರಣಕ್ಕಾಗಿ ಮಹಾಕಾವ್ಯದ ಬಿಡಿ ಪ್ರಸಂಗಗಳು ಸ್ವತಂತ್ರ ಅಸ್ತಿತ್ವ ಪಡೆದು ತಮ್ಮಷ್ಟಕ್ಕೆ ತಾವು ಪರಿಪೂರ್ಣವಾಗಿರುತ್ತವೆ. ಮಲೆಯ ಮಾದೇಶ್ವರದ ಏಳು ಸಾಲುಗಳು, ಮಂಟೆಸ್ವಾಮಿಕಾವ್ಯದ ನಾಲ್ಕು ಸಂಧಿಗಳು ಪ್ರತೇಕ ಅಸ್ತಿತ್ವ ಹೊಂದಿರುವ ಸ್ವತಂತ್ರ ಕಥಾನಕಗಳೇ ಆಗಿವೆ. (ಪು,608)

“ಜನಪದ ಮಹಾಕಾವ್ಯಗಳು ವೀರರ ಸಾಹಸಗಳನ್ನು, ಧಾರ್ಮಿಕ ವ್ಯಕ್ತಿಗಳ ಸಾಧನೆಗಳನ್ನು ವಿವರಿಸುತ್ತವೆ. ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ವ್ಯಾಪ್ತಿಯಲ್ಲಿ ಕಡಿಮೆ ಇರುವ ಕಾವ್ಯಗಳನ್ನು ಖಂಡಕಾವ್ಯ ಎಂದು ಕರೆಯಬಹುದು. ಸಹಜ ಸ್ಥಿತಿಯಲ್ಲಿ ಇವು ಲಾವಣಿ ಚಕ್ರಗಳಾಗಿರುತ್ತವೆ. ನಿರ್ದಿಷ್ಟ ವೀರ ಆಯಾ ದೇಶದ, ಅಥವಾ ಸಾಂಸ್ಕೃತಿಕ ಗುಂಪಿನ ಹಿತರಕ್ಷಣೆಗಾಗಿ ವಿರೋಧಿಗಳೊಡನೆ ಸೆಣಸಿ ಪ್ರಾಣ ತ್ಯಾಗ ಮಾಡುತ್ತಾನೆ. ಅವನು ಸತ್ತ ನಂತರ ಅವನನ್ನು ದೇವತೆಯೆಂದು ಜನರು ಪೂಜೆ ಮಾಡುತ್ತಾರೆ. ಈ ದೇವತೆಗೆ ಹೊಂದಿಕೊಂಡಂತೆ ಕಾವ್ಯ ರೂಪುಗೊಳ್ಳುತ್ತದೆ. ಹಾಡುಗಾರನಿಂದ ಹಾಡುಗಾರನಿಗೆ ಈ ಕಾವ್ಯ ಬೆಳೆಯುತ್ತಾ ಬದಲಾಗುತ್ತಾ ಹೋಗುತ್ತದೆ. ಕಾವ್ಯ ದೀರ್ಘವಾಗಿದ್ದರೆ ಮಹಾಕಾವ್ಯದ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತವೆ. ಈ ದೇವತೆಯ ಪ್ರೀತ್ಯರ್ಥವಾಗಿ ಜಾತ್ರೆಗಳು ನಡೆಯುತ್ತವೆ. ಜಾತ್ರೆಗಳಲ್ಲಿ ನಡೆಯುವ ಆಚರಣೆಗಳಲ್ಲಿ ಈ ಕಾವ್ಯದ ಕೆಲವು ಭಾಗಗಳನ್ನು ಹಾಡುಗಾರರು ಹಾಡುತ್ತಾರೆ, ಇಲ್ಲವೆ ನಾಟಕೀಯ ರೀತಿಯಲ್ಲಿ ಈ ಪುರಾಣದ ಕಥೆಯನ್ನು ಪುನರಭಿನಯ ಮಾಡುತ್ತಾರೆ. ಹೀಗಾಗಿ ಜನಪದ ಮಹಾಕಾವ್ಯ ಆಯಾ ಸಾಂಸ್ಕೃತಿಕ ವರ್ಗದ ಅಥವಾ ದೇಶದ ಪುರಾಣವೇ ಆಗಿರುತ್ತದೆ. ಜಾನಪದದ ಯಾವುದೇ ಪ್ರಕಾರಕ್ಕಿಂತ ಜನರು ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ, ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಜನಪದ ಮಹಾಕಾವ್ಯದ ಎಲ್ಲಾ ಭಾಗಗಳನ್ನು ಜಾತ್ರೆಗಳಲ್ಲಿ ಸಮಗ್ರವಾಗಿ ಹಾಡುವುದಿಲ್ಲ. (ಪು.172,73)

**ಮಹಾಕಾವ್ಯದ ವೈಶಿಷ್ಟ್ಯತೆ**

ಮೌಖಿಕ ಮಹಾಕಾವ್ಯ ಕಂಠಸ್ಥ ಪರಂಪರೆಯ ಸಂದರ್ಭದಲ್ಲಿ ಜನ್ಮ ತಳೆದು ವೃತ್ತಿಗಾಯಕ ಪರಂಪರೆಯಿಂದ ಜೀವಂತವಾಗಿರುವ ಒಂದು ಕಾವ್ಯ ಪರಂಪರೆ. ಕಾಲ ಕ್ರಮೇಣ ಈ ಜನಪದ ಮಹಾಕಾವ್ಯ ಅಧ್ಯಯನದ ಅನುಕೂಲಕ್ಕಾಗಿ ಬರವಣಿಗೆಯಲ್ಲಿ ನಿಕ್ಷಿಪ್ತವಾಗಬಹುದಾದರೂ ಅಕ್ಷರ ಸಂಸ್ಕೃತಿಯಿಂದ ದೂರವಿರುವ ಬಹುಸಂಖ್ಯಾತ ಜನರಿಗೆ ಇದರ ಸಂವಹನ ಸಾಧ್ಯವಾಗುವುದು ಮೌಖಿಕ ಪರಂಪರೆಯ ಮೂಲಕವಾಗಿಯೇ. ಈ ಕಾರಣಕ್ಕಾಗಿಯೇ ಇಲ್ಲಿ ಪ್ರಸ್ತುತವಾಗುವ ಅಂಶಗಳೆಂದರೆ:

1. ಅರೆ ಐತಿಹಾಸಿಕ ಅಥವಾ ಅರೆ ಪೌರಾಣಿಕ ಸಂಗತಿಗಳನ್ನು ವಸ್ತುವಾಗಿ ಸ್ವೀಕರಿಸಿ ಕಥಾನಕವಾಗಿ ಬೆಳೆಸುವ ಕೌಶಲ.
2. ಇತಿಹಾಸವನ್ನು ಸುಧಾರಿಸುವ ನಿಟ್ಟಿನಲ್ಲಿ ಯುಕ್ತ ಆಧಾರಗಳನ್ನೊದಗಿಸಿ ಸಾಂಸ್ಕೃತಿಕ ಇತಿಹಾಸದ ಪುನಾರಚನೆಗೆ ಎಡೆ ಮಾಡಿಕೊಡುವ ಯತ್ನ.

ISBN – 978-93-5526-247-9

3. ಅತಿಮಾನುಷ ಪಾತ್ರಗಳ ಮೇಲುಗೈ
4. ಅಸಾಮಾನ್ಯ ಸಾಹಸ ಕೃತ್ಯಗಳು ಮೂರ್ತರೂಪ ತಳೆಯುವುದು.
5. ಆಗಿ ಹೋದ ಘಟನೆಯನ್ನು ಜೀವಂತ ಸ್ವರೂಪದಲ್ಲಿ ಸಾಮಾನ್ಯರ ಕಣ್ಣಿನಿಂದ ಕಟ್ಟಿ ಕೊಡುವ ಯತ್ನ
6. ಲೋಕ ಸಮಸ್ತವನ್ನು ಬೆರಗು ಗಣ್ಣಿನಿಂದ ನೋಡುವ ಲೋಕದೃಷ್ಟಿ

ಈ ಎಲ್ಲ ಕಾರಣಗಳಿಂದ ಜನಪದ ಮಹಾಕಾವ್ಯಗಳು ವಿಶಿಷ್ಟವೂ ಮಹತ್ವವು ಆಗಿ ತೋರಿಬರುತ್ತವೆ.

ಕನ್ನಡದಲ್ಲಿ ಸಂಗ್ರಹಗೊಂಡಿರುವ ಮಲೆಮಾದೇಶ್ವರ, ಮಂಟೆಸ್ವಾಮಿ, ಜುಂಜಪ್ಪ, ಮೊದಲಾದವು, ತುಳುವಿನ ಸಿರಿ, ಕೋಟಿ–ಚೆನ್ನಯ್ಯ ಈ ಬಗೆಯ ಸಹಜ ಜನಪದ ಮಹಾಕಾವ್ಯಗಳು. ಭಾರತದ ಇತರ ಭಾಷೆಗಳಲ್ಲಿ ಗೂಗಾ, ಢೋಲಾ, ಲೋರಿಕ್ ಚಂದಾ, ಅಣ್ಣನ್ಮಾರ್‌ಕಥೆ, ಕಾಟಮರಾಜು ಕಥಾ, ಪಾಬೂಜಿ, ಆಲ್ಹಾ, ದೇವ ನಾರಾಯಣ ಮೊದಲಾದ ಜನಪದ ಮಹಾಕಾವ್ಯಗಳಿವೆ. 5000 ಸಾಲುಗಳಿಂದ ಹಿಡಿದು 20000 ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ಸಾಲುಗಳಿರುವ ಜನಪದ ಮಹಾಕಾವ್ಯಗಳಿವೆ. ರಾಮಾಯಣ, ಮಹಾಭಾರತದ ಬಗ್ಗೆ ಭಾರತದ ವಿವಿಧ ಭಾಷೆಗಳಲ್ಲಿರುವ ಕಥನಗೀತೆಗಳನ್ನು ಕಲೇವಾಲ ಮಹಾಕಾವ್ಯದಂತೆ ಸಂಪಾದಿಸಿ ಪ್ರಕಟಿಸಿದರೆ ಅನೇಕ ಮಹಾಕಾವ್ಯಗಳು ಅಥವಾ ಖಂಡಕಾವ್ಯಗಳು ಲಭ್ಯವಾಗುತ್ತವೆ. ಹಾಗೆಯೇ ಪೌರಾಣಿಕ ಐತಿಹಾಸಿಕ ವ್ಯಕ್ತಿಗಳ ಬಗ್ಗೆ ಭಾರತದಲ್ಲಿ ಅನೇಕ ಜನಪದ ಮಹಾಕಾವ್ಯಗಳು ಲಭ್ಯವಾಗುತ್ತವೆ. ಈ ದಿಕ್ಕಿನಲ್ಲಿ ಸಂಗ್ರಹ ಹಾಗೂ ಅಧ್ಯಯನಗಳು ನಡೆಯುತ್ತಿದ್ದು ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರು ಈ ಕಾರ್ಯದಲ್ಲಿ ತೊಡಗಿದ್ದಾರೆ. ಪ್ರೊ.ಜಿ.ಶಂ.ಪರಮಶಿವಯ್ಯ ಡಾ.ಪಿ.ಕೆ ರಾಜಶೇಖರ, ಪ್ರೊ.ವಿವೇಕ ರೈ, ಡಾ.ಚಿನ್ನಪ್ಪಗೌಡ, ಪ್ರೊ. ತಂಗಿರಾಲು ವೆಂಕಟಸುಬ್ಬರಾವ್, ಪ್ರೊ. ಪಾಂಡೆ ಮೊದಲಾದ ದೇಶಿಯ ವಿದ್ವಾಂಸರು, ಪ್ರೊ. ಬ್ರೆಂಡಾಬೆಕ್, ಡಾ. ಸ್ಟೂವರ್ಟಬ್ಲಾಕ್ ಬರ್ನ, ಪ್ರೊ. ಲಾರಿಹಾಂಕೋ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿ ಸಂಪಾದಿಸಿದ್ದಾರೆ. ಯುರೋಪ್, ಅಮೇರಿಕಾ ದೇಶಗಳಲ್ಲಿ ಜನಪದ ಮಹಾಕಾವ್ಯಗಳನ್ನು ಹಾಡುವಜನರಿಲ್ಲ, ಆದರೆ ಭಾರತ ಚೈನಾ, ಆಫ್ರಿಕಾ ಮೊದಲಾದ ದೇಶಗಳಲ್ಲಿ ಜನಪದ ಮಹಾಕಾವ್ಯಗಳನ್ನು ಹಾಡುವ ಅನೇಕ ಹಾಡುಗಾರರು ಹಾಗೂ ಹಾಡುಗಾರ್ತಿಯರು ಇದ್ದಾರೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯ ತೀವ್ರಗತಿಯಲ್ಲಿ ನಡೆಯುವುದು ಅಗತ್ಯವಾಗಿದೆ, ಹಾಗೆಯೇ ವಿಭಿನ್ನ ದೃಷ್ಟಿಗಳಿಂದ ಇವುಗಳ ಅಭ್ಯಾಸವು ನಡೆಯಬೇಕು. (ಜಾನಪದಕೈಪಿಡಿಪು,173, 74).

**ಗ್ರಂಥಋಣ**

1. ಜಾನಪದ ಕೈಪಿಡಿ – ಸಂ. ಡಾ.ಎಚ್.ಜೆ ಲಕ್ಕಪ್ಪಗೌಡ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು
2. ಕನ್ನಡ ವಿಷಯ ವಿಶ್ವಕೋಶ – ಸಂ. ಡಾ. ಅರವಿಂದ ಮಾಲಗತ್ತಿ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ 2006

***

# 17. ಜನಪದ ಮಹಾಕಾವ್ಯಗಳ ರಾಚನಿಕ ಮತ್ತು ಸಂವಹನ ಸ್ವರೂಪ

**ಶಾಂತಕುಮಾರ**

ಜನಪದ ಮಹಾಕಾವ್ಯಗಳ ರಚನೆಗೆ ಸಂಬಂಧಿಸಿದಂತೆ ಅವುಗಳ ಶರೀರದ ಒಂದು ಸ್ಥೂಲವಾದ ರಚನಾ ಸ್ವರೂಪವನ್ನು ಹೇಳಲು ನನಗಿಲ್ಲಿ ಸಾಧ್ಯಾವಾಗಿದೆ. ಜನಪದ ಸಾಹಿತ್ಯದಲ್ಲಿ ಲಭ್ಯವಿರುವ ಕೆಲ ಬೃಹತ್ ಆಕಾರದ ಕಾವ್ಯಗಳಾದ **"ಮಲೆಯ ಮದೇಶರಕಾವ್ಯ", "ಶ್ರೀ ಮಂಟೇಸ್ವಾಮಿಕಾವ್ಯ", "ಜುಂಜಪ್ಪನಕಾವ್ಯ", "ಪಿರಿಯಾಪಟ್ಟಣದ ಕಾಳಗ"**ಇವು ದಕ್ಷಿಣ ಕರ್ನಾಟಕದಲ್ಲಿ ದೊರೆತ ದೊಡ್ಡ ಪ್ರಮಾಣದ ಕಾವ್ಯಗಳು. ಅದರಂತೆ ಉತ್ತರ ಕರ್ನಾಟಕದಲ್ಲಿ **"ಮೈಲಾರಲಿಂಗನ ಪದಗಳು", "ಕುಮಾರರಾಮ ಮತ್ತು ಕೃಷ್ಣಗೋಲ್ಲರ ಮಹಾಕಾವ್ಯ", "ಎಲ್ಲಮ್ಮ ಪರಶುರಾಮನ ಪದಗಳು"** ಹೀಗೆ ಉತ್ತರ ಕರ್ನಾಟಕದಿಂದ ಸುಮಾರು ಮೂರು ದೊಡ್ಡ ಕಾವ್ಯಗಳನ್ನು ಕಾಣಬಹುದು. ಈಗ ನಮ್ಮ ಮುಂದಿರುವ ಮೊದಲ ಪ್ರಶ್ನೆ ಎಂದರೆ ಈ ಮೇಲೆ ಉಲ್ಲೇಖಿಸಿದವುಗಳಲ್ಲಿ ಮಹಾಕಾವ್ಯಗಳು ಯಾವುವು? ಎಂಬುದು. ಇವೆಲ್ಲ ಒಂದು ದೃಷ್ಟಿಯಿಂದ ಪುರಾಣ ಮಹಾ ಕಾವ್ಯಗಳು. ಮಹಾಕಾವ್ಯದ ಮಟ್ಟಿಗೆ ಏರಬಲ್ಲವು ಯಾವುವು? ಅವುಗಳ ಗೊತ್ತುಗುರಿಗಳು ಏನು? ಮುಂತಾದವುಗಳ ಸಂಗತಿಗಳ ಕುರಿತು ವಿಚಾರ ಅವಲೋಕಿಸಬೇಕಾಗಿದೆ.

**ಜನಪದ ಮಹಾಕಾವ್ಯಗಳ ರಾಚನಿಕ ಮತ್ತು ಸಂವಹನ ಸ್ವರೂಪಗಳು ಅವು ಪ್ರಯೋಗಗೊಳ್ಳುವ ಸಾದ್ಯತೆಯನ್ನು ಅವಲಂಬಿಸಿವೆ :**

1. ಮೌಖಿಕ ಪರಂಪರೆಯಲ್ಲಿ ಒಂದು ಮಹಾಕಾವ್ಯವು ಸಂಪೂರ್ಣವಾಗಿ ಒಬ್ಬನಿಂದಲೇ ರಚಿತವಾಗಿರಲು ಸಾದ್ಯವಿಲ್ಲ. ಒಂದು ಕಾವ್ಯದ ಒಂದೊಂದೇ ಭಾಗಗಳು ಸುದೀರ್ಘವೆನ್ನಬಹುದಾದ ಅವಧಿಯಲ್ಲಿ ಸೃಷ್ಟಿಗೊಂಡು, ಮತ್ತೆ ನಿರಂತರವಾಗಿ ಪುನರ್ ಸೃಷ್ಟಿಗೊಳ್ಳುತ್ತ ಜೀವಂತವಾಗಿರುವ ಕಾವ್ಯಗಳಿವು.
2. ಇವು ಹಾಡುವ ಕಾವ್ಯಗಳಾದುದರಿಂದ ಶ್ರೋತೃಗಳು ಎದುರಿಗೆ ಇರಲೇಬೇಕು. ಹಗಲು ಉದ್ಯೋಗ, ರಾತ್ರಿ ಮಾತ್ರ ಹಾಡು ಕೇಳಲು ಜನಪದರಿಗೆ ಸಾಧ್ಯ. ವಿಶೇಷವಾಗಿ ಜಾತ್ರೆ, ಉತ್ಸವಗಳಂತಹ ಸಂದರ್ಭಗಳಾದರೆ ನಿರಂತರವಾಗಿ ಒಂದೆರಡು ಹಗಲೂ ರಾತ್ರಿಯೂ ಹಾಡು ಕೇಳಲು ಸಾಧ್ಯವಾಗಬಹುದು.
3. ಕಾವ್ಯದ ಧೀರ್ಘತೆಯನ್ನು ಗಮನಿಸಿದರೆ, ನಿರಂತರವಾಗಿ ಒಂದು ಕಾವ್ಯವು ಸಂಪೂರ್ಣವಾಗಿ ಒಂದು ಕಡೆಯಲ್ಲಿ ಪ್ರಯೋಗಗೊಳ್ಳಲು ಸಾದ್ಯವಾಗಲಾರದೆಂದೇ ಹೇಳಬೇಕು. ಇಲ್ಲಿ ಸಮಯ, ಹಾಡುಗಾರರ ಮಾನವ ಸಾಮರ್ಥ್ಯ, ಕೇಳುಗರ ಸಹನೆ, ಶ್ರದ್ಧೆಗಳು ಲೆಕ್ಕಕ್ಕೆ ಬರುತ್ತವೆ.
4. ಜನಪದ ಮಹಾಕಾವ್ಯದ ನಾಯಕರು ಒಂದೊಂದು ಧರ್ಮ, ಒಂದೊಂದು ಪ್ರದೇಶಕ್ಕೆ ಸಂಬಂಧ ಪಟ್ಟವರಾಗಿರುತ್ತಾರೆ. ಆ ಪ್ರದೇಶದಲ್ಲಿ ಅವರ ವಾಸಸ್ಥಳದ ಗುರುತುಗುಡ್ಡ, ಗವಿ, ಗುಡಿ–ಗುಂಡಾರಗಳಿದ್ದು ಜಾತ್ರೆ–ಉತ್ಸವಗಳು ನೆರವೇರುತ್ತಿರುತ್ತವೆ. ಮೈಸೂರು, ಮಂಡ್ಯ, ಬೆಂಗಳೂರು ಕಡೆಗಳಲ್ಲಿ "ಮಲೆಯ ಮಹಾದೇಶ್ವರ, ಮಂಟೇಸ್ವಾಮಿ" ಬೆಳಗಾವಿ, ಬಳ್ಳಾರಿ, ಕಲಬುರಗಿ ಜಿಲ್ಲೆಗಳಲ್ಲಿ "ಮೈಲಾರಲಿಂಗ" ಧಾರವಾಡ, ಬೆಳಗಾವಿ, ಬಿಜಾಪುರಗಳಲ್ಲಿ ಏಳುಕೊಳ್ಳದ ಎಲ್ಲಮ್ಮ ಹೀಗಾಗಿ ಆಯಾ ನಾಯಕರಕಥೆ ಅಷ್ಟೇ ಪ್ರದೇಶಕ್ಕೆ ಸೀಮಿತಗೊಂಡು ಪ್ರಸಾರವಾಗಿರುತ್ತದೆ. ಜೊತೆಗೆ ಕಾವ್ಯಕ್ಕೆ ಪ್ರಾದೇಶಿಕ ಭಾಷೆಯ ಹೊದಿಕೆಯೊಂದು ಇದ್ದೆ ಇರುತ್ತದೆ. ಆ ಭಾಗದಲ್ಲಿ ಆ ದೇವರ ಭಕ್ತ ಗಣವಿದ್ದು, ಹಾಡುಗರು ಮತ್ತು ಕೇಳುಗರು ಆ ಕಥಾನಾಯಕನಲ್ಲಿ ಶ್ರದ್ಧೆ ಉಳ್ಳವರಾಗಿರುತ್ತಾರೆ.
5. ಮಹಾಕಾವ್ಯದ ಹಾಡುಗಾರರನ್ನು ಒಂದು ಪ್ರಾಂತದಿಂದ ಸ್ಥಳಾಂತರಿಸಿ ಬೇರೊಂದು ಪ್ರಾಂತದಲ್ಲಿ ಹಾಡಲು ಹಚ್ಚಿದರೆ ಅದರ ರಚನಾ ಸಾಧ್ಯತೆಗಳನ್ನು ಮತ್ತು ಸಂವಹನ ಸಾಧ್ಯಗಳನ್ನು ಮೀರಿ ಅದು ಹೊರ ಬಂದಂತಾಗುತ್ತದೆ. ಶ್ರೋತೃಗಳಿಗೆ ಆ ಕಥೆ ತಿಳಿಯದು, ಅದರ ಬಗ್ಗೆ ಅವರ ಶ್ರದ್ಧೆ ಇರಲಾರದು, ಮೇಲಾಗಿ ಭಾಷಾ ತೊಡಕೂ ಕಾಣಿಸಿಕೊಳ್ಳುವುದು ಹೀಗಾಗಿ ಪ್ರಾದೇಶಿಕ ಬದಲಾವಣೆ ಜನಪದ ಮಹಾಕಾವ್ಯದ ರಾಚನಿಕ ಚೌಕಟ್ಟು ಮತ್ತು ಸಂವಹನ ಸಾಧ್ಯತೆಗಳ ಮೇಲೆ ವಿಪರೀತ ಪರಿಣಾಮ ಬೀರುತ್ತದೆ.

ಹೀಗೆ ಈ ಎರಡೂ ಸಂಗತಿಗಳು ಗೊತ್ತಾದ ಪ್ರದೇಶವನ್ನು ಅವಲಂಬಿಸಿರುತ್ತವೆ. ಹೀಗಾಗಿ ಹಾಡುಗಾರರು ಎಷ್ಟು ವೇಳೆ ನಿರಂತರವಾಗಿ **ಹಾಡಬಹುದು?** ಕೇಳುಗರು ಎಷ್ಟು ಸಮಯ ನಿರಂತರವಾಗಿ **ಆಲಿಸಬಹುದು? ಸಮಯ, ಸಂದರ್ಭ** ಮತ್ತು **ಸ್ಥಳ** ಈ ಐದು ಅಂಶಗಳನ್ನು ಗಮನಿಸಿಯೇ ಕಾವ್ಯದ ಭಾಗಗಳ ರಚನೆ ಮತ್ತು ಅದರ ಸಂವಹನ ಸ್ವರೂಪಗಳು ನಿರ್ಧಾರಗೊಳ್ಳುತ್ತವೆ.

ISBN – 978-93-5526-247-9

**ಪ್ರತ್ಯೇಕ ಕಥಾನಕಗಳ ಸೃಷ್ಟಿ :**

**"ಒಂದು ಬೈಠಕ್"** ಎಂದರೆ ನಾಲ್ಕರಿಂದ ಆರು ತಾಸು ಅರ್ಥಾತ್ ಒಂದು ಹಗಲು ಅಥವಾ ಒಂದು ರಾತ್ರಿ ಹಾಡಬಹುದಾದ ದೀರ್ಘತೆಯಲ್ಲಿ ಮಹಾಕಾವ್ಯದ ಒಂದೊಂದು ಸಂಧಿ ಅಥವಾ ಭಾಗಗಳು ರಚನೆಗೊಂಡಂತೆ ತೋರುತ್ತವೆ. ಹಾಜರಾದ ಶ್ರೋತೃಗಳಿಗೂ ಹಾಡು ಸ್ಪಂದಿಸಬೇಕೆಂದರೆ ಕಾವ್ಯ ಬಿತ್ತರಿಸುವ ಘಟನೆ ಮತ್ತು ಅದರ ರಚನೆ ಪರಿಪೂರ್ಣವಾಗಿರ ಬೇಕಾಗುತ್ತದೆ ಹೀಗಾಗಿ ಮಹಾಕಾವ್ಯದ ಕಥಾನಕಗಳು ಪ್ರತ್ಯೇಕ ಅಸ್ತಿತ್ವ ಪಡೆದು ತಮ್ಮಷ್ಟಕ್ಕೆ ತಾವು ಪರಿಪೂರ್ಣವಾಗಿರುತ್ತವೆ. ಉದಾಹರಣೆಗೆ: "ಜನಪದ ಹಾಲುಮತ ಮಹಾಕಾವ್ಯದಲ್ಲಿ ಆದಿಗೊಂಡನಚರಿತ್ರೆ, ಮಾಳಿಂಗರಾಯನ ಚರಿತ್ರೆ, ಬೀರೇಶ್ವರಚರಿತ್ರೆ ಮುಂತಾದವುಗಳು. **"ಶ್ರೀ ಮಂಟೇಸ್ವಾಮಿಕಾವ್ಯ"** ದ**ಧರೆಗೆದೊಡ್ಡವರ ವಚನ, ಸಿದ್ದಪ್ಪಾಜಿ ವಚನ, ಸಿದ್ದಯ್ಯಸ್ವಾಮಿ ವಚನ** ಹೀಗೆ ಪ್ರತ್ಯೇಕ ಪ್ರತ್ಯೇಕ ಕಥಾ ಭಾಗಗಳೇ ಇದ್ದು, ಇವುಗಳ ರಚನೆಯೂ ಪ್ರತ್ಯೇಕವಾಗಿಯೇ ಆಗಿರುತ್ತದೆ.

ಪ್ರತ್ಯೇಕ ಅಸ್ತೀತ್ವ ಹೊಂದಿದ ಈ ಕಥಾನಕಗಳ ವಿರಾಮಕ್ಕಾಗಿ ಕಾವ್ಯವನ್ನು ಅಲ್ಲಲ್ಲಿ ನಿಲ್ಲಿಸಲಾಗುತ್ತದೆ. ಉದಾಹರಣೆಗೆ: "ಜನಪದ ಹಾಲುಮತ ಮಹಾಕಾವ್ಯ"ದ ಕಥಾನಕಗಳಿಲ್ಲಿ ಮೊದಲಿಗೆ **"ಸ್ವಾಮಿ ನಮ್ಮಯ್ಯ ದೇವರು ಬಂದಾವ ಬನ್ನೀರೆ"** ಎಂದಿದ್ದರೆ ಮಧ್ಯದ ಮತ್ತು ಕೊನೆಯ ನಿಲುಗಡೆಗಳಲ್ಲಿ ಹೀಗೆ ಬರುತ್ತವೆ.

"ಇಲ್ಲಿಗೆ ಹರಹರಇಲ್ಲಿಗೆ ಸಿವಶಿವ
ಇಲ್ಲಿಗೆ ಇಂದೊಂದು ಸಂದೇಲೊ
ಸಂದಿನ ಪದಗಳು ವಂದಿಸಿ ಹೇಳುವೆ
ತಂದಿ ಮಾಳಿಂಗರಾಯನೋ
ದೇವರು ಬಂದಾವ ಬನ್ನಿರೇ"

**ಕಥಾನಕಗಳ ಗುಚ್ಛವೇ ಮಹಾಕಾವ್ಯ:**

ಬಿಡಿಬಿಡಿಯಾಗಿ ನಿರ್ಮಾಣಗೊಂಡ ಮತ್ತು ಪ್ರತ್ಯೇಕ ಪ್ರತ್ಯೇಕವಾಗಿಯೇ ಪ್ರಸಾರ ಹೊಂದಿದ ಕಥಾನಕಗಳೆಲ್ಲವೂ ಒಂದೇ ಕಾವ್ಯದ ಭಾಗಗಳು ಎಂದು ಸಂಗ್ರಹಿಸಲು ಅವುಗಳಲ್ಲಿ ಒಂದು ಸಾಮಾನ್ಯ ಪಾತ್ರ ಅಥವಾ ಸಾಮಾನ್ಯ ಸಂಗತಿ ಕಾಣಿಸುವುದು. ಉದಾಹರಣೆಗೆ: **ಮೈಲಾರಲಿಂಗನ ಕಾವ್ಯದಲ್ಲಿ–ಗಂಗಿಮಾಳಮ್ಮನ ಲಗ್ನ, ಕೋಮಾಲಿ, ರಡ್ಡೇರ** ನೀಲವ್ವಈ ಮುಂತಾದ ಕಥನ ಕಾವ್ಯಗಳು ಇವತ್ತಿಗೂ ಬಿಡಿಬಿಡಿಯಾದ ರೂಪದಲ್ಲಿ ಪ್ರಚಲಿತದಲ್ಲಿದ್ದು, ಅವೆಲ್ಲವುಗಳಲ್ಲಿ ಮೈಲಾರಲಿಂಗನ ಪಾತ್ರ ಸಾಮಾನ್ಯವಾಗಿ ಕಂಡುಬರುತ್ತದೆ. ಹೀಗೆ ಬಿಡಿ ಕಥಾನಕಗಳುನ್ನು ಒಂದೆಡೆ ಸಂಪಾದಿಸಿ ಮುದ್ರಿಸಿದರೆ, ಅದೊಂದು ಮಹಾಕಾವ್ಯದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಜನಪದ ಮಹಾಕಾವ್ಯದ ಶರೀರ ರಚನೆಯ ಶಿಥಿಲತೆಯನ್ನು ತೋರಿಸುತ್ತದೆ. ಇದು ಮಹಾಕಾವ್ಯ ರಚನೆಯ ವೈಶಿಷ್ಟವೂ ಹೌದು, ನ್ಯೂನತೆಯೂ ಹೌದು. ಇಲ್ಲಿ ಒಟ್ಟು ಕಾವ್ಯದ ಸಂವಹನ ಸಾಧ್ಯತೆ ನಿಶ್ಚಿತವಾದ ಪರಿಣಾಮ ಬೀರುವಲ್ಲಿ ಸಫಲತೆ ಸಾಧಿಸಲು ಸಾಧ್ಯವಾಗದ ಸ್ಥಿತಿಯೂ ಉಂಟಾಗುಬಹುದು. ಜನಪದ ಮಹಾಕಾವ್ಯವು ಕಾವ್ಯ – ನಾಯಕ ಪ್ರಧಾನವೆನಿಸದೆ ಧರ್ಮ ಪ್ರಧಾನ ಕಾವ್ಯವಾಗಿ ತೋರುತ್ತದೆ. ಹೀಗಾಗಿ **ಆದಿಗೊಂಡ, ಪದ್ಮಗೊಂಡ, ಮಳಿಂಗರಾಯ, ಬೀರಪ್ಪ** ಮುಂತಾದವರ ಕಥೆಗಳಲ್ಲಿ ತಮ್ಮ ಧಾರ್ಮಿಕ ಶ್ರೇಷ್ಠತೆಯನ್ನು ಹೆಳುವ ಉದೇಶ ಅವರದಾಗಿರುತ್ತದೆ. ಈ ಕಾವ್ಯದ ರಚನೆ ಹೆಚ್ಚು ವಾಸ್ತವಿಕ ವಿವರಗಳಿಂದ ಕೂಡಿರುತ್ತದೆ. ಉದಾಹರಣೆ: ಒಬ್ಬ ಹೆಣ್ಣು ಮಗಳು ನೀರಿಗೆ ಹೊರಟ ದೃಶ್ಯ, ಕುರಿದೊಡ್ಡಿಗೆ ಬಂದು ಮರಿಗೆ ಹಾಲುಣಿಸುವ ದೃಶ್ಯ, ಬೀರಣ್ಣ ಮತ್ತು ಮಾಯವ್ವರ ಕಥೆಯಲ್ಲಿ ಅಕ್ಕ – ತಮ್ಮರ ಸಂಬಂಧ ಮುಂತಾದ ತೀರ ಸಹಜ ವಾಸ್ತವ ವಿವರಣೆಯನ್ನು ನೀಡುತ್ತವೆ.

**ಜನಪದ ಮಹಾಕಾವ್ಯದಲ್ಲಿ ಕಾಣುವ ಕೆಲವು ಸಾಮಾನ್ಯ ಅಂಶಗಳು :**

ಜನಪದ ಮಹಾಕಾವ್ಯಗಳ ಶರೀರದ ಒಳಗಡೆ ಕೆಲ ಸಾಮಾನ್ಯವಾದ ರಾಚನಿಕ ವಿನ್ಯಾಸಗಳು ಒಳಗೊಂಡಿದ್ದನ್ನು ಹೀಗೆ ಗುರುತಿಸುತ್ತೆವೆ.

ISBN – 978-93-5526-247-9

1. ಸ್ತುತಿ ಮತ್ತು ಮಂಗಳ
2. ಪುನಾರಾವರ್ತನೆ
3. ರೂಪಾಂತರ
4. ಹೆಣ್ಣನ್ನು ಗೆಲ್ಲುವುದು
5. ನಾಯಕರ' ಅಲೆದಾಟ
6. ಜನಪದ ಕಥೆಗಳ ಸೇರ್ಪಡೆ

ಜನಪದ ಹಾಡುಗಾರಿಕೆ ಪ್ರಾರಂಭದಲ್ಲಿ ಸ್ತುತಿ, ಕೊನೆಯಲ್ಲಿ ಮಂಗಳ ಇರುವುದು ಸಾಮಾನ್ಯ ಮಹಾಕಾವ್ಯಗಳಲ್ಲಿ ಇವು ಕಾವ್ಯದ ರಚನೆಯ ಭಾಗಗಳಾಗಿರಬಹುದು ಅಥವಾ ಪ್ರತ್ಯೇಕ ಹಾಡುಗಳ ಬಳಕೆಯಾಗಬಹುದು. ಪುನಾರಾವರ್ತನೆಯ ಗುಣ ಜನಪದ ಕಾವ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಗುಣ. ಸೊಲ್ಲುಗಳಂತೂ ಪ್ರತಿ ಸಾಲಿಗೂ ಪುನರಾವರ್ತನೆಯಾಗುತ್ತವೆ. ಹಾಡುಗಾರಿಕೆಯಿಂದ ಬೇಸರ ಬರದೆ ವಿಶೇಷ ಜೀವಕಳೆ ತುಂಬುವ ರೀತಿಯಲ್ಲಿ ಪ್ರತಿಸಲ ವೈವಿಧ್ಯಮಯವಾದ ಗತಿ ವ್ಯತ್ಯಾಸಗಳಲ್ಲಿ ಹಾಡುವುದನ್ನು ಕೇಳುತ್ತೇವೆ. ಇಡೀ ಒಂದೊಂದು ದೃಶ್ಯಗಳ ಪುನರಾರ್ವತನೆಯಲ್ಲದೆ ಹಾಡುಗಾರಿಕೆಯಲ್ಲಿ ಸಾಲುಗಳ ಮತ್ತು ಪದಗಳ ಪುನರಾವರ್ತನೆಗಳು ಸಾಮಾನ್ಯ. ಇದೊಂದು ರೀತಿಯಲ್ಲಿ ಸನ್ನಿವೇಶ ಬೆಳೆಸುವ ಕಲಾತ್ಮಕ ತಂತ್ರವಾಗಿದೆ.

ಪಾತ್ರ ಪ್ರಧಾನವಾದ ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗ ಮುಂತಾದ ಕಾವ್ಯಗಳಲ್ಲಿ ರೂಪಾಂತರ ಕ್ರೀಯೆ ತೀರ ಸಾಮಾನ್ಯವಾಗಿ ಕಾಣಿಸಿಕೊಂಡು, ಇದೊಂದು ರೀತಿಯಲ್ಲಿ ಕಥಾ ಪುರುಷನ ಲೀಲೆ ಎಂಬಂತೆ ಭಾವಿಸಲಾಗುತ್ತದೆ. ಮೈಲಾರಲಿಂಗನ ಪ್ರತಿ ಕಥಾನಕದಲ್ಲಿಯೂ ಆತ ಗೊರವನ ವೇಷ ತೊಡುವ ದೃಶ್ಯ ಸಾಮಾನ್ಯವಾಗಿ ಕಾಣುತ್ತದೆ.

ಜನಪದ ಮಹಾಕಾವ್ಯಗಳಲ್ಲಿ ಹೆಣ್ಣನ್ನು ಅಪಹರಿಸುವುದಕ್ಕಿಂತ ಹೆಣ್ಣನ್ನು ಗೆಲ್ಲುವ ಸನ್ನಿವೇಶಗಳ ಪರಿಣಾಮಕಾರಿ ಚಿತ್ರಣಗಳನ್ನು ಕಾಣುತ್ತೆವೆ. ಮೈಲಾರಲಿಂಗನ ಮತ್ತು ಮಂಟೆಸ್ವಾಮಿಯ ಕಾವ್ಯಗಳಲ್ಲಿ ಇದು ಸಾಮಾನ್ಯ ಸಂಗತಿ. ನಾಯಕ ಪ್ರಧಾನ ಜನಪದ ಮಹಾಕಾವ್ಯಗಳಲ್ಲಿ ನಾಯಕರು ಸದಾ ಅಲೆದಾಡುತ್ತಲೇ ಇರುತ್ತಾರೆ. ನಾಯಕರ ಮಹಿಮೆ, ಲೀಲೆ ಮುಂತಾದವುಗಳನ್ನು ಹೇಳುವ ಮಂಟೇಸ್ವಾಮಿ, ಮಲೆಯ ಮಾದೇಶ್ವರ, ಮೈಲಾರಲಿಂಗನಂಥ ಪಾತ್ರಗಳು ಸದಾ ಅಲೆದಾಡುತ್ತಲೇ ಇರುತ್ತವೆ, ಅಲೆದಾಟದ ಉದ್ದೇಶ ತಮ್ಮ ಲೀಲಾ ಸದೃಶ್ಯ ಮಹಿಮೆಗಳನ್ನು ತೋರುವುದು, ಭಕ್ತರ ಬಳಗ ಹೆಚ್ಚಿಸುವುದು, ತಮ್ಮ ವ್ಯಕ್ತಿತ್ವದ ಪ್ರಭಾವವನ್ನು ಬೆಳೆಸುವುದು ಇವು ಎಲ್ಲಕಡೆ ಸಾಮಾನ್ಯವಾಗಿರುತ್ತವೆ.

ಜನಪದ ಮಹಾಕಾವ್ಯದ ಕೆಲ ಭಾಗಗಳಲ್ಲಿ ಜನಪದ ಕಥೆಗಳು ಅಥವಾ ಕಥನದ ಆಶಯಗಳು ಸೇರಿಕೊಂಡಂತೆ ತೋರುತ್ತವೆ. ಇಲ್ಲಿ ಜನಪದ ಕಥೆಗಳು ಮಹಾಕಾವ್ಯದ ಶರೀರದಲ್ಲಿ ಸೇರಿಕೊಂಡಿವೆಯೋ ಅಥವಾ ಕಾವ್ಯಭಾಗಗಳೇ ಸಿಡಿದು ಜನಪದ ಕಥೆಗಳಾಗಿವೆಯೋ ಈ ಬಗೆಗೆ ನಮ್ಮ ಅಭ್ಯಾಸ ಮುಂದುವರೆಯಬೇಕು ಕೊನೆಯದಾಗಿ ಕಥೆಯಾವ ಪ್ರದೇಶದಲ್ಲಿ ಬಳಕೆಯಲ್ಲಿರುತ್ತದೋ ಆ ಪ್ರಾದೇಶಿಕ ಭಾಷೆ ಕಾವ್ಯಕ್ಕೆ ಸಹಜವಾಗಿ ಬರುತ್ತದೆ. ಮಂಟೇಸ್ವಾಮಿಕಾವ್ಯ ಹಾಗೂ ಮಲೆಯ ಮಹದೇಶ್ವರ ಕಾವ್ಯಕಥೆ ಮಾಡುವ ರೀತಿಯಲ್ಲಿದ್ದು. ಗದ್ಯ ಪ್ರಧಾನವಾಗಿ ಪದ್ಯ ಸಹಾಯಕವಾಗಿ ಬಂದಿದೆ. ಮೈಲಾರಲಿಂಗನ ಕಾವ್ಯ ಕೂಡ ಪೂರ್ಣ ಕಾವ್ಯದಲ್ಲಿದ್ದು ಇದು ಚೌಪದಿಯ ರೂಪದಲ್ಲಿದೆ.

**ಜನಪದ ಮಹಾಕಾವ್ಯ ನಾಯಕರ ಸಾಮಾನ್ಯ ವಿನ್ಯಾಸ :**

ಜನಪದ ಮಹಾಕಾವ್ಯಗಳ ನಾಯಕರ ಜೀವನವನ್ನು ಅವಲೋಕಿಸಿದ್ದಾಗ ಅವರ ಬದುಕು ಮತ್ತು ವ್ಯಕ್ತಿತ್ವದೊಂದಿಗೆ ಒಂದಿಷ್ಟು ಪೌರಾಣಿಕ ಅಂಶಗಳನ್ನು ಬೆರೆಸಿ ಹೇಳುವ ಪದ್ಧತಿ ಜನಪದರಲ್ಲಿದ್ದುದು ಸಾಮಾನ್ಯವಾಗಿ ತೋರುತ್ತದೆ. ಇದಕ್ಕೆ ಹಲವಾರು ಕಾರಣಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈ ನಾಯಕರು ತಮ್ಮ ಜನಗಳಿಗಾಗಿ ಯಾವುದೇ ಉಪದೇಶದಂತಹ ತಾತ್ವಿಕ ಮಾತುಗಳನ್ನು ಆಡಲಾರರು. ಆದರೆ ಅವರ ಬದುಕೇ ಒಂದು

ISBN – 978-93-5526-247-9

ಆದರ್ಶವಾಗಿದ್ದು ಅದಕ್ಕಾಗಿ ಜನರು ಅವರನ್ನು ದೇವರೆಂದೂ ಬೇಡಿದ್ದನ್ನು ಕೊಡುವ ಶಕ್ತಿ ಇಂಥವರಿಗೆ ಇರುವುದೆಂದೂ ನಂಬುತ್ತಾರೆ ಮತ್ತು ಪೂಜಿಸುತ್ತಾರೆ. ಈ ನಂಬುಗೆಗಳೇ ಕಾರಣವಾಗಿ ಅನೇಕ ಪೌರಾಣಿಕ ಸಂಗತಿಗಳನ್ನು ಸೃಷ್ಟಿಸುತ್ತಾರೆ. ಈ ಪೌರಾಣಿಕ ಸಂಗತಿಗಳ ಮಹತ್ವವೆಂದರೆ ತಮ್ಮ ದೈವವನ್ನು ಅವರ ವ್ಯಕ್ತಿತ್ವವನ್ನು ಇನ್ನಷ್ಟು ಬೆಳಗಿಸುವುದು ; ವರ್ತಮಾನ ಮಹತ್ವವನ್ನು ಬಿತ್ತರಿಸುವುದು. ಇವುಗಳ ಜೊತೆ ಈ ಕೆಲವು ಅಂಶಗಳನ್ನು ಗುರುತಿಸಿಕೊಳ್ಳುವ ಅಗತ್ಯ ಇರುತ್ತದೆ.

1. ತಾವು ದೈವವೆಂದು ಸ್ವೀಕರಿಸುವ ನಾಯಕನ ವ್ಯಕ್ತಿತ್ವವು ಇತರ ಜನಾಂಗದ ನಾಯಕರಿಗಿಂತ ಕಡಿಮೆ ಎನಿಸಬಾರದು.
2. ಮುಖ್ಯವಾಗಿ ಈ ನಾಯಕರು ದುಷ್ಟ ವ್ಯಕ್ತಿಗಳನ್ನು, ಸಂಗತಿಗಳನ್ನು ಎದುರಿಸುವಾಗ ಯಾವುದೇ ತೊಂದರೆಗೆ ಸಿಲುಕಬಾರದು ಅವೆಲ್ಲಾ ನಿರಾಯಾಸವಾಗಿ ದೂರವಾಗಬೇಕು.
3. ಇಂತಹ ವ್ಯಕ್ತಿಗಳು ಅದ್ಭುತ ಅಸಾಮಾನ್ಯ ಎನಿಸುವಂತಿರಬೇಕು.

ಇಂತಹ ನಾಯಕರನ್ನು ಚಿತ್ರಿಸಿಕೊಳ್ಳುವ ಸಂದರ್ಭದಲ್ಲಿ ಜನಪದರು ಇಟ್ಟುಕೊಳ್ಳುವ ಸಾಮಾನ್ಯ ರಾಚನಿಕ ಸಂಗತಿಗಳೆಂದರೆ.

1. **ದೈವದ ಅನುಗ್ರಹದಿಂದ ಗರ್ಭದಲ್ಲಿ ಮೂಡುವುದು.**
2. **ಅಯೋನಿಜ ಮತ್ತು ಮೃತ್ಯುಂಜಯನಾಗುವುದು.**
3. **ಸಮಾಜಮುಖಿ ಬೆಳವಣಿಗೆ ಹೊಂದುವುದು**
4. **ರೌದ್ರವತಾರಿ– ವೀರಯೋಧನಾಗುವುದು.**

ಜನಪದ ಮಹಾಕಾವ್ಯದ ನಾಯಕರಾದ ಬೀರಪ್ಪ ಮತ್ತು ಕಾಳಿಂಗರಾಯ, ಜುಂಜಪ್ಪನಕಾವ್ಯದ ಜುಂಜಪ್ಪ, ಮಲೆಯ ಮಹಾದೇಶ್ವರ, ಮಂಟೇಸ್ವಾಮಿ ಇವರೆಲ್ಲರ ವ್ಯಕ್ತಿತ್ವ ರಚನೆಯಾಗಿರುವುದು ಈ ಮೇಲೆ ಸೂಚಿಸಿದ ಐದು ಅಂಶಗಳಿಂದ ಹಾಗಾಗಿಯೆ ಜನಪದ ಮಹಾಕಾವ್ಯದ ರಾಚನಿಕದ ವಿಷಯ ವಸ್ತು ಹಾಗೂ ಅವುಗಳ ಸಂವಹನದ ಸ್ವರೂಪದ ಅರಿವು ಮುಖ್ಯವಾದದ್ದು.

**ಪರಾಮರ್ಶನಗ್ರಂಥಗಳು ;–**

1.ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ – ಭಾಗ1 – ಪಿ.ಕೆ. ರಾಜಶೇಖರ
2.ಜನಪದ ಸಾಹಿತ್ಯ ರೂಪಗಳು – ಡಾ. ರಾಗೌ
3.ಜಾನಪದ ಅಧ್ಯಯನ– ದೇಜವರೇಗೌಡ
4. ಜನಪದಕಾವ್ಯ ಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು–ಡಾ. ವೀರಣ್ಣದಂಡೆ
4.ಜಾನಪದ ಸಮೀಕ್ಷೆ ವಿಶ್ಲೇಷಣೆ – ಡಾ. ತಿ ನಂ ಶಂಕರನಾರಯಣ

***

## 18. ಜನಪದ ವೃತ್ತಿಗಾಯಕರು: ಕಂಸಾಳೆಯವರು

ಲಕ್ಷ್ಮಿದೇವಿ.ಎನ್

ವಸಾಹತೀಕರಣದ ಸಂದರ್ಭ ಭಾರತದಲ್ಲಿ ಜಾನಪದ ಸಾಹಿತ್ಯವನ್ನು ಹುಟ್ಟು ಹಾಕಿತ್ತೆಂದೆ ಹೇಳಬಹುದು. ಪ್ರಾರಂಭದಲ್ಲಿ ಜಾನಪದ ಅಧ್ಯಯನವು ರಾಷ್ಟ್ರೀಯ ಪ್ರಜ್ಞೆ, ದೇಶಾಭಿಮಾನ, ನಾಡು–ನುಡಿ, ನೆಲ, ಜಲ, ಸಂಸ್ಕೃತಿಯನ್ನು ಪ್ರಧಾನವಾಗಿ ಚಿಂತಿಸುತ್ತಿತ್ತು. ಅಲ್ಲದೆ ಭೂತಕಾಲದ ಮೌಲ್ಯಗಳನ್ನು ಎತ್ತಿ ಹಿಡಿಯುವುದು ಮತ್ತು ವರ್ತಮಾನದ ತಲ್ಲಣಗಳನ್ನು ಅಭಿವ್ಯಕ್ತಿಸುವುದು ಅದರ ಮೂಲ ಚಿಂತನೆಯ ನೆಲೆಯಾಗಿತ್ತು. ಕರ್ನಾಟಕದ ಜಾನಪದ ಪ್ರಕಾರಗಳಲ್ಲಿ ನೃತ್ಯಪ್ರಕಾರವು ಒಂದು. ನೃತ್ಯ ಮತ್ತು ಗಾಯನ ಜಾನಪದ ಸಂಪತ್ತಿನ ಒಂದು ಭಾಗ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕೊಡಗು, ದಕ್ಷಿಣ ಕನ್ನಡಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಲವು ಜನಪದ ವೃತ್ತಿಗಾಯಕ ಪರಂಪರೆಯನ್ನು ನೋಡಬಹುದು. ಅದರಲ್ಲಿ ದಕ್ಷಿಣ ಕರ್ನಾಟಕದ ಜನಪದ ವೃತ್ತಿ ಗಾಯಕರಲ್ಲಿ ಕಂಸಾಳೆಯು ಒಂದು ಜನಪದ ಮಹಾಕಾವ್ಯಗಳ ಕಲಾಪ್ರಕಾರ.

ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ ತಲೆಮಾರುಗಳಿಂದ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಜ್ಞಾನವೇ ಜಾನಪದ. ಮನುಷ್ಯನ ಬದುಕನ್ನು ತೀವ್ರ ಸಂವೇದನೆಗೊಳಗಾಗಿಸುವ ಹುಟ್ಟು, ಸಾವು, ಇವುಗಳ ನಡುವೆ ಅವನಿಗೆ ಉಂಟಾಗುವ ನಾನಾ ತರಹದ ಅನುಭವಗಳಿಗೆ ಒಂದು ಜನಾಂಗ ತನ್ನ ನಂಬಿಕೆ, ಆಚರಣೆ, ಸಂಪ್ರದಾಯ, ಮೂಢನಂಬಿಕೆ, ವೃತ್ತಿ ಮುಂತಾದವನ್ನು ಚಲನೆಯ ಮೂಲಕ ಅಭಿವ್ಯಕ್ತ ಪಡಿಸುವ ಪ್ರಕ್ರಿಯೆ ಗಾಯನ ಮತ್ತು ನೃತ್ಯ. ಈ ರೀತಿ ಅಭಿವ್ಯಕ್ತ ಪಡಿಸುವ ಗಾಯನ ಮತ್ತು ನೃತ್ಯ ಕಲೆಗಳಲ್ಲಿ ಕರ್ನಾಟಕದ ಜನಪದ ಕಲೆ ಕಂಸಾಳೆಯು ತನ್ನದೇ ಆದಂತಹ ಅನನ್ಯತೆಯನ್ನು ಹೊಂದಿದೆ. ಶಿವ ಮತ್ತು ಶರಣರ ಮಹಿಮೆಯನ್ನು ಕಥಾರೂಪದಲ್ಲಿ ಹಾಡುತ್ತಾ ಒಂದು ವಿಶಿಷ್ಟವಾದ ಜಾನಪದ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿರುವ ಈ ಕಲಾ ಪ್ರಕಾರ ಕಂಸಾಳೆಯು ಒಂದು ಜನಾಂಗವನ್ನೇ ತನ್ನತ್ತ ಸೃಷ್ಠಿಸಿಕೊಂಡಿದೆ.

ಜಾನಪದ ಸತ್ವವುಳ್ಳ ಕಥನಗೀತೆ, ಕಂಚಿನತಾಳ, ವಿಶಿಷ್ಟವಾದ ಶಬ್ದ, ಕಲಾವಿದರ ಕೈಚಳಕ ಇವುಗಳ ಸುಂದರ ಸಮ್ಮಿಲನದಿಂದ ವಿಸ್ಮಯಕಾರಿಯಾಗಿ ಜನಮನವನ್ನು ತಣಿಸಿ ರೋಮಾಂಚನವನ್ನು ಶ್ರವಣಕ್ಕೆಆ  ನಂದವನ್ನುಉಂಟು ಮಾಡುತ್ತದೆ. ಇದು ಮಹದೇಶ್ವರನ ಭಕ್ತ ವೃಂದದವರಿಂದ ಪ್ರಾರಂಭಿಸಲ್ಪಟ್ಟ ಜಾನಪದ ಕಲೆ ಕಂಸಾಳೆ. ಕಂಚಿನತಾಳವೇ ಕಂಸಾಳೆಯಾಯಿತು. ಕೈತಾಳ, ಕೌಸಳೆ, ಬಟ್ಲು ಎಂಬುದಾಗಿ ಆಡುಭಾಷೆಯಲ್ಲಿ ಕರೆಯುತ್ತಾರೆ. ಕಂಸಾಳೆಯು ಕಂಚಿನಿಂದ ತಯಾರಿಸಿದ ತಾಳವಾಗಿರುವುದರಿಂದ ಹಾಗೂ ಮಧ್ಯೆ ದಾರಕಟ್ಟಿರುವ ಅಂಗೈ ಅಗಲದ ಒಂದು ಬಟ್ಟಲು ಎಡ ಕೈಗೆ ಇನ್ನೊಂದು ಮಟ್ಟಸವಾದ ತಾಳ. ಮುಚ್ಚಳದ ನಡುಭಾಗ ಬಿಟ್ಟಿದ್ದು ಅದರ ರಂಧ್ರದ ಮೂಲಕ ದಾರವೊಂದನ್ನು ಬಿಗಿದು ಅದನ್ನು ಗೊಂಡೆಗಳಿಂದ ಅಲಂಕಾರಮಾಡಿ ಇಳಿಬಿಡುತ್ತಾರೆ. ಸಾಮಾನ್ನವಾಗಿ ಇದು ಬಲಗೈ ಮೇಲಿಂದ ಇಳಿ ಬಿದ್ದಿರುತ್ತದೆ.

ಕಂಸಾಳೆ ಪದದ ನಿಷ್ಪತ್ತಿಯ ಬಗೆಗೆ ಹಲವು ಚರ್ಚೆಗಳಿವೆ. ಕಾಂಸ್ಯ ಅಂದರೆ ಕಂಚು ತಾಳವೇ ಕಂಸಾಳೆಯಾಗಿದೆ. ಇದಕ್ಕೆ ಕೇಶಿರಾಜನು "ಪೂರ್ವಪದಾಂತಕ್ಕೆ ಧೀರ್ಘಮುಂ ಉತ್ತರಪದಾದಿಗೆ ಲೋಪಮುಮಾಗಿ ಕಾಂಸ್ಯತಾಳಕ್ಕೆಕಂಸಾಳಂಎಂದಾಯ್ತು" ಎಂದು ಸೂತ್ರ 208ರಲ್ಲಿ ವಿವರಣೆ ನೀಡಿದ್ದಾನೆ. ಕಂಸಾಳೆ ಮಲೆಮಹಾದೇಶ್ವರನ ಭಕ್ತರಾದ ದೇವರಗುಡ್ಡರು ಬಳಸುವಂತಹ ಒಂದು ವಿಶಿಷ್ಠ ಬಗೆಯ ವಾದ್ಯ. ಹರಿಹರನ "ಗಿರಿಜಾಕಲ್ಯಾಣ", ವಿರೂಪಾಕ್ಷಪಂಡಿತನ "ಚನ್ನಬಸವಪುರಾಣ"ಗಳಲ್ಲಿ, ರಾಘವಾಂಕನ "ಸಿದ್ಧರಾಮಚಾರಿತ್ಯ", ಭೀಮಕವಿಯ "ಬಸವಪುರಾಣ", ಗೋವಿಂದವೈದ್ಯನ"ಕಂಠೀರವ ನರಸರಾಜ ವಿಜಯಂ" ಕೃತಿಗಳಲ್ಲಿ ಕೌಸಾಳ, ಕಂಸತಾಳ, ಕಾಂಸಾಳ, ಕೈತಾಳ ಎಂಬ ಪ್ರಯೋಗಗಳು ಬಂದಿವೆ. ಕಂಸಾಳೆ ಕಲಾವಿದರು ಪ್ರಮುಖವಾಗಿ ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ವಿರಳವಾಗಿ ಕಂಡು ಬರುತ್ತಾರೆ.

ದೀಕ್ಷೆಯನ್ನು ಪಡೆಯುವ ಕಂಸಾಳೆಯವರು ಧೀಕ್ಷೆ ಪಡೆದ ನಂತರ ಇವರನ್ನು ಗುಡ್ಡರು, ಕೈಸಾಳೆಯವರು, ಕಂಸಾಳೆಯವರು ಎಂದು ಕರೆಯುವರು. ಒಕ್ಕಲಿಗರು, ಗಂಗಾಮತಸ್ಥರು, ಹರಿಜನರು, ಕುರುಬರು, ಉಪ್ಪಲಿಗರು,

ISBN – 978-93-5526-247-9

ಮಡಿವಾಳರು ಮಾದೇಶ್ವರನ ಗುಡ್ಡವರಾಗುತ್ತಾರೆ. ದೀಕ್ಷೆ ಪಡೆಯುವ ಗಂಡಸರನ್ನು ಗುಡ್ಡರೆಂದು, ಹೆಂಗಸರನ್ನು ಗುಡ್ಡಿಯರೆಂದು ಕರೆಯುವರು. ಗುಡ್ಡರು ಮಾಹದೇಶ್ವರನ ಕಥೆಯನ್ನು, ಗುಡ್ಡಿಯರು ಮಾಹದೇಶ್ವರನ ಬಿಡಿ ಹಾಡುಗಳನ್ನು ಹಾಡುವರು. ಹಬ್ಬ ಹರಿ ದಿನಗಳಲ್ಲಿ, ಶಿವರಾತ್ರಿ, ನವರಾತ್ರಿ ಕಾಲದಲ್ಲಿ ಮಹದೇಶ್ವರನ ಜಾತ್ರೆ ಸಂದರ್ಭದಲ್ಲಿ ಕೈಯಲ್ಲಿ ಕಂಸಾಳೆ ಹಿಡಿದು ಮಾದಯ್ಯನ ನಾಗ ಬೆತ್ತನ್ನು ಕಂಕುಳಲ್ಲಿಟ್ಟುಕೊಂಡು ಬುತ್ತಿಯ ಗಂಟನ್ನು ತಲೆಯ ಮೇಲಿಟ್ಟುಕೊಂಡು ಯಾತ್ರೆ ಹೊರಡುತ್ತಾರೆ. ಮಲೆಯ ಮಹದೇವನ ಜಾತ್ರೆಯು ಕಂಸಾಳೆಯ ಪ್ರದರ್ಶನ ಕೇಂದ್ರವಾಗುತ್ತದೆ. ಕಂಸಾಳೆಯ ಕಲಾವಿದರ ಗುಂಪುಗಳು ಅಲ್ಲಿ ಮೇಳ ನಡೆಸುತ್ತವೆ.

ಜನಪದ ವೃತ್ತಿ ಗಾಯಕರಾದ ಕಂಸಾಳೆಯವರಲ್ಲಿ ಎರಡು ಬಗೆ ಇದ್ದು,

- ಸಿರಿಯದೇವರಗುಡ್ಡರು
- ಅಲೆಮಾರಿಗುಡ್ಡರು

ಸಿರಿಯ ದೇವರ ಗುಡ್ಡರು ಪಾದರಕ್ಷೆಗಳನ್ನು ಹಾಕುವುದಿಲ್ಲ. ಸೋಮ, ಶುಕ್ರ, ಅಮಾವಸ್ಯೆಯಂದು "ಕ್ವಾರಣ್ಯಕಾಯಕ" ಅಂದರೆ ಭಿಕ್ಷೆಯ ಕಾಯಕ ಮಾಡುವರು. ದೀಕ್ಷೆ ಪಡೆದಿದ್ದರೂ ಮದುವೆಯಾಗುವ ಇವರು ಹಬ್ಬ ಉತ್ಸವ ದಿನಗಳಲ್ಲಿ ಮಾದೇಶ್ವರನ ದರ್ಶನ ಪಡೆಯುವರು. ಕಂಚನ್ನು ಮಾದೇಶ್ವರನಿಗೆ ಶ್ರೇಷ್ಠವೆಂದು ಭಾವಿಸುವ ಇವರು ಕಂಚಿನ ತಟ್ಟೆಯಲ್ಲಿ ಊಟವನ್ನು ಮಾಡುವುದಿಲ್ಲ. ಕಾರಣ ಎಂಜಲಾಗಿ ಮೈಲಿಗೆಯಾಗುತ್ತದೆ ಎನ್ನುವ ನಂಬಿಕೆ. ಅಲೆಮಾರಿಗುಡ್ಡರು ಹಬ್ಬ, ಉತ್ಸವಗಳಲ್ಲಿ ಮಾದೇಶ್ವರನ ದರ್ಶನ ಪಡೆದು ಸೇವೆ ಸಲ್ಲಿಸುವ ಇವರು ಮಾದೇಶ್ವರನ ಸಂಪೂರ್ಣ ಕಥೆಯನ್ನು ಹಾಡುವರು.

ಕಂಸಾಳೆ ಕುಣಿತಕ್ಕೆ ಪ್ರಾಚೀನ ಜನಪದರು ಕೊಟ್ಟಿರುವ ಹೆಸರು ಹುಲಿ ಹೆಜ್ಜೆ ಕುಣಿತ. ಹಿಂದೆ ಮಹದೇಶ್ವರನ ಬೆಟ್ಟಕ್ಕೆ ಭಕ್ತರು ದಟ್ಟ ಕಾಡಿನ ನಡುವೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಬೇಕಾಗಿತ್ತು. ಕ್ರೂರ–ಪ್ರಾಣಿಗಳಿಂದ ತಮ್ಮನ್ನು ರಕ್ಷಸಿಕೊಳ್ಳಲು ಗುಂಪು ಗುಂಪಾಗಿ ದುರ್ಗಮ ಹಾದಿಯಲ್ಲಿ ಹೋಗುವಾಗ ಪ್ರಾಣಿಗಳ ಭಯಕ್ಕೆ ದೊಡ್ಡ ದೊಡ್ಡ ಹೆಜ್ಜೆ ಹಾಕುತ್ತಾ ಕಂಚಿನ ತಾಳವನ್ನು ಬಡಿಯುತ್ತಾ ಮಹದೇಶ್ವರನ ಮಹಿಮೆ ಮತ್ತು ಕತೆಗಳನ್ನು ಹಾಡುತ್ತಾ ಸಾಗುತ್ತಿದ್ದರಂತೆ. ಹಲವಾರು ದಿನ ಅರಣ್ಯದಲ್ಲಿ ಸಂಚರಿಸುವಾಗ ತಾವು ತಂದ ಬುತ್ತಿಯನ್ನು ತಿಂದು ಮುಗಿಸಿದ ಮೇಲೆ ಭಿಕ್ಷಾಟನೆ ಮಾಡಬೇಕಾಗಿ ಬಂದಾಗ ಜನರನ್ನು ರಂಜಿಸಲು ಕಂಸಾಳೆ ಆಡುತ್ತಾ ಭಿಕ್ಷೆ ಬೇಡುತ್ತಿದ್ದರು. ಮಲೆಯ ಮಾದೇಶ್ವರನ ಕಂಸಾಳೆಯ ಸಂಪ್ರದಾಯದಲ್ಲಿ ಮಲೆಯ ಮಾದೇಶ್ವರನ ಕಾವ್ಯವು ಪ್ರಮುಖವಾದುದು. ಈ ಕಾವ್ಯವು ಏಳು ಸಾಲುಗಳಾಗಿ ಒಡೆದಿದ್ದು ಒಂದೊಂದು ಸ್ವತಂತ್ರವೆನ್ನುವಂತೆ ವಿಶಷ್ಟತೆಯನ್ನು ಪಡೆದಿದೆ.

ತಾಳುಗತೆ
ಶ್ರವಣದೊರೆಯ ಸಾಲು
ಜುಂಜೆಗೌಡನ ಸಾಲು
ಸುಂಕಮ್ಮನ ಸಾಲು
ಇಕ್ಕೇರಿ ದೇವಮ್ಮನ ಸಾಲು
ಸರಗೂರಯ್ಯನ ಸಾಲು
ಬೇವಿಹಟ್ಟಿಕಾಳಿಯ ಸಾಲು

ಕಂಸಾಳೆಯು ಕಲಾವಿದರ ಕೈಯಲ್ಲಿ ಹಿಡಿಯುವ ಒಂದು ಬಗೆಯ ವಾದ್ಯ ವಿಶೇಷ ಭಿಕ್ಷಾ ಪಾತ್ರೆಯಂತಿರುವ ಮಧ್ಯೆ ದಾರಕಟ್ಟಿದ ಅಂಗೈ ಅಗಲದ ಕಂಚಿನ ಲೋಹದ ಒಂದು ಬಟ್ಟಲು ಎಡಗೈಯಲ್ಲಿದ್ದರೆ, ಬಲಗೈಯಲ್ಲಿ ಮಟ್ಟಸವಾದ ತಾಳವಿರುತ್ತದೆ. ಮುಚ್ಚಳದ ನಡುವಿನ ಹೊರಭಾಗ ಉಬ್ಬಿರುತ್ತದೆ. ಆ ಉಬ್ಬಿನ ರಂಧ್ರದಿಂದ ಬಿಗಿದ ನೀಳವಾದ ದಾರಗೊಂಡೆಗಳಿಂದ ಆಲಂಕೃತವಾಗಿ ಬಲಗೈ ಮೇಲಿಂದ ಇಳಿ ಬಿದ್ದಿರುತ್ತದೆ. ಕಂಸಾಳೆಯ ಕಲಾವಿದರಲ್ಲಿ ಮಹದೇಶ್ವರನ ಬಾಲ್ಯ, ಬಾಲಲೀಲೆ, ಯೌವ್ವನ, ವಿನೋದ, ಮುಪ್ಪು, ಮಹಿಮೆಗಳು ಕಂಠಸ್ಥವಾಗಿ ನಿಂತಿವೆ. ಈ

ಕಾವ್ಯವನ್ನು ಇಡೀ ರಾತ್ರಿ ಹಾಡಿ ತಣಿಸುವ ಅವರ ಕಲೆಗಾರಿಕೆ ಮೆಚ್ಚುವಂತಹದ್ದು. ಇವರ ಕಲೆ ಜಾನಪದ ಕ್ಷೇತ್ರದ ದೊಡ್ಡ ನಿಧಿಗಳಲ್ಲೊಂದಾಗಿದೆ. ಈಗ ನಾಗರೀಕತೆ ಬೆಳೆದ ಮೇಲೂ ತನ್ನ "ಕಸುವುಕಂಪನ್ನು" ಉಳಿಸಿಕೊಂಡಿದೆ.
ಕಂಸಾಳೆ ಎಂಬ ವಿಶಿಷ್ಟ ಅಚ್ಚರಿಯ ಕಲೆಯಲ್ಲಿ ಎರಡು ವಿಧಗಳಿವೆ.

- ಕುಳಿತುಹಾಡುವಕಂಸಾಳೆ
- ಬೀಸುಕಂಸಾಳೆ (ಹುಲಿಹೆಜ್ಜೆಕುಣಿತ)

ಕುಳಿತು ಹಾಡುವ ಕಂಸಾಳೆಯಲ್ಲಿ ಮೂರರಿಂದ ಎಂಟು ಜನ ಭಾಗವಹಿಸುವುದುಂಟು. ಪ್ರಧಾನ ಹಾಡುಗಾರನು ಮಧ್ಯದಲ್ಲಿದ್ದು ಸಹ ಕಲಾವಿದರು ಸುತ್ತಲೂ ಇರುತ್ತಾರೆ. ವಾದ್ಯಕ್ಕೆ ತಕ್ಕಂತೆ ನಡೆಯುವಾಗ ಉಳಿದವರು "ಹೌದಪ್ಪಾಹೌದು" ಎಂದು ಹೇಳುವುದು ವಾಡಿಕೆ. ಒಬ್ಬ ಕಲಾವಿದರು ಒಂದು ಕಥೆಯನ್ನು ಹೇಳಿ ನಿಲ್ಲಿಸಿದಾಗ ಮತ್ತೊಬ್ಬ ಕಲಾವಿದನು ಮತ್ತೊಂದು ಕಥೆಯನ್ನು ಮುಂದುವರೆಸಿಕೊಂಡು ಹೋಗುವನು. ಇಂತಹ ಕಥಾ ನಿರೂಪಣೆಯು ಗದ್ಯ ಪದ್ಯ ಮಿಶ್ರಿತದಿಂದ ಕೂಡಿರುತ್ತದೆ. ಮೊದಲಿಗೆ ಗಣಪತಿ ಮತ್ತು ಸರಸ್ವತಿ ದೇವತೆಗಳನ್ನು ಸ್ತುತಿಸಿ, ಆ ನಂತರ ಮಾದೇಶ್ವರ ಮತ್ತು ಇತರ ದೇವತೆಗಳನ್ನು ಕಥೆಯ ಆರಂಭ ಮತ್ತು ಅಂತ್ಯದಲ್ಲಿ ಸ್ಮರಿಸುವುದು ಕಡ್ಡಾಯವಾಗಿರುತ್ತದೆ.

ಕಂಸಾಳೆಯ ಕಲಾ ಪ್ರಕಾರದಲ್ಲಿ ಬೀಸುಕಂಸಾಳೆ ವಿಶಿಷ್ಟವಾದುದು. ಬೀಸು ಕಂಸಾಳೆಯಲ್ಲಿ ತಾಳಕ್ಕೆ ಉದ್ದವಾದ ಅಂದರೆ ಸುಮಾರು0.45 ರಿಂದ 0.61ಮೀ. ಉದ್ದದ ದಾರವನ್ನು ಕಟ್ಟಿರುತ್ತಾರೆ. ಈ ದಾರವನ್ನು ಹಿಡಿದು ಬೀಸುತ್ತಾ ತಾಳ ಹಾಕುತ್ತಾ ನೃತ್ಯ ಮಾಡುವ ದೃಶ್ಯ ರೋಮಾಂಚನ ಉಂಟುಮಾಡುತ್ತದೆ. ತಾಳ ತಪ್ಪದೆ ನೃತ್ಯದ ಹೆಜ್ಜೆಯೂ ತಪ್ಪದಂತೆ ವಿಧ ವಿಧವಾದ ಕಸರತ್ತಗಳನ್ನು ಮಾಡುತ್ತಾ ನೀಡುವ ಪ್ರದರ್ಶನವನ್ನು ನೋಡಿದಷ್ಟು ಸಾಕೆನಿಸುವುದಿಲ್ಲ, ಬೀಸು ಕಂಸಾಳೆಗೆ ಅತ್ಯಂತ ಕುಶಲತೆ ಮತ್ತು ನಿರಂತರ ಅಭ್ಯಾಸ ಬೇಕಾಗುತ್ತದೆ. ವಿವಿಧ ಭಂಗಿಗಳಲ್ಲಿ ತಿರುಗುತ್ತ ಕಂಸಾಳೆಯನ್ನು ಬೀಸುತ್ತಿರುವಾಗ ಸ್ವಲ್ಪ ಲೆಕ್ಕಾಚಾರ ತಪ್ಪಿದರೂ ತಾಳ ತಪ್ಪಿ ಮೈಗೆ ಏಟು ಬೀಳುವ ಸಂದರ್ಭ ಹೆಚ್ಚಿರುತ್ತದೆ. ಕುಳಿತು ಹಾಡುವ, ನಿಂತು ಹಾಡುವ ಕಂಸಾಳೆ ಗಿಂತ ಬೀಸು ಕಂಸಾಳೆ ಕ್ಲಿಷ್ಟವಾದ ಕಲೆಯಾಗಿದೆ. ಅಲ್ಲದೇ ಅಷ್ಟೇ ಅದ್ಭುತ ಮತ್ತು ರೋಮಾಂಚಕಾರಿಯಾಗಿದೆ. ಬೀಸು ಕಂಸಾಳೆಯ ಪ್ರದರ್ಶನಕ್ಕೆ ನಾಲ್ಕು ಜನ ಬೇಕು. ಒಬ್ಬಾತ ಮಧ್ಯ ಇದ್ದು ತಾಳಕ್ಕೆ ತಕ್ಕಂತೆ ತಲೆಯ ಮೇಲೆ, ಬೆನ್ನ ಹಿಂದೆ, ಕಾಲು ಕೆಳಗೆ ಕುಳಿತು, ನಿಂತು, ಬಾಗಿ, ಬಳುಕಿ, ಉರುಳಾಡಿ, ಸುತ್ತ ನಿಂತ ಮೂವರಿಗೆ ತಾಳಗಳನ್ನು ಕೊಡುತ್ತಾ ನಿರ್ದಿಷ್ಟ ಲಯದಲ್ಲಿ ಬೀಸು ಕಂಸಾಳೆಯನ್ನು ಪ್ರದರ್ಶಿಸುತ್ತಾನೆ.

ಕಂಸಾಳೆಯವರನ್ನು ದೇವರಗುಡ್ಡರೆಂದು ಕರೆಯುತ್ತಾರೆ. ಮಹದೇಶ್ವರನ ಒಕ್ಕಲಲ್ಲಿ ಮನೆಗೊಬ್ಬ ಗುಡ್ಡನನ್ನು ಬಿಡುವುದು ಸಂಪ್ರದಾಯದಲ್ಲಿ ಕಡ್ಡಾಯ. ಅಷ್ಟೇ ಅಲ್ಲದೆ ಕಷ್ಟ ಪರಿಹಾರ ಕಂಟಕ ನಿವಾರಣೆಗೋಸ್ಕರವೇ ಮಹದೇವನಿಗೆ ಹರಿಕೆ ಹೊತ್ತು ಗುಡ್ಡನನ್ನು ಬಿಡುವುದು ಉಂಟು. ಮಕ್ಕಳಾಗದವರು ಹೆಣ್ಣು ಅಥವಾ ಗಂಡು ಮಕ್ಕಳನ್ನು ಗುಡ್ಡಿ ಅಥವಾ ಗುಡ್ಡ ಬಿಡುವುದು ಉಂಟು. ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳನ್ನು ಗುಡ್ಡಿ ಬಿಡುವುದು ಕಡಿಮೆಯಾಗಿದೆ. ಗುಡ್ಡಿಯಾದ ಹೆಣ್ಣು ಮಕ್ಕಳು ಮದುವೆಯಾಗುವಂತಿಲ್ಲ. ಇಷ್ಟವಿದ್ದರೆ ಗುಡ್ಡನನ್ನು ವರಿಸಬಹುದು. ಕಂಸಾಳೆ ನೃತ್ಯವನ್ನು ಮಲೆಮಹದೇಶ್ವರನ ಬೆಟ್ಟದ ಮೇಲಿರುವ ದೇವಸ್ಥಾನದ ರಥೋತ್ಸವ ಸಂದರ್ಭದಲ್ಲಿ ನೋಡಬಹುದು. ಮೂರು ದಿನಗಳ ಈ ಜಾತ್ರೆ ದೀಪಾವಳಿ ಸಮಯದಲ್ಲಿ ನಡೆಯುತ್ತದೆ. ಇದಲ್ಲದೆ ಮೈಸೂರು ಕರ್ನಾಟಕ ಭಾಗದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಉತ್ಸವಗಳಲ್ಲಿ ಕಂಸಾಳೆ ನೃತ್ಯ ನೋಡಬಹುದು. ಕನ್ನಡದ ಶಿವರಾಜ್‌ಕುಮಾರ ನಟನೆಯ "ಜನುಮದಜೋಡಿ" ಮತ್ತು "ಜೋಗಿ" ಚಲನಚಿತ್ರಗಳಲ್ಲಿ ಕಂಸಾಳೆ ನೃತ್ಯವನ್ನು ನೋಡಬಹುದು. "ಕಂಸಾಳೆಕೈಸಾಳೆ" ಚಲನಚಿತ್ರದಲ್ಲಿ ಕಂಸಾಳೆಯ ವೈಭವವನ್ನು ನೋಡಬಹುದು. ಕಂಸಳೆಯವರಿಗೆ ಇಂತಹುದೇ ವೇಷಭೂಷಣಗಳು ಇರಬೇಕೆಂಬ ನಿರ್ಬಂಧಗಳಿಲ್ಲ. ನಿತ್ಯದ ಅಂಗಿ, ಪಂಚೆ, ಹೆಗಲಿಗೆ ಜೋಳಿಗೆ, ಕೊರಳಿಗೆ ರುದ್ರಾಕ್ಷಿ, ಹಣೆಗೆ ವಿಭೂತಿ ಇರುತ್ತದೆ. ಕಂಸಾಳೆಯವರು ಮಲೆಯಮಾದೇಶ್ವರನ ಕಥೆಯನ್ನು ಅನೇಕ ರಾತ್ರಿಗಳವರೆಗೆ ಹಲವು ಕವಲುಗಳಲ್ಲಿ ಹಾಡಬಲ್ಲರು. ಗದ್ಯ ಪದ್ಯ ಮಿಶ್ರಿತ ಚಂಪು ರೀತಿಯ ಶೈಲಿಯಲ್ಲಿ ಮಾದೇಶ್ವರನ ಪವಾಡಗಳನ್ನು ಈ ಕಥೆಗಳು ರಮ್ಯವಾಗಿ ಚಿತ್ರಿಸುತ್ತವೆ. ತಾಳುಗಥೆ, ಶಂಕಮ್ಮನಕಥೆ, ಬೇವಿನ ಖಾಳಿಕಥೆ, ಜುಂಜೇಗೌಡನ ಕಥೆ ಇವೆಲ್ಲವೂ ಈ ಸಂಪ್ರದಾಯದ ಧಾರ್ಮಿಕಕಥೆಗಳು.

ISBN – 978-93-5526-247-9

ಕಂಸಾಳೆ ವೃತ್ತಿಗಾಯಕರಲ್ಲಿ ಬಹುದೊಡ್ಡ ಹೆಸರು ಕಂಸಾಳಿ ಮಹಾದೇವಯ್ಯನವರದು. ಇವರು ಕಂಸಾಳೆಯನ್ನು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕೊಂಡೊಯ್ದವರು, ಇವರ ತಂದೆ ನಂಜಯ್ಯ ನವರು ಕಂಸಾಳೆ ಕಲಾವಿದರಾಗಿದ್ದರು. 1950ರ ದಶಕದಲ್ಲಿ ಆಕಾಶವಾಣಿ ಆರಂಭಿಸಿದಾಗ ಮೊದಲ ಜನಪದ ಗೀತೆ ಕಂಸಾಳೆ ಮಹಾದೇವಯ್ಯನವರದು. 1974ರಲ್ಲಿ ಅಂತರಾಷ್ಟ್ರೀಯ ಜನಪದ ಕಲಾಮೇಳದಲ್ಲಿ ಭಾರತವನ್ನು ಪ್ರತಿನಿಧಿಸಿ ಇಟಲಿ, ಟರ್ಕಿ, ಸೈಪ್ರಸ್  ದೇಶಗಳಲ್ಲಿ ಕಂಸಾಳೆ ನೃತ್ಯವನ್ನು ಪ್ರದರ್ಶಿಸಿದರು. ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ ಕಂಸಾಳೆ ತಂಡವನ್ನು ಆಗಿನ ಪ್ರಧಾನಿ ಇಂದಿರಾಗಾಂಧಿ ಮತ್ತು ರಾಜೀವ್ ಗಾಂಧಿ ಮೆಚ್ಚಿಕೊಂಡಿದ್ದರು. ಮಹಾದೇವಯ್ಯನವರ ಕಂಸಾಳೆ ಪ್ರದರ್ಶನಗಳು ಕನ್ನಡ, ಹಿಂದಿ, ಇಂಗ್ಲೀಷ್ ಚಲನಚಿತ್ರಗಳಲ್ಲೂ ಬಳಸಿಕೊಳ್ಳಲಾಗಿದೆ. ಇವರ ಮಗ ಕುಮಾರಸ್ವಾಮಿ, ಮೊಮ್ಮಕ್ಕಳಾದ ರವಿಚಂದ್ರ, ಮಹದೇವಕೂಡ ಕಂಸಾಳೆ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕಂಸಾಳೆಯ ಕಲಾವಿದರು ಪಿರಿಯಾಪಟ್ಟಣದ ಲಾವಣಿ, ಸಾರಂಗ ಧರ, ಚೆನ್ನಿಗರಾಮ, ಘನಪತಿರಾಯ, ಬಾಲನಾಗಮ್ಮ, ಅರ್ಜುನ ಜೋಗಿ ಮುಂತಾದ ಜನಪದ ಕಥಾ ಪ್ರಸಂಗಗಳನ್ನೂ ಹಾಡುತ್ತಾರೆ.  ಈ ರೀತಿ ಜನಪದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬರುತ್ತಿರುವ ಕಂಸಾಳೆ ಜಾನಪದ ಕ್ಷೇತ್ರದ ದೊಡ್ಡ ನಿಧಿಗಳಲ್ಲೊಂದು. ಎಲ್ಲಾ ಕಲೆಗಳ ಬೇರು ಜನಪದ ಎಂಬ ಮಾತಿದೆ. ಹಳ್ಳಿಗಳ ಜನ ಜೀವನದ ಅವಿಭಾಜ್ಯ ಅಂಗವಾಗಿ ತನ್ನ ಸಂಸ್ಕೃತಿಯನ್ನು ಹರಡಿ ಬದುಕಿನ ಹಾಸುಹೊಕ್ಕಾಗಿ ಪ್ರತಿ ಸಂದರ್ಭದ ಆಚರಣೆಗೆ ಕಲಾತ್ಮಕವಾದಂತಹ ರೂಪವನ್ನು ಕೊಟ್ಟು ಮನಸ್ಸಿನ ಭಾವನೆ, ಆಶಯ, ತುಡಿತಗಳಿಗೆ ವಿಧ ವಿಧವಾದ ಆಕಾರ ವೇಷಗಳಿಂದ ಪ್ರದರ್ಶನಕ್ಕೆ ಸಜ್ಜಾಗುವುದೇ ಜಾನಪದ ಕಲೆಗಾರಿಕೆ. ಇಂತಹ ಜನಪದ ಕಲಾಗಾರಿಕೆ ಕಂಸಾಳೆ. ಮಹದೇಶ್ವರನ ಒಕ್ಕಲಿನಿಂದ ಪ್ರಾರಂಭವಾಗಿ, ಈ ಕಲಾ ತಂಡ ಜಗತ್ತಿನಾದ್ಯಂತ ಅಮೇರಿಕಾ, ಜರ್ಮನಿ, ಜಪಾನ್, ಆಸ್ಟ್ರೇಲಿಯಾ, ಸೌದಿರಾಷ್ಟ್ರಗಳು, ಏಷ್ಯಾದ ಪ್ರಮುಖ ರಾಷ್ಟ್ರಗಳು, ರಷ್ಯಾ, ಇಂಗ್ಲೇಂಡ್, ಇನ್ನೂ ಮುಂತಾದ ರಾಷ್ಟ್ರಗಳಲ್ಲಿ ತನ್ನ ಕಲಾ ಪ್ರದರ್ಶನವನ್ನು ನೀಡಿ ತನ್ನದೇ ಆದ ಪರಂಪರೆಯನ್ನು ಇಂದಿಗೂ ಉಳಿಸಿ ಬೆಳೆಸಿಕೊಂಡು ಹೋಗುತ್ತಿದೆ. ಇಂತಹ ಜಾನಪದ ಕಲಾ ಪರಂಪರೆಯ ನಾಡಿನಲ್ಲಿ ಜನಿಸಿದ ನಾವೇ ಧನ್ಯರು.

***

ISBN – 978-93-5526-247-9

# 19. ಜನಪದ ಮಹಾಕಾವ್ಯಗಳಲ್ಲಿ ಪ್ರಾಣಿ ಮತ್ತು ಪಕ್ಷಿ ಜಗತ್ತು

**ಮಂಜುನಾಥ.ಡಿ.ಕೆ.**

ಪ್ರಾಚೀನ ಕಾಲದಿಂದಲೂ ಮಂದಿಯಿಂದ ಮಂದಿಗೆ, ತಲೆಯಿಂದ ತಲೆಗೆ ಬಳುವಳಿಯೆಂಬಂತೆ ಸಾಗಿಬಂದು ಇಂದಿಗೂ ಬದುಕನ್ನು ಕಟ್ಟಿಕೊಂಡ ಜನಪದರ ನಾಲಿಗೆಯ ಮೇಲೆನಿತ್ಯ ನಲಿದಾಡುವ ನಂದ ಗೋಕುಲಗಳೇ ಜನಪದ ಮಹಾಕಾವ್ಯಗಳು. ಮಲೆಯ ಮಾದೇಶ್ವರ ಮಹಾಕಾವ್ಯ, ಮಂಟೇಸ್ವಾಮಿ ಮಹಾಕಾವ್ಯ, ದನಕಾಯುವ ಜುಂಜಪ್ಪನ ಮಹಾಕಾವ್ಯ, ಕುರಿಕಾಯುವ ಮೈಲಾರಲಿಂಗನ ಮಹಾಕಾವ್ಯ, ಚೌಡಿಕೆ ಎಲ್ಲಮ್ಮ, ಕುಮಾರರಾಮ ಹಾಗೂ ಕೃಷ್ಣಗೊಲ್ಲನ ಕಾವ್ಯ ಅಥವಾ ಸಿರಿಕಾವ್ಯ ಮೊದಲಾದವುಗಳು ದಿಟ ಬದುಕಿನಲ್ಲಿ ಇಲ್ಲದಿರುವುದರ ಕಡೆ ಮುಖ ಮಾಡಿದಂತಿವೆ.

ಪ್ರಾಣಿಗಳು ಹುಲ್ಲು ತಿಂದು ಹಾಲು ಕರೆದಂತೆ, ಕನ್ನಡ ನೆಲ ಲೋಕಕ್ಕೆ ನೀಡಿದ ಅಖಂಡ ಬ್ರಹ್ಮಾಂಡ ಕೊಡುಗೆಗಳೇ ಜನಪದ ಮಹಾಕಾವ್ಯಗಳು. ಮುಖ್ಯವಾಗಿ ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಮತ್ತು ಜುಂಜಪ್ಪನ ಮಹಾಕಾವ್ಯಗಳಲ್ಲಿ ಸಮಾನ್ಯ ಜನ ನಾಯಕರಾಗಿದ್ದಾರೆ ಇಲ್ಲಿ ಪಶು ಪ್ರಾಣಿ ಮತ್ತು ಪಕ್ಷಿಗಳೂ ಉನ್ನತ ಸ್ಥಾನ ಪಡೆಯಲು ಅವಕಾಶವಿದೆ ಎಂಬುದನ್ನು ನಾನು ಇಲ್ಲಿ ವಿವೇಚನೆಗೆ ತೆಗೆದುಕೊಂಡಿದ್ದೇನೆ.

ನಾನು ಆಯ್ದುಕೊಂಡಿರುವ ಮಹಾಕಾವ್ಯಗಳಲ್ಲಿ ಬರುವ ಸಾಂಸ್ಕೃತಿಕ ವೀರನಾಯಕರೆಲ್ಲ ನಿರಂತರವಾಗಿ ಪ್ರಾಕೃತಿಕ ಜೀವನಾನುಭವವೆಂಬ ಮಹಾವೃಕ್ಷಗಳ ನಡುವೆ ಸ್ವಚ್ಛಂದವಾಗಿ ಬದುಕಿದ್ದ ಪ್ರಾಣಿ ಪಕ್ಷಿಗಳನ್ನು ಮೇಲು ಕೀಳು ಎನ್ನದೆ ಸಾಕಿ ಸಲಹಿ, ಪಳಗಿಸಿ, ಒಲಿಸಿಕೊಂಡು, ಅವುಗಳನ್ನೇ ಸರ್ವಸ್ವವೆಂದು ತಿಳಿದು, ಅಕ್ಕರೆಯಿಂದ ಕಾಣಬಲ್ಲವರಾಗಿದ್ದರು. ಅವುಗಳು ತಮ್ಮ ಪ್ರಾಣ ನಾಡಿ ಎಂದು ತಿಳಿದು ಸಂಭ್ರಮದಿಂದ ಕುಣಿದಾಡಬಲ್ಲವರಾಗಿದ್ದರು.

ಸೃಷ್ಟಿಕರ್ತನು ಪ್ರಾಣಿ ಪಕ್ಷಿಗಳಿಗೆ ಜೀವ ಕೊಟ್ಟು ಸಾಕಾಯ್ತು ಎಂದು ಕೈಕಟ್ಟಿಕೂತ ಆದರೆ ಜನಪದರು ಮಹಾಕಾವ್ಯಗಳ ಮೂಲಕ ಸ್ಮರಿಸುತ್ತಾ ಆ ಪ್ರಾಣಿ ಪಕ್ಷಿಗಳಿಗೆ ಜೀವಕಳೆ ತುಂಬಿದರು ಎಂಬುದಕ್ಕೆ ಮಲೆಯ ಮಾದೇಶ್ವರ, ಮಂಟೇಸ್ವಾಮಿ, ಮತ್ತು ಜುಂಜಪ್ಪನ ಮಹಾಕಾವ್ಯಗಳ ಸಂಪಾದನೆಯಲ್ಲಿ ಸೆರೆಯಾಗಿರುವ ಮೌಖಿಕ ಮಹಾಸಾಲುಗಳೇ ಇದಕ್ಕೆ ಸಾಕ್ಷಿ.

**ಮಲೆಯ ಮಾದೇಶ್ವರ** ಮಹಾಕಾವ್ಯದಲ್ಲಿ ನಮ್ಮ ಜನಪದ ಜಗದ್ಗುರು ಮಾದಪ್ಪ ಗಂಡುಲಿಮ್ಯಾಲೆ ಕುಂತು ಬ್ಯಾಟೆಯನಾಡಿ ಬಂದು ಆನೆ ತಲದಿಬ್ಬಕ್ಕೆ ಬಂದು ನಿಂತು ಹನ್ನೆರಡು ಆನೆಗಳನ್ನು ಒಂದರ ಮೇಲೊಂದರಂತೆ ಆ ದಿಬ್ಬದ ಮೇಲೆ ನಿಲ್ಲಿಸಿ ಅವುಗಳ ಮೇಲೆ ಹನ್ನೆರಡೆಜ್ಜೆ ಹುಲಿಯನ್ನು ನಿಲ್ಲಿಸಿ ಅದರ ಮೇಲೆ ತಾನು ನಿಂತು ಒಂದು ಕವಡೆಯನ್ನು ಆಕಾಶಕ್ಕೆ ಎಸೆದು ನಡುಮಲೆಯಲ್ಲಿ ನೆಲೆಸಿ ಉರುಗನನ್ನೇ ಧರಿಸಿ ಗಂಡು ಭೈರುಂಡ ಪಕ್ಷಿಯನೇರಿ ಏಳುಮಲೆಯ ಮೇಲೆ ಏಗದಲ್ಲಿ ತಾವೊರಗಿದ್ದರು.

ಏಳಯ್ಯ ಬೆಳಕಾಯ್ತು ಮಾದೇವ ಎಂದು ಕಾಕೋಳಿ ಕೂಗಿದಾಗ, ಕೋಗಿಲೆಗಳು ಹಾಡಿದಾಗ,ನೌಲುಗಳು ಕುಣಿದಾಗ, ಕಾಡಪ್ಪಾ ಪಾರುವಾಳದಕ್ಕಿ ಕಂದನ ಹುಲುಮರಿದುಂಬಿಗಳು ಕೂಗಿಕರೆದಾಗ ಅಯ್ಯ ಜೋಡುಗೊಂಬಿನ ಭಾರಿ ಬಸವನ ಬಾಬಾ ಅನ್ನುತ್ತಾ ನಾಗರಾಜನೆದ್ದು ಬಂದ.

ಹಕ್ಕೀ, ಪಕ್ಷಿ ,ಗೊದ್ದ ,ಗೋಸುಂಬ, ಹಲ್ಲಿ ಪಲ್ಲಿ ಹಾವು ಚೌಳು, ಕಾಳು, ಕಡ್ಡಿ ಮರಗಿಡ, ಗೆಂಡೆ ಎರಡನೂರೆಂಬತ್ತು ಕೋಟಿ ಜೀವರಾಶಿ ಸೃಷ್ಟಿ ಮಾಡುದ್ರು ಈ ಜೀವರಾಸ್ಯದಲ್ಲಿ ಕೋಳಿ, ಕೊತ್ತಿ ಎಲ್ಲಾ ಅಲ್ಲುಂಟು ಕೋಳಿಮೊಟ್ಟೆ ಇಕ್ತಲ್ಲ ಒಂದಾನು ಒಂದು ಸರ್ಪ ಮೊಟ್ಟೆ ನೋಡಿ ಆಸೆ ಬಿದ್ದದೆ "ಅಹ್ಹಾ ಶಿವುನು ಏನೂ ತಿನ್ನಕೂಡ್ದು ಅಂತ ಆಗ್ನಿಯನ್ನು ಮಾಡಿದ್ದಾನೆ ನಾನು ಮೊಟ್ಟೆಯನ್ನು ಕುಟ್ಟಿ ತಿನ್ನ ಬೇಕಲ್ಲ" ಎಂದ ಕಾಳಿಂಗ ಸರ್ಪಕ್ಕೆ ಸಾಪ ಕೊಡುತ್ತಾರೆ ನಮ್ಮ ಮಾದೇವ. ಹಾಗೆ ಎರಾ(ಇರುವೆ)ಗಳು "ಸ್ವಾಮಿ ಜಗದೀಶ್ವರ ನಾವು ಚಿಕ್ಕ ಪ್ರಾಣಿಗಳು ನಮ್ಮುನ್ನ ದೊಡ್ಡ ದೊಡ್ಡ ಪ್ರಾಣಿಗಳು ಸಾಯುಸ್ಬುಡ್ತವೆ ಅದುಕ್ಕಾಗಿ ನಾವು ಅವುರ್ನೆ ಕೊಲ್ಲಬೇಕು ಅದೇ ತರುವಾಗಿ ಸ್ವಾಮಿ ನಮ್ಮ ಮೈಗೆ ಇಸವನ್ನು ಅಪ್ಪಣೆಮಾಡಿ" ನೀವು ಯಾವ ಪ್ರಾಣಿಗಳ ಕಡಿತಿರೊ ಅಲ್ಲೇ ಸಾಯೋಗಿ ಎಂದರು. ಎಡಗೈ ಮಾದುಗ, ಬಲಗೈ ಹೊಲುಮಗ ಕಾಮಧೇನುವನ್ನು ಕೊಂದು ತಿಂದವರಿಗೆ ಸಾಪಕೊಟ್ಟ ನಂದಿವಾಹನದೊಡೆಯ.

ಕಲ್ಲೂರು ಮಕ್ಳು, ಮುಳ್ಳೂರು ಮಕ್ಳು, ಮಾಲಂಗಿ ಮಕ್ಳು ತೋಪ್ನಲ್ಲಿ ದನಾಕರ, ಕುರಿಯನ್ನು ಬುಟ್ಕೊಂಡು ಅವುರು ಲಗ್ಗೆ ಚೆಂಡಾಟ ಆಡ್ತಿದ್ರು ಆ ಹುಡುಗ್ರು ಜೊತೆ ಮಾದಪ್ಪ ಚೆಂಡಾಡಿ ಆಟವಾಡ್ತ ಮಕ್ಕಳ ಮಾದಪ್ಪನಾದರು. ಹಿಡಂಬಿ ಎಂಬ ರಾಕ್ಷಸಿಗೆ ಅವ್ಳು "ಹಕ್ಕಿ ಪಕ್ಷಿ ಕಾಡು ಮೃಗಗಳ್ಗೆಲ್ಲ ಮಕ್ಳುಂಟು ನನಗೆ ಮಾತ್ರ ಮಕ್ಕಿಲ್ಲವಲ್ಲ ಶಿವುನಲ್ಲಿ ವಂಚುಣೆ ಇದೆಯೋ ಇಲ್ವೋ ನೋಡ್ಬೇಕು ನಾನು ಸಂತಾನವನ್ನು ಪಡಿಬೇಕು" ಎಂದು ತಪಸ್ಸಿಗೆ ಕೂರುತ್ತಾಳೆ.

ISBN – 978-93-5526-247-9

ಕಲ್ಯಾಣ ಪಟ್ಟಣದಲ್ಲಿ ಬಸವಣ್ಣನವರ ಆಳ್ವಿಕೆ ಆದುದ್ಕೆ ಕೋಳಿಗೆ ಲಿಂಗ, ಕೊತ್ತಿಗೆಲಿಂಗ, ನಾಯಿಗೆ ಲಿಂಗ, ನರೀಗೆ ಲಿಂಗ, ದನ, ಕರ, ಕುರಿ, ಎಮ್ಮೆಗೆಲ್ಲ ಲಿಂಗ ನಿಜವಾದ ಭಕ್ತರನೋಡಿ, ಸತ್ವ ಪರೀಕ್ಷೆಮಾಡಿ ಲಿಂಗ ಕೊಡ್ಬೇಕು ಎಂದು ಅಲ್ಲದೆ ಮೂಗ್ನಲ್ಲಿ ಹೆಜ್ಜೇನು ಮರೀ ಮಾಡಿದೋರು, ಕಂಕ್ಳಲ್ಲಿ ಗೀಜುಗ ಮರೀ ಮಾಡಿದಂತ ಗಣಾದಿಗಣಂಗಳಿಗೆಲ್ಲ ಬೋಜವವನ್ನು ಹಾಕಿಸುವ ಪವಾಡ ಮೆರೆದರು.

"ಅಯ್ಯೋ ನನಕಂದ ಗರುಡಾಳ ಪಕ್ಷಿ ಗುಂಡಾಪುರದಲ್ಲಿ ಕುಂಬಾರ ಗುಂಡಯ್ಯ ಅವ್ನೆ ಅವನ ಹೆಂಡ್ತಿಗೆ ಈ ವಾಲೆಯನ್ನು ಸೊಲ್ಪ ಬುಡಪ್ಪ" ಅಂತ ಹೇಳಿದ್ದು, ಎಳನಾಗರ ಮರಿಯಾಗಿ ಒಲೆ ಒಳುಗೆ ಸೇರಿ ಕೈಯಿಟ್ಟ ಮಾದೇವಮ್ಮುನ್ನ ಕಚ್ಚಿ ಜಾಗ ಪಡೆದದ್ದು. ಅಂಬುಗ್ರಳ್ಳಿ ಅಂಬುಗ್ರುನ ಕಾವೇರಿ ಹೊಳೆ ದಾಟ್ಸಾಕೆ ಕೇಳಿದ್ರಂತೆ ನಮ್ಮ ಮಾದೇವ ಅದಕ್ಕವರು "ಹೊಸ ನೀರಿಗೆ ಮೀನು ಹತ್ತವಲ್ಲಪ್ಪ ಮೀನು ಹಿಡಿಯೋದ ಬುಟ್ಟು ನಿಮ್ಮುನ್ನು ಆಚೊರಿಕೆ ಬುಡುನಾರೋ ಎಂದು ನಿರಾಕರಿಸಿದಾಗ "ಅಲಾ ಮುಂಡೇಮಕ್ಳೆ ಹೊಲ್ಸು ಮೀನು ತಿನ್ನೊ ನಿಮುಗೆ ಒಳ್ಳೆ ಬುದ್ದಿ ಬರ್ನಿಲ್ವಲ್ಲ"ಎಂದು ಎಳಗಾವಿ ಹಾಸಿ ತೇಲ್ಕೊಂಡು ಹೋದ್ರಂತೆ.

ಪಿರಿಯಾಪಟ್ಟಣದ ನೆಲ ತಪಸ್ಗೆ ತಕ್ಕದಾದು ಎಂದು ಕುಳಿತಾಗ ಮಾದಪ್ಪನ ಮೈಮೇಲೆ ಹೊನ್ನುತ್ತ ಬೆಳಿಯಿತು ಆ ಊರಿನ ಬಾಳಾಡೋ ಈರೇಗೌಡ ಏಳಟ್ಟಿ ದನಕರ ಕುರಿಯನು ಅಟ್ಕೊಂಡು ಕಾಡ್ಗೆ ಮೇಯ್ಸಾಕೆ ಹೋದಾಗ ಮಾದಪ್ಪನಿದ್ದ ಹುತ್ತದ ಮೇಲೆ ಜಲಗೊಂಬಿನ ಹಸ ಜೋರ್‍ರಂಬ ಹಾಲ ಹಿಂಡಿಬಿಡ್ತಂತೆ. ಕುಂತೂರು ಮಟದ ಗುರುಗಳು ಹುಲಿ ಚರ್ಮ ಹಾಸುಕೊಂಡು ಹುಲ್ಲೇ ಚರ್ಮ ಹೊದ್ದುಕೊಂಡು ಸಿಮ್ಮ ಪೀಠದಲ್ಲಿ ಕುಂತಿದ್ರು ಅವ್ರಿಗೆ ಸರಣು ಮಾಡವ್ನೆ ಮತ್ತು ಹಾವು ಚೇಳು, ಹಲ್ಲಿ, ಪಲ್ಲಿ, ಗೊದ್ದ, ಗೋಸುಂಬಿ, ಹಾವ್ರಾಣಿ, ಹೆಂಟೆಗೊದ್ದೆ ಎಲ್ಲಾನು ಹೊಡ್ಡು ಮಾದೇವ ಜೋಳುಗೆ ತುಂಬ್ಕಂಡ್ರು. ಹೆಬ್ಬುಲಿ ಮ್ಯಾಲೆ ಕೈಮಡಗಿ ಎಮ್ಮೆ ಕ್ವಾಣನ ಮಾಡಿದ್ದು, ಬಳೆಗಳನ್ನೆಲ್ಲ ಹಾವು ಚೇಳು ಮಾಡಿದ್ದು ಏಳ್ತಲೆ ಕಾಳಿಂಗ ಸರ್ಪನನ್ನು ಕೂಗಿ ಕರೆಯುವ ಸಾಸ ತೋರಿದ್ರು.

ಬ್ಯಾಡ್ರು ಕನ್ನಯ್ಯ ಇವತ್ತು ಒಂದು ಕ್ಯಾಸಾರ್ಥಕ್ಕಿನೂ ಸಿಗಲಿಲ್ವಲ್ಲ ನಾನು ಎಂದೂ ಬರ್‍ರೀಗೈಲಿ ಹೋದನಲ್ಲ ಎಂದು ಬರುವಾಗ ಆನೆ ಸಿಮ್ಮ ಸಾರ್ದೂಲ ಕಡವೆ ಕರಡಿ ಕಟೆಮ್ಮೆ ಕಿರುಬ ತೋಳ ಬಳ್ಳು ಬರಗ ಹುಲ್ಲೆ ಸಾರ್ಗ ಜಿಂಕೆ ಹಕ್ಕಿ ಪಕ್ಷಿ ನೆಲ್ಲ ನನ್ನ ಏಳ್ಮಲೆ ಹೆತ್ತಯ್ಯ ಮಾಯಮಾಡಿ ಬ್ಯಾಡ್ರುಯಾಸ ತೊಟ್ಟು ಹಂದಿಗೆ ಹೊಡುದವುರೆ ನನ್ನ ತಂದೆ ಮಾದಯ್ಯ. ಕಲ್ಲಿನಮ್ಯಾಲೆ ಕುತ್ಕಂಡು ದಂಡ್ಗೋಲನಿಟ್ಕೊಂಡು ಕುರುಸಿಳ್ಳಾಕ್ತ ಪದವನ್ನಾಡ್ತ ಬರುವಾಗ ಮಾರಿ ಮಸ್ಣೀರೆಲ್ಲ ಸೇರ್ಕೊಂಡು ಕರಡಿ, ಕಾಡೆಮ್ಮೆ, ಹುಲ್ಲೆ, ಸಾರಗದ ಹಾಲುಗಳ ಕರ್ಕೊಂಡು ಹೊತ್ಕೊಂಡು ಬರ್‍ವಾಗ ಅವ್ರ ಹಾಲುನ ಗುಂಬಕ್ಕೆ ಹೊಡ್ದುಟ್ಟ.

ಹರಳಯ್ಯ ಚಮ್ಮಾಳ್ಗೆ ಅಂದ್ರೆ ಪಾದ್ರಾಕ್ಷಿ ಮಾಡ್ಕೊಡ್ತೀನಿ ಗುರುವೆ ನಿಮ್ಗೆ ಎತ್ತು, ಎಮ್ಮೆ, ಕಡಮೆ, ಕಾಟೆಮ್ಮೆ ದನ ಯಾವ ಚರ್ಮದಲ್ಲಿ ಮಾಡ್ಕೊಡ್ಲಿ ಎಂದು ಕೇಳಿದಾಗ ನನ್ಗೆ ಹಕ್ಷೀ ಪಕ್ಷಿ ಚರ್ಮದಾಗದಿಲ್ಲಪ್ಪ ಮಾಯದ ನರಚಮ್ಮಾಳ್ಗೆ ಆಗ್ಬೇಕು ಅಂತ ಕೇಳವ್ರೆ. ಎಳೆ ಕಾಳಿಂಗನ ಒಡುವೆ ಬಂಗಾರಕ್ಕೆ ಕವುಲ್ಮಡ್ಗಿ ಬಂದು ಬಿಳೀ ಪಲ್ಲಿಯಾಗಿ ನಮ್ಮಪ್ಪಾಜಿ ಹರಳಯ್ನ ಗುರುಮಠದ ಗ್ವಾಡೇಲಿ ಒರುಗವ್ರೆ. ನೀಲಯ್ಯ ಎಮ್ಮೆ ದೊಡ್ಡಿಗೋಗಿ ಎಮ್ಮೆನೆಲ್ಲ ಬುಟ್ಕೊಂಡು, ಗೋವುನ ದೊಡ್ಡಿಗೋಗಿ ಗೋವ್ನೆಲ್ಲ ಬುಟ್ಕೊಂಡು, ಆಡುಕರುಗಳ ದೊಡ್ಡಿಗೋಗಿಆಡೆಲ್ಲ ಬುಟ್ಕೊಂಡು ಮೆಯ್ಸಾಕೆ ಹೋಗಿದ್ದು. ಮಾದಪ್ಪನ ಕತೆ ಸಾಂಸ್ಕೃತಿಕ ಪಲ್ಲಟಗಳ ಕತೆ, ಪ್ರಾಕೃತಿಕ ಲಕ್ಷಣಗಳ ಕತೆ, ಬುಡಕಟ್ಟು ಪಶುಪಾಲನೆ, ವ್ಯವಸಾಯಪದ್ಧತಿಗಳ ಚರಿತ್ರೆ ಎಂಬುದನ್ನು ಇಲ್ಲಿ ನೋಡಬಹುದು.

ಈಗಲೂ ಮತ್ತು ಮುಂದೆಯೂ ಜನರು ಭಕ್ತಿಯಿಂದ ಉಘೇ ಉಘೇ ಮಾದಪ್ಪ ಎಂದು ಹರಕೆ ಕೋಳಿಗಳನ್ನು ಮಾದಪ್ಪನ ತೇರಿನ ಮೇಲೆ ತೂರುವುದನ್ನ, ದೇವರಿಗೆ ಬಿಟ್ಟ ಆಡು, ಕುರಿ, ದನ, ಕರ, ಎಮ್ಮೆ, ಕುದುರೆ ಮೊದಲಾದವನ್ನು ಹೊಡೆದುಕೊಂಡು ಬಂದು ಮಾದೇಶನ ಸನ್ನಿದಾನಕ್ಕೆ ಹರಕೆ ಒಪ್ಪಿಸುವುದನ್ನ ಕಣ್ಣಾರೆ ಕಾಣಬಹುದು.

**ಮಂಟೇಸ್ವಾಮಿ** ಗಜ ಮುಖಿ ಗರ್ಭಾಧಿಪನೆ ನಿನಗೆ ಶರಣೋ, ನಿನಗೆ ಎತ್ತುಬಾರದ ಹೊಟ್ಟೆ ಸುತ್ತ ಸರ್ಪನ ಕಟ್ಟು, ಪಟ್ಟದ ಪಾರ್ವತಿ ಮಗನೇ ಶರಣು. ಗುರುವೇ ಹಾವು ಚೇಳು ಗೊದ್ದ ಗೋಸುಂಬೆ ಅಗಸೀ ಪಗಸೀ ನೂರೇಂಟು ಜೀವ ಪ್ರಾಣಿಗಳ ಮಾಡಿದ ವಿಧಿಯಮ್ಮ ಅವರು ಎಲ್ಲ ಪ್ರಾಣಿಗೂ ಶಿವನೇ ಸೂಲ್ಲನ್ನೇ ಕೊಟ್ಟರಲ್ಲ ॥ಸಿದ್ಧಯ್ಯ॥

ಲಕ್ಷ ಕೋಟಿ ಪ್ರಾಣಿಗಳೆಲ್ಲ ಧರೆಗೆ ದೊಡ್ಡವರ ಸುತ್ತಮುತ್ತ ಎಲ್ಲ ಪ್ರಾಣಿಗಳು ಒಂದುಗೂಡಿ ವಿಷ್ಣು ಈಶ್ವರ ಬ್ರಹ್ಮ ತ್ರಿಮೂರ್ತಿ ಮೂರು ಮಂದಿ ಸ್ತ್ರೀಯರು ಜಗತ್ತು ಗುರು ಪರಂಜ್ಯೋತಿಯವರು ಎಲ್ಲ ಪ್ರಾಣಿಗಳನ್ನು ಕಣ್ಣಿಂದ ನೋಡಿಕಂಡು ಬಾಳ ಸಂತೋಷ ಗುರುವೇ ಪಟ್ಟರು ಮಾಯ್ಕಾರ ॥ಸಿದ್ಧಯ್ಯ॥

ಗುರುವೇ ಹುಲ್ಲೆಯ ಚರುಮ ಗುರುವು ಉಟ್ಟುಕಂಡು ಕೆಂಪುಲಕ್ಕಿ ಗೂಡಾ ಎಡಗೈಲಿ ಹಿಡದುಕೊಂಡು ನಾಗರ ಜೆಡೆಯ ಜುಟ್ಟು ಬಿಟ್ಟುಕೊಂಡು, ನನ್ನಪ್ಪಾ ನವಲುಗರಿ ತೊಂಬೆ ತಗೊಂಡು ನನ್ನಪ್ಪ ಏಳು ಕೋಟಿ ಹುಳುವಾ ಮೈತುಂಬ ಬುಟುಕಂಡು ಅವರು ಕಲ್ಯಾಣ ಗುರುವೇ ಅವರು ಕಣ್ಣೆತ್ತಿ ನೋಡುತ್ತಾರೆ. ನೀನು ಕತ್ತೆ ಲದ್ದಾಗಿ ಉದುರೋಗು ಎಂಬ ಶಾಪ. ಬೊಪ್ಪೇಗೌಡನ ಕುರಿ ಕೂಡುವಂತಾ ಮಠಮನೆಯ ಈಗಲೀಗಾ ಆರುಸಾವ್ರ ಕುರ್ದುಗುರಿ,

ಜೋಲುಗುರಿ,ಕರಿಕುರಿ, ಹದಿನೆಂಟು ಸಾವಿರ ಕುರಿಗಳು ಈ ಕುರಿ ಒಳಗೆ ನೀನು ಒಂದು ಕುರಿಯಾಗಿ ಆ ಕುರಿ ಕೊಟ್ಟಿಗೆಗೆ ಹೋಗಿಬುಟ್ಟು ಯಾವುದಾದರೂ ಒಂದು ಮೂಲೇಲಿ ಬಿದ್ದಿದ್ದು ಕೆಡದಿದ್ದು. ನಿನ್ನ ಒಂದು ಕುರಿ ಹಿಡಿದರೆ ಒಂಬತ್ತು ಕುರಿ ಹೆಚ್ಚಾಗಲಪ್ಪ ಕುರಿ ಸಾಕುದರೆ ಕುರುಬನಿಗೆ ಈಡು ಎನ್ನುವಂತ ಹೆಸರು ನಿನಗೆ ಉಂಟಾಗುಲಿ.

ಬುಕ್ಕು ಬುಕ್ಕುನೆ ಕೆಂಬುತಾ ದೇವಾ ಪಕ್ಕ ಪಕ್ಕನೆ ಪ್ರಾಣ ಬುಟ್ಟುಬುಟ್ಟು ಗುರುವು ಪ್ರಾಣ ಬುಟ್ಟಂತಾ ಕಾಲದಲ್ಲಿ ಗುರುವೇ ಗುರುದೇವಾ ಕಾ ಕೋಳಿ ಕೂಗಿತು ದೇವಾ. ಕೆಂಪಾಚಾರಿಗೆ ಸಾಲಟ್ಟಿ ಧನಗಳು, ಕುರಿಗಳು, ಆಡುಗಳು ಸರಳೆಮ್ಮೆ ಈಗ ಬಾಳು ಬಾಳಾಟದಲ್ಲಿ ಚೆಂದಾಗಿ ಬಾಳುತಾರೆ ॥ಸಿದ್ಧಯ್ಯ॥ ಅಯ್ಯಾ ಅರವಾತ್ತಾರು ಕಾಸು ಮೂವತ್ತಮೂರು ಬಿರುದು ಅಷ್ಟಖಂಡ್ಗದ ಜೋಳಗೆ ನೆಟ್ಟಂಗೇ ತಿರುಶೂಲ ತಾಮ್ರದ ಮೈಜ್ವಾಲೆ ಅವರಿಗೇ ಹಕ್ಕಿಯಗೂಡೆ ಹಕ್ಕಿಯಪ್ವಾಜಿ ಹೊಕ್ಕಳುಗಂಟ ಹುಲಿಚರ್ಮ ॥ಸಿದ್ಧಯ್ಯ॥ ಅಮ್ಮ ಹಸುವನ್ನೆ ಕಟ್ಟುಗಂಡೂ ಕರುವನ್ನೆ ಬುಟ್ಟಗಂಡೂ ಹಾಲನ್ನೆ ಕರಿಯುತ ಕುಳ್ತವಳೆ ಮುದ್ದಮ್ಮ ತಾಯಿ ನೀವು ಉಣ್ಣದು ಸಣ್ಣಕ್ಕಿ ಅನ್ನ ಕುಡಿಯೋದು ನೊರೆ ಎಮ್ಮೆ ಹಾಲು ॥ಸಿದ್ಧಯ್ಯ॥

ಗುರುವು ನಾಗರಾವಿನ ವಿಷಯಾಕ್ಕುದಾಲ್ನ ರಸ ಇನ್ನೆನೋ ಬೆರೆಸಿ ಗುರುವೇ ಗಾಂಜ ಮಾಡುತ್ತಾರೆ. ಜಗುತ್ತು ಗುರು ಧರೆಗೆ ದೊಡ್ಡಯ್ಯ ಮಾರಿಹೊಕ್ಕಿದ ಮನೆಯೊಳಗೆ ಚೇಳು ಇಲಿ ಎಗ್ಗಣ ಸಾಯುತಾವೆ ಅಪ್ಪ ಇಲಿ ಎಗ್ಗಣ ಸತ್ತಮನ್ಲಿ ಸಾಲು ಹೆಣವ ಕೆಡವುತಾರೆ ಎತ್ತು ಎಮ್ಮೆಗಳೆಲ್ಲಾ ಸತ್ತು ಮಲಗಿದ್ದೋ ॥ಸಿದ್ಧಯ್ಯ॥ ಹಾಲಿನ ಗಡಗೆ ಒಳಗೆ ಹಾವು, ಚೇಳು ಆಡುತ್ತಿದ್ದೊ ಕಾಲ್ರ, ಪ್ಲೇಗು, ತಗುಳಿ ಬುಡ್ತು ಕಣ್ರಯ್ಯ ಅವರಟ್ಟಿ ಒಳಗೆ ಕೊಕ್ಕೊ ಅಂತ ಕೂಗುತ್ತೀನಿ ಅಂದ್ರೆ ಕೋಳಿ ಇಲ್ಲಾ, ಮ್ಯಾ ಅಂತ ಅರುಚಗತ್ತಿನಿ ಅಂದ್ರೆ ದನ, ಕುರಿ, ಆಡು, ಎತ್ತು, ಎಮ್ಮೆ ಒಂದೂ ಇಲ್ಲಾ ಸತ್ತ ಕುದ್ರೆ ನೊಣ ಇದ್ದು ಕುದ್ರೆಗೆ ಮುತ್ತಿಗಂಡಂಗೆ. ಗವಿ ಒಳಗಿದ್ದ ಎಬ್ಬಾವು ಕೆಂಪಾಚಾರಿ ಮಗನಾ ಕಚ್ಚಿಗಂಡು ಪಾತಾಳಕ್ಕೆ ಹೊರಟೋಯ್ತು ಬಲಕ್ಕೆ ಹೊಳ್ಳವ ಅಂದ್ರೆ ನಾಗುರಾವುನ ಕಾಟ ಇಲ್ಲೆ ಮಲಗುತ್ತೇನೆಂದರೆ ಯಮು ಚೋಳನ ಕಾಟ ನಿನಗೆ ಹಾವು ಹಾಸಿಗೆ ಆಗಲಪ್ಪ ಚೋಳು ತಲದಿಂಬಾಗಲಯ್ಯ ॥ಸಿದ್ಧಯ್ಯ॥

ಕೋಳಿ,ಕುರಿ,ಆಡು ಮೊಸಳೆ,ಉಡ,ಒಂಟೆ,ಆಮೆ,ಉಲ್ಲೆ,ಕಡಬೆ, ಕಾಡೆಮ್ಮೆ,ದನಗಳ ಮಾಮಸ ರುಚಿ ಇಲ್ಲ ಮಾಚಪ್ಪ ಮನುಷ್ಯನ ಮಾಮ್ಸ ಬಾಳ ರುಚಿ ॥ಸಿದ್ಧಯ್ಯ॥ ನಾಳೆ ಕಲಿಯುಗದೊಳಗೆ ಎತ್ತಿನ ಬೆಲೆಗೆ ಎಮ್ಮೆ, ಎಮ್ಮೆ ಬೆಲೆಗೆ ಟಗರು, ಟಗರಿನ ಬೆಲೆಗೆ ಕೋಳಿ, ಕೋಳಿ ಬೆಲೆಗೆ ಕೊತ್ತಿ, ಹುಟ್ಟಿದ ಹೆಣ್ಣುಗಳನ್ನು ಸಂತೆವೊಳಗೆ ಮಾರಲೇ ಬೇಕು॥ಸಿದ್ಧಯ್ಯ॥ ಕಾಲಜ್ಞಾನವನ್ನು ನುಡಿದಂತಿದೆ. ಆಕಾಶದಲ್ಲಿರ್ತ್ತಕ್ಕಂತ ಹಕ್ಕಿಪಕ್ಷಿ ಜೀವಜಂತು ಪ್ರಾಣಿಗಳೆಲ್ಲ ಹೊಗೆಗೆ ಸಿಕ್ಕಿ ರೆಕ್ಕೆ ಪುಕ್ಕವೆಲ್ಲ ಬೆಂದೋಗಿ ಸತ್ತು ಸತ್ತು ಭೂಮಿಗೆ ಉದುರತ್ತಿದ್ದುವಂತೆ ಹಕ್ಕಿಗಳ ನೋಡುಬುಟ್ಟು ಸಿದ್ದಪಾಜಿ ಅದನ್ನ ತಡಿತಾನೆ. ಜನಪದ ಮೌಖಿಕ ಮಹಾಕಾವ್ಯಗಳಲ್ಲಿ ಮೊದಲು ಪೂಜೆ ಸಲ್ಲೂದು ಶಿಷ್ಟದೇವತೆಗಳಾದ ಗಣಪ, ಪಾರ್ವತಿ, ಶಾರದೆ ನಂತರ ಇತರೆ ದೇವತೆಗಳನ್ನು ಹೆಸರಿಸಿ ನಮಸ್ಕಾರ ಎಂದು ಪ್ರಾರಂಭವಾಗುತ್ತವೆ ಎಂಬುದನ್ನ ಕಾಣಬಹುದು.

**ಜುಂಜಪ್ಪ–** ಎತ್ತು ಹೊಡಿಯೋನಿಗೆ ಮುತ್ತಿನ ಬಾರುಕೋಲಾದೆ. ಏಳು ಕುದುರೆ ರಥವಣ್ಣ ರಥವನ್ನ ಹೊಡೆಯಾಕೆ ಸ್ವಾಮಿ ಕುಂತಾನು. ಸಿತ್ರದೇವರು ಕಾಟಮುಲಿಂಗನಿಗೆ ಹೇಳ್ದ ನಮ್ಮ ತಾತ ಪ್ರತಿದಿನ ಕುರಿ ಬಿಟ್ಕಂಡ್ ಬರ್ತ್ತರಲ್ಲಾ ಅದರಲ್ಲೊಂದು ಕೊಬ್ಬಿನ ಕುರಿ ಹಿಡಿದು ಕೊಯ್ದುಬಿಡಾನ, ನಂತ್ರ ಕುರಿತುಪ್ಪಾನ ಬ್ರಾಮರ ಮನೆಗಳ ಕೆಳಗಾಳಿಗೆ ಬಿಡೋಕೆ ಕುದುರೆ ಹತ್ತಿಕೊಂಡು ಹೋಗಿ ಇಳಿಸಿದರು. ಗೋವರ್ಧನ ಗಿರಿಯೆಂಬ ಕಾಡಿನಲ್ಲಿ ವಿಷ್ಣುವಿನ ದನಗಳಿವೆ ಸೂಲಾಗಿಲ್ಲದ ಹಸುವಿನ ಪಡ್ಡೆ ಹಿಡಕಂಡು ಬರ್‍ರಿ ಮೂಗು ಹಸುವಿನ ಪಡ್ಡೇನೆ ಹಿಡ್ಕಬಂದು ಮೈ ತೊಳೆದು ಅರಿಶಿನ ಕುಂಕುಮ ಇಟ್ಟು ಪೂಜೆ ಮಾಡಿ. ಕಾಡ್ನಾಗ ಹುಟ್ಟಿ ಕಾಡ್ನಾಗೆ ಬೆಳಕಂಡಿರೋನು ನಾನು ಗಡ್ಡದಲ್ಲಿ ಗೀಜಗನ ಹಕ್ಕಿ ಗೂಡಿಕ್ಕಾವೆ ,ನಿನ್ನಗಂಡ ಇರೋ ಜಾಗಕ್ಕೆ ಹೋಗಾಕ್ಕೆ ನಿನ್ನ ಕೈಲಿ ಸಾದ್ಯವಿಲ್ಲ ವಿಪರೀತ ಹುಲಿ ಕರಡಿಗಳು ಸಾರಂಗ ಘೋರ ಅರಣ್ಯದಲ್ಲಿ ನಿನ್ನ ಗಂಡ ಇರಾದು ಸರಿ ದನಕಾಯ್ಕಂಡು ಅರಣ್ಯದಲ್ಲವನೆ ಗೆಡ್ಡೆಗೆಣಸು ತಿಂದಕೊಂಡು ಮುಂಗೊಳಿ ಕೂಗುವಾಗಲೆದ್ದು. ಕಾಡೀನಾಗುಳು ಹುಲಿಯಂತೆ ನೀನು ಗಂಡೋ ದನಗಳ ರೊಪ್ಪದ ಮುಂದೆ ಬುತ್ತಿಗೂಡೆ ಇಳಿಸಿ. ನಮ್ಮ ಮಗು ಹುಲೀನೆ ತಿಂತೋ ಕರಡೀನೆ ತಿಂತೋ ವಂಶ ಕಳಕಂಡು ಮೇಲೆ ನಾವಿದ್ದು ಫಲವೇನು. ಏಳೆಡೆ ಸರ್ಪ ಗುರುಡ ನೀವಿಬ್ಬರೂ ಅರಣ್ಯದಲ್ಲಿ ಜೇನಿನ ತುಪ್ಪಕ್ಕೆ ಕಾವಲಿರಬೇಕು ಹುಲಿ ಕರಡಿ ಸರಂಗ ಡುಬ್ಬಿ ಘೋರ ಅರಣ್ಯ ಆಗಾಧವಾದ ಪ್ರಾಣಿಗಳು ಎದ್ದೊಗತ್ತಾವೆ ಆನೆ ಅಂತೋವು ಇಂತೊವೆಲ್ಲ ನೋಡ್ಬಿಟ್ಟು ಕೀರ್ರನೆ ಕಿರ್ಲಕಂಬಿಟ್ಟ ಐದು ವರ್ಷದ ಮಗ ಜುಂಜಪ್ಪನ ತಂದೆ ಕೆಂಗರು ಮಲ್ಲೇಗೌಡ ಕಳುವರಳ್ಳಿ ಹತ್ರ ಆಲರತಿ ಕಟ್ಟೇಏರಿ ಕೂತ್ಕಂಡು ಪಿಳಗೋಣ್ ಹಿಡಿದು ಗಂಗೆಗೌರಿ ಅಂಗನಮಣಿ ತುಂಗಭದ್ರಿ ಅಮ್ಮಾ ಗೊಲ್ಲ ಕರೆದ ದನಿಯನ್ನು ಕೇಳಿ ಎಲ್ಲಾ ಗೋವುಗಳೆ ಬನ್ನಿರಮ್ಮ ಅಂದಾನು. (ಪ್ರಾಣಿಗಳೇ ಮನುಷ್ಯನ ಕಣ್ಣು ತೆರೆಸುವಂತ ಮನುಷ್ಯತ್ವವನ್ನು ಆರೋಪಿಸುವ ದೃಷ್ಟಾಂತದ ಕತೆ ಗೋವಿನ ಹಾಡನ್ನು ಈ ಸಾಲುಗಳು ಹೃದಯಕ್ಕೆ ಮುಟ್ಟಿಸುತ್ತವೆ). ಈರಭದ್ರನ್ನ ಹಾವುಚೇಳು ಅಗೇವುದಾಕೆ ಹಾಕಿಬಿಟ್ಟಿದ್ದೀವಿ ಅವ ಎದ್ದು ಬಂದು ಪ್ರಪಂಚುಕ್ಕೆಲ್ಲಾ ಕೊಡ್ಡಿ ಬಿಟ್ಟ ಬಲಗಡೆ ಭುಜದಲ್ಲಿ ಮಾಯದ ಹಲ್ಲಿಯಾಗಿ ಕಣ್ಣಿಗೆ ಕಾಣಿಸದಂತೆ ಇರೋದು. ಬಾನವೇ ಹೊತ್ತುಕೊಂಡು ಬಾನ್ಸುಗಿರಿ ಕಡಿಸಿಕೊಂಡು ಹೊರಡುತ್ತಾನೆ. ಆನೆ ಒಂಟಿಗುಳ ಮ್ಯಾಲೆ ಐವತ್ತಾರು ದೇಶದ ದೊರಿಗಳೆಲ್ಲಾ ಕಲ್ತಾರಮ್ಮ ರಾಯಿಕಳುವಾರಳ್ಳಿ ಕಲ್ಯಾಣಿ ಮ್ಯಾಲಕ್ಕೋ ಶಿವನಿಗೋ, ಬರಿ ಅಮೃತ ಅಂದ್ರೆ ಈದಿರ

ಹಸುವಿನ ಹಾಲು ಬಟ್ಟಮೃತ ಅಂದ್ರೆ ಗೊಡ್ಡಸುವಿನ ಹಾಲು ಕರಕಂಬರ್ತಾನೆ. ಮಾಟ ಸೂನ್ಯ ಮಾಡೋದಕ್ಕೆ ಕಾಡುಮೇಕೆ ಹೋತ ಕುರಿ ಕೋಳಿ ಬಿಳಿಹಂದಿಕುನ್ನಿ ಇತ್ಯಾದಿಗಳಾಗಬೇಕು.

ಹುಲಿ ಚರ್ಮದ ಉಡಿಗಯ್ಯ ಹಾವುಗಳೆ ಕರಿಯೋನು ಗೋವುಗಳೆ ಕರಿಯೋನು. ನಮ್ಮ ವಂಶದ್ದೊಂದು ಬೆಕ್ಕಿನ ಕುನ್ನಿ ಬಂದು ಯಾಕ್ ಪ್ರಾಣ ಹೊರದಿದ್ದೀರಿ ಮಾರಣ್ಣ ಮೈಲಣ್ಣ ಅಂದ್ರೆ ಪ್ರಾಣ ಹೊಗತೈತಿ ಮಾಮಣ್ಣ ನಾನೇ ಕಂಡಿದ್ರೆ ಆ ಹುಲಿರಾಜನ್ನ ನನ್ನ ಚಿಪ್ಪುಗೊಡಲಿಗೆ ಅಪ್ಪಣೆ ಕೇಳ್ತಿದ್ದೆ. ಘೋರ ಅರಣ್ಯದಲ್ಲಿ ಹುಲಿ ಕರಡಿ ಡುಬ್ಬಿ ಸರಂಗ ಬಾಳ ಕಾಡು ಪ್ರಾಣಿಗಳಿರುವ ಕಾಡಿನಲ್ಲಿ ಮೈಲಣ್ಣ ದಾರಿತಪ್ಪಿಬಿಡ್ತು. ಆನೆ ಹೊಟ್ಟೆ ಒಳುಗೆ ಆನೇನೇ ಹುಟ್ಟಿದಂಗಾಗೀತು ಕಂದ ಹುಲಿ ಹೊಟ್ಟೆಯಲ್ಲಿ ಹುಲಿಯೇ ಹುಟ್ಟಿದಂಗಾಗೀತು ನನ್ನ ಕಂದಾ ಅಂದನೊ ಜುಂಜಪ್ಪ. ಅಕರಂಬೆ ಚಿಕ್ಕರಂಬೆ ಎಂಬ ಹಸುಗಳೊಳಗೆ ಎರಡು ಹಾಲುಕಾಗಡಿ ಕರಕಂಡು ತಾಯಿ ಮನೆಗೆ ಬರ್ತಾ ಇದ್ರು. ನಾಗ್ರಾವಿನಗಂಡ ನಾಗಲೋಕಕ್ಕೆ ಉದ್ದಂಡ ಹುಲಿ ಮುಖದೋನು ಈಶ್ವರನ ಮಗನು ಜುಂಜಪ್ಪ ಊರು ಬಾಗುಲೊಳುಗೆ ಕಡದಿರೋ ಕಲ್ಲು ಕೋಳಿಗೆ ರೆಕ್ಕೆ ಪುಕ್ಕ ಬಂದು ಕೂಗಿ ಈ ಸೇಳೂರು ಮುಂದೆ ನನ್ನ ಜುಂಜಪ್ಪ ಬಸುವ ಕುಡುದು ಬತ್ತಿ ಹೋಗಿರ ಬಾವಿ ತುಂಬಿ ಹರ್ದು ಸರಿ ಮರಳು ಲಿಂಗನು ಬಸುವ ಉಡ್ರಿಕ್ಕೆ ಒಡ್ಡುದಿನ.  ಹತ್ತಿರಕ್ಕೆ ಹುಲ್ಲೆಕರುವನ್ನು ಬಾಚಿ ತಬ್ಬಂಡ ಜುಂಜಪ್ಪ. ಪಡುವಲು ದೇಶದಲ್ಲಿ ಗೋಕುಲ್ದಲ್ಲಿ ಹುಟ್ಟಿ ಗೋವಿನಲ್ಲಿ ಉತ್ಪತ್ತಿಯಾದವನು. ಪಂಚಕಲ್ಯಾಣಿ ಎಂಬ ಹಸ ಜುಂಜಪ್ಪನ ದನಗೊಳಗೆ ಐದು ಮೊಲೆ ಹಸುವು ಇತ್ತು. ಕುರಿ ದನಗಳು ಹಿಂಡು ಹಾಲುಕ್ಕಿದಂತೆ ಉಕ್ಕಲಿ ಮನೆಯೊಳಗೆ ಹಾವು ಚೇಳು ಮನ್ನವಾಗುಲಿ. ಓಲೆ ಬರ್ದುತಾಳೆ ದುರ್ಗಿ ಆವಾಗ ಬಿಳಿಕಾಗೆಯನ್ನ ಕರ್ದು ಬುದ್ದಿ ಹೇಳಿ ಜುಂಜಪ್ಪನ ದೇಶದಲ್ಲಿ ಹುಟ್ಟುವಂತೆ ಗುಡಿಯೊಳಗೆ ಶಂಕರನೆ ಸಿಕ್ಕಿದ್ದು ಪ್ರಜೆಗಳುನಾ ಅಕ್ಕಿ ಪಕ್ಷಿಗುಳ್ಳು ಏಳು ನಾಲಿಗೆ ಚಾಚಿದುರೇಳುವುದಾ ಹಾರಿಕಂಡು ಬರುತಾವು. ದೀಪಾವಳಿ ಹಬ್ಬ ಮಾಡಿ ದನುಗಳು ರಪ್ಪದೊಳುಗಣ್ಣ ಸುಖವಾಗಿದ್ದಾನೋ ನಮ್ಮಪ್ಪ ಲೋಕುಕು ದೊಡ್ಡೊನು ಕಲಿಬೀರಾ. ಜಾಲ್ನಾಯಿ ಜೂಲ್ನಾಯಿ ಅಲ್ಲಿ ಬಿಟ್ಟು ಕಣಿವೆ ಮಾರಮ್ಮನ್ನ ಕರ್ಕಂಬಂದು. ಊಟದಲ್ಲಿ ಮದ್ದಿಕ್ಕಿದ್ರು ನಾಯಿಯೊಂದು ತುತ್ತು ತಿಂದು ಪ್ರಾಣ ಬಿಡ್ತು, ಇನ್ನೊಂದು ಬೆಕ್ಕು ಕರದು ಬೆಕ್ಕಿನ ಮುಂದಕ್ಕೆ ಹಾಕಿದ್ರು  ಅದು ನೆಗೆದು ಬಿತ್ತು. ಸಿಂಹ ರೂಪವನ್ನು ತಾಳಿ ಹಿರಣ್ಯಕಶ್ಯಿಪನ ಕೊಂದವಗೆ ಮಂಗಳಾರತಿ.

ಈ ಮೂರು ಮಹಾಕಾವ್ಯಗಳಲ್ಲಿಯೂ ಜನಪದರ ಬದುಕಿನಲಿ ಕಂಡು ಬರುವ ಪ್ರಾಣಿ ಪಕ್ಷಿಗಳನ್ನು ಸೃಷ್ಟಿಸೋನು ಇವ್ನೆ ಗುದ್ದಿ ಗುದ್ದಿ ಸಾಯ್ಸೋನು ಇವ್ನೆ ಎಂಬಂತ ಸಾಲುಗಳು ಮತ್ತು ಪ್ರಾಣಿ ಪ್ರಾಣಿಗೆಲ್ಲ ಕಂದಾ ಮೇಲಾದ ಪ್ರಾಣಿ ಎಂದರೆ ನರಪ್ರಾಣಿ ಪ್ರಕೃತಿಯ ಜೊತೆಗೆನಿಕಟ ಸಂಪರ್ಕ ಹೊಂದಿರುವುದು, ಹಾವು ಚೇಳುಗಳನ್ನೇ ಆಹಾರವನ್ನಾಗಿ ಸೇವಿಸುವ ರೀತಿಗಳು, ಅನಾದಿ ಕಾಲದ ಜೀವಿಗಳ ಪಳೆಯುಳಿಕೆ, ಬೇಟೆ ಕಾಳಗಗಳ ವರ್ಣನೆ, ಪ್ರಾಣಿ ಪಕ್ಷಿಗಳ ಸಂರಕ್ಷಣೆಗಾಗಿ ಬಲಿಯಾದ ಮಹಾನ್ ನಾಯಕರಿಂದ ಕಲಿಯಬೇಕಾದ ಪಾಠ, ತನ್ನನ್ನು ಕಾಕಿ ಸಲಹಿದ ಜನಪದರಿಗೆ ಪ್ರಾಣಿ ಪಕ್ಷಿಗಳು ತೋರುವ ಕೃತಜ್ಞತೆ, ಜನಪದರ ಬದುಕಿನಲ್ಲಿ ಸಹಜವಾಗಿದ್ದ ಪಶುಪಕ್ಷಿಗಳ ಸಾಕಾಣೆ, ಆಹಾರಸಂಗ್ರಹಣೆಯಂತ ಸಂಸ್ಕೃತಿ ಮುಂದೆಯೂ ಮನುಕುಲ ಉಳಿಸಿಕೊಂಡು ಹೋಗಲಿ ಎಂಬ ಸಾರ್ವಕಾಲಿಕ ಸತ್ಯಗಳು ಇಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ.

ನಮ್ಮ ಒಳಗೂ ಹೊರಗೂ ಪ್ರಾಣಿ ಪಕ್ಷಿಗಳ ರಕ್ಷಣೆಗಾಗಿ ನಿಂತಿರುವ ದೈವಶಕ್ತಿಯನ್ನು ಸ್ಮರಿಸಿಯೇ ಜನಪದರು ನಮ್ಮ ದೈವ ಭಕ್ತಿಯನ್ನು ಕಂಡು ಕೊಳ್ಳುತ್ತಿದ್ದ ಬಗೆ, ದುಷ್ಟ ಪ್ರಾಣಿ ಪಕ್ಷಿಗಳಿಂದ ತನ್ನನ್ನುಸ್ವಯಂ ಸಂರಕ್ಷಿಸಿಕೊಳ್ಳುತ್ತಿದ್ದ ರೀತಿ, ಪ್ರಾಣಿ ಪಕ್ಷಿಗಳ ಮಾಂಸ ಭಕ್ಷಣೆ ಬೇಟೆಯಾಡುವ ಅನಿವಾರ್ಯತೆ, ಆಹಾರದ ಉದ್ದೇಶ ಪರಿಸರ ಸತ್ಯ ಹಸಿವು ನಿತ್ಯ ಎಂಬ ಆಶಯ, ಪ್ರಾಣ ಪಕ್ಷಿ ಸಂತತಿಯನ್ನು ಬೆಳೆಸುವ ಕಾಯಕ ಸಾಂಸ್ಕೃತಿಕ ವಿಕಾಸದ ಆಗು ಹೋಗುಗಳನ್ನು ನಿಯಂತ್ರಿಸುವ ವಿಧಾನ, ಕೃಷಿ ಚಟುವಟಿಕೆಗಳಲ್ಲಿ ಪ್ರಾಣಿ ಪಕ್ಷಿಗಳ ಪಾತ್ರ, ಪರಿಸರದಲ್ಲಿ ಮನುಷ್ಯನ ಉಳಿವಿಗಾಗಿ ಮೃಗ ಪಕ್ಷಿಗಳ ಅನಿವಾರ್ಯತೆ, ಪ್ರಾಣಿ ಪಕ್ಷಿಗಳ ನೋವು ನಲಿವೂ ಸಹ ಅಲ್ಲಲ್ಲಿ ಕಾವ್ಯವಾಗಿ ಆಕಾರಗೊಂಡಿವೆ. ಪ್ರಾಣಿ ಪಕ್ಷಿಗಳನ್ನು ಬಳಸಿಕೊಂಡು ಕಾಯಿಲೆಗಳಿಗೆ ನೀಡುವ ಚಿಕಿತ್ಸೆ, ಕೆಳವರ್ಗದಲ್ಲಿ ಜನಿಸಿದವರು ಪ್ರಾಣಿ ಪಕ್ಷಿಗಳ ರಕ್ಷಕರಂತೆ ಗುರುತಿಸಿಕೊಳ್ಳುವ ಪರಿಪಾಠ, ಪ್ರಾಣಿ ಪಕ್ಷಿಗಳನ್ನು ಆಧಾರವಾಗಿಟ್ಟು ಮಾಡುವ ಪವಾಡಗಳು, ಶಾಪ ಮತ್ತು ವರಗಳ ನಿದರ್ಶನಗಳಾಗಿ ಈ ಜನಪದ ಮಹಾಕಾವ್ಯಗಳಲ್ಲಿ ಕಾವ್ಯಗಳು ನಿಲ್ಲುತ್ತವೆ.

ಮನುಷ್ಯ ಸಂಸ್ಕೃತಿಯಲ್ಲಿ ಮುಂದುವರಿದಂತೆ ತನಗೆ ತಾನೇ ಆಹಾರವಾಗಿ ನಾಶವಾಗುವುದನ್ನು ತಪ್ಪಿಸಲು ಪ್ರಾಣಿ ಬಲಿಕೊಡುವುದನ್ನು ಪ್ರಾರಂಭಿಸಿದ ರೀತಿ, ಪ್ರಾಣಿಗಳ ಸಂಜ್ಞೆಗಳು,ಚಲನವಲನಗಳು,ಅವು ವ್ಯಕ್ತ ಪಡಿಸುವ ಪ್ರತಿಕ್ರಿಯೆಗಳು ಶಕುನಗಳಾಗಿ ಕಂಡು ಕೊಂಡ ಬಗೆ, ಕೆಲ ದೇವತೆಗಳು ಪ್ರಾಣಿ ಪಕ್ಷಿಯೋಪಾದಿಯಲ್ಲಿ ಭೂತಗಳಾಗಿ ಬಂದು ಜೀವನ ಪ್ರೀತಿಯನ್ನು ಕಲಿಸುವಾಗ ಎಲ್ಲರನ್ನೂ ಏಕವಚನದಲ್ಲಿ ಕರೆಯಲಾಗುತ್ತಿದ್ದ ವೈಶಿಷ್ಟ್ಯತೆ, ಜನಪದ ಮಹಾಕಾವ್ಯದ ದೇವತೆಗಳು ಹುಲಿ, ಸಿಂಹ, ಕಾಗೆ ,ಇಲಿ, ಗಿಳಿ ಮೊದಲಾದ ಪ್ರಾಣಿಗಳನ್ನು ವಾಹನಗಳನ್ನಾಗಿ ಆಯ್ಕೆ ಮಾಡಿಕೊಂಡು ಸ್ವಾವಲಂಬಿಗಳಾಗಿ ಬದುಕ್ಕುತ್ತಿದ್ದ ಪರಿಸರ ನಮ್ಮ ಕಣ್ಮುಂದೆ ಬರುತ್ತದೆ.

"ಮಾನವ ಜಾತಿಯಲ್ಲಿ ಫಲವಂತಿಕೆ ಹೋದ್ರೆ ಪ್ರಾಣಿ ಪಕ್ಷಿಗಳಲ್ಲೂ ಫಲವಂತಿಕೆ ಹೋಗುತ್ತೆ. ಇವೆಲ್ಲಾ ಒಂದಕ್ಕೊಂದು ಹೆಣೆದುಕೊಂಡಿರುವಂತಹ ಜೀವಜಾಲ ಅನ್ನುವ ಒಂದು ಗ್ರಹಿಕೆಯನ್ನು ಇಷ್ಟು ರೋಮಾಂಚಕವಾಗಿ

ISBN – 978-93-5526-247-9

ಜನಪದ ಮಹಾಕಾವ್ಯಗಳು ಕೊಡುತ್ತವೆ" ಎಂಬ ಡಾ.ಸಿ.ಎನ್. ರಾಮಚಂದ್ರನ್ ರವರ ಮಾತನ್ನು ಮೆಲುಕುಹಾಕುತ್ತಾ, ವೃತ್ತಿ ಗಾಯಕರು ಜನಪದ ಮಹಾಕಾವ್ಯಗಳನ್ನು ಹಾಡುವಾಗ ಪ್ರಾಣಿಗಳ ಚರ್ಮಗಳಿಂದ ಮಾಡಿದ ವಾದ್ಯಗಳನ್ನು ಭಕ್ತಿಯಿಂದ ನುಡಿಸುತ್ತಿದ್ದರು. ಕೆಲವೊಂದು ಪ್ರಾಣಿ ಪಕ್ಷಿಗಳ ವಿವರಗಳು ಕಾವ್ಯದಲ್ಲಿ ಬಂದಾಗ ಹಾಡುಗಾರಿಕೆಯಲ್ಲಿ ಬೇಸರ ಇರಬಾರದೆಂದು ಪುನರಾವರ್ತನೆ ಮಾಡುವುದರ ಮೂಲಕ ಕಾವ್ಯಕ್ಕೆ ಜೀವಕಳೆಯನ್ನು ತುಂಬುತ್ತಿದ್ದರು.

ಮೂರು ಮಹಾಕಾವ್ಯಗಳಲ್ಲಿ ಅಡವಿಯ ಅಥವಾ ಸಾಕಿರುವ ಪಶುಪಕ್ಷಿಗಳ ಸಂಗೋಪನೆಯ ಜೊತೆಗೆ ಅವುಗಳನ್ನು ಪ್ರೀತಿಯಿಂದ ಗೆಲ್ಲುವ, ವಿಶ್ವಾಸಗಳನ್ನು ಗಟ್ಟಿಗೊಳಿಸಿಕೊಳ್ಳುವ ಸಂದರ್ಭಗಳು, ಜೀವನ ಕ್ರಮದ ಬಣ್ಣನೆ ಕೇಳುಗರಿಗೆ ಬಹಳ ಪರಿಣಾಮಕಾರಿಯಾಗಿ ಪ್ರಭಾವ ಬೀರುವ ಸನ್ನಿವೇಷಗಳನ್ನು ಅಕ್ಷರ ರೂಪದಲ್ಲಿ ಸೆರೆಹಿಡಿಯುವ ಸಣ್ಣ ಪ್ರಯತ್ನವನ್ನು ಮಾಡಿದ್ದೇನೆ.

**ಆಕರ ಗ್ರಂಥಗಳು**

**ಮಲೆಯ ಮಾದೇಶ್ವರ–1** (ಜನಪದ ಮಹಾಕಾವ್ಯ, ಸಂಪಾದಕರು–ಡಾ.ಪಿ.ಕೆ.ರಾಜಶೇಖರ–ಕನ್ನಡ ಸಂಸ್ಕೃತಿ ಇಲಾಖೆ)

**ಮಂಟೇಸ್ವಾಮಿ** (ಬುಡಕಟ್ಟು ಮಹಾಕಾವ್ಯ ಮಾಲೆ– ಸಂಪಾದಕರು– ಪ್ರೊ.ಹಿ.ಚಿ.ಬೋರಲಿಂಗಯ್ಯ– ಹಂಪಿ ವಿಶ್ವ ವಿದ್ಯಾಲಯ)

**ಜುಂಜಪ್ಪ** (ಬುಡಕಟ್ಟು ಮಹಾಕಾವ್ಯ ಮಾಲೆ– ಸಂಪಾದಕರು– ಚಲುವರಾಜ– ಹಂಪಿ ವಿಶ್ವ ವಿದ್ಯಾಲಯ)

***

**ISBN – 978-93-5526-247-9**

## 20.ಕನ್ನಡ ಜನಪದ ಮಹಾಕಾವ್ಯ ಮಲೆ ಮಾದೇಶ್ವರ : ಪ್ರತಿರೋಧದ ನೆಲೆಗಳು

**ಡಾ. ಮಲ್ಲಯ್ಯ ಸಂಡೂರು**

ಕನ್ನಡ ನಾಡಿನಲ್ಲಿ ಸಾಂಸ್ಕೃತಿಕ ಪುರಾಣ ಎಂದರೆ ಅದು ಕೇವಲ ರಾಮಾಯಣ ಹಾಗೂ ಮಹಾಭಾರತಗಳ ಪುರಾಣ ಎಂಬ ಸಾರ್ವತ್ರಿಕ ಅಭಿಪ್ರಾಯವಿತ್ತು. ಈ ಸಂದರ್ಭದಲ್ಲಿ, ಜನಪದ ಮಹಾಕಾವ್ಯಗಳ ಮೂಲಕ ಕನ್ನಡ ಸಂಸ್ಕೃತಿಯನ್ನು ಹುಡುಕುವ ಕಾರ್ಯಕ್ಕೆ ಜನಪದ ವಿದ್ವಾಂಸರು ಮಾಡಿದರು. 'ಭಾರತೀಯ ಸಂಸ್ಕೃತಿ' ಎಂದು ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರ ಬಂದು ಪ್ರತಿಯೊಂದು ಭಾಷೆಯ ನೆಲಕ್ಕೂ ತನ್ನದೇ ಆದ ವಿಶಿಷ್ಟತೆ ಇದ್ದೇ ಇರುತ್ತದೆ. ತನ್ನದೇ ಆದ ಸಂಸ್ಕೃತಿ ಇದೆ ಎಂಬ ವಾಸ್ತವದ ನೆಲೆಯಲ್ಲಿ, ನೆಲದ ಗುಣ ಹುಡುಕುವ ಕಾರ್ಯಕ್ಕೆ ವಿದ್ವಾಂಸರು ಕೈಹಾಕಿದರು. ಈ ದೆಸೆಯಲ್ಲಿ ಆಯಾ ಭಾಷೆಯ ಸಂಸ್ಕೃತಿಗೆ ಒಂದು ಪರಂಪರೆಯಿರುವುದರಿಂದ ಆ ಪರಂಪರೆಯೇ ಒಂದು ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿತು. ಅಂತಹ ಸಂದರ್ಭದಲ್ಲಿ ಮಲೆ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಇಂತಹ ಸಾಂಸ್ಕೃತಿಕ ನಾಯಕರ ದೀರ್ಘ ಕಥಾನಕಗಳ ಮಹಾಕಾವ್ಯಗಳ ರೂಪದಲ್ಲಿ ಸಂಗ್ರಹ, ಸಂಪಾದನೆ ಕಾರ್ಯ ನಡೆದವು.

ಮಹಾಕಾವ್ಯಗಳು ಹೀಗೇ ಇರಬೇಕೆಂಬ ಚೌಕಟ್ಟಿತ್ತು. ಸದ್ವಂಶಜನಾದ ಒಬ್ಬ ನಾಯಕ, ಉದಾತ್ತ ಗುಣಸ್ವಭಾವದ ರಾಜ, ಸದಾ ಕೆಟ್ಟದ್ದನ್ನೇ ಬಯಸುವ ಪ್ರತಿನಾಯಕರು ಅಷ್ಟಾದಶ ವರ್ಣನೆಗಳು ಮೊದಲಾದವುಗಳೆಲ್ಲ ಒಂದು ಕಾವ್ಯಕ್ಕೆ ಇರಲೇಬೇಕಾಗಿದ್ದವು. ಇದುವರೆಗೆ ಮಹಾಕಾವ್ಯವನ್ನು ಕುರಿತು ಚರ್ಚೆ ಕನ್ನಡದಲ್ಲೂ ನಡೆದಿದೆ. ಕಾವ್ಯಮೀಮಾಂಸರು, ಸಾಹಿತ್ಯ ವಿಮರ್ಶಕರು ಮಹಾಕಾವ್ಯದ ಗೊತ್ತುಗುರಿಗಳನ್ನು ಹಾಗೂ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ. ಕನ್ನಡದ ಮಹಾಕಾವ್ಯಗಳು ಮತ್ತು ಭಾರತೀಯ ಮಹಾಕಾವ್ಯಗಳನ್ನು ಅಲ್ಲದೆ, ಪಾಶ್ಚಾತ್ಯ ಮಹಾಕಾವ್ಯಗಳನ್ನು ಕುರಿತು ವ್ಯಾಪಕವಾದ ಚರ್ಚೆ ನಡೆಸುತ್ತಲೇ ಬಂದಿದೆ. ಕೇವಲ ಶಿಷ್ಟಕಾವ್ಯಗಳನ್ನು ಕುರಿತಾದ ಏಕಮುಖ ಚರ್ಚೆಯನ್ನು ಮಾತ್ರ ಬೆಳೆಸುವ ಮೂಲಕ ಸಾಂಸ್ಕೃತಿಕ ವಲಯದ ಬಹುಮುಖ್ಯ ಭಾಗವಾದ ಮೌಖಿಕ ಮಹಾಕಾವ್ಯಗಳನ್ನು ಚರ್ಚಿಸುವುದನ್ನು ವಿದ್ವಾಂಸರು ಬಿಟ್ಟರು. ಇಲ್ಲವೆ ಈ ಮೌಖಿಕ ಪರಂಪರೆಯ ಕಾವ್ಯಗಳು ಅವರಿಗೆ ಮುಖ್ಯವಾಗಿ ಕಂಡಿಲ್ಲದಿರಲೂಬಹುದು. ಆದರೆ ಪಾಶ್ಚಾತ್ಯ ಮೌಖಿಕ ಮಹಾಕಾವ್ಯಗಳೆನಿಸಿದ ಕಲೇವಾಲಾ, ಗಿಲ್ಗಮಿಷ್ ಮತ್ತು ಬೋವುಲ್ಫ್‌ಗಳಂತಹ ಕಾವ್ಯಗಳನ್ನು ಅಪ್ಪಟ ಕಾವ್ಯ ಎಂದು ಪರಿಗಣಿಸಿದರು. ಪಾಶ್ಚಾತ್ಯರು ಆ ಸಾಲಿನಲ್ಲಿ ಅವುಗಳನ್ನು ಸ್ಪಷ್ಟವಾಗಿ ದಾಖಲಿಸಿದರು.

ಜನಪದ ಮಹಾಕಾವ್ಯ ಶಿಷ್ಟಕ್ಕಿಂತ ಭಿನ್ನವಾದ ದರ್ಶನವನ್ನು ಲೋಕದೃಷ್ಟಿ ಸೃಷ್ಟಿಗಳನ್ನು, ಸ್ಥಳೀಯ ಪ್ರಾದೇಶಿಕ ನೆಲೆಯ ವೈಶಿಷ್ಟ್ಯಗಳನ್ನು ಸಾದರಪಡಿಸುತ್ತವೆ. ಮುಖ್ಯವಾಗಿ ಈ ಕಾವ್ಯದಲ್ಲಿ ಸಾಂಸ್ಕೃತಿಕ ನಾಯಕನ ಕೇಂದ್ರಿತವಾದ ಕಥೆಯಾಗಿರುತ್ತದೆ. ತನ್ನ ಘನತೆಯನ್ನು ಕಾಪಾಡಿಕೊಳ್ಳಲು ನಾಯಕನು ಯಾವುದೇ ರೀತಿಯ ಸವಾಲನ್ನು ಎದುರಿಸಲು ತಯಾರಿರುತ್ತಾನೆ. ಈ ಉದ್ದೇಶ ಸಾಧನೆಗಾಗಿ ಅವನು ಮಾನುಷ ಹಾಗೂ ಅತಿಮಾನುಷ ಶಕ್ತಿಗಳೊಡನೆ ಮುಖಾಮುಖಿಯಾಗಿ ಹೋರಾಡುತ್ತಾನೆ. ಈ ನಾಯಕ ಧೀರೋದಾತ್ತನಿರುತ್ತಾನೆ. ಅವನಿಗೆ ಪ್ರತಿಯಾಗಿ ಒಬ್ಬ ಪ್ರತಿನಾಯಕನಿರುತ್ತಾನೆ. ಈ ಎರಡೂ ಶಕ್ತಿಗಳ ನಡುವಣ ಸಂಘರ್ಷದಲ್ಲಿ ಒಳ್ಳೆಯದಕ್ಕೆ ಗೆಲುವು ಪ್ರಾಪ್ತವಾಗುವುದು. ದುಷ್ಟಶಕ್ತಿಗಳು ಸೋಲುವುವು; ಇಲ್ಲವೇ ನಾಶವಾಗುವವು. ಕಾವ್ಯದ ಉದ್ದಕ್ಕೂ ದೈವಿಕ ಹಾಗೂ ಮಾನುಷ ಶಕ್ತಿಗಳು ನಾಯಕನ ಜೀವನವನ್ನು ನಿಯಂತ್ರಿಸುತ್ತವೆ. ಇಲ್ಲಿ ಗಮನಿಸಲೇಬೇಕಾದ ಬಹುಮುಖ್ಯ ಸಂಗತಿಯೆಂದರೆ; ಜನಪದ ಮಹಾಕಾವ್ಯದ ಮುಖ್ಯ ಅಮುಖ್ಯ ಎಲ್ಲ ಪಾತ್ರಗಳಲ್ಲೂ ಮಾನವೀಯತೆಗೆ ಒತ್ತು ಇರುವುದು. ಚಿಕ್ಕ ಚಿಕ್ಕ ವಿವರಗಳಿಂದ ಇದನ್ನು ಮಂಡಿಸುವ ಪ್ರಯತ್ನವಿರುತ್ತದೆ. ಜನಜೀವನದ ವಾಸ್ತವ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನವಿರುವ ಕಾರಣದಿಂದಲೇ ಜನಪದ ಮಹಾಕಾವ್ಯಗಳು ವಿಶಿಷ್ಟವಾಗಿ ಕಂಡುಬರುತ್ತವೆ. ಇಲ್ಲಿ ನಿರೂಪಕ ತಾನು ಒದಗಿಸುವ ನಿತ್ಯ ಜೀವನದ ವಿವರಗಳ ಮೂಲಕ ವಾಸ್ತವ ಲೋಕವನ್ನು ಸೃಷ್ಟಿಸುತ್ತಾನೆ. ಪ್ರಮುಖ ಪಾತ್ರಗಳ ದೈನಿಕ ವಿವರಗಳನ್ನು ಸಂದರ್ಭೋಚಿತವಾಗಿ ಒದಗಿಸುವುದು ಕೂಡ ಈ ಉದ್ದೇಶದಿಂದಲೇ. ಕಥೆಯ ಬೆಳವಣಿಗೆಯ ದೃಷ್ಟಿಯಿಂದ ಇಂತಹ ವಿವರಗಳು ಅನಗತ್ಯ ಎಂದು ಅವರು ಭಾವಿಸುವುದಿಲ್ಲ.

ಮಲೆ ಮಾದೇಶ್ವರ ಕರ್ನಾಟಕ ಜನಪದ ಮಹಾಕಾವ್ಯಗಳಲ್ಲಿ ಅತ್ಯಂತ ಶ್ರೇಷ್ಠ ಜನಪದ ಮಹಾಕಾವ್ಯವಾಗಿದೆ. ಬೃಹತ್ ಹಾಗೂ ವ್ಯಾಪಕತೆಯಿಂದ ಮಲೆಯ ಮಾದೇಶ್ವರ ಕಾವ್ಯ ಮಂಟೇಸ್ವಾಮಿ ಕಾವ್ಯಕ್ಕಿಂತ ದೊಡ್ಡದು. ಕಾವ್ಯ

ISBN – 978-93-5526-247-9 

ಸ್ವರೂಪ ದೃಷ್ಟಿಯಿಂದಲೂ, ಪ್ರಾದೇಶಿಕ ದೃಷ್ಟಿಯಿಂದಲೂ, ವಿಸ್ತಾರದ ದೃಷ್ಟಿಯಿಂದಲೂ, ವೈವಿಧ್ಯಮಯ ಸೊಗಸಿನಿಂದಲೂ ಮಾದೇಶ್ವರ ಕಾವ್ಯ ಜನಪದ ಕಾವ್ಯಗಳ ಅನರ್ಘ್ಯರತ್ನ ಎಂದು ವಿದ್ವಾಂಸರು ಗುರುತಿಸುತ್ತಾರೆ. ಮಲೆಮಾದೇಶ್ವರ ಕಾವ್ಯವನ್ನು ದೇವರ ಗುಡ್ಡರು ಸುಮಾರು ಒಂಬತ್ತು ರಾತ್ರಿ ಹಾಡುವಷ್ಟು ಸುದೀರ್ಘವಾದ ಕಾವ್ಯವನ್ನು ಹಾಡುತ್ತಾರೆ. ಕಂಸಾಳೆ ಎನ್ನುವ ಕಂಚಿನ ವಿಶಿಷ್ಟ ತಾಳವನ್ನು ಲಯಬದ್ಧವಾಗಿ ಬಡಿಯುತ್ತಾ ಹಾಡಿನ ಗತಿಗೆ ಜೀವತುಂಬುತ್ತಾರೆ. ಕಾವ್ಯವು ಆರಂಭದಿಂದ ಅಂತಿಮದ ವರೆಗೆ ನಿರಂತರವಾಗಿ ಮಾದೇಶ್ವರನ ಹುಟ್ಟು, ನಡೆಸಿದ ಪವಾಡಗಳನ್ನು ಕುರಿತು ಏಳೆಂಟು ಬಿಡಿ ಬಿಡಿ ಕಥೆಗಳಾಗಿ ಅಥವಾ ಕವಲುಗಳಾಗಿ ಎಣೆಯಲ್ಪಟ್ಟಿದೆ. ಇವನ್ನು ಕಾವ್ಯ ಭಾಗ ಎಂದು ಕರೆಯುವರು. ಸಾಲು ಎಂದರೆ 'ಅಧ್ಯಾಯ' ಎಂಬರ್ಥವಿದೆ. ಮಾದೇಶ್ವರ ಕಾವ್ಯದಲ್ಲಿ ಸುಮಾರು ಏಳು ಸಾಲುಗಳು ಬರುತ್ತವೆ. ಒಂದೊಂದು ಸಾಲು ಒಂದೊಂದು ರಾತ್ರಿ ಹಾಡುವಷ್ಟು ವಿಸ್ತಾರವಾಗಿ ಹಬ್ಬಿವೆ. ಬೇರೆ ಬೇರೆ ಕಲಾವಿದರೂ ಬೇರೆ ಬೇರೆ ಸಾಲುಗಳನ್ನು ಹಾಡುತ್ತಾರೆ. ಹಲವು ಪವಾಡಗಳನ್ನು ವರ್ಣಿಸುವ ತಾಳುಗತೆಗಳು ಮಾದೇಶ್ವರರು ಪವಾಡವನ್ನು ಮರೆದು ಏಳುಮಲೆಯಲ್ಲಿ ನೆಲಸಿದ್ದು, ಗುಡಿಗೋಪುರ ಕಟ್ಟಿಸಿದ್ದು ಮತ್ತು ಇತರ ಸೇವೆಗಾಗಿ ಭಕ್ತರು ಅವರಿಗೆ ಗೌರವ ಸಲ್ಲಿಸಿದ್ದು, ಅವರು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿದ್ದು ಅತ್ಯಂತ ಸೊಗಸಾಗಿ, ವರ್ಣರಂಜಿತವಾಗಿ ಬಣ್ಣಿಸಲಾಗಿದೆ. ಕಾವ್ಯ ಸ್ವರೂಪ, ಪ್ರಾದೇಶಿಕ ಭಾಷಾ ವೈಶಿಷ್ಟ್ಯ, ವಿಸ್ತಾರ–ವೈವಿಧ್ಯಗಳ ದೃಷ್ಟಿಯಿಂದ ಮಲೆಯ ಮಾದೇಶ್ವರ ಕಾವ್ಯ ಒಂದು ಅಪರೂಪದ ಕೃತಿಯಾಗಿದೆ. ಇಲ್ಲಿ ಹಾಡು ಪರಂಪರೆಯ ಜೊತೆಗೆ ಸಾಹಿತ್ಯ ಸಂಕರಗೊಂಡಿದೆ. ಇದರ ಮುಖೇನ ಕಥನ ಸಾಗುತ್ತದೆ.

ಮಾದೇಶ್ವರ ಕಾವ್ಯದ ನಾಯಕ. ಮಾದೇಶ್ವರ ಕಾವ್ಯ ಆದಿಶಕ್ತಿಯ ಸೃಷ್ಟಿಯಿಂದ ಆರಂಭವಾಗಿ ಮಾದೇಶ್ವರ ತನ್ನ ಎಣ್ಣೆ ಮಜ್ಜನಕ್ಕೆ ಸೂರಗೂರಯ್ಯನ ಕುಟುಂಬದ ಮೂಗಪ್ಪ ಹಾಗೂ ರಾಮವ್ವೆಯರನ್ನು ಒಕ್ಕಲು ಮಾಡಿಕೊಳ್ಳಲಾಗಿದೆ. ಪ್ರತಿ ಸಾಲಿನಲ್ಲಿಯೂ ಮಾದೇಶ್ವರನನ್ನೇ ಮುಖ್ಯ ಪಾತ್ರಧಾರಿಯಾಗಿ ಬಂದು, ಇಡೀ ಕಾವ್ಯ ಮಾದೇಶ್ವರ ಮಯವಾಗಿದೆ. ಇದರಲ್ಲಿ ಮಾದೇಶ್ವರ ತಮ್ಮ ಜನರ ಒಳಿತಿಗಾಗಿ ಮುಂದಾಳತ್ವ ವಹಿಸಿಕೊಂಡು ಶತೃಗಳ ನಾಶ ಮಾಡಿರುತ್ತಾನೆ. ಜನಪರ ಕೆಲಸಕ್ಕಾಗಿ ನಡೆಸಿದ ಹೋರಾಟ ಅಥವಾ ಪ್ರತಿರೋಧದ ನೆಲೆಗಳನ್ನು ಇಟ್ಟುಕೊಂಡು ಇಲ್ಲಿ ಚರ್ಚಿಲಾಗಿದೆ. ಇಂತಹ ಸಾಂಸ್ಕೃತಿಕ ವೀರನ ಚಟುವಟಿಕೆಗಳೆಲ್ಲವೂ ಒಂದೊಂದು ಘಟನೆಗಳಾಗಿ ಜನರ ಮನಸ್ಸಿನಲ್ಲಿ ನಿಂತು ಅದೇ ಮಹಾಕಾವ್ಯವಾಗಿ ಬೆಳೆದ ಸಂಗತಿಗಳಿವೆ. ಹಾಗಾಗಿ ಇಲ್ಲಿ ದಮನಿತ ಸಮುದಾಯಗಳ ಸಂಕಟಗಳಿಗೆ ಕಾರಣವಾದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಂಗತಿಗಳನ್ನು ಗುರುತಿಸಿ, ಆ ಸಮುದಾಯಗಳ ಜನರಲ್ಲಿ ಪ್ರಜ್ಞೆ ಮತ್ತು ಪ್ರತಿರೋಧ ಶಕ್ತಿಯನ್ನು ತುಂಬುವ ಮಾದರಿಯನ್ನು ಅನುಸರಿಸಿ ಮಲೆ ಮಾದೇಶ್ವರ ಮಹಾಕಾವ್ಯವನ್ನು ಇಲ್ಲಿ ಚರ್ಚಿಸಲಾಗಿದೆ.

ಮಲೆಮಾದೇಶ್ವರ ಕಾವ್ಯ ಅಥವಾ ಮಹಾಕಾವ್ಯವಾಗಿ ಮಾತ್ರ ಸೀಮಿತವಾಗಿರದೆ, ನಿಜವಾದ ಅರ್ಥದಲ್ಲಿ ಮಾದೇಶ್ವರ ಮತ್ತು ಅವನ ಕಾವ್ಯವನ್ನು ನೋಡುವುದು ಮಾದೇಶ್ವರ ಹಿನ್ನೆಲೆಯಲ್ಲಿಯೇ. ಇದರಿಂದಾಗಿ ಹಾಗೆ ನೋಡಿದಾಗ ಭಾರತ ಹಾಗೂ ಕರ್ನಾಟಕ ಸಂಸ್ಕೃತಿಯ ಸಂದರ್ಭದಲ್ಲಿ ಎಂತಹ ಮಹತ್ವದ ಉತ್ಪತ್ತಿ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಅವನು ಯಾವುದೇ ಸಮಾಜದ ಸಂಸ್ಕೃತಿಯ ನಿರ್ವಾಹಕನಲ್ಲ. ಒಬ್ಬ ಮುಖ್ಯಸ್ಥನಿರಬಹುದು. ಮಾದೇಶ್ವರ ಸಂಸ್ಕೃತಿ ಸೃಷ್ಟಿಯ ಮಧ್ಯದಲ್ಲಿ ನೆಲೆಯಾಗಿದ್ದಾನೆ. ಅವನ ಕ್ರಿಯಾಶೀಲತೆ ಸಮಾಜದಲ್ಲಿ ಅಂತರ್ಮುಖಿ ಹಾಗೂ ಬಹಿರ್ಮುಖಿ ಬದಲಾವಣೆಗಳನ್ನು ತಂದಿದೆ. ಮಾದಪ್ಪನಿಗೆ ಇದ್ದ ದೊಡ್ಡ ಸವಾಲು ಎಂದರೆ ಸಾಂಸ್ಕೃತಿಕವೆಂದು ಪರಿಗಣಿಸದ ಒಂದು ಪ್ರದೇಶವನ್ನು ಸಾಂಸ್ಕೃತಿಕವಾಗಿಸುವ ಸವಾಲು ಆ ಕಾರಣಕ್ಕಾಗಿಯೇ. ಆತ ಎರಡು ಕಡೆಯಿಂದ ಸಾಂಸ್ಕೃತಿಕ ಕೇಂದ್ರವನ್ನು ತನ್ನ ಕಡೆಗೆ ಸೆಳೆದಿದ್ದಾನೆ. 12ನೇ ಶತಮಾನದ ಶರಣರಲ್ಲಿ ಭಕ್ತಿಗೆ ಪ್ರಾಧಾನ್ಯತೆಯಿದೆ. ಆ ಭಕ್ತಿಯ ಒಂದು ಸಾಕಾರವನ್ನು ಬಸವೇಶ್ವರರ ವ್ಯಕ್ತಿತ್ವದ ಮುಖಾಂತರ ಅದಕ್ಕೊಂದು ಸ್ವರೂಪ ಒದಗಿದಂತಿದೆ. ಸಾಮಾನ್ಯವಾಗಿ ಎಲ್ಲ ಧರ್ಮಗಳಲ್ಲಿ ಭಕ್ತಿಯ ಉದ್ದೇಶ ಮೋಕ್ಷ ಸಾಧನೆಯಾಗಿದೆ. ಬಸವೇಶ್ವರರ ವಚನ ಚಳುವಳಿಯ ಮೂಲಕ ಅದು ಇನ್ನೂ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಶತಶತಮಾನಗಳಿಂದ ಮೌಢ್ಯತೆ, ಸಂಪ್ರದಾಯಗಳಲ್ಲಿ ಕೊಳೆತು ನಾರಿದ ಅಂದಿನ ಯಜಮಾನ ಸಂಸ್ಕೃತಿಯ ಕಪಿಮುಷ್ಟಿಯಲ್ಲಿ ಕರಗಿಹೋದ ಅಜ್ಞಾನ, ಅಹಂಕಾರಗಳಲ್ಲಿ ಮುಳುಗಿಹೋದ ಜನ ಸಮುದಾಯಕ್ಕೆ ಇಷ್ಟೊಂದು ಸರಳ ಭಕ್ತಿಯ ಹೆಸರಿನಲ್ಲಿ ಶರಣರು ಅವರನ್ನು ಸರಿದಾರಿಗೆ ತಂದರು. ವಚನ ಚಳುವಳಿಯ ಸಾಹಿತ್ಯ ಸಂದರ್ಭದಲ್ಲಿ ಬಸವಣ್ಣನವರ ಪರ್ಯಾಯ ಆಲೋಚನೆಗಳಿಗೆ ಮತ್ತು ಆಚಾರಗಳಿಗೆ ವಿರುದ್ಧ ದಿಕ್ಕಿನಲ್ಲಿ ಪರ್ಯಾಯ ಒಕ್ಕೂಟಗಳನ್ನು ಸಾಂಸ್ಕೃತಿಕ ನಾಯಕರೆನಿಸಿಕೊಂಡ ಕೆಳವರ್ಗದ ಮಂಟೇಸ್ವಾಮಿ ಹಾಗೂ ಮಲೆ ಮಾದೇಶ್ವರರು ವೀರಶೈವ ಧರ್ಮದ ಆಚಾರ ತತ್ವಗಳನ್ನು ತೀವ್ರವಾಗಿ ಪ್ರತಿರೋಧಿಸಿ

ISBN – 978-93-5526-247-9

ಜ್ಯೋತಿರ್ಲಿಂಗ ಕಲ್ಪನೆಯನ್ನು ಕಟ್ಟಿಕೊಟ್ಟರು. ಆ ಸಂದರ್ಭದಲ್ಲಿ ಕೆಳಸ್ತರದ ಕಾಯಕ ಜೀವಿಗಳನ್ನು ಒಟ್ಟುಗೂಡಿಸಿ ಬಸವಣ್ಣನವರ ಪರ್ಯಾಯ ಒಕ್ಕೂಟವನ್ನು ಸ್ಥಾಪಿಸಿದರು. ಆದ್ದರಿಂದಾಗಿ ವಚನ ಚಳುವಳಿಯ ನಂತರ ನಡೆದ ವೀರಶೈವೀಕರಣ ಪ್ರಕ್ರಿಯೆಯಾದ ಷಟ್‌ಸ್ಥಲ ಪರಿಕಲ್ಪನೆ, ಅಷ್ಟಾವರಣ, ಪಂಚಾಚಾರ, ದಾಸೋಹ ಕಲ್ಪನೆಗಳ ಕೇಂದ್ರವ್ಯಕ್ತಿಗಳಾದ ಜಂಗಮರನ್ನು ಧರೆಗೆ ದೊಡ್ಡವರು ನಿರಾಕರಿಸಿದರು.

ಮಾದೇಶ್ವರ ಶಕ್ತಿಪಂಥದ ಶೈವ ಅಸಮಾನತೆ, ಮೋಸ ವಂಚನೆಗಳನ್ನು ಅನುಭವಿಸಿದವನು. ಅವನ ಹೋರಾಟ ಕೂಡ ಸಾಮಾನ್ಯವಾದವುಗಳನ್ನು ಸಾಮಾನ್ಯ ಜೀವನದ ನೆಲೆಯಲ್ಲಿಯೇ ಪಡೆಯುವುದು. ಅವನಿಗೆ ತಪಸ್ಸು, ವ್ರತ, ಪೂಜೆ, ಮುಂತಾದವು ಹೀರಿಕೆಗಳು, ಅವುಗಳ ಸಮೀಪಕ್ಕೆ ಆತ ಹೋಗುವುದಿಲ್ಲ, ಸಾಮಾನ್ಯರ ಮಧ್ಯೆ ಕೂಡ ವ್ರತ, ಪೂಜೆ, ತಪಸ್ಸುಗಳೆಂಬ ಸೃಜನಾತ್ಮಕ ಕಾಲ ಮತ್ತು ಕ್ರಿಯೆಗಳನ್ನು ಕೊಲ್ಲುವ ಆಯುಧಗಳಿಲ್ಲ. ಆದರೆ ಅವನಿಗೊಂದು ಪುರಾಣಬೇಕು. ಆ ಪುರಾಣ ಕೂಡ ಅಹಿಂಸಾತ್ಮಕವಾದ ಒಂದು ಸಂಘರ್ಷದ ಮೊತ್ತವಲ್ಲ. ಸೃಜನಾತ್ಮಕ ವರ್ತನೆ ಮಾತ್ರ ಕಾವ್ಯದಲ್ಲಿ ಮಲೆ ಮಾದೇಶ್ವರ ಭೀಮನ ಕೊಲ್ಲಿಗೆ ಬಂದಾಗ ಮೊದಲು ಭೇಟಿಯಾಗುವುದು. ಹಲಗಪ್ಪ ಮತ್ತು ಮುದ್ದಮ್ಮನನ್ನು ಅವರಿಂದ ಭಿಕ್ಷೆಯನ್ನು ತೆಗೆದುಕೊಂಡು, ಮೊದಲ ಪೂಜೆಯನ್ನು ಇವರಿಂದಲೇ ಆಗಬೇಕೆಂಬುದಾಗಿ ಮಾದಪ್ಪ ಇವರನ್ನು ಸಂಧಿಸುತ್ತಾನೆ.

ಮಾಯ್ಕಾರ ಹಲಗಪ್ಪ ದಂಪತಿಗಳಿಗೆ ಹರಕು ಪಂಜೆಯನ್ನು ಉಟ್ಟುಕೊಂಡು ಪಂಚಾಂಗದ ಕಟ್ಟು ಕೈಲಿಹಿಡಕೊಂಡು ಶಾಸ್ತ್ರಗಾರನಾಗಿ ವೇಷವನ್ನು ತೊಟ್ಟು ಜಗಲಿಮ್ಯಾಲೆ ಕಾಣಿಸಿಕೊಳ್ಳುವುದು ಒಂದು ವ್ಯವಸ್ಥೆಗೆ ಪ್ರತಿರೋಧವನ್ನು ಒಡುವುದು ಇಲ್ಲಿ ಕಂಡುಬರುತ್ತದೆ. (ನೋಡಿ. ಮಲೆ ಮಾದೇಶ್ವರ ಡಾ. ಕೇಶವನ್ ಪ್ರಸಾದ್, ಪುಟ.10) ಇಲ್ಲಿ ದಲಿತರ ಬಗೆಗೆ ಮಾದಪ್ಪನಿಗೆ ಸಾಮಾಜಿಕ ಕಳಕಳಿಯಿದೆ. ವೇದನೆಯಿದೆ. ಆದ್ದರಿಂದ ಯಾವ ಒಂದು ವ್ಯವಸ್ಥೆಯನ್ನೆಲ್ಲ ಒಳಗು ಮಾಡಿಕೊಂಡು ಬದುಕುತ್ತ ಅದಕ್ಕೆ ವಿರುದ್ಧವಾಗಿಯೇ ಅವನು ತನ್ನ ಪ್ರತಿರೋಧವನ್ನು ಒಡ್ಡುತ್ತಾನೆ. ಬಡತನ, ದಾರಿದ್ರ್ಯ, ಅಸಮಾನತೆಗಳು ಕಾಡಿರುವ ಹಲಗಪ್ಪ ಹಾಗೂ ಮುದ್ದಮ್ಮರ ಬಾಳಿಗೆ ಅವರ ಮನೆಯಲ್ಲಿಯೇ ಪೂಜೆಗೊಂಡು ಅವರಿಗೆ ಅದರಿಂದ ಮುಕ್ತಿಯನ್ನು ಹೊಂದಿಸಲು ಮಾದಪ್ಪ ಇಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಾನೆ. ಸಮಾಜದಲ್ಲಿ ತಲೆಯೆತ್ತಿ ನಿಂತಿರುವ ಶೋಷಣೆ, ಅಸಮಾನತೆ, ದಾರಿದ್ರ್ಯ, ಧಾರ್ಮಿಕ ಮೌಢ್ಯತನ ಇವುಗಳಿಗೆ ಅವನು ಸಿಡಿದು ಬೀಳುತ್ತಾನೆ. ಪ್ರಸ್ತುತದಲ್ಲಿ ಎಲ್ಲಾ ಶೋಚನೀಯ ವಿಷಯಗಳಿಗೂ ಒಂದು ಪರಿಹಾರ ಒದಗಬೇಕು, ಬಡವ ಬಲ್ಲಿದ, ಕಾರ್ಮಿಕ ಭೂಮಾಲೀಕ, ಕೆಳವರ್ಗ ಮೇಲ್ವರ್ಗ ಇವುಗಳ ನಡುವೆ ತಾರತಮ್ಯ ಇರಬಾರದು. ಸಮಸಮಾಜ ನಿರ್ಮಾಣವಾಗಬೇಕೆಂಬ ಆಶಯವನ್ನು ಇಟ್ಟುಕೊಂಡು ಒಂದು ಚಳುವಳಿಯನ್ನು ಹುಟ್ಟುಹಾಕಿ, ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಲು ಮಾದೇಶ್ವರ ಮುಂದಾಗಿರುವುದು ಕಾವ್ಯದಲ್ಲಿ ಕಾಣುತ್ತೇವೆ. ಇಲ್ಲಿ ತನ್ನದೇ ಆದ ಮೌಲ್ಯವನ್ನು ತಂದುಕೊಟ್ಟು ಒಂದು ಶಕ್ತಿಯನ್ನು ನಿರ್ಮಿತಿ ಮಾಡಿ ಅದರ ಮುಖಾಂತರ ಒಂದು ಹೋರಾಟವನ್ನು ಮಾಡಬೇಕೆಂದು ಉದ್ದೇಶವನ್ನಿಟ್ಟುಕೊಂಡು ಅವನು ಒಕ್ಕಲು ಭಿಕ್ಷೆಯನ್ನು ಪಡೆದುಕೊಳ್ಳಲು ಅಲೆದಾಡುತ್ತಾನೆ. ಈ ಅಲೆದಾಟದಲ್ಲಿ ಸಾಮಾಜಿಕವಾಗಿ ಐಡೆಂಟಿಟಿಯನ್ನು ಕಳೆದುಕೊಂಡವರಿಗೆ ಒಂದು ನೆಲೆಯನ್ನು ಹೊಂದಲು ಸಹಕರಿಸುತ್ತಾನೆ. ಅವರನ್ನು ಒಕ್ಕಲು ಮಾಡಿಕೊಂಡು ಶಿಷ್ಯಪರಂಪರೆಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಹಾಗಾಗಿ ಕೆಳವರ್ಗದ ಸಂಸ್ಕೃತಿಯನ್ನು ಉದ್ಧಾರಮಾಡಲು ಸಂರಕ್ಷಿಸುವ ಈ ನಾಯಕ, ಪ್ರಗತಿಪರ ನಾಯಕ ಎಂಬುದು ತಿಳಿಯುತ್ತದೆ.

ಮಲೆ ಮಾದೇಶ್ವರ ಗಿರಿಜನರ ಉದ್ಧಾರಕ್ಕೆ ಶ್ರಮಿಸಿದ ಒಬ್ಬ ಸಾಂಸ್ಕೃತಿಕ ನಾಯಕ. ಕಾಯಕಕ್ಕೆ ಪ್ರಾಶಸ್ತ್ಯ ನೀಡಿದವನು. ಈ ಸಮಾಜ ಸೇವೆಯೇ ಒಂದು ಪವಾಡ ಇವನು ಮಾಡಿದ ಸಮಾಜ ಸುಧಾರಣೆ, ಧರ್ಮದ ಉತ್ಥಾನ ಇವು ಅವನ ಸಂಸ್ಕೃತಿಯ ಪ್ರತೀಕವಾಗಿ ನಿಲ್ಲುತ್ತವೆ. ಯಾವುದೇ ವ್ಯಕ್ತಿ ದೊಡ್ಡವನಾಗುವುದು ಪವಾಡದಿಂದಲ್ಲ, ಮುಖ್ಯವಾಗಿ ಅವನು ಮಾಡುವ ಸೇವೆಯಿಂದ ಎನ್ನಬಹುದು. ಪುರಾಣ ಪ್ರಸಿದ್ಧವಾದ ಐತಿಹಾಸಿಕ ವ್ಯಕ್ತಿಯನ್ನು ಪುರಾಣವ್ಯಕ್ತಿಯನ್ನಾಗಿ ಮಾರ್ಪಡಿಸುವಾಗ ಪವಾಡಗಳು ಅಂಗವಾಗುತ್ತದೆ. ಕಥಾ ವಸ್ತುವಿಗೆ ಒಂದು ಆಯಾಮ ಏರ್ಪಡುತ್ತದೆ.

ISBN – 978-93-5526-247-9

**ಅಯ್ಯೋ ನನ್ನಪ್ಪಾಜಿ ಏಳ್ಮಲೆ ಹೆತ್ತಯ್ಯ**
**ನಿನಗೂ ಜೀತ ಮಾಡೋದು ತಪ್ಪಿಲ್ಲದ ನನ್ನಪ್ಪ**
**ಉಳಿಯಲಿ ಮುಟ್ನಿಲ್ಲ ಕಡ್ಡು ತಿದ್ದುನಿಲ್ಲ**
**ಹೊಡುದಾಡಿ ಹೆಸ್ರು ತಕೋ ಬೇಕಾಯ್ತಲ್ಲ ನನ ಸ್ವಾಮಿ**

ಎನ್ನುವ ಈ ಸಾಲುಗಳನ್ನು ಗಮನಿಸಿದರೆ ಮಾದೇಶ್ವರನ ಹೋರಾಟಮಯತೆಯನ್ನು ಅದಕ್ಕೆ ಕಾರಣವನ್ನು ಹುದುಗಿಸಲಾಗಿದೆ. ಸುಮ್ಮನೆ ಕೂರದೇ ಇರುವ ಮಾದೇಶ್ವರ ಯಾವಾಗಲೂ ಏನಾದರೊಂದು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಹಂಬಲವುಳ್ಳವನು. ತಾನು ಕೈಗೊಂಡ ಯಾವುದಾದರೊಂದು ಕಾರ್ಯ ಮುಗಿದ ಮೇಲೆ ಏಳು ಬಾಯಿ ಹೊನ್ನುತ್ತದಲ್ಲಿ ನೆಲೆಗೊಂಡನೆಂಬ ಮಾತು ಇಲ್ಲಿ ಬರುತ್ತದೆ. ಸಂವೇದನಾಶೀಲತೆ ಹಾಗೂ ಮಾನಸಿಕ ತಾಕಲಾಟಕ್ಕೆ ಒಳಗಾಗುವುದನ್ನು ಇಲ್ಲಿ ಗಮನಿಸಬಹುದು. ಕೆಳಸ್ತರದಿಂದ ಬಂದ ಪಾತ್ರಗಳಿಂದಲೇ ತುಂಬಿಕೊಳ್ಳುವ ಈ ಕಾವ್ಯ ಧಾರ್ಮಿಕ ಹಾಗೂ ಸಾಮಾಜಿಕ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದ ಜನರು ಆಧ್ಯಾತ್ಮ ಸಾಧನೆಯಲ್ಲಿ ಮುಟ್ಟಿದ ಶಿಖರಗಳನ್ನು ಮನಗಾಣಿಸುತ್ತದೆ. ಮಾದೇಶ್ವರ ಮಾದಿಗ ಕುಲದ ತಾಯಿ ತಂದೆಗಳ ಮಗನಾಗಿ ಹುಟ್ಟಿದನೆಂಬುದನ್ನು ಕಾವ್ಯದ ಆರಂಭದಲ್ಲಿಯೇ ತಿಳಿಸುತ್ತದೆ. ಆತ ವ್ಯಕ್ತಿತ್ವ ಸಂಪಾದಿಸಿಕೊಂಡು ಅದರ ಅಸ್ಥಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡುವ ವಿಧಾನಗಳನ್ನು ಗಮನಿಸಿದಾಗ ಈ ಕಾವ್ಯ ಒದಗಿಸುವ ಆವರಣ ಮತ್ತಷ್ಟು ದೃಢಗೊಳ್ಳುತ್ತದೆ. ಮಾದೇಶ್ವರನ ಈ ಸಂಘರ್ಷ ತಾನು ಉತ್ರಾಜಮ್ಮನ ಗರ್ಭದಲ್ಲಿ ನೆಲೆಗೊಂಡಾಗಿನಿಂದಲೇ ಪ್ರಾರಂಭವಾಗುತ್ತದೆ.

ಮಲೆ ಮಾದೇಶ್ವರ ಒಬ್ಬ ಪ್ರಗತಿಪರ ನಾಯಕನಾಗಿದ್ದನು. ಹಾಗಾಗಿ ಕೆಲವು ಶಿಷ್ಟಪರಂಪರೆಗಳು ತಮ್ಮವನನ್ನಾಗಿ ಮಾಡಿಕೊಳ್ಳುವ ಹುನ್ನಾರ ನಡೆಸಿದ್ದೂ ಉಂಟು. ಹಾಗಾಗಿ ಇವನು ಯಾವುದೇ ಒಂದು ಜಾತಿ ಸಮುದಾಯಕ್ಕೆ ಕಡೆಗೆ ವಾಲದೆ ಶೋಷಿತರ, ಅಲಕ್ಷಿತರ ಪರವಾದ ನಾಯಕ. ಅವನ ಚಿಂತನೆ ಏನಿದ್ದರೂ ಅಲಕ್ಷಿತ ಸಮುದಾಯಗಳ ಕಡೆಗೆ ಇರುವುದನ್ನು ಕಾಣಬಹುದು. ದಾರಿದ್ರ್ಯ, ಬಡತನ ಮತ್ತು ಅಸಮಾನತೆಯಿಂದ ನೊಂದ ಜನರಿಗಾಗಿ ಪ್ರಗತಿಯ ಹಾದಿಯಲ್ಲಿ ಮುನ್ನಡೆಸಲು ಅವರಿಗೆ ಚಳುವಳಿ ಅವಶ್ಯವಾಗಿತ್ತು. ಆದ್ದರಿಂದ ಅವರು ದಲಿತರ, ಶೋಷಿತರು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಧಾರ್ಮಿಕವಾಗಿ ಶೋಷಣೆಗೊಳಗಾದವರನ್ನು ರಕ್ಷಿಸಲು ಅವನು ಅತ್ಯಂತ ಕೆಳವರ್ಗದ ಜನಾಂಗದ ನಾಯಕನಾಗಿ ಬಂದಿದ್ದು ಒಂದು ಚಾರಿತ್ರಿಕ ಘಟನೆಯೇ ಸರಿ. ಇದಕ್ಕೆ ಆಧಾರವಾಗಿ ಕ್ರಿ.ಶ. 1838ರ ಕಾಲದಲ್ಲಿದ್ದ ದೇವಚಂದ್ರನ 'ರಾಜಾವಳಿ ಕಥೆ'ಯಲ್ಲಿ ಕಾಣಬಹುದು.

ಹೀಗೆ ಮಾದೇಶ್ವರನ ಕಾವ್ಯವನ್ನು ಹಾಡಿದವರು ಬಹುಪಾಲು ಮಂದಿ ಕೆಳವರ್ಗದವರೇ ಆಗಿದ್ದಾರೆ. ಚರಿತ್ರೆ ಮತ್ತು ಶಾಸನಗಳು ಸತ್ಯವನ್ನು ಮರೆಮಾಚುವಾಗ ಮೌಖಿಕ ಸಂಪ್ರದಾಯದಿಂದ ಉಳಿದುಕೊಂಡು ಬಂದ ಆ ಜನರ ಬದುಕಿನ ನಡೆ ನುಡಿಯೇ ಸತ್ಯವಾಗಿಬಿಡುತ್ತದೆ. ಆಗ ಶಾಸನಗಳು ಮತ್ತು ಚರಿತ್ರೆಯು ಅಲ್ಲಿ ಗೌಣವಾಗುತ್ತದೆ. ಏಕೆಂದರೆ ಅಲಕ್ಷಿತ ಬದುಕನ್ನು ಯಾವ ಚರಿತ್ರೆಯು ಸಹ ಕಟ್ಟಿಕೊಟ್ಟಿಲ್ಲ. ಶಾಸನ ಮತ್ತು ಚರಿತ್ರೆಗಳನ್ನು ಬರೆಯುತ್ತಿದ್ದವರು ಬಹುತೇಕರು ಮೇಲುವರ್ಗದವರೆ. ಆಗ ಅವರ ಹಿಡಿತದಲ್ಲಿದ್ದವು. ಅದು ಒಂದು ವ್ಯವಸ್ಥೆಯಲ್ಲಿಯೇ ನಡೆಯುವುದರಿಂದ ಅದು ಕೆಳ ವರ್ಗದ ಸಂಸ್ಕೃತಿಯನ್ನು ಅಷ್ಟಾಗಿ ಗ್ರಹಿಸುವುದು ಎಲ್ಲೂ ಕಂಡುಬರುವುದಿಲ್ಲ. ಇದು ದೊಡ್ಡ ಮಿತಿಯಾಗಿದೆ.

**ಪರಾಮರ್ಶನ ಗ್ರಂಥಗಳು**


1. ಅಂಬಳಿಕೆ ಹಿರಿಯಣ್ಣ, ಜನಪದ ಮಹಾಕಾವ್ಯಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1998
2. ಅಂಬಳಿಕೆ ಹಿರಿಯಣ್ಣ, ಜಾನಪದ ತತ್ವಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1999
3. ಕಲಬುರ್ಗಿ ಎಂ.ಎಂ. ಸಂ:, ಜಾನಪದ ಸಾಹಿತ್ಯ ದರ್ಶನ ಭಾಗ–11, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1998
4. ಕೇಶವನ್ ಪ್ರಸಾದ್ ಕೆ., ಮಲೆಮಾದೇಶ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997

5. ಕೊಟ್ರಶೆಟ್ಟಿ, ಎಂ.ಬಿ., ಸಂ:, ಜಾನಪದ ಸಾಹಿತ್ಯ ದರ್ಶನ ಭಾಗ–8, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1990
6. ಚಂದ್ರಶೇಖರ ಕಂಬಾರ, ಜಾನಪದ ಸಾಹಿತ್ಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1978
7. ಚಂದ್ರಶೇಖರ ಕಂಬಾರ, (ಪ್ರ.ಸಂ.), ಬೋರಲಿಂಗಯ್ಯ ಹಿ.ಚಿ. (ಸಂ.), ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997
8. ಶಂಕರನಾರಾಯಣ ತೀ.ನಂ., ಜನಪದ ಮಹಾಕಾವ್ಯ, ಕರ್ನಾಟಕ ಸಂಘ, ಪುತ್ತೂರು, 1996
9. ನಾಯ್ಕ ಎಂ.ಡಿ., ಕನ್ನಡ ಜನಪದ ಮಹಾಕಾವ್ಯಗಳು ಒಂದು ಅಧ್ಯಯನ, ಪಿಎಚ್.ಡಿ. ಅಪ್ರಕಟಿತ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2004
10. ನಿಂಗಪ್ಪ ಮುದೇನೂರು, ಕನ್ನಡ ಜಾನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು, ಸಿ.ವಿ.ಜಿ., ಪಬ್ಲಿಕೇಷನ್ಸ್, ಬೆಂಗಳೂರು, 2004
11. ನೇಗಿನಹಾಳ ಎಂ.ಬಿ., ನೇಗಿನಹಾಳ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999
12. ಪರಮಶಿವಯ್ಯ ಜೀ.ಶಂ., ಮಂಟೇಸ್ವಾಮಿ ಕಾವ್ಯ, ಸಾಹಿತ್ಯ ಸದನ, ಮಾನಸ ಗಂಗೋತ್ರಿ, ಮೈಸೂರು, 1973
13. ಪರಮಶಿವಯ್ಯ ಜೀ.ಶಂ., ಜಾನಪದ ಕೆಲವು ಮುಖಗಳು, ಚೇತನ ಬುಕ್ ಹೌಸ್, ಮೈಸೂರು, 1996
14. ಪರಮಶಿವಯ್ಯ ಜೀ.ಶಂ., ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು, ಸಾಗರ್ ಪ್ರಕಾಶ, ಬೆಂಗಳೂರು, 2012
15. ಬಸವರಾಜ ಸಾದರ (ಸಂ.), ಆಧುನಿಕ ಕನ್ನಡ ಮಹಾಕಾವ್ಯಗಳು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, 1992
16. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜಾನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996
17. ಬೋರಲಿಂಗಯ್ಯ ಹಿ.ಚಿ., ಮಂಟೇಸ್ವಾಮಿ ಕಾವ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1998
18. ಮೊಗಳ್ಳಿ ಗಣೇಶ, ದಲಿ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002
19. ರಾಜಶೇಖರ ಪಿ.ಕೆ., ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ ಸಂಪುಟ: ಒಂದು, ಮಾನಸ ಗಂಗೋತ್ರಿ, ಮೈಸೂರು, 1973
20. ರಾಮಚಂದ್ರೇಗೌಡ ಹಿ.ಶಿ., ಕೃಷ್ಣಮೂರ್ತಿ ಹನೂರು, ಸುವರ್ಣ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1998
21. ಲಕ್ಕಪ್ಪಗೌಡ ಎಚ್.ಜೆ., ಸಂ:, ಜೀ.ಶಂ.ಪ. ಸಂಸ್ಮರಣೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1995
22. ಲಕ್ಕಪ್ಪಗೌಡ ಎಚ್.ಜೆ., ಸುವರ್ಣ ಜಾನಪದ (ಸಂಪುಟ–2), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1998
23. ವೆಂಕಟಾಚಲಶಾಸ್ತ್ರಿ ಟಿ.ವಿ., ಮಹಾಕಾವ್ಯ ಲಕ್ಷಣ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು 1969
24. ವೆಂಕಟೇಶ ಇಂದ್ವಾಡಿ, ಧರೆಗೆ ದೊಡ್ಡವರ ಕಥೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1999

***

ISBN – 978-93-5526-247-9 

## 21. ಜನಪದ ಮಹಾಕಾವ್ಯಗಳಲ್ಲಿ ಪವಾಡಗಳು

ಡಾ.ಕೆ.ಪ್ರೇಮಕುಮಾರ

ಸಿ.ಎಮ್.ಬೋವ್ರ ಎಂಬ ಪಶ್ಚಿಮದ ವಿದ್ವಾಂಸ ಶಿಷ್ಟ ಮಹಾಕಾವ್ಯಗಳು ಹಾಗೂ ಮೌಖಿಕ ಮಹಾಕಾವ್ಯಗಳನ್ನು ಕುರಿತು ತನ್ನ ಅಭಿಪ್ರಾಯವನ್ನು ಹೇಳುವ ಸಂದರ್ಭದಲ್ಲಿ 'ಈ ಎರಡೂ ಬಗೆಯ ಮಹಾಕಾವ್ಯಗಳಲ್ಲಿ ಮೌಖಿಕ ಮಹಾಕಾವ್ಯವೆ ಶುದ್ಧವಾದ, ಸಹಜಸ್ಫುರ್ತವಾದ, ನೇರವಾದ, ನಿರರ್ಗಳವಾದ ನಾಗರೀಕತೆಯಿಂದ ಕಲುಷಿತವಾಗದ ಕವಿಯವಾಣಿ' ಎಂದು ಪ್ರತಿಪಾದಿಸುತ್ತಾನೆ. ಆದರೆ ಮಹಾಭಾರತ ರಾಮಾಯಣಗಳಿಗೆ ದೊರೆತ ಮಾನ್ಯತೆ ಜನಪದ ಮಹಾಕಾವ್ಯಗಳಿಗೆ ಈವರೆಗೂ ದೊರೆತಿಲ್ಲದಿರುವುದು ವಿಷಾದನೀಯ. ಅದಕ್ಕೆ ಕಾರಣಗಳನ್ನು ವಿದ್ವಾಂಸರು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಮಹಾಕಾವ್ಯದಲ್ಲಿ ಸದ್ವಂಶಜನಾದ ಒಬ್ಬ ನಾಯಕ, ಉದಾತ್ತ ಗುಣಸ್ವಭಾವದ ರಾಜ, ಸದಾ ಕೆಟಟ್ಟದನ್ನೆ ಬಯಸುವ ಪ್ರತಿನಾಯಕರು, ಅಷ್ಟಾದಶ ವರ್ಣನೆ ಮುಂತಾದವೆಲ್ಲಾ ಕಡ್ಡಾಯವಾಗಿ ಇರಲೇಬೇಕೆಂಬ ಕಟ್ಟುಪಾಡುಗಳಿದ್ದವು ಎಂಬುದನ್ನು ಪಟ್ಟಿ ಮಾಡುತ್ತಾರೆ. ಆದರೆ ಕಾಲೇವಾಲಾ ನಂತಹ ಜನಪದ ಮಹಾಕಾವ್ಯ ಫಿನ್ಲ್ಯಾಂಡ್‍ನ ರಾಷ್ಟ್ರೀಯತೆಯನ್ನು ಸಾಕಾರಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದು ನಮ್ಮ ಕಣ್ಣ ಮುಂದಿದೆ. ಆದರೆ ಭಾರತೀಯ ಜನಪದ ಕಾವ್ಯಗಳು ಮೌಖಿಕ ಪರಂಪರೆಯಲ್ಲಿದ್ದ ಕಾರಣಕ್ಕೆ, ದೇವಭಾಷೆಯಲ್ಲಿ ಇಲ್ಲದ ಕಾರಣಕ್ಕೆ ಅಥವಾ ಗ್ರಾಮೀಣ ಜನರು ಇದನ್ನು ಆಚರಣೆಯಲ್ಲಿ ಇಟ್ಟುಕೊಂಡಿದ್ದರು ಎಂಬ ಕಾರಣಕ್ಕೆ ಪ್ರಚುರಕ್ಕೆ ಬರಲು ಹಿನ್ನೆಡೆಯಾಗಿರಬಹುದು. ಕಾವ್ಯ ಮೀಮಾಂಸಕರು ಮತ್ತು ಸಾಹಿತ್ಯ ವಿಮರ್ಶಕರು ತಮ್ಮ ವಿದ್ವತ್ತನ್ನು ಭಾರತೀಯ ಮಹಾಕಾವ್ಯಗಳು ಹಾಗೂ ಪಾಶ್ಚಿಮಾತ್ಯ ಮಹಾಕಾವ್ಯಗಳ ಚರ್ಚೆ ವಿಮರ್ಶೆಗಳಲ್ಲಿ ವ್ಯಯಿಸಿದರು ಎಂದು ತೋರುತ್ತದೆ. ಅಖಿಲ ಭಾರತ ಪರಂಪರೆಯಲ್ಲಿ ಹರಿದು ಬಂದ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಆಳುವ ವರ್ಗಗಳ ನಡುವಿನ ವೈಷಮ್ಯಗಳನ್ನು, ಪ್ರೀತಿ ಪ್ರೇಮಗಳನ್ನು ಆ ಮೂಲಕ ಸಾಮ್ರಾಜ್ಯಶಾಹಿ ವಿಸ್ತರಣೆಯ ಕೇಂದ್ರವಾಗಿ ಇಟ್ಟುಕೊಂಡವುಗಳು. ಇವುಗಳನ್ನೆ ಮೌಲ್ಯವೆಂದು ಒಪ್ಪಿ ನಮ್ಮ ದೇಶಭಾಷಾ ಕಾವ್ಯಗಳೂ ಪೋಷಿಸಿಕೊಂಡು ಬಂದವು.

ಜನಪದ ಮಹಾಕಾವ್ಯಗಳ ನಾಯಕರು ಸಂದರ್ಭ ಬಂದಾಗ ಮಾತ್ರ ತಮ್ಮ ಅಗಾಧತೆಯನ್ನು ಮೆರೆಯುತ್ತಾರೆ. ಸ್ವಾಭಿಮಾನಕ್ಕೆ ಧಕ್ಕೆ ಕುಂದು ಬಂದಾಗ ಉಗ್ರವಾಗಿ ಪ್ರತಿಭಟಿಸುತ್ತಾರೆ. ಇವರು ತಳಸಮುದಾಯದ ಸಾಂಸ್ಕೃತಿಕ ವೀರರು. ಮಾದಿಗ ಮಾದಪ್ಪ, ಹೊಲೆಯ ಎಂದು ಗುರುತಿಸುವ ಮಂಟೇಸ್ವಾಮಿ , ದನ ಕಾಯುವವ ಜುಂಜಪ್ಪ , ಕುರಿ ಕಾಯುವ ಮೈಲಾರಲಿಂಗ. ಇವರು ಜನರೊಳಗೆ ಇದ್ದು ಪ್ರಭುತ್ವದ ದಬ್ಬಾಳಿಕೆಯನ್ನು ವಿರೋಧಿಸಿ ಜನರಲ್ಲಿ ಪ್ರತಿಭಟನೆಯ ಕಿಚ್ಚನ್ನು ಹಚ್ಚಿದವರು. ಅವರೂ ಸ್ವಾಭಿಮಾನದಿಂದ ಬದುಕಲು ಪ್ರೇರಣೆ ನೀಡಿದವರು, ದಬ್ಬಾಳಿಕೆ ಶೋಷಣೆ ವಿರುದ್ಧ ತಮ್ಮ ಜನರನ್ನು ಸಂಘಟಿಸಿದವರು.

ನಾನು ಇಲ್ಲಿ ಮಂಟೇಸ್ವಾಮಿಯ ಪವಾಡಗಳು ಮತ್ತು ಅದರ ಸೃಷ್ಟಿಗೆ ಇರಬಹುದಾದ ಅನಿವಾರ್ಯತೆಗಳನ್ನು ಕುರಿತು ಚರ್ಚಿಸಲು ಪ್ರಯತ್ನಿಸುತ್ತೇನೆ. ಮಂಟೇಸ್ವಾಮಿ ಜಗತ್ತನ್ನೇ ಸೃಷ್ಟಿಸಿಬಲ್ಲ ಒಬ್ಬ ಪವಾಡಕಾರ, ಆದರೆ ಸದಾ ನಡೆದಾಡುತ್ತಾ ಭಂಗಿ ಸೇದುತ್ತಾ ತಿರುಗುವ ಈ ಭೈರಾಗಿ ಪುರುಷ ಎಂಥ ಕಟುಕರನ್ನೂ ಕರಗಿಸಬಲ್ಲ ಆತ್ಮಬಲ ಪಡೆದವನು. ತನಗೆ ತಕ್ಕನಾದ ಶಿಶುಮಗನನ್ನು ಪಡೆದ ನಂತರ ಪಾತಾಳ ಬಾವಿಯಲ್ಲಿ ಪ್ರಾಣ ನೀಡುವ ತವಕ ಅವನಿಗೆ. ಮಂಟೇ ಸ್ವಾಮಿಯನ್ನು ಧರೆಗೆ ದೊಡ್ಡವರು ಎಂದು ಕರೆಯುವುದಕ್ಕೆ ಬಹು ಮುಖ್ಯ ಕಾರಣ ಸಾಮಾಜಿಕವಾಗಿ ಎದುರು ನಿಂತಿರುವ ಒಂದು ಪ್ರತಿಷ್ಠಿತ ಧರ್ಮವನ್ನು ಎದುರು ಹಾಕಿಕೊಳ್ಳಲು ಸಾಧ್ಯವಾದಾದಾಗ ತಮ್ಮ ಸಾಂಸ್ಕೃತಿಕ ನಾಯಕನನ್ನು ಅತಿಮಾನುಷವಾಗಿ ಪರಿಕಲ್ಪಿಸಿ ಶಿವನಿಗಿಂತ, ಸೂರ್ಯಚಂದ್ರರಿಗಿಂತ ದೊಡ್ಡವನು ಎಂದು ಕರೆದು ತಮ್ಮ ಮನಸ್ಸಿಗೆ ತಾವೇ ಸಮಾಧಾನ ಮಾಡಿಕೊಳ್ಳುವ ಆಶಯ. ಹನ್ನೆರಡನೆಯ ಶತಮಾನದ ಅಲ್ಲಮನ ತತ್ವಗಳು ಮಂಟೆಸ್ವಾಮಿ ಎಂಬ ವ್ಯಕ್ತಿಯ ರೂಪದಲ್ಲಿ ಬಂದಂತೆ ತೋರುತ್ತದೆ ಎಂಬುದನ್ನು ಆತನ ಲಿಂಗ ಎಂಬುದು ಕಟ್ಟಿದ ಲಿಂಗವೇ ಅಥವಾ ತತ್ವವೆ ಎಂಬ ಅಲ್ಲಮರಿಗೆ ಸಮನಾದ ಚಿಂತನೆಯ ಹಿನ್ನೆಲೆಯಲ್ಲಿ ವಿದ್ವಾಂಸರು ಭಾವಿಸುತ್ತಾರೆ.

**ಮಂಟೇಸ್ವಾಮಿ ಮಾಡಿದ ಪವಾಡಗಳನ್ನು ಒಂದೊಂದಾಗಿ ಗಮಿನಿಸೋಣ;**

- ಮಂಟೇಸ್ವಾಮಿ ಕಲ್ಯಾಣವನ್ನು ಪ್ರವೇಶ ಮಾಡುವಾಗ ಅಸಹ್ಯ ವೇಷದ ರೋಗಿಯಾಗಿ ಎಲ್ಲರನ್ನು ದಿಗ್ಭ್ರಮೆಗೊಳಿಸುತ್ತಾನೆ.
  - ರಂಡಮುಂಡ ಜಂಗಮರು ಕಟ್ಟಿದ ಲಿಂಗಗಳನ್ನು ಕಲ್ಯಾಣಿಯಲ್ಲಿ ಮಾಯಮಾಡುತ್ತಾನೆ.

ISBN – 978-93-5526-247-9

ಈ ಎರಡು ಪವಾಡ ಸದೃಶ ಘಟನೆಗಳ ಮೂಲಕ ಮಂಟೇಸ್ವಾಮಿ ಆತ್ಮಶುದ್ಧಿ ಇಲ್ಲದವರು ಲಿಂಗಧಾರಣೆ ಮಾಡಿ ಪ್ರಯೋಜನವಿಲ್ಲ ಎಂಬುದನ್ನು ಸಾರುತ್ತವೆ. ಹಾಗಾಗಿ ಕಲ್ಯಾಣದಲ್ಲಿ ಉಳಿಯಲು ಯೋಗ್ಯರಾದವರು ಆತ್ಮ ಶುದ್ಧಿ ಉಳ್ಳ ಕೆಳವರ್ಗದವರು ಎಂಬುದು ಆತನು ಹೊಲೆಯರ ಹೊನ್ನಪ್ಪ, ಮಾದಿಗರ ಚನ್ನಯ್ಯ, ಮಡಿವಾಳ ಮಾಚಪ್ಪ, ಗಾಣಿಗರ ದಾಸಪ್ಪ, ಅಂಬಿಗರ ಚೌಡಯ್ಯ, ಈಡಿಗರ ಕ್ಯಾತಪ್ಪ, ಕುರುಬರ ಬೀರಯ್ಯ ಮುಂತಾದವರನ್ನು  ಪರೀಕ್ಷಿಸಿ ಜಯಶಾಲಿಯನ್ನಾಗಿಸಿದ ಕ್ರಮದಿಂದ ತಿಳಿಯುತ್ತದೆ. ಆ ಮೂಲಕ ಇವರೇ ನಿಜವಾದ ಶಿವಶರಣರೂ ಎಂಬುದನ್ನು ಪ್ರತಿಪಾದಿಸುತ್ತಾನೆ. ಇದನ್ನು ಉನ್ನತ ವರ್ಗದ ಡಾಂಭಿಕ ಭಕ್ತರಿಗೆ ಮನವರಿಕೆ ಮಾಡಿಕೊಡಲು ಮಂಟೇಸ್ವಾಮಿಗಿದ್ದ ಒಂದೇ ಒಂದು ಅಸ್ತ್ರ ಅದು ಪವಾಡವನ್ನು ಸೃಷ್ಟಿಸುವುದೇ ಆಗಿತ್ತು. ಈತನ ದೃಷ್ಟಿಯಲ್ಲಿ ಕಲ್ಯಾಣ ಕೂಡ ಭ್ರಷ್ಟವಾಗಿದ್ದು ಅದನ್ನು ಪವಾಡಗಳ ಮೂಲಕ ಅರಿವನ್ನು ಮೂಡಿಸಿ ಅದನ್ನು ಶುಚಿಗೊಳಿಸಿದ ಎಂಬುದು ವಿದ್ವಾಂಸರ ಅಭಿಪ್ರಾಯ. ಇದಕ್ಕೆ ಈ ಮಹಾಕಾವ್ಯದ 'ಕಲ್ಯಾಣ ಪಟ್ಟಣದ ಸಾಲುಗಳನ್ನು' ಗಮನಿಸಬಹುದಾಗಿದೆ. ಇಲ್ಲಿ ಮಂಟೇಸ್ವಾಮಿ ಧರಿಸಿದ ವೇಷವನ್ನು ವರ್ಣಿಸುವ ಕೆಲವು ಸಾಲುಗಳನ್ನು ಗಮನಿಸೋಣ;

**ಗುರುವೇ ಕುಷ್ಠುರೋಗಿಯ ಗುರುವೇ**
**ಯಸವಾ ಗುರುವೂ**
**ತಾಳಿಕಂಡು ನನಪ್ಪ**
**ಧರೆಗೆ ದೊಡ್ಡಯ್ಯ**
**ಗುರುವೇ ಆರು ಕಂಡುಗಾ**
**ಯಗ್ಗಜ್ಜಿ ಮಾಡಿಕಂಡು**
**ಮೂರು ಕಂಡಗಾ**
**ತುರುಗಜ್ಜಿ ಮಾಡಿಕಂಡು**
**ಗುರುವೇ ಆರು ಕಂಡುಗಾ ಕೀವು**
**ಆರು ಕಂಡಗ ರಸುಗು**
**ಆರು ಕಂಡುಗ ರಕುತ**
**ಏಳು ಕೋಟಿ ಹುಳವಾ**
**ಮೈತುಂಬ ಬುಟುಕಂಡು**
**ಅವರು ಕಲ್ಯಾಣ ಗುರುವೇ ಅವರು**
**ಕಣ್ಣೆತ್ತಿ ನೋಡುತ್ತಾರೆ ll ಸಿದ್ಧಯ್ಯ ll**

ಬಸವಣ್ಣನನ್ನು ಪರೀಕ್ಷಿಸುವ ಸಂದರ್ಭದಲ್ಲಿ ಅಲ್ಲಮರು ಇದೆ ರೀತಿ ರೋಗಿಷ್ಠ ವೇಷದಲ್ಲಿ ಹೋಗಿ ತಿಪ್ಪೆಯ ಮೇಲೆ ಕುಳಿತ್ತಿದ್ದುದನ್ನು ಗಮನಿಸಬಹುದು.

ಮಂಟೇಸ್ವಾಮಿಯ ಪರ್ಯಟನೆ ಆತ ತನ್ನ ಶಿಶು ಮಕ್ಕಳನ್ನು ಪಡೆಯುವುದರ ಜೊತೆಗೆ ಸಾಗುತ್ತದೆ. ತಳಸಮುದಾಯಗಳನ್ನು ತನ್ನ ಪರಿಧಿಗೆ ತೆಗೆದುಕೊಂಡು ತನ್ನ ಪಂಥವನ್ನು ವಿಸ್ತರಿಸಲು ಈತ ಮಾಡುವ ಪವಾಡಗಳು ಅನೇಕ. ರಾಚಪ್ಪಾಜಿ, ತೋಪಿನ ದೊಡ್ಡಮ್ಮ, ಚನ್ನಾಜಮ್ಮ, ಮಡಿವಾಳ ಮಾಚಯ್ಯ, ಫಲಾರದಯ್ಯ ಮತು ಸಿದ್ದಪ್ಪಾಜಿ ಮುಂತಾದ ಶಿಶುಮಕ್ಕಳು ಈತನ ಪವಾಡಕ್ಕೆ ಮಣಿದು ಆತನ ಅನುಯಾಯಿಗಳಾಗತ್ತಾರೆ. ಮುಂದೆ ಮಂಟೇಸ್ವಾಮಿ ಪರಂಪರೆಯ ಪ್ರವರ್ತಕರಾಗುತ್ತಾರೆ. ಮೋಡಿ, ಮಾಟ, ತಂತ್ರ, ಮಾಯಕಾರ ವಿದ್ಯೆಗಳು ಇಲ್ಲಿ ಸರಾಗವಾಗಿ ಬಂದು ಹೋಗುತ್ತವೆ. ಏನೇ ಪವಾಡ ನಡೆಸಿದರೂ ಇಡೀ ಕಾವ್ಯದಲ್ಲಿ ಹಿಂಸೆ ತಲೆಹಾಕುವುದಿಲ್ಲ. ಈತ ಅಹಂಕಾರಿಗಳನ್ನು ಮಣಿಸದೆ ಬಿಡುವವನಲ್ಲ, ಸೌಮ್ಯವಾಗಿಯೂ ಭಕ್ತರ ಮನವೊಲಿಸಿದ್ದಾನೆ. ಸಾಧ್ಯವಾಗದಿದ್ದಾಗ ಮೌನಿಯಾಗಿ ಕುಂತೂರು ಬೆಟ್ಟ ಹತ್ತಿ ಕಂಡುಗಾ ಭಂಗಿ ಸೇದಿ ವಾಲುತ್ತಾ ಜೋಲುತ್ತಾ ಜ್ಞಾನೋದಯವನ್ನು ಪರಿಹಾರವನ್ನು ಕಂಡುಕೊಂಡಿದ್ದಾನೆ. ಭಂಗೀ ಸೇವನೆ ಕಾವ್ಯದ ಏಕತಾನತೆಯನ್ನು ಹೊಡೆದು ರೋಚಕತೆಯನ್ನು ಹುಟ್ಟುಹಾಕಲು ಸಹಕಾರಿಯಾಗಿ ಕೆಲಸ ನಿರ್ವಹಿಸುತ್ತದೆ.

ಈ ಕಾವ್ಯದಲ್ಲಿ ಬರುವ ರಾಚಪ್ಪಾಜಿ ಸಾಲಿನ ಮೋಡಿಯ ವಿಚಾರವನ್ನು ಗಮನಿಸೋಣ, ಮಂಟೇಸ್ವಾಮಿಯ ಮೋಡಿ ಆಟ ನೋಡಲು ಮೋಡಿಕಾರರ ಮುಂದೆ ಕರೆದುಕೊಂಡು ಹೋಗುತ್ತಾನೆ. ಅವರ ಸವಾಲನ್ನು ಸ್ವೀಕರಿಸಿ ಆನೆ ಗಾತ್ರದ ಗುಂಡುಗಳನ್ನು ನಿಂಬೆಹಣ್ಣು ಮಾಡಿ ಕೈಯಲ್ಲಿಡಿದು ಅಚ್ಚರಿಪಡುವಂತೆ ಮಾಡುತ್ತಾನೆ. ಇಲ್ಲಿ ಗಮನಿಸಬೇಕಾದ್ದು

ರಾಚಪ್ಪಾಜಿಗೆ ಪಡುಗುಂಡೆ ಕಾಣುತ್ತೆ ಆದರೆ ಮೋಡಿಕಾರರಿಗೆ ನಿಂಬೆ ಹಣ್ಣಾಗಿ ಕಾಣುತ್ತೆ. ಮೋಡಿ ಅಂದರೆ ಕಣ್ಕಟ್ಟು. ಅಂಥ ಪವಾಡ ಮಾಡಿದ ಮಂಟೇಸ್ವಾಮಿಯ ಅನುಯಾಯಿಯಾಗುತ್ತಾನೆ ರಾಚಪ್ಪಾಜಿ;

ಎರಡು ಬೆರಳಲ್ಲಿ ಈ ಇಂಬೇಹಣ್ಣ ಎತ್ಬುಡ್ತನೆ ಕಣ್ರಣ್ಣ
ಇವನು ಗೆದ್ದೋಗ್ಬುಡ್ತನೆ ನಾವು ಸೋತೋಗ್ಬುಡ್ತೀವಿ ಕಣ್ರಣ್ಣ ಅಂತ್ವೇಳಿ
ಈ ಮೋಡಿಕಾರ್ರೆಲ್ಲಾ ಮಾತಾಡ್ತರೆ
ರಾಚಪ್ಪಾಜಿಯವರ ಕಣ್ಣಿಗೆ ಪಡುಗುಂಡೆ
ಆಗ ರಾಚಪ್ಪಾಣಿಯವರು ಯೋಚನೆ ಮಾಡುತಾವರೆ
ಯಾಕಪ್ಪ ಜಗತ್ತುಗುರು ಇವತ್ತಿನ ದಿವಸದಲ್ಲಿ
ತಿಳಿಯದೇ ನಾನು ಮೋಡಿಕಾರರ ಬಳಿ ಬಂದ್ಬುಟ್ಟೆ
ನಿಮ್ಮ ಮಾತ ಮೀರಿ ಹೋದನಲ್ಲಮಗ ಅನುತೇಳಿ
ಅವರ ಕಣ್ಣಿಗೆ ಇಂಬೇಹಣ್ಣ ತೋರಿಸಿ
ನನ್ನ ಕಣ್ಣಿಗೆ ಭಾರಿ ಪಡಿಗುಂಡ ಮಾಡಿಯಪ್ಪ

ಫಲಾರದಯ್ಯ ಸಾಲಿನಲ್ಲಿ ರೋಚಕ ನರಬಲಿ ಪ್ರಸಂಗ ಮತ್ತು ಬಲಿಯಾಗುವ ಹುಡುಗ ಫಲಾರದಯ್ಯನಾಗಿ ಪರಿವರ್ತಿತವಾಗುವ ಸಾಂಸ್ಕೃತಿಕ ಸಂದರ್ಭ. ದೊಡ್ಡಮ್ಮ ತಾಯಿಗೆ ಹೇಳುವ ಕಾಲಜ್ಞಾನದ ವಿಚಾರಗಳು. ಇವುಗಳು ಕೂಡ ಮಂಟೇಸ್ವಾಮಿಯು ತನ್ನ ಶಿಶು ಮಕ್ಕಳನ್ನು ಸಂಪಾದನೆ ಮಾಡಲು ನಡೆಸಿದ ಪವಾಡಗಳು. ಇಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದ್ದು. ಕೆಂಪಾಚಾರಿಯಿಂದ ಕಬ್ಬಿಣದ ಭಿಕ್ಷೆಯನ್ನು ಬೇಡುವ ಮೂಲಕ ಆತನನ್ನು ಸಿದ್ದಪ್ಪಾಜಿಯಾಗಿ ಪರಿವರ್ತಿಸಲು ಮಾಡಿದ ಪವಾಡ. ಇದು ಅತ್ಯಂತ ರೋಚಕ. ಪಶುಪಾಲನೆಯಿಂದ ಕೃಷಿಗೆ ಪಲ್ಲಟವಾಗುತ್ತಿದ್ದ ಸಂದರ್ಭ. ಕಬ್ಬಿಣದ ಪರಿಕರಗಳನ್ನು ಉತ್ಪಾದಿಸುವ ವರ್ಗವನ್ನು ತನ್ನ ಪರಿಧಿಗೆ ತೆಗೆದುಕೊಳ್ಳಬೇಕಾದ ಅಗತ್ಯತೆ ಹಿನ್ನೆಯಲ್ಲಿ ಮಂಟೇಸ್ವಾಮಿ ಪವಾಡ ನಡೆಸುತ್ತಾನೆ. ಅಹಂಕಾರಿ ಕೆಂಪಾಚಾರಿಯನ್ನು ಮಣಿಸಿ ತನ್ನ ಶಿಶುಮಗನನ್ನಾಗಿ ಮಾಡಿಕೊಳ್ಳುತ್ತಾನೆ. ಕೆಂಪಚಾರಿ ಎಂಬ ಅಹಂಕಾರಿಯೊಬ್ಬ ತನ್ನ ಸರ್ವಸ್ವವನ್ನು ತ್ಯಜಿಸಿ ಹನ್ನೆರಡು ವರ್ಷಗಳು ಕಾಳಿಂಗ ಗುಹೆಯಲ್ಲಿದ್ದು ಸಿದ್ದಪ್ಪಾಜಿಯಾಗಿ ಪರಿವರ್ತನೆಯಾಗುವುದು ಅಷ್ಟೊಂದು ಸರಳವಾದ ಪ್ರಕ್ರಿಯೆಯಲ್ಲ. ಅದಕ್ಕೆ ಇದನ್ನು ಪವಾಡ ಸದೃಶ ಎಂದು ಕರೆಯುವುದು.

ಬಾಚಿ ಬಸವಾಚಾರಿ ಆತನ ಮಡದಿ ಮುದ್ದಮ್ಮ ಆರು ಜನ ಮಕ್ಕಳೊಂದಿಗೆ ಬಡತನದಿಂದ ಬಳಲುತ್ತಿರುತ್ತಾರೆ. ಮಂಟೇಸ್ವಾಮಿಯ ವರದಿಂದ ಕೆಂಪಾಚಾರಿಯನ್ನು ಪಡೆಯುತ್ತಾರೆ. ಮಗ ಹುಟ್ಟಿದ ಏಳೇ ದಿನಕ್ಕೆ ಅವರ ಬಡತನ ಅಳಿದು ಹೋಗುತ್ತದೆ. ಸಿರಿತನದಲ್ಲಿ ಮುಳುಗಿ ಹೋಗಿದ್ದ ಬಸವಾಚಾರಿ ಮುದ್ದಮ್ಮ ಭಿಕ್ಷೆ ಬೇಡಿ ಬಂದ ಮಂಟೇ ಸ್ವಾಮಿಯನ್ನು ಕುತ್ತಿಗೆ ಕೈ ಹಾಕಿ ಹೊರಗೆ ನೂಕುತ್ತಾರೆ;

ನೋಡಿ ಮುದ್ದಮ್ಮನವರು
ಜಗತ್ತು ಗುರು ಧರೆಗೆ ದೊಡ್ಡವರ
ಎಕ್ಕತ್ತಿನ ಮ್ಯಾಲೆ ಕೈಹಾಕಿ
ನೂಕಿನೂಕಿ ತಳ್ತಾವರೆ
ಜಾಡಿಸೀ ನೂಕುತ್ತಾರೆ ......
ನನ್ನ ಮಗನ ಕೇಳ್ದ ಮುಂಡೆ ಮಗನ
ಸುಮ್ನೆ ನಾನು ಬುಡುವುದಿಲ್ಲ – ಸಿದ್ದಯ್ಯ.

ಸತಿಪತಿಗಳು ಮಂಟೇಸ್ವಾಮಿಯ ಕೃಪೆಯನ್ನು ಸ್ಮರಿಸುವುದೇ ಇಲ್ಲ. ನಂತರ ತನ್ನ ಶಿಶು ಮಗ ಕೆಂಪಾಚಾರಿಯನ್ನು ತಾನೆ ಕಾಣುತ್ತೇನೆಂದು ಕುಲುಮೆ ಕಾರ್ಖಾನೆಗೆ ಹೋಗುತ್ತಾನೆ. ಅಲ್ಲಿ ಕೆಂಪಾಚಾರಿಯಿಂದ ಕೆಂಡವನ್ನು ಎರಡೂ ಹಸ್ತದಲ್ಲಿ ಪಡೆದು ಅವನಿಗೆ ಶಾಪ ಹಾಕುತ್ತಾನೆ ಮಂಟೇಸ್ವಾಮಿ. ಅಗ್ನಿದೇವತೆ ಕಣ್ಣೀರಾಕಿ ಮಂಟೇಸ್ವಾಮಿ ಕೈಯಲ್ಲಿ ಪುಷ್ಪವಾಗುತ್ತಾಳೆ. ಶಾಪದಿಂದ ಜ್ಞಾನೋದಯಗೊಂಡ ಕೆಂಪಾಚಾರಿ ಎಲ್ಲವನ್ನು ತ್ಯಜಿಸಿ ಸಿದ್ದಪ್ಪಾಜಿಯಾಗುತ್ತಾನೆ, ಆತನ ಅನುಯಾಯಿಯಾಗುತ್ತಾನೆ.

ISBN – 978-93-5526-247-9

ವೈಜ್ಞಾನಿಕವಾಗಿ ವಿವರಿಸಲಾಗದ ಘಟನೆಯನ್ನು ಪವಾಡ ಎಂದು ಕರೆಯಬಹುದು. ಹಾಗಾದರೆ ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಕಂಡುಬರುವ ಪವಾಡಗಳು ಸತ್ಯವೆ. ಪವಾಡ ಎರಡು ರೀತಿಯಲ್ಲಿ ಸಂಭವಿಸುತ್ತದೆ. ಒಂದು ಪ್ರಾಕೃತಿಕವಾಗಿ ಸಂಭವಿಸುವ ಅವಘಡಗಳು. ಅದರಿಂದ ಪವಾಡ ಸದೃಶ್ಯವಾಗಿ ಪಾರಾಗುವ ಜನರು. ಅದಕ್ಕೆ ಯಾವುದೇ ತರ್ಕ ವಿಜ್ಞಾನದ ಬೆಂಬಲವಿರುವುದಿಲ್ಲ. ಎರಡನೆಯದು ದೇವರು ಅಥವಾ ದೈವ ಪುರುಷರು ಮಾಡುವ ಪವಾಡಗಳು. ಪವಾಡಗಳು ಎಲ್ಲಿ ದೃಢವಾದ ನಂಬಿಕೆಯಿರುತ್ತದೋ ಅಲ್ಲಿ ಮಾತ್ರ ಸಂಭವಿಸುತ್ತವೆ. ನಂಬಿದವರಿಗೆ ಆನೆ ಗಾತ್ರದ ಕಲ್ಲು ನಿಂಬೆಹಣ್ಣಾಗಿ ಗೋಚರಿಸುತ್ತದೆ. ಒಂದು ಪಂಥ ಅಥವಾ ಪರಂಪರೆ ಸಮರ್ಥವಾಗಿ ಮುಂದುವರಿಯಬೇಕಾದರೆ ಹಾಗೂ ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅನುಯಾಯಿಗಳಿರಬೇಕೆಂದಾದರೆ ಅಲ್ಲಿ ಪವಾಡ ಸಂಭವಿಸಬೇಕು. ಇದು ಹಿಂಸೆಯ ಮುಖವಾಡವನ್ನು ಹೊಂದಿರದೆ ನಂಬಿದವರನ್ನು ರಕ್ಷಿಸಲು ಅವರಲ್ಲಿ ಮಾನಸಿಕ ಸ್ಥೈರ್ಯ, ಧೈರ್ಯ ತುಂಬಲು ನಡೆಯುವ ಕ್ರಿಯೆಯೆ ಪವಾಡ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


1. ಬುಡಕಟ್ಟು ಮಹಾಕಾವ್ಯ ಮಾಲೆ, ಮಂಟೇಸ್ವಾಮಿ –ಸಂಪಾದಕರು: ಪ್ರೊ. ಹಿ. ಚಿ . ಬೋರಲಿಂಗಯ್ಯ.ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ.
2. ಪವಾಡ ಎಂದರೇನು. ವಿಕಿಪೀಡಿಯಾ.
3. ಧರೆಗೆ ದೊಡ್ಡವರ ಕಥೆ: ಡಾ.ವೆಂಕಟೇಶ ಇಂದ್ವಾಡಿ.
4. ಮಂಟೇಸ್ವಾಮಿ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ, ಕನ್ನಡ ಸಾಹಿತ್ಯ ವಿಭಾಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ.


***

ISBN – 978-93-5526-247-9

## 22.ಜನಪದ ಸಾಹಿತ್ಯದಲ್ಲಿ ಸ್ತ್ರೀ ಪಾತ್ರ ಅಂದು – ಇಂದು

**ನಾಗವೇಣಿ ಎನ್**

ಆದಿಮಾನವನ ಕಾಲದಿಂದಲೂ ದೇಹ ರಚನೆಯನ್ನು ಗಮನಿಸಿ ಇವಳು ಹೆಣ್ಣು ಇವನು ಗಂಡು ಎಂದು ಕುಟುಂಬದ ಸದಸ್ಯರಲ್ಲಿ ವ್ಯತ್ಯಾಸವನ್ನು ಗುರುತಿಸುವ ಕ್ರಿಯೆ ಅಂದಿನ ಕಾಲದಿಂದಲೂ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದು. ಹಾಗೂ ಹಿಂದಿನ ಕಾಲದಲ್ಲಿ ಪಿತೃ ಸಮಾಜ ಮತ್ತು ಪುರುಷ ಸಮಾಜದಲ್ಲಿ ಗಂಡು ಪ್ರಾಧಾನ್ಯತೆಯ ಸ್ಥಾನವನ್ನು ಪಡೆದಿದ್ದನು. ಹಾಗೂ ಗಂಡಿಗಿರುವ ಸ್ಥಾನಮಾನ ಹೆಣ್ಣಿಗೆ ಇರಲಿಲ್ಲ. ಹೆಣ್ಣು ಕೇವಲ ನಾಲ್ಕು ಗೋಡೆಯ ಮಧ್ಯೆ ಜೀವನವನ್ನು ನಡೆಸುವ ಹಾಗೂ ಗಂಡನಿಗೆ ಹೆಂಡತಿಯಾಗಿ, ಅತ್ತೆ–ಮಾವನಿಗೆ ಸೊಸೆಯಾಗಿ, ಮಕ್ಕಳಿಗೆ ತಾಯಿಯಾಗಿ, ಎಲ್ಲರ ಆಸೆ–ಆಕಾಂಕ್ಷೆಗಳನ್ನು ಈಡೇರಿಸುತ್ತಾ ತನ್ನ ಕನಸನ್ನು ಅಡುಗೆ ಮನೆಯ ಸುಡುವ ಬೆಂಕಿಯ ಮುಂದೆ ಕುಳಿತು ತನ್ನ ಕನಸುಗಳನ್ನು ಸುಡುವಂತಹ ಎಷ್ಟೋ ಹೆಣ್ಣುಮಕ್ಕಳನ್ನು ನಾವು ಕಂಡಿದ್ದೇವೆ. ಆದರೆ ಅಂದಿನ ಕಾಲದಲ್ಲಿ ಸ್ತ್ರೀಯನ್ನು ಕಾಣುತಿದ್ದ ವ್ಯವಸ್ಥೆಗೂ, ಇಂದಿನ ಕಾಲದಲ್ಲಿ ಸ್ತ್ರೀಯನ್ನು ನಾವು ಕಾಣುತ್ತಿರುವ ರೀತಿಯಲ್ಲಿ ಬದಲಾವಣೆಯನ್ನು ಹಾಗೂ ಗಂಡಿಗೂ ಹೆಣ್ಣಿಗೂ ಇದ್ದಂತಹ ತಾರತಮ್ಯತೆಯನ್ನು ಹೋಗಲಾಡಿಸಿ ಗಂಡು–ಹೆಣ್ಣು ಇಬ್ಬರು ಸರಿಸಮಾನರು ಎಂಬುದನ್ನು ನಾವು ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯು ತನ್ನನ್ನು ತಾನು ಗುರುತಿಸಿಕೊಳ್ಳುತ್ತಾ, ಸಮಾಜದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ತನ್ನ ಮೇಲುಗೈ ಸಾಧಿಸುತ್ತಾ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸ್ತ್ರೀ ಸ್ಥಾನಮಾನ ಸ್ತ್ರೀಯ ಪಾತ್ರ, ಅಭಿವೃದ್ಧಿ ವ್ಯವಸ್ಥೆಯಲ್ಲಿನ ಬದಲಾವಣೆ ಹೀಗೆ ಅನೇಕ ರೀತಿಯಲ್ಲಿ ಸ್ತ್ರೀಯನ್ನು ಗಮನಿಸಬಹುದು. ಆದರೆ ಈ ಲೇಖನದಲ್ಲಿ ಪ್ರಮುಖವಾಗಿ ನಾವು ಕನ್ನಡ ಸಾಹಿತ್ಯದಲ್ಲಿ ಒಂದು ಭಾಗವಾದ ಜನಪದ ಸಾಹಿತ್ಯದಲ್ಲಿ ಸ್ತ್ರೀಯನ್ನು ಕುರಿತು ಚರ್ಚೆ ಮಾಡುವುದಾದರೆ ಜನಪದ ಎಂಬುದು ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡನ್ನು ಅಂದಿನಿಂದ ಇಂದಿನವರೆಗೂ ಜೋಪಾನವಾಗಿ ನಮ್ಮ ಮುಂದಿನ ಪೀಳಿಗೆಗೂ ಪದಗಳ ಮೂಲಕ ಕಟ್ಟಿ ಬಾಯಿಯಿಂದ ಬಾಯಿಗೂ ಹರಿದು ಬರುತ್ತಿರುವಂತಹ ಈ ಜನಪದ ಸಾಹಿತ್ಯ ನಮ್ಮ ಕಲೆ ಸಂಸ್ಕೃತಿ, ಆಚಾರ ವಿಚಾರ, ನಂಬಿಕೆ, ಸಂಪ್ರದಾಯಗಳನ್ನು ಉಳಿಸಿ ಬೆಳೆಸುವಂತಹದ್ದಾಗಿದ್ದು. ಜನಪದ ಹಾಡು ಅಂತ ಬಂದಾಗ ಹೆಣ್ಣು ಮಕ್ಕಳು ತಮ್ಮ ದಿನನಿತ್ಯ ಕೆಲಸಗಳನ್ನು ಮಾಡುವಾಗ ಅಥವಾ ತನ್ನ ತವರಿನ ನೆನಪಾದಾಗ ತನ್ನ ಗಂಡ ಮನೆಯಲ್ಲಿ ಹೆಣ್ಣು ಮಗಳು ಜೀವಿಸುತ್ತಿರುವ ವಿಧಾನ ತನ್ನ ತವರಿನಲ್ಲಿ ತನ್ನವರೊಂದಿಗೆ ಇದ್ದಂತಹ ಅನುಭವ, ಗೌರಿ ಹಬ್ಬಕ್ಕೆ ಕರೆಯಲು ಬರುವ ಅಣ್ಣನನ್ನು ಸ್ಮರಿಸುವಂತ ಸಂದರ್ಭದಲ್ಲಿ, ಹೀಗೆ ಅನೇಕ ರೀತಿಯ ಸನ್ನಿವೇಶವನ್ನು ತಮ್ಮದೇ ಪದಗಳಲ್ಲಿ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದ ಸ್ತ್ರೀಯನ್ನು ಕಾಣಬಹುದು. ನಾವು ಗಮನಿಸುವುದೇ ಆದರೆ ಒಬ್ಬ ತಾಯಿ ತನ್ನ ಮಗು ಮನೆಯಲ್ಲಿ ಓಡಾಡುತ್ತಿದ್ದರೆ ಆಗುವ ಖುಷಿಯನ್ನು ಹಾಡಿನ ಮೂಲಕ ಬಣ್ಣಿಸುವ ರೀತಿಯ ಜನಪದ ಹಾಡಿನ ಸಾಲುಗಳು ಹೀಗಿವೆ.

ಕೂಸು ಇದ್ದ ಮನೆಗೆ ಬೀಸಣಿಕೆ ಯಾತಕ.....
ಕೂಸು ಕಂದಯ್ಯ ಒಳ ಹೊರಗ....ಕೂಸು ಕಂದಯ್ಯ
ಒಳ ಹೊರಗ ಆಡಿದರ ಬೀಸಣಿಕೆ ಗಾಳಿ ಸುಳಿದಾವ.....

ಜನಪದ ಗೀತೆಗಳಲ್ಲಿ ಕಂಡುಬರುವ ಕನ್ನಡ ನಾಡಿನ ಪ್ರಕೃತಿ ಮತ್ತು ದೇವ – ದೇವಿಯರನ್ನು ಕುರಿತ ಅನೇಕ ಗೀತೆಗಳನ್ನು ಕಾಣಬಹುದು. ಉದಾಹರಣೆಗೆ ಸ್ತ್ರೀ ಕೃಷ್ಣನ ತಂಗಿ ನಮ್ಮ ಪರಶಿವನ ಮಡದಿ ಮೈಸೂರಿನ ಚಾಮುಂಡೇಶ್ವರಿಯ ಮೇಲಿನ ಈ ಜನಪದ ಗೀತೆಯನ್ನು ಗಮಸಿದ್ದೆ ಆದರೆ, ಶ್ರೀ ಚಾಮುಂಡಿ ದೇವಿಯ ಅಂದವನ್ನು ಅವಳು ಮುಡಿದಿರುವ ಮೊಗ್ಗಿನ ಮಾಲೆಯು ಚೆಂದವನ್ನು ಜನಪದರ ಜನಪದದ ಗೀತೆಯ ಮೂಲಕ ಕೇಳುವುದೇ ಸೊಗಸು,

"ನೋಡವಳಂದವ ಮೊಗ್ಗಿನ ಮಾಲೆ ಚೆಂದವ
ಬೆಟ್ಟ ಬಿಟ್ಟಿಳಿಯುತ ಬಿಟ್ಟಾರೆ ಮಂಡೆಯ ಉಟ್ಟಿರೋ ಲಂಗ ಹುಲಿ ಚರ್ಮ
ಉಟ್ಟಿರೋ ಲಂಗ ಹುಲಿ ಚರ್ಮ ಚಾಮುಂಡಿ ಬೆಟ್ಟ ಬಿಟ್ಟಿಳಿಯೋ ಸಡಗರ
ನೋಡಿವಳಂದವ ಮೊಗ್ಗಿನ ಮಾಲೆ ಚೆಂದವ.

ISBN – 978-93-5526-247-9

ಹೀಗೆ ಇನ್ನು ಅನೇಕ ರೀತಿಯ ಜನಪದ ಗೀತೆಗಳನ್ನು ಕಾಣಬಹುದು. ನಾಗಪಂಚಮಿಯ ಹಬ್ಬದ ದಿನದಂದು ತಂಗಿಯನ್ನು ತವರು ಮನೆಗೆ ಕರೆದುಕೊಂಡು ಹೋಗುವ ದೃಶ್ಯದ ಕೆಲವು ಸಾಲುಗಳನ್ನು ಗಮನಿಸಿದೆಯಾದರೆ

ಪಂಚಮಿ ಹಬ್ಬಾ ಉಳಿತವ್ವ ದಿನ ನಾಕ
ಅಣ್ಣ ಬರಲಿಲ್ಲಾ ಯಾಕೋ ಕರಿಲಾಕ
ನಮ್ಮ ತವರೂರು ಗೋಕುಲ ನಗರಾ ।
ಮನಿಯಂಥಾದ ರಾಜಮಂದಿರಾ
ನಮ್ಮ ಅಣ್ಣಯ್ಯ ದೊಡ್ಡ ಸಾವಕಾರಾ ।
ಹ್ಯಾಂಗಾದೀತ ತಂಗಿನ್ನ ಮರಿಯಾಕ
ಅಣ್ಣ ಬರಲಿಲ್ಲ ಯಾಕೋ ಕರಿಲಾಕ....

ಈ ಜನಪದ ಗೀತೆಗಳು ಅಣ್ಣ ತಂಗಿಯ ಸಂಬಂಧ, ತಂದೆ – ತಾಯಿಯ ಪ್ರೀತಿ ವಾತ್ಸಲ್ಯ, ತಾನು ಹುಟ್ಟಿ ಬೆಳೆದ ಹೆಣ್ಣು ಮಗಳು ಮದುವೆಯಾದ ನಂತರ ತನ್ನ ತಾಯಿಯ ತಂದೆಯ ಅಣ್ಣನ, ಎಲ್ಲಾ ಸಂಬಂಧಗಳನ್ನು ಕಳಚಿಕೊಂಡು ತನ್ನದೆಯಾದ ಗೊತ್ತಿಲ್ಲದ ಪ್ರಪಂಚದೊಂದಿಗೆ, ಗೊತ್ತಿಲ್ಲದ ಜನರೊಂದಿಗೆ ತನ್ನ ಜೀವನವನ್ನು ನಡೆಸುವಂತಹ ಹೆಣ್ಣು ತವರು ಮನೆಯಲ್ಲಿ ತಾಯಿಯಾದವರು ಗಂಡಮನೆಯಲ್ಲಿ ಗಂಡನ ತಾಯಿ ತಾಯಿಯಾಗದೆ ಅತ್ತೆಯಾಗುವುದು, ಹಾಗೂ ಸ್ವಾತಂತ್ರ ಹಕ್ಕಿಯಂತೆ ಕುಣಿದು ಕುಪ್ಪಳಿಸುತ್ತಾ ತನ್ನವರೊಂದಿಗೆ ಜೀವಿಸುತ್ತಿದ್ದ ಹೆಣ್ಣು ಸಮಾಜದ ಕಟ್ಟುಪಾಡುಗಳನ್ನು ತುಳಿದು ಅದರೊಳಗೆ ತನ್ನ ಜೀವನವನ್ನು ನಡೆಸುವಂತ ಸ್ಥಿತಿ ಹಾಗೂ ವರ್ಷಕ್ಕೊಮ್ಮೆ ಬರುವ ನಾಗರ ಪಂಚಮಿ ಹಬ್ಬಕ್ಕೊ ಅಥವಾ ಗೌರಿ ಹಬ್ಬಕ್ಕೊ ತವರಿನಿಂದ ನನ್ನವರು ಬಂದು ನನ್ನನು ಕರೆದುಕೊಂಡು ಹೋಗುವರು ಎಂಬ ಆಸೆಯಿಂದ ಒಬ್ಬ ಹೆಣ್ಣು ಮಗಳ ತವರಿನ ಕಡೆಗಿರುವ ಹಂಬಲ ಜನಪದ ಗೀತೆಗಳಲ್ಲಿ ಎದ್ದುಕಾಣುತ್ತದೆ. ಹೀಗೆ ಜನಪದ ಸಾಹಿತ್ಯದಲ್ಲಿ ಅನೇಕ ಜನಪದ ಗೀತೆಗಳು ಹೆಣ್ಣು ತನ್ನ ನೋವನ್ನು ತಾನು ಅನುಭವಿಸುತ್ತಿರುವ ಸಂಕಟಗಳನ್ನು ಗೀತೆಗಳ ಮೂಲಕ ಪದಕಟ್ಟುವುದರೊಂದಿಗೆ ತಮ್ಮ ದುಃಖವನ್ನು ಹೊರಹಾಕುವುದನ್ನು ಕಾಣಬಹುದು.

ಹನ್ನೆರಡನೆಯ ಶತಮಾನದಲ್ಲಿ ವಚನಕಾರ್ತಿ ಗೊಗ್ಗವ್ವೆ ಹೇಳಿದ ಈ ಮಾತು ಇವತ್ತಿನ ಇಪ್ಪತ್ತೊಂದನೆಯ ಶತಮಾನದಲ್ಲಿ ನಿಂತು ನೋಡಿದರೆ ಸ್ತ್ರೀ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಎನ್ನುವುದು ಕೇವಲ ಪುಸ್ತಕದ ಬರವಣಿಗೆಯ ಮಾತುಗಳಾಗಿವೆ. ಶತಮಾನಗಳಿಂದಲೂ ಹೆಣ್ಣು ಏನೆಲ್ಲಾ ಜವಾಬ್ದಾರಿಗಳಿಗೆ ಹೆಗಲು ಕೊಟ್ಟಾಗಿದೆ. ಹಾಗೂ ಅವಳ ಪರಿಶ್ರಮಕ್ಕಾಗಲಿ, ಅವಳ ಭಾವನೆಗಳಿಗಾಗಲಿ ಕಿಂಚಿತ್ತು ಬೆಲೆಯಿಲ್ಲ. ಇಂತಹ ಸಂದರ್ಭದಲ್ಲಿ ನಾವು 'ಮನು' ಹೇಳಿದಂತೆ ಹೆಣ್ಣನ್ನು ಪೂಜಿಸುವುದೂ ಬೇಡ, ಅವಳನ್ನು ತಿರಸ್ಕರಿಸುವುದು ಬೇಡ ಸುಮ್ಮನೆ ಅವಳ ಪಾಡಿಗೆ ಅವಳನ್ನು ಬಿಟ್ಟು ಬಿಡಿ. ಇಲ್ಲ ಸಲ್ಲದ ಮಾತುಗಳನ್ನಾಡಿ ಅವಳ ಆತ್ಮ ವಿಶ್ವಾಸಕ್ಕೆ ಧಕ್ಕೆ ತರುವುದು ಸರಿಯೇ?.

ಹೀಗೆ ಒಂದು ಹೆಣ್ಣನ್ನು ಅಸಮರ್ಥಳು, ಅಬಲೆ ಎಂಬಂತಹ ಶಬ್ದಗಳನ್ನು ಪದೇ ಪದೇ ಬಳಸುವುದರಲ್ಲಿ ಯಾವ ಅರ್ಥವಿದೆ? ಹೋಗಲಿ ಮಹಿಳೆ ಯಾವುದರಲ್ಲಿ ಹಿಂದೆ ಬಿದ್ದಿದ್ದಾಳೆ ಹೇಳಿ ? ದುಷ್ಟಶಕ್ತಿಗಳ ಕಪಿ ಮುಷ್ಟಿಯಿಂದ ಹೇಗೊ ಅವಳು ಪಾರಾಗಿ ತನ್ನ ಎಲ್ಲ ಅಡೆತಡೆಗಳನ್ನು ಬದಿಗೊತ್ತಿ ಆತ್ಮವಿಶ್ವಾಸದಿಂದ ಮುನ್ನಡೆಯುತ್ತಿದ್ದಾಳೆ. ಮುನ್ನಡೆಯಲೇಬೇಕು, ಎಲ್ಲಿಯವರೆಗೆ?

ಮಹಿಳೆ ಅಜ್ಞಾನದಿಂದ ಮುನ್ನಡೆಯುತ್ತಿದ್ದಾಳೆ, ಎಲ್ಲಿಯವರೆಗೆ ಮಹಿಳೆ ಅಜ್ಞಾನದಿಂದ ಹೊರ ಬರುವುದಿಲ್ಲವೋ ಅಲ್ಲಿಯವರೆಗೆ ಅವಳು ಅಬಲೆ ಎಂಬ ಹಣೆಪಟ್ಟಿ ಕಟ್ಟಿಕೊಂಡು ಜೀವನ ನಡೆಸಬೇಕಾಗುತ್ತದೆ. ಹೀಗೆ ಕೇವಲ ಅವಳಲ್ಲಿ ಅಕ್ಷರ ತಿಳುವಳಿಕೆ ಮಾಡಿದರೆ ಸಾಲದು ವೈಚಾರಿಕ ಕ್ರಾಂತಿ ಕೂಡ ಆಗಬೇಕು. ಒಂದು ಕಾಲದಲ್ಲಿ ತಾನು ಹೆಣ್ಣಾಗಿ ಹುಟ್ಟಿದ್ದೇ ತಪ್ಪು ಎಂಬ ಭಾವನೆ ಇತ್ತು. ಈಗಲೂ ಇದೆ. ಇಲ್ಲವೆಂದಲ್ಲ: ಆದರೆ ಹೆಣ್ಣು ಎಂದರೆ ಯಾವುದೇ ತಿಳುವಳಿಕೆ ಇಲ್ಲದವಳು ಹೆಣ್ಣಿನ ಬುದ್ದಿ ಮೊಣಕಾಲ ಕೆಳಗೆ ಎಂದು ಏನೆಲ್ಲಾ ಹೇಳಿ ಅವಳನ್ನು ತಿರಸ್ಕಾರದಿಂದ ನೋಡುವುದು ಸಾಮಾನ್ಯವಾಗಿತ್ತು. ಸಂಸ್ಕೃತಿ, ಸಂಪ್ರದಾಯಗಳ ನೆಪದಲ್ಲಿ ಹೆಣ್ಣಿನ ಶೋಷಣೆ ನಿರಂತರವಾಗಿ ನಡೆದೇ ಇದೆ. ಹೆಣ್ಣಿಗೆ ಸಿಗಬೇಕಾದ ಸ್ಥಾನಮಾನಗಳು ಇನ್ನು ಸಿಕ್ಕಿಲ್ಲ. ಇವೆಲ್ಲವನ್ನು ಗಮನಿಸಿದಾಗ ಜಾಗತೀಕರಣದಲ್ಲಿಯೂ ಮಹಿಳೆಯ

ಬೌದ್ಧಿಕ ಸಾಮರ್ಥ್ಯ ವ್ಯರ್ಥವಾಗಿ ಹೋಗುತ್ತಲಿದೆ, ಅವಳು ಅಡುಗೆ ಮನೆಯನ್ನು ಬಿಟ್ಟು ಹೊರಬರುವುದೇ ದುಸ್ತರವಾದ ಒಂದು ಕಾಲ ಇತ್ತು. ಈಗ ಅವಳು ಹೊರಬಂದಿದ್ದಾಳೆ. ಆದರೂ ಅವಳ ಸ್ಥಿತಿ ಶೋಚನೀಯವಾಗಿ ಇರುವುದನ್ನು ಕಾಣಬಹುದು.

ಇಪ್ಪತ್ತೊಂದನೆಯ ಶತಮಾನದಲ್ಲಿಯೇ ಒಬ್ಬ ವಿದ್ಯಾಂವತ ಮಹಿಳೆಯ ಸ್ಥಿತಿ ಹೀಗಿರಬೇಕಾದರೆ, ಇನ್ನು ನಮ್ಮ ಜನ ಪದ ಗರತಿ, ಏನೂ ಅರಿಯದ ಮುಗ್ದ ಹೆಣ್ಣು, ಅವಳ ಸ್ಥಿತಿ ಹೇಗಿದ್ದಿರಬೇಡ? ಎಂಬ ಚರ್ಚೆಯನ್ನು ಮಾಡುವುದಾದರೆ ಮೇಲೆ ಚರ್ಚೆ ಮಾಡಿದ ಹಾಗೆ ಜನಪದದಲ್ಲಿ ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಅತ್ತೆಯಾಗಿ, ಮಗಳಾಗಿ, ಸೊಸೆಯಾಗಿ, ಬಹುಮುಖ ವ್ಯಕ್ತಿತ್ವವನ್ನು ಹೊಂದಿದವಳಾಗಿದ್ದಾಳೆ, ಇಲ್ಲಿ ಇವಳಿಗೇ ಆದ ಯಾವುದೇ ಗೌರವಾದರಗಳು ಸಿಕ್ಕಿಲ್ಲ. ಪ್ರೀತಿಯಿಂದ ವಂಚಿತಳಾದ ಅವಳು ಒಳಗೊಳಗೆ ಹೆಪ್ಪಿಟ್ಟ ಹಾಲಿನಂತೆ ಅವಳ ಮನಃಸ್ಥಿತಿ ಏನು ಎಂಬುದನ್ನು 'ಉತ್ತರ ಕರ್ನಾಟಕದ ಜನಪ್ರಿಯ ಕಥನ ಗೀತೆ' ಕೆರೆಗೆ ಹಾರ' ಸಾಲುಗಳು ಕೆಳಗಿನಂತಿವೆ.

'ಎಂದಿಲ್ಲದ ಭಾಗಿರಥಿ ಇಂದ್ಯಾಕೆ ಬಂದೆವ್ವ
ಬಾಡಿದ ಮಾರ್‍ಯಾಕ ಕಣ್ಣಾಗ ನೀರ್‍ಯಾಕ
ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತ
ಇಟ್ಟರ ಇಡಲೇಳು ವಾಲಿಜೋಡು ಕೊಡುತೆನ
ತಲೆಬಾಗಿಲದಾಗ ಗೆಳತಿನ ಕಂಡಳು'.
ಎಂದಿಲ್ಲದ ಭಾಗಿರಥಿ ಇಂದ್ಯಾಕ ಈ ಅಳುವು ?
ಅಂಜಿ ಹೇಳಲೆ ಗೆಳತಿ, ಅಳುಕ ಬ್ಯಾಡ ಗೆಳತಿ
ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡ್ತಾರಂತ.
ಕೊಟ್ಟರೆ ಕೊಡಲೇಳು 'ಇಟ್ಟಾಂಗ ಇರಬೇಕ'
ಸರ್‍ರನೆ ಕೊಡಲೇಳು ಬರ್‍ರನೆ ಬಂದಳು.

ಹೆತ್ತತ್ವನ ಮುಂದೆ ಹೇಳಲಾರದ ತನ್ನ ನೋವನ್ನು ಗೆಳತಿಯ ಮುಂದೆ ತೊಡಿಕೊಂಡಾಗ 'ಇಟ್ಟಾಂಗ ಇರಬೇಕ' ಎಂಬಲ್ಲಿನ ಧ್ವನಿ ವಾಚ್ಯವನ್ನು ಮೀರಿ ನಿಲ್ಲುತ್ತದೆ. ಗೆಳತಿಯೂ ಒಬ್ಬ ಹೆಣ್ಣು. ಹೆಣ್ಣಿನ ಭಾವನೆಗಳಿಗೆ ಇಲ್ಲಿ ಬೆಲೆಯೇ ಇಲ್ಲ, ಬಂದದ್ದನ್ನು ಅನುಭವಿಸಬೇಕು. ಇಲ್ಲಿ ಹೆಣ್ಣಿನ ಅತಂತ್ರ ಸ್ಥಿತಿ ಕಣ್ಣಿಗೆ ಕಟ್ಟುತ್ತದೆ. ಅವಳ ಜೀವ ಕುರಿ ಕೋಳಿಗಿಂತ ಕನಿಷ್ಟ ಮಟ್ಟದ್ದಾಗಿದೆ. ಅವಳಲ್ಲಿ ಪ್ರತಿಭಟನೆ ಮಾಡುವ ಸಾಮರ್ಥ್ಯವೇ ಇಲ್ಲ. ಇದು ವರವೋ? ಶಾಪವೋ? ಹೀಗೆ ದಕ್ಷಿಣ ಕರ್ನಾಟಕದ ಇನ್ನೊಂದು ಕಥನ ಕವನ 'ಉತ್ತರ ದೇವಿ' ಸಾಲುಗಳು ಈ ಕೆಳಗಿನಂತಿವೆ.

ಉತ್ತರೆ ನೀರಿಗ್ಹೋಗಿ ಮತ್ಯಾಕೆ ಬರಲಿಲ್ಲ
ಉತ್ತರ ದೇಶದ ಮಳೆ ಹೂದು ಕೆರೆ ತುಂಬಿ
ಬಸುರಿ ಮಾಳ್ಗಡಿ ಅಡಗಿದ್ದೆ
ಅತ್ತೆ ಸೊಸೆಯರಿಗೆ ಹತ್ಯಾವ ಕಾಳಗ
ಉತ್ತು ಬಂದೆ ಮಗನಿಗೆ ಉಣಲಿಕ್ಕಿ ಹೇಳ್ಯಾಳೆ
ಉತ್ತುರು ದೇವೆಂಭೋ ಸೊಸೆ ಬೇಡ ಕಂದಯ್ಯ
ಬಿಟ್ಟು ಬಿಡವಳ ಬಸವಿಯ

ನೀರು ತರಲು ಹೋದ ಉತ್ತರೆ ತಡವಾಗಿ ಬಂದಾಗ ತಾನು ಒಂದು ಹೆಣ್ಣಾಗಿ ಅತ್ತೆಯಾದವಳು ಮಗನ ಕಿವಿ ಊದುತ್ತಾ, ಅವಳು ಬಸವಿ, ಅವಳನ್ನು ಬಿಟ್ಟುಬಿಡು ಎಂದು ಹೇಳಿ ಮನೆಯಿಂದ ಹೊರಹಾಕಿದಾಗ, ತವರು ಮನೆಗೆ ಬಂದ ಉತ್ತರೆಗೆ ಚಿಕ್ಕಮ್ಮನ ಕೈಗೊಂಬೆಯಾಗಿದ್ದ ತಂದೆಯ ಆಸರೆಯೂ ತಪ್ಪಿದಾಗ ಉತ್ತರೆಯ ಮಳೆಯಾಗಿ ಹೋಗು ಎಂಬುದರೊಂದಿಗೆ ಕಥನವ ಕವನ ಅಂತ್ಯವಾಗುವುದನ್ನು ಕಾಣುತ್ತದೆ. ಈ ಒಂದು ಕವನದಲ್ಲಿ ಗಂಡನೆಂಬ ಪ್ರಾಣಿಗಾದರೂ ತನ್ನ ಹೆಂಡತಿಯ ಮೇಲೆ ನಂಬಿಕೆ ಇರಲಿಲ್ಲವೇ? ಹೆಣ್ಣಿನ ಭಾವನೆಗಳ ಕೂಡ ಚೆಲ್ಲಾಟವಾಡುವ ಇಂಥ

ಮನಸ್ಸುಗಳಿಂದ ಮುಕ್ತಿ ಯಾವಾಗ? ಹೀಗೆ ಅನೇಕ ಪ್ರಶ್ನೆಗಳು ಉದ್ಭವಾಗುತ್ತದೆ. ಇನ್ನೂ ಹಲವಾರು ಜನಪದ ಗೀತೆಗಳಲ್ಲಿ ಹೆಣ್ಣು ತನ್ನ ಭಾವನೆಗಳನ್ನು ಬಿಚ್ಚಿ ಮುಚ್ಚಿಡಲು ಯತ್ನಿಸಿದ್ದಾಳೆ.

ಅತ್ತೆ ಸಿಟ್ಟಿಗೆ ಬಂದು ಬೈಗುಳ ಮಳೆ ಸುರಿಸಿದರೂ ಶಾಂತವಾಗಿಯೇ, ಉತ್ತರ ಕೊಡುವ ಹೆಣ್ಣಿನ ಔದಾರ್ಯ, ಗಂಡ ನೆನಸಿಕೊಂಡವ ಪರಸ್ತ್ರೀಯ ಸಂಗ ಮಾಡಿದಾಗಲೂ ತನ್ನ ಸಂಸಾರದ ಗುಟ್ಟನ್ನು ಹೊರಗೆ ಬರದಂತೆ ನೋಡಿಕೊಳ್ಳುವುದು, ಹೀಗೆ ಹೆಣ್ಣು ಜೀವನದ ಕಷ್ಟ – ಕಾರ್ಪಣ್ಯಗಳನ್ನು ಬಿತ್ತರಿಸುವ ನಮ್ಮ ಜನಪದ ಸಾಹಿತ್ಯ ತನ್ನದೇ ಆದ ಒಂದು ಸೊಗಡನ್ನು, ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ.

ಈ ಹಿನ್ನೆಲೆಯಲ್ಲಿ ಜನಪದದಲ್ಲಿ ಮಹಿಳೆಯ ಪಾತ್ರ ಅಂದು–ಇಂದು ಹೇಗಿತ್ತು ಎಂಬುದರ ಬಗ್ಗೆ ಚರ್ಚೆ ಮಾಡುತ್ತಾ ಹೋದಂತೆ ಮಾನವಕುಲದ ಅನಾಗರಿಕ ಹಂತ ಎಂದು ಕರೆಯಲ್ಪಡುವ ಅದಿಕಾಲದಲ್ಲಿಯೇ ಮಹಿಳೆ ವಿಶೇಷವಾದ ಸ್ಥಾನಮಾನವನ್ನು ಪಡೆದಿದ್ದನ್ನು ಸಂಶೋಧನೆಗಳು ಧೃಢಪಡಿಸಿವೆ. ವಂಶೋದ್ಧಾರದಲ್ಲಿ ಪುರುಷನ ಪಾತ್ರವಿದ್ದರೂ ಅದು ನಗಣ್ಯವಾಗಿತ್ತು. ಮಕ್ಕಳನ್ನು ಹಡೆದ ತಾಯಿಯೇ ಪ್ರಧಾನ. ಸೃಷ್ಟಿಗೆ ಪೋಷಣೆಗೆ ಕಾರಣಳಾದ ತಾಯಿಯೇ ಸತ್ಯ. ಸತ್ಯವೆಂದರೆ ತಾಯಿ. ಹಾಗಾಗಿ ಅಂದಿನ ಕಾಲದಲ್ಲಿಯೇ ಸ್ತ್ರೀಯನ್ನು ಗೌರವಿಸಿ, ಆರಾಧಿಸಿ ದೈವತ್ವಕ್ಕೇರಿಸಿದ್ದು ನಿರ್ವಿವಾದ, ಅಲೆಮಾರಿ ಜೀವನದಿಂದ ಸ್ಥಿರತೆಯ ಜೀವನಕ್ಕೆ ಭಾಷ್ಯ ಬರೆದವಳೆ ಮಹಿಳೆ. ಕೃಷಿ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದ ಮಹಿಳೆ ಮಾನವ ಕುಲದ ಬೆಳವಣಿಗೆಯ ಅಭಿವೃದ್ಧಿಯ ಬೆನ್ನೆಲುಬು. ಆದರೆ ಕಾಲಮಾನದ ಸ್ಥಿತ್ಯಂತರಗಳಲ್ಲಿ ಮಹಿಳೆಯ ಸ್ಥಾನಮಾನಗಳಲ್ಲಿ ಅನೇಕ ಬದಲಾವಣೆಗಳು ಕಂಡವು, ಪುರುಷನಿಗಿಂತ ಮಹಿಳೆಯ ಸ್ಥಾನಮಾನಗಳಲ್ಲಿ ಅನೇಕ ಬದಲಾವಣೆಗಳು ಕಂಡವು, ಪುರುಷನಿಗಿಂತ ಮೇಲಿನ ಸ್ಥಾನದಲ್ಲಿದ್ದ ಮಹಿಳೆ ಎರಡನೇ ದರ್ಜೆಗಿಳಿಯಲ್ಪಟ್ಟು ತಾನೆ ಕಲಿಸಿ ಪಾಠದಿಂದ ತಾನೇ ಮೂಲೆ ಗುಂಪಾಗಿ ಹೋಗಿರುವುದು ವಿಪರ್ಯಾಸವೇ ಸರಿ. ಭಾರತದ ಸಂಸ್ಕೃತಿಯಲ್ಲಿ ಅನಾದಿ ಕಾಲದಿಂದಲೂ ಮಹಿಳೆಗೆ ಗೌರವಯುತವಾದ ಸ್ಥಾನಮಾನಗಳಿದ್ದವು. ಆಕೆ ಪೂಜನೀಯವಾಗಿದ್ದಳು ಎಂಬ ಅಂಶಗಳಿಗೆ ಆಧಾರಗಳಿವೆ. ಹಾಗೆಯೇ ಅನೇಕ ರೀತಿಯಲ್ಲಿ ಅಮಾನವೀಯ ಶೋಷಣೆಗಳಿಗೆ, ಕಿರುಕುಳಗಳಿಗೆ ಒಳಗಾಗಿದ್ದಾಳೆ ಎಂಬುದೂ ಮುಖ್ಯವಾಗುತ್ತದೆ. ಮಹಿಳೆಯನ್ನು ಸಾಕ್ಷರತೆಯಿಂದ, ಉನ್ನತ ಶಿಕ್ಷಣದಿಂದ ಮಹಿಳೆಯರು ತಮ್ಮ ಮೇಲಾಗುವ ದೌರ್ಜನ್ಯಗಳನ್ನು ಹತೋಟಿಗೆ ತರಲು ಸಾಧ್ಯ ಎಂದು ಹತ್ತೊಂಬತ್ತನೆ ಮತ್ತು ಇಪ್ಪತ್ತನೇ ಶತಮಾನದಲ್ಲಿನ ಅಧ್ಯಯನಕಾರರ ಆಶಯವಾಗಿತ್ತು. ಆದರೆ ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಟ್ಟಾಗಲೂ ಆಶಯ ಆಶಯವಾಗಿಯೇ ಇವೆ ಎಂಬುದನ್ನು ಗಮನಿಸಬೇಕಾಗಿದೆ.

ಆಧುನಿಕ, ತಂತ್ರಜ್ಞಾನದ ಯುಗವೆಂದು ಕರೆಯಲ್ಪಡುವ ಇಂದಿನ ದಿನಮಾನಗಳಲ್ಲೂ ಅನಕ್ಷರಸ್ಥ ಸಮಾಜದಲ್ಲಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಕ್ಷರಸ್ಥ ಸಮಾಜದಲ್ಲಿ ಮಹಿಳಾ ದೌರ್ಜನ್ಯಗಳು ನಡೆಯುತ್ತಿರುವುದನ್ನ ಕಾಣುತ್ತೇವೆ. ಬೆಂಗಳೂರಿನಂಥ ಮೆಟ್ರೋ ಪಾಲಿಟನ್ ನಗರಗಳಲ್ಲಿ ಪ್ರತಿನಿತ್ಯ ಒಂದಲ್ಲ ಒಂದು ಕೊಲೆ, ಅತ್ಯಾಚಾರ, ವರದಕ್ಷಿಣೆ ಆತ್ಮಹತ್ಯೆ ಪ್ರಕರಣಗಳ ಸರಮಾಲಯೇ ದಿನ ಪತ್ರಿಕೆಗಳಲ್ಲಿ ದೃಶ್ಯಮಾಧ್ಯಮಗಳಲ್ಲಿ ಕಾಣುತ್ತಿದ್ದೇವೆ. ಹಾಗಾದರೆ ಶಿಕ್ಷಣ, ನ್ಯಾಯಾಂಗ, ಶಾಸಕಾಂಗಗಳಿಂದಾದ ಫಲಿತಾಂಶಗಳೇನು ಎಂಬುದನ್ನು ಪ್ರಶ್ನಿಸಬೇಕಾಗಿದೆ. ಜಾನಪದದಲ್ಲಿ, ಜನಪದ ಕಥೆ, ಗೀತೆ, ಒಗಟು ಇತ್ಯಾದಿಗಳಲ್ಲಿ ಮತ್ತು ಸಂಪ್ರದಾಯ ಆಚರಣೆಗಳಲ್ಲಿ ಒಟ್ಟಾರೆ ಜಾನಪದ ಸ್ತ್ರೀ ಲೋಕದಲ್ಲಿ ಮಹಿಳೆ ಅನುಭವಿಸಿದ ಕಷ್ಟ ಕಾರ್ಪಣ್ಯಗಳಿಗೂ ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯಗಳಿಗೂ ಏನು ವ್ಯತ್ಯಾಸವಿದೆ? ದೇಶದ ಅತ್ಯುನ್ನತ ಶಿಕ್ಷಣ ಸಂಸ್ಥೆಗಳೆಂದೆನಿಸಿಕೊಳ್ಳುವ ಅನೇಕ ವಿಶ್ವವಿದ್ಯಾಲಯಗಳಲ್ಲಿಯೂ ಮಹಿಳಾ ಪ್ರಾಧ್ಯಾಪಕರುಗಳು, ವಿದ್ಯಾರ್ಥಿನಿಯರೂ ದೌರ್ಜನ್ಯ, ಲೈಂಗಿಕ ಕಿರುಕುಳದಿಂದ ಮುಕ್ತವಾಗಿಲ್ಲ. ಅತ್ಯುನ್ನತ ಶಿಕ್ಷಣ ಪಡೆದ ಪುರುಷ ಪ್ರಾಧ್ಯಾಪಕರುಗಳೇ ಅಮಾನವೀಯತೆಯಿಂದ ನಡೆದುಕೊಳ್ಳುವಾಗ, ರಾಜಕೀಯ ಮಾಡುವಾಗ ಅವುಗಳೆಲ್ಲವನ್ನು ಮೆಟ್ಟಿನಿಲ್ಲಲು ಸಾಧ್ಯಾವಾಗದಿರುವುದಕ್ಕೆ ಕಾರಣ ಏನು? ಪ್ರತಿಭಟಿಸುವ ಕನಿಷ್ಟ ತಿಳುವಳಿಕೆಯನ್ನು ತಿಳಿಯಲಾರದ ಮಹಿಳಾ ಪ್ರಾಧ್ಯಾಪಕರುಗಳು ನಮ್ಮ ವಿಶ್ವವಿದ್ಯಾಲಯಗಳಲ್ಲಿ, ವೃತ್ತಿ ನಿರ್ವಹಿಸುವ ಕೆಲಸದ ಜಾಗಗಳಲ್ಲಿ ಇದ್ದಾರೆ ಎಂದರೆ ತಪ್ಪಾಗಲಾರದು. ಇದೇ ರೀತಿ ಸಂಶೋಧನಾ ವಿದ್ಯಾರ್ಥಿನಿಯರ ಪಾಡೂ ಇಷ್ಟೆ. ಮಹಿಳಾ ಪ್ರಾಧ್ಯಾಪಕರುಗಳೇ ವಿದ್ಯಾರ್ಥಿನಿಯರನ್ನು ಶೋಷಣೆಗೆ ಒಳಪಡಿಸಿದ ಉದಾಹರಣೆಗಳೂ ಇವೆ. ಈ ಸಂದರ್ಭದಲ್ಲಿ ಹೆಣ್ಣಿಗೆ ಹೆಣ್ಣೆ ಶತ್ರು ಎಂಬ ಸಂಪ್ರದಾಯಸ್ಥರ ಮಾತು ನಿಜವೇ ಎಂಬ ಪ್ರಶ್ನೆ ಉದ್ಭವಿಸುತ್ತವೆ.

ISBN – 978-93-5526-247-9

ನಮ್ಮ ನಾಡಿನ ಬಹುತೇಕ ಸ್ತ್ರೀವಾದಿಗಳು, ಪಾಶ್ಚಾತ್ಯ ಸ್ತ್ರೀವಾದಿ ದೃಷ್ಟಿಕೋನದಿಂದಲೇ ಭಾರತೀಯ ಸ್ತ್ರೀಯನ್ನು ನೋಡುತ್ತಾ ಬಂದಿದ್ದಾರೆ ಎಂದು ಹೇಳಬಹುದು. ಪಾಶ್ಚಿಮಾತ್ಯ ದೇಶದ ಮಹಿಳೆಗೂ ಭಾರತೀಯ ಮಹಿಳೆಗೂ ಅನೇಕ ರೀತಿಯಲ್ಲಿ ಅಜಗಜಾಂತರ ವ್ಯತ್ಯಾಸಗಳಿರುವುದನ್ನು ಗಮನಿಸಬೇಕು. ನಮ್ಮ ಜಾನಪದದಲ್ಲಿ ಮಹಿಳೆಯ ಸ್ಥಿತಿ ಶೋಚನೀಯವಾದುದು ಎಂಬ ಸ್ತ್ರೀ ವಾದಿಗಳ ಗ್ರಹಿಕೆಗಳು ಮೇಲ್ನೋಟದ ಗ್ರಹಿಕೆಗಳೆಂದೇ ಹೇಳಬೇಕಾಗುತ್ತದೆ. ನಮ್ಮ ನಾಡಿನ ಮೌಖಿಕ ಪರಂಪರೆ, ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಬುಡಕಟ್ಟು ಸಮುದಾಯಗಳಲ್ಲಿನ ಸ್ತ್ರೀಯರ ಬದುಕು, ದೃಷ್ಟಿಕೋನಗಳನ್ನು ನಾವು ಗಂಭೀರವಾಗಿ ಶೋಧಿಸಬೇಕಾಗುತ್ತದೆ. ಏಕಮುಖ ಸಂಸ್ಕೃತಿ ಭಾರತದ್ದಲ್ಲ ಎಂಬುದನ್ನು ಈಗಾಗಲೇ ಕಂಡುಕೊಂಡಿರುವ ಸತ್ಯ ನಮ್ಮ ಮುಂದಿರುವುದರಿಂದ ಅಖಂಡ ಭಾರತದಲ್ಲಿನ ನೂರಾರು ಸಮುದಾಯಗಳಲ್ಲಿ ಅದರದ್ದೇ ಆದ ಸಂಸ್ಕೃತಿಗಳಿದ್ದು. ಅವುಗಳ ಒಡಲೊಳಗೆ ಹುದುಗಿರುವ ಮಹಿಳಾ ಪರ ಶಕ್ತಿಗಳನ್ನು, ದೃಷ್ಟಿಕೋನಗಳನ್ನು ಪೂರ್ವಾಗ್ರಹವಿಲ್ಲದೇ ಶೋಧಿಸುವ ಕಾಲ ಸನ್ನಿಹಿತವಾಗಬೇಕು. ಯಾರಾದರೂ ಭಾರತೀಯ ಮಹಿಳೆಯರನ್ನು ಕುರಿತು ಅಧ್ಯಯನ ಮಾಡಬೇಕೆಂದಿದ್ದರೆ ಮತ್ತು ಅವರ ಧ್ವನಿಗಳನ್ನು ಕೇಳಬೇಕೆಂದಿದ್ದರೆ ಅವರು ಹೆಂಗಸರು ಹೇಳುವ ಕಥೆಗಳು, ಹಾಡು ಹಸೆಗಳು, ಒಡಪುಗಳು ಮತ್ತು ತೋಂಡಿ ಸಂಪ್ರದಾಯದಲ್ಲಿ ಜೀವಂತವಾಗಿ ಉಳಿದುಕೊಂಡಿರುವ ಜಾಣ್ನುಡಿ ಆಟಗಳು ಮತ್ತು ಜಾನಪದ ಪರಂಪರೆಯ ದೇವತೆಗಳ ಪೌರಾಣಿಕತೆ ಇವು ಎಲ್ಲವುಗಳತ್ತ ನಮ್ಮ ಗಮನ ಕೇಂದ್ರೀಕರಿಸಬೇಕಾಗುತ್ತದೆ. ನಮ್ಮ ನಾಡಿನ ಅನೇಕ ಜನಪದ ಕತೆಗಳಲ್ಲಿ ಮಹಿಳೆಯೇ ಪ್ರಮುಖ. ಸ್ತ್ರೀ ಶಕ್ತಿಯನ್ನು ನಾವಿಲ್ಲಿ ಗುರುತಿಸಬಹುದು. ತನ್ನ ಬುದ್ಧಿಮತ್ತೆಯಿಂದ ಕುಟುಂಬವನ್ನು ರಕ್ಷಿಸುವುದು, ಚಾಲಾಕಿತನದಿಂದ ನಾಯಕನನ್ನು ರಕ್ಷಿಸುವುದು, ಉಪಾಯದಿಂದ ಪಾರಾಗುವುದು, ಅತ್ತೆಯನ್ನು, ಸೊಸೆಯನ್ನು ವಿರೋದಿಸುವುದು, ಪತಿಯ ಅನ್ಯಾಯದ ವಿರುದ್ದ ಪ್ರತಿಭಟಿಸುವುದು. ಹೀಗೆ ನಾನಾ ರೀತಿಯಲ್ಲಿ ಪುರುಷನಿಗಿಂತ ಒಂದು ಕೈಮೇಲಾಗಿರುವುದನ್ನು ಕಾಣುತ್ತೇವೆ. ಇವೆಲ್ಲವುಗಳನ್ನು ಸಾಹಿತ್ಯದಲ್ಲಿ ಮಾತ್ರ ಎಂದು ತಿರಸ್ಕರಿಸುವಂತಿಲ್ಲ. ಜನಪದ ಸಾಹಿತ್ಯ ಬೆಳೆದು ಬಂದಿರುವುದು ಜನಪದರ ಜೀವನಾನುಭವದ ಮೂಸೆಯಿಂದ. ಜಾನಪದ ಸ್ತ್ರೀ ಲೋಕದಲ್ಲಿ ಹೆಣ್ಣು ಶೀಲ, ಪಾತಿವ್ರತ್ಯ, ತ್ಯಾಗ, ವಿನಯ, ವಿಧೇಯತೆಗಳ ಬಲೆಯಲ್ಲಿ ಸಿಲುಕಿನೊಂದಿದ್ದಾಳೆ, ಬೆಂದಿದ್ದಾಳೆ ಎಂದು ಆರೋಪಿಸುತ್ತಿರುವವರು ಇಂದಿನ ಆಧುನಿಕ ಜಗತ್ತನ್ನೊಮ್ಮೆ ಕಣ್ತೆರೆದು ನೋಡಬೇಕು, ಆರ್ಥಿಕ ಸ್ವಾತಂತ್ರ್ಯದೊಡನೆ ತಳುಕು ಹಾಕಿಕೊಂಡಿರುವ ಇಂದಿನ ಕೌಟುಂಬಿಕ ವ್ಯವಸ್ಥೆಯಲ್ಲಿ ಅಪ್ಪ, ಅಮ್ಮ ಮತ್ತು ಮಗು ಇರುವ ಕುಟುಂಬದಲ್ಲಿ ತ್ಯಾಗದ ಬಗೆ, ವಿನಯ – ವಿಧೇಯತೆಗಳ ಬಗ್ಗೆಗಾಗಲೀ ಮಾತೇ ಇಲ್ಲ, ಮಗು ಅಜ್ಜ – ಅಜ್ಜಿಯರ ಮಮತೆ ಏನೆಂಬುದನ್ನು ತಿಳಿದಿಲ್ಲ ಮತ್ತು ಅನುಭವಿಸುವುದಿಲ್ಲ, ಬದಲಾಗಿ ಕಂಪ್ಯೂಟರ್, ಆಟಿಕೆ ಸಾಮಾನುಗಳ ಮಧ್ಯೆ ಜೀವವಿರುವ ಯಂತ್ರವಾಗಿದೆ. ಕುಟುಂಬಕ್ಕೆ ಮಾರ್ಗದರ್ಶನ ಮಾಡುವವರು ಯಾರೂ ಇಲ್ಲ. ತಂದೆ ಒಂದೂರಲ್ಲಿ ತಾಯಿ ಇನ್ನೊಂದೂರಲ್ಲಿ ತಂತಮ್ಮ ಕೆಲಸಗಳ ಜಂಜಾಟದಲ್ಲಿ ಬ್ಯುಸಿಯಾಗಿರುವಾಗ ಮಗುವಿಗೆ ಪ್ರೀತಿ, ಮಮತೆಯ ಮಾತು ಎಲ್ಲಿಯದು ? ಸಣ್ಣ ಪುಟ್ಟ ಕಾರಣಗಳಿಗಾಗಿ ಆತ್ಮಹತ್ಯೆ ಕೊಲೆ, ವಿವಾಹ ವಿಚ್ಛೇದನೆಯಂಥ ಪ್ರಕರಣಗಳು ಹೆಚ್ಚಾಗುತ್ತಿದೆ, ಪರಂಪರಾಗತ ನಂಬಿಕೆ ಸಂಪ್ರದಾಯಗಳಿದ್ದರೂ ಅವುಗಳನ್ನು ಮೀರಿ ಬದುಕನ್ನು ಸಹ್ಯವಾಗಿಸಿಕೊಂಡ ಜನಪದ ಮಹಿಳೆಯನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ.

ಆಕಾರ ಗ್ರಂಥಗಳು ;


1. ಮಹಿಳೆ ಸಾಹಿತ್ಯ ಸಮಾಜ – ಡಾ. ವಿಜಯಾದಬ್ಬೆ
2. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ – (ಸಂ) ಬರಗೂರುರಾಮಚಂದ್ರಪ್ಪ, ವಿವಿಧ ಲೇಖಕರು.
3. ಜನ – ಜನಪದ –ಜಾನಪದ – ಡಾ॥ ಎಂ. ಚಿದಾನಂದ ಮೂರ್ತಿ
4. ಸ್ತ್ರೀವಾದ ಮತ್ತು ಭಾರತೀಯತೆ – ಸತೀಶ ಎಂ.ಈ
5. ಜಾನಪದ : ಸಾಂಸ್ಕೃತಿಕ ಆಯಾಮಗಳು– ಪ್ರೋ. ಹಿ.ಶಿ ರಾಮಚಂದ್ರೇಗೌಡ
6. ಕನ್ನಡ ಸಾಹಿತ್ಯ ಸಂಗಾತಿ – ಕೀರ್ತಿನಾಥ ಕುರ್ತ ಕೋಟಿ.


***

ISBN – 978-93-5526-247-9

## 23.ಚಂದ್ರಶೇಖರ ಕಂಬಾರ ವಿರಚಿತ ಜನಪದ ಮಹಾಕಾವ್ಯ 'ಚಕೋರಿ' : ಭಾಷೆ ಮತ್ತು ಶೈಲಿ

**ಸಂದೇಶ್.ಎ.ಎಸ್.**

ಸಮಕಾಲೀನ ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮ ವಿಶಿಷ್ಟವಾದ ಬರವಣಿಗೆ ಶೈಲಿ ಮತ್ತು ವಿಭಿನ್ನ ಆಲೋಚನೆಯಿಂದ ಗುರುತಿಸಿಕೊಂಡಿರುವ ಕಂಬಾರರು ತಮ್ಮ ವಿದ್ಯಾರ್ಥಿ ದಿನಗಳಲ್ಲಿ ನವೋದಯವರಿಂದ ಪ್ರಭಾವಿತರಾಗಿ ಅವರಂತೆ ಕವನ ರಚನೆ ಮಾಡತೊಡಗಿ ನಂತರ ನವ್ಯಪಂಥದಲ್ಲಿ ತಮ್ಮನ್ನು ಗುರುತಿಸಿಕೊಂಡು ಸಾಹಿತ್ಯ ಕೃಷಿ ಮುಂದುವರಿಸಿ, ಅಷ್ಟೇ ಬೇಗ ತಮ್ಮ ರಚನಾ ಶೈಲಿ ಮತ್ತು ಆಲೋಚನೆಗಳಿಂದ ನವ್ಯರಲ್ಲಿದ್ದೇ ನವ್ಯರಿಗಿಂತಲೂ ಭಿನ್ನರಾಗಿ ಗುರುತಿಸಿಕೊಂಡರು ಮತ್ತು ಕನ್ನಡ ಸಾಹಿತ್ಯ ಪರಂಪರೆಯ (ಮೌಖಿಕ ಮತ್ತು ಲಿಖಿತಗಳೆರಡರ) ಸಾರವನ್ನು (ಆಧುನಿಕ ನವ್ಯ ಪಂಥವೂ ಸೇರಿದಂತೆ) ಹೀರಿಕೊಂಡ ಕಂಬಾರರು ನವ್ಯರಿಗಿಂತ ಭಿನ್ನವಾಗಿ ಬರೆಯತೊಡಗಿದರು.

ಕಾವ್ಯಕರ್ಮ ಹಾಗೂ ಶಿಲ್ಪಗಳಲ್ಲಿ ಅತ್ಯಂತ ಪ್ರಜ್ಞಾಪೂರ್ಣ ಪ್ರಯತ್ನಗಳು ನಡೆಯುತ್ತಿದ್ದ, ಏಲಿಯೆಟ್, ಪೌಂಡ್, ಅರ್ನಾಲ್ಡ್‌ರನ್ನು ಬಲವಂತವಾಗಿ ಸಾಹಿತ್ಯದಲ್ಲಿ ನುಗ್ಗಿಸುತ್ತಿದ್ದ ನವ್ಯರ ಕಾಲದಲ್ಲಿ ಕಂಬಾರರು ತಮ್ಮ ಓರಗೆಯ ಲೇಖಕರಿಗಿಂತ ಭಾಷಾ ಬಳಕೆಯಲ್ಲಿ, ಲಯದ ವೈವಿಧ್ಯತೆಯಲ್ಲಿ ಹೊಸ ಪ್ರಯೋಗ ಮಾಡಿದರು. ತಮ್ಮ ಪ್ರದೇಶ ಪ್ರಜ್ಞೆಯಲ್ಲಿ ಮೂಡಿಸಿಕೊಂಡ ತಮ್ಮ ಅನುಭವದ ಮೂಲಕ ತುಂಬ ಸಹಜವು ಮತ್ತು ಸರಳವು ಆದ ಆಡುಮಾತಿನ ಶೈಲಿಯಲ್ಲಿ ಸಾಹಿತ್ಯ ರಚನೆಗೆ ತೊಡಗಿದರು. ಭಾಷಾಶಿಲ್ಪ, ಪ್ರತಿಮೆ, ಭಾಷೆ, ವಸ್ತು ಹಾಗೂ ಜೀವನ ದರ್ಶನಗಳ ದೃಷ್ಟಿಯಿಂದ ಹೊಸತನವನ್ನು ಕಂಡುಕೊಂಡರು. ಕಾವ್ಯಗಳಲ್ಲಿ ಪುನಃ ಒಂದು ಲಯ, ಗೇಯತೆಯನ್ನು ಸ್ಥಾಪಿಸಿದರು. ಆದರೆ ಕಂಬಾರರ ಕಾವ್ಯದ ಲಯ, ನವೋದಯದವರ ಕಾವ್ಯದ ಲಯಗಳಿಗಿಂತ ಭಿನ್ನವಾಗಿದ್ದು ಆದಿಮ ಜನಾಂಗದ ಕುಣಿತದ ನಾದ ಮತ್ತು ಶಕ್ತಿಗಳಿಂದ ತುಂಬಿದ್ದು, ಗ್ರಾಮೀಣ ಭಾಷೆ ಮತ್ತು ಬದುಕನ್ನು ತಮ್ಮ ರಚನೆಗಳಲ್ಲಿ ಜೀವಂತವಾಗಿ ಮೂಡಿಸುತ್ತರೆ.

ಮೇಲು ಪರಂಪರೆಯ ಹಿಡಿತದಿಂದ ಪೂರ್ತಿ ಬಿಡಿಸಿಕೊಂಡ ಕಂಬಾರರು ಜನಪದ ಕಾವ್ಯಗಳ ಪರಂಪರೆಯನ್ನು ಇನ್ನೊಂದು ಕಲಾತ್ಮಕ ಎತ್ತರಕ್ಕೆ ಒಯ್ದಿದ್ದು, ಜನಪದ ಮಿಥ್‌ನ್ನು ಆಧುನಿಕ ಪ್ರಜ್ಞೆಯ ಅಭಿವ್ಯಕ್ತಿಗಾಗಿ ಬಳಸಿಕೊಂಡು ರಚಿಸಿರುವ ಮಹಾಕಾವ್ಯವಾದ 'ಚಕೋರಿ'ಯು ಶಿಷ್ಟ ಹಾಗೂ ಜಾನಪದ ಎರಡರ ಲಕ್ಷಣಗಳನ್ನು ಹೊಂದಿದ್ದು ಪ್ರಜ್ಞಾಪೂರ್ವಕವಾಗಿ ವಿಪುಲದೇಶಿ, ತಕ್ಕಮಟ್ಟಿಗೆ ಸಂಸ್ಕೃತ, ಆಗಾಗ್ಗೆ ಬರುವ ಮರಾಠಿ ರೂಪಗಳು ಇವೆಲ್ಲವುಗಳನ್ನು ಸಂದರ್ಭೋಚಿತವಾಗಿ ಬಳಸಿ ಉತ್ತರ ಕರ್ನಾಟಕದ ವ್ಯವಹಾರಿಕ ಶಿಷ್ಟಕನ್ನಡದ ಚೌಕಟ್ಟಿನಿಂದ ರಚಿತವಾಗಿದೆ.

'ಚಕೋರಿ'ಯ ಕತೆ ಸಂಪೂರ್ಣವಾಗಿ ಹೊಸದಾಗಿದ್ದು, ಕಂಬಾರರಿಗೆ 'ಮಿಥ್'ಗಳ ಬಗೆಗಿರುವ ಮೋಹ ಮತ್ತು ಸಾಂದ್ರ ತಿಳುವಳಿಕೆಗಳು ಈ ಕತೆಯ ಸೃಷ್ಟಿಗೆ ಕಾರಣವಾಗಿದ್ದು 'ಚಕೋರಿ'ಯ ಭಾಷಾಸಂಪತ್ತು ಅಕ್ಕಮಹಾದೇವಿಯ ಭಾವೋತ್ಕಟತೆ, ಅಲ್ಲಮನ ನಿಗೂಢತೆಯ ರುಚಿ, ಜನಪದ ಗೀತೆಗಳ ಸೊಗಸು ಮತ್ತು ಸರ್ವಜ್ಞನ ಶ್ರೇಷ್ಠತಮ ತ್ರಿಪದಿಗಳ ಅರ್ಥಗರ್ಭಿತ ಸರಳತೆ – ಇವೆಲ್ಲವನ್ನೂ ದ್ರವ್ಯಗಳನ್ನಾಗಿ ಬಳಸಿಕೊಂಡಿರುವ ಹೊಸಪಾಕವಾಗಿದೆ.

ಕನ್ನಡ ಜನಪದದಲ್ಲಿ ವ್ಯಾಪಕವಾಗಿ ಪ್ರಚಾರದಲ್ಲಿರುವ 'ಮಲೆ ಮಹದೇಶ್ವರ' ಕಾವ್ಯದ ಕಥನ ತಂತ್ರದಿಂದ ಹಿಡಿದು, ಹಾಡು, ಭಾವಗೀತೆ, ಭಾವಗೀತಾತ್ಮಕ ಗದ್ಯ, ಕನ್ನಡ ಗದ್ಯದ ಬೇರೆ ಬೇರೆ ಅವಸ್ಥಾಂತರಗಳು, ವಚನಕಾರರ ನುಡಿಯ ರೀತಿ, ಉತ್ತರ ಕರ್ನಾಟಕದ ಆಡು ಮಾತಿನ ರೂಪ, ಚಂಪೂ ರೀತಿಯ ಗದ್ಯ ಪದ್ಯ ಮಿಶ್ರಣದಿಂದ ಹಿಡಿದು ಆಧುನಿಕ ನಿರೂಪಣಾತ್ಮಕ ಗದ್ಯದವರೆಗಿನ ಬೇರೆ ಬೇರೆ ರೀತಿಯ ಭಾಷೆಯ ಬಳಕೆಯನ್ನು 'ಚಕೋರಿ'ಯಲ್ಲಿ ಕಾಣಬಹುದು.

ಚಕೋರಿಯ ಭಾಷೆಯ ಸಮ್ಮೋಹನ ಶಕ್ತಿ ಅಪೂರ್ವವಾಗಿದ್ದು, ನಿರೂಪಣೆಯಲ್ಲಿ ಗೋಚರಿಸುವ ಆತ್ಮೀಯತೆ ಹೃದ್ಯವಾಗಿದ್ದು, ಜಾನಪದ ನೆಲೆಯಿಂದ ಪ್ರಾರಂಭವಾಗುವ ಮಾತು ಶಿಷ್ಟದ ಭಾವ ಭಾಷೆಗಳಲ್ಲಿ ಸಂಚರಿಸುತ್ತವೆ. ಉದಾಹರಣೆಗೆ : ಚಂದಮುತ್ತ–ಚಕೋರಿಯರ ಪ್ರಣಯಾಂಕುರದ ಸಂದರ್ಭವನ್ನು ನೋಡುವುದಾದರೆ,

ಎಲ್ಲಿದ್ದನೋ ಮಾರಾಯ ಮಾರ
ಸಕ್ಕರೆ ಬಿಲ್ಲಿನ ಹೆದೆಯ ಶಕ್ತಿಂದ ಸೆಳೆದು
ಪಂಚೈದು ಬಾಣಗಳ ಹೊಂಚಿ ಬಿಟ್ಟ ನೋಡು
ತಬ್ಬಿಬ್ಬಾದರಿಬ್ಬರೂ. (ಚಕೋರಿ, ಪು.ಸಂ.107)

ಎಂದು ವರ್ಣಿಸುವಾಗ ಆಪ್ತ ಭಾವದ ಸೊಗಸು ಕಂಗೊಳಿಸಿದೆ.

ಗಂಡು ಹೆಣ್ಣುಗಳ ಪ್ರಥಮ ಭೇಟಿಯಲ್ಲಿ ಮೂಡಿಬರುವ ಪ್ರಣಯಾಂಕುರ ಉದ್ವೇಗ ಕಂಪನ ಸುಖಾನುಭವಗಳನ್ನು ಚಕೋರಿಯಲ್ಲಿ ಕಂಬಾರರು ಬಹಳ ಎಚ್ಚರಿಕೆಯಿಂದ ನಿರ್ವಹಿಸಿದ್ದು, ಉದಾಹರಣೆಗೆ : ಮರ್ತ್ಯದ ತರುಣ ಚಂದ್ರಮುತ್ತ ಅಲೌಕಿಕಳಾದ ಚಕೋರಿಯನ್ನು ನೋಡಿದಾಗ

ಮಣ್ಣಿನ ಕಣ್ಣಾಡಿದಂತೆ
ಬೆಳಕಿನ ಕುಡಿಗೆ
ತನುಮೂಡಿ ತನುವೆಂಜಲಾಗಿ
ಮನಮೂಡಿ ಮನವೆಂಜಲಾಗಿ
ಕಾತರಿಸಿ ಮನದಗಲ ತನುವಿನ ಉದ್ದಗಲ
ಥರಥರನೆ ನಡುಗಿದಳು ನೋಡು. (ಚಕೋರಿ, ಪು.ಸಂ.
70)

ಎಂದು ಚಕೋರಿಯ ದೇಹ ಮನಸ್ಸುಗಳ ಸ್ಥಿತಿಯನ್ನು ವಿನೂತನ ಪರಿಭಾಷೆಯಲ್ಲಿ ಚಿತ್ರಿಸಿಲಾಗಿದೆ.

ಇನ್ನೂ "ಬರಬಾರದ ಜಡಿಮಳೆ ಜಡಿದು, ಕೊಚ್ಚಿಹೋದವು ನೋಡು ಧರೆಯ ಖಾಯಿಲೆಗಳು ಮತ್ತು ಶಾಪಗಳು" ಎಂದು ಪ್ರಾರಂಭವಾಗುವ ಮಳೆಯ ಪರಿಣಾಮದ ವರ್ಣನೆ ಅಪರೂಪದ ಪದಪುಂಜಗಳ ರಸಘಟ್ಟವಾಗಿದ್ದು, ಉದಾಹರಣೆಗೆ :

ಹಳ್ಳಾಕೊಳ್ಳಾ ತುಂಬಿ ತುಳುಕಿ
ತೊಳೆದು ಹೋದವು ಎಲ್ಲ ಕಿಲುಬು
ಕಾಡಿನಂಗಳಲದಲ್ಲಿ ತಂಗಾಳಿಯಾಡಿ
ಮತ್ತೆ ಅಧಿಕಾರಕ್ಕೆ ಬಂತು ಹಸಿರು
......................
ಕಂಡಲ್ಲಿ ಪಲ್ಲವಿಸಿ ಫಲ ಹೆರುವ ಮರಗಳು
ಜೇನು ತುಂಬಿದ ಹೂಗಳೆಲ್ಲಾ ಕಡೆ
ದೀಪಗಳು ಉರಿದಾವು ಸಂಪಿಗೆಯ ಮರದಲ್ಲಿ
ತುಂಬಿಗಳ ತುಟಿಯಲ್ಲಿ ಹಾಡು ಜಿನುಗಿ. (ಚಕೋರಿ, ಪು.
ಸಂ.110)

'ಚಕೋರಿ'ಯಲ್ಲಿ ಕಂಬಾರರು ಅತ್ಯಂತ ಧಾರಾಳತನ, ಕುಶಲತೆ, ಉತ್ಸಾಹಗಳಿಂದ ಭಾಷೆಯನ್ನು ದುಡಿಸಿಕೊಂಡಿದ್ದು, ಕಂಬಾರರು ತಮ್ಮ ಅನುಭವದ ಸಮರ್ಥ ಮತ್ತು ಪರಿಣಾಮಕಾರಿಯಾದ ಅಭಿವ್ಯಕ್ತಿಗೆ, ತಕ್ಕ ಪದಗಳನ್ನು, ಪದಪುಂಜಗಳನ್ನು, ವಾಕ್ಯ ಸಮೂಹಗಳನ್ನು, ಅವುಗಳ ವಿಲಕ್ಷಣ ಲಯ ಮತ್ತು ಏರಿಳಿತಗಳನ್ನು, ಪ್ರತಿಮೆ, ಅಲಂಕಾರಗಳನ್ನು – ಜಾಣ್ಮೆಯಿಂದ ಆಯ್ಕೆ ಮಾಡಿಕೊಂಡು, ಸೃಷ್ಟಿಸಿ, ಸಾಧಿಸಿ, ಬಳಸಿಕೊಂಡಿದ್ದಾರೆ.

'ಚಕೋರಿ'ಯಲ್ಲಿ ಬರುವ ಧರ್ಮಸೆರೆ ಬಿಡಿಸುವುದು, ಗೊಂಬೆಗಳ ಸಂಭಾಷಣೆ ಮುಂತಾದ ತಾಂತ್ರಿಕ ಅಂಶಗಳನ್ನು ಕಂಬಾರರು ಜಾನಪದ ಕಾವ್ಯಗಳಿಂದ ಎರವಲು ಪಡೆದುಕೊಂಡಿದ್ದರು, ಕಾವ್ಯದಲ್ಲಿ ಜಾನಪದ ವೃತ್ತಿ ಕಥನಕಾರರ ನಿರೂಪಣ ವಿಧಾನ ಬಳಕೆಯಾಗಿರುವಂತೆ ಅನಿಸಿದರೂ, ಅಲ್ಲಿಯ ಲಯಗಾರಿಕೆಯನ್ನು ಚಕೋರಿಯಲ್ಲಿ ಕಾಣಲಾಗುವುದಿಲ್ಲ.

ಚಕೋರಿ ಕಾವ್ಯವನ್ನು ವರ್ಣನಾತ್ಮಕವಾಗಿ ವಿಶ್ಲೇಷಿಸಿದಾಗ ಉತ್ತರ ಕರ್ನಾಟಕದ ಬೆಳಗಾವಿ ಉಪಭಾಷೆಯಲ್ಲಿ ಕಂಡುಬರುವ ಕೆಲವು ಧ್ವನಿರಚನಾ ಪ್ರಕ್ರಿಯೆಗಳು, ಅನುನಾಸಿಕೀಕರಣ, ಜಾರುಧ್ವನಿಗಳ ಬಳಕೆ ಹಾಗೂ ಆಕೃತಿಮಾ ಪ್ರಕ್ರಿಯೆಗಳು ಕಾಣಿಸುತ್ತವೆ. ಅವು ಕಾವ್ಯಕ್ಕೆ ಪ್ರಾದೇಶಿಕ ಸೊಗಡನ್ನು ತಂದುಕೊಟ್ಟಿದ್ದು, ಕಾವ್ಯದಲ್ಲಿ ಸಹವಾಗಿ ಬರುವ ಅಲಂಕಾರಗಳು ಕಾವ್ಯಕ್ಕೆ ಸೌಂದರ್ಯವನ್ನು ಹೆಚ್ಚಿಸಿವೆ. ಅಲಂಕಾರಗಳಂತೆ ಶಬ್ದಚಿತ್ರಗಳು ಕೂಡ ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿದ್ದು, ಕಾವ್ಯದಲ್ಲಿ ಕಂಡುಬರುವ ಉಪಮೆಗಳು ತುಂಬ ಪರಿಣಾಮಕಾರಿಯಾಗಿದ್ದು, ಸ್ವಭಾವೋಕ್ತಿಗಳು ಸಹ ತುಂಬ ಮನೋಜ್ಞವಾಗಿದೆ. ಉದಾಹರಣೆಗೆ : ಶಿವನ ಸ್ವರೂಪವನ್ನು ಹೇಳುವಾಗ ಬರುವ ಸ್ವಭಾವೋಕ್ತಿಯನ್ನು ನೋಡುವುದಾದರೆ,

ಮೂರುಕಣ್ಣು ಮುಕ್ಕಣ್ಣು ಮುಚ್ಚಿಕೊಂಡು
ಮುಖದ ಮ್ಯಾಲೆ ಜುಟ್ಟು ಜಡೆ ಚೆಲ್ಲಿಕೊಂಡು
ಜಪತಪವ ಮಾಡುವ ಶಿವನೆ ಒಂದಾದರು ಕಣ್ಣು ತೆರೆದು ನೋಡು (ಚಕೋರಿ, ಪು.ಸಂ.69)

ಕಾವ್ಯವನ್ನು ಪ್ರಾರಂಭದಿಂದ ಕೊನೆಯತನಕ ಓದಿದಾಗ ಅಲಂಕಾರ ಮತ್ತು ಪ್ರತಿಮೆಗಳ ಮೂಲಕ ಮಾತನಾಡಿದಂತೆ ಭಾಸವಾಗುತ್ತದೆ ಮತ್ತು ಕೆಲವು ಪ್ರತಿಮೆಗಳು ಹದವರಿತು ಬಳಕೆಯಾಗಿ ಕಾವ್ಯಕ್ಕೆ ಸಿದ್ಧಿಯನ್ನು ಮೆರಗನ್ನು ತಂದುಕೊಟಿವೆ. ಕಂಬಾರರು ಬಳಸುವ ಆಡುಮಾತಿನ ಶೈಲಿ ತುಂಬ ಸಹಜ ಮತ್ತು ಸರಳವಾಗಿದ್ದು, ಆಡುನುಡಿಯ ಸ್ವರಾಂದೋಲನ ಯಾವುದೋ ಕವನದ ಮಾಲೆಗೆ ಭಾರ ಎನಿಸದಂತೆ, ಕೃತಕವೆನಿಸದಂತೆ ತುಂಬ ಸಹಜವಾದ ರೀತಿಯಲ್ಲಿ ಕವನದ ಪಾದಲಯದಲ್ಲಿ ಬೆರೆತುಕೊಂಡಿವೆ.

ಇನ್ನೂ ಕಾವ್ಯದ ಶೈಲಿಯ ವಿಚಾರ ಪ್ರಸ್ತಾಪಿಸುವುದಾದರೆ, 'ಚಕೋರಿ'ಯ ಶೈಲಿಯು ಸಿದ್ಧಮಾದರಿಯ ಕತೆ, ಕಾದಂಬರಿಗಳಿಗಿಂತ ಬೇರೆಯದೇ ರೀತಿಯದ್ದಾಗಿದ್ದು ಅನೇಕ ಬಗೆಯ ಕಥನ ತಂತ್ರಗಳನ್ನು ಬಳಸಿಕೊಂಡು ಜಾನಪದ ಕತೆಯ ಸ್ವರೂಪವನ್ನೂ ಮಹಾಕಾವ್ಯದ ಮಹತ್ವಾಕಾಂಕ್ಷೆಯನ್ನೂ ಪಡೆದಿದೆ. 'ಚಕೋರಿ'ಯಲ್ಲಿ ದೇಸಿಲಯಗಳನ್ನು ಅರ್ಥಪೂರ್ಣವಾಗಿ ಬಳಸಿರುವ ಕಂಬಾರರು ಅವುಗಳ ಜೊತೆಗೆ ಲಾವಣಿ, ಡೊಳ್ಳು ಮಟ್ಟುಗಳ ಬಂಧಗಳಲ್ಲಿಯೂ ಕಾವ್ಯವನ್ನು ರಚಿಸಿದ್ದು, ಸ್ವಚ್ಛಂದ ಛಂದದಲ್ಲಿ ಸ್ವಾರಸ್ಯಪೂರ್ಣವಾದ ಪ್ರಯೋಗವನ್ನು ಮಾಡಿದ್ದಾರೆ.

ಕಂಬಾರರ ಸಹಜ ಮಾತಿನ ಎಳೆತ, ಸೆಳೆತಗಳು ಅವರ ಗೀತೆಗಳಲ್ಲಿ ಗೇಯವಾಗಿ ಸುಳಿದು ಬಂದಿದ್ದು ಜಾನಪದ ಲಯಗಳಿಗೆ ಅವರು ಕೊಟ್ಟ ಸೊಗಸಾದ ತಿರುವುಗಳು 'ಚಕೋರಿ'ಯ ವೈಶಿಷ್ಟ್ಯಕ್ಕೆ ದಾರಿಯಾಗಿದ್ದು, ಕಂಬಾರರು ಮಾತ್ರಾ ಛಂದೋಬಂಧಗಳ ಜೊತೆ ಜೊತೆಗೆ ಜಾನಪದ ಗತಿ ಗತ್ತುಗಳನ್ನು 'ಚಕೋರಿ'ಯಲ್ಲಿ ತಮ್ಮದೇ ಆದ ರೀತಿಯಲ್ಲಿ ಬಳಸಿದ್ದಾರೆ.

'ಚಕೋರಿ'ಯಲ್ಲಿ ಸಂಗೀತ ಒಂದು ಪ್ರಮುಖ ಪಾತ್ರವಾಗಿ ಕಾರ್ಯನಿರ್ವಹಿಸಿದ್ದು, 'ಚಕೋರಿ'ಯಲ್ಲಿ ಅದು ಬದುಕಿಗೆ ಜೀವಸ್ವರವಾಗಿದೆ. ಸಂಗೀತದ ಸಾಧನೆ–ನಿರೂಪಣೆಗಳು, ಅದಕ್ಕೆ ಸಂಬಂಧಿಸಿದ ಶಾಪ–ಪವಾಡಗಳು, ಅದು ಸೃಷ್ಟಿಸುವ ರಮ್ಯ ಸಂದರ್ಭಗಳು ಕಾವ್ಯದ ತುಂಬ ವ್ಯಾಪಿಸಿವೆ.

'ಚಕೋರಿ'ಯಲ್ಲಿ ಸಂಭಾಷಣೆಗೆ ಹೆಚ್ಚಿನ ಮಹತ್ವವಿದ್ದು ಇಡೀ ಕಾವ್ಯ ಸಂವಾದದ ಧಾಟಿಯನ್ನು ಪಡೆದುಕೊಳ್ಳುತ್ತದೆ. ಸಂವಾದ ಧಾಟಿಯೇ 'ಚಕೋರಿ' ಕಾವ್ಯದ ಮುಖ್ಯ ನೆಲೆ. ನಿರೂಪಣೆಯ ಸಂಭ್ರಮದಲ್ಲಿ ಮೈಮರೆತು ಸಾಗುವ 'ಚಕೋರಿ'ಯ ಕತೆಯಲ್ಲಿ ಅಲ್ಲಲ್ಲಿ ಸೂಕ್ಷ್ಮ ಸಂವೇದನೆಗಳು, ಪ್ರತಿಭೆಯ ಕಿಡಿಗಳು ಹದವರಿತು ಬೆರೆತುಕೊಂಡಿವೆ. ಸಂಭಾಷಣೆ ಹೆಚ್ಚು ನೈಜವಾಗಿ ಇರುತ್ತದೆಯಲ್ಲದೆ ಅಲ್ಲಿಯ ವಾಕ್ಯಗಳು ಚಿಕ್ಕಚಿಕ್ಕವಾಗಿದ್ದು ತುಂಬ ಸರಳವಾಗಿರುತ್ತವೆ. ಉದಾಹರಣೆಗೆ : 'ಚಕೋರಿ' ಚಂದ್ರಮುತ್ತನ ಮೇಲೆ ಪ್ರೇಮ ಯಾಚಿಸಿದಾಗ ಅವರಲ್ಲಿ ನಡೆಯುವ ಸಂವಾದವನ್ನು ನೋಡುವುದಾದರೆ,

ISBN – 978-93-5526-247-9

ಚಂದ್ರಮುತ್ತ – ನೀನ್ಯಾಕೆ ನುಡಿಸಿ ತೋರಿಸುವುದಿಲ್ಲ ದೇವೀ?
ಚಕೋರಿ – ಗುರುವಲ್ಲ, ನಿನ್ನ ಇಚ್ಛಾದೀನ.............
ಚಂದ್ರಮುತ್ತ – ಬಹಿರೂಪದಲ್ಲಿ ನನ್ನೆದುರು ಕುಂತಿರುವಿಯಲ್ಲ ದೇವಿ?
ಚಕೋರಿ – ನಿನ್ನ ಕಾಮನೆಯಿಂದಾಗಿ ಸ್ಥೂಲರೂಪದಲ್ಲಿ ಚಕೋರಿ ಎಂಬ ಯಕ್ಷಿ........ (ಚಕೋರಿ, ಪು.ಸಂ.95)

ಇಂತಹ ಆತ್ಮೀಯವಾದ ಲವಲವಿಕೆಯಿಂದ ಕೂಡಿದ ಸಂಭಾಷಣೆಗಳು ಕಾವ್ಯದ ಉದ್ದಕ್ಕೂ ಕಂಡುಬರುತ್ತವೆ. ಈ ಸಂಭಾಷಣೆಯಲ್ಲಿ ಪಾತ್ರಧಾರಿಗಳ ಮನೋವೃತ್ತಿಗಳು ವ್ಯಕ್ತವಾಗುತ್ತವೆ. ಅಲ್ಲಿ ಕ್ಲಿಷ್ಟಪದಗಳಿಲ್ಲ. ಅರ್ಥಮಾಡಿಕೊಳ್ಳಲಿಕ್ಕೆ ಯಾವ ತೊಡಕೂ ಇಲ್ಲ.

'ಚಕೋರಿ'ಯಲ್ಲಿ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿರುವ ಮತ್ತು ದೈನಂದಿನ ಬದುಕಿನಲ್ಲಿ ಬಳಕೆಯಾಗುವ ನುಡಿಗಟ್ಟುಗಳು ಕಾವ್ಯದಲ್ಲಿ ಸಹಜವಾಗಿ ಬಳಕೆಯಾಗಿವೆ. ವಾರಿನೋಟ, ಸತ್ತುಳ್ಳ, ಕೆಟ್ಟಗಣ್ಣು, ಉರಿಮಾತು, ಸದ್ದುಳ್ಳ, ಬೆಳಂಬೆಳಗಾಗಿ, ಉಸಿವುಸಿರು, ಕಿಡಿಗಣ್ಣು ಮುಂತಾದ ನುಡಿಗಟ್ಟುಗಳು ಲೀಲಾಜಾಲವಾಗಿ ಬಳಕೆಯಾಗಿ ವಿಶೇಷಾರ್ಥಗಳನ್ನು ಕೊಡುತ್ತವೆ. ಗ್ರಾಮೀಣ ಪರಸರದ ಜನರ ರೀತಿ–ನೀತಿಗಳನ್ನು ಬದುಕಿನಲ್ಲಿ ಅನುಭವಿಸುವ ಭಾವನೆಗಳನ್ನು ನುಡಿಗಟ್ಟುಗಳು ಚೆನ್ನಾಗಿ ಚಿತ್ರಿಸುತ್ತವೆ ಮತ್ತು ಕಾವ್ಯಕ್ಕೆ ಮೊನಚನ್ನು ತಂದುಕೊಟ್ಟಿವೆ. ಒಂದು ಪ್ರದೇಶದ ಸಾಂಸ್ಕೃತಿಕ ಅಂತರ್‌ಪ್ರಕ್ರಿಯೆಯನ್ನು ನುಡಿಗಟ್ಟುಗಳಲ್ಲಿ ಕಾಣಬಹುದಾಗಿದೆ. ನುಡಿಗಟ್ಟುಗಳ ಹಿಂದೆ ಜೀವನವನ್ನು ಕಂಡುಂಡ ಜನಪದ ಮನಸ್ಸಿನ ತಾತ್ವಿಕ ಚಿಂತನೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಇಂತಹ ವಿಶಿಷ್ಟ ಪದ ಪ್ರಯೋಗಗಳಲ್ಲಿ ಜಾನಪದ ಭಾಷೆಯ ಸತ್ವ, ಸೊಗಡು ಎದ್ದು ಕಾಣುತ್ತದೆ.

ಕವಿ ತನ್ನ ಅನುಭವಗಳನ್ನು ಭಾಷೆಯ ಮೂಲಕ ಮೂಡಿಸುವಾಗ ಅವನ ಮೇಲೆ ಹೊರಗಿನವು ಎನ್ನಬಹುದಾದ, ಜನಾಂಗ, ಸಂಸ್ಕೃತಿ ಮತ್ತು ಕಾಲದ ಪ್ರಭಾವ ಸಹಜವಾಗಿಯೇ ಆಗುತ್ತದೆ. ಅಲ್ಲದೆ ಕವಿಯದೇ ಆದ ವ್ಯಕ್ತಿ ವೈಶಿಷ್ಟ್ಯತೆಯೂ ಸೇರಿಕೊಳ್ಳುತ್ತದೆ. ಒಬ್ಬ ಕವಿಯ ಶೈಲಿಯ ಮೇಲೆ ಈ ಹೊರಗಿನ ಅಂಶಗಳು ಮತ್ತು ವ್ಯಕ್ತಿವೈಶಿಷ್ಟ್ಯವೂ ಪ್ರಭಾವ ಬೀರುತ್ತವೆ.

ಈ ಹಿನ್ನಲೆಯಿಂದ ನೋಡಿದಾಗ ಕಂಬಾರರು 'ಚಕೋರಿ'ಯಲ್ಲಿ ಗ್ರಾಮೀಣ ಸಂಸ್ಕೃತಿಯನ್ನು ಯಥಾವತ್ತಾಗಿ ಚಿತ್ರಿಸಿದ್ದು ಚಂದ್ರಮುತ್ತ ಹೇಳದೆ ಕೇಳದೆ ದೇಶಾಂತರಕ್ಕೆ ಹೋದಾಗ ಕಂಗಾಲಾದ ತಾಯಿ ಲಕ್ಕಬ್ಬೆಯ ಪರಿತಾಪದ ಸನ್ನಿವೇಶವನ್ನು ನೋಡುವುದಾದರೆ, ವಂಶದ ಜ್ಯೋತಿ ಎಲ್ಲಿ ಹೋಯಿತೆಂದು ಪರಿತಪಿಸಿದಳು. ಅವನ ಬಾಲಲೀಲೆಯನ್ನು ನೆನಪಿಸಿಕೊಂಡು ದುಃಖಿಸಿದಳು. ಮಗ ಬೇಗನೆ ಮನೆ ಸೇರಲೆಂದು ಸುತ್ತು ದೇವರಿಗೆ, ಯಕ್ಷಿಗೆ ಹರಕೆ ಹೊರುತ್ತಾಳೆ. ಆ ವೇಳೆಯಲ್ಲಿ ಉರುಳುಸೇವೆ, ದೂಪ ಉರಿಸುವುದು, ಪಂಜಿನ ಸೇವೆ, ಸುತ್ತುದೇವರಿಗೆ ನಡೆದುಕೊಳ್ಳುವುದು ಮುಂತಾದ ವಿಧಿವತ್ತಾದ ಕಾರ್ಯಗಳನ್ನು ಮಾಡುತ್ತಾಳೆ. ಇಂತಹ ಸಾಂಸ್ಕೃತಿಕ ಪದಗಳು ಹಿಂದಿರುವ ಆಚರಣೆಗಳು ಕಾವ್ಯದ ತುಂಬ ಇದ್ದು, ಇವು ಗ್ರಾಮೀಣ ಪ್ರದೇಶದಲ್ಲಿ ಬೇರೆಬೇರೆ ಸಾಮಾಜಿಕ ಸಂದರ್ಭದಲ್ಲಿ ಜನರು ತಮ್ಮ ದೈನತ್ಯೆಯನ್ನು ಇಷ್ಟದೇವರಿಗೆ ಸಲ್ಲಿಸುವ, ಪ್ರಾರ್ಥಿಸುವ ರೀತಿಯಾಗಿದೆ.

ಲಕ್ಕಬ್ಬೆ ಯಕ್ಷಿಯ ಶಿಲಾಮೂರ್ತಿಗೆ ಎಣ್ಣೆಮಜಲು ಸ್ನಾನ ಮಾಡಲಿಕ್ಕೆ ಬಂದಾಗ ಆಗ ಬಳಕೆಯಾಗುವ ಪದ ಪ್ರಯೋಗಗಳು ವೈವಿಧ್ಯಮಯವಾಗಿವೆ. ತಿಳಿದುಪ್ಪ, ಬೆನ್ನುಜ್ಜು, ಸೀಗೆ, ನೀರು, ಮೈಯುಜ್ಜು ಮುಂತಾದವು ಒಂದು ಪ್ರದೇಶದ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ತೋರಿಸಿ ಕೊಡುತ್ತವೆ. ಅದೇ ರೀತಿ ಯಕ್ಷಿಗೆ ಎಣ್ಣೆಮಜಲು ಮಾಡಿಸಿದ ನಂತರ ಅವಳಿಗೆ ಹಾಕುವ ಆಭರಣಗಳು ಮೂಗುತಿ, ಡಾಬು, ಒಡ್ಯಾಣ, ಗುಳೆದಗುಡ್ಡದ ಕುಪ್ಪಸ, ವಾಲೆ, ಕಡುಗ, ಮುಂಗೈಬಳೆ, ಬೆಳ್ಳಿಮೀಸೆ, ಕೊರಳಪದಕ, ಇಳಕಲ್ಲ ಸೀರೆ ಇವುಗಳು ಬೆಳಗಾವಿ ಕಡೆಯ ಪ್ರದೇಶದ ಪ್ರಾದೇಶಿಕ ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತವೆ. ಹೀಗೆ ಒಂದು ಪ್ರದೇಶದ ಗ್ರಾಮೀಣ ಜೀವನವನ್ನು ಇಷ್ಟೊಂದು ಸಮಗ್ರವಾಗಿ 'ಚಕೋರಿ'ಯಲ್ಲಿ ಕಂಬಾರರು ಹಿಡಿದಿಟ್ಟಿದ್ದಾರೆ. ಒಟ್ಟಾರೆಯಾಗಿ 'ಚಕೋರಿ'ಯ ಭಾಷೆ ಮತ್ತು ಶೈಲಿ ಉಜ್ವಲ ಅಥವಾ ಆಡಂಬರದಿಂದ ಕೂಡಿರದೆ ಸಾಮಾನ್ಯವಾದ ಆಡುನುಡಿಯ ಸುಸ್ಪಂದನ, ಮಾರ್ದನಿಯಿಂದ ಕೂಡಿದೆ.

ಚಕೋರಿ ಮಹಾಕಾವ್ಯ ಪರಂಪರೆಗೆ ಸೇರುವ ಒಂದು ಹೊಸ ಮಾದರಿಯಾಗಿದ್ದು ಜಾನಪದ ಮತ್ತು ಶಿಷ್ಟ ಮಹಾಕಾವ್ಯಗಳ ಜೀವಭಾವಗಳನ್ನು ಅರಗಿಸಿಕೊಂಡಿದ್ದರೂ, ಅವುಗಳ ನಿರ್ದಿಷ್ಟ ಶೈಲಿಗೆ ಹೊರತಾದ ವಿಶಿಷ್ಟ ನಿರೂಪಣಾ ಕ್ರಮವನ್ನು ರೂಢಿಸಿಕೊಂಡಿದೆ. ಶಿಷ್ಟ ಮಹಾಕಾವ್ಯದ ಆಡಂಬರ–ವ್ಯಾಪ್ತಿ–ಸಂಯೋಜನೆಗಳನ್ನು ಕಂಬಾರರು ಧೈರ್ಯವಾಗಿ ಧಿಕ್ಕರಿಸಿ ಹೊಸ ಅಭಿವ್ಯಕ್ತಿಕ್ರಮವನ್ನು ಜಾರಿಗೆ ತಂದಿರುವ 'ಚಕೋರಿ' ಏಕಮೇವಾದ್ವಿತೀಯವಾದ ರಚನೆಯಾಗಿದೆ.

**ಪರಾಮರ್ಶನ :**


1. ಅಂಗಡಿ.ಎಸ್.ಎಸ್., ಚಂದ್ರಶೇಖರ ಕಂಬಾರರ ಕಾವ್ಯ ಭಾಷೆ, 2014, ಯಾಜಿ ಪ್ರಕಾಶನ, ಭೂಮಿ, ಎಂ.ಪಿ.ಪ್ರಕಾಶನಗರ, ಹೊಸಪೇಟೆ – 583201.
2. ಕಂಬಾರ ಚಂದ್ರಶೇಖರ, ಚಕೋರಿ, 2011, ಅಂಕಿತ ಪ್ರಕಾಶನ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು – 560004.
3. ಮಲಶೆಟ್ಟಿ ಬಸವರಾಜ, ಚಂದ್ರಶೇಖರ ಕಂಬಾರ, 2015, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560001.
4. ಮಿಣಜಗಿ ಬಿ ಸುರೇಂದ್ರನಾಥ, 'ಚಕೋರಿ' : ಪರಿಷ್ಕೃತ ಜಾನಪದ ಸಂವೇದನೆಯ ಸಂತೃಪ್ತ ಅಭಿವ್ಯಕ್ತಿ, ಬಸವರಾಜ ಕಲ್ಗುಡಿ, ಕಂಬಾರರ ಸಾಹಿತ್ಯದ ನೆಲೆ ಬೆಲೆ, 2012, ಅಂಕಿತ ಪ್ರಕಾಶನ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು – 560004.
5. ನಾಗಭೂಷಣಸ್ವಾಮಿ, ಚಕೋರಿಯ ಬಗ್ಗೆ ಕೆಲವು ಮಾತುಗಳು, ಬಸವರಾಜ ಕಲ್ಗುಡಿ, ಕಂಬಾರರ ಸಾಹಿತ್ಯದ ನೆಲೆ ಬೆಲೆ, 2012, ಅಂಕಿತ ಪ್ರಕಾಶನ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು – 560004.


***

## 24.ಜನಪದ ಸಾಹಿತ್ಯದಲ್ಲಿ – ದೇಸಿ ಸಂಸ್ಕೃತಿ

**ಪ್ರಕಾಶ ಬಿ.**

ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ದುಂಡುಚಿಯೇ ಬೀದಿವರೆಯೇ ಬೀರನ ಕತೆಯೇ ।

ಎಂದು ಮಧುರ ಕವಿಯು ನಮ್ಮ ಗ್ರಾಮೀಣ ಜನರಿಂದ ನಿರ್ಮಿತವಾದ ಜನಪದ ಸಾಹಿತ್ಯವನ್ನು ಬಹಿರಂಗವಾಗಿಯೇ ಕಡೆಗಣಿಸಿರುವುದು ಆಶ್ಚರ್ಯವನ್ನುಂಟುಮಾಡುತ್ತಿದೆ. ಬಹುಶಃ ಪಾಂಡಿತ್ಯದ ದಂತಗೋಪುರದ ಒಳಗೆ ಕುಳಿತಿರುವ ಮಧುರ ಕವಿಯು ನಮ್ಮ ಜನಪದ ಸಾಹಿತ್ಯ ಸವಿಯನ್ನು ದೇಶಿ ಸಂಸ್ಕೃತಿಯ ಅನುಭವವನ್ನು ಪಡೆದಿದ್ದರೆ ಕಿವಿಯಾರೆ ಕೇಳಿದ್ದರೆ ಇಂಥ ಮಾತುಗಳನ್ನು ಆಡುತ್ತಿರಲಿಲ್ಲವೇನೋ ಎಂದೆನಿಸುತ್ತದೆ. ಹುಳಿ ಹಿಂಡಿ ಹಾಲನ್ನು ಕೆಡಿಸಿದರೆ ಹಾಲನ್ನು ಕರೆದ ಸುರಭಿಗೆ ಕಲಂಕವುಂಟಾಗುತ್ತದೆಯೇ? ಕನ್ನಡ ನಾಡಿನ ವಿಸ್ತಾರ, ವೈವಿಧ್ಯತೆಯಂತೆ, ವೈವಿಧ್ಯಪೂರ್ಣವೂ, ವಿಪುಲವೂ ಆದ ಜನಪದ ಪರಂಪರೆ ನಮ್ಮ ನಾಡಿನಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ.

ಜನವಾಣಿ ಬೇರು– ಕವಿವಾಣಿ ಹೂವು, ಎಂಬ ಮಾತಿನಂತೆ ಜಗತ್ತಿನ ಎಲ್ಲ ಶಿಷ್ಟಪದ ಸಾಹಿತ್ಯಕ್ಕೂ ಮೂಲವಾದುದು ಜನಪದ ಸಾಹಿತ್ಯವೇ ಆಗಿದೆ. ಜನಪದ ಸಾಹಿತ್ಯದ ಇತಿಹಾಸದ ಬೇರುಗಳು ಎಷ್ಟು ಆಳವಾಗಿ ಬಾಚಿಕೊಂಡಿವೆಯೆಂದರೆ ಅವು ಕನ್ನಡ ಸಂಸ್ಕೃತಿಯಷ್ಟೇ ಪ್ರಾಚೀನವಾಗಿದೆ. ಇಲ್ಲಿನ ಜನಪದರು ಪದನರಿದು ನುಡಿಯುವ ಚತುರರು, ಕುರಿತೋದದೆಯು ಕಾವ್ಯ ಕಟ್ಟುವ ಪರಿಣತಮತಿಗಳೂ ಆಗಿದ್ದಾರೆ. ನಮ್ಮ ಗ್ರಾಮೀಣ ಜನರ ಬದುಕಿನಲ್ಲಿ ಜೀವಂತ ತೊರೆಯಾಗಿ ಹರಿದು ಬಂದಿರುವ ಈ ಜನಪದ ಸಾಹಿತ್ಯದ ಆಳ, ಅಗಲ, ಎತ್ತರ– ಬಿತ್ತರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಎಂಥವರೂ ಆಶ್ಚರ್ಯಚಕಿತರಾಗದೇ ಇರಲಾರರು. ನಮ್ಮ ಜನಪದರ ಜೀವನದ ಪ್ರತಿಯೊಂದು ಅಂಶವು ಇಲ್ಲಿ ಸಾಹಿತ್ಯವಾಗಿ ಹೊರಹೊಮ್ಮಿದೆ. ಅವರ ಜೀವನದ ಶ್ರೀಮಂತಿಕೆ ಮೌಲ್ಯಗಳು, ಸುಖ, ದುಃಖಗಳು, ಆಸೆ– ಆಕಾಂಕ್ಷೆಗಳು, ಅನಿಸಿಕೆ– ಆಲೋಚನೆಗಳು ನಮ್ಮ ಜಾನಪದರ ಮಾತಿನಲ್ಲಿಯೇ ಹೇಳುವುದಾದರೆ ಅಬ್ಬರಿಸಿ– ಗಂಗೆ ಹರಿದಂತೆ ವ್ಯಕ್ತಗೊಂಡಿದೆ.

ನಮ್ಮ ಗ್ರಾಮೀಣರ ಬದುಕಿನಲ್ಲಿ ಹಾಸುಹೊಕ್ಕಾದ ಜನಪದ ಸಾಹಿತ್ಯದಲ್ಲಿ ಕಥೆ, ಒಗಟು, ಓಡಪು, ಗಾದೆ, ಪಡೆನುಡಿಗಳು ಸಮ್ಮಿಳಿತಗೊಂಡಿವೆ. ನಮ್ಮ ಗ್ರಾಮೀಣ ಜನತೆಯಲ್ಲಿ ಜಾಣ್ಮೆಯ ಪ್ರತೀಕವಾಗಿ ಅಂಕುರಿಸಿವೆ. ಮದುವೆ, ಸೀಮಂತ, ನಿಶ್ಚಿತಾರ್ಥ ಸಂದರ್ಭಗಳಲ್ಲಿ ಈ ಒಡಪುಗಳು ಗೂಡಾರ್ಥದೊಂದಿಗೆ ರಸಾನಂದ ನೀಡುತ್ತವೆ. ನಮ್ಮ ದೇಶಿ ಜ್ಞಾನ ಮೊದಲಿನಿಂದಲೂ ಕೈವಶವಾಗಿದ್ದುದು ತಳ, ಕೆಳ ಹಾಗೂ ವ್ಯವಸಾಯದಲ್ಲಿ ತೊಡಗಿದ್ದ ಜನರಲ್ಲಿ ಕೆಲ ಸ್ಥಳಿಯರು ಅದರ ಒಡೆಯರಾಗಿದ್ದರು. ಬ್ರಿಟೀಷರು ಬಂದ ಮೇಲೆ ಈ ಸ್ಥಳೀಯ ಒಡೆಯರನ್ನು ಕಿತ್ತುಹಾಕಿ ಅಥವಾ ಮಧ್ಯವರ್ತಿಗಳನ್ನಾಗಿ ಮಾಡಿಕೊಂಡು ತಳನೆಲೆಯಲ್ಲಿ ಇದ್ದ ನಮ್ಮ ಜ್ಞಾನ– ತಂತ್ರಜ್ಞಾನ ಪದ್ಧತಿಗಳ ಕತ್ತು ಹಿಚುಕಿಬಿಟ್ಟರು. ಅವರ ತಂತ್ರಜ್ಞಾನದ ವಸ್ತುಗಳಿಗೆ ನಮ್ಮ ದೇಶವನ್ನು ಮಾರುಕಟ್ಟೆ ಮಾಡಿಕೊಳ್ಳಲು ಈ ಕೆಲಸ ಮಾಡಿದರು. ಬ್ರಿಟಿಷರು ಅವರು ಆಳುತ್ತಿದ್ದ ದೇಶಗಳಲ್ಲಿ ಈ ಕೆಲಸ ಮಾಡಿದರೆ ಈಗಿನ ಜಾಗತಿಕ ಪ್ರಭುಗಳು ಇದೇ ಕೆಲಸವನ್ನು ಜಗತ್ತಿನ ಪ್ರಗತಿಹೊಂದುತ್ತಿರುವ ಬಡದೇಶಗಳಲ್ಲಿ ಜಾಗತೀಕರಣ ಹೆಸರಿನಲ್ಲಿ ಮಾಡ ಹೊರಟಿದ್ದಾರೆ. ಈ ಹುನ್ನಾರವನ್ನು ತಿಳಿದ ಪ್ರಜ್ಞಾವಂತ ಜನ ಜಾಗತೀಕರಣವನ್ನು ವಿರೋಧಿಸುತ್ತಿದ್ದಾರೆ.

ಸಂಸ್ಕೃತಿಯೆನ್ನುವುದು ಜನರ ಒಟ್ಟೂ ಎಲ್ಲಾ ಅನುಭವದಿಂದ ಅದರ ಮನಸ್ಸಿನಲ್ಲಿ ಉಂಟಾಗಿರುವ ಪರಿಣಾಮ, ಇದು ಒಟ್ಟು ದೇಶದಲ್ಲೆಲ್ಲಾ ಒಂದೇ ಆಗಲಾರದು. ಭಾಗ ಭಾಗದಲ್ಲೂ ಬೇರೆ ಬೇರೆಯಾಗಿಯೇ ಇದ್ದೀತು. ಒಂದು ದೇಶದಲ್ಲಿರುವ ಕುಲಗಳ, ವ್ಯಕ್ತಿಗಳ ಗುಂಪುಗಳ ಪದ್ದತಿಗಳು, ಆಚಾರಗಳು, ನಂಬಿಕೆಗಳು ಜನತೆಯ ಸಂಸ್ಕೃತಿಯಾಗಿರುತ್ತವೆ. ಇವುಗಳು ಜನಪದ ಸಾಹಿತ್ಯದಲ್ಲಿ ಸೇರಿಕೊಂಡು ಹಾಡುಗಳಾಗಿ, ಲಾವಣಿಗಳಾಗಿ ಕಟ್ಟಲ್ಪಡುತ್ತವೆ.

ISBN – 978-93-5526-247-9

ಹಳ್ಳಿಯ ಹಾಡುಗಳು ಜನರ ಬಾಯಿಂದ ಬಾಯಿಗೆ ಹಾಡಲ್ಪಡುತ್ತವೆ. 'ಜ್ಞಾನವಿವೇಕಗಳು' ಈ ಜಾನಪದ ಸಾಹಿತ್ಯದ ಮುಖೇನ ನಾವು ಬಿಟ್ಟರೂ ನಮ್ಮ ಬಾಳಿನಲ್ಲಿ ಸಮರಸಗೊಂಡಿರುತ್ತವೆ. ಜನಪದ ಸಾಹಿತ್ಯ ಬರೆಯಬೇಕೆಂದು ಬರೆದ ಸಾಹಿತ್ಯವಲ್ಲ ಅದು ಬಾಳ್ವೆ, ಸಂಪೂರ್ಣವಾಗಿ ಅದರಿಂದ ಸ್ವಾಭಾವಿಕವಾಗಿ ಹೊಮ್ಮಿದ ಜೀವನಾನುಭವ ಸಾಹಿತ್ಯ, ವಚನಸಾಹಿತ್ಯ, ಷಟ್ಪದಿ, ತ್ರಿಪದಿ, ಸಾಂಗತ್ಯಗಳ ಸಾಹಿತ್ಯ,

ಕನ್ನಡ ಸಾಹಿತ್ಯದಲ್ಲಿ ಕಂಡುಬಂದರೂ ಜಾನಪದ ಸಾಹಿತ್ಯದ ಸರಳತೆಯನ್ನು, ಸಹಜತೆಯನ್ನು ಪ್ರಕಟಿಸಲು ಸಮರ್ಥವಾಗಲಿಲ್ಲ. ಜಾನಪದ ಸಾಹಿತ್ಯ ಅರಸನೊಡ್ಡೋಲಗವನ್ನಂತೂಕಾಣಲಿಲ್ಲ. ಗುಡಿಸಲು ಅದರ ಉಗಮವಾಯಿತು. ಸಾಮಾನ್ಯ ಜನಜೀವನದ ಚಿತ್ರವೇ ಕಡೆಯಾಯಿತು. ನಿಸರ್ಗವೇ ಪ್ರಸಂಗಗಳಲ್ಲಿ ಆಡಿ ತೋರಿಸಲು ರಂಗಭೂಮಿಯಾಯಿತು. ಜನಪದ ಸಾಹಿತ್ಯದಲ್ಲಿ ನಿತ್ಯದ ಅನುಭವಗಳು ಸಹಜವಾಗಿ ಮೂಡಿಬಂದಿವೆ. ದೇಶಿಯತೆ ಸಂಸ್ಕೃತಿಯ ಭಾಗವಾಗಿದೆ, ವೇಷಭೂಷಣಗಳಿಲ್ಲದ ಲಕ್ಷಣಗಳ ಕಟ್ಟನಿಟ್ಟುಗಳಿಲ್ಲದ ಸಾಹಿತ್ಯವಾಗಿದೆ, ದೇಶಿಯತೆಯ ರಕ್ಷಣೆಯಾದರೆ ಜಾನಪದ ಸಾಹಿತ್ಯ ಉಳಿದಂತೆ ಜೀರ್ಣೋದ್ಧಾರ ಕಾರ್ಯ ನಡೆದಂತೆ, ಪಾಶ್ಚಾತ್ಯ ಪ್ರಭಾವದ ಪರಿಣಾಮವಾಗಿ ನಮ್ಮತನ ಬರಿದಾಗಿ, ಧೈರ್ಯ, ಸ್ಥೈರ್ಯಗಳು ಹುಸಿಯಾಗಿ ನಮ್ಮ ಜನ ವಿದೇಶಿಯರ ಬಾಲಂಗೋಚಿಗಳಂತೆ ಬದುಕು ನೂಕುವ ಬದಲು ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ ರಕ್ಷಿಸಬೇಕಾದ ಅನಿವಾರ್ಯತೆ ಇದೆ. ಜನಪದ ಸಮಾಜ ಗ್ರಾಮೀಣ ಸಮಾಜ ನಗರದಿಂದ ಭಿನ್ನವಾದುದು. ಜನಪದ ಜೀವನ ನಿರಕ್ಷರಸ್ಥ ಸಮಾಜದ ಜೀವನ ಅಕ್ಷರಸ್ಥ ಆಧುನಿಕ ಸಮಾಜದಿಂದ ಬೇರೆಯಾದುದು. ಇದೇ ಕಾರಣದಿಂದ ಜನಪದ ಸಾಹಿತ್ಯ ಸಾಮಾನ್ಯ ಅರ್ಥದ ಸಾಹಿತ್ಯದಿಂದ ಉದ್ದೇಶದಲ್ಲಿ, ವ್ಯಾಪ್ತಿಯಲ್ಲಿ ಸ್ವರೂಪದಲ್ಲಿ ಪ್ರತ್ಯೇಕವಾದುದು.

ಜನಪದ ಜೀವನದ ಮೇಲೆ ನಗರೀಕರಣದ ಪ್ರಭಾವ ಬಿದ್ದಷ್ಟೂ ಆಧುನಿಕ ವಿದ್ಯಾಭ್ಯಾಸದ ಪರಿಚಯ ಹೆಚ್ಚಿದ್ದಷ್ಟೂ ಜಾನಪದ ಮೂಲ ಸೊಗಸು, ದೇಸಿ ಸೊಗಡು ಕಡಿಮೆಯಾಗುತ್ತಾ ಹೋಗುತ್ತದೆ. ಹಳ್ಳಿಗಳಲ್ಲಿ ನಡೆಯುವ ಹಬ್ಬಗಳಲ್ಲಿ ಹಾಡುವ ಪದಗಳಿದ್ದವು. ವರ್ಷಕ್ಕೊಮ್ಮೆ ತಪ್ಪದೆ ನಡೆಯುತ್ತಿದ್ದ ತಿಂಗಳ ಮಾವನ ಪೂಜೆ, ಕೋಲಾಟಗಳು, ಪರರ ಊರುಗಳಲ್ಲಿ ನಡೆಯುವ ಜಾತ್ರೆಗಳಿಗೆ ಎತ್ತಿನ ಗಾಡಿಯ ಮೇಲೆ ಸವಾರಿ ಗಾಡಿಪದಗಳು ಕಗ್ಗದ ರೂಪದ್ದಲ್ಲಿದ್ದವು. ಹಾಡುವವರು, ಕೇಳುವವರು ಜೊತೆಯಲ್ಲಿದ್ದು ನಿರಾಯಾಸವಾಗಿ ಪದಗಳನ್ನು ಕಟ್ಟುತ್ತಿದ್ದರು.
ಗ್ರಾಮೀಣ ಮಹಿಳೆಯರು ಬೀಸುವಾಗ ಹೇಳುತ್ತಿದ್ದ ಪದಗಳಲ್ಲಿ ದೇಸಿ ಸಂಸ್ಕೃತಿಯ ಚಹರೆಯನ್ನು ಕಾಣಬಹುದು.

ಬೀಸೋ ಕಲ್ಲಿನ ಮ್ಯಾಲೆ ಚೆಲ್ಯಾವೆ ನಮ್ಮ ಹಾಡು
ತುಂಬಿಕೊಳ ಬನ್ನಿ ಹೆಡಗೇಲಿ– ಉಳಿದವ್ವ
ತುಂಬಿರಿ ನಮ್ಮ ಕಣಜಕ್ಕೆ

ಎಂದು ಹಾಡಿದ್ದಾಳೆ ಓದು ಬರಹವರಿಯದ ಗ್ರಾಮೀಣ ಮಹಿಳೆ. ಬೀಸುವ ಕಲ್ಲು ಜನಪದ ಸಾಹಿತ್ಯದ ಲಾಂಛನವಾಗಿತ್ತು. ಜನಜೀವನದ ಪ್ರತಿಬಿಂಬ ಜಾನಪದ ಹಾಡುಗಳು ಗ್ರಾಮೀಣ ಬದುಕಿನ ಕರುಳು ಕಕ್ಕುಲಾತಿಯ ಸಂಸ್ಕಾರ ಸಂಸ್ಕೃತಿಯ ಅರ್ಥಾತ ನಡುವಳಿಕೆಯ ಅಭಿವ್ಯಕ್ತಿ ಜನಪದ ಹಾಡುಗಳ ಹೇಳಿಕೆಗಳ ಕಥಾನಕದ ಜೀವಾಳ, ಸರಸ, ವಿರಸ, ಸೊಗಸು, ಸಂಭ್ರಮಗಳು ಜಾತ್ರೆ ಉತ್ಸವ, ಹಬ್ಬ ಮೊದಲಾದ ಸಾಮೂಹಿಕ ಆಚರಣೆಯ ಸಂದರ್ಭಗಳಲ್ಲಿ ಹಾಡಾಗಿ ಹೃದಯದಿಂದ ಹೃದಯಕ್ಕೆ ತಟ್ಟಿ ಮುದಗೊಳಿಸುತ್ತವೆ. ನಮ್ಮ ರೈತಾಪಿ ಬಂಧುಗಳಿಗೆ ಧರ್ಮದ ಅಭಿಯಾನ ರಕ್ತಗತ ಹುಟ್ಟುಗುಣ. ದೇವ, ದೈವ ಮತ್ತು ದೆವ್ವಗಳಲ್ಲಿ ಗಟ್ಟಿಗೊಂಡ ಮೂಢನಂಬಿಕೆಯಿಂದ ಹೊರಬರಲಾಗದ ಜೀವನ ವಿಧಾನ. ರೈತನ ದೇವರು ಅನಂತಕೋಟಿ. ತನ್ನ ಆಗು ಹೋಗುಗಳೆಲ್ಲ ದೈವ ಸಂಕಲ್ಪಿತವೆಂಬ ಭಾವ ಬಂಧನ, ಕಂಟಕ ನಿವಾರಣೆಗಾಗಿ ಹಾಡುತ್ತ, ಸ್ತುತಿಸುತ್ತ ಪೂಜೆ ಪುರಸ್ಕಾರ ದಾನಧರ್ಮ ಕಾಣಿಕೆ ಸಲ್ಲಿಸಲು ಬದ್ಧನಾಗುತ್ತಾನೆ, ಸಿದ್ಧನಾಗುತ್ತಾನೆ. ಡೊಳ್ಳಿನ ಹಾಡುಗಳು, ಹಂತಿನ ಹಾಡುಗಳು, ಚಾಡಕಿ, ದೇವಾದಿ ದೇವತೆಗಳ ಕಥನ ಗೀತೆಗಳು ಈ ಸ್ತುತಿ ಸ್ತವನಗಳಲ್ಲಿ ಬರುತ್ತವೆ. ಬಾಳುವೆಯಲ್ಲಿ ಆಸರಿಕೆ ಬೇಸರಿಕೆ ಬಂದಾಗ ಜಾನಪದರು "ಕೂಸಕಂದಯ್ಯ ತೊಡಿಮ್ಯಾಗ ಆಡಿದರ ಬಂದ ಬ್ಯಾಸರ ಬಯಲಾಗಿ" ಎಂದು ಹೇಳಿ ತಮ್ಮನ್ನು ತಾವು ಸಂಬಾಳಿಸಿಕೊಳ್ಳುವ ರೀತಿ ಅದರ ತಾಳ್ಮೆಯ ಪ್ರತೀಕವಾಗಿದೆ.

ISBN – 978-93-5526-247-9

ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ
ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನ

ಬದುಕಿನ ಸುಖ-ದುಃಖಾದಿಗಳಿಗೆ ಭೂಮಿತಾಯಿ ಶಕ್ತಿಯಾಗಿದ್ದಾಳೆ. ಜೀವನ ಪ್ರೀತಿಯ ತುಡಿತ ದೇಸಿ ಸಂಸ್ಕೃತಿಯಲ್ಲಿ ಅಡಗಿದೆ. ಯಕ್ಷಗಾನಗಳು, ದೊಡ್ಡಾಟ, ಸಣ್ಣಾಟಗಳು, ಪಾರಿಜಾತಗಳು ದೇಸಿಸಂಸ್ಕೃತಿಯ ವಸ್ತು, ಬಾಷೆಗಳಾಗಿವೆ. ಜಾನಪದ ನಂಬಿಕೆ, ಆಚರಣೆಯ ರೂಪದಲ್ಲಿ ಮೈತಳೆದು ನಿಂತಿವೆ. ಸಂಸ್ಕರಣಕ್ಕೆ ಒಳವಡದ ಜಾನಪದವನ್ನು ಅನೇಕ ಪಂಡಿತರು ದೇಸಿ, ಗ್ರಾಮ್ಯ, ಪೈಶಾಚಿಕ ಕೊಳೆಯೆಂದರು. ಜಾನಪದ ಪೈಶಾಚಿಕವಲ್ಲ, ಕೊಳಯಲ್ಲ, ಜನಸಾಮಾನ್ಯರ ಅನುಭವಾಮೃತ ಪ್ರಪಂಚದ ಪ್ರತಿಯೊಂದು ಸಂಸ್ಕೃತಿಯಲ್ಲಿಯೂ, ನಾಗರಿಕತೆಯ ತೀವ್ರ ಪರಿಣಾಮಕ್ಕೊಳಗಾಗದ ತಮ್ಮದೇ ಆದ ಸಾಂಪ್ರದಾಯಿಕ ರೀತಿ, ಮಾನಸಿಕ ಮತ್ತು ಭೌತಿಕ ಜೀವನದ ಕೆಲವೊಂದು ಅಂಶಗಳನ್ನು ಉಳಿಸಿಕೊಂಡು ಬಂದಿರುತ್ತದೆ. ನಮ್ಮ ಕಲೆ, ಕಸುಬು ಕೃಷಿಗಳು ಜಾನಪದದಲ್ಲಿ ಮೇಳೈಸಿಕೊಂಡಿವೆ.

ಜನಪದರ ರಂಗೋಲಿ ತೊಗಲು ಗೊಂಬೆ ಆಟ, ಕೆಮ್ಮಣ್ಣಿನ ಕುಸುರಿಕಲೆ, ಹಳ್ಳಿಯ ಚಿಂದಿ ಬಟ್ಟೆಯ ಕಾದಿಗಳು, ಮಕ್ಕಳ ತಲೆಯ ಕುಂಚಿಕೆಗಳು, ಎಳೆ ಹೆಣಿಕೆಯ ಕಸೂತಿ, ಜನಪದ ಕಲೆಗಳಲ್ಲೂ ಜಾನಪದ ದೇಸಿ ಸಂಸ್ಕೃತಿಯನ್ನು ಕಾಣಬಹುದು. ಜಾನಪದ ನಿಂತ ನೀರಾಗದೆ ಚಲಿಸುವ ಜಂಗಮವಾಗಿ ಜಾನಪದದ ಮೂಲಕ ದೇಸಿ ಸಂಸ್ಕೃತಿಯನ್ನು ದೇಸಿ ಸಂಸ್ಕೃತಿಯ ಮೂಲಕ ಜಾನಪದ ಸಾಹಿತ್ಯವನ್ನು ಉಳಿಸುವ, ಬೆಳೆಸುವ ಹೊಣೆ ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ.

ಜನಪದ ಚಿತ್ರಕಲೆ ಹಚ್ಚೆಯಲ್ಲೂ ದೇಶಿ ಸಂಸ್ಕೃತಿ ಸೇರಿದೆ. ನಂಬಿಕೆ, ಆಚರಣೆ, ಆರಾಧನೆ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಜಾನಪದದ ಅನೇಕ ಕಲಾ ಪ್ರಕಾರಗಳಲ್ಲಿ ದೇಸಿ ಸಂಸ್ಕೃತಿಯನ್ನು ಕಾಣಬಹುದು  ಜನಪದ ಕುಣಿತಗಳೂ ಜನಪದ ಸಂಗೀತ ವಾದ್ಯಗಳಲ್ಲಿ ದೇಸಿಯತೆಯ ಸೊಗಡು ಗಮಗಮಿಸುತ್ತದೆ.

ಇಂದಿನ ಆಧುನಿಕ  ಕಾಲಘಟ್ಟದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ದಾಳಿಯಾಗಿದೆ. ನಮ್ಮ ಸಂಸ್ಕೃತಿಯ ಭಾಗವಾಗಿರುವ ಜಾನಪದ ಸೊಗಡಿನ ಕಲೆಗಳಾದ ಪೌರಾಣಿಕ ನಾಟಕ, ದೊಡ್ಡಾಟ, ಡೊಳ್ಳಿನಹಾಡು, ಭಜನೆಹಾಡು, ಕೀರ್ತನೆ, ಪುರಾಣ, ಸೊಬಾನೆಹಾಡುವ, ಬೀಸುವ ಹಾಡು, ಲಾಲಿ ಹಾಡು ಧಾನ್ಯ ಕುಟ್ಟುವ ಹಾಡು, ಲಾಲಿಹಾಡು, ತತ್ವಪದಗಳು, ಗೀಗೀಪದಗಳು, ಜಾನಪದಗಾತೆಗಳು, ಡೊಳ್ಳು ಕುಣಿತ, ವೀರಗಾಸೆ ಕುಣಿತ, ಒಡಪು, ಭರತನಾಟ್ಯ, ಯಕ್ಷಗಾನಗಳಲ್ಲಿ ನಮ್ಮ ಭವ್ಯ ಪರಂಪರರೆಯ ದೇಸಿ ಸಂಸ್ಕೃತಿ ಎರಕಗೊಂಡಿದೆ. ಭಾರತೀಯ ಸಂಸ್ಕೃತಿ ಎಂದರೆ ದೇಶಿ ಸಂಸ್ಕೃತಿ ಎಂದು ಹೇಳುವಷ್ಟು ಜಗತ್ತಿನ ಎಲ್ಲಾ ರಾಷ್ಟ್ರಗಳು ಭಾರತ ಸಂಸ್ಕೃತಿ ಸಂಪನ್ನ ರಾಷ್ಟ್ರ ಎಂದು ಹೇಳುವಲ್ಲಿ ಜನಪದದ ದೇಸಿ ಸಂಸ್ಕೃತಿಯ ಕೊಡುಗೆ ಅಪಾರ. ಜನಪದ ಮಹಾಕಾವ್ಯಗಳು ದೇಶಿ ಸಂಸ್ಕೃತಿಯ ಜೀವಂತ ಪ್ರತಿಮೆಗಳು.

ಭಾರತದ ಸಂಸ್ಕೃತಿಯನ್ನು ಅಭ್ಯಾಸ ಮಾಡುವವರು ಲಿಖಿತ ಅಭಿಜಾತ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡದೆ ಆ ಸಂಸ್ಕೃತಿಯಲ್ಲಿರುವ ಮೌಖಿಕ ಪರಂಪರೆಯ ಜಾನಪದವನ್ನು ಅಧ್ಯಯನ ಮಾಡಬೇಕು. ನಿರಕ್ಷರ ಕುಕ್ಷಿಗಳ ಜೀವನ ಅವರ ಸಂಸ್ಕೃತಿಯ ಸಾಂಕೇತಿಕ ಅಭಿವ್ಯಕ್ತಿಯಾಗಿದೆ. ಎಲ್ಲೆಲ್ಲಿ ಜನ ಇದ್ದಾರೋ ಅಲ್ಲಲ್ಲಿ ಜಾನಪದ ಹುಟ್ಟಿ ಬೆಳೆದಿದೆ. ಹಿರಿದಾದ ಬಹುರೂಪಿ ಪರಂಪರೆಯ ದೇಶಿ ಸಂಸ್ಕೃತಿ ಪ್ರಾಚೀನತೆಯಿಂದ ಇಂದಿನವರೆಗೂ ಬೆಳೆದು ಬಂದಿದೆ. ಅಭಿಜಾತ, ಜನಪದ ಮತ್ತು ಜನಪ್ರೀಯ ಎಂದು ಭಾವಿಸುವ ಭಾರತೀಯ ದೇಶಿ ಸಂಸ್ಕೃತಿಯಲ್ಲಿ ನಿರಂತರವೂ ಚಲನಶೀಲವೂ ಆದ ಜಾನಪದ ಸಾಹಿತ್ಯ ಬಾಯಿಂದ ಬಾಯಿಗೆ ಹರಿದು ಬಂದಿದೆ. ಯುವಜನತೆ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗದೆ ದೇಸಿ ಸಂಸ್ಕೃತಿ ಉಳಿಸಬೇಕಿದೆ. ದೇಸಿ ಸಂಸ್ಕೃತಿ ಉಳಿದರೆ ಭಾರತೀಯ ಸಂಸ್ಕೃತಿ ಉಳಿದೀತು.

ISBN – 978-93-5526-247-9

ಪರಾಮರ್ಶನ ಗ್ರಂಥಗಳು:–

1) ಜಾನಪದ ಗ್ರಹಿಕೆ ಪರಿಕಲ್ಪನೆ – ಪ್ರೊ. ಶಿ. ರಾಮಚಂದ್ರೇಗೌಡ–2004 – ಪ್ರಕಾಶಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ – ಬೆಂಗಳೂರು

2) ಕನ್ನಡ ವಿಷಯ ವಿಶ್ವಕೋಶ ಜಾನಪದ – ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ– 2006

3) ಭಾರತೀಯ ಜನಪದ ಕತೆಗಳು – ಎ. ಕೆ. ರಾಮಾನುಜನ ಅನುವಾದ – ಮಹಾಬಲೇಶ್ವರ ರಾವ್ – ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ – ನವದೆಹಲಿ – 2000

***

ISBN – 978-93-5526-247-9

# 25.ಜನಪದ ಮಹಾಕಾವ್ಯಗಳ ವೃತ್ತಿಗಾಯಕರು ಒಂದು ವಿಶ್ಲೇಷಣೆ

**ಪ್ರೊ. ಪುಷ್ಪ.ಎಂ.**

ಕರ್ನಾಟಕದ ಜಾನಪದ ಅಧ್ಯಯನವನ್ನು ಭಾಷಾ ದೃಷ್ಟಿಯಿಂದ, ಸಾಂಸ್ಕೃತಿಕ ದೃಷ್ಟಿಯಿಂದ ಭೌಗೋಳಿಕ ಹಿನ್ನಲೆಯಿಂದ ಈ ವಿಭಜನೆಯನ್ನು ಮಾಡಿಕೊಂಡರೂ ಜಾನಪದ ವಿಶ್ವ ವ್ಯಾಪಕ ಗುಣದಿಂದ ಕೂಡಿದುದ್ದು ಭಾಷೆಯ ಗಡಿ, ಭೌಗೋಳಿಕ ಗಡಿಗಳು ಅದನ್ನು ಒಂದು ಚೌಕಟ್ಟಿಗೆ ತರಲು ವಿಫಲವಾಗುತ್ತದೆ. ಜಾನಪದ ಆಶಯಗಳು ಒಂದು ನೆಲೆಯಿಂದ ಮತ್ತೊಂದು ನೆಲೆಗೆ ನಾನಾ ಕಾರಣಗಳಿಂದ ಪ್ರಸರಣಗೊಳ್ಳುತ್ತದೆ. **ಆಂಡ್ರೂಲಾಂಗ್** ಮುಂತಾದ ವಿದ್ವಾಂಸರು ಮಂಡಿಸಿದ ಬಹುಮೂಲ ಸಿದ್ಧಾಂತದಂತೆ ಎಲ್ಲಾ ರಾಷ್ಟ್ರಗಳಲ್ಲಿನ ಜನಾಂಗಗಳಲ್ಲೂ ಆದಿಕಾಲದ ಬದುಕಿನ ರೀತಿ ನೀತಿಗಳನ್ನು ಪ್ರತಿಬಿಂಬಿಸುತ್ತ ಅಲ್ಲಲ್ಲಿಗೆ ಸಂಬಂಧಿಸಿದ ಜಾನಪದ ಇದ್ದೇ ಇರುತ್ತದೆ ಎಂದ ಅಂಶ ಕೆಲಮಟ್ಟಿಗೆ ಸತ್ಯವಾದರೂ ಬಹುಮಟ್ಟಿನ ಜಾನಪದ ಕಾಲದೇಶಗಳ ಅನಂತಯಾತ್ರೆಯಲ್ಲಿ ವಿಶ್ವದ ಮೂಲೆ ಮೂಲೆಗಳಿಂದ ಪ್ರಸರಣಗೊಳ್ಳಲು ವೃತ್ತಿಗಾಯಕರು ಪ್ರಭಾವ ಅತ್ಯುತ್ತಮವಾದ ಕೊಡುಗೆಯನ್ನು ನೀಡಿರುವುದನ್ನು ಗಮನಿಸಬಹುದು.

## ಗುರಿ ಮತ್ತು ಉದ್ದೇಶ : (Aims and Objectives)

- ಹಳೆಯ ಮತ್ತು ಸ್ವಾತ್ರಂತ್ಯೋತ್ತರ ಕಾಲಘಟ್ಟದಲ್ಲಿನ ವೃತ್ತಿ ಗಾಯಕರನ್ನು ಶೋಧಿಸುವುದು.
- ದಕ್ಷಿಣ ಕರ್ನಾಟಕದ ವೃತ್ತಿ ಗಾಯಕರ ದೊಡ್ಡ ಪರಂಪರೆಯನ್ನು ಗುರುತಿಸಿ ವಿಶ್ಲೇಷಿಸುವುದು.

## ಸಂಶೋಧನಾ ವೈದಾನಿಕತೆ : (Research Methodology)

ಜನಪದ ಮಹಾಕಾವ್ಯಗಳ ವೃತ್ತಿ ಗಾಯಕರ ಹಿನ್ನಲೆಯೊಂದಿಗೆ ದಕ್ಷಿಣ ಕರ್ನಾಟಕದ ವೃತ್ತಿಗಾಯಕರು ವೈವಿಧ್ಯಮಯವಾದ ವರ್ಗೀಕರಣವನ್ನು ವಿಶ್ಲೇಷಿಸುವುದರಿಂದ **"ವಿಶ್ಲೇಷಣಾತ್ಮಕ ಸಂಶೋಧನಾ ವೈಧಾನಿಕತೆ"** ಯನ್ನು ಅಳವಡಿಸಿಕೊಂಡು ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

## ವಿಷಯ ವಿಶ್ಲೇಷಣೆ : (Content Analysis)

ಕನ್ನಡ ನಾಡಿನ ಕಥೋಪಜೀವಿಗಳ ಪ್ರಥಮ ವಿವರಗಳು ಕಳೆದ ಶತಮಾನದ ಮಧ್ಯಭಾಗದಲ್ಲಿಯೇ ಲಭ್ಯವಾಗುತ್ತದೆ. 1871ರ ವೇಳೆಗೆ ಪ್ರಕಟವಾದ ಗೋವರ್ ಅವರ **"ದಕ್ಷಿಣ ಭಾರತದ ಜನಪದ ಗೀತೆಗಳು"** (The folksongs of Southern India) ಗ್ರಂಥದಲ್ಲಿ ಕನ್ನಡ ವೃತ್ತಿಗಾಯಕರ ಒಂದು ಪ್ರಮುಖ ವರ್ಗವನ್ನು ಪರಿಚಯ ಮಾಡಿಕೊಡಲಾಗಿದೆ. **'ದಾಸ'** ಎಂಬ ಹೆಸರಿನಲ್ಲಿ ಅವರು ಗುರುತಿಸಿರುವ ಗಾಯಕ ಭಿಕ್ಷಾಟನೆಯನ್ನು ವೃತ್ತಿಯಾಗಿ ಹೊಂದಿದವನು ಹಾಡುವುದನ್ನು ಬಿಟ್ಟು ಇನ್ನು ಯಾವ ಉದ್ಯೋಗವಿಲ್ಲ. ಈ **"ದಾಸ"** ತಂತಿವಾದ್ಯವೊಂದನ್ನು ಹಿಡಿದು ರಾಮಾಯಣ ಭಾಗವತಗಳಿಗೆ ಸಂಬಂಧಪಟ್ಟ ಅನೇಕ ಐತಿಹಾಸಿಕ ಕತೆಗಳಿಗೆ ಸಂಬಂಧಪಟ್ಟವನ್ನು ವೀಣೆ ಎಂದು ಕರೆದಿದ್ದಾನೆ. ಕಳೆದ ಶತಮಾನದ ಉತ್ತರಾರ್ಧದಲ್ಲಿ **ಇಂಡಿಯನ್ ಆಂಟಿಕ್ವರಿಯಲ್ಲಿ** ಪ್ರಕಟವಾದ ಪೀಟರು ಸಂಗ್ರಹಿಸಿದ ಆರೇಳು ಲಾವಣಿಗಳನ್ನು ಹಾಡಿದ **"ದಾಸ"** ರೂ ಧಾರ್ಮಿಕ ಕಾವ್ಯಗಳ ಜೊತೆಗೆ ಇಂಥ ಐತಿಹಾಸಿಕ ಲಾವಣಿಗಳನ್ನು 2ನೇಯ ದಶಕದಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಪ್ರಕಟಿಸಿದ **'ಕನ್ನಡ ನಾಡಿನ ಲಾವಣಿ ಸಾಂಗತ್ಯ'** ಎಂಬ ಲೇಖನದಲ್ಲಿ ಅದಲ್ಲಿ **'ಕಿನ್ನರಿ ಜೋಗಿಗಳು',** ಟಿಪ್ಪೂ ಸುಲ್ತಾನನ ಲಾವಣಿಯಲ್ಲಿ ನೀಲಗಾರರು, ತರೀಕೆರೆ ಪಾಳೇಗಾರರ ಲಾವಣಿ ಭಾಗದಲ್ಲಿ ಚೌಡಿಕೆಯವರ ಪ್ರಸ್ತಾಪವನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಸಿಂಪಿ **ಲಿಂಗಣ್ಣ ಮತ್ತು ಪಿ.ದೂಲಾ** ಅವರು 1933ರಲ್ಲಿ ಪ್ರಕಟಿಸಿದ **"ಜೀವನ ಸಂಗೀತ"** ಕನ್ನಡ ಲಾವಣಿ ಸಂಗ್ರಹಗಳ ಸಾಲಿನಲ್ಲಿ ಒಂದು ಶ್ರೇಷ್ಠಕೃತಿ. ಈ ಕೃತಿಯಲ್ಲಿ ಲಾವಣಿಗಳನ್ನು ಹಾಡುವ ಲಾವಣಿಕಾರರ ಸಂಪ್ರದಾಯ, ವೃತ್ತಿಗಾಯಕರ ಶಾಸ್ತ್ರೀಯ ಪರಿಚಯ ಪ್ರಥಮ ಬಾರಿಗೆ ಆಗುತ್ತದೆ. ಹಳೆಯ ಲಾವಣಿಕಾರರಾದ ಕಂಬಣ್ಣ, **ಗೋಪಾಳ ದುರುದುಂಡಿ, ನಾನಾ ಸಾಹೇಬ, ಸಿದ್ದೂ ಶಿವಲಿಂಗ, ಸಂಗೂರಾಯಪ್ಪ** ಇವರ ಪರಿಚಯನ್ನು ಸಂಪಾದಕರು ಒದಗಿಸಿದ್ದಾರೆ.

ISBN – 978-93-5526-247-9 

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಶ್ರೀ ಮತಿಘಟ್ಟ ಕೃಷ್ಣಮೂರ್ತಿಗಳು ಪ್ರಕಟಿಸಿದ **"ಏಳು ಕೊಳ್ಳದ ಎಲ್ಲಮ್ಮ"** ವೃತ್ತಿಗಾಯಕ ಸಂಪ್ರದಾಯದ ದೃಷ್ಟಿಯಿಂದ ಗಮನಾರ್ಹ ಕೃತಿಯಾಗಿದೆ. ಡಾ. ಗದ್ದಿಗೀಮಠದವರು **'ದುಂದುಮೆ' 'ಕಂಬಿಯಪದ' 'ಹಂತಿಯ ಪದ'** ಮುಂತಾದ ಶೀರ್ಷಿಕೆಗಳಲ್ಲಿ ಕೆಲವು ಗೀತ ಸಂಪ್ರದಾಯಗಳ ಪರಿಚಯ ನೀಡಿದ್ದಾರೆ. ಮಿರ್ಜಿ ಅಣ್ಣಾರಾಯರು ಡಾ.ಎಲ್.ಆರ್. ಹೆಗಡೆ ಮುಂತಾದವರು ಲಾವಣಿ ಸಂಪ್ರದಾಯ **ಗೊಂದಲಿಗಳ ಮೇಳ, ಕುರುಬರ ಮೇಳಗಳ** ಬಗ್ಗೆ ಸಾಕಷ್ಟು ಸೂಚನೆ ನೀಡಿದ್ದಾರೆ. ಪಿರಿಯಾ ಪಟ್ಟಣದ ಕಾಳಗ" ದಲ್ಲಿ ತಂಬೂರಿ ನುಡಿಸಿಕೊಂಡು ಹಾಡಿದ ನೀಲಗಾರ ಸಂಪ್ರದಾಯದವರ ಬಗ್ಗೆ ಜನಪದ ಕಥನ ಗೀತೆಗಳು ಸಂಕಲನದಲ್ಲಿ ಕಾಣಬಹುದು.

ದಕ್ಷಿಣ ಕರ್ನಾಟಕದ ವೃತ್ತಿಗಾಯಕರ ಪರಂಪರೆಗಳ ಬಗ್ಗೆ ಪ್ರಸ್ತುತ ಲೇಖನದಿಂದ ಇತ್ತೀಚಿಗೆ ಸಂಶೋಧನೆ ನಡೆದು ಪ್ರಥಮ ಬಾರಿಗೆ ಶಾಸ್ತ್ರೀಯ ಅಧ್ಯಯನಕ್ಕೆ ಒಳಗಾಯಿತು. ಅಜ್ಞಾತವಾಗಿದ್ದ ವೃತ್ತಿಗಾಯಕರ ಸುವಿಸ್ತಾರ ಜನಪದ ಕಾವ್ಯಗಳ ಸಮಗ್ರ ಸಂಗ್ರಹ ನಡೆದು ಅವುಗಳ ಪರಿಚಯಾತ್ಮಕ ಲೇಖನಗಳು ಪ್ರಕಟವಾದವು **"ಹೊಸ ಹೊಸ ಕಥೋಪಜೀವಿಗಳೂ"** ಈ ಮೂಲಕ ಬೆಳಕಿಗೆ ಬಂದರು.

**ದಕ್ಷಿಣ ಕರ್ನಾಟಕದ ಕಥೋಪಜೀವಿಗಳು** ದೊಡ್ಡ ತಂಡಗಳನ್ನು ಪಡೆದ ಒಂದು ಸಮೃದ್ಧ ನೆಲೆ. ಅನೇಕ ಸಂಪ್ರದಾಯದ ಈ ವೃತ್ತಿಗಾಯಕರು ವೈವಿಧ್ಯಮಯ ವೇಷಭೂಷಣಗಳಿಂದಲೂ, ವಿಶಿಷ್ಟ ವಾದ್ಯಗಳಿಂದಲೂ ಶೋಭಿತರಾಗಿ ಜಾತ್ರೆ ಉತ್ಸವಗಳಲ್ಲಿ, ಹಬ್ಬ ಹರಿದಿನ ಪುಣ್ಯದಿನಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ವೃತ್ತಿ ಗಾಯಕರನ್ನು ಪ್ರಧಾನವಾಗಿ ಎರಡು ವರ್ಗಗಳಾಗಿ ವಿಂಗಡಿಸಿಕೊಳ್ಳಬಹುದು.

- **ಧಾರ್ಮಿಕ ಕಥೋಪಜೀವಿಗಳು**
- **ಲೌಕಿಕ ಕಥೋಪಜೀವಿಗಳು**

**'ಧಾರ್ಮಿಕ'** ಎಂಬ ಮಾತನ್ನು ಅವರು ಆರಾಧಿಸುವ ದೈವದ ಹಿನ್ನೆಲೆಯಲ್ಲಿ ಆರೋಪಿಸಲಾಗಿದೆ. ಕನ್ನಡ ನಾಡಿನ ಯಾವುದೇ ಪವಿತ್ರ ಕ್ಷೇತ್ರಕ್ಕೆ ಸಂಬಂಧಪಡಬಹುದಾದ ಕಲಾವಿದರನ್ನು ಹೀಗೆ ವರ್ಗೀಕರಿಸಿಕೊಳ್ಳಲಾಗಿದೆ. ತಮ್ಮ ಅಧಿದೈವದ ಮಹಿಮೆಗಳನ್ನು ಪ್ರಸಾರ ಮಾಡಿ ಜನತೆಯಲ್ಲಿ **ಧರ್ಮಶ್ರದ್ಧೆ, ಭಕ್ತಿನಿಷ್ಠೆಗಳನ್ನು ತ್ಯಾಗಶೀಲತೆಯನ್ನು** ಕಾಪಾಡಿಕೊಂಡು ಬರುವುದು ಇವರ ಉದ್ದೇಶ. ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಶ್ರೀಮಠವೊಂದರಲ್ಲಿ ದೀಕ್ಷೆಯನ್ನು ಪಡೆದು ವಂಶಪಾರಂಪರ್ಯವಾಗಿ ತಮ್ಮ ಸ್ವಾಮಿಗೆ ನಡೆದುಕೊಳ್ಳುವುದಲ್ಲದೇ, ತಮ್ಮ ಆರಾಧ್ಯ ದೈವದ ಒಕ್ಕಲಿರುವ ಕಡೆಗಳಲ್ಲಿ ಅವರು ನಡೆಸುವ ಧಾಮಿಕ ಆಚರಣೆಗಳ ನೇತೃತ್ವವನ್ನು ವಹಿಸಿ ನಡೆಸಿಕೊಡುವ ಹೊಣೆಗಾರಿಕೆಯೂ ಇವರದು. ಆಯಾ ದೈವದ ಒಕ್ಕಲು ಹೆಚ್ಚಾಗಿರುವ ಕಡೆಗಳಲ್ಲಿ ಒಕ್ಕಲುಗಳನ್ನೋ ಊರುಗಳನ್ನೋ ಹಂಚಿಕೊಂಡು ಈ ಕಲಾವಿದರು ದೇವರ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ. ದೇವರ ಪ್ರತಿನಿಧಿಯಂತೆ, ಓರ್ವ ಪುಣ್ಯ ಪುರುಷನಂತೆ, ಗುರುವಿನಂತೆ – ಈ ಧಾರ್ಮಿಕ ಪ್ರತಿನಿದಿಗಳನ್ನು ಆಯಾ ಒಕ್ಕಲುಗಳು ಗೌರವಿಸುತ್ತಾರೆ. ಪೂಜಿಸುತ್ತಾರೆ.

ಮೂಡಲಗಿರಿಯಪ್ಪನ **'ದಾಸರು' ಚುಂಚನಗಿರಿಯಪ್ಪನ 'ಜೋಗಿಗಳು',** ಮಾತ್ರ ಹಾಡುಗಾರರ ಪರಂಪರೆಗೆ ಸೇರಿದವರಲ್ಲ. ತಮ್ಮ ಅಧಿದೈವದ ಲಾಂಛನಗಳನ್ನು ಧರಿಸಿ ಭಕ್ತರ ಮನೆಗಳಲ್ಲಿ ಭಿಕ್ಷೆ ಬೇಡಿ ಇವರು ಜೀವಿಸುತ್ತಾರೆ. ತಮ್ಮ ಮೂಲಕ್ಷೇತ್ರಕ್ಕೆ ವರ್ಷಕ್ಕಿಷ್ಟು ಕಾಣಿಕೆಯನ್ನು ಅರ್ಪಿಸಿದರೆ ಇವರ ಕೆಲಸ ಮುಗಿಯಿತು. **ದಾಸರು ಶಂಖ, ಜಾಗಟೆ, ಗರುಡಗಂಬ, ಭವನಾಶಿಗಳನ್ನೂ ಜೋಗಿಗಳು ಕೋಲು, ಸಿಂಗನಾದಗಳನ್ನೂ** ಧರಿಸುತ್ತಾರೆ. ಜೋಳಿಗೆ ಎಲ್ಲರಲ್ಲೂ ಇದ್ದದ್ದೇ.

ಇಂಥ ಕೆಲವು ವರ್ಗದ ದೇವರ ಮಕ್ಕಳನ್ನು ಬಿಟ್ಟರೆ, ದೇವರ ಲಾಂಛನಗಳನ್ನು ಧರಿಸಿ, ತಮ್ಮ ವಾದ್ಯವಿಶೇಷವನ್ನು ಹಿಡಿದು ಅಪೂರ್ವ ಕಥೆಗಳನ್ನು ಹಾಡಿನ ರೂಪದಲ್ಲಿ ಅಥವಾ ಗದ್ಯಪದ್ಯ ಮಿಶ್ರಿತ ಚಂಪೂ ಶೈಲಿನಯಲ್ಲಿ ನಿರೂಪಿಸುತ್ತ ಶ್ರೇಷ್ಠ ಗಾಯಕರ ಪರಂಪರೆಯನ್ನು ಸ್ಥಾಪಿಸಿರುವ ಅನೇಕ ಮಂದಿ ಕಲಾವಿದರ ವರ್ಗಗಳನ್ನು ಕಾಣಬಹುದು. ಕರ್ನಾಟಕದ ನಾನಾ ಕಡೆಗಳಲ್ಲಿ ಈ ಧಾರ್ಮಿಕ ವೃತ್ತಿಗಾಯಕರು ಕಂಡುಬರುತ್ತಾರೆ.

## ಧಾರ್ಮಿಕ ವೃತ್ತಿಗಾಯಕರು

| ಗಾಯಕರು | ಇತರ ಹೆಸರುಗಳು | ಕ್ಷೇತ್ರ | ಆರಾಧ್ಯದೈವ | ಬಳಸುವ ವಾದ್ಯ | ಧರಿಸುವ ಲಾಂಛನಗಳು | ಸಂಚರಿಸುವ ಪ್ರದೇಶ |
|---|---|---|---|---|---|---|
| 1. ದೇವರಗುಡ್ಡರು | ಕಂಸಾಳೆಯವರು | ಮಲೆಮಾದೇಶ್ವರ ಗಿರಿ ಮಾದಯ್ಯನ ಗುಡ್ಡರು | ಮಾದೇಶ್ವರರು | ಕಂಸಾಳೆ | ರುದ್ರಾಕ್ಷಿ | ಮೈಸೂರು, ಮಂಡ್ಯ ಬೆಂಗಳೂರು ಜಿಲ್ಲೆಗಳು |
| 2. ನೀಲಗಾರರು | ಮಂಟೇದವರು ಮಂಟೇಸ್ವಾಮಿಗಳು ಮಂಟೇದಯ್ಯಗಳು | ಬೊಪ್ಪೇಗೌಡನ ಪುರದ ಮಂಟೇಸ್ವಾಮಿಮಠ, ಕಪ್ಪಡಿ, ಚಿಕ್ಕಲ್ಲೂರು, ಮಳವಳ್ಳಿಗಳು | ಮಂಟೇಸ್ವಾಮಿ ರಾಚಪ್ಪಾಜಿ | ತಂಬೂರಿ | ಕೆಂಪುಪೇಟ, ಕರಿಯ ನಿಲುವಂಗಿ, ಕಚ್ಚೆಯ ಪಂಚೆ, ಜೋಳಿಗೆ | ಅದೇ |
| 3. ಚೌಡಿಕೆಯವರು | ಗೊಂದಲಿಗರು ಎಲ್ಲಮ್ಮನ ಗುಡ್ಡರು | ಸವದತ್ತಿ ಮತ್ತು ಬೇರೆ ಬೇರೆ ಪ್ರದೇಶದ ಉಪಕ್ಷೇತ್ರಗಳು | ಸವದತ್ತಿ ಎಲ್ಲಮ್ಮ, ಉಳಿದ ಕಡೆಯ ಎಲ್ಲಮ್ಮ ತಾಯಿ | ಚೌಡಿಕೆ | ಬಿಳಿಯ ಪೇಟ, ನಿಲುವಂಗಿ, ಕಚ್ಚೆಯ ಪಂಚೆ | ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಮೈಸೂರು |
| 4. ಗೊರವರು | ಗಡಬಡಯ್ಯ, ವಗ್ಗಯ್ಯ, ಮೈಲಾರಲಿಂಗನ ಗುಡ್ಡರು | ಹಿರಿಯ ಮೈಲಾರ, ಇತರ ಉಪಕ್ಷೇತ್ರಗಳು, ಮುಡುಕುತೊರೆ | ಮೈಲಾರಲಿಂಗ, ಮುಡುಕುತೊರೆ, ಮಲ್ಲಿಕಾರ್ಜುನ ಪಾರ್ವತಿ ಇತರ ಉಪಕ್ಷೇತ್ರಗಳ ದೈವಗಳು | ಢಮರುಗ ಕೊಳಲು | ಕರಡಿ ಕೂದಲಿನ ಟೊಪ್ಪಿಗೆ, ಕವಡೆ ಸರ, ಕಪ್ಪು ನಿಲುವಂಗಿ | ಬೆಂಗಳೂರು, ಚಿತ್ರದುರ್ಗ, ತುಮಕೂರು, ಕೋಲಾರ, ಮೈಸೂರು, ಹಾಸನ, ಮಂಡ್ಯ |
| 5. ಗಣಿಯವರು | ಜುಂಜಪ್ಪನ ಕಾಣಿಕೆಯವರು | ಹಾಗಲವಾಡಿ ಜುಂಜಪ್ಪನ ಹಟ್ಟಿ ಕಳವೇರಹಳ್ಳಿ, ಜುಂಜಪ್ಪನ ಕ್ಷೇತ್ರ | ಜುಂಜಪ್ಪ | ಗಣಿ (ಉದ್ದವಾದ ಕೊಳಲು) | ಜುಂಜಪ್ಪನ ಗಣಿ (ಉದ್ದವಾದ ಗಳುವಿಗೆ ಧರಿಸಿದ ತ್ರಿಶೂಲ, ಸರ್ಪ ಇತ್ಯಾದಿ) | ಚಿತ್ರದುರ್ಗ, ತುಮಕೂರು, ಮಂಡ್ಯ ಹಾಸನ |

ಸಾಮಾನ್ಯರ ಕಲ್ಪನೆಯಲ್ಲಿ ಎಲ್ಲ ದೇವರಿಗೂ ಸಮಾನವಾದ ಸ್ಥಾನವೇ ಇರುವುದರಿಂದ ಒಂದೊಂದು ದೈವವನ್ನು ಕುಲದೈವ. ಆರಾಧ್ಯದೈವವೆಂದು ಒಪ್ಪಿಕೊಂಡರೂ ಕಷ್ಟಬಂದಾಗ ಹತ್ತು ಹಲವು ದೈವಗಳ ಮರೆಹೋಗುವುದಕ್ಕೂ ಅವರು ಹಿಂದೆಗೆಯುವುದಿಲ್ಲ" ಹೀಗಾಗಿ ಎಲ್ಲ ದೈವಗಳ ಕತೆಗಳನ್ನೂ ಮೆಚ್ಚುವ, ಗೌರವಿಸುವ ಪರಿಪಾಠ ಜನರಲ್ಲಿ ಬಂದಿದೆ. ಮಂಟೇಸ್ವಾಮಿಯ ಒಕ್ಕಲು, ಮಾದೇಶ್ವರನ ಒಕ್ಕಲು ನೆರೆಯೊರೆಯಲ್ಲಿದ್ದರೂ ದೈವದ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಎಂದೂ ವಿರಸಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಹೀಗಾಗಿ ಈ ವೃತ್ತಿಗಾಯಕರೆಲ್ಲ ಬೇರೆ ಬೇರೆ ದೈವಗಳ ಹೆಸರಿನಲ್ಲಿ ನಡೆದುಕೊಂಡರೂ, ಉಳಿದ ಸಂದರ್ಭಗಳಲ್ಲಿ ಪರಸ್ಪರ ಪ್ರಭಾವಕ್ಕೆ ಒಳಗಾಗಿ ಒಂದೇ ಪ್ರದೇಶದ ಜನಪದ ಗಾಯಕರ ಸಾಹಿತ್ಯದಲ್ಲಿ ಸಾಕಷ್ಟು ಸಾಮ್ಯವನ್ನು ಕಾಣಲು ಸಾಧ್ಯವಾಗುತ್ತದೆ. ಇವರ ಕತೆಗಳನ್ನು ಅವರೂ ಅವರ ಕತೆಗಳನ್ನು ಇವರೂ ಕೆಲವು ಲೌಕಿಕ ಕತೆಗಳನ್ನು ಸಂಬಂಧಿಸಿದಂತೆ ಕಲಿಯುವುದನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಸಂಪ್ರದಾಯದ ಕತೆಗಾರರೂ ತಮ್ಮ ಧಾರ್ಮಿಕ ಕಥೆಯ ಜೊತೆಗೆ, ಅನ್ಯದೈವಗಳಿಗೆ ಸಂಬಂಧಿಸಿದ ಅನ್ಯವಸ್ತುಗಳಿಗೆ ಸಂಬಂಧಿಸಿದ ಅನೇಕ ಕತೆಗಳನ್ನು ಕಲಿಯುತ್ತಾರೆ. ನೀಲಗಾರರೂ, ದೇವರಗುಡ್ಡರೂ ತಮ್ಮ ತಮ್ಮ ಧಾರ್ಮಿಕ ಕಥೆಯ ಜೊತೆಗೆ ಉಳಿದ ಲೌಕಿಕ ಕಥೆಗಳನ್ನು ಇಬ್ಬರೂ ಅಭ್ಯಸಿಸುತ್ತಾರೆ.

ISBN – 978-93-5526-247-9

ಈ ಧಾರ್ಮಿಕ ಗಾಯಕರಲ್ಲಿ ತಮ್ಮ ಕುಲದೈವದ ಕತೆಯನ್ನು ನಿಷ್ಠೆಯಿಂದ ಕಾಪಾಡಿಕೊಂಡು ಬಂದಿರುವುದರಿಂದ ಜೊತೆಗೆ ಮೇಲೆ ಸೂಚಿಸುವಂತೆ ಕೆಲವು ಲೌಕಿಕ ಕಥೆಗಳನ್ನು ಜೀವನೋಪಾಯದ ದೃಷ್ಟಿಯಿಂದ ಕಲಿತಿರುವುದೂ ಕಾಣಬರುತ್ತದೆ.

## ಲೌಕಿಕ ಕಥೋಪಜೀವಿಗಳು :

ಯಾವ ಧರ್ಮದ, ದೈವದ ವ್ಯಾಪ್ತಿಗೂ ಒಳಪಡದೆ ಸ್ವತಂತ್ರವಾಗಿ ತಾವು ಬಯಸಿದ ಕತೆಗಳನ್ನು ಅಭ್ಯಸಿಸಿಕೊಂಡು ಬಂದ ಕಥೋಪಜೀವಿಗಳನ್ನು **'ಲೌಕಿಕ'** ವೃತ್ತಿಗಾಯಕರೆಂದು ಕರೆಯಬಹುದು. ಧಾರ್ಮಿಕ ಕತೆಗಾರರಿಗೂ ಇವರಿಗೂ ಇರುವ ಪ್ರಧಾನ ವ್ಯತ್ಯಾಸ ಕತೆಗಾರಿಕೆಯಲ್ಲದಿದ್ದರೂ ದೈವಸಂಬಂಧವಾದುದು.

ಲೌಕಿಕ ಕಥೋಪಜೀವಿಗಳಿಗೆ ಯಾವ ನಿರ್ಬಂಧವೂ ಇಲ್ಲ. ಅವರು ಯಾವ ಕಾಲದಲ್ಲಿ ಎಲ್ಲಿ ಬೇಕಾದರೂ ಸಂಚರಿಸಬಹುದು. ಆದರೆ ಅವರೂ ಪರಂಪರೆಯಿಂದ ಬಂದ ವಾದ್ಯಗಳನ್ನೇ ಹಿಡಿದು ಕಥೆಗಳನ್ನು ಮಾಡುತ್ತಾರೆ. ಮೇಳಗಳನ್ನು ನಡೆಸುತ್ತಾರೆ. ಉಡುಗೊರೆಗಳನ್ನು ಪಡೆದುಕೊಳ್ಳುತ್ತಾರೆ. ಹಬ್ಬ, ಹರಿದಿನ, ಪೂಜೆ, ಉತ್ಸವಗಳಲ್ಲಿ ಪುಣ್ಯಕಥೆಗಳನ್ನು ಮೇಳರೂಪದಲ್ಲಿ ನಡೆಸುವ ಅವಕಾಶ ಇವರಿಗೂ ಇರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಇವರ ಅನೇಕ ಪರಂಪರೆಗಳನ್ನು ಗುರುತಿಸಬಹುದಾಗಿದೆ.

ಹಾಡುಗಾರಿಕೆಯ **'ವೃತ್ತಿ'** ದೈವ, ಧರ್ಮ ಇವುಗಳಿಗೆ ಸಂಬಂಧಪಟ್ಟರೆ, ಬೇರೆ ಬೇರೆಯ ಮತದವರು ದೀಕ್ಷೆಯನ್ನು ಪಡೆದು ವಾದ್ಯವನ್ನು ಕೈಗೆತ್ತಿಗೊಳ್ಳಬಹುದು. **ದೇವರ ಗುಡ್ಡರು, ನೀಲಗಾರರು, ಗೊರವರು, ಚೌಡಿಕೆಯವರು** ಮುಂತಾದವರಲ್ಲಿ ಬೇರೆ ಬೇರೆಯ ಮತದವರನ್ನು ಕಾಣಬಹುದು. ಶಿಷ್ಟ ಧರ್ಮಗಳ ವ್ಯಾಪ್ತಿಗೆ ಒಳಪಡುವ ಧರ್ಮಿಯರನ್ನು ಉಳಿದು ನೈಸರ್ಗಿಕ ಧರ್ಮಗಳ (Natural Religion) ಭಕ್ತರು ಈ ವೃತ್ತಿಯನ್ನು ಹೆಚ್ಚಾಗಿ ಸ್ವೀಕರಿಸುವುದು ಕಂಡು ಬರುತ್ತದೆ. ಒಕ್ಕಲಿಗರು, ಕುರುಬರು, ಪರಿವಾರದವರು, ಹರಿಜನರು, ಉಪ್ಪಲಿಗರು ಮುಂತಾದ ಅನೇಕ ಜಾತಿಗಳಿಗೆ ಸೇರಿದ ಇಂಥ ಕಥೋಪಜೀವಿಗಳನ್ನು ಕಾಣಬಹುದು. ಇವರಲ್ಲಿ ಬಹುಮಂದಿ ಸಂಪೂರ್ಣವಾಗಿ ಹಾಡುಗಾರಿಕೆಯ ವೃತ್ತಿಯನ್ನೇ ಅವಲಂಬಿಸುವುದಿಲ್ಲ. ಉಪಕಸುಬುಗಳನ್ನು ಇಟ್ಟುಕೊಂಡು ಗೊತ್ತಾದ ದಿನಗಳಲ್ಲಿ ಮಾತ್ರ ವಾದ್ಯ, ಜೋಳಿಗೆ, ಲಾಂಛನಗಳೊಡನೆ ಬೀದಿಯ ಮೇಲೆ ಹೊರಡುತ್ತಾರೆ. ವರ್ಷದಲ್ಲಿ ಕೆಲವು ಕಾಲ ಸಾಮಾನ್ಯವಾಗಿ ಸುಗ್ಗಿಯ ದಿನಗಳಲ್ಲಿ ವಿಶೇಷವಾಗಿ **'ಸುಗ್ಗಿಯ ಕಣಗಳಲ್ಲಿ'** ಊರುಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಇವರಲ್ಲಿಯೂ ಕೆಲವರು 'ಅನುಕೂಲಸ್ಥ'ರಿದ್ದಾರೆ. ರೈತರಿದ್ದಾರೆ. ಬೇರೆ ಬೇರೆ ಕಸುಬಿನ ಜನರಿದ್ದಾರೆ. ಊರುಗಳಲ್ಲಿ ವಿಶೇಷವಾದ ಸಂದರ್ಭಗಳು ಬಂದಾಗ ತಮ್ಮ ಪರಿವಾರದೊಡನೆ ಹೋಗಿ ಕಥೆ ಮಾಡಿ ಅಥವಾ ಹಾಡಿ ತಮಗೆ ಬರಬೇಕಾದ ಸಂಭಾವನೆಯನ್ನು, ಉಡುಗೊರೆಗಳನ್ನು ಸ್ವೀಕರಿಸಿ ಮರುಳುತ್ತಾರೆ. ಇವರಾರೂ ಅಲೆಮಾರಿಗಳಲ್ಲ. ಹೆಚ್ಚು ದಿನ ಹೊರಗೆ ಉಳಿಯುವವರೂ ಅಲ್ಲ. ಒಂದೆರಡು ದಿನಗಳಲ್ಲಿ ಜೋಳಿಗೆಯನ್ನು ತುಂಬಿಕೊಂಡು ಮನೆಗೆ ಮರಳುತ್ತಾರೆ.

ಲೌಕಿಕ ಕಥೋಪಜೀವಿಗಳಲ್ಲಿ ಶಿಷ್ಟಮತಗಳ ಗಾಯಕರೂ ಕಂಡು ಬರುತ್ತಾರೆ. ಕರಪಾಲ ಮೇಳದ ಮುಖ್ಯ ವೃತ್ತಿಗಾಯಕರು ಅಭಿನಯ ಪೂರ್ವಕವಾಗಿ ಕಥೆಗಳನ್ನು ನಿರೂಪಿಸಿ, ಕೆಲಮೊಮ್ಮೆ ಕುಣಿದು, ಕೆಲವೊಮ್ಮೆ ಗದ್ಯಗಳಲ್ಲಿ ವಿವರಿಸಿ, ಹಾಡಿ, ತಾಳಮೇಳಗಳ ಸೊಗಸಿನಲ್ಲಿ ಒಂದು ನಾಟಕದ ಅನುಭವನವನ್ನೇ ಉಂಟು ಮಾಡುವುದು ಕಥೆ ಮಾಡುವುದರಿಂದ ಎಂದೇ ಆಗುತ್ತದೆ. ನಿರೂಪಕ ಒಬ್ಬ ಶರಣ. ಕರಪಾಲದ ಅಯ್ಯನೆಂದು ಅವನನ್ನು ಕರೆಯುತ್ತಾರೆ. ಉಳಿದವರು ಯಾವ ಮತದವರಾದರೂ ಆಗಬಹುದು. ಆದರೆ ಜೋಗಿಗಳು, ದೊಂಬಿದಾಸರು, ತೆಲುಗು, ಜಂಗಮರು – ಇಂಥ ಕೆಲವು ವರ್ಗಗಳಲ್ಲಿ ಒಂದೊಂದು ಜನಾಂಗವೇ ಪ್ರಧಾನವಾಗಿ ಹಾಡುಗಾರಿಕೆಯ ವೃತ್ತಿಯನ್ನು ಸ್ವೀಕರಿಸಿದ ಬಗೆಗಳನ್ನು ಕಾಣಬಹುದು. ಸಾಮಾನ್ಯವಾಗಿ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸಮಾಡುವ ಇವರು ಒಂದು ನೆಲೆಯಲ್ಲಿ ನಿಂತವರಂತೆ ಕಂಡರೂ ವರ್ಷದಲ್ಲಿ ಬಹುಪಾಲು ಹೊರಗೇ ಇರುತ್ತಾರೆ. ಹಾಗೆ ಹೊರಟಾಗ ಇವರು ಸಂಪೂರ್ಣವಾಗಿ ಹಾಡುವುದನ್ನೇ ಅವಲಂಬಿಸಿರುತ್ತಾರೆ. ತಮ್ಮ ಜೀವನೋಪಾಯಕ್ಕಾಗಿ ಜನಪದ ಕಾವ್ಯಗಳನ್ನು ಕಲಿತು ಇವರು ಹಾಡುವವರೇ ಹೊರತು, ಯಾವ ದೈವದ ಸಂಬಂಧವೂ ಇವರಿಗೆ ಇರುವುದಿಲ್ಲ. ಇವರ ಮನೆದೇವರು ಕುಲದೇವರುಗಳಿದ್ದರೂ ಆ ದೇವರಿಗೆ ಇವರ ಹಾಡಿನ ಕಾಣಿಕೆ ಏನೂ ಬೇಕಾಗುವುದಿಲ್ಲ. ಇವರ ಹಾಡನ್ನು ಕೇಳುವ, ಮೆಚ್ಚಿ ಉಡುಗೊರೆಗಳನ್ನು ನೀಡುವ ಜನತೆಯೇ ಇವರ ಅಧಿದೈವ. ವೃದ್ಧರನ್ನೂ, ಹೆಂಗಸರು ಮಕ್ಕಳನ್ನೂ ತಮ್ಮ ಹಟ್ಟಿಗಳಲ್ಲೇ ಬಿಟ್ಟು ಎಷ್ಟೋ ದಿನಗಳವರೆಗೆ ಸಂಚಾರವನ್ನು ಕೈಗೊಳ್ಳುವ ಇವರು ತಂಡ' ತಂಡಗಳಲ್ಲಿ ಹೋಗುತ್ತಾರೆ. ರಾತ್ರಿ ಗ್ರಾಮದ ಚಾವಡಿಯಲ್ಲಿ ಯಾವುದೋ ಹಾಳು ಮಂಟಪದಲ್ಲಿ, ಊರ ಹೊರಗಿನ ಗುಡಿಗಳಲ್ಲಿ ಒಟ್ಟಿಗೆ ತಂಗಿದ್ದು ಬೆಳಗಾದ ಮೇಲೆ ತಮ್ಮ ತಮ್ಮ ದಾರಿಯಲ್ಲಿ ಹೊರಡುತ್ತಾರೆ. ಜೋಳಿಗೆ ತುಂಬಿದಾಗ ಹತ್ತಿರದ ಅಂಗಡಿಗೆ ದವಸವನ್ನು ಮಾರಿ ಪುಡಿಗಾಸನ್ನು ಮಾಡಿಕೊಳ್ಳುತ್ತಾರೆ. ಹೀಗೆಯೇ ಮಲೆಸೀಮೆ, ಬಯಲುಸೀಮೆಗಳನ್ನು ಅಲೆದು, ಮಳೆಗಾಲ ಎಟುಕಿಸಿಕೊಳ್ಳುವುದರಲ್ಲಿ ತಮ್ಮ ಹಟ್ಟಿಗಳಿಗೆ ಮರಳುತ್ತಾರೆ. ಈ ಆರ್ಥದಲ್ಲಿ ಇವರನ್ನು ಅಲೆಮಾರಿ ಕಲಾವಿದರೆಂದು ಕರೆಯಬಹುದು.

## ಲೌಕಿಕ ವೃತ್ತಿಗಾಯಕರು

| ಕಲಾವಿದರು | ಬಳಸುವ ವಾದ್ಯ | ವೇಷಭೂಷಣ | ಪ್ರಮುಖ ಕಥೆಗಳು | ಭಾಗವಹಿಸುವ ಜನರ ಸಂಖ್ಯೆ | ಪ್ರದೇಶ | ಜಾತಿ |
|---|---|---|---|---|---|---|
| 1. ಕರಪಾಲದವರು | ಗುಮ್ಮಟೆ, ತಾಳ, ಮದ್ದಲೆ, ಕಾಲಿನ ಗೆಜ್ಜೆ | ಕಥೆಗಾರ, ಕಿರೀಟಾಕೃತಿಯ ತುರಾಯಿ, ಕಾವಿಯ ನಿಲುವಂಗಿ, ನಡುಪಟ್ಟಿ, ಕಚ್ಚೆಯ ಪಂಚೆ, ಉಳಿದಿಬ್ಬರು ಸವಾರರ ಪೇಟ, ನಿಲುವಂಗಿ ನಡುಪಟ್ಟಿ, ಕಚ್ಚೆಯ ಪಂಚೆ | ಕಾಡಸಿದ್ದಮ್ಮ, ನೀಲಕಂಠ ರೂಪವತಿ, ಬಸವಕುಮಾರ, ಲೋಹಿತಕುಮಾರ, ಶಿವಯೋಗಿ ಪರಯೋಗಿ, ಮಹಾಂದಾತ ಭೂಪತಿ ಇತ್ಯಾದಿ | ನೃತ್ಯ ನಿರೂಪಣೆ ; ಮೂರು ಮಂದಿ ; ಹಿಮ್ಮೇಳ : ಮೂರು ಮಂದಿ | ಚಿತ್ರದುರ್ಗ, ಶಿವಮೊಗ್ಗ, ಹಾಸನ, ತುಮಕೂರು, ಜಿಲ್ಲೆಗಳು | ಮುಖ್ಯ ನಿರೂಪಕ ವೀರಶೈವರು |
| 2. ದೊಂಬಿದಾಸರು | ಏಕತಾರಿ, ಚಿಟಕಿ | ಬಿಳಿಯಪೇಟ, ನಿಲುವಂಗಿ, ಕಚ್ಚೆಯ ಪಂಚೆ | ಗೌರಮ್ಮನ ವಿವಾಹ, ಗಂಗೆ–ಗೌರಿ ಜಗಳಮ ಯುಗದ ಬಾಲೆ, ಅಣ್ಣ ತಂಗಿ, ಮಾಗಡಿ ಕೆಂಪೇಗೌಡ, ಬಾಲನಾಗಮ್ಮ ಇತ್ಯಾದಿ | ಇಬ್ಬರು – ಮೂವರು ಮೇಳದಲ್ಲಿ ದಮ್ಮಡಿಯನ್ನೂ ಬಳಸುತ್ತಾರೆ | ಬಯಲು ಸೀಮೆಯ ಎಲ್ಲ ಪ್ರದೇಶಗಳಲ್ಲೂ ಇದ್ದಾರೆ. ವಿಶೇಷವಾಗಿ ತುಮಕೂರು, ಮಂಡ್ಯ ಬೆಂಗಳೂರು ಜಿಲ್ಲೆಗಳು | 'ದೊಂಬಿದಾಸ' ಎನ್ನುವುದೇ ಒಂದು ಜನಾಂಗ |
| 3. ತೆಲುಗು ಜಂಗಮರು | ಅದೇ | ಅದೇ | ಮಾಗಡಿ ಕೆಂಪೇಗೌಡ, ಬಾಲನಾಗಮ್ಮ, ಅಣ್ಣ ತಂಗಿ, ಗಂಗೇ ಗೌರಿ ಇತ್ಯಾದಿ | ಅದೇ | ತುಮಕೂರು ಜಿಲ್ಲೆ | ತೆಲುಗು ಜಂಗಮ ಜನಾಂಗ |

ಒಟ್ಟಿನಲ್ಲಿ ದಕ್ಷಿಣ ಕರ್ನಾಟಕದಲ್ಲಿಯೇ ಈವರೆಗೆ ಶೋಧಿತರಾಗಿರುವ ಅನೇಕ ಬಗೆಯ ಕಥೋಪಜೀವಿಗಳ ದೊಡ್ಡ ಪರಂಪರೆಯನ್ನು ನೋಡಿದರೆ ನಮ್ಮ ಜನಪದ ಸಾಹಿತ್ಯದ ಹಿರಿಮೆ ಅಶ್ಚರ್ಯವನ್ನು ತರುತ್ತದೆ.

## ತೀರ್ಮಾನಗಳು : (Findings)

- ಬಿಡಿ ಹಾಡುಗಳು ಅಥವಾ ಸಣ್ಣ ಸಣ್ಣ ಲಾವಣಿಗಳನ್ನು ಹೆಚ್ಚಾಗಿ ಅವಲಂಬಿಸಿದೆ. ಈ ವೃತ್ತಿ ಗಾಯಕರೆಲ್ಲ ಸವಿಸ್ತಾರ ಜನಪದ ಕಾವ್ಯಗಳನ್ನೇ ಕಂಠಪಾಠ ಮಾಡಿಕೊಂಡು ಪ್ರಸಾರ ಮಾಡುತ್ತಿದ್ದರು ಎಂಬುದನ್ನು ತೀರ್ಮಾನಿಸಲಾಗಿದೆ.
- ಒಂದು ಕಾಲಕ್ಕೆ ಗ್ರಾಮಾಂತರ ಜೀವನದ ಸಣ್ಣ ಸಣ್ಣ ಪಟ್ಟಣಗಳ ಕೆಲಮಟ್ಟಿಗೆ ನಗರಗಳ ಮನರಂಜನೆಯ ಮುಖ್ಯ ಸಾಧನ ಈ ವೃತ್ತಿಗಾಯಕರ ಮೇಳಗಳಲ್ಲಿ ಆಗಿದ್ದವು ಎಂದು ತೀರ್ಮಾನಿಸಲಾಗಿದೆ.

## ಅಧ್ಯಯನದಿಂದ ಸಮಾಜಕ್ಕಾಗುವ ಕೊಡುಗೆ (Contribution to the society)

ISBN – 978-93-5526-247-9

ವೃತ್ತಿಗಾಯಕರು ತಮ್ಮ ಅದಿದೈವದ ಮಹಿಮೆಗಳನ್ನು ಪ್ರಸಾರ ಮಾಡಿ ಜನತೆಯಲ್ಲಿ ಧರ್ಮ, ಶ್ರದ್ಧೆ, ಭಕ್ತಿ ನಿಷ್ಠೆಗಳನ್ನು ತ್ಯಾಗಶೀಲತೆಯ ಮನೋಭಾವನ್ನು ಕಾಪಾಡಿಕೊಂಡು ಬರುವುದರ ಜೊತೆಗೆ ಅನೇಕ ಪುಣ್ಯ ಪುರುಷರ, ದಿವ್ಯ ಜೀವಿಗಳ ಸಾಹಸಿಗಳ ತಬ್ಬಲಿಗಳ, ಅಸಹಾಯಕರ, ಕ್ರೂರಿಗಳ ಕರ್ಮಿಗಳ ಕತೆಗಳನ್ನು ಹಾಡುತ್ತಾ ನೀತಿ, ಧರ್ಮಗಳನ್ನು ಪ್ರಸಾರ ಮಾಡುವುದರ ಜೊತೆಗೆ ಕಂಠಸ್ಥ ಸಂಪ್ರದಾಯದ ಉನ್ನತ ಕಾವ್ಯ ಪರಂಪರೆಯೊಂದನ್ನು ಜನತೆಯ ಬಾಗಿಲಿಗೆ ತಂದು ರಸಾಸ್ವಾದನೆಯ ಸೊಗಸನ್ನು ಅವರ ಪಾಲಿಗೆ ದೊರಕಿಸಿಕೊಂಡು **ಅಂತರ್ ಸಾಂಸ್ಕೃತಿಕ ವಿನಿಮಯಕ್ಕೆ** ನಾಂದಿ ಹಾಡಿದ್ದಾರೆ.

## ಆಧಾರ ಗ್ರಂಥಗಳು (References)


1. **ಜೀ.ಶಂ. ಪರಮಶಿವಯ್ಯ** – ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು–18
2. **ಡಾ.ರಾಜಪ್ಪ ದಳವಾಯಿ** – ಕನ್ನಡ ಸಾಹಿತ್ಯ ಕೋಶ ಲಾವಣ್ಯ ಮುದ್ರಣ, ಬೆಂಗಳೂರು
3. **ಡಾ. ವೀರಣ್ಣ ದಂಡೆ** – ಜನಪದ ಸಾಹಿತ್ಯ ಸಂಪಾದನೆಗಳು
4. **ಡಾ. ರಾಗೌ** – ಜಾನಪದ ತತ್ವಾರ್ಥ ಪ್ರವೇಶ


***

# 26.ಜನಪದ ಮಹಾಕಾವ್ಯಗಳಲ್ಲಿ ವಾದ್ಯಗಳ ಪರಿಕಲ್ಪನೆ

ಡಾ. ಗುಡ್ಡಪ್ಪ ಜಿ.

"ಪಂಡಿತರಂ ವಿವಿಧ ಕಳಾ
ಪಂಡಿತರಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೆ ಬೀದಿವರೆಯ ಬೀರನ ಕತೆಯೇ"

- ಮಧುರ ಕವಿ

ಮನುಷ್ಯ ಮೂಲತಃ ಕಾಡಿನಲ್ಲಿ ಪ್ರಾಣಿಗಳ ಹಾಗೆ ವಾಸಿಸುತ್ತಿದ್ದ. 'ಮಂಗನಿಂದ ಮಾನವ' ಎನ್ನುವ ಮಾತಿನಂತೆ ಹಿಂದೆ ವಾನರ ಸ್ಥಿತಿಯಲ್ಲಿದ್ದ ನಂತರ ಮಂಗನಾಗಿ ಈಗ ಜನಪದ–ನಾಗರಿಕ ಕವಲುಗಳಾಗಿ ಬದಕುತ್ತಿದ್ದಾರೆ. ಅರಣ್ಯದಲ್ಲಿ ವಾಸಿಸುವಾಗ ನಡೆಯವ ಕ್ರಿಯೆಗಳನ್ನು ಗಮನಿಸಿ ದು:ಖವಾದಾಗ ದುಂಡಗೆ ಮಲಗಿಕೊಂಡಿರಬೇಕು, ಖುಷಿ ಆದಾಗ ಸ್ವಚ್ಛಂದವಾಗಿ ಕೂಗುತ್ತಾ, ಚೀರುತ್ತಾ ಓಡಾಡಿರಬೇಕು. ಪ್ರಾಣಿಗಳ, ಪಕ್ಷಿಗಳ ಕೀಟಗಳ ಧ್ವನಿ ಕೇಳಿ ಶಬ್ದ ಗಮನಿಸಿ ಅನುಕರಣೆಯ ಮೂಲಕ ಆಗುಮಾಡಿಕೊಂಡಿರಬೇಕು. ಬೀಳುವ ಮಳೆ, ಬೀಸುವ ಗಾಳಿ, ಗುಡುಗು–ಸಿಡಿಲು ಮಿಂಚು ರಾತ್ರಿ–ಹಗಲು ಬೆಳಂದಿಗಳು, ಹರಿಯುವ ಹಳ್ಳ ಜುಳುಜುಳು ನಾದ ಹರಿಯುವ ನೀರಿನ ತೊರೆ, ದುಮುಕುವ ಜಲಪಾತ, ಪ್ರಾಣಿಗಳ ಆರ್ತನಾದ, ಪಕ್ಷಿಗಳ ಕಲರವ, ಜೇನುಗಳ ಝೇಂಕಾರ, ಕೋಳಿಗಳ ಕೂಗು, ಹಾವುಗಳ ಬುಸುಗುಡುವಿಕೆ, ನವಿಲುಗಳ ನಾಟ್ಯ, ಕೋಗಿಲೆಯ ಮಧುರಕಂಠ, ಆನೆಯ ಘೀಳಿಡುವಿಕೆ, ಕುದುರೆ ಹೇಂಕರಿಸುವಿಕೆ, ಗಿಳಿಯ ಸೌಂದರ್ಯ, ಪಾರಿವಾಳದ ಧ್ವನಿ, ನಾಯಿಯ ಬೊಗಳುವಿಕೆ, ಬೆಕ್ಕಿನ ಹರಸುವಿಕೆ, ಗುಬ್ಬಿಗಳ ಚೀಂವ್ ಚೀಂವ್ ಕಾಗೆಯ ಕರ್ಕಷ ಧ್ವನಿ ಸಿಂಹದ ಘರ್ಜನೆ ಮುಂತಾದವುಗಳ ಧ್ವನಿಗಳನ್ನು ಪ್ರಯೋಗ ಹಾಗೂ ಅನುಕರಣೆ ಮಾಡಿ ವಾದ್ಯಗಳ ಪ್ರಕಾರಗಳನ್ನು ಹುಡುಕಿಕೊಂಡಿರಬೇಕು. ಭಾಷೆಯನ್ನು ಬಳಸುವುದಕ್ಕಿಂತ ಮುನ್ನ ಪ್ರಕೃತಿಯಲ್ಲಿ ನಡೆಯುವ ಘಟನೆಗಳನ್ನು ವೀಕ್ಷಿಸಿ ಅಲ್ಲಿ ಹೊರಡುವ ಧ್ವನಿ ಸಂಕೇತಗಳನ್ನು ಅನುಸರಿಸಿ ಜನಪದರು ವಾದ್ಯಗಳನ್ನು ಬಡಿದಾಗ ಅಥವಾ ಬಾರಿಸಿದಾಗ ಆಂಗಿಕವಾಗಿ ಅಭಿನಯ ಮಾಡಿರಬೇಕು. ಇದೆ ಮುಂದೆ ಕುಣಿತವಾಗಿ ಮಾರ್ಪಡಾಗಿರಬೇಕು. ನೃತ್ಯ ಗೀತಂ ತಥಾ ವಾದ್ಯಂ ತ್ರಯಂ ಸಂಗೀತ ಮುಚ್ಯತೆ ಕುಣಿತ, ಹಾಡುವಿಕೆ, ಭಾರಿಸುವಿಕೆ – ಈ ಮೂರು ಸೇರಿ ಸಂಗೀತವಾಯಿತೆಂದು ಶಾಸ್ತ್ರಕಾರರ ಅಭಿಪ್ರಾಯ ಈ ಸಂಗೀತವೇ ಜನಪದ ವಾದ್ಯಗಳ ಹುಟ್ಟಿಗೆ ಕಾರಣವಿರಬೇಕು.

ಧರ್ಮ ಹಾಗೂ ಮನರಂಜನೆಯ ನೆಲೆಯಲ್ಲಿಯೇ ಹುಟ್ಟಿದರೂ, ಭಯ, ಭಕ್ತಿಗಳೆರಡರ ಹಿನ್ನೆಲೆಯಲ್ಲಿ ಜನಪದ ವಾದ್ಯಗಳು ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬೆಳೆದಿವೆ. ಜನಪದ ವಾದ್ಯಗಳ ಕುಣಿತಗಳ ಹಾಡುವ ಪ್ರಕಾರಗಳ ಜೊತೆಗೆ ಸಂಗೀತ ಸೇರಿಕೊಂಡು ಜನಮಾನಸಕ್ಕೆ ಮುದನೀಡುವ ಕ್ರಿಯೆಯನ್ನು ಅಂದಿನಿಂದ ಇಂದಿನವರೆಗೆ ಹೇಗೆ ಚಾಲ್ತಿಯಲ್ಲಿವೆ? ಆಧುನಿಕ ವಾದ್ಯಗಳ ಉಗಮಕ್ಕೆ ಹೇಗೆ ಪ್ರೇರಣೆಯಾದವು? ಇಂದು ಅವುಗಳ ಮಹತ್ವವೇನು? ವಾದ್ಯಗಳಿಲ್ಲದೆ ಯಾವುದೇ ಕಾರ್ಯಕ್ರಮಗಳು ನಡೆಯವುದಿಲ್ಲ. ಈ ಎಲ್ಲಾ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ. ಜನಪದರ ಕಷ್ಟ–ಸುಖಗಳೆಲ್ಲವು ಪಟ್ಟಪಾಡೆಲ್ಲವು ಹುಟ್ಟು ಹಾಡಾಗಿವೆ ಎಂದು ಹಾಡಿದ್ದಾರೆ.

ಅನಕ್ಷರಸ್ಥರು ರಚಿಸಿದ ಸಾಹಿತ್ಯವನ್ನು ಲಘುವಾಗಿ ಪರಿಗಣಿಸಬಾರದೆಂದು ಕವಿಯ ನಿವೇದನೆಯಾಗಿದೆ. ಜನಪದ ಸಾಹಿತ್ಯದ ಎಲ್ಲಾ ಕಾಲಘಟ್ಟದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಸಾಹಿತ್ಯವೆಂದು ಅಂದು–ಇಂದು ಕೂಡ ಪ್ರಚಲಿತದಲ್ಲಿದೆ. ಮೌಖಿಕ ಪರಂಪರೆಯಲ್ಲಿ ಇರುವುದರಿಂದ ಅದರ ಅಸ್ತಿತ್ವವನ್ನು ಹುಡುಕುವ ಸಂಶೋಧನೆಗಳು ಸಾಕಷ್ಟು ನಡೆಯಬೇಕಾಗಿದೆ. ಸಾಕ್ಷಿ–ಪುರಾವೆಗಳಿಲ್ಲದ್ದರಿಂದ ಆರಂಭ ಹಾಗೂ ಅಂತ್ಯವಿಲ್ಲ. ಯಾರಿಂದ ಎಲ್ಲಿಯವರೆಗೆ ಎಂದು ಅಳತೆಗೋಲಿಲ್ಲದ ಕಾರಣ ಸಾಹಿತ್ಯ ಸೊರಗಿದಂತೆ ಕಾಣುತ್ತದೆ.

ISBN – 978-93-5526-247-9

"ಪದವನರಿದು ನುಡಿಯಲುಂ ನುಡಿ
ದುದನರಿಯಲು ಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್"
(ಡಾ. ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ. 15)

ಅನಕ್ಷರಸ್ಥರಾಗಿದ್ದರೂ ಜನಪದರು ರಚಿಸರುವ ಸಾಹಿತ್ಯ ಬಹಳ ಮೌಲ್ವಿಕವಾದುದು. ಕಾವ್ಯ ಕಟ್ಟುವಲ್ಲಿ ನೈಪುಣ್ಯ ಉಳ್ಳವರು. ಅಷ್ಟೇ ಜಾಣರು ಎಂದು ಶ್ರೀವಿಜಯ ಹೇಳುತ್ತಾ ಕನ್ನಡ ನಾಡಿನ ವಿಸ್ತಾರವನ್ನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾನೆ.

"ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡಾದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಿಯ ವಿಲೀನ ವಿಶದ ವಿಷಯ ವಿಶೇಷಂ"
(ಡಾ. ಎಂ.ಎಂ. ಕಲಬುರ್ಗಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪುಟ. 15)

ಈ ಕಾವ್ಯದಲ್ಲಿ ಜನಪದ ಎನ್ನುವ ಶಬ್ದವನ್ನು ಗುರುತಿಸುತ್ತಾನೆ. ಕವಿರಾಜಮಾರ್ಗಕಾರನಾದ ಶ್ರೀವಿಜಯನ ಕಾಲಕ್ಕೆ ಜನಪದ ತನ್ನ ಮಹೋನ್ನತೆ ಮುಟ್ಟಿರುವುದನ್ನು ಇಲ್ಲಿ ದಾಖಲಿಸಲಾಗಿದೆ. ಮೌಖಿಕ ಪರಂಪರೆಯ ಸಾಹಿತ್ಯಕ್ಕೆ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂಬುದನ್ನು ನಮಗೆ ಮನವರಿಕೆ ಮಾಡಿಕೊಟ್ಟಿದ್ದಾನೆ. ಲಿಖಿತ ಸಾಹಿತ್ಯವಷ್ಟೇ ಶ್ರೇಷ್ಟವಲ್ಲ, ಮೌಖಿಕ ಸಾಹಿತ್ಯವನ್ನು ಜನಪದ, ಜಾನಪದ, ಜೇನುಪದ ಹಾಗೂ ಜಾಣರ ಪದ ಮುಂತಾಗಿ ಕರೆಯುತ್ತಾರೆ. ಪದ ಎಂಬ ಶಬ್ದ ಇರುವುದರಿಂದ ಪದ್ಯ, ಹಾಡು, ಕಾವ್ಯ, ಗೀತೆ, ಸಂಗೀತ, ಗಾಯನ, ಕುಣಿತ ಇವೆಲ್ಲವುಗಳ ಅಭಿವ್ಯಕ್ತಿಗೆ ವಾದ್ಯಗಳ ಬಳಕೆ ಬಹುಮುಖ್ಯ ಆಕರಗಳು. ಓದುಗರಿಗೆ, ಸಹೃದಯರಿಗೆ, ಪ್ರೇಕ್ಷಕರಿಗೆ ಆನಂದವನ್ನು ಕೊಡುವ ಉದ್ದೇಶದಿಂದ ಜನಪದರು ಕಾವ್ಯ, ಕುಣಿತ, ಸಂಗೀತದ ಜೊತೆಯಲ್ಲಿ ವಾದ್ಯಗಳನ್ನು ಅಳವಡಿಸಿದ್ದರಿಂದ ಕಾವ್ಯಗಳು ಜನರ ಮನಸ್ಸನ್ನು ಸೂರೆಗೊಂಡವು.

"ಅನುಕೂಲಪವನನಿಂ ಜೀ
ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ
ಹಿನವೋಲ್ ಶಬ್ದದ್ರವ್ಯಂ
ಜನಿಯಿಸುಗುಂ ಶ್ವೇತಮದ ಕಾರ್ಯಂ ಶಬ್ದೋ"
(ಸಂ. ಡಾ. ಎಲ್.ಬಸವರಾಜ, ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ, ಪುಟ. 24)

ಶಬ್ದವು ಮನುಷ್ಯನ ಹೊಕ್ಕುಳದಿಂದ ಕಹಳೆಯನ್ನು ಊದುವುದರಿಂದ ಹುಟ್ಟುತ್ತದೆ. ಇಂತಹ ಕಾರ್ಯದಿಂದ ಹುಟ್ಟುವ ಶಬ್ದಗಳು ಸಾಹಿತ್ಯ ರಚನೆಗೆ ಅವಕಾಶ ಮಾಡಿಕೊಡುತ್ತದೆ. ಸಾಹಿತ್ಯ, ಸಂಗೀತ, ಜನಮಾನಸದ ಮುಂದೆ ನರ್ತಿಸಬೇಕಾದರೆ, ನೃತ್ಯಕ್ಕೆ ತಕ್ಕವಾದ್ಯಗಳ ಬಳಕೆಯು ಮುಖ್ಯವಾಗುತ್ತವೆ. ಜನಪದ ಮಹಾಕಾವ್ಯಗಳಲ್ಲಿ ವಾದ್ಯಗಳಿರದಿದ್ದರೆ ಯಾವ ಕ್ರಿಯೆಯೂ ಜರುಗುವುದಿಲ್ಲ. ಇಂಗ್ಲಿಷಿನ "ಔಡಿಚಿಟ ಇಥಿಛಿ", "ಈಟುಞ ಇಥಿಛಿ" ಕನ್ನಡದಲ್ಲಿ ಜನಪದ ಮಹಾಕಾವ್ಯ, ಮೌಖಿಕ ಮಹಾಕಾವ್ಯಗಳೆಂದು ಕರೆಯುತ್ತಾರೆ. ಕನ್ನಡ ಜನಪದ ಮಹಾಕಾವ್ಯಗಳಾದ ಮಲೆಮಾದೇಶ್ವರ, ಮಂಟೇಸ್ವಾಮಿ, ಹಾಲುಮತ ಮಹಾಕಾವ್ಯ, ಜುಂಜಪ್ಪ, ಕುಮಾರರಾಮ, ಕೃಷ್ಣಗೊಲ್ಲರಕಾವ್ಯ ಮುಂತಾದವುಗಳನ್ನು ಗುರುತಿಸಬಹುದು. ಬೇರೆ ರಾಜ್ಯ, ರಾಷ್ಟ್ರಗಳಲ್ಲಿಯೂ ಜನಪದ ಮಹಾಕಾವ್ಯ ಪ್ರಕಾರಗಳು ಕಂಡುಬರುತ್ತವೆ. ತುಳುವಿನ–ಸಿರಿಪಾಡ್ದನ, ತೆಲುಗು–ಪಾಲ್ನಾಟಿ ವೀರಲು ಕಥಾ, ರಾಜಸ್ಥಾನಿ– ಪ್ಟಾಬೂಜಿ, ಟಿಬೇಟಿನ್–ಗೆಸರ್, ಅರೆಬಿಕ್–ಅಂತರ್, ಲ್ಯಾಂಡಿನ–ಕಾಲೇವಾಲ, ಮೋಲಿ–ಸುನಜಾತ, ಉತ್ತರ ಅಮೇರಿಕ–ಮಹಾವಿ, ಜಪಾನ್–ಪನುಕೋಟಿನ್ ಉಟುನ್ನೈ ಮುಂತಾದ ಜನಪದ ಮಹಾಕಾವ್ಯಗಳನ್ನು ಗುರುತಿಸಬಹುದು. ಅನಕ್ಷರಸ್ಥರಿಂದ, ಹಳ್ಳಿಗರಿಂದ ರಚಿತವಾಗಿರುವುದರಿಂದ ಇದನ್ನು ಗ್ರಾಮೀಣ ಸಾಹಿತ್ಯವೆಂದು ಕರೆಯುತ್ತಾರೆ. ಲಿಖಿತ ಅಥವಾ ಮೌಖಿಕ ಸಾಹಿತ್ಯ ರಚಿತವಾದ ಕಾಲ, ಪ್ರದೇಶ,

ಪರಿಸರ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಸಂಪ್ರದಾಯ, ಪರಂಪರೆ ಇವೆಲ್ಲವು ಆ ಕಾಲದ ಕುರುಹುಗಳಾಗಿರುತ್ತವೆ. ದೇವರು–ಧರ್ಮ ಕುಣಿತಗಳಿಗನುಗುಣವಾಗಿ ವಾದ್ಯಗಳ ಬಳಕೆಯೂ ಕೂಡ ಪಲ್ಲಟವಾಗುತ್ತಲೆ ಸಾಗಿವೆ. ಕುಣಿತಕ್ಕೆ ತಕ್ಕ ವಾದ್ಯಗಳ ಬಳಕೆ ಹಾಗೂ ಸನ್ನಿವೇಶಕ್ಕೆ ತಕ್ಕ ರಸಗಳನ್ನು ಅಭಿವ್ಯಕ್ತಪಡಿಸಲು ವಾದ್ಯಗಳು ಕೂಡ ಬೇರೆ ಬೇರೆ ಆಕರದಲ್ಲಿರಬಹುದು

ಅಂದಿನ ಕಾಲದ ಸಮಾಜ, ಆರ್ಥಿಕ, ರಾಜಕೀಯ, ನೈತಿಕ, ವೈಜ್ಞಾನಿಕ, ಆಧ್ಯಾತ್ಮಿಕ ಸಂಗತಿಗಳನ್ನು ಸಾದರಪಡಿಸುವಾಗ ಹಾಡು, ಕುಣಿತ ಹಾಗೂ ವಾದ್ಯಗಳು ಎಷ್ಟರ ಮಟ್ಟಿಗೆ ಪ್ರಮುಖ ಪರಿಕರಗಳಾಗಿರುತ್ತವೆ. ಸಾಹಿತ್ಯ ಮತ್ತು ಸಂಗೀತ ಸಂಸ್ಕೃತಿ ಮತ್ತು ಸಂಪ್ರದಾಯದ ನೆರಳಲ್ಲಿ ಪರಿಪಕ್ವವಾಗಿ ಹದಗೊಳ್ಳಬೇಕಾದರೆ ವಾದ್ಯಗಳು ಕೂಡ ಅಷ್ಟೇ ಮುಖ್ಯವಾದವುಗಳು ವಾದ್ಯಗಳಿಂದ ಸಾಹಿತ್ಯ ಕುಣಿತಕ್ಕೆ ಶೋಭೆ ಉಂಟಾಗಿ ಪ್ರೇಕ್ಷಕರ ಮನಸೂರೆಗೊಳ್ಳುವಲ್ಲಿ ವಾದ್ಯಗಳು ತಮ್ಮ ಸ್ಥಾನ–ಮಾನಗಳನ್ನು ಉಳಿಸಿಕೊಂಡಿವೆ. ಏಕಕಾಲದಲ್ಲಿ ಶ್ರವ್ಯ ಮತ್ತು ದೃಶ್ಯ ಕ್ರಿಯೆಗಳಿಗೆ ವಾದ್ಯಗಳು ಚಾಲಕ ಶಕ್ತಿಯಾಗಿ ತಮ್ಮ ಕಾರ್ಯನಿರ್ವಹಿಸುತ್ತವೆ.

ಜನಪದ ಮಹಾಕಾವ್ಯಗಳು ಹುಟ್ಟಿಕೊಂಡಿದ್ದೇ ಧರ್ಮ ಮತ್ತು ದೇವರ ಹಿನ್ನಲೆಯಲ್ಲಿ. ದೇವರ ಬಾಲ್ಯ ಯೌವ್ವನ ಮದುವೆ, ವರ, ಶಾಪ ವ್ರತ ವಿಮೋಚನೆ ಮುಂತಾದವುಗಳಿಗನುಗಣವಾಗಿ ಕಾರ್ಯಕ್ರಮಗಳು ಜರಗುತ್ತವೆ. ಶೃಂಗಾರ, ವೀರ, ಅದ್ಭುತ, ಜಿಗುಪ್ಸೆ, ಕ್ರೋಧ, ಭಯಾನಕ, ಕರುಣ, ಶಾಂತ ಮುಂತಾದ ರಸಗಳನ್ನು ಕುಣಿತಗಳಲ್ಲಿ ತರುವಾಗ ಹೆಜ್ಜೆ ಆರ್ಭಟ, ಭಯ ಭಕ್ತಿ ಇವುಗಳನ್ನು ಭಕ್ತಾದಿಗಳ ಮುಂದೆ ಪ್ರದರ್ಶಿಸುವಾಗ ವಾದ್ಯಗಳನ್ನು ಬಡಿಯವುದು ಹಾಗೂ ಊದುವುದು ಸರ್ವೇಸಾಮಾನ್ಯವಾಗಿರುತ್ತದೆ. ಭಕ್ತರ  ಮೈಮೇಲೆ ದೇವರು ಬಂದಾಗ ವಾದ್ಯಗಳನ್ನು ಬಾರಿಸಿದ ಹಾಗೆ ಭಕ್ತ ನೃತ್ಯ ಮಾಡುವುದನ್ನು ನೋಡಿದರೆ, ದೇವರು ಯಾರ ಮೈಮೇಲೆ ಬಂದಿದೆ ಎಂದು ಗುರುತಿಸಿವುದು ಕಷ್ಟಸಾಧ್ಯ. ಬಾರಿಸುವವನ ಮೈಮೇಲೊ? ಭಕ್ತನ ಮೈಮೇಲೆ ಗೊತ್ತಾಗುವುದಿಲ್ಲ. ದೇವರು ಮೈಮೇಲೆ ಬರುವನೇ? ಎಂಬ ಪ್ರಶ್ನೆಯ ಗೊಡವಿಗೆ ಹೋಗುವುದಿಲ್ಲ. ಈ ಪ್ರಶ್ನೆಗೆ ವಿಜ್ಞಾನಿಗಳು ಹಾಗೂ ಮನೋವಿಜ್ಞಾನಿಗಳು ಉತ್ತರ ಹುಡುಕಬೇಕು. ದೇವರ ಆಚರಣೆಗಳು ತತ್ವಗಳಾಗಿರಬಹುದು ಅಥವಾ ಮೌಲ್ಯಗಳಾಗಿರಬಹುದು. ಆಯಾ ಧರ್ಮದವರು ಅದನ್ನು ಅಳವಡಿಸಿಕೊಳ್ಳಬಹುದು ಅಥವಾ ಬಿಡಬಹುದು. ವಾದ್ಯಗಳು ಜನಪದರ ಹಾಸುಹೊಕ್ಕಾಗಿವೆ. ಅವಿನಾಭಾವ  ಸಂಬಂಧವಿದೆ. ಜನಪದ ಮಹಾಕಾವ್ಯಕ್ಕೂ ವಾದ್ಯಗಳಿಗೂ ಬಿಡಿಸಲಾರದ ನಂಟಿದೆ.

ಮನುಷ್ಯನ ಹುಟ್ಟು ಕಲಿತ ಕಲೆಗಳೆಲ್ಲವೂ ಕಂಡ ನಿಗೂಢವಾದವು. ಭಾಷೆ, ಸಾಹಿತ್ಯ, ಸಂಗೀತ, ಕುಣಿತ ಹಾಗೂ ವಾದ್ಯಗಳ ಧ್ವನಿ ಸಂಕೇತಗಳು ವಿಸ್ಮಯವಾದುದು. ಮನುಷ್ಯರನ್ನು ದೇವರು ಸೃಷ್ಟಿಸಿದನೋ? ದೇವರು ಮನುಷ್ಯರನ್ನು ಸೃಷ್ಟಿಸಿದನೋ? ವಾದ್ಯಗಳನ್ನು ಯಾರು ಸೃಷ್ಟಿಸಿದರು ಎನ್ನುವ ಹತ್ತು ಹಲವಾರು ಪ್ರಶ್ನೆಗಳಿಗೆ ಉತ್ತರ ದೊರಕಿಲ್ಲ ಸಿಗುವುದು ಇಲ್ಲ. ಆದರೆ ದೇವರ ಉತ್ಸವಗಳಲ್ಲಿ ಕುಣಿತ ಹಾಗೂ ಹಾಡುವಂತಹ ಸಂದರ್ಭದಲ್ಲಿ ವಾದ್ಯಗಳನ್ನು ಬಾರಿಸುವುದು ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ರೂಢಿಯಲ್ಲಿರುವುದು ಖಚಿತ. ಜನಪದ ಮಹಾಕಾವ್ಯಗಳು ಮನರಂಜನೆಯ ನೆಲೆಯಲ್ಲಿ ರೂಪ ಪಡೆದರೂ ಧಾರ್ಮಿಕ ವಿಧಿ ವಿಧಾನಗಳಲ್ಲಿ ಐಕ್ಯವಾಗಿರುವುದು ಅಷ್ಟೇ ಸತ್ಯ. ಜಗತ್ತಿನ ಯಾವುದೇ ಸಾಹಿತ್ಯ ಪ್ರಕಾರವಾಗಿರುವುದು ಅಷ್ಟೇ ಸತ್ಯ. ಜಗತ್ತಿನ ಯಾವುದೇ ಸಾಹಿತ್ಯ ಜನಪದ ಸಾಹಿತ್ಯಕ್ಕೆ ಋಣಿಯಾಗಿರುತ್ತದೆ. ಬಿ.ಎಂ.ಶ್ರೀ ಅವರು ಹೇಳುವಂತೆ. “ಜನವಾಣಿ ಬೇರು, ಕವಿವಾಣಿ ಹೂ” ಎಲ್ಲಾ ಸಾಹಿತ್ಯದ ಮೂಲ ಬೇರು ಜನಪದ ಸಾಹಿತ್ಯವಾಗಿದೆ. ನಂತರದ್ದೆಲ್ಲ, ಕವಿಯ ಲೇಖನಿಯಿಂದ ಮೂಡಿ ಬಂದ ಸಾಹಿತ್ಯವಾಗಿದೆ. ಜನಪದರು ತಮ್ಮ ಕಾಲ ಘಟ್ಟದ ಸಂದರ್ಭದಲ್ಲಿ ದೊರೆತ ಪ್ರಾಣಿಗಳ ಚರ್ಮ, ತಂತಿ, ಲೋಹ, ಕಟ್ಟಿಗೆ, ಕಬ್ಬಿಣ ಕಂಚು, ತಾಮ್ರ, ಬೆಳ್ಳಿ, ಬಂಗಾರ, ವಜ್ರ, ವೈಢೂರ್ಯ, ಮುತ್ತು, ರತ್ನ, ಹವಳ ಹಾಗೂ ಪಚ್ಚೆ ಮುಂತಾದ ಸಾಮಗ್ರಿ ಬಳಸಿಕೊಂಡು ವಾದ್ಯಗಳನ್ನು ತಯಾರಿಸಿದ್ದಾರೆ.

ದೇವರು ಹಾಗೂ ಧರ್ಮಕ್ಕೆ ಎಂತಹ ಪೂಜ್ಯನೀಯ ಹಾಗೂ ಆರಾಧನೆಯ ದೃಷ್ಟಿಯಿಂದಲೂ ದೈವತ್ವವನ್ನು ಕಾಣುತ್ತಾರೆ. ವಾದ್ಯಗಳು ಹಲವು ಪ್ರಕಾರಗಳಲ್ಲಿವೆ. ಒಂದೊಂದು ದೇವರಿಗೂ ಒಂದೊಂದು ರೀತಿಯ ವಾದ್ಯಗಳನ್ನು ಬಳಸುತ್ತಾರೆ. ಜನಪದ ತಾಯಂದಿರು ಹಸುಗೂಸುಗಳಿಗೆ ಹಾಲನ್ನು ಕುಡಿಸಿ ತೊಟ್ಟಿಲ್ಲಿ ತೂಗುತ್ತ ಹಾಡನ್ನು ಹೇಳುವುದು. ಮಗು ಹಾಡನ್ನು ಕೇಳಿಸಿಕೊಳ್ಳುತ್ತದೆಯೇ ಅಥವಾ ಇವರುಗಳಿಗೆ ಹಾಡು ಬರುತ್ತವೆ ಎಂದು ತೋರಿಸಿಕೊಳ್ಳುತ್ತಾರೆಯೇ? ಸಂಗೀತಕ್ಕೂ ಮಗುವಿನ ಮೆದುಳಿಗೆ ವೈಜ್ಞಾನಿಕವಾದ ಸಂಬಂಧಗಳ ಕಾರಣಗಳೇನಾದರೂ

ISBN – 978-93-5526-247-9

ಇರಬಹುದೆ? ಜನಪದ ಮಹಿಳೆಯರು ಹಾಡುವುದನ್ನು ನಿಲ್ಲಿಸಿಲ್ಲ. ಸಂಗೀತಕ್ಕೆ ಅಂತಹದ್ದೊಂದು ಗುಣವಿರಬಹುದು. ಎಂತಹ ಕ್ರೂರಿ ಮನುಷ್ಯನಿರಲು ತನಗೆ ಬಂದ ಹಾಗೆ ಹಾಡಿಕೊಳ್ಳುತ್ತಲೇ ಇದ್ದಾನೆ, ಇರುತ್ತಾರೆ. ಕೆಲವರು ಹಾಡಿನ ಜೊತೆಯಲ್ಲಿ ತಾಳಕ್ಕೆ ತಕ್ಕ ಹಾಗೆ ಹೆಜ್ಜೆ ಹಾಕುತ್ತಾರೆ. ತಾಳ ಹಾಕಿಸುವ ಸಾಮಗ್ರಿಗಳಲ್ಲಿ ವಾದ್ಯಗಳು ಇಂತಹವುಗಳಲ್ಲಿ ಕೆಲವನ್ನು ಅವಲೋಕಿಸಬಹುದು. ಮನುಷ್ಯರು ಬದುಕಿನಲ್ಲಿ ಎಂತಹ ಕಷ್ಟಗಳು ಬಂದರೂ ಎದೆಗುಂದದೆ ನೊಂದುಕೊಳ್ಳದೆ ಜೀವನ ಬಂಡಿಯನ್ನು ಎಳೆಯಬೇಕು. "ಕಾಸಿ ಬಡ್ಡ ಹಲಿಗಿಯಂಗ ಮನಸ್ಸು ಬಿಚ್ಚಿ ಹಾಡೋನು ಬಾ". ಕಾಸಿದ ಹಲಿಗೆ ನಾದವನ್ನು ಕೊಡುವಂತೆ ಹೊಸ ಜೀವನಕ್ಕೆ ನಾಂದಿ ಹಾಡಬೇಕು ಎಂಬ ಸಿದ್ಧಾಂತ ವಾದ್ಯಗಳ ಪರಿಕಲ್ಪನೆಯಾಗಿದೆ.

ವಾದ್ಯಗಳ ಪ್ರಕಾರಗಳು

1. ಚರ್ಮ ವಾದ್ಯಗಳು
2. ತಂತಿ ವಾದ್ಯಗಳು
3. ಲೋಹ ವಾದ್ಯಗಳು
4. ತಾಳ ವಾದ್ಯಗಳು
5. ಊದುವ ವಾದ್ಯಗಳು

**1. ಚರ್ಮ ವಾದ್ಯಗಳು**

ಹಲಗೆ, ದಂಬಿಡಿ, ಢಕ್ಕೆ, ಡೋಲು, ಡಮರುಗ, ನಗಾರಿ, ಸಂಬಾಳ, ತಾಸೆ, ಡೊಳ್ಳು, ತಮಟೆ ಬುಡಬುಡಕಿ, ದುಡಿ, ಮದ್ದಳೆ ಮುಂತಾದ ಪ್ರಕಾರಗಳನ್ನು ನೋಡಬಹುದು.–ಎಂ. ಎಂ ಪಡಶೆಟ್ಟಿ, ಜಾನಪದ ಸಾಹಿತ್ಯ ದರ್ಶನ, ಪ್ರ.ಕ.ವಿ.ವಿ.ಧಾರವಾಡ, ಪು ಸಂ–97. ಎಂ. ಎಂ. ಪಡಶೆಟ್ಟಿ ಅವರು ದೊರೆತ ಸಾಮಗ್ರಿ ತಯಾರಿಸುವ ವಿಧಾನ, ಬಳಸುವ ವಸ್ತುಗಳು ಹೇಗೆ ಬಾರಿಸುತ್ತಾರೆ ಎಲ್ಲವುಗಳನ್ನು ಸವಿಸ್ತಾರವಾಗಿ ವಿವರಿಸಿದ್ದಾರೆ. ಚೆನ್ನಾಗಿ ಶೋಧಿಸಿ ಲೇಖನವನ್ನು ಅಚ್ಚು ಕಟ್ಟಾಗಿ ಕಟ್ಟಿದ್ದಾರೆ. ವಾದ್ಯಗಳ ಪ್ರಾಮುಖ್ಯತೆಯನ್ನು ಮಾತ್ರ ಗಮನಿಸಿದ್ದೇನೆ. ಚರ್ಮ ವಾದ್ಯಗಳಾಗಿರುವುದರಿಂದ ಶೂದ್ರ ವ್ಯಕ್ತಿಗಳೇ ಇವುಗಳನ್ನು ತಯಾರಿಸಿರಬೇಕು. ಮೇಲವರ್ಗದವರು ಬಳಸಿಕೊಂಡಿರಬಹುದು. ಜನಪದ ಮಹಾಕಾವ್ಯಗಳ ದೇವರುಗಳೆಲ್ಲ ಕೇರಿ ಅಥವಾ ಹಟ್ಟಿಯಲ್ಲಿದ್ದುದರಿಂದ ಈ ವಾದ್ಯಗಳ ಬಳಕೆ ಬಂದಿರಬಹುದು. ಕೇರಿಗಳಲ್ಲಿ ಪ್ರಾಣಿಗಳ ಮಾಂಸವನ್ನು ತಾವು ಬಳಸಿಕೊಂಡು ಅವುಗಳ ಚರ್ಮವನ್ನು ವಾದ್ಯಗಳಿಗೆ ಬಳಸಿ ತಮ್ಮ ದೇವರುಗಳ ಮುಂದೆ ಹಾಡಿ ಕುಣಿದಿರಬಹುದು.

**2. ತಂತಿ ವಾದ್ಯಗಳು**

ಏಕತಾರಿ, ತಂಬೂರಿ, ಚೌಡಕಿ, ಕಿನ್ನರಿ, ತುಂತುರಿ, ಕಾಮಾಕ್ಷಿ, ಪೀಟಿಲು, ವಾಯಲಿನ್ ಮುಂತಾದವುಗಳನ್ನು ನೋಡಬಹುದು. ವಾದ್ಯಗಳ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು ದೊರೆತ ಗ್ರಂಥಗಳನ್ನು ಆಯ್ಕೆಮಾಡಿಕೊಂಡು ವಿವರ ಹಾಗೂ ವಿಶ್ಲೇಷಣಾತ್ಮಕವಾಗಿ ದಾಖಲಿಸಲಾಗಿದೆ. ಡಾ. ಎಂ ಎನ್. ವಾಲಿ ಅವರು ತಂತಿ ವಾದ್ಯಗಳ ಬಗ್ಗೆ ವ್ಯವಸ್ಥಿತವಾಗಿ ಲೇಖನವನ್ನು ಕಟ್ಟಿರುವುದರಿಂದ ಅದರೊಳಗೆ ಕೈ ಹಾಕುವುದರಲ್ಲಿ ಸಮಂಜಸವಲ್ಲವೆಂದು ಜನಪದ ಮಹಾಕಾವ್ಯಗಳಲ್ಲಿ ಅವುಗಳ ಮಹತ್ವ ಕುರಿತು ಚರ್ಚಿಸಲಾಗಿದೆ. ತಂತಿ ವಾದ್ಯಗಳು ಹೊರಡಿಸಲಾಗುವ ನಾದ ಬಹಳ ಇಂಪಾಗಿರುತ್ತದೆ. ಅಬ್ಬರವಿರುವುದಿಲ್ಲ. ಸೂಕ್ಷ್ಮವಾಗಿ ತಂತಿಗಳನ್ನು ಕಟ್ಟಿ ಮೆಲುವಾಗಿ ಈ ಸಂಗೀತ ವಾದ್ಯಗಳನ್ನು ನುಡಿಸುತ್ತಾರೆ. ಜೀವನ ಚಕ್ರಕ್ಕೆ ಅನುಗುಣವಾಗಿ ತಾತ್ವಿಕ ವಿಚಾರಗಳನ್ನು ಅಳವಡಿಸಲಾಗಿದೆ. "ವೀಣೆ ಹರಿದ ತಂತಿಯಿಂದ ನಾದ ಹೊಮ್ಮ ಬಲ್ಲದೆ" ಬದುಕಿನ ಸಂಚಾರದಲ್ಲಿ ಎಲ್ಲಿಯೂ ಎಡವದ ಹಾಗೆ ಎಚ್ಚರದಿಂದರಬೇಕು ಎನ್ನುವ ಸಿದ್ಧಾಂತ ಅಡಕವಾಗಿದೆ.

**3. ಲೋಹ ವಾದ್ಯಗಳು**

ತಾಳ, ಝುಲ್ಲರಿ, ಜಾಗಟೆ, ಕಂಸಾಳೆ, ಗಂಟೆ ಗಗ್ಗರ, ಬೋಂಕಿ, ಸಿಂಗನಾದ, ಕಹಳೆ, ಕೊಂಬು ಮುಂತಾದ ಪ್ರಕಾರಗಳನ್ನು ಕಾಣಬಹುದು. ಚರ್ಮ ಮತ್ತು ತಂತಿ ವಾದ್ಯಗಳಿಗಿಂತ ಭಿನ್ನವಾದ ಸ್ವರ ಮತ್ತು ನಾದಗಳನ್ನು ಹೊರಡಿಸುತ್ತದೆ. ಇವುಗಳ ತಯಾರಿಕೆ, ಬಳಸುವ ಕಾರ್ಯಕ್ರಮ, ಬಳಸುವ ಲೋಹ, ಯಾವ ದೇವರು ಮುಂತಾದ ಮಾಹಿತಿಗಳ ಬಗ್ಗೆ ಡಾ. ಶ್ರೀಕಂಠ ಕೂಡಿಗೆ ಅವರು ಸುಂದರವಾಗಿ ಲೇಖನಗಳನ್ನು ಸಹೃದಯ ಹಾಗೂ

ISBN – 978-93-5526-247-9 

ಸಂಶೋಧಕರಿಗೆ ನೀಡಿದ್ದಾರೆ. ಚರ್ಮ ಹಾಗೂ ತಂತಿ ವಾದ್ಯಗಳಿಗಿಂತ ಲೋಹ ವಾದ್ಯಗಳು ಭಿನ್ನವಾದ ಧ್ವನಿ-ಸಂಕೇತಗಳನ್ನು ಬಿಟ್ಟುಕೊಡುತ್ತವೆ. ದೇವರ ನೈವೇದ್ಯವಾದ ಸಂದರ್ಭಗಳಲ್ಲಿ ಮಂಗಳಾರತಿ, ದೇವರು ಗುಡಿ ತುಂಬುವುದು ವಿಶಿಷ್ಟ ಸನ್ನಿವೇಶಗಳನ್ನು ಬಾರಿಸಲು ಶಕ್ತಿ ಬೇಕಾಗಿಲ್ಲ. ಯುಕ್ತಿಯೊಂದಿದ್ದರೆ ಸಾಕು. ಕಾಲ ಕಾಲಕ್ಕೆ ದೊರೆಯುವ ವಸ್ತು ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಇಂತಹ ವಾದ್ಯಗಳನ್ನು ಬಳಕೆಗೆ ತಂದಿರಬೇಕು. ಜನಪದ ಮಹಾಕಾವ್ಯಗಳಲ್ಲಿ ಅನೇಕ ಬಗೆಯ ವಾದ್ಯಗಳು ಬಳಕೆಯಾಗಿರುವುದು ಜಾತ್ರೆ ಅಥವಾ ಪರಂಪರೆಯಲ್ಲಿ ಹೋಗಿ ನೋಡಿದಾಗ ನಮಗೆ ಗೊತ್ತಾಗುತ್ತದೆ. ಎಲ್ಲಾ ವಾದ್ಯಗಳಿಗಿಂದ ಬಹಳ ವೈಶಿಷ್ಟತೆಯನ್ನು ಈ ಲೋಹಗಳು ಹೊಂದಿವೆ.

### 4. ಊದುವ ವಾದ್ಯಗಳು

ಕಹಳೆ, ಕೊಂಬು, ಶಂಖ, ಕೊಳಲು, ಪುಂಗಿ, ನಾದಸ್ವರ, ಶಹನಾಯಿ ಇವುಗಳನ್ನು ಕುರಿತು ಡಾ. ಬಿ.ವಿ ಮಲ್ಲಾಪೂರ ಅವರು ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ಶಾಸನಗಳು ಗ್ರಂಥಗಳು, ಹಾಡುವ ಹಾಡುಗಳ ಪದ್ಧತಿಯನ್ನು ದಾಖಲಿಸಿದ್ದಾರೆ. ಉಸಿರಿನಿಂದ ಶಬ್ದಗಳನ್ನು ಹೊರಡಿಸುವ ಸಂಗೀತ ವಾದ್ಯಗಳು ನಮ್ಮಲ್ಲಿ ಹೇರಳವಾಗಿ ದೊರೆಯುತ್ತವೆ. ಜನಪದ ಮಹಾಕಾವ್ಯಗಳಲ್ಲಿ ಈ ವಾದ್ಯಗಳು ಕೂಡ ಅನಾದಿ ಕಾಲದಿಂದಲೂ ಕಾರ್ಯ ನಿರ್ವಹಿಸುತ್ತಿವೆ. 13ನೇ ಶತಮಾನದಲ್ಲಿ ಕೇಶಿರಾಜನು ಶಬ್ದ ಹುಟ್ಟುವಿಕೆಯನ್ನು ಕುರಿತು ತನ್ನಶಬ್ದಮಣಿದರ್ಪಣದಲ್ಲಿ ಹೆಸರಿಸುವಾಗ ಕಹಳೆಯನ್ನು ಹೆಸರಿಸಿದ್ದಾನೆ. ಜನಪದರು ತಮಗೆ ಸಿಕ್ಕ ವಾದ್ಯವಿರಬಹುದು, ದೊರೆತ ರಾಗವಿರಬಹುದು ಯಾವುದೇ ಶಾಸ್ತ್ರದ ನಿಯಮಗಳಿಗೆ ಬದ್ಧರಾಗದೆ ತಮ್ಮ ಕೆಲಸ ತಾವು ಮಾಡಿ ಮುಗಿಸುತ್ತಾರೆ. ಜನಪದ ಮಹಾಕಾವ್ಯಗಳಲ್ಲಿ ವಾದ್ಯರಹಿತ ಯಾವುದೇ ಕಾರ್ಯ ಅಥವಾ ಕ್ರಿಯೆಗಳು ನಡೆಯುವುದಿಲ್ಲ. ಚರ್ಮ, ತಂತಿ, ಲೋಹ ಹಾಗೂ ಉಸಿರು ವಾದ್ಯಗಳು ಒಂದಕ್ಕೊಂದು ಕಾಮೆಂಟು ಮಾಡುವ ಹಾಗೆ ಪ್ರಧಾನ ಅಧೀನ ಪರಿಕರಗಳಾಗಿ ಕಾಣುತ್ತವೆ. ವಾದ್ಯಗಳಲಿಲ್ಲದ ಕೆಲವು ಹಾಡುಗಳಿವೆ. ಕುಟ್ಟುವ, ಬೀಸುವ, ಕಣವನ್ನು ಹದಮಾಡುವ, ಋತುಮತಿ, ನಾಮಕರಣ ಮುಂತಾದ ಸಂದರ್ಭಗಳಲ್ಲಿ ಹಾಡಿನ ರಾಗಗಳೇ ವಾದ್ಯಗಳಾಗಿ ಪರಿಣಮಿಸುತ್ತವೆ. ಬೀಸುವ ಕಲ್ಲು, ಕುಟ್ಟುವ ಒನಕೆ ಇವುಗಳಿಂದ ಹೊರಡುವ ಶಬ್ದಗಳೇ ರಾಗಗಳು. ವಾದ್ಯಗಳ ನಾದ ಲಯಬದ್ಧವಾಗಿ ಮೂಡಿ ಬಂದಾಗ ಹಾಡು-ಕುಣಿತ-ಸಂಗೀತ ಹದವಾಗಿ ಮೂಡಿ ಬರುತ್ತವೆ. ಜನಪದರು ದೇವರ ಸಾನಿಧ್ಯದಲ್ಲಿದ್ದಾಗ ಇಡೀ ದೇಹ ಮತ್ತು ಮನಸ್ಸು ಎರಡೂ ಒಂದಾಗಿ ಮಿಡಿಯವಂತೆ ಇರುತ್ತಾರೆ. ಯಾವುದೇ ಮುಜುಗುರವಿಲ್ಲದೆ ಸ್ವಚ್ಚ ಮನಸ್ಸಿನಂತೆ ಬಿಚ್ಚಿ ವಾದ್ಯಗಳ ಬಡಿತಕ್ಕನುಗುಣವಾಗಿ ನೃತ್ಯ ಗೈಯುತ್ತಾರೆ. ಶಿಷ್ಟರಂತೆ ವೈಚಾರಿಕತೆ ಮತ್ತು ವೈಜ್ಞಾನಿಕವಾಗಿ ಯೋಚಿಸುವ ಗೊಡವೆಗೆ ಹೋಗದೆ ಗುಡಿಯಲ್ಲಿಯೇ ಉಳಿದುಕೊಂಡು ಸೇವೆ ಎನ್ನುವ ಕರ್ತವ್ಯವನ್ನು ನಿಭಾಯಿಸುತ್ತಾರೆ. ವಾದ್ಯಗಳನ್ನು ತಮ್ಮ ಜೊತೆಯಲ್ಲಿಯೇ ದೇವರ ರೀತಿಯಲ್ಲಿ ಆರಾಧಿಸುತ್ತಾರೆ. ವಾದ್ಯಗಳಿಗೆ ಸುರಕ್ಷತೆ ಇರದ ಕಾರಣದಿಂದ ಬೇಗ ಹಾಳಾಗುವ ಸಂದರ್ಭಗಳೇ ಹೆಚ್ಚು. ಜನಪದ ಮಹಾಕಾವ್ಯಗಳಲ್ಲಿ ದೇವರಾಗಲಿ, ದೇವತೆಗಳಾಗಲಿ ಬಹಳ ರೌದ್ರವತಾರ ತಾಳಿ ನರ್ತಿಸುತ್ತವೆ. ಇವುಗಳಿಗೆ 'ಬಲಿ' ಕೊಟ್ಟಾಗ ಮಾತ್ರ ಶಾಂತಿ ಬಲಿಯಾಗುವ ಪ್ರಾಣಿಗಳ ಕೂಗು ಚೀರಾಟ ಹೊರ ಜಗತ್ತಿಗೆ ಕೇಳಿಸಬಾರದು ಎನ್ನುವ ಕಾರಣದಿಂದ ವಾದ್ಯಗಳ ಬಳಕೆಯನ್ನು ಜನಪದರು ತಂದಿರಬಹುದದು. ಜನಪದರ ಬದಕು ಇಂದಿನ ಜನರಿಗೆ ನಾಗರಿಕ ಜೀವನ ಶೈಲಿಗೆ ಪ್ರೇರಣೆ ಹಾಗೂ ಪ್ರಭಾವ ಬೀರಿರಬೇಕು.

> "ಎದಿಯಾನ ಮಾತು ಎದಯಾಗಿಟ್ಟು
> ಮುಳ್ಳು ಬೇಲಿಯಂಗ ಒಣಗುದು ಬ್ಯಾಡ
> ಕಾಸಿ ಬಡ್ಡ ಹಲಿಯಂಗ ಮನಸ್
> ಬಿಚ್ಚಿ ಹಾಡೋನ ಬಾ"
>
> \- ಅರವಿಂದ ಮಾಲಗತ್ತಿ
>
> (ಡಾ. ಸಿದ್ಧಲಿಂಗಯ್ಯ, ದಲಿತ ಬಂಡಾಯ ಸಾಹಿತ್ಯ, ಪುಟ. 17)

ದೇವರು, ಧರ್ಮ ಆಚರಣೆ, ನಂಬಿಕೆ, ಕೃತಿ, ಸಂಸ್ಕೃತಿ ಸಂಪ್ರದಾಯ, ಮನರಂಜನೆ, ಹಾಸ್ಯ, ನಗು, ಹಾಡು, ಕುಣಿತ, ಸಂಗೀತ, ಸಾಹಿತ್ಯ ಇವೆಲ್ಲ ಏಕಕಾಲದಲ್ಲಿ ಸಂಭವಿಸಲು ಮೂಲವೆಂದರೆ ಜನಪದರ ವಾದ್ಯಗಳು ಒಂದು ಪಕ್ಷ ವಾದ್ಯಗಳಿದ್ದರೆ ಮೇಲಿನವೆಲ್ಲವು ಮನುಷ್ಯನಿಗೆ ದೊರಕುತಿರಲಿಲ್ಲ. ಆದಿಮಾನವ ಪ್ರಯೋಗಶೀಲ ಹಾಗೂ ಅನುಕರಣೆಯ ಮೂಲಕ ಕಟ್ಟಿಕೊಟ್ಟ ಈ ಜಗತ್ತು ಇಂದು ನಾಗಲೋಟದಲ್ಲಿ ವಿಕಾಸ ಹೊಂದುತ್ತಾ ಸಾಗಿರುವುದು ಖಚಿತ. ಜನಪದ ವಾದ್ಯಗಳ ಹುಟ್ಟು, ಬಳಕೆ, ಪ್ರಯೋಗದಿಂದ ಮನುಷ್ಯರ ಜೀವನಕ್ಕೆ ಹೊಸ ಆವಿಷ್ಕಾರವನ್ನು ಒದಗಿಸಿಕೊಟ್ಟಿವೆ. ಆದಿ

ISBN – 978-93-5526-247-9

ಮಾನವನಿಂದ ಆಧುನಿಕ ಜಗತ್ತಿನವರೆಗೆ ಸಂಗೀತ ಮತ್ತು ಕುಣಿತಗಳ ಮಾಧ್ಯಮ ವಾದ್ಯಗಳು ಇಂದು ಕೆಲಸ ನಿರ್ವಹಿಸುತ್ತವೆ. ಇಂದು ವೈಜ್ಞಾನಿಕ ರೀತಿಯಲ್ಲಿ ಹೊಸ ಸಾಹಿತ್ಯ ಸಂಗೀತಕ್ಕೆ ಜನಪದ ವಾದ್ಯಗಳು ಸಂಸ್ಕೃತಿಯ ವಾಹಕತೆಯ ಜೊತೆಗೆ ಪ್ರೇರಕ ಹಾಗೂ ಪೋಷಕ ಶಕ್ತಿಗಳಾಗಿ ಪರಿಣಮಿಸಿವೆ. ವಾದ್ಯಗಳ ಕ್ಷೇತ್ರ ಸಂಶೋಧಕರಿಗೆ ಇಂಬು ಕೊಡುವ ಆಕರ ಸಾಮಗ್ರಿಗಳಾಗಿ ನಮ್ಮ ಮುಂದೆ ನಿಂತಿವೆ. ವಾದ್ಯಗಳ ರಚನೆ ಮತ್ತು ನುಡಿಸುವ ಸಂದರ್ಭಗಳಲ್ಲಿಯೂ ದೇವರನ್ನು ಮುಂದು ಮಾಡುವುದು ಇನ್ನು ನಿಂತಿಲ್ಲ. ಕೆಲವು ವಾದ್ಯಗಳನ್ನು ಸ್ತ್ರಿಯರು ಮುಟ್ಟುವಂತಿಲ್ಲ. ವಿಜ್ಞಾನ–ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನದ ಕಾಲಘಟ್ಟದಲ್ಲಿಯೂ ಕೂಡ ನಿಂತಿಲ್ಲ. ಒಂದು ಕಾಲದಲ್ಲಿ ಕೆಲವು ಧರ್ಮಗಳಿಗೆ ಸೀಮಿತವಾಗಿದ್ದಸಾಹಿತ್ಯ, ಸಂಗೀತ, ಕುಣಿತಗಳು ಹಾಗೂ ವಾದ್ಯಗಳು ಇಂದು ಯಾವ ಧರ್ಮ, ದೇವರ ಆರಾಧಕರು ಕೂಡ ಕಲಿಯಬಹುದು. ಪ್ರದರ್ಶಿಸಲು ಅನೇಕ ವೇದಿಕೆಗಳಿವೆ. ಆದರೆ ಒಂದು ನುಡಿಯನ್ನು ಭಾವನೆಗಳಿಗೆ ಬೆದೆ ಬಂದಾಗ ಹಾಡಿ ಕುಣಿದರು. ಶಿಷ್ಟರು ಹಾಗಲ್ಲ ಶಾಸ್ತ್ರೀಯವಾಗಿ ಹಾಡುವುದು ಕುಣಿಯುವುದು ವಾದ್ಯಗಳನ್ನು ಬಾರಿಸುವುದು ಆಧುನಿಕ ಕಾಲವಾಗಿದೆ. ನಾದಗಳಲ್ಲಿರುವ ವೈವಿಧ್ಯಗಳಂತೆ ವಾದ್ಯಗಳಲ್ಲಿಯೂ ಅನೇಕ ವಿಧಗಳಿವೆ. ಅವುಗಳನ್ನು ಹುಡುಕಿ ಮುಂದಿನ ತಲೆಮಾರಿಗೆ ಉಳಿಸಿ–ಬೆಳಸಿ–ಬಳಸಿ ರವಾನಿಸುವ ಕಾರ್ಯ ತುರ್ತಾಗಿ ನಡೆಯಬೇಕಾಗಿದೆ. ಸಂಶೋಧಕರು ಹಾಗೂ ಮಾರ್ಗದರ್ಶಕರು ಈ ಕ್ಷೇತ್ರದಲ್ಲಿ ಶ್ರಮಿಸಬೇಕಾದ ಅನಿವಾರ್ಯ ಹಾಗೂ ಅಗತ್ಯತೆ ಇದೆ. ಈ ಹತ್ತು ಬಳ್ಳಚ್ಚಿ ಶರಣೆಂದು ಲೇಖನಕ್ಕೆ ವಿರಾಮ ಕೊಡ ಬಯಸುತ್ತೇನೆ.

**ಪರಾಮರ್ಶನ ಗ್ರಂಥಗಳು**


1. ಡಾ. ಎಸ್.ಎಂ.ವೃಷಭೇಂದ್ರಸ್ವಾಮಿ, (ಪ್ರ.ಸಂ.), ಡಾ. ವೀರಣ್ಣ ರಾಜೂರ, (ಸಂ.)– ಜನಪದ ಸಾಹಿತ್ಯ ದರ್ಶನ, ಸಂಪುಟ 14, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ,
2. ಡಾ. ಎಲ್.ಬಸವರಾಜ (ಸಂ.)– ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ
3. ಡಾ.ಜೀ.ಶಂ. ಪರಮಶಿವಯ್ಯ–ದಕ್ಷಿಣ ಕರ್ನಾಟಕದ ಜನಪದ ಮಹಾಕಾವ್ಯಗಳು
4. ಡಾ. ಸಿ.ಎನ್. ರಾಮಚಂದ್ರನ್– ಹೊಸ ಮಡಿಯ ಮೇಲೆ ಚದುರಂಗ
5. ಡಾ. ಎಚ್.ಟಿ.ಪೋತೆ–ಜಾನಪದ ಸಿಂಗಾರ
6. ಹೀ.ಚಿ.ಬೋರಲಿಂಗಯ್ಯ–ಕರ್ನಾಟಕ ಜನಪದ ಕಲೆಗಳ ಕೋಶ
7. ಡಾ. ಕೆ.ಎಂ.ಮೈತ್ರಿ, ಬುಡಕಟ್ಟು ಕುಲಕಸುಬುಗಳು
8. ಡಾ. ಪಿ.ಕೆ.ಖಂಡೋಬ–ಜಾನಪದ ಮುನ್ನೋಟ
9. ಜೀನಹಳ್ಳಿ ಸಿದ್ಧಲಿಂಗಪ್ಪ–ಹೊನ್ನಾಡಿನ ಜಾನಪದ
10. ಕೃಷ್ಣಮೂರ್ತಿ ಹನೂರು–ಸಾವಿರದ ಸಿರಿಬಳಗ


***

ISBN – 978-93-5526-247-9 

# 27.ಜನಪದ ಮಹಾಭಾರತ

**ಡಾ. ಸುಮ ಆರ್.**

ಜನಪದ ಸಾಹಿತ್ಯ ಪ್ರಕಾರದಲ್ಲಿ ಜನಪದ ಮಹಾಕಾವ್ಯವು ವಿಶೇಷ ಮತ್ತು ಪ್ರಮುಖ ಪ್ರಕಾರವಾಗಿದೆ. ಮಹಾಕಾವ್ಯ ಎಂದಾಕ್ಷಣ ಶಿಷ್ಟ ಸಾಹಿತ್ಯದ ನೆಲೆಗಟ್ಟಿನಲ್ಲಿ ರಚನೆಯಾದ ವಾಲ್ಮೀಕಿ ರಾಮಾಯಣ ಮತ್ತು ವ್ಯಾಸಭಾರತಗಳು ಕಣ್ಣಮುಂದೆ ಬಂದುನಿಲ್ಲುತ್ತವೆ. ಇವುಗಳಷ್ಟೇ ಮಹತ್ವಪೂರ್ಣವಾದ, ಇವಕ್ಕಿಂತಲೂ ಪ್ರಾಚೀನವಾದ, ಪ್ರಾದೇಶಿಕತೆಯನ್ನುಳಿಸಿಕೊಂಡು ಜನಮಾನಸದಲ್ಲಿ ನೆಲೆಯೂರಿರುವ ಕಾವ್ಯಗಳೆಂದರೆ ಜನಪದ ಮಹಾಕಾವ್ಯಗಳು. ಅನೇಕ ಜನಪದ ಕಾವ್ಯಗಳ ಅಸ್ತಿತ್ವವಿರುವುದು ಒಂದು ನಿರ್ದಿಷ್ಟ ಸಮುದಾಯದ ನಂಬಿಕೆಗಳು ಮತ್ತು ಇತಿಹಾಸದ ಚೌಕಟ್ಟಿನ ಮೇಲೆ ಅವು ಆ ಸಮುದಾಯದ ಸಂಸ್ಕೃತಿ, ಪುರಾಣ ಮತ್ತು ಅಲಿಖಿತ ಇತಿಹಾಸಗಳ ಬೃಹತ್ ಭಂಡಾರವಾಗಿರುತ್ತವೆ. ಇವು ಅವರ ಅನುದಿನದ ಚಟುವಟಿಕೆಗಳನ್ನು, ಧೋರಣೆಗಳನ್ನು ನಿರ್ಧರಿಸುವ ಮಾರ್ಗದರ್ಶಿಗಳು. ಜನರಿಂದ ಕಟ್ಟಲ್ಪಟ್ಟ ಹಾಡು ಅಥವಾ ಕಾವ್ಯವೇ ಜನಪದ ಮಹಾಕಾವ್ಯ. ಜನಪದ ಮಹಾಕಾವ್ಯಗಳು ನಮ್ಮ ಇತಿಹಾಸವನ್ನು ನಿರೂಪಿಸಬಲ್ಲ ಮುಖ್ಯ ಸಂಗತಿಗಳು. ಭಾರತೀಯ ವ್ಯವಸ್ಥೆಯಲ್ಲಿ ಇದುವರೆವಿಗೂ ನಿರ್ಲಕ್ಷಿಸಲ್ಪಟ್ಟ ಜನವರ್ಗದ ಶ್ರೀಮಂತ ಸಂಸ್ಕೃತಿಯ ಅಧ್ಯಯನ ಇದಾಗಿದೆ. ಜನಪದ ಮಹಾಕಾವ್ಯ ಪದವು ಪಾಶ್ಚಾತ್ಯರ 'ಔಖಂಐ ಇಕುಅ/ಈಔಐಎ ಇಕುಅ' ಪದದ ಸಂವಾದಿಯಾಗಿದೆ. ಇಲಿಯಡ್, ಒಡಿಸ್ಸಿ, ಕಲೆವಾಲಾ ಇವು ಪಾಶ್ಚಾತ್ಯ ಮೌಖಿಕ ಮಹಾಕಾವ್ಯ ಎನ್ನುವುದಾದರೆ ಈ ಸಾಲಿನಲ್ಲಿ ಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಇತ್ಯಾದಿ ಕಾವ್ಯ ಪ್ರಕಾರಗಳನ್ನು ಸೇರಿಸಬಹುದು. ರಾಮಾಯಣ ಮತ್ತು ಮಹಾಭಾರತಗಳೂ ಕೂಡ ಜಾನಪದೀಯ ನೆಲೆಗಟ್ಟಿನಲ್ಲಿ ಹಿಂದೆಯೇ ಅಂದರೆ ಶಿಷ್ಟ ಸಾಹಿತ್ಯಕ್ಕಿಂತ ಪೂರ್ವದಲ್ಲಿಯೇ ರೂಪುಗೊಂಡು, ಕಾಲಕ್ರಮೇಣ ಮಹಾಕವಿಗಳ ಪ್ರತಿಭೆಗಳಿಂದ ಶಿಷ್ಟ ಮಹಾಕಾವ್ಯಗಳಾಗಿ ಜನ್ಮತಾಳಿವೆ ಎಂದರೆ ತಪ್ಪಾಗಲಾರದು.

ಪ್ರಸ್ತುತ ಲೇಖನ ಕನ್ನಡ ಜನಪದ ಮಹಾಕಾವ್ಯಗಳ ಹಿನ್ನೆಲೆಯಲ್ಲಿ ಕನ್ನಡ ಜನಪದ ಮಹಾಭಾರತ, ಇದರ ಭಿನ್ನ ವಿಶ್ಲೇಷಣೆ, ಒಳನೋಟಗಳು ಮತ್ತು ವೈಶಿಷ್ಟ್ಯತೆಯನ್ನು ಅರಿಯುವ ಉದ್ದೇಶವನ್ನು ಒಳಗೊಂಡಿದೆ. 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂಬ ಶ್ರೀವಿಜಯನ ಮಾತಿನಂತೆ ಕನ್ನಡ ಜನಪದರು ವ್ಯಾಸ, ಪಂಪ, ರನ್ನ, ಕುಮಾರವ್ಯಾಸ ಮುಂತಾದವರ ಕಾವ್ಯವನ್ನು ಮಥಿಸಿ, ತಿದ್ದಿ, ತೀಡಿ, ತಿಲಕಪ್ರಾಯವಾಗಿಸಿದ್ದಾರೆ. ಮಹಾಭಾರತ ಭಾರತದ ಮಹಾಕಾವ್ಯವಾಗಿದ್ದು, ಗಾಯನ ಸಂಪ್ರದಾಯದಿಂದ ಬಂದುದಾಗಿದೆ. ಶಿಷ್ಟ ಸಾಹಿತ್ಯ ಮತ್ತು ರಾಷ್ಟ್ರೀಯ ಕಾವ್ಯ ಎಂಬ ಗೌರವ ಇದಕ್ಕಿರುವಂತೆ ಜನಪದ ಮಹಾಭಾರತಕ್ಕೂ ಈ ಗೌರವ ಸಲ್ಲಬೇಕಿದೆ. ಖ್ಯಾತ ಜಾನಪದ ತಜ್ಞ ಶ್ರೀ ರಾಗೌ ಅವರು ಹೇಳಿರುವಂತೆ, 'ಈವರೆಗಿನ ಜನಪದ ಮಹಾಕಾವ್ಯಗಳು ಬಹುಮಟ್ಟಿಗೆ ಪ್ರಾದೇಶಿಕವಾದವು, ಧರ್ಮಕೇಂದ್ರಿತವಾದವು. ಆದರೆ ಜನಪದ ಮಹಾಭಾರತವು ಕನ್ನಡದ್ದಾದರೂ ರಾಷ್ಟ್ರೀಯ ವ್ಯಾಪ್ತಿ ಉಳ್ಳದ್ದು, ಲೌಕಿಕ ರೂಪದ್ದು, ಯಾವುದೇ ಧಾರ್ಮಿಕ ಆರಾಧನೆಯ ಸಂಪ್ರದಾಯಕ್ಕೆ ಸೇರಿದ್ದಲ್ಲ' ಎಂದಿದ್ದಾರೆ.

ಜನಪದ ಮಹಾಭಾರತ ಕಲಿಯದವರ ಕಾಮಧೇನು. ಜನಪದ ಸಮುದಾಯ ಪ್ರಜ್ಞೆಯ, ಅದ್ಭುತ ಕಲ್ಪನಾ ಪ್ರಜ್ಞೆಯ ದೈವಶಕ್ತಿಗೆ ಇದು ಒಂದು ಉತ್ತಮ ಉದಾಹರಣೆ. ಡಾ. ಪಿ.ಕೆ. ರಾಜಶೇಖರ ಅವರು ಜನಪದಕ್ಕೆ ಸಂಬಂಧಿಸಿದ ಸಮರ್ಥವೂ, ಸಮರ್ಪಕವೂ ಆದ 'ಜನಪದ ಮಹಾಭಾರತ'ವನ್ನು ಹೊರತಂದು, ಕನ್ನಡದ ಹಿರಿಮೆಯನ್ನು ಹೆಚ್ಚಿಸುವುದರ ಜೊತೆಗೆ, ಕನ್ನಡಿಗರ ಹೆಮ್ಮೆಗೆ ಕಾರಣರಾಗಿದ್ದಾರೆ. ಜನಪದ ಮಹಾಭಾರತ ಒಂದು ರೀತಿಯಲ್ಲಿ ಜೀವಂತ ಪಳೆಯುಳಿಕೆಯಂತೆ ಬದಲಾವಣೆ ಮತ್ತು ಬೆಳವಣಿಗೆಗಳೆರಡನ್ನೂ ಒಳಗೊಂಡು ಸಾಗುತ್ತಿದೆ. ಮಾನವೀಯ ಮೌಲ್ಯಗಳನ್ನು, ಸಮಾಜದ ಸಮತೋಲನವನ್ನು ಸರಿದೂಗಿಸುತ್ತಾ, ಪ್ರತೀ ಪಾತ್ರಕ್ಕೂ ನ್ಯಾಯವನ್ನು ಒದಗಿಸುತ್ತಾ, ಶಿಷ್ಟ ಮಹಾಭಾರತದಲ್ಲಿ ಹುಟ್ಟುವ ಪ್ರಶ್ನೆಗಳಿಗೆ ಕಥಾನಕಗಳ ಮೂಲಕ ಉತ್ತರಿಸುತ್ತಾ ಕಾಲಧರ್ಮವನ್ನು ಒಳಗೊಳ್ಳುತ್ತಾ ಸಾಗುತ್ತಿದೆ.

ಜನಪದ ಮಹಾಭಾರತವು ಪ್ರಾರ್ಥನೆಯ ಪರ್ವದಿಂದ ಆರಂಭವಾಗುತ್ತದೆ. ಸ್ವರ್ಗಾರೋಹಣ ಎಂಬ ಪರ್ವದಲ್ಲಿ ಕಥೆ ಮುಕ್ತಾಯಗೊಳ್ಳುತ್ತದೆ. ಇದನ್ನು ಹಾಡಿದವರು ವಿಶಿಷ್ಟ ಜನಪದ ಗಾಯಕರಾದ ಬೆಟ್ಟದ ಬೀಡು ಸಿದ್ಧಶೆಟ್ಟಿಯವರು. ಮೂಲದಲ್ಲಿ 16 ಪರ್ವವಿದ್ದರೆ, ಇಲ್ಲಿ 160ಕ್ಕೂ ಅಧಿಕ ಪರ್ವಗಳಿವೆ. 'ಓಂ ಪ್ರಥಮದಲ್ಲಿ ಓಂ ಪೂರ್ವದಲಿ

ISBN – 978-93-5526-247-9 

ಮಹಾಭಾರತದ ಕಥಾಬೀಜವು ಭೂಮಿಗೆ ಬಿದ್ದು ಮರವಾಗಿ ಬೆಳೆದು ಬಗೆಬಗೆಯ ರುಚಿಫಲಗಳನ್ನು ಕೊಟ್ಟಿತು' ಎಂಬಲ್ಲಿ ಇದು ಇತಿಹಾಸದ ಕಥೆಯಾಯಿತು ಎಂಬುದು ಸ್ಪಷ್ಟ. ಶಿಷ್ಟಕವಿ, ಜನಪದ ಕವಿ ಎಂಬ ಪ್ರಭೇದವನ್ನು ಅನುಕೂಲಕ್ಕೆ ಮಾಡಿಕೊಂಡಿದ್ದರೂ, ವಾಸ್ತವವಾಗಿ ಅವರಿಬ್ಬರ ಅಂತರಂಗ ವೈಶಾಲ್ಯದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಉದಾ:– ಜನಪದ ಮಹಾಭಾರತ ಭೀಷ್ಮರಿಗೆ ಓತಿ ಶಾಪಕೊಟ್ಟ ಪ್ರಸಂಗವನ್ನು ಕೋಲ್ರಿಡ್ಜ್ ಅವರ 'ದಿ ಏನಶಿಯಂಟ್ ಮೆರೈನರ್' ಎಂಬ ಕವಿತೆಗೆ ಹೋಲಿಸಬಹುದು. ಇಲ್ಲಿ ನಾವಿಕ ಸಮುದ್ರ ಪಕ್ಷಿಯನ್ನು ಕೊಂದು ತಾನು ತೊಳಲಾಡಿ ಪಶ್ಚಾತ್ತಾಪದಿಂದ ಬೆಂದು ಶಾಪವಿಮೋಚನೆಗೊಂಡ ಬಗೆ ಕಾಣಬಹುದು. ಹಾಗೆಯೇ ದ್ರೋಣ–ದ್ರುಪರ ಸನ್ನಿವೇಶವನ್ನು ಜ್ಯೂಲಿಯಸ್–ಸೀಝರ್ ನಾಟಕ ಪ್ರಸಂಗದಲ್ಲಿ ನೋಡಬಹುದು.

ಮೊದಲಿಗೆ ಪ್ರತಿಯೊಬ್ಬರಿಗೂ ಏಳುವ ಪ್ರಶ್ನೆ 18 ಸಂಖ್ಯೆಗೂ, ಮಹಾಭಾರತಕ್ಕೂ ಇರುವ ಸಂಬಂಧವೇನು? ಎಂಬುದು. ಮಹಾಭಾರತದಲ್ಲಿ 18 ಪರ್ವ, 18 ಅಕ್ಷೋಹಿಣಿ ಸೈನ್ಯ, 18 ದಿನಗಳ ಯುದ್ಧ ಹೀಗೆ 18 ಎಂಬ ಸಂಖ್ಯೆಯ ಪ್ರಾಮುಖ್ಯತೆಯ ಬಗ್ಗೆ ಏಳುವ ಪ್ರಶ್ನೆ. ಈ ಪ್ರಶ್ನೆಗೆ ನಮ್ಮ ಜನಪದರು ಮಾರ್ಕಂಡೇಯನ ಕಥೆಯನ್ನು ಬೆಸೆದಿದ್ದಾರೆ. ಶಿವ ಮಾರ್ಕಂಡೇಯನಿಗೆ 18 ವರ್ಷ ಆಯಸ್ಸನ್ನು ಕೊಡುತ್ತಾನೆ. ಆಗ ನಾರದ ಬಂದು ಶಿವನನ್ನು ಆಶ್ರಯಿಸಲು ಹೇಳ್ತಾನೆ. ಈ ಉಪದೇಶ ಕೇಳಿದ ಮಾರ್ಕಂಡೇಯ ಘನಘೋರ ತಪಸ್ಸು ಮಾಡಿ, ಸ್ವತಃ ಯಮ ಪ್ರತ್ಯಕ್ಷವಾಗಿ ಬಂದರೂ ಬಂದರೂ ಈತನನ್ನು ಕರೆದೊಯ್ಯಲು ಕಷ್ಟವಾಗುತ್ತದೆ. ವಿಧಿಯಿಲ್ಲದೆ ಯಮ ಪಾಶವನ್ನು ಮಾರ್ಕಂಡೇಯನ ಮೇಲೆ ಎಸೆದಾಗ ಅದು ಶಿವನನ್ನೂ ಸುತ್ತುತ್ತದೆ. ಈ ಬಿಗಿತದಿಂದ ಕೋಪೋದ್ರೇಕಗೊಂಡ ಶಿವ ರೌದ್ರಾವೇಶದಿಂದ ಪ್ರತ್ಯಕ್ಷನಾಗಿ ಯಮನನ್ನು ಕೊಲ್ಲುತ್ತಾನೆ. 18 ದಿನಗಳಾದರೂ ಶಿವನ ಕೋಪ ಕಡಿಮೆ ಆಗದಿದ್ದಾಗ ದೇವತೆಗಳೆಲ್ಲ ಸೇರಿ, ಸೃಷ್ಟಿ ಆಗುತ್ತಿದೆಯೇ ವಿನಃ ಲಯವಾಗುತ್ತಿಲ್ಲ ಎಂದು ಹೇಳಿ ಶಿವನನ್ನು ಸಮಾಧಾನ ಪಡಿಸಿ, ಯಮನನ್ನು ಬದುಕಿಸುವಂತೆ ಪ್ರಾರ್ಥಿಸುತ್ತಾರೆ. 18 ದಿನಗಳ ಪರ್ಯಂತ ಅಲ್ಲೇ ಇದ್ದ ಯಮನ ಹೆಣ ಜೀವ ಪಡೆಯುತ್ತದೆ. ಎಲ್ಲರಿಗೂ ನಮಸ್ಕರಿಸಿದ ಯಮ ಪ್ರಾಮಾಣಿಕರಿಗೆ ಬೆಲೆ ಇಲ್ಲದ ಈ ಕಾಯಕ ಬೇಡವೆಂದಾಗ, ವಿಷ್ಣು ನಿನ್ನ ಕಾಯಕ ಎಲ್ಲರಿಗಿಂತಾ ದೊಡ್ಡದು. ನಿನ್ನ ಹುದ್ದೆಯನ್ನು ಉಳಿಸಿಕೋ ಎಂದಾಗ, ಯಮ ತನ್ನ ದುಗುಡವನ್ನು ತೋಡಿಕೊಳ್ಳುತ್ತಾನೆ. 18 ದಿನದಿಂದ ಬರೀ ಸೃಷ್ಟಿ ಆಗಿದೆ. ಲಯವಾಗಿಲ್ಲ ಓಟಿ(ಅಧಿಕಾವಧಿ) ಕೆಲಸ ಮಾಡೋದಕ್ಕೆ ಆಗೋದಿಲ್ಲ ಎಂದಾಗ, ಮುಂದೆ 18 ದಿನಗಳ ಕಾಲ ಯುದ್ಧ ನೆಡೆಸಿ ಸಂಹರಿಸುತ್ತೇನೆ ಎಂದು ಹೇಳಿ ಮಹಾಭಾರತದ ಕಥೆಗೆ ನಾಂದಿ ಹಾಡುತ್ತಾನೆ.

ಕಾವ್ಯದ ಮೊದಲಲ್ಲೇ ದಮನಿತ ಪಾತ್ರಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಈಶ್ವರ ಶಂತನು ಆಗಿ ಹುಟ್ಟಿದ ಕಥೆ ಗಂಗೆ–ಶಿವಗಂಗೆ ಪರ್ವದಲ್ಲಿ ಪ್ರಸ್ತಾಪಗೊಂಡಿದೆ'. ಗಂಗೆ ಭೂಮಿಗೆ ಬಂದು ಶಂತನು ಎಂಬ ರಾಜನನ್ನು ಈಶ್ವರನ ಹೆಂಡತಿ ಮದುವೆ ಆಗಬಹುದಾ? ಎಂಬ ಪ್ರಶ್ನೆಗೆ ಉತ್ತರವನ್ನಿಟ್ಟಿದ್ದಾರೆ. ಒಮ್ಮೆ ಸ್ವರ್ಗದಲ್ಲಿ ಲಕ್ಷ್ಮೀ, ಸರಸ್ವತಿ, ಪಾರ್ವತಿ ಮೂವರೂ ಸೇರಿ ನಾವೇ ಶ್ರೇಷ್ಠರೆಂದು ಮಾತನಾಡುತ್ತಿದ್ದಾಗ, ಅಲ್ಲಿಗೆ ಪ್ರವೇಶಿಸಿದ ಗಂಗೆ ಶಕ್ತಿ, ಐಶ್ವರ್ಯ, ವಿದ್ಯೆಗಳಿಗೆಲ್ಲ ಪಾವಿತ್ರ್ಯದ ಅವಶ್ಯಕತೆ ಇದೆ ಇದಿಲ್ಲದಿದ್ದರೆ ಇವ್ಯಾವುವೂ ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸಾಧ್ಯವಿಲ್ಲ ಎಂದು ತನ್ನ ಪಾವಿತ್ರ್ಯವನ್ನು ಎತ್ತಿ ಹಿಡಿಯುತ್ತಾಳೆ. ಇದರಿಂದ ಕೋಪಗೊಂಡ ಮೂವರೂ ಗಂಗೆ ಮಲಿನವಾಗಲೆಂದು ಶಪಿಸುತ್ತಾರೆ. ಆಗ ನಿರ್ಮಲವಾಗಿದ್ದಂತಹ ಗಂಗೆ ಮಲಿನತೆ ಹೊಂದಿ ಬರುತ್ತಿರುವಾಗ ದಾರಿಯಲ್ಲಿ ಶನಿಯ ಮೇಲೆ ಒಂದೆರಡು ಹನಿಗಳು ಬಿದ್ದು, ಭೂಲೋಕದಲ್ಲಿ ಜನಿಸುವಂತೆ ಆತನಿಂದಲೂ ಶಾಪ ಪಡೆದು ಭೂಲೋಕದಲ್ಲಿ ಜನಿಸುತ್ತಾಳೆ. ಇವಳೊಟ್ಟಿಗೆ ಶಿವನೂ ಶಂತನುವಾಗಿ ಹುಟ್ಟುತ್ತಾನೆಂದು ತಿಳಿಸುತ್ತಾರೆ.

ಗಜಗೌರಿ ಪ್ರಸಂಗ – ಗಾಂಧಾರಿ ಮಾಡಿದ್ಲು. ವಿಧವೆಯಾದ ಕುಂತಿಯನ್ನು ಕರಿಲಿಲ್ಲ. ಈ ದುಗುಡವನ್ನು ಧರ್ಮರಾಯನಲ್ಲಿ ತೋಡಿಕೊಂಡಾಗ ಭೀಮನು ನೀನು ಮಾಡು ಎಂದು ತಾಕೀತು ಮಾಡಿದಾಗ, ಕೃಷ್ಣ ಬಂದು ಗಜಗೌರಿ ವ್ರತವನ್ನು ಮಾಡಲು ಹೇಳುತ್ತಾನೆ. ಪಾಂಡುವನ್ನು ಕಳುಹಿಸುವಂತೆ ಯಮನಿಗೆ ಒಂದು ಪತ್ರ ಬರಿ ಎಂದ. ಪಾಂಡು ಮರಳಿ ಬರುತ್ತಾನೆ. ಭೀಮ ಅರ್ಜುನ ಗಜಗೌರಿ ವ್ರತವನ್ನು ಗಾಂಧಾರಿ ಮಣ್ಣಿನ ಆಕಾರವನ್ನು ಮಾಡಿ ಪೂಜಿಸಿದಳು. ನಾವು ಐರಾವತವನ್ನು ಕರೆಸೋಣ, ಹಣ್ಣು–ಹಂಪಲು, ದವಸ–ಧಾನ್ಯ ಇತ್ಯಾದಿಗಳನ್ನು ತರಿಸಿ ವಿಜೃಂಭಣೆಯಿಂದ ಮಾಡೋಣ ಎಂದು ಓಂದು ಪಟ್ಟಿ ಬರೆದು ಇಂದ್ರನಿಗೆ ಕಳುಹಿಸಿದರು. ಇವನ್ನೆಲ್ಲಾ ಕಳಿಸಲು ಸಾಧ್ಯವಿಲ್ಲ ಎಂದಾಗ, ನಾರದ ಮುಂದೆ ಅರ್ಜುನನಿಂದ ನಿನಗೆ ಒಳ್ಳೆಯದಾಗಬೇಕೋ ಬೇಡವೋ ಎಂದು ಹೇಳಿ ಎಲ್ಲವನ್ನು ಕಳುಹಿಸುವಂತೆ ಹೇಳುತ್ತಾನೆ. ವಿಧಿಯಿಲ್ಲದ ದೇವೇಂದ್ರ ಎಲ್ಲವನ್ನು ಕಳುಹಿಸುತ್ತಾನೆ. ಪೂಜೆ ಆಗಿ

ISBN – 978-93-5526-247-9

ವಾಪಸ್ಸಾಗುವ ವೇಳೆಯಲ್ಲಿ ಎಲ್ಲವನ್ನು ಬೆಳೆ ಬೆಳೆಯುವ ಉದ್ದೇಶದಿಂದ ಬಿತ್ತನೆಗೆಂದು ಎತ್ತಿ ಇಟ್ಟುಕೊಳ್ಳುತ್ತಾರೆ. ಧರ್ಮರಾಯನೂ ಎತ್ತಿಟ್ಟುಕೊಳ್ಳುತ್ತಾನೆ. ಪಾಂಡುವನ್ನು ಪಾಂಡವರು ಕಳುಹಿಸಲು ಹಿಂಜರಿದಾಗ ಕೃಷ ಮಾಯಾಜಾಲವನ್ನು ಬೀಸಿ ಪಾಂಡುವನ್ನು ಕಳುಹಿಸುತ್ತಾನೆ. ನಂತರದಲ್ಲಿ ಯೋಚನೆಗೊಳಗಾದ ಕೃಷ್ಣ ಮುಂದೆ ಸ್ವರ್ಗದಿಂದ ಯಾವುದೇ ಕಾರಣಕ್ಕೂ ಮೂಲ ರೂಪದಿಂದ ಯಾವ ವ್ಯಕ್ತಿಯೂ ಬರಬಾರದು ಎಂದು ನಿರ್ಧರಿಸಿ, ಅವರನ್ನು ಕಾಗೆ ರೂಪದಲ್ಲಿ ಬರುವಂತೆ ಮಾಡಿದ. ಇಂದಿಗೂ ಸತ್ತವರಿಗೆ ಇಟ್ಟ ಪಿಂಡವನ್ನು ಕಾಗೆ ತಿಂದರೆ ಮಾತ್ರ ಅವರು ಸ್ವರ್ಗಸ್ಥರಾಗುತ್ತಾರೆ ಅಥವಾ ಮುಕ್ತಿದೊರೆತಂತೆ ಎಂಬ ನಂಬಿಕೆ ಇದೆ.

ಜನಪದ ಮಹಾಭಾರತದಲ್ಲಿ ದ್ರೌಪದಿ ಆದಿಶಕ್ತಿಯ ಪಟ್ಟವಿದೆ. ಭೀಮ ದುರ್ಯೋಧನಾದಿಗಳು ಆಟವಾಡುತ್ತಿದ್ದಾಗ ವಿಷದ ಉಂಡೆ ತಿಂದ ಸಂದರ್ಭ. ವಿಷವನ್ನುಂಡ ಭೀಮ ನಾಗಲೋಕಕ್ಕೆ ಬಂದು ನೆನಪಿನ ಶಕ್ತಿಯನ್ನು ಕಳೆದುಕೊಂಡು ನಾಗರಾಜನ ಮಗಳು ಉರಿಸಿಂಗಿಯನ್ನು ಮದುವೆಯಾಗಿ ಭದ್ರಬಾಹುವಿನ ಜನನಕ್ಕೆ ಕಾರಣನಾಗುತ್ತಾನೆ. ನೆನಪುಗಳು ಮರಳಿ ತನ್ನ ತಮ್ಮಂದಿರನ್ನು ಸೇರಿದ ಹಲವು ವರ್ಷದ ಬಳಿಕ ಉರಿಸಿಂಗಿಗೆ ಕುರುಕ್ಷೇತ್ರ ಯುದ್ಧದ ಬಗ್ಗೆ ತಿಳಿದು ತನ್ನ ಮಗನಿಗೆ ಹೋಗಿ ಸಹಾಯ ಮಾಡುವಂತೆ ಹೇಳುತ್ತಾಳೆ. ಭದ್ರಬಾಹು ಯುದ್ಧಕ್ಕೆ ಹೊರಡುತ್ತಾನೆ. ಈತ ಮೇಲೆ ಬಂದು ಗೋಧೂಳಿ ಸಮಯವನ್ನೂ, ಭೂಮಿಯ ಸೌಂದರ್ಯವನ್ನೂ ಸವಿದು, ತನ್ನ ಕತ್ತಿಯನ್ನು ಸಾಣಿ ಹಿಡಿವ ಸಂದರ್ಭದಲ್ಲಿ ಕೃಷ್ಣ ಬ್ರಾಹ್ಮಣ ವೇಶಧಾರಿಯಾಗಿ ಬಂದು ಈತನ ಹಿನ್ನೆಲೆಯನ್ನು ತಿಳಿದುಕೊಳ್ಳುತ್ತಾನೆ. ವೀರ ವಜ್ರಗಿರಿಯನ್ನು ಕುಟ್ಟುವ ಧೀರತೆಯನ್ನು ಗುರುತಿಸುತ್ತಾನೆ. ತನ್ನೊಟ್ಟಿಗೆ ಕರೆದೊಯ್ಯುತ್ತಾ ಯುದ್ಧರಂಗದ ಹತ್ತಿರಕ್ಕೆ ಬಂದು, ಪಾಂಡವರ ಶತ್ರುಗಳು ರಣಗಂಬವನ್ನು ಕಿತ್ತು ಹಾಕಲು ಪ್ರಯತ್ನಿಸುತ್ತಿದ್ದಾರೆ. ನೀನದನ್ನು ತಬ್ಬಿ ನಿಂತು ಕಾಯಬೇಕೆಂದು ಹೇಳಿ, ತೆರಳಿ, ಪಾಂಡವರ ಸಮೇತ ಬಂದು ನೋಡು ನಿಮ್ಮ ರಣಗಂಬನ್ನು ಯಾರೋ ತಬ್ಬಿ ಹಿಡಿದಿದ್ದಾರೆ ಎಂದು ಭೀಮನಿಗೆ ತೋರಿಸುತ್ತಾನೆ. ಆಗ ಅಪಜಯದ ಭೀತಿಯಿಂದ ಭೀಮ ಈತನ ಬೆನ್ನಿಗೆ ಬೀಸಿ ಹೊಡೆದುಮಾಂಸದ ಮುದ್ದೆಯಾಗಿಸುತ್ತಾನೆ. ಮುಂದೆ ಭದ್ರಬಾಹು ತನ್ನ ಪರಿಚಯವನ್ನು ಹೇಳಿಕೊಂಡಾಗ, ಪಶ್ಚಾತ್ತಾಪಗೊಂಡ ಭೀಮನನ್ನೇ ಬೈದ ಕೃಷ್ಣ ಅವನ ಶಿರಸ್ಸನ್ನು ಕತ್ತರಿಸಿ ಅದನ್ನು ರಣಗಂಬದ ಮೇಲೆ ಇಡುತ್ತಾನೆ. ಈತ ಕುರುಕ್ಷೇತ್ರ ಯುದ್ಧವನ್ನು ಸಂಪೂರ್ಣ ನೋಡುತ್ತಾನೆ. ಮುಂದೆ ಭೀಮಾರ್ಜುನರಿಗೆ ಅಧಿಕಾರದ ಆಸೆ ಉಂಟಾದಾಗ ಭದ್ರಬಾಹುವಿನ ಸಾಕ್ಷಿ ದೊರೆತು ದ್ರೌಪದಿಗೆ ಆದಿಶಕ್ತಿಯ ಪಟ್ಟವನ್ನು ನೀಡುತ್ತಾರೆ.

ಹೀಗೆ ಜನಪದ ಮಹಾಭಾರತದಲ್ಲಿ ದ್ರೌಪದಿ ಆದಿಶಕ್ತಿ, ಅರ್ಜುನ ಜೋಗಿಯಾಗಿದ್ದಾರೆ. ಕುಂತಿ, ಕುಂತಿಭೋಜನಿಗೆ ಹಿಟ್ಟು ಹೊತ್ತೊಯ್ಯುವ ಸಂದರ್ಭ ಕೃಷಿ ಸಂಸ್ಕೃತಿಯ ಪ್ರಗತೀಕವಾಗಿದೆ. ವ್ಯಕ್ತಿನಾಮ ಮತ್ತು ಸ್ಥಳನಾಮಗಳಿಗೆ ಹಲವು ಹಿನ್ನೆಲೆಯ ಕಥೆಗಳಿವೆ. ಕಾಮನ ಭಸ್ಮ ಧರಿಸಿದ ಭೀಷ್ಮ, ಕರುಣದಿಂದ ಬದುಕಿದ ಕರ್ಣ, ಎಂದೂ ಬಾಡದ ಕುಸುಮಮಾಲೆ ಹೊಂದಿದವಳು ಕುಸುಮಾಲೆ, ಧರ್ಮರಾಯ ತಂಗಿದ್ದ ಸ್ಥಳ ಧರ್ಮಸ್ಥಳ, ಶಕುನಿ ಬಿದ್ದ ಜಾಗ ಶಕುನಿ ಕೊಪ್ಪಲು, ಪಾಂಡವರು ತಂಗಿದ್ದ ಊರು ಪಾಂಡವಪುರ ಹೀಗೆ ವ್ಯಕ್ತಿನಾಮ ಮತ್ತು ಸ್ಥಳನಾಮಗಳ ಹಿನ್ನೆಲೆಯನ್ನು ಜನಪದ ಮಹಾಭಾರತದಲ್ಲಿ ನೋಡಬಹುದು.

ತಪ್ಪು ಮಾಡಿದ ಯಾವುದೇ ಪಾತ್ರ ಅದಕ್ಕೆ ತಕ್ಕ ಶಾಸ್ತಿ ಅನುಭವಿಸಲು ಹಿಂದೇಟು ಹಾಕುವುದಿಲ್ಲ. ಉದಾ:– ಮೋಹಿನಿ ದುರ್ಗಂಧಾದೇವಿಯಾಗಿ ಜನಿಸುವುದು, ಓತಿ ಭೀಷರಿಗೆ ಶಾಪ ಕೊಡುವುದು, ಪಾಂಡುರಾಜನ ಶಾಪ ಇವು ತಪ್ಪು ಮಾಡಿದವರೆಲ್ಲರೂ ಶಿಕ್ಷೆ ಅನುಭವಿಸಬೇಕು ಎಂಬುದನ್ನು ತಿಳಿಸುವುದರ ಜೊತೆಗೆ, ಜನಪದರ ನ್ಯಾಯ ವಿಚಕ್ಷಣತೆಗೆ ಸಾಕ್ಷಿಯಾಗಿದೆ. ಜನಪದ ಮಹಾಭಾರತದ ಒಳಗೆ ನಮ್ಮಂತಹ ಪಾತ್ರಗಳನ್ನು ಕಾಣುವುದು ಮತ್ತೊಂದು ವಿಶೇಷ. ಉದಾ:– ಪಾಂಡವರಿಗಾಗಿ ಅರಮನೆ ಕಟ್ಟುವ ಸಿದ್ಧಪ್ಪಾಚಾರಿ, ಕರ್ಣನ ಸಾಕುತಂದೆ ಅಂಬಿಗರ ಚೌಡಯ್ಯ, ಭೀಮಣ್ಣನಿಗೆ ಭೂಮಿ ಕೆಲಸ ಕೊಡುವ ಮುದ್ದೇಗೌಡ, ಅಲ್ಲದೆ ಬೋರೇಗೌಡ, ಈರೇಗೌಡ ಈ ಪಾತ್ರಗಳು ಕಾವ್ಯದ ಒಳಗೆ ಆಪ್ತತೆಯ ಸಂಬಂಧವನ್ನು ತಂದುಕೊಡುತ್ತದೆ.

ಜನಪದರು ಯಾವುದೇ ಪಾತ್ರದ ಪರ ಓಲುತ್ತಿರಲಿಲ್ಲ. ಉದಾ:– ಶ್ರೀ ಕೃಷ್ಣ ವಿಷ್ಣುವಿನ ಅವತಾರ ಅಥವಾ, ದೈವ, ದೈವಾಂಶ ಸಂಭೂತ ಎಂಬಂತಹ ನೆಲೆಗಟ್ಟಿನಲ್ಲಿ ಶಿಷ್ಟ ಸಾಹಿತ್ಯಗಳ ಮಹಾಭಾರತದಲ್ಲಿ ಕಾಣುತ್ತೇವೆ. ಇಲ್ಲಿ ಸಾಮಾನ್ಯ ವ್ಯಕ್ತಿಯಂತೆ ತನ್ನ ಅಸ್ತಿತ್ವ ಮೆರೆಯಲು ಯತ್ನಿಸಿ, ಯಶಸ್ವಿಗಳಿಸಿಕೊಡುವ ಒಬ್ಬ ವ್ಯಕ್ತಿ. ಶಿಷ್ಟ ಕಾವ್ಯಗಳ

ISBN – 978-93-5526-247-9

ಭಾವನೆಗಳು ಇಲ್ಲಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಜನಪದ ಮಹಾಭಾರತವು ಯಾವ ಪಾತ್ರದ ಪರವೂ ಇಲ್ಲ, ಎಲ್ಲಾ ಪಾತ್ರಗಳೂ ಮುಖ್ಯವೇ ಎಂಬ ಮನೋಭಾವವನ್ನು ಮೂಡಿಸುತ್ತದೆ. ಮನೆಯ ಜಂತೆಯನ್ನು ಬ್ರಾಹ್ಮಣನ ಹೆಣ ಸುಡಲು ಕೊಡುವ ಕರ್ಣ ತ್ಯಾಗದ ಪ್ರತಿರೂಪವಾಗುತ್ತಾನೆ. ಕುಬೇರನ ಧ್ಯಾನ ಪ್ರಧಾನ ನಿಲುವಿನ ಪ್ರಸಂಗ ಅನ್ನದ ಮಹತ್ವವನ್ನು ಸಾರುತ್ತದೆ. ಅರ್ಜುನ ಬೇರೆ ಅಲ್ಲ, ಅಲ್ಲಾಹು ಬೇರೆ ಅಲ್ಲ ಎಂಬಲ್ಲಿ ಕೋಮು ಸೌಹಾರ್ದತೆಯನ್ನು ಕಾಣಬಹುದು.

ಮನುಷ್ಯ ಪ್ರಕೃತಿಯನ್ನು ನಾಶ ಮಾಡಿದರೆ, ಪ್ರಕೃತಿ ಮನುಷ್ಯನ ನಾಶಕ್ಕೆ ಮುಂದಾಗುತ್ತದೆ ಎಂಬ ತತ್ವವನ್ನು ಜನಪದರು ನಂಬಿದ್ದರು. ಮನುಷ್ಯ ಬುದ್ಧಿಜೀವಿಯಾದರೂ ಪ್ರಕೃತಿಯ ಇತರ ಜೀವಿಗಳಂತೆ ಈತನೂ ಒಬ್ಬ ಪ್ರಾಣಿ. ಅಭಿವೃದ್ಧಿ ಹೊಂದಿದಂತೆ ಪ್ರಕೃತಿಯ ವಿನಾಶವನ್ನೇ ಬಯಸುವಂತೆ ಜೀವಿಸುತ್ತಿರುವುದು ದುರಂತವೇ ಸರಿ. ಪ್ರಕೃತಿಯನ್ನು ನಾಶಮಾಡಿದರೆ ಅದು ಮನುಷ್ಯನ ಸರ್ವನಾಶಕ್ಕೆ ಎಡಿಮಾಡಿಕೊಟ್ಟಂತೆ ಎಂಬುದನ್ನ ನಾವು ಜನಪದ ಮಹಾಭಾರತದಿಂದ ತಿಳಿಯಬಹುದು. ನಾಯಿಯನ್ನು ಪುಷ್ಪಕ ವಿಮಾನದಲ್ಲಿ ಕೊಂಡೊಯ್ಯುವ ಧರ್ಮರಾಯನಲ್ಲಿ ಭೂತಾನುಕಂಪದ ಗುಣವನ್ನು ಕಾಣಬಹುದು. ಕೊನೆಗೆ ಸ್ವರ್ಗದಲ್ಲಿ ಎಲ್ಲರು ಒಂದಾದರು – ಎಂಬಲ್ಲಿಗೆ ಈ ಕಥೆ ಮುಕ್ತಾಯವಾಗುತ್ತದೆ. ಒಟ್ಟಾರೆ, ಇಲ್ಲಿ ಪ್ರಯೋಗವಾಗಿರುವ ಕಾವ್ಯಾತ್ಮಕ ಆಡುನುಡಿ, ಬೇರೆ ಜನಪದ ಕಾವ್ಯದ ಭಾಷೆಗಿಂತ ಹೊಸದಾಗಿ, ಸೊಗಸಾಗಿದೆ.

ಜನಪದ ಮಹಾಭಾರತದ ಮತ್ತೊಂದು ವೈಶಿಷ್ಟ್ಯವೆಂದರೆ, ವ್ಯಾಸಭಾರತದಲ್ಲಿಲ್ಲದ ಸುವರ್ಣಕೇಶಿ, ತಾಮ್ರಕೇಶಿ, ಶಂಬರಾಸುರ, ಡಂಬಕಾಸುರ ಕಥೆಗಳನ್ನು ಇಲ್ಲಿ ಕಾಣಬಹುದು. ಸರಳ ಮಾನವೀಯತೆಯಿಂದ ಯುದ್ಧದ ನಿರಾಕರಣೆಯನ್ನು ಸ್ಪಷ್ಟವಾಗಿ ಕಾಣಬಹುದು. ಇಂತಹ ಜನಪದ ಮಹಾಭಾರತ ಅಗಾಧವಾದ ಪರ್ವಗಳಿಂದ ಮತ್ತು ಪಾತ್ರಗಳಿಂದ ರಚನೆಯಾಗಿರುವಂತಹ ಇದು ಏಕೈಕ ವ್ಯಕ್ತಿಯಿಂದ ಹಾಡಲ್ಪಟ್ಟಿದೆ ಅಂದರೆ ಅದು ಅಚ್ಚರಿಯೇ ಸರಿ. ಈ ಹಿನ್ನೆಲೆಯಲ್ಲಿ ಅಭಿನವ ವ್ಯಾಸ ಸಿದ್ಧಶೆಟ್ಟಿಗೌಡ, ಅಭಿನವ ಗಣಪ ರಾಜಶೇಖರನಿಗೆ ಉಘೇ ಉಘೇ – ಎಂಬ ಹಂಪನಾಗರಾಜಯ್ಯನವರ ಮಾತು ಅತಿಶಯೋಕ್ತಿಯಲ್ಲ. ಡಾ. ಪಿ.ಕೆ. ರಾಜಶೇಖರ ಅವರ ಮಹಾಭಾರತ ಕ್ಷೇತ್ರ ಕಾರ್ಯದ ಕೆಲಸ ಮಹಾಘನ ಎಂದೇ ಹೇಳಬಹುದು.

ಜನಪದ ಮಹಾಭಾರತ ಅತ್ಯದ್ಭುತ ಕಥಾವಸ್ತುವನ್ನು ಒಳಗೊಂಡಿದ್ದು, ಅದ್ಭುತವಾದ ನಿರೂಪಣೆಯನ್ನು ಒಳಗೊಂಡಿದೆ. ಡಾ. ಪಿ.ಕೆ. ರಾಜಶೇಖರ ಅವರು ಈ ಕೃತಿಯನ್ನು ಸಂಗ್ರಹಿಸದೇ ಇದ್ದಲ್ಲಿ, ಕನ್ನಡ ಸಾಹಿತ್ಯಕ್ಕೆ ಅಪಾರವಾದ ನಷ್ಟ ಸಂಭವಿಸುತ್ತಿತ್ತು. ಅದಕ್ಕಾಗಿಯೇ ಎನ್.ಎಸ್. ತಾರಾನಾಥರು 'ಜಾನಪದ ಕ್ಷೇತ್ರದ ಒಂಟಿಸಲಗ ರಾಜಶೇಖರ' ಎಂದಿರುವುದು ಈ ಮಹಾಕಾವ್ಯದ ಮಹತ್ವವನ್ನು ತಿಳಿಸುತ್ತದೆ. ಋಷಿಕವಿ, ಜಾನಪದ ಪ್ರತಿಭೆಗಳು ಎರಡೂ ಹಾಲುಜೇನಿನಂತೆ ಬೆರೆತಾಗ ಭುವನಕ್ಕೆ ದೊರೆಯಬಹುದಾದ ಭಾಗ್ಯವೊಂದರ ಪ್ರತೀಕ ಈ ಜನಪದ ಮಹಾಭಾರತ ಎನ್ನಬಹುದು.

ಶಿವರಾಮ ಕಾಡನಕುಪ್ಪೆ ಅವರು ಹೇಳುವಂತೆ, ಈ ಜನಪದ ಮಹಾಕಾವ್ಯದಲ್ಲಿ ಮುಖ್ಯವಾಗಿ ಎರಡು ಜೀವನ ಪ್ರವಾಹಗಳಿವೆ. ಒಂದು ಮೂಲ ಭಾರತದ ಕಥಾವಸ್ತುವನ್ನು ನಿಷ್ಠೆಯಿಂದ ಗೌರವಿಸಿ, ಅದನ್ನು ಅನುಸರಿಸಿರುವುದು. ಇದು ವ್ಯವಸ್ಥೆಯ ಮುಖ್ಯವಾಹಿನಿಗೆ ತಲೆತಗ್ಗಿ, ಬಗ್ಗಿ ನಡೆಯುವ ಜೀವನ ಧೋರಣೆ. ಆದರೆ ಇದು ಕಾವ್ಯದ ಹೊರ ರಚನೆ ಮತ್ತು ಕವಚ. ಎರಡನೆಯದು ಮೂಲ ಕಥಾವಸ್ತುವಿಗೆ ಕಾವ್ಯದುದ್ದಕ್ಕೂ ಜನಪದ ತುಡಿಯುವ ಸಾಮಾನ್ಯ ಬದುಕು ಸಮಾನಾಂತರವಾಗಿ ಪ್ರತಿಕ್ರಿಯಿಸುವ ರೀತಿ ಪುರಾಣ ಪಾತ್ರಗಳಿಗೆ, ಘಟನೆಗಳಿಗೆ ವರ್ತನೆಗಳಿಗೆ ವರ್ತಮಾನದಲ್ಲಿ ನಿಂತು ವ್ಯಾಖ್ಯಾನಿಸಿರುವ ರೀತಿ, ಬದುಕಿನ ಮನೋಧರ್ಮ ಕಾರ್ಯಕಾರಣ ಸಂಬಂಧಗಳನ್ನು ಹೇಳಬಹುದಾಗಿದೆ ಎಂದಿದ್ದಾರೆ. ಆದುದರಿಂದ ಶಿಷ್ಟ ಮತ್ತು ಜನಪದ ಮಹಾಭಾರತಗಳ ತೌಲನಿಕ ಅಧ್ಯಯನಗಳು ಭಿನ್ನ ನೆಲೆಯಲ್ಲಿ ಹೊರಬಂದರೆ ಇನ್ನು ಅನೇಕ ಖಚಿತತೆಗಳು ದೊರಕಬುದಾಗಿದೆ ಎಂದೆನಿಸುತ್ತದೆ.

**ಕೊನೆ ಟಿಪ್ಪಣಿ :**

1. ಜನಪದ ಮಹಾಭಾರತ : ಡಾ. ಪಿ.ಕೆ. ರಾಜಶೇಖರ.
2. ಜಾನಪದ ಕೈಪಿಡಿ : ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು.
3. ಜಾನಪದ ಪ್ರಕಾರಗಳು : ಡಾ. ರಾಗೌ.

***

ISBN – 978-93-5526-247-9

# 28. ಶಿಷ್ಟ ದೈವಗಳನ್ನು ಸೋಲಿಸುವ ಜನಪದ ಮಹಾಕಾವ್ಯಗಳ ನಾಯಕರು

ಸೈಯದ್ ಮುಯಿನ್

ಜನಪದ ಸಾಹಿತ್ಯವು ನೆಲಮೂಲ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಮಾನವನ ಆರಂಭಿಕ ಇತಿಹಾಸದೊಂದಿಗೆ ಹುಟ್ಟಿಕೊಂಡ ಆದಿಮ ಸಾಹಿತ್ಯ ಇದಾಗಿದ್ದು. ಶಿಷ್ಟ ಪರಂಪರೆಗಿಂತ ಪ್ರಾಚೀನವಾದ ಅರ್ವಾಚೀನ ಪರಂಪರೆಯಿದಾಗಿದೆ. ಪ್ರಪಂಚದ ಮೂಲೆ ಮೂಲೆಯಲ್ಲೂ ಇಂತಹ ಆದಿಮ ಸಂಸ್ಕೃತಿಯ, ಜನಪದ ಕಥನಕಾವ್ಯಗಳ ನಾಯಕರ ಸಾಹಸದ ಯಶೋಗಾಥೆಯ ಗುರುತುಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಜನಪದ ದೈವಗಳು ಮಾನವನಷ್ಟೇ ಪ್ರಾಚೀನವಾದವು. ಭಾರತದಲ್ಲಿ ಕ್ರಿ.ಶ.ಪೂರ್ವ 7ನೇ ಕ್ಕಿಂತ ಪೂರ್ವದಲ್ಲಿ ಜನಪದ ದೈವಗಳ ಅಸ್ತಿತ್ವದ ಕುರುಹು ಸಿಗುತ್ತದೆ. ವಿಧ್ವಂಸಕವಾಗಿ ಬೆಳೆಯುತ್ತಿದ್ದ ಸಂಸ್ಕೃತಿಯ ವಿರುದ್ಧವಾಗಿ ಸ್ಥಳೀಯವಾಗಿ ಪ್ರತಿರೋಧ ಒಡ್ಡಲು ಹುಟ್ಟಿಕೊಂಡ ಕಥನ ಪರಂಪರೆಯು ತನ್ನ ಅಸ್ತಿತ್ವದ ಉಳಿವಿಗಾಗಿ ನಡೆಸಿದ ಹೋರಾಟವೆಂದರೆ ತಪ್ಪಾಗಲಾರದು.

ಅಂಬಳಿಕೆ ಹಿರಿಯಣ್ಣಯ್ಯ ಅವರು ಜನಪದ ಮಹಾಕಾವ್ಯದ ಲಕ್ಷಣಗಳನ್ನು ಗುರುತಿಸುತ್ತಾ ಹೀಗೆ ಹೇಳುತ್ತ ಜನಪದ ನಾಯಕರ ಲಕ್ಷಣಗಳನ್ನು ಹೀಗೆ ದಾಖಲಿಸಿದ್ದಾರೆ –"ದುರ್ಬಲರು ಉತ್ತಮರಾಗುವ ಸಾಧ್ಯತೆ ಇರುತ್ತದೆ. ಕಿರಿಯ ಸೋದರ ಅಥವಾ ಸೋದರಿ ಸಾಮಾನ್ಯವಾಗಿ ಜಯ ಸಾಧಿಸುವರು."

ಮಲೆಮಾದೇಶ್ವರನ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ, ಮೈಲಾರಲಿಂಗನ ಕಾವ್ಯ ಜನಪದ ಮಹಾಕಾವ್ಯಗಳ ನಾಯಕರು ತಮ್ಮ ವಿರೋಧಿಗಳನ್ನು ಸೋಲಿಸುವುದಷ್ಟೇ ಅಲ್ಲ, ಕುಲ ಸಂಘರ್ಷದಿಂದಾಗಿ ತಮ್ಮ ಚಾಣಾಕ್ಷತನದಿಂದ, ಮಾನವನ ಸಹಜ ಗುಣಗಳೊಂದಿಗೆ ವಿರೋಧಿ ಕುಲದ ದೈವವನ್ನು ಸೋಲಿಸಿ ತಾವು ದೈವದ ಪಟ್ಟಕ್ಕೇರುವುದು ಸಾಮಾನ್ಯ ಸಂಗತಿಯಾಗಿ ಚಿತ್ರಿಸಲ್ಪಟ್ಟಿದೆ.

ಈ ಮಹಾಕಾವ್ಯಗಳ ನಾಯಕರು ಸಾಂಸ್ಕೃತಿಕ ವೀರರಾಗಿದ್ದು ಸೀಮಿತ ಪ್ರದೇಶದ ಅಥವಾ ಸಮಾಜಕ್ಕೆ ಸಂಬಂಧಿಸಿದವರಾಗಿರುತ್ತಾರೆ. ಈ ವೀರರಿಗೆ ಸಂಬಂಧಿಸಿದ ಮಾಹಿತಿಗಳು, ಐತಿಹ್ಯಗಳು ಸ್ಥಳೀಯವಾಗಿ ಲಭ್ಯವಿದೆ. ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಸುತ್ತಮುತ್ತಲ ಪ್ರದೇಶಗಳಲ್ಲಿ ಮಲೆಮಾದೇಶ್ವರ, ಮಂಟೇಸ್ವಾಮಿ ಜನಪ್ರಿಯರಾಗಿದ್ದರೆ, ಬೆಳಗಾವಿ, ಬಳ್ಳಾರಿ ಮತ್ತು ಕಲ್ಬುರ್ಗಿಯಲ್ಲಿ ಮೈಲಾರಲಿಂಗ, ಧಾರವಾಡ, ಬೆಳಗಾವಿ ಮತ್ತು ವಿಜಯಪುರದಲ್ಲಿ ಏಳುಕೊಳ್ಳದ ಎಲ್ಲಮ್ಮ ಪ್ರಸಿದ್ಧರಾಗಿದ್ದು, ಈ ಎಲ್ಲಾ ಜನಪದ ದೈವಗಳಿಗೆ ಪ್ರಾದೇಶಿಕ ಮಿತಿಗೆ ಒಳಗೊಂಡಿರುವುದನ್ನು ಗುರುತಿಸಬಹುದು. ಆದ್ದರಿಂದ ಆಯಾ ಸಾಂಸ್ಕೃತಿಕ ನಾಯಕರ ವೀರರ ಕಥೆಗಳು ಆಯಾ ಪ್ರದೇಶಕ್ಕಷ್ಟೇ ಸೀಮಿತ. ಈ ಎಲ್ಲಾ ಕಥನಕಾವ್ಯಗಳ ನಾಯಕರುಗಳಿಗೆ ಆಯಾ ಕ್ಷೇತ್ರದ ಜನರು ಒಕ್ಕಲುಗಳಿದ್ದು ಅವರ ಬಗೆಗೆ ಶ್ರದ್ಧೆ, ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಜನಪದ ಮಹಾಕಾವ್ಯಗಳ ನಾಯಕರು ಧೀರೋದಾತ್ತರಾಗಿರುತ್ತಾರೆ. ನಾಯಕನಿಗೆ ಪ್ರತಿ ನಾಯಕನಿದ್ದು, ಇವರೀರ್ವರ ಶಕ್ತಿಗಳ ನಡುವಣ ಸಂಘರ್ಷದಲ್ಲಿ ಅತಿಮಾನುಷ ಶಕ್ತಿಗಿಂತ ಹೆಚ್ಚಾಗಿ ಮಾನವೀಯ ಗುಣಗಳೇ ಮೇಲುಗೈ ಸಾಧಿಸುತ್ತವೆ. ನಾಯಕನು ತನ್ನ ಘನತೆಯನ್ನು ಕಾಪಾಡಲು ಯಾವುದೇ ರೀತಿಯ ಸವಾಲನ್ನು ಎದುರಿಸಲು ಸಿದ್ಧನಿದ್ದು, ಮಾನುಷ ಮತ್ತು ಅತಿಮಾನುಷ ಶಕ್ತಿಗಳ ಮುಖಾಮುಖಿಯಾಗುತ್ತದೆ. ಕಾವ್ಯದ ಉದ್ದಕ್ಕೂ ದೈವಿಕ ಮತ್ತು ಮಾನುಷ ಶಕ್ತಿಗಳು ನಾಯಕನ ಜೀವನವನ್ನು ನಿಯಂತ್ರಿಸುತ್ತಿರುತ್ತವೆ. ಕೆಲವೊಂದು ಸನ್ನಿವೇಶಗಳಲ್ಲಿ ಶಿಷ್ಟ ದೈವಗಳು ತಮ್ಮ ಅಮರತೆ ಮತ್ತು ಅಸಾಧಾರಣತೆಯನ್ನು ಮರೆತು ಮನುಷ್ಯರಾಗಿಯೇ ತೋರಿಬರುತ್ತಾರೆ. ಮಾನವನಲ್ಲಿರುವ ಎಲ್ಲಾ ಸಹಜಗುಣಗಳು ಮಹಾಕಾವ್ಯಗಳ ನಾಯಕರಲ್ಲಿ ಗುರುತಿಸಬಹುದು. ಲೈಂಗಿಕತೆ, ಕಾಮನೆ, ಆಸೆ–ಆಮಿಷಗಳು, ಮೋಸ, ಛಲ, ವಂಚನೆಯು ಸಾಮಾನ್ಯ ಗುಣಗಳಾಗಿ ವಿಜೃಂಭಿಸುತ್ತವೆ. ಈ ಗುಣಗಳಿಂದಾಗಿಯೇ ಜನಪದ ನಾಯಕನು ಶ್ರೀಸಾಮಾನ್ಯ ಜನರಲ್ಲಿ ಆಕರ್ಷಣೀಯ ವ್ಯಕ್ತಿತ್ವವನ್ನು ಹೊಂದಿರುತ್ತಾನೆ.

ISBN – 978-93-5526-247-9

ಕಥನಕಾವ್ಯಗಳ ನಾಯಕನ ಸುತ್ತ ಪ್ರತಿನಾಯಕರಿದ್ದು, ತನ್ನ ಜೀವನದುದ್ದಕ್ಕೂ ಆತ ಈ ಪ್ರತಿನಾಯಕರಿಗೆ ನಿರಂತರವಾಗಿ ಸೋಲಿಸುತ್ತ ತನಗೆ ಶರಣಾಗುವಂತೆ ಮಾಡುತ್ತಾನೆ. ಈ ರೀತಿಯ ಮಹಿಮೆಯ ಪ್ರದರ್ಶನಕ್ಕೆ ಕಾರಣ ಶಿಷ್ಯವೃಂದವನ್ನು ಆಕರ್ಷಿಸುವುದು ಒಂದಾದರೆ ದುಷ್ಟ ಶಿಕ್ಷೆ-ಶಿಷ್ಟ ರಕ್ಷಣೆಯೇ ಆಗಿರುತ್ತದೆ.

ಸಾಮಾನ್ಯವಾಗಿ ಶಿಷ್ಟ ದೈವವನ್ನು ಸೋಲಿಸಿದ ಕಥೆಯ ವೀರರು ಸ್ಥಳೀಯ ದೇವಾಲಯಗಳಲ್ಲಿ ಆರಾಧಿಸಲ್ಪಡುತ್ತಾರೆ. ಜನಪದ ನಾಯಕನು ಅಧಿದೈವದ ದಳಪತಿ, ಶಿಷ್ಟ ಹಿಂಬಾಲಕನ ಸ್ಥಾನದಲ್ಲಿ ಪ್ರತಿಷ್ಠಾಪಿಸಲ್ಪಡುತ್ತಾನೆ. ಇದು ಕಾಲಾಂತರದಲ್ಲಿ ನಡೆಯುವ ಕ್ರಿಯೆಯಾಗಿದ್ದು, ಸಂಸ್ಕೃತಿಯೊಂದನ್ನು ವಿರೋಧಿಸಲು ಹುಟ್ಟಿಕೊಂಡ ಪ್ರತಿಸಂಸ್ಕೃತಿಯು ಪ್ರಧಾನ ಸಂಸ್ಕೃತಿಯಲ್ಲಿ ಲೀನವಾಗುವುದನ್ನು ಇಂತಹ ಕ್ರಿಯೆಗಳ ಮೂಲಕ ಗುರುತಿಸಬಹುದು.

ಜನಪದ ಕಥನಗಳಲ್ಲಿ ನಿರೂಪಿತವಾಗಿರುವ ನಾಯಕರು ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ವೀರರು ಶಿಷ್ಟದೇವತೆಗಳ ವಿರುದ್ಧ ಹೋರಾಡಿ, ಜಯಗೊಳಿಸುವುದನ್ನು ಕಾಣಬಹುದು. ಉದಾಹರಣೆಗೆ ಆದಿಚುಂಚನಗಿರಿಯ ಭೈರವನು ತಿರುಪತಿ ತಿಮ್ಮಪ್ಪನ ತೇರನ್ನು ಕದ್ದು ತನಗಾಗಿ ಉಪಯೋಗಿಸಿಕೊಳ್ಳುವುದು, ಜುಂಜಪ್ಪನ ಕಾವ್ಯ ಮತ್ತು ಮೈಲಾರಲಿಂಗನ ಕಾವ್ಯದಲ್ಲೂ ಇಂತಹ ಘಟನೆಗಳನ್ನು ಗಮನಿಸಬಹುದು. ಶಿಷ್ಟ ದೈವಗಳ ಸೋಲು ವರ್ಗಶ್ರೇಣಿಯ ಕೆಳಹಂತದ ನಾಯಕನ ಜಯವು ಪ್ರಧಾನ ಸಂಸ್ಕೃತಿಗೆ ಒಡ್ಡಿದ ಸವಾಲಲ್ಲದೆ ಮತ್ತೇನು. ದ್ರಾವಿಡರ ಆದಿದೈವನಾದ ಶಿವನು ನಾನಾ ರೂಪಗಳಲ್ಲಿ ಜನಪದ ಕಥನಗಳ ನಾಯಕನಾಗಿ ಸಂಭವಿಸಿ ಪ್ರಧಾನ ಸಂಸ್ಕೃತಿಯ ದೈವವನ್ನು ಅಥವಾ ವಿಷ್ಣುವನ್ನು ಸೋಲಿಸುವುದು ಜನಪದ ಮಹಾಕಾವ್ಯಗಳಲ್ಲಿ ಪ್ರಧಾನವಾಗಿ ಕಂಡುಬರುತ್ತದೆ.

ಜನಪದ ದೈವಗಳ ಪ್ರಮುಖ ಲಕ್ಷಣ ಏಕತೆಯಲ್ಲಿ ಅನಂತತೆಯನ್ನು ಕಂಡುಕೊಳ್ಳುವುದು. ವಿಸ್ತೃತವಾಗಿ ಹೇಳುವುದಾದರೆ ಪ್ರಧಾನ ಸಂಸ್ಕೃತಿಯ ಮೂಲಕ ಅನೇಕ ಉಪಸಂಸ್ಕೃತಿಗಳನ್ನು ಹೊಂದುವ ರೂಪದ್ದಾಗಿದೆ. ಎಲ್ಲವೂ ಒಂದೇ ಎನ್ನುವ ಕೃತ್ರಿಮ ಸಂಸ್ಕೃತಿಗೆ ಭಿನ್ನವಾಗಿ ಒಂದರಲ್ಲಿಯೇ ಅನೇಕ ಉಪಸಂಸ್ಕೃತಿಯನ್ನು ಕಾಣುವ ನೈಜ ಸಂಸ್ಕೃತಿ ಇದಾಗಿದೆ. ಜನಪದ ದೈವಗಳ ವಿಶಿಷ್ಟ ಲಕ್ಷಣ ಅವುಗಳ ಸಾಂಸ್ಕೃತಿಕ ಸಂಘರ್ಷವೂ ಒಂದಾಗಿದೆ. ಸಾಂಪ್ರದಾಯಿಕವಾಗಿರುವಂತಹ ನಂಬಿಕೆ, ಪ್ರಶ್ನಾತ್ಮಕವಾದ ಪಾವಿತ್ರ್ಯದ ನಾಶ ಪಡಿಸುವಂತಹುದು, ಆಚರಣೆ ಮತ್ತು ಮೌಲ್ಯಗಳನ್ನು ಪ್ರಶ್ನಿಸುವ ಮೂಲಕ ಸಿದ್ಧ ಮಾದರಿಯನ್ನು ಒಡೆಯುವ ಕೆಲಸವು ಜನಪದ ದೈವಗಳ ಸಂಘರ್ಷದಲ್ಲಿ ಉಕ್ತವಾಗಿದೆ. ಕಷ್ಟಗಳನ್ನು ಎದುರಿಸುತ್ತ ಸಮಸ್ಯೆಗಳನ್ನು ಬಿಡಿಸಿಕೊಳ್ಳುತ್ತ ಬದುಕಲು ಜನಪದ ಸಂಸ್ಕೃತಿ ಬಯಸಿದರೆ, ಕಷ್ಟಗಳನ್ನೊಡ್ಡುತ್ತ ಸಮಸ್ಯೆಗಳನ್ನು ಸೃಷ್ಟಿಸುತ್ತ, ಮೆರೆಯುವ ಶಿಷ್ಟ ಸಂಸ್ಕೃತಿ ನಿರ್ಭಿಡತೆಯನ್ನು ಗುರುತಿಸಬಹುದು.

ದೇವರು-ದೇವರುಗಳನ್ನು ಮೋಸಮಾಡುವ ಪ್ರಸಂಗಗಳು ಕೆಲವು ಜಾನಪದ ಮಹಾಕಾವ್ಯಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ-ಭೈರವ-ನಾಗಮಂಗಲ ತಾಲ್ಲೂಕಿನ ಪ್ರಸಿದ್ಧ ಶೈವಕ್ಷೇತ್ರ ಆದಿಚುಂಚನಗಿರಿಯ ಅಧಿದೈವ. ಚುಂಚನಗಿರಿಯ ತೇರನ್ನು ಭೈರವ ತಿರುಪತಿಯಿಂದ ಕದ್ದು ತಂದ ಎಂಬ ಐತಿಹ್ಯದ ಮೇಲೆ ಕತೆ ಬೆಳೆದಿದೆ. ತೇರನ್ನು ತರಲು ಮಾಳಮ್ಮ(ಭೈರವನ ಉಪಪತ್ನಿ) ನೆರವಾದಳು. ತನ್ನ ಕಡೆಯವರನ್ನು ಕಳಿಸಿ ಆದಷ್ಟು ಬೇಗ ತೇರನ್ನು ಹರಿಯುವಂತೆ ಮಾಡಿದಳು. ತೇರು ಹರಿದ ಮೇಲೆ ಭೈರವನ ಸ್ವಾಮ್ಯ ಸ್ಥಾಪಿತವಾದಂತೆ ತೋರುತ್ತದೆ. ಚುಂಚನಗಿರಿಯ ತೇರು ಕೋಳಿ ಕೂಗುವ ಹೊತ್ತಿನಲ್ಲಿ ಹರಿಯುತ್ತದೆ. ಅದಕ್ಕೆ ಕಾರಣ ತಿರುಪತಿ ತಿಮ್ಮಪ್ಪ ನೋಡದಿರಲಿ ಎಂಬ ಸಬೂಬನ್ನು ನೀಡಲಾಗುತ್ತದೆ.

ವರ್ಣವ್ಯವಸ್ಥೆಯಲ್ಲಿದ್ದ ಕೆಳಸ್ತರದ ಸಮುದಾಯದವರು ಮೇಲ್ವರ್ಗದವರ ವಿರುದ್ಧ ತಮ್ಮ ಆಕ್ರೋಶವನ್ನು ಪ್ರತಿಭಟಿಸುತ್ತಲೇ, ಇವರ ಪ್ರತಿಭಟನಾ ನೆಲೆಯು ದೈವೀ ನೆಲೆಯತ್ತಲೂ ಸಾಗುತ್ತದೆ. ಸಾಮಾಜಿಕವಾಗಿ ಕೆಳಹಂತದಲ್ಲಿರುವ ವೀರರು ಜನಪ್ರಿಯ ಶಿಷ್ಟ ದೈವಗಳ ವಿರುದ್ಧ ಹೋರಾಡಿ ಅನಾಯಾಸವಾಗಿ ಗೆಲುವನ್ನು ಸಾಧಿಸುವಂತಹ ಕಥನಗಳು ಇಂದಿಗೂ ಪ್ರಸ್ತುತವಾಗಿರುವುದನ್ನು ಕಾಣಬಹುದು. ಶಿಷ್ಟ ದೈವ ಜನಪದ ದೈವ ಇವುಗಳ ನಡುವೆ ವ್ಯತ್ಯಾಸ ಗುರುತಿಸುವುದು ಎಷ್ಟು ಸುಲಭವೋ, ಇವರುಗಳನ್ನು ವ್ಯಾಖ್ಯಾನಿಸುವುದು ಅಷ್ಟೇ ಕಷ್ಟವಾಗುತ್ತದೆ. ಕಾಲಾಂತರದಲ್ಲಿ ಜನಪದ ದೈವ/ನಾಯಕನು ಶಿಷ್ಟ ದೈವವಾಗಿ ಮಾರ್ಪಡಾಗಿರುವುದನ್ನು ಸಂಶೋಧನೆಗಳ ಮೂಲಕ

ಅರಿತುಕೊಂಡಿದ್ದೇವೆ. ಇದನ್ನು ದೈವಗಳ ಶಿಷ್ಟೀಕರಣ ಅಥವಾ ಸ್ಥಾನಪಲ್ಲಟವೆಂದು ಗುರುತಿಸಬಹುದಾಗಿದೆ. ಕೆಲವೊಂದು ಸಂದರ್ಭದಲ್ಲಿ ಶಿಷ್ಟ ದೈವವೊಂದು ಜನಪದ ದೈವವಾಗಿಯೂ ಆರಾಧಿಸಲ್ಪಡುವುದನ್ನು ಮೈಲಾರಲಿಂಗನ ಸಂಪ್ರದಾಯ, ಆರಾಧನೆಯಲ್ಲಿ ಕಾಣಬಹುದು. ವೆಂಗಡ–ವೆಂಕಟನಾದುದು, ಖಂಡೋಬಾ ಮತ್ತು ಫಂಡರಾಪುರದ ವಿಠಲ ಮುಂತಾದ ಉದಾಹರಣೆಗಳ ಮೂಲಕ ಗಮನಿಸಬಹುದು. ಜನಪದ ದೈವಗಳಲ್ಲಿ ಹೆಣ್ಣು ದೈವಗಳಿಗೆ ಹೋಲಿಸಿಕೊಂಡರೆ ಗಂಡು ದೈವಗಳ ಸಂಖ್ಯೆ ಕಡಿಮೆ. ಗಂಡು ದೈವಗಳು ಪ್ರಧಾನ ಸಂಸ್ಕೃತಿಯಲ್ಲಿ ವಿಲೀನವಾಗಿರುವುದು, ಬುಡಕಟ್ಟು, ಗ್ರಾಮ, ಹಳ್ಳಿಗಳನ್ನು ಬಿಟ್ಟು ನಗರ ಸೇರಿರುವ ಗಂಡು ದೈವಗಳ ಸಂಖ್ಯೆ ಅಧಿಕ. ಜನಪದ ದೈವ ಶಿಷ್ಟ ದೈವವಾಗುವುದು, ಶಿಷ್ಟ ದೈವ ಜನಪದ ದೈವವಾಗಿ ಮಾರ್ಪಡುವುದು ಜನಪದ ಮಹಾಕಾವ್ಯಗಳ ಮೂಲದ್ರವವಾಗಿ ಕಾಣಬಹುದು. ದೈವದ ಸೋಲಿನ ಕುರಿತಾಗಿ ಮಹಾಕಾವ್ಯಗಳೇ ರಚನೆಯಾಗಿರಬಹುದು, ಖಂಡಕಾವ್ಯಗಳೇ ರಚನೆಯಾಗಿರಬಹುದು, ಒಂದಿಷ್ಟು ಭಾಗ ರಚನೆಯಾಗಿರಬಹುದು ಆದರೆ ಇಲ್ಲಿ ವಿರೋಧದ ಜತೆಗೆ ಸಂಯಮ, ತಾಳ್ಮೆಯ ತಾಳವನ್ನು ಗಮನಿಸಬಹುದು.

ಜನಪದ ಮಹಾಕಾವ್ಯಗಳ ನಾಯಕರುಗಳ ಚರಿತ್ರೆಯನ್ನು, ಪರಾಕ್ರಮದ ಹಾಡನ್ನು ಹಾಡುವ ಗಾಯಕರು ಭಿನ್ನ ಭಿನ್ನ ಸಂಪ್ರದಾಯ, ವಯಸ್ಸು, ಭಿನ್ನ ಕಾಲಘಟ್ಟಕ್ಕೆ ಸೇರಿದವರಾಗಿರುತ್ತಾರೆ. ಒಂದೇ ಮಹಾಕಾವ್ಯದ ನಾಯಕನನ್ನು ಭಿನ್ನ ಭಿನ್ನ ಹಾಡುಗಾರರು ಹಾಡುವುದರಿಂದ ಅವರ ಸಾಹಸಗಾಥೆಯಲ್ಲೂ ಭಿನ್ನತೆ ಕಂಡುಬರುತ್ತದೆ. ಇದರಿಂದಾಗಿ ಸಾಹಸ ನಿರೂಪಣೆಯಲ್ಲಿ ಸ್ಪಷ್ಟತೆ ಸಿಗುವುದಿಲ್ಲ.

ಜನಪದ ಮಹಾಕಾವ್ಯಗಳ ನಾಯಕರುಗಳ ಚರಿತ್ರೆಯನ್ನು, ಪರಾಕ್ರಮದ ಹಾಡನ್ನು ಹಾಡುವ ಗಾಯಕರು ಭಿನ್ನ ಭಿನ್ನ ಸಂಪ್ರದಾಯ, ವಯಸ್ಸು, ಭಿನ್ನ ಕಾಲಘಟ್ಟಕ್ಕೆ ಸೇರಿದವರಾಗಿರುತ್ತಾರೆ. ಒಂದೇ ಮಹಾಕಾವ್ಯದ ನಾಯಕನನ್ನು ಭಿನ್ನ ಭಿನ್ನ ಹಾಡುಗಾರರು ಹಾಡುವುದರಿಂದ ಅವರ ಸಾಹಸಗಾಥೆಯಲ್ಲೂ ಭಿನ್ನತೆ ಕಂಡುಬರುತ್ತದೆ. ಇದರಿಂದಾಗಿ ಸಾಹಸ ನಿರೂಪಣೆಯಲ್ಲಿ ಸ್ಪಷ್ಟತೆ ಸಿಗುವುದಿಲ್ಲ. ವಸಾಹತುಶಾಹಿಯ ಪ್ರಭಾವದಿಂದಾಗಿ ಹಲವಾರು ರಾಷ್ಟ್ರಗಳಲ್ಲಿ ಜನಾಂಗಿಕ ಕುರುಹುಗಳನ್ನು ವ್ಯಕ್ತಪಡಿಸುವಂತಹ ಸಂಸ್ಕೃತಿಯು ಮರೆಯಾಗುತ್ತಿದ್ದು, ಅದರಲ್ಲಿ ಕರ್ನಾಟಕ ಸಂಸ್ಕೃತಿಯ ಜನಪದ ನಾಯಕರ ಕುರುಹುಗಳೂ ಆಗಿವೆ. ಹೀಗೆ ಮರೆಯಾದ ಸಂಸ್ಕೃತಿಯನ್ನು ಕಟ್ಟಿಕೊಡುವುದು ಕಷ್ಟಸಾಧ್ಯವಾಗಿದೆ. ಕೆಲವು ಸಮುದಾಯಗಳು ತಮ್ಮನ್ನು ಉಳಿಸಿಕೊಳ್ಳುವ ರಕ್ಷಣೆಯಲ್ಲಿ ಪರದಾಡುತ್ತಿರುವುದು ವಿಪರ್ಯಾಸವೇ ಸರಿ. ಪ್ರಧಾನ ಸಂಸ್ಕೃತಿಯ ಅತಿಯಾದ ದಾಳಿಯಿಂದಾಗಿ ಬಹುತೇಕರು ತಮಗೆ ಅಪ್ರಸ್ತುತವೆನಿಸುವ ಸಂಪ್ರದಾಯ, ಆಚರಣೆಗಳಿಗೆ ವಿದಾಯ ಹೇಳಿ, ಪ್ರಧಾನ ಸಂಸ್ಕೃತಿಯ ಆರಾಧಕರಾಗುತ್ತಿರುವುದನ್ನು ಕಾಣಬಹುದು. ದೇಶದ ಭವಿಷ್ಯವು ಅಡಗಿರುವುದು ಅಲಕ್ಷಿತ ಜನಪದ ಸಂಪ್ರದಾಯಗಳಲ್ಲೇ ಎಂಬುದನ್ನು ಅರ್ಥೈಸಿಕೊಳ್ಳುವುದು ಅನಿವಾರ್ಯವಾಗಿದೆ.

ದ್ರಾವಿಡ ಸಂಸ್ಕೃತಿಯು ಲಿಖಿತ ಪರಂಪರೆಗಿಂತ ಮೌಖಿಕ ಪರಂಪರೆಯಲ್ಲಿ ಉಳಿದು ಬೆಳೆದುಬಂದಿದೆ. ಅನಾರ್ಯರೆಂದು ಗುರುತಿಸಲ್ಪಟ್ಟಂತಹ ದ್ರಾವಿಡರು ಆರ್ಯರ ಸಂಸ್ಕೃತಿಗೆ ಮುಖಾಮುಖಿಯಾದಾಗ ಹಲವಾರು ತಲ್ಲಣಗಳಿಗೆ ಒಳಪಟ್ಟಿತು. ಆರ್ಯರ ಪ್ರತಿಯೊಂದು ಆಚರಣೆ, ವಿಧಿವಿಧಾನಗಳಿಗೆ ಪ್ರತಿರೋಧ ಒಡ್ಡುತ್ತಲೇ ಸಾಗಿದರು. ಇದರ ಬಗ್ಗೆ ಹಲವಾರು ಶಾಸನ, ಸಾಹಿತ್ಯಿಕ, ಸಾಂಸ್ಕೃತಿಕವಾಗಿ ದಾಖಲಾಗಿರುವುದನ್ನು ಕಾಣಬಹುದು. ಇದರಂತೆಯೇ ಜನಪದ ಸಾಹಿತ್ಯದಲ್ಲೂ ದ್ರಾವಿಡರು ಜನಾಂಗ ಸಂಘರ್ಷ, ವರ್ಗಸಂಘರ್ಷವು ಜನಪದ ಕಥನಕಾವ್ಯಗಳಲ್ಲೂ ಶಿಷ್ಟದೈವಗಳನ್ನು ಸೋಲಿಸುವ ಮೂಲಕ ಅಭಿವ್ಯಕ್ತವಾಗಿರುವುದನ್ನು ಗುರುತಿಸಬಹುದು.

**ಪರಾಮರ್ಶನ ಗ್ರಂಥಗಳು**


1. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು: ಜೀ.ಶಂ.ಪರಮಶಿವಯ್ಯ, ಸಂಶೋಧನಾ ಸಂಪುಟ, 2012
2. ಕನ್ನಡ ಜಾನಪದ ವಿಶ್ವಕೋಶ : ಸಂ. ಡಾ.ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಪರಿಷತ್ತು, 2 ಸಂಪುಟಗಳು, ಬೆಂಗಳೂರು, 1985
3. ಕನ್ನಡ ವಿಶ್ವಕೋಶ : ಸಂಪುಟಗಳು 1–10, ಸಂಪಾದಕರು : ಹಾ.ಮಾ ನಾಯಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು,

4. ಜಾನಪದ ಸಮಸ್ತ : ಡಾ. ನಂ.ತಪಸ್ವಿಕುಮಾರ್, 2012
5. ಜಾನಪದ ಖಂಡಕಾವ್ಯಗಳು: ಜೀ.ಶಂ.ಪರಮಶಿವಯ್ಯ, 2012
6. ಗ್ರಾಮದೇವತೆಗಳು: ಡಾ.ಸಿದ್ಧಲಿಂಗಯ್ಯ, 1997
7. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಎಚ್.ತಿಪ್ಪೇರುದ್ರಸ್ವಾಮಿ, ಮೈಸೂರು,1982
8. ಕರ್ನಾಟಕ ಜನಪದ ಸಾಹಿತ್ಯ : ಮಾಸ್ತಿ, ಜೀವನ ಕಾರ್ಯಾಲಯ, ಬೆಂಗಳೂರು,1956
9. ಜನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ದೇವೇಂದ್ರ ಕುಮಾರ್ ಹಕಾರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1985
10. ಪುರಾಣ, ಜಾನಪದ ಮತ್ತು ದೇಶೀವಾದ : ಸಂಪಾದಕರು : ಅರವಿಂದ ಮಾಲಗತ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,1989
11. ಜನಪದ ಕಥನಗೀತೆಗಳು: ಸಂಪಾದಕರು: ಡಾ.ಪಿ.ಕೆ.ಖಂಡೋಬಾ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1996
12. ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯ ವಿಶ್ವಕೋಶ: ಜಾನಪದ ಸಂಪುಟ: ಡಾ.ಪಿ.ಕೆ.ಖಂಡೋಬಾ, ಗುಲ್ಬಾರ್ಗಾ ವಿಶ್ವವಿದ್ಯಾಲಯ, 2011
13. ಪಿರಿಯಪಟ್ಟಣದ ಕಾಳಗ ಮತ್ತು ಇತರ ಕಥನಕಾವ್ಯಗಳು(ಜನಪದ ಕಾವ್ಯ ಸಂಪುಟ–8): ಜೀ.ಶಂ.ಪರಮಶಿವಯ್ಯ,2012
14. ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ : ಡಾ.ಎಸ್.ಎಂ.ಮುತ್ತಯ್ಯ, ಕನ್ನಡ ಸಾಹಿತ್ಯ ಪರಿಷತ್ತು, 2008
15. ದಕ್ಷಿಣ ಭಾರತೀಯ ಜಾನಪದ ಕೋಶ(ಸಂಪುಟ 1–2)ಸಂಪಾದಕರು–ಡಾ.ಎ.ಮುರಿಗೆಪ್ಪ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, 2011
16. ತಮಿಳುನಾಡಿನ ಜಾನಪದ: ಎಸ್.ಎಂ.ಎಲ್ ಲಕ್ಷ್ಮಣ್ ರಾವ್ ಚೆಟ್ಟಿಯಾರ್, ಅನುವಾದ: ಜೀ.ಶಂ. ಪರಮಶಿವಯ್ಯ, ನ್ಯಾಷನಲ್ ಬುಕ್ ಟ್ರಸ್ಟ್, ಭಾರತ, 1994
17. ಆಂಧ್ರಪ್ರದೇಶದ ಜಾನಪದ : ಬಿ.ರಾಮರಾಜು, ಅನುವಾದಕರು : ಆರ್ವಿಯಸ್ ಸಉಂದರಂ, ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ, 1978
18. ಕೇರಳ ಜಾನಪದ : ಎಚ್.ಎಸ್.ರಾಮಚಂದ್ರಗೌಡ, ಮಲೆನಾಡು ಪ್ರಕಾಶನ, ಬೆಂಗಳೂರು, 1978
19. ಶಂಗಂ, ತಮಿಳಗಂ ಮತ್ತು ಕನ್ನಡ ನಾಡು–ನುಡಿ : ಷ.ಶೆಟ್ಟರ್, ಅಭಿನವ ಪ್ರಕಾಶನ, ಬೆಂಗಳೂರು, 2007
20. ಸುವರ್ಣ ಜನಪದ ಲೇಖನಗಳು : ಸಂ.ವೀರಣ್ಣ ದಂಡೆ, ಡಾ.ಶ್ರೀಪಾದಶೆಟ್ಟಿ, ಸುವರ್ಣ ಸಾಹಿತ್ಯ ಗ್ರಂಥಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006


***

# 29.ಶ್ರೀ ಮಲೆ ಮಾದೇಶ್ವರ ಮಹಾಕಾವ್ಯದಲ್ಲಿ ಸ್ತ್ರೀ ಪಾತ್ರಗಳ ಪ್ರಸ್ತುತತೆ

**ಪ್ರೊ. ಭುವನೇಶ್ವರಿ. ಜಿ**

ಸಾಂಸ್ಕೃತಿಕವಾಗಿ ಸಮೃದ್ಧ ಸಾಹಿತ್ಯವನ್ನು ಹೊಂದಿರುವ ಭಾಷೆ, ಜನಾಂಗವು ಅಂತರ್ಗತವಾಗಿ ಮೌಲ್ಯಯುತ ವಿಚಾರಗಳನ್ನು ಕಾಲಕ್ರಮದಲ್ಲಿ ಉಳಿಸಿಕೊಂಡು ಬಂದಿರುತ್ತದೆ. ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ಪ್ರಧಾನವಾಗಿ ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮೂಲಕ ಸಂಸ್ಕೃತಿ, ಕಲೆ, ಇತಿಹಾಸ ಮುಂತಾಗಿ ಅನೇಕ ವಿಚಾರಗಳನ್ನು ನಮಗೆ ಒದಗಿಸಿವೆ. ಅದರಲ್ಲೂ ಮೌಖಿಕ ಸಂಪ್ರದಾಯದಲ್ಲಿ, ಸಮಷ್ಟಿ ಪ್ರಜ್ಞೆಯಲ್ಲಿ ಬೆಳೆದು ಬಂದ ಸಾಹಿತ್ಯವೇ ಜಾನಪದ ಸಾಹಿತ್ಯ. ಈಗಾಗಲೇ ತಿಳಿದಿರುವಂತೆ ಜಾನಪದ ಸಾಹಿತ್ಯವು ಏಕವ್ಯಕ್ತಿಯಿಂದ ರಚನೆಗೊಂಡುದಲ್ಲ. ಜನಪದರು ಅನುಭವಕ್ಕೆ ತಾಗಿದ ಸಂಗತಿಗಳನ್ನೇ ಮುಕ್ತವಾಗಿ ಹೇಳುತ್ತಾರೆ. ಮತ್ತು ಇವು ಜೀವನದ ಸಹಜ ಮೌಲ್ಯಗಳನ್ನು ಗಾದೆ, ಜನಪದ ಕಥೆ, ಒಗಟು ಮುಂತಾದ ಪ್ರಕಾರಗಳಲ್ಲಿ ತಿಳಿಸಿಕೊಡುತ್ತಾ ಬಂದಿವೆ. ಜನಪದ ಸಾಹಿತ್ಯ ಹುಟ್ಟಿದ ಬಳಿಕ ಶಿಷ್ಟ ಸಾಹಿತ್ಯ ಹುಟ್ಟಿಕೊಂಡಿದೆ. ಶಿಷ್ಟ ಸಾಹಿತ್ಯಕ್ಕೆ ತಾಯಿ ಜನಪದ ಸಾಹಿತ್ಯ. ಶಿಷ್ಟ ಸಾಹಿತ್ಯದ ಕಾಲವನ್ನು ಲಿಪಿಗಳ, ಶಾಸನಗಳ, ಕೃತಿಗಳ ಆಧಾರದಿಂದ ಗುರುತಿಸುತ್ತಾ ಬಂದ ವಿದ್ವಾಂಸರು, ವಿಮರ್ಶಕರು ಶಿಷ್ಟ ಸಾಹಿತ್ಯಕ್ಕೆ ಅಗ್ರ ಮನ್ನಣೆಯನ್ನು ಕೊಟ್ಟು ಮೌಖಿಕ ಸಾಹಿತ್ಯ ಪರಂಪರೆಯಾದ ಜನಪದ ಸಾಹಿತ್ಯವನ್ನು ಕಡೆಗಣಿಸುತ್ತಾ ಬಂದಿರುವುದನ್ನು ಇತ್ತೀಚಿನ ದಿನಗಳ ಅಧ್ಯಯನಗಳಿಂದ ಕಾಣಬಹುದು. ಏಕೆಂದರೆ ನಮ್ಮ ಕೃತಿಗಳ ಅಧ್ಯಯನಗಳು ಪಾಶ್ಚಿಮಾತ್ಯರ ಚಿಂತನೆಗಳು, ವಿಮರ್ಶೆಗಳನ್ನೇ ಅವಲೋಕಿಸುವುದರಿಂದ ಜಾನಪದ ಸಾಹಿತ್ಯದ ಅಧ್ಯಯನಕ್ಕೂ ಇವೇ ಸಿದ್ಧ ಮಾದರಿಗಳನ್ನು ಬಳಸುತ್ತಿದ್ದೇವೆ. ಇದಕ್ಕೆ ಬದಲಾಗಿ ಜನಪದ ಸಾಹಿತ್ಯದ ಅಧ್ಯಯನಕ್ಕೆ ತಕ್ಕುದಾದ ರೀತಿಯ ಅಧ್ಯಯನ ಪರಿಕರಗಳನ್ನು ರೂಪಿಸಿದರೆ ನಮ್ಮ ಸಾಹಿತ್ಯದ ಉತ್ಕೃಷ್ಟತೆಯ ಅನುಭವ ನಮಗಾದೀತು.

ಜನಪದ ಸಾಹಿತ್ಯದ ಮಹತ್ವದ ಪ್ರಕಾರಗಳು ಎಂದರೆ ಜನಪದ ಮಹಾಕಾವ್ಯಗಳು. ಮಲೆಯ ಮಹದೇಶ್ವರ, ಮಂಟೇಸ್ವಾಮಿ, ಸಿದ್ಧಾಪ್ಪಾಜಿ, ಜುಂಜಪ್ಪ, ಎಲ್ಲಮ್ಮನ ಕಾವ್ಯ ಮುಂತಾದ ಜನಪದ ಮಹಾಕಾವ್ಯಗಳು ಪುರಾಣ, ಇತಿಹಾಸ ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಮೇಳೈಸಿಕೊಂಡು ಬಂದಿದೆ. ಶಿಷ್ಟ ಸಾಹಿತ್ಯದಲ್ಲಿ ಮಹಾಭಾರತ, ರಾಮಾಯಣ ಮಹಾಕಾವ್ಯಗಳು ಜನಪದರಿಗೆ ಎಟುಕದ ರೀತಿಯಲ್ಲಿ ಛಂದಸ್ಸು, ಅಲಂಕಾರ, ರಾಜಧರ್ಮ – ಈ ಹಿನ್ನೆಲೆಯಲ್ಲಿ ರಚನೆಗೊಂಡರೆ, ಜನಪದರ ಮಹಾಕಾವ್ಯಗಳು ಮತ್ತು ಅಲ್ಲಿನ ಪಾತ್ರಗಳು ತಮ್ಮ ದಿನನಿತ್ಯದ ಬದುಕಿಗೆ ಸಮೀಪವಾದ ತಮ್ಮ ಶಕ್ತಿ, ಸಾಮರ್ಥ್ಯಕ್ಕೆ ಮೀರಿದ ಪಾತ್ರಗಳಾಗಿ ಕಂಡುಬರುತ್ತಾರೆ. ಮಲೆಯ ಮಹದೇಶ್ವರ ಕಾವ್ಯದ ಒಟ್ಟು ಆಶಯವನ್ನು ನೋಡುವುದಾದರೆ 12ನೇ ಶತಮಾನದ ವಚನಯುಗದ ಸಂದರ್ಭದಲ್ಲಿ ಸಾಮಾಜಿಕ ಸ್ಥಿತ್ಯಂತರಗಳು ಘಟಿಸಿದ ಮೇಲೆ ಉತ್ತರ ಕರ್ನಾಟಕದ ಭಾಗದಿಂದ ಉಳಿದ ಭಾಗಗಳಿಗೂ ವಚನಕಾರರ ಆಶಯ ಹರಿದುಬಂದಿರುವುದನ್ನು ಬುತ್ತಿ ಕೊಡುವ, ದಾಸರಿಗೆ ಬಿನ್ನ ಕೊಡುವ ಸಂದರ್ಭದಲ್ಲಿ ಕಾಣುತ್ತೇವೆ. ಜನಪದರು ಇಲ್ಲಿ ಸಾಮಾನ್ಯರಾಗಿದ್ದ ಮನುಷ್ಯರ ಮಾನವೀಯ ಗುಣಗಳು, ಜೀವನ ಮೌಲ್ಯಗಳನ್ನು ಮೆಚ್ಚಿ ಅವರನ್ನು ಅತಿಮಾನುಷ, ಅವತಾರಿ ಪುರುಷರಂತೆ ಚಿತ್ರಿಸಿದ್ದಾರೆ.

ಸುಮಾರು 14–15 ನೇ ಶತಮಾನಗಳಲ್ಲಿ ಇದ್ದಿರಬಹುದಾದ ಮಾದೇಶ್ವರರನ್ನು ಮಾದಾರಿ, ಮಾದಯ್ಯ, ಮಾಯ್ಕಾರ ಮುಂತಾಗಿ ಕಾವ್ಯದಲ್ಲಿ ಕರೆಯುತ್ತಾರೆ. ಮಲೆ ಮಾದೇಶ್ವರರ ಕಥೆಗಳನ್ನು ಸಾಲು, ಪಲ್ಲವಿ, ಕವಟ್ಲು, ಕಥೆ, ಕವಲು ಎಂದು ವಿಂಗಡಿಸಲಾಗಿದೆ. ಜನಪದರು ಇವರನ್ನು ಅವತಾರಪುರುಷರೆಂದೆ ಭಾವಿಸುವುದರಿಂದ ಇತಿಹಾಸದ ಸಂಧರ್ಭವೂ, ಪುರಾಣದೊಂದಿಗೆ ಬೆರೆತಿರುವುದರಿಂದ ಪುರಾಣೇತಿಹಾಸಿವಾಗಿ ಕತೆಯನ್ನು ಕಾಣುತ್ತೇವೆ. ಮಾದೇಶ್ವರರು ಚಂದ್ರಸೇಖರ ಮೂರ್ತಿ, ಉತ್ರಾಜಮ್ಮ ದಂಪತಿಗಳ ಮಗನಾಗಿ ಜನಿಸಲು ನಿರ್ಧರಿಸಿ ಅಸಹಜ ರೀತಿಯಲ್ಲಿ, ಮೈಲಿಗೆಯಾಗದಂತೆ ಉತ್ರಾಜಮ್ಮನ ಬೆನ್ನುಸೀಳಿಕೊಂಡು ಬರುವರು. ಏಳು ವರ್ಷದವರಿದ್ದಾಗ ವ್ಯಾಘ್ರಾನಂದರ ಶಿಷ್ಯರಾಗಿ ದಕ್ಷಿಣ ಭಾಗಕ್ಕೆ ಬಂದು ಮಠಗಳಲ್ಲಿ (ಶ್ರೀಶೈಲದಿಂದ ಸುತ್ತೂರು, ಬದನಾಳು, ವಾಟಾಳು, ಕುಂತೂರು, ತಲಕಾಡುಗಳಲ್ಲಿ) ಗುರುಗಳು ಹೇಳಿದ ಕಾರ್ಯಗಳನ್ನು ನೆರವೇರಿಸಿ ಆ ಮಠವು ಪ್ರಸಿದ್ಧಿಯಾಗಲೆಂದೂ, ತಾನು ಇಲ್ಲಿರಲಾರೆ ಎಂದು ಮುಂದೆ ನಡೆಯುತ್ತಾರೆ. ಹೀಗೆ ಸಾಗಿ ಕುಂತೂರು ಮಠದಲ್ಲಿ ಅಲ್ಲಮಪ್ರಭುಗಳಿಂದ ದೀಕ್ಷೆ ಪಡೆದುಕೊಂಡು ನಂತರ ನಡುಮಲೆಯಲ್ಲಿ ನೆಲೆಸಿ ಅನೇಕ ಪವಾಡಗಳನ್ನು ಮೆರೆದು ಐಕ್ಯರಾದರು.

ISBN – 978-93-5526-247-9

ಜನಪದ ಮಹಾಕಾವ್ಯಗಳ ನಾಯಕರ ಪವಾಡಕ್ಕೂ ಶಿಷ್ಯ ಪರಂಪರೆಗೂ ನಿಕಟ ಸಂಬಂಧವಿದೆ. ಮಾದೇಶ್ವರ ನಡೆಸುವ ಪವಾಡಗಳು ಹಲವು ಮತ್ತು ಅದನ್ನು ಹಾಡುವ ಗಾಯಕರಾದ (ಕತೆ ಓದುವ) ಗುಡ್ಡರು ಶಿಷ್ಯ ಪರಂಪರೆಗೆ ಒಳಪಟ್ಟಿದ್ದಾರೆ. ಮಹಾಕವ್ಯದಲ್ಲಿ ಬರುವ ಶಿಷ್ಯಪರಂಪರೆಯೂ ಈ ಪವಾಡಗಳನ್ನು ಅತಿಮಾನುಷ ಶಕ್ತಿಯನ್ನು ನಂಬಿ ತಾವು ಒಕ್ಕಲಾಗಲು ಸಿದ್ಧವಾದವರು. ಇಲ್ಲವಾದಲ್ಲಿ ಮಾದೇಶ್ವರನಿಗೆ ಒತ್ತಾಯಪೂರ್ವಕವಾಗಿ ಮಣಿಯುವವರು. ಈ ಒಕ್ಕಲಾಗುವವರಲ್ಲಿ ಸ್ತ್ರೀ ಶಿಷ್ಯ ಪರಂಪರೆಯೂ ಸೇರಿದೆ. ಪ್ರಸ್ತುತ ಮಲೆ ಮಾದೇಶ್ವರ ಕಾವ್ಯದಲ್ಲಿ ಬರುವ ಸ್ತ್ರೀ ಪಾತ್ರಗಳನ್ನು ಈ ಹಿನ್ನೆಲೆಯಲ್ಲಿ ಕಾಣಬಹುದು. ಸ್ಥೂಲವಾಗಿ ಮಾದೇಶ್ವರರು ಭೂಮಿಯಲ್ಲಿ ಜನಿಸಲು ನಿಶ್ಚಯಿಸಿಕೊಂಡ ಉತ್ರಾಜಮ್ಮ, ಸೋಲಿಗರ ಹೆಣ್ಣು ಮಗಳಾದ ಸಂಕವ್ವೆ, ಬೇವಿನ ಹಟ್ಟಿ ಕಾಳಮ್ಮ, ಇಕ್ಕೇರಿ ದೇವಮ್ಮರನ್ನು ಕಾಣಬಹುದು.

ಮೊದಲಿಗೆ ಉತ್ರಾಜಮ್ಮನ ಹಾಲು ಬುತ್ತಿಯ ಪ್ರಸಾದವಾಗಿ ಬದಲಾಯಿಸುವ ಮಾದಪ್ಪ ಶರಣರ ದಾಸೋಹದ ಪರಿಕಲ್ಪನೆಯನ್ನು ಮುಂದುವರಿಸುವುದನ್ನು ಈ ಮೂಲಕ ಕಾಣುತ್ತೇವೆ. ಸಂಕವ್ವನ ಸಾಲಿನಲ್ಲಿ ನೀಲಯ್ಯ ಹಲವಾರು ಹೆಣ್ಣುಗಳ ಶೋಧವನ್ನು ಮಾಡಿ ಸೋಲಿಗರ ಹೆಣ್ಣು ಮಗಳಾದ ಸಂಕವ್ವೆಯನ್ನು ಅವಳ ಚೆಂದವನ್ನು ಮೆಚ್ಚಿ ಮದುವೆಯಾಗುತ್ತಾನೆ. 12 ವರ್ಷವಾದರೂ ಮಕ್ಕಳಿಲ್ಲದ ಸಂಕವ್ವೆ ನೀರಿನ ಕೊಡ ಹೊತ್ತು ತರುವಾಗ ವಾರಗಿತ್ತಿಯರ, ನಾದಿನಿಯರ ಮಾತಿನಿಂದ ಬಂಜೆತನದ ಅಪವಾದ ಹೊತ್ತು, ಕೋಪಿಷ್ಟನಾದ ನೀಲಯ್ಯನ ಜೊತೆ ಕಾಡಿನಲ್ಲಿ ಹೋಗಿ ನೆಲೆಸುತ್ತಾಳೆ. ಸೋಲಿಗ ಹೆಣ್ಣುಮಗಳಾದ ಸಂಕವ್ವೆಯನ್ನು ಮಾದಪ್ಪ ಎದುರುಗೊಳ್ಳುವುದು ಅವಳ ಅಸಹಾಯಕ ಪರಿಸ್ಥಿತಿಯಲ್ಲಿ, ಗಂಡ ನೀಲಯ್ಯ ಸಂಕವ್ವಳನ್ನು ಬಿಟ್ಟು ಹೆಜ್ಜೇನು ಕಿರುಜೇನು ತರಲು ಬೆಟ್ಟಕ್ಕೆ ಹೋಗುವ ಸಂದರ್ಭದಲ್ಲಿ ಅವಳ ಕೈಯಿಂದ ಭಾಷೆ ಪಡೆಯಲು ನಾನಾ ಪ್ರಯತ್ನ ನಡೆಸುತ್ತಾನೆ. ಆದರೆ ಸಂಕವ್ವೆಯು ಇದುವರೆಗೂ ನನ್ನಲ್ಲಿ ಕಳ್ತನ, ಸುಳ್ತನ ಕಂಡಿಲ್ಲ, 'ನನ್ನ ಬಂಜೆ ಕೈನ ಬಾಸೆ ನಿನಗೆ ತರವಲ್ಲೋ, ನೀಲಯ್ಯ' ಎನ್ನುತ್ತಾಳೆ. ಕೊನೆಗೂ ಭಾಷೆ ಕೊಡದ ಅವಳನ್ನು ಮುಳ್ಳಿನ ಸಂಕೋಲೆಯಲ್ಲಿ, ಕೊಳಕು ಮಂಡಲ ಬರೆದು, ಗೂಬೆಗಳನ್ನು ನಾಲ್ಕು ಮೂಲೆಗೂ ನಿಲ್ಲಿಸಿ, ಹೆಡೆ ಸರ್ಪಗಳನ್ನು ಕಾವಲಿಕ್ಕಿ 'ಕೊಲಬಾರದ ಕೊಲೆ, ಮಾಡಬಾರದ ಸಿಕ್ಸೆ'ಯನ್ನು ಮಾಡಿ ಅವಳನ್ನು ಗುಡ್ಲುವಿನಲ್ಲಿ ಬಂಧಿಸಿ ಹೋಗುತ್ತಾನೆ ನೀಲಯ್ಯ. ನೀಲಯ್ಯನ ಅನುಮಾನವು ಹೆಂಡತಿಯ ಬಗೆಗಲ್ಲ. ಯಾರಾದರೂ ಅವಳನ್ನು ಮರುಳು ಮಾಡಿಯಾರು ಎಂಬ ಚಿಂತೆ. ಈ ಬಗೆಯ ಆಲೋಚನೆ ಹೆಂಡತಿಯನ್ನು ಮರಳಿ ಮರಳಿ ಪರೀಕ್ಷಿಸುವಾಗಲು ಕಾಣಬಹುದು.

ಅಲ್ಲಿ ಅವಳಿಗೆ ಒಡ್ಡುವ ಪರೀಕ್ಷೆಗಳು ಕಠಿಣವಾದರೂ, ಅಸಾಧ್ಯವಾದರೂ ಹೀಗೆ ಅವಳು ಮಾದಪ್ಪನಲ್ಲಿ ಬೇಡುವ ಮೂಲಕ ಪವಾಡ ಸದೃಶವಾಗಿ ಬದುಕಿಬರುತ್ತಾಳೆ. ಬದುಕಿಬಂದ ಆಕೆ 'ನನ್ನ ಸತ್ಯವ ಈಗ ಒಪ್ಕಳ್ಳಿ' ಎಂದಾಗ ಮತ್ತೊಂದು ಪರೀಕ್ಷೆ ನೀಡುವ ನೀಲಯ್ಯ ಅವಳು ಬರುವುದು ತಡವಾದಾಗ ತನ್ನ ಪತ್ನಿಯ ಅಗಲಿಕೆಗಾಗಿ

**'ಆವಾಗಲೀಗ ನೀಲೇಗೌಡ। ಮಾಯದ ಗೊಂಬೆ ಒಡೆದನೋ। ಸಿರಸ ಬೇರೆ ಆಯಿತು। ಮುಂಡ ಬೇರೆ ಆಯಿತು। ಅಯ್ಯೋ ಸಿವನೇ ನನ್ನ ಮಡದಿಗೆ....ಪಾಪಿ ನಾನು ಮಾಡಿದುದು ಸರ್ವತಾ ತಪ್ಪು। ಆಹಾ ಅನ್ಯಾಯದಲ್ಲಿ ಒಂದೇ ಏಟಿಗೆ। ನಾನು ಕೇಳದೆ ಮಾಡದೇ ಕೊಂದು ಬಿಟ್ನಲ್ಲಾ....ನನ್ನ ಮಡದಿ ಹೋದಮ್ಯಾಲೆ ನನ್ನ ಕತ್ತಿಗೆ ಕತ್ತಿಯನಾದರ ಮಡಗವನಲ್ಲಾ ನೀಲಯ್ಯ।'**

ಎಂದು ದುಃಖಿಸುತ್ತಾನೆ. ಸಿರಿಗಂಧ ಸೌದೆಯಲ್ಲಿ ಮಲಗಿಸಿ ಬೆಂಕಿ ಹಚ್ಚುವಾಗ, ಗುಂಡನ್ನು ಮೇಲೆ ಎಳೆಯುವಾಗ, 12 ಆಳುದ್ದದ ಮಣ್ಣಿನಗಳಿಯಲ್ಲಿ ಸುಣ್ಣದ ಗೂಡಿನಲ್ಲಿ ಒಂದು ರಾತ್ರಿ ಮಲಗುವ ಪರೀಕ್ಷೆಗಳಲ್ಲಿ ಪವಾಡ ನಡೆದಿದೆಯೆಂದು ಮತ್ತೊಂದು ಪರೀಕ್ಷೆಗೆ ಒಳಪಡಿಸುತ್ತಾನೆ. ಇಲ್ಲಿ ಗಂಡಿನ ಸಹಜ ಅಹಂ ಅನ್ನು ಗುರುತಿಸಿಯೂ ಕೂಡ ಆತನಲ್ಲಿರುವ ಪತ್ನಿಯ ಬಗೆಗಿನ ಪ್ರೇಮವನ್ನು ನಿರಾಕರಿಸಲಾಗದು. ಮುಂದೆಯೂ ಒಡ್ಡುವ ಪರೀಕ್ಷೆಗಳನ್ನು ಎದುರಿಸಿ ತನಗೆ ವರ ಕೊಟ್ಟುದು ಮಾದಪ್ಪನೇ ಎಂದು ಹೇಳುತ್ತಾಳೆ. ತನಗೆ ಹುಟ್ಟುವ ಮಲ್ಲಣ್ಣನನ್ನು ತಾನು ಉಳಿಸಿಕೊಂಡು, ಮಾದಪ್ಪನ ನಿರ್ದೇಶನದಂತೆ ಕಾರಯ್ಯ, ಬಿಲ್ಲಯ್ಯರನ್ನು ದಾನ ಕೊಡುವ ಸಂದರ್ಭ ಮುಖ್ಯವಾದುದು. ತನಗೆ ಹುಟ್ಟಿದ ಮಕ್ಕಳನ್ನು ಹೆಂಗೆ ಕೊಟ್ಟಾಳು ಎಂಬ ನೀಲಯ್ಯನ ಪರೀಕ್ಷೆಯು ಸೋಲಾಗುತ್ತದೆ. ಇಲ್ಲಿಂದ ಕಾರಯ್ಯ ಬಿಲ್ಲಯ್ಯರನ್ನು ಕರೆದೊಯ್ಯುವ ಮಾದಪ್ಪ ಅವರನ್ನು ಪರೀಕ್ಷಿಸಿಯೇ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಾನೆ.

ಹೊನ್ನುಣಸೆ ಬೇವಿನ ಹಟ್ಟಿ ಕಾಳಮ್ಮ ಕಡು ಬಡವೆ. ಗಂಡನ ಹೆಸರು ಕೆಂಡೇಗೌಡ, 7 ಜನ ಗಂಡು ಮಕ್ಕಳು, 7 ಜನ ಸೊಸೆಯಂದಿರು. ಕಾಳಮ್ಮ ತಾನುಟ್ಟ ಸೀರೆಯ ಒಂದು ಬದಿಯನ್ನು ಮಡಿ ಮಾಡಿ ಅದನ್ನು ಒಣಗಿಸಿ ಉಟ್ಟು ಮತ್ತೊಂದು ಬದಿಯನ್ನು ಮಡಿ ಮಾಡುವ ಸಂದರ್ಭದಲ್ಲಿ ಅವಳ ಬಡತನ ಕಂಡು ಆಕೆ ಕೇಳಿದಂತೆ ಸಿರಿವಂತಿಕೆಯ

ISBN – 978-93-5526-247-9

ಪ್ರಸಾದ ಅನುಗ್ರಹಿಸುವ ಮಾದಪ್ಪ **'ಆ ಕೌದಳ್ಳಿವೊಳಗೆ ಕಾಳಮ್ಮ ಕಾಳಮ್ಮ ಅನ್ನೋವಳಿಗೆ ಭಾಗ್ಯ ಕೊಟ್ಟಿವ್ನಲ್ಲಾ। ಅವಳನ್ನು ಎಳ್ಳು ಕೊಡಬೇಕು। ಒಕ್ಕಲು ಪಡೀಬೇಕು ಅಂತೇಳಿ'** ಕಾರಯ್ಯನನ್ನು ಬೇವಿನ ಹಟ್ಟಿ ಕಾಳಮ್ಮನ ಬಳಿ ಬೇಡಿ ತರುವಂತೆ ಕಳಿಸಬೇಕೆಂದಾಗ, ಆಕೆ ಬಡವರನ್ನು, ದೀನರನ್ನು ಕಣ್ಣೆತ್ತಿಯು ನೋಡಳು ಎಂಬುದನ್ನು ತಿಳಿದು ಅವಳ ಬಳಿ ಕ್ವಾರಣ್ಯ ಬೇಡುವ ಮೊದಲು ಆಕೆಯ ಕಾರುಬಾರನ್ನು ಮರದ ಮೇಲೆ ಕುಂತು ನೋಡುವ ಸಂದರ್ಭದಲ್ಲಿ ಒಂದು ರಾಗಿಯ ಕಾಳು ಅದರ ಒಂದು ಕಣವು ಕೂಡ ಗಾಳಿಯೂ ಸೋಕದಂತೆ ರಕ್ಷಿಸಬೇಕೆಂದು ಸೊಸೆಗೆ ಆಣತಿ ಕೊಡುತ್ತಾಳೆ. ಮಗ್ಗುಲು ರಾಗಿಯ ತಂದು ಬೀಸಿ ಮಾಡಿದ ಗಟ್ಟಿಯ ಅಂಬಲಿಯನ್ನು ಕಂಡು ಬೈದು ಅದನ್ನು ಮತ್ತಷ್ಟು ನೀರಾಗಿ ಮಾಡುವಂತೆ ತಿಳಿಸಿ ಕೊನೆಗೆ ಅಂಬಲಿಯಲ್ಲಿ ಬಿದ್ದ ನೊಣಕ್ಕೆ ಅಂಟಿಕೊಂಡ ಅಂಬಲಿಯನ್ನು ನೆಕ್ಕುವ ಜಿಪುಣತನ ಹೇಸಿಗೆ ತರಿಸುತ್ತದೆ. 'ಅಲ್ಲಾ ಕಣಮ್ಮೆ ದ್ಯಾವಾಜಿ। ನನ್ನಟ್ಟಿವೊಳಗೆ ಎರ ನುಗ್ಗಕ್ಕೆ ಸ್ಥಳವಿಲ್ಲ। ಅಷ್ಟರ ಮಟ್ಟಿಗೆ ವಜ್ರಗಾರ ಮೆತ್ತಿಸಿವ್ನಿ ಹೆಂಚಿನ ಸಂದಿಲೆಲ್ಲಾ। ಈ ಹಾಳ್ ಮಗನ್ ನೊಣಗಳು ಎಲ್ಲಿ ವಾಸ ಮಾಡ್ತಿದ್ದೊ ಗೊತ್ತಿಲ್ವಲ್ಲ। ಎಂದು ಮುಂತಾಗಿ ಅವಾಚ್ಯವಾಗಿ ಬೈಯ್ಯುವ ಕಾಳಮ್ಮನ ಮಾತಿಗೆ ಎದಿರಾಡದ ದ್ಯಾವಜಮ್ಮನನ್ನು ಮೊದಲು ಪರೀಕ್ಷಿಸುತ್ತಾನೆ ಮಾದಪ್ಪ. ಅತ್ತೆಯ ಮಾತನ್ನು ಮೀರದ ದ್ಯಾವಜಮ್ಮ ತನ್ನ ತಂದೆ ಜುಂಜೇಗೌಡನ ಮನೆಗೆ ಹೋಗುವಂತೆ ಮನೆದೇವರಾದ ಮಾದಪ್ಪನಿಗೆ ಸೂಚಿಸುತ್ತಾಳೆ. ಕೊನೆಗೆ ಎಳ್ಳು ಒಡ್ಡುವ ತಾಣಕ್ಕೆ ದಾರಿ ತೋರುವಾಗಲು ಜಾಣ್ಮೆಯ ಪ್ರದರ್ಶನದಿಂದ ಮಾದಪ್ಪನ ಕೃಪೆಗೆ ಪಾತ್ರಳಾಗುತ್ತಾಳೆ. ಎಳ್ಳಿನ ಕಣವೇನಾದರೂ ಆರಿಸುವಾಗ ತಿಂದಿದ್ದಾರಾ ಎಂದು ಸಾಲಾಗಿ ನಿಲ್ಲಿಸಿ ಉರುಬಲು ಹೇಳಿ, ಒಂದು ಕಣ ಗಾಳಿಗೆ ಬಂದು ಬಾಯಲ್ಲಿ ಸಿಕ್ಕಿಕೊಂಡ ಕೂಲಿಯಾಳಿಗೆ, ನೀಡಿದ ಸಿಕ್ಸೆಯು ಸಹಿಸಲಾಗೆ ಕೊನೆಗೆ ನಿಮ್ಮ ಮನೆಗೆ ಜೀತಕ್ಕಿರುತ್ತೇನೆ ಎನ್ನುವಂತೆ ಮಾಡುತ್ತಾಳೆ ಕಾಳಮ್ಮ.

ಬೇವಿನ ಹಟ್ಟಿ ಕಾಳಮ್ಮನ ಬಳಿ ಮುದುಕ ಭಿಕ್ಷುಕನ ವೇಷ ಧರಿಸಿ ಕ್ವಾರಣ್ಯ ಕೇಳುವ ಮಾದಪ್ಪ 12 ಖಂಡುಗದಿಂದ ಕೊನೆಗೆ ಅವಳು ಅಂಗೈಗೆ ಅಂಟುವ ಎಳ್ಳಾದರೂ ಸರಿಯೇ ಎಂದು ಕೇಳಿದಾಗಲೂ ಕಾಳಮ್ಮನಿಗೆ ತಿಳಿವು ಮೂಡುವುದಿಲ್ಲ. ಅಹಂಕಾರ ಕಳೆಯುವುದಿಲ್ಲ. ತನ್ನ ಸರ್ವಸ್ವವೂ ನಾಶವಾದರೂ ಸರಿಯೇ, ತಾನು ಆಳಾಗಿ ದುಡಿದಾಗಲೂ ಸರಿಯೇ 'ಹನ್ನೆರಡು ಬಳ್ಳವಳ್ಳ। ಹನ್ನೆರಡು ಕಾಳನ್ನು ನಿನ್ನ ಮುತ್ತಿನ ಜೋಳಿಗೆಗೆ ನೀಡಬೇಕಾದ್ರೆ। ಹೇಳ್ತೀನಿ ಕೇಳು...ಎಳ್ಳೆಲ್ಲಾ ಕೊಚ್ಚಿಕೊಂಡು ಹೋಗಿ। ಈ ಕಣದಲ್ಲಿರತಕ್ಕಂಥ। ಎಳ್ಳೆಲ್ಲಾ ನನ್ನ ಊರು ಮುಂದಿರೋ ಕೆರೆಗೆ ತಳ್ಬುಟ್ರು ಸರಿಯೇ।... ಜಂಗಮಯ್ಯ ನಿನಗೆ ಒಂದು ಎಳ್ಳಿನ ಕಾಳು ಕೊಡುವಂತ ಮಗಳಲ್ಲಾ' ಹೀಗೆ ನಾನಾ ತೆರವಾಗಿ ತನ್ನ ಸರ್ವಸ್ವವೂ ನಾಶವಾದರೂ ಸರಿಯೇ ಬಿನ್ನ ನೀಡವುದಿಲ್ಲ ಎಂಬ ಮಾತೇ ಅವಳಿಗೆ ಮಾರಕವಾಗುತ್ತದೆ. ಎಲ್ಲವನ್ನು ಕಳೆದ ಮೇಲೂ ತಾನು ಮನೆದೇವರಿಗೆ ಬಾಗೆನೆಂದ ಅವಳ ಅಹಂಕಾರ ತಾನು ಬೇಡಿದ ಅಂದಿನ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಅವಳನ್ನು ಕಲ್ಲಾಗಿ ಮಾಡುವ ಮಾದಪ್ಪ ತನ್ನ ಒಕ್ಕಲುತನದ ಹೆಣ್ಣು ಮಗಳಾದ ದ್ಯಾವಜಮ್ಮನಿಗೆ ' ದ್ಯಾವಜಮ್ಮನೂ ಅವಳ ಗಂಡನನ್ನು ಕರುದ್ಬುಟ್ಟು। ನಂಗೆ ವರ್ಸಕ್ಕೆ ಒಂದು ತುಂಬಿದ ಅಮಾವ್ಯಾಸೆ ದಿನ। ಸಿವರಾತ್ರಿಲಿ ನನ್ನ ಎಣ್ಣೆಮಜ್ಜನಕ್ಕೆ ಎಳ್ಳಿನ ಕಾಳು ತರಬೇಕು ಅನ್ಬುಟ್ಟು ಅವರನ್ನು ಒಕ್ಕಲು ಮಾಡಿಕೊಂಡು' ಎಲ್ಲವನ್ನು ಕರುಣಿಸುತ್ತಾನೆ.

ಬೇಡರ ಕನ್ನಯ್ಯನಿಗೆ ಮೂಡಲ ಮಲೆ ವಹಿಸಿ ಸಂಕವ್ವೆಯ ಮಕ್ಕಳಿಗೆ ಮೋಸ ಮಾಡೋದಿಲ್ಲ ಎಂದು ಮಾತು ಕೊಟ್ಟು ಇಕ್ಕೇರಿ ದೇವಮ್ಮನ ದುರಾಸೆಗೆ ತಕ್ಕುದಾದ ಶಿಕ್ಷೆಯನ್ನು ಕೊಡುವ ಸಂದರ್ಭವನ್ನು ಮುಂದೆ ಇಕ್ಕೇರಿ ದೇವಮ್ಮನ ಸಾಲಿನಲ್ಲಿ ಕಾಣುತ್ತೇವೆ. ಮಾದಪ್ಪನ ಕತೆ ಓದುವವರು ಬೇರೆಯ ಸಾಲುಗಳಲ್ಲಿ ಬರುವ ಸಂಕವ್ವೆಯನ್ನು, ಬೇಡರ ಕನ್ನಯ್ಯನನ್ನು, ಇಲ್ಲವೇ ಕಾರಯ್ಯ ಬಿಲ್ಲಯ್ಯರನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ ಈ ಸಾಲುಗಳ ಮುಖಾಂತರವಾಗಿ ಪಾತ್ರಗಳ ನೆನಪು, ಪರೀಕ್ಷೆ, ಅನುಗ್ರಹ ಮುಂತಾಗಿಯು ತನ್ನ ಶಿಷ್ಯ ಪರಂಪರೆಯನ್ನು ಮಾದಪ್ಪ ಸ್ಮರಿಸುವುದನ್ನು ಕಾಣುತ್ತೇವೆ.

ಇಕ್ಕೇರಿ ದೇವಮ್ಮ ಬೇಡಲು ಬಂದ ದಾಸಯ್ಯರಿಗೆ ವಿಷದ ಮದ್ದಿಕ್ಕಿ ಔತಣ ಬಡಿಸಿ ಅವರನ್ನು ಕೊಂದು ಹಿತ್ತಲಲ್ಲಿ ಮಣ್ಣುಮಾಡಿ ಅವರ ದ್ರವ್ಯವನ್ನೆಲ್ಲಾ ತಾನು ತೆಗೆದುಕೊಂಡು 7 ಕೊಪ್ಪರಿಗೆಯಷ್ಟು ದ್ರವ್ಯ ಕೂಡಿಟ್ಟಿದ್ದಾಳೆ. ಅಂತಹ ದೇವಮ್ಮನನ್ನು ಪರೀಕ್ಷಿಸುವ ಸಲುವಾಗಿ ಮಾದೇಶ್ವರ ಅವಳ ಮನೆಗೆ ಭಿಕ್ಷೆಗೆ ಬರುತ್ತಾರೆ. ಅವರನ್ನು ಕಂಡ ತಕ್ಷಣ 'ಏನು ಸ್ವಾಮಿ ಜಂಗಮರೇ! ಈವತ್ತು ನಮ್ಮ ಮನೆಯಲ್ಲಿ। ಬಿನ್ನ ಮಾಡಿಕೊಂಡೋಗಬೇಕು ಅಂತೇಳಿ। ಆವಾಗಲೀಗ ಆ ಜಂಗಮರನ್ನ। ಅಲ್ಲಿ ನೀವು ಚಾವಡಿ ಒಳಗೆ ಇರಬೇಕು। ನಾನು ಊಟದ ವ್ಯಾಳೆಗೆ ಸರಿಯಾಗಿ ಮಕ್ಕಳನ್ನ ಕಳಿಸ್ತಾ ಇದ್ದೀನಿ। ಬಂದು ಬಿನ್ನ ಮಾಡಿಕೊಂಡು ಹೋಗಬೇಕು ಸ್ವಾಮಿ ಅಂತೇಳಿ' –ಕಳಿಸಿ 7 ಜನ ಗಂಡುಮಕ್ಕಳಿಗೆ ನಾಗರಹಾವಿನ ವಿಷ ಸಂಗ್ರಹಿಸಿ ತರುವಂತೆ, 7 ಜನ ಹೆಣ್ಣು ಮಕ್ಕಳಿಗೆ ಕೋಲಗಳ್ಳಿ ಹಾಲು ತರುವಂತೆ

ISBN – 978-93-5526-247-9

ಹೇಳಿ ತಂದದ್ದನ್ನು ಕಜ್ಜಾಯ, ಮೊಸರಿಗೆ ಬೆರೆಸಿ ಬಡಿಸುತ್ತಾಳೆ. ಆದರೆ ಮಾದಪ್ಪ ಬದುಕಿರೋದು ಕಂಡು ಆಶ್ಚಯಪಡುವ ದೇವಮ್ಮ ಮತ್ತೊಮ್ಮೆ ಬಿನ್ನಕ್ಕೆ ಬರಬೇಕೆಂದು ಬಿನ್ನವಿಸಿಕೊಳ್ಳುತ್ತಾಳೆ. ಕಳ್ಳರ ವೇಷ ತಾಳಿ ದೇವಮ್ಮನ ತಂಗಿ ನಿಂಗಮ್ಮ ತರುವ ಕಜ್ಜಾಯವನ್ನು ತೆಗೆದಿರಿಸಿಕೊಂಡು ಪಟ್ಟದ ರಂಗಸ್ವಾಮಿ, ಮುಡುಕುತೊರೆ ಮಲ್ಲಣ್ಣ ಜಗದೀಶ್ವರರ ಜೊತೆ ಸೇರಿ ಅವರಿಗೆ ಬೇಕಾದಂತ ಬಿರುದು (ಒಡವೆ) ಧರಿಸಿಕೊಂಡು ದೇವಮ್ಮನ ಮನೆಗೆ ಕ್ವಾರಣ್ಯಕ್ಕೆ ಹೋದಾಗ ಅವರ ಮೈಮೇಲಿನ ಆಭರಣಗಳನ್ನು ಕಂಡು ಮಕ್ಕಳ ಕೈಲಿ ಹಾವಿನ ವಿಷ, ಕೋಲಗಳ್ಳಿ ಹಾಲು ತರಿಸಿ ಕಜ್ಜಾಯ ಮಾಡಿ ಬಡಿಸಿದಾಗ ತಿನ್ನಲು ಹೆದರಿದ ಪಟ್ಟದ ರಂಗಸ್ವಾಮಿ, ಮುಡುಕುತೊರೆ ಮಲ್ಲಣ್ಣ ಜಗದೀಶ್ವರರಿಗೆ ತಾನು ತಂದ ಕಜ್ಜಾಯ ಕೊಟ್ಟು ವಿಷದ ಕಜ್ಜಾಯವನ್ನು ದೇವಮ್ಮನ ಮಕ್ಕಳಿಗೆ ಕೊಡಲಾಗಿ ಅವರು ತೀರಿಕೊಂಡು, ಅವರನ್ನು ಊಳುವುದನ್ನು (ಮಾದಪ್ಪನೇ ರಂಗಸ್ವಾಮಿ, ಜಗದೀಶ್ವರರ ಜೊತೆ ಒಂದು ಪವಾಡ ಮಾಡಿ) ಸಾನುಬೋಗರು, ಪಟೇಲರ ವೇಷ ತಾಳಿ ವಿಚಾರಣೆ ನಡೆಸುತ್ತಾ ದೇವಮ್ಮನ ಹಣದ ವ್ಯಾಮೋಹ, ದುರಾಸೆಯನ್ನು ತಿದ್ದಿ, ಅವರ ಮಕ್ಕಳನ್ನು ಬದುಕಿಸುತ್ತಾರೆ. ದೇವಮ್ಮನು ತಾನು 'ಮೂಡಲ ಮಲೆ ಕೈಲಾಸಕ್ಕೆ 24 ಮೈಲಿ ಕಟ್ಟು ಕಲ್ಲು ಮೆಟ್ಟುಕಲ್ಲು ಗೇಯಿಸಿ, 12 ಅಂಕಣ ದೇವಾಲಯದ ಸುತ್ತಾ ರಜ (ಕಲ್ಲು) ಒಡೆಯುವ" ಕಾಯಕವ ಮಾಡುತ್ತಾ ಮಾದಪ್ಪನ ಒಕ್ಕಲಾಗುತ್ತಾಳೆ. ಈ ಮೂಲಕ ಅವಳ " ಕೆಚ್ಚು ಮುರಿದು। ಒಕ್ಕಲು ಮಾಡಿಕೊಂಡು ಅವರು ಮತ್ತೊಂದು ಗ್ಯಾನ ಮಡಗವರೇ। ಮಾಯಕಾರ ಮಾದೇವ".

ಮಲೆ ಮಾದೇಶ್ವರ ಕಾವ್ಯದಲ್ಲಿ ಬರುವ ಇಕ್ಕೇರಿ ದೇವಮ್ಮ, ಬೇವಿನಹಟ್ಟಿ ಕಾಳಮ್ಮರ ದುಷ್ಟತನವನ್ನು ತಿದ್ದುವ ಮಾದಪ್ಪ, ಸಂಕವ್ವೆಯ ಬಂಜೆ ಎಂಬ ಅಪವಾದವನ್ನು ನಿವಾರಿಸಿ ಅವಳ ಬದುಕನ್ನು ಹಸನಾಗಿಸುತ್ತಾರೆ. ಇಲ್ಲಿ ಬರುವ ಸ್ತ್ರೀ ಪಾತ್ರಗಳೇ ಆಗಲಿ, ಪುರುಷ ಪಾತ್ರಗಳೇ ಆಗಲಿ ಅವರ ಒಳ್ಳೆಯ ವ್ಯಕ್ತಿತ್ವವನ್ನು ಕಂಡು ಮಾದಪ್ಪ ತನ್ನ ಸಿಸುಭಕ್ತರನ್ನು ಸದಾ ಕಾಲ ಪೊರೆಯುವ, ದುಷ್ಟರನ್ನು ಅವರ ಕೆಚ್ಚು ಮುರಿದು ಒಕ್ಕಲಾಗಿ ಮಾಡಿಕೊಳ್ಳುವ ಮೂಲಕ ತನ್ನ ಭಕ್ತರ ಬಳಗ ಹೆಚ್ಚಿಸಿಕೊಂಡಿದ್ದಾನೆಂದೇ ಹೇಳಬಹುದು. ಬಡವರು, ಜೋಗಿ ಜಂಗಮರು, ದಾಸರು ಬಿನ್ನಕ್ಕೆ ಬಂದಾಗ ಅವರನ್ನು ಉಚಿತವಾಗಿ ನಡೆಸಿಕೊಳ್ಳಬೇಕೆಂಬ ಸಂದೇಶವು ಕಾವ್ಯದಲ್ಲಿ ಮಾರ್ಮಿಕವಾಗಿ ಧ್ವನಿತವಾಗಿದೆ.

ಆಕರ ಗ್ರಂಥಗಳು:


1. ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ: ಸಂ. ಡಾ.ಬಿ.ಎಸ್. ಸ್ವಾಮಿ
2. ಮಾದಪ್ಪನ ಕತೆಯ ಸುತ್ತಮುತ್ತ: ಓ ಎಲ್ ನಾಗಭೂಷಣಸ್ವಾಮಿ


***

ISBN – 978-93-5526-247-9

# 30.ಜನಪದ ಮಹಾಕಾವ್ಯಗಳಲ್ಲಿ ನಾಯಕಿಯರು

## ಧಾರ್ಮಿಕ ಪ್ರಭುತ್ವದಡಿಯಲ್ಲಿ ಗೌರಸಂದ್ರದ ಮಾರಮ್ಮ– "ಕೊರವಂಜಿಯಾಗಿ ಬರುತಾಳೋ"

ಡಾ. ಸೀಮಾ. ಎಸ್.ಆರ್

ಜಾನಪದ ಎಂಬುದು ಒಂದು ಪರಂಪರೆ. ಅದರ ಒಂದು ಅಂಗ ಜನಪದ. ಅದರಲ್ಲಿ ಎರಡು ವಿಧ. ಒಂದು ಮೌಖಿಕ ಸಾಹಿತ್ಯ ಮತ್ತೊಂದು ಲಿಖಿತ ಸಾಹಿತ್ಯ. ಮೌಖಿಕ ಸಾಹಿತ್ಯವು ಅಲಿಖಿತವಾಗಿದ್ದು ಇದರಲ್ಲಿ ಆಚಾರ ವಿಚಾರ ರೂಢಿ ಸಂಪ್ರದಾಯಗಳು ಒಳಗೊಂಡಿರುತ್ತದೆ. ಲಿಖಿತ ಸಾಹಿತ್ಯವು ಬರಹ ರೂಪದಲ್ಲಿ ದೊರೆಯುವಂತಾಗಿದ್ದು ಇದರಲ್ಲಿ ಜನಪದ ಗೀತೆ, ಕಥೆ, ಗಾದೆ, ಒಗಟು ಇವುಗಳನ್ನು ಒಳಗೊಂಡಿರುತ್ತದೆ. ಜನಪದ ಗೀತೆಗಳನ್ನು ವಿಂಗಡಿಸಿದಾಗ ಅವುಗಳನ್ನು ತ್ರಿಪದಿ, ಕಥನಗೀತೆ, ಲಾವಣಿ, ಮಹಾಕಾವ್ಯ ಎಂಬುದಾಗಿ ವಿಂಗಡಿಸಬಹುದು.

ಜನಪದ ಮಹಾಕಾವ್ಯವೆಂದರೇನು? – "ವೀರನೊಬ್ಬನ ಸಾಹಸ ಜನತೆಯ ಹೃದಯಾಂತರಾಳವನ್ನು ಪ್ರವೇಶಿಸಿ ಪುರಾಣವಾಗಿ ಮಾರ್ಪಟ್ಟು ಕಥನರೂಪದಲ್ಲಿ ಅಭಿವ್ಯಕ್ತಿಗೊಂಡಾಗ ಒಂದು ವಸ್ತುನಿಷ್ಠ ಕಾವ್ಯ ರೂಪುಗೊಳ್ಳುತ್ತದೆ. ಈ ಕಾವ್ಯ ಮೌಖಿಕವಾಗಿ ಸಾಗಿ ಬರುವಾಗ ಕಾಲಕಾಲಕ್ಕೆ ಬದಲಾವಣೆಗಳನ್ನು ಹೊಂದುತ್ತಾ ಬೆಳೆಯುತ್ತಾ ತನ್ನ ಗಾತ್ರ, ಪಾತ್ರ ಮತ್ತು ಸೂತ್ರಗಳನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಹೀಗೆ ಬೆಳೆದ ಕಾವ್ಯ ಒಬ್ಬ ವ್ಯಕ್ತಿಯದಾಗದೆ ಸಮಷ್ಟಿ ಸ್ವತ್ತಾಗಿ ಪರಿಣಮಿಸುತ್ತದೆ. ಅದು ಆ ನಾಡಿನ, ಆ ಗುಂಪಿನ, ಆ ಭಾಷೆಯ ಜೀವನಾಡಿಯಾಗಿರುವ ಸಂಸ್ಕೃತಿಯ ಪ್ರತೀಕವಾಗಿ ಇಡೀ ಗುಂಪಿನ ಸಮಷ್ಟಿಪ್ರಜ್ಞೆಯ ಪ್ರತಿರೂಪವಾಗಿ ಆ ಜನತೆಯ ಔನ್ನತ್ಯದ ಸಂಕೇತವಾಗಿ ಆವಿರ್ಭವಿಸುತ್ತದೆ. ಹೀಗೆ ಆವಿರ್ಭವಿಸುವ ರಚನೆ ಮಹಾಕಾವ್ಯ ಎನಿಸಿಕೊಳ್ಳುತ್ತದೆ." ಈ ರೀತಿಯ ರಚನೆ ಏಕ ಕವಿಕೃತವಾಗಿರದೆ ಸಮಷ್ಟಿ ಕೃತವಾಗಿರುವುದರಿಂದ ಇದನ್ನು ಜನಪದ ಮಹಾಕಾವ್ಯ ಎಂದು ಕರೆಯಲಾಗಿದೆ. ಬಹುಕವಿ ಕೃತವಾದ ಇದನ್ನು ವಿಕಾಸ ಮಹಾಕಾವ್ಯ ಗುಂಪಿಗೆ ಸೇರಿಸಲಾಗಿದೆ.

ಜನಪದ ಸಾಹಿತ್ಯ ಯಾವುದೇ ಗತಕಾಲದ ಪಳೆಯುಳಿಕೆ ಅಥವಾ ಜನಜೀವನದ ಗತಿಬಿಂಬ ಅಲ್ಲ. ಅದು ಜನಸಮುದಾಯದ ಬದುಕಿನ ಪ್ರತಿದಿನದ ಸೃಜನಶೀಲತೆ ಕಥನ. ಜನಪದ ಸಾಹಿತ್ಯಕ್ಕೂ ಮಹಿಳೆಗೂ ಅವಿನಾಭಾವ ಸಂಬಂಧವಿದೆ. ಏಕೆಂದರೆ ಜನಪದದ ಬಹುಪಾಲು ಸಾಹಿತ್ಯ ರಚನೆಯಾಗಿರುವುದು ಮಹಿಳೆಯರಿಂದಲೇ. ಇದು ನಮ್ಮ ಸಾಮಾನ್ಯ ಜನರ ಚಿತ್ರಣವನ್ನು ನೀಡುವುದರ ಜೊತೆಗೆ ಮಹಿಳೆಯರ ಮೂಕ ಜೀವನಕ್ಕೆ ದನಿಯಾಗಿದೆ. "ಯಾರಾದರೂ ಭಾರತೀಯ ಮಹಿಳೆಯರನ್ನು ಅಧ್ಯಯನ ಮಾಡಬೇಕೆಂದರೆ ಅವರು ಹೆಂಗಸರು ಹೇಳುವ ಕಥೆಗಳು, ಹಾಡುವ ಹಸೆಗಳು, ಒಡಪುಗಳು ಮತ್ತು ತೋಂಡಿ ಸಂಪ್ರದಾಯದಲ್ಲಿ ಜೀವಂತವಾಗಿ ಉಳಿದಿರುವ ಜಾಣ್ಣುಡಿ, ಆಟಗಳು ಮತ್ತು ಜಾನಪದ ಪರಂಪರೆಯ ದೇವತೆಗಳ ಪೌರಾಣಿಕತೆ ಇವೆಲ್ಲವುಗಳತ್ತ ತಮ್ಮ ಗಮನವನ್ನು ಹರಿಸಬೇಕಾಗುತ್ತದೆ" ಎನ್ನುವ ಎ.ಕೆ. ರಾಮಾನುಜಮ್ ರವರ ನುಡಿಗಳು ಜನಪದಕ್ಕೂ ಮಹಿಳೆಯರಿಗೂ ಇರುವ ಸಂಬಂಧಗಳನ್ನು ಸ್ಪಷ್ಟ ಪಡಿಸುತ್ತದೆ.

ಜನಪದ ಸಾಹಿತ್ಯ ಹೆಣ್ಣಿನ ಸ್ಥಾನಮಾನದ ಬಗ್ಗೆ ಹೇಳುತ್ತದೆ. ಮಹಿಳಾ ಚರಿತ್ರೆಯನ್ನು ಕಟ್ಟುವಲ್ಲಿ ಜನಪದ ಸಾಹಿತ್ಯ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇದು ಸ್ತ್ರೀ ಅಸ್ಮಿತೆಯನ್ನು ಎತ್ತಿ ಹಿಡಿಯುವಲ್ಲಿ ಪ್ರಮುಖ ಸ್ಥಾನವನ್ನು ವಹಿಸುತ್ತದೆ. ಅನಕ್ಷರಸ್ಥ ಮಹಿಳೆಗೆ ತಮ್ಮ ನೋವು ನಲಿವುಗಳನ್ನು ಹೇಳುವ ಸಂವಹನ ಮಾಧ್ಯಮವಾಗಿ ಇದು ಕಾರ್ಯನಿರ್ವಹಿಸುತ್ತದೆ. ಶಿಷ್ಟ ಸಾಹಿತ್ಯವನ್ನು ಅವಲೋಕಿಸಿದಾಗ ಅಲ್ಲಿ ಮಹಿಳೆಯರ ಕೃತಿಯ ಅನಾವರಣ ಗೊಂಡಿರುವುದು ಅತ್ಯಂತ ಕಡಿಮೆಯೇ. ಆದರೆ ಜನಪದ ಸಾಹಿತ್ಯದಲ್ಲಿ ನೂರಾರು, ಸಾವಿರಾರು ಮಹಿಳಾ ಸಂಕಥನಕಾರ್ತಿಯರು ಸಾಹಿತ್ಯ ಸೃಷ್ಟಿಯಲ್ಲಿ ನಮಗೆ ದೊರೆಯುತ್ತಾರೆ. ಜನಪದ ಸಾಹಿತ್ಯದ ಒಂದೊಂದು ಪ್ರಕಾರದಲ್ಲೂ ಅವರ ಪಾತ್ರಗಳೂ ವಿಭಿನ್ನವಾಗಿ, ವೈಶಿಷ್ಟ್ಯದಿಂದ ಕೂಡಿರುತ್ತದೆ. ಮಹಿಳೆಯರ ಕಥೆಗಳಲ್ಲಿ ಕಥೆಯ ಆಶಯವಾಗಿ ಅಜ್ಜಿ, ರಾಜಕುಮಾರಿಯರು ಪ್ರಧಾನಪಾತ್ರ ವಹಿಸಿದರೆ, ಕಥನಗೀತೆಗಳಲ್ಲಿ ತ್ಯಾಗ ಬಲಿದಾನ ಪ್ರಮುಖವಾಗುತ್ತದೆ. ತ್ರಿಪದಿಗಳಲ್ಲಿ ಅವಳ ಕೌಟುಂಬಿಕ ಜೀವನದ ಪಾತ್ರಗಳ ವೈವಿಧ್ಯತೆ ಅನಾವರಣಗೊಳ್ಳುತ್ತದೆ. "ಅಕ್ಷರ ಸಂಸ್ಕೃತಿಯು ಮರೆಮಾಡಿರುವ ಮಹಿಳಾ ವ್ಯಕ್ತಿತ್ವದ ಬಹುಮುಖಿ ಅನುಭವ ಲೋಕದ ಶೋಧನೆ ಮತ್ತು

ISBN – 978-93-5526-247-9 

ಪುರುಷ ಕೇಂದ್ರಿತ ಚಿಂತನಾ ಚೌಕಟ್ಟಿನಲ್ಲಿ ಸಹಜ ಅರಳುವಿಕೆಯಿಂದ ವಂಚಿತಗೊಂಡ ಸ್ತ್ರೀತ್ವದ ದಮನವನ್ನು ಇಂಥ ಅಸಮಾನ ವ್ಯವಸ್ಥೆಯ ಪ್ರತಿ ಹೆಣ್ಣು ತೋರಿದ ಅಸಹನೆ, ಅಸಮ್ಮತಿಯನ್ನು, ಮುಗ್ಧತೆಯ ನೆರಳಿನಲ್ಲಿಯೂ ಜೀವಂತವಾಗಿರುವ ಪ್ರತಿರೋಧದ ಸತ್ಯವನ್ನು ಅನ್ವೇಷಿಸುವುದು ಇಂತಹ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಪುರುಷ ಪ್ರಧಾನವಾದ ಸಂಸ್ಕೃತಿಯಲ್ಲಿ ಹೆಣ್ಣಿನ ಬಗೆಗೆ ಕೆಲವೊಂದು ಸಿದ್ಧಮಾದರಿಗಳನ್ನು ನಿರ್ಮಿಸಲಾಗಿದೆ. ಹೇಗೆ ಬಣ್ಣಗಳಿಲ್ಲದ ಸಂದರ್ಭದಲ್ಲಿ ಕೇವಲ ಕಪ್ಪು ಬಿಳುಪು ಮಾತ್ರವೇ ಬಣ್ಣವನ್ನು ಪ್ರತಿನಿಧಿಸುತ್ತಿತ್ತೋ ಅದೇ ರೀತಿಯಲ್ಲಿ ಸಮಾಜದಲ್ಲಿ ಹೆಣ್ಣು ಗಂಡುಗಳನ್ನು ಕೇವಲ ಕಪ್ಪು ಬಿಳುಪು ಮಾದರಿಯಲ್ಲೇ ಚಿತ್ರಿಸಲಾಗಿತ್ತು. ಪುರುಷ ನಿರ್ಮಿತ ಮಾದರಿಗೆ ಒಪ್ಪುವ ಹೆಣ್ಣನ್ನು ದೇವತೆಯನ್ನಾಗಿಸಿ, ಅದು ಒಪ್ಪದ ಹೆಣ್ಣು ರಾಕ್ಷಸಿಯಾಗುವ ಮಾದರಿಗಳು ನಮಗೆ ಇತಿಹಾಸದಲ್ಲಿ ಸುಲಭವಾಗಿ ದೊರೆಯುತ್ತದೆ. ಕೇವಲ ನಮ್ಮಲ್ಲಿ ಈ ಸಿದ್ಧ ಮಾದರಿಗಳು ಮಾತ್ರ ಹೆಣ್ಣಿನ ಗುಣವಾಗಿರಲು ಸಾಧ್ಯವಿಲ್ಲ ಮತ್ತು ಸಹಜವೂ ಅಲ್ಲ. ಜನಪದ ಮಹಾಕಾವ್ಯಗಳಲ್ಲಿ ಕಾಣಬಹುದಾದ ಸ್ತ್ರೀ ಸಂವೇದನೆಯ ಮಾದರಿಗಳು ಮೂರು ರೀತಿಯಲ್ಲಿ ಪ್ರಕಟಗೊಳ್ಳುತ್ತವೆ.

ಮೊದಲನೆಯದು ಗಂಡಿನ ಎಲ್ಲ ಅಧಿಕಾರವನ್ನು ಯಾವುದೇ ಪ್ರತಿಭಟನೆಯಿಲ್ಲದೆ ವಿರೋಧವಿಲ್ಲದೆ ಯಥಾವತ್ತಾಗಿ ಸ್ವೀಕರಿಸುವುದು, ಎರಡನೆಯದು ಗಂಡಿನ ಅಧಿಕಾರವನ್ನು ಪ್ರಶ್ನಿಸುವ ಮತ್ತು ಪ್ರತಿಭಟಿಸುವ ಮಾದರಿ, ಮೂರನೆಯದು ಗಂಡಿನ ಅಧಿಕಾರದ ವ್ಯಾಪ್ತಿಯನ್ನು ಮೀರಿ ಸ್ವತಂತ್ರವಾಗಿ ನೆಲೆ ನಿಲ್ಲುವುದು. ಈ ಮೂರು ಮಾದರಿಗಳನ್ನು ನಾವು ಜನಪದ ಕಾವ್ಯಪ್ರಕಾರಗಳಲ್ಲಿ ಕಾಣಬಹುದು. ಮಹಾಕಾವ್ಯಗಳಲ್ಲಿ ಬರುವ ಸ್ತ್ರೀ ಪಾತ್ರವೂ ಅತ್ಯಂತ ವಿಶಿಷ್ಟತೆಯಿಂದ ಕೂಡಿದೆ. "ಯತ್ರ ನಾರ್ಯಂತು ಪೂಜ್ಯಂತೆ ತತ್ರ ರಮಂತ ದೇವತ:" ಇಲ್ಲಿ ಎಲ್ಲಿ ಸ್ತ್ರೀಯರು ನೆಲೆಸಿರುತ್ತಾರೋ ಅಲ್ಲಿ ದೇವತೆಗಳ ವಾಸಸ್ಥಾನವಿರುತ್ತದೆ. ಆದರೆ ಜನಪದ ಸಾಹಿತ್ಯದಲ್ಲಿ ಮಹಿಳೆಯರೇ ದೇವತೆಗಳಾಗಿ ರಾರಾಜಿಸುವುದು ಕಂಡುಬರುತ್ತದೆ. ಕೆಲವು ಮಹಾಕಾವ್ಯಗಳಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ನುಡಿಗಟ್ಟನ್ನು ಹೊಡೆದು ಹಾಕುವ ರೀತಿಯಲ್ಲಿ ಹೆಣ್ಣಿನ ಕಷ್ಟಗಳಿಗ ಸ್ಪಂದಿಸುವವಳು ಹೆಣ್ಣು ಮಗಳು. ಅವಳು ದೇವತೆಯಾಗಿರಬಹುದು ಅಥವಾ ಸಾಮಾನ್ಯ ಸ್ತ್ರೀಯಾಗಿರಬಹುದು. ಇಲ್ಲಿ ಅವಳು ಪೋಷಕ ಪಾತ್ರವಾಗಿ ಕಾಣಿಸಿಕೊಳ್ಳುತ್ತಾಳೆ. ಮಾತ್ರವಲ್ಲದೆ ಹೆಣ್ಣು ಎಲ್ಲೆಲ್ಲಿ ಕಷ್ಟದಲ್ಲಿರುವವಳೋ ಅಲ್ಲಲ್ಲಿ ಸ್ಪಂದಿಸುವಂತಹ ಕೆಲಸವನ್ನು ಮಾಡುತ್ತಾಳೆ. ಯಾರೂ ಸಹಾಯ ಮಾಡದ ಸ್ಥಿತಿಯಲ್ಲಿದ್ದಾಗ ದೇವತೆಗಳು ಸಾಮಾನ್ಯವಾದ ಹೆಣ್ಣಿನ ಸ್ಥಾನವನ್ನು ತುಂಬುತ್ತಾರೆ. ಬುಡಕಟ್ಟು ಸಂಸ್ಕೃತಿಯಲ್ಲಿ ನಾಗರೀಕತೆಯಿಂದ ದೂರವಾಗಿ ತಮ್ಮದೇ ಆದ ಸಂಸ್ಕೃತಿಯಲ್ಲಿ ಬದುಕುತ್ತಿದ್ದ ಸಮುದಾಯ ಅವರದೇ ಆದ ಕಟ್ಟುಪಾಡುಗಳನ್ನು ವಿಧಿಸಿಕೊಳ್ಳುತ್ತಿದ್ದರು. ಅದು ಕೆಲವೊಮ್ಮೆ ಅವರಿಗೇ ಮಾರಕವಾಗುತ್ತಿತ್ತು. ಕಾಡಿನ ಮಧ್ಯದಲ್ಲಿ ವಾಸವಿರುತ್ತಿದ್ದ ಇವರುಗಳಿಗೆ ಹೆರಿಗೆ ಮೈಲಿಗೆಯ ವಿಷಯವಾಗಿತ್ತು. ಅಂತಹ ಸಂದರ್ಭದಲ್ಲಿ ಅವರನ್ನು ಸಮಾಧಾನಗೊಳಿಸಿ ನಿನ್ನ ಜೊತೆ ನಾನಿದ್ದೇನೆ ಎಂಬ ಆಶ್ವಾಸನೆಯನ್ನು ನೀಡುವ ಪಾತ್ರಗಳಲ್ಲಿ ದೇವತೆಗಳು ಕಂಡುಬರುತ್ತಾರೆ. ಇದು ಅವರವರ ಮನಸ್ಸಿನ ಭಯಗಳಿಗೆ ಕಂಡುಕೊಂಡ ಪರಿಹಾರ. ಒಟ್ಟಿನಲ್ಲಿ ಮಹಾಕಾವ್ಯಗಳಲ್ಲಿ ಕಂಡು ಬರುವ ಕಥಾ ನಾಯಕಿಯರಷ್ಟೇ ಸರಿಸಮಾನವಾದ ಸ್ಥಾನವನ್ನು ಅಲ್ಲಿರುವ ಸ್ತ್ರೀ ದೇವತೆಗಳು ಆವರಿಸಿಕೊಂಡಿದ್ದಾರೆ. ಅವುಗಳನ್ನೆಲ್ಲವನ್ನು ಅಧ್ಯಯನಕ್ಕೆ ಒಳಪಡಿಸಿದರೆ ಒಂದು ಸಂಶೋಧನಾ ಪ್ರಬಂಧವಾಗಬಹುದು. ಆದುದರಿಂದ ಜನಪದ ಮಹಾಕಾವ್ಯಗಳಲ್ಲಿ ವಿಶಿಷ್ಟವೂ ವಿಶಾಲವೂ ಆದ ಜುಂಜಪ್ಪನ ಕಾವ್ಯದಲ್ಲಿ ಕಂಡು ಬರುವ ಸ್ತ್ರೀ ದೇವತೆಗಳನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಮಾರಿಯರು, ಎರಡನೆಯದು ಕಾಳಿಯರು ಮೂರನೆಯದು ದುರ್ಗಿಯರು. ಇದರಲ್ಲಿ ಪ್ರಮುಖಳಾದ ಗೌರಸಂದ್ರದ ಮಾರಮ್ಮ ಹೇಗೆ ಕಾವ್ಯದ ಸೂತ್ರದಾರಳಾಗಿ ಕಂಡುಬರುತ್ತಾಳೆ ಎಂಬುದನ್ನು ಗಮನಿಸಬಹುದು.

ಜುಂಜಪ್ಪ ಕಾಡುಗೊಲ್ಲ ಸಮುದಾಯದ ಬುಡಕಟ್ಟು ವೀರ. ಸುಮಾರು 17ನೇ ಶತಮಾನದಲ್ಲಿ ತನ್ನ ಸಮುದಾಯದ ನಡುವೆ ಬದುಕಿದವನು. ತನ್ನ ಸಮುದಾಯದ ಆಸ್ತಿಯಾದ ದನಕರುಗಳ ರಕ್ಷಣೆಗೋಸ್ಕರ ಹೋರಾಡಿ ತನ್ನ ಸೋದರ ಮಾವಂದಿರ ಕುತಂತ್ರಕ್ಕೆ ಬಲಿಯಾಗಿ ಪ್ರಾಣತೆತ್ತ ಸಮುದಾಯದ ನಾಯಕ. ತುಮಕೂರು ಜಿಲ್ಲೆ ಕಳುವೋರಳ್ಳಿ ಜುಂಜಪ್ಪ ಹುಟ್ಟಿ ಬೆಳೆದ ಹಳ್ಳಿ. ಪಶುಪಾಲಕರಾದ ಕಾಡುಗೊಲ್ಲರು ದಕ್ಷಿಣ ಕರ್ನಾಟಕದ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹರಡಿಕೊಂಡಿದ್ದಾರೆ.

ISBN – 978-93-5526-247-9

ಮಾರಿಯರಲ್ಲಿ ಪ್ರಧಾನವಾದ ಹೆಸರು ಗೊಲ್ಲರ ಕುಲದೈವರೆಂದು ಕಂಡು ಬರುವ ಗೌರಸಂದ್ರದ ಮಾರಮ್ಮನದು. ಜುಂಜಪ್ಪ ಮಹಾಕಾವ್ಯದ ಪ್ರಮುಖ ಸ್ತ್ರೀ ಪಾತ್ರಗಳಲ್ಲಿ ಒಂದು. ಈ ಪಾತ್ರವನ್ನು ಹೊರತು ಪಡಿಸಿ ಕಾವ್ಯವನ್ನು ನೋಡಿದಾಗ ಅದು ಸಂಪೂರ್ಣವಾಗಿಲ್ಲವೆಂದೇ ತೋರುತ್ತದೆ. ಒಂದು ಕುಟುಂಬದಲ್ಲಿ ಆಗುಹೋಗುವ ಸಂಗತಿಗಳನ್ನು ಹೇಳುವಲ್ಲಿ ಕಷ್ಟಕ್ಕೆ ಸಹಾಯ ಮಾಡುವಲ್ಲಿಯಾಗಲೀ ತುಂಬಾ ಮುಖ್ಯಳಾಗಿ ಗೌರಸಂದ್ರದ ಮಾರಮ್ಮ ಕಂಡುಬರುತ್ತಾಳೆ. ಕಾವ್ಯದ ತುಂಬೆಲ್ಲಾ ಕಣಿ ಹೇಳುವ ಕೊರವಂಜಿಯಾಗಿ ಕಾವ್ಯ ಮುಂದುವರಿಸಲು ಪ್ರಮುಖ ವಾಹಕ ಶಕ್ತಿಯಾಗಿ ಇವಳು ಕಾಣಿಸಿಕೊಳ್ಳುತ್ತಾಳೆ. ಮಾರುಮುತ್ತಣ್ಣ ತನ್ನ ವಂಶ ಉದ್ದಾರ ಆಗುತ್ತದೋ ಇಲ್ಲವೋ ಎಂದು ಯೋಚಿಸುತ್ತಾ ಇರಬೇಕಾದರೆ ಕಣಿ ಹೇಳಲು ಈ ಗೌರಸಂದ್ರದ ಮಾರಮ್ಮ ಬರುತ್ತಾಳೆ. ಸಾತಮ್ಮ ತನ್ನ ಗಂಡನನ್ನು ಕಾಡಿನಲ್ಲಿ ಹುಡುಕಿಕೊಂಡು ಹೊರಟಾಗ ಕಣಿ ಹೇಳೋ ಕೊರವಂಜಿಯಾಗಿ, ಮೂಗುತಿ ಮುಂಭಾರವಾಗಿ ಕಾಡಿನಲ್ಲಿ ಕಂಡುಬರುತ್ತಾರೆ. ಅವಳನ್ನು ಕಂಡ ಸಾತಮ್ಮ ಮಾರಮ್ಮನ ಹತ್ತಿರ ಹೋಗಿ ಕಣಿಯನ್ನು ಕೇಳುತ್ತಾಳೆ. ಆಗ ಮಾರಮ್ಮ ಹೇಳುವ ಮಾತು "ಆರು ಜನ ವಾರಗಿತ್ತಿಯರು ಕತ್ತ ಕಟ್ಟುವಂತ ಗೂಡಕು ಕಟ್ಟಿ ನನ್ನ ಹೊಡಿಸಿಬಿಡುತ್ತಾನೆ" ಅಲ್ಲದೆ ಇಂದು ಬೇಡ ನಾನು ನಾಳೆ ಇಷ್ಟೊತ್ತಿಗೆ ಇಲ್ಲಿ ಬರುತ್ತೇನೆ, ನೀನೂ ಬಾ ಎಂದು ಕರೆಯುತ್ತಾಳೆ. ಅಲ್ಲದೆ ಸಾತಮ್ಮ ಯಾವ ರೀತಿ ತಾವು ತನ್ನ ಗಂಡನನ್ನು ನೋಡಬೇಕು ಸೇರಬೇಕು ಎಂಬುದನ್ನು ತೋರಿಸಿಕೊಟ್ಟಳು. ಇಲ್ಲಿ ಗೌರಸಂದ್ರ ಮಾರಮ್ಮ ಹೇಳುವ ಮಾತು ಪುರುಷ ಪ್ರಧಾನ ಸಮಾಜದಲ್ಲಿ ಗಂಡಿನ ದೌರ್ಜನ್ಯವನ್ನು ಬಯಲುಗೊಳಿಸುತ್ತದೆ. ಅಲ್ಲದೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಮಾರಮ್ಮ ಇದನ್ನು ಯಾವುದೇ ವಿಷಯವನ್ನು ಗಂಡಿನ ಮುಂದೆ ಹೇಳದೆ ಅದನ್ನು ಮಹಿಳೆಯರ ಮುಂದೆ ತಮ್ಮ ಅಳಲನ್ನು ತೋಡಿಕೊಳ್ಳುವುದು. ಇದರ ಹಿಂದಿರುವ ಜಾಗೃತ ಪ್ರಜ್ಞೆಯನ್ನು ಗಮನಿಸಬೇಕು. ಪುರುಷಾಧಿಪತ್ಯದ ಅಡಿಯಲ್ಲಿ ಮಹಿಳೆಯ ಮೇಲೆ ವಿಧಿಸುವ ಕಟ್ಟುಪಾಡುಗಳ ಹಿನ್ನಲೆಯಲ್ಲಿ ಜಾಗೃತಗೊಳಿಸುವುದು ಮಾತ್ರವಲ್ಲ, ಸಮಾಜದ ಬಗ್ಗೆ ಎಚ್ಚರಿಕೆ ನೀಡುವುದೂ ಕೂಡ ಇದೆ. ಆದ್ದರಿಂದಲೇ ಇಲ್ಲಿ "ಪುರುಷನ ಲಂಪಟತನ ಹಾಗೂ ದರ್ಪದೌರ್ಜನ್ಯಗಳನ್ನು ಬಯಲು ಮಾಡುವ ಮೂಲಕ ಮಹಿಳೆಯನ್ನು ಜಾಗೃತಗೊಳಿಸುವ ದೃಷ್ಟಿ ಕಂಡುಬರುತ್ತದೆ. ಅಲ್ಲದೆ ಹೀಗೆ ಹೇಳಿದ ಕೊರವಂಜಿ ಹಾಗೆಯೇ ಮುಂದೆ ಹೋಗದೆ ಬೇಗನೆ ಸ್ವಲ್ಪ ಕಣಿ ಹೇಳಿ ಹೋಗುತ್ತೇನೆಂದು ತೀರ್ಮಾನಿಸುತ್ತಾಳೆ." ಈ ತೀರ್ಮಾನದಲ್ಲಿ ಕಷ್ಟಗಳಿಗೆ ಸ್ಪಂದಿಸುವ ಗುಣ ಹಾಗೂ ಗಂಡಿನ ದೌರ್ಜನ್ಯ ಎದುರಿಸುವ ಶಕ್ತಿಯನ್ನು ಕಾಣುತ್ತೇವೆ. ಜುಂಜಪ್ಪನನ್ನು ದೈವವಾಗಿಸುವಲ್ಲಿ ಚೆನ್ನಮ್ಮನ ಪಾತ್ರ ಅತ್ಯಂತ ದೊಡ್ಡದು. ಜುಂಜಪ್ಪನ ಹುಟ್ಟನ್ನು ಶಂಕಿಸುವ ಮನೆದೇವರಹಟ್ಟಿ ಗೌಡ ಮತ್ತು ಪೂಜಾರಿಗೆ ಮಾರಮ್ಮ ದೇವರು 'ನಿಮ್ಮನೆ ಸಿನ್ನಮ್ಮನ ಹೊಟ್ಟೆಯೊಳಗೆ ಹುಟ್ಟುತ್ತಾನೆ, ಅವನನ್ನು ಪೂಜಿಸಿರಿ ಎಂದು ನುಡಿಯುತ್ತಾಳೆ. ಅಲ್ಲದೆ ಜುಂಜಪ್ಪನ ತಂದೆ ಕೆಂಗರು ಮಲ್ಲೇಗೌಡ ತನ್ನ ತಂದೆ ತಾಯಿ ಸತ್ತು ಹೋದ ಸಂದರ್ಭದಲ್ಲಿ ಅನಾಥವಾಗಿ ಬಿದ್ದಿದ್ದ ಮಲ್ಲೇಗೌಡನನ್ನು ಅವರ ದೊಡ್ಡಪ್ಪನ ವಶಕ್ಕೆ ಒಪ್ಪಿಸಿದ್ದಳು.

ಹಾಗೆಯೇ ಕಾವ್ಯದಲ್ಲಿನ ಮುಂದುವರಿಕೆಯ ಸೂತ್ರಧಾರಳಾಗಿ ಗೌರಸಂದ್ರದ ಮಾರಮ್ಮ ಕಾಣಿಸಿಕೊಳ್ಳುತ್ತಾಳೆ. ಕೆಂಗರು ಮಲ್ಲೇಗೌಡನು ಊರುಬಿಟ್ಟು ಹೋದಾಗ ತಮಗೆ ಮದುವೆ ಮಾಡುವುದಿಲ್ಲವೇ ಎಂದು ಕೇಳುತ್ತಾರೆ. ಆಗ ಹೊನ್ನಟ್ಟಾಲೆ ಗೌಡ ತಮ್ಮ ಮಗ ಎಲ್ಲಿದ್ದಾನೋ ಎಂದು ಆಲೋಚನೆ ಮಾಡುತ್ತಿದ್ದಾಗ ಅವನ ಕನಸಿನಲ್ಲಿ ಬಂದಂತಹ ಗೌರಸಂದ್ರದ ಮಾರಮ್ಮ 'ನಿನ್ನ ಮಗ ಇರೋ ಜಾಗ ನಾನು ತೋರಿಸ್ತೀನಿ ನಿನ್ನ ಮಕ್ಕಳಿಗೆ' ಎಂದು ಆಶ್ವಾಸ ನೀಡುತ್ತಾಳೆ. ಇಡೀ ಸ್ತ್ರೀ ಕುಲಕ್ಕೆ ಗರಿ ಮೂಡಿಸುವಂತಹ ಪ್ರಸಂಗಗಳು ಗೌರಸಂದ್ರದ ಮಾರಮ್ಮನ ಪಾತ್ರದಲ್ಲಿ ಕಾಣಸಿಗುತ್ತವೆ. ಪ್ರಭುತ್ವಕ್ಕೆ ವಿರುದ್ಧವಾಗಿ ಪ್ರತಿಸಂಸ್ಕೃತಿಯು ತೋರುವ ಎದೆಗಾರಿಕೆಯನ್ನು ಇಲ್ಲಿ ನೋಡಬಹುದು. ಮನೆದೇವ್ರು ಹಟ್ಟಿಯ ಗೌಡ ಮತ್ತು ಪೂಜಾರಿಗೆ ಕಣಿ ಹೇಳಲು ಹೋದಂತಹ ಸಂಧರ್ಭದಲ್ಲಿ ಕಣಿ ಹೇಳಿದ ಮಾರಮ್ಮನಿಗೆ ಹೊನ್ನು ಕೊಡಲು ಮುಂದಾಗುತ್ತಾರೆ. ಆದರೆ ಮಾರಿ ಇದನ್ನು ತಿರಸ್ಕರಿಸುತ್ತಾಳೆ. **"ನಿಮ್ಮ ಹೊನ್ನು ನಮ್ಮ ಅರಮನೆಯೊಳಗೆ ತಗ್ಗುಲುಳ್ಳಿ ಮುಗ್ಗುಲು ರಾಗಿಯಾಗಿ ಬಿದ್ದೈತೆ, ಬಂಗಾರದ ಹೊನ್ನು ನನಗೇನೋ ಬೇಕು, ಹೋಗ್ರಲಾ ತಾಂಬ್ರದವು ಮೂರು ತೂತು ಬುಟ್ಟು ತಂದು ಕಣಿ ಕೇಳದಿಲಾಕಿಕ್ಕಿದರೆ ಹೇಳತೀನಿ ಕಣೇಯ",** ಎಂಬ ಮಾತುಗಳು ಇಡೀ ವ್ಯವಸ್ಥೆಯ ಧ್ವನಿಯನ್ನು ಎತ್ತಿಹಿಡಿಯುತ್ತದೆ. ಮನುಷ್ಯನ ಆರ್ಥಿಕ ಚಟುವಟಿಕೆಯ ಪ್ರಥಮ ಹಂತದಲ್ಲಿ ಮಹಿಳೆಯ ಪಾತ್ರ ತುಂಬಾ ಮಹತ್ವದಾಗಿದ್ದಿತು. ಎಲ್ಲ ಪದ್ಧತಿಗಳು ಮತ್ತು ಸಾಂಸ್ಕೃತಿಕ ಲಕ್ಷಣಗಳು ಸ್ತ್ರೀಯಿಂದಲೇ ಸಂವಹನಗೊಳ್ಳುತ್ತಿದ್ದವು. ಇಂತಹ ಪರಿಸ್ಥಿತಿಯಲ್ಲಿ ಅವಳು ಆರ್ಥಿಕವಾಗಿ ತುಂಬಾ ಸಬಲಳಾಗಿದ್ದಳು. ಅಂತಹ ಒಂದು ವ್ಯವಸ್ಥೆಯನ್ನು ಗೌರಸಂದ್ರದ ಮಾರಮ್ಮ ತೋರಿಸಿಕೊಡುತ್ತಾಳೆ. ನನಗೆ ಬೇಕಾಗಿರುವುದು ಚಲಾವಣೆಯಲ್ಲಿರುವ ತೂತುಬಟ್ಟುಗಳೇ

ISBN – 978-93-5526-247-9

ಹೊರತು ರಾಶಿರಾಶಿಯಾಗಿ ಮುಗ್ಗಲು ಬಿದ್ದಿರುವ ಚಿನ್ನವಲ್ಲ ಎಂದು ಹೇಳುವಲ್ಲಿ ಕೆಳವರ್ಗದ ಆರ್ಥಿಕ ವ್ಯವಸ್ಥೆಯನ್ನು ಎತ್ತಿಹಿಡಿದಿದ್ದಾಳೆ.

ಅಷ್ಟೇ ಅಲ್ಲದೆ ಕೆಲವು ಕಡೆ ಸಾಮಾನ್ಯ ಸ್ತ್ರೀಯಾಗಿ ಕಾಣುವ ಗೌರಸಂದ್ರದ ಮಾರಮ್ಮ ಇನ್ನು ಕೆಲವು ಕಡೆ ಆದಿಶಕ್ತಿಯಾಗಿ ಕಾಣಿಸಿಕೊಂಡಿದ್ದಾಳೆ. ಹೆಣ್ಣು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಅವಳು ಜೈವಿಕವಾಗಿ ಹೆಣ್ಣು ಎಂಬ ಕಾರಣದಿಂದಲೇ ಅವಕಾಶ ವಂಚಿತಳಾಗುತ್ತಾಳೆ. ಹೆಣ್ಣನ್ನು ಆದಿಶಕ್ತಿ ಎಂದು ಪೂಜಿಸುವ ಸಮಾಜದಲ್ಲಿಯೇ ಸಾಮಾನ್ಯಳಾದ ಹೆಣ್ಣುಮಗಳನ್ನು ಯಾವುದೇ ಕೆಲಸಕ್ಕೆ ಬಾರದವಳು ಎಂದು ಹಂಗಿಸುವುದಕ್ಕೂ ಈ ಸಮಾಜ ಯೋಚಿಸುವುದಿಲ್ಲ.  ಹೆಣ್ಣು ದೇವತಾ ಸ್ವರೂಪದವಳಾಗಿದ್ದರೆ ಆ ಮಾತು ಬೇರೆ. ಅದೇ ಹೆಣ್ಣು ದೇವತೆಯ ವೇಷ ಬಿಟ್ಟು ಹೆಣ್ಣಿನ ವೇಷವನ್ನು ತೊಟ್ಟರೆ ಆಗ ಅದೇ ಜನ ಅವಳನ್ನು "ಯಾಕಮ್ಮ ಹೆಣ್ಣು ಮಗುವೇ ನಿನಗೇನು ಕೆಲಸವಮ್ಮ... ಬ್ಯಾಡ ನಮ್ಮ ಜತಿಗೂಡೋ" ಎಂದು ತಿರಸ್ಕರಿಸುತ್ತಾರೆ. ಅದೇ ಹೆಣ್ಣು ದೇವತೆಯಾಗಿ ತನ್ನ ಸ್ವರೂಪವನ್ನು ತೋರಿದಾಗ ಕಾಲಿಡಿಯುವಂತಹ ಪ್ರಸಂಗ ಕಂಡುಬರುತ್ತದೆ. ಇಲ್ಲಿ ನಾವು ಅಧಿಕಾರಿ ಶಾಹಿ ರಾಜಕೀಯವನ್ನು ನೋಡಬಹುದು. ಗೌರಸಂದ್ರದ ಮಾರಮ್ಮ ದೇವರಾಗಿದ್ದಾಗ ಜನ ನಡೆದುಕೊಳ್ಳುವ ರೀತಿಗೂ ಅವಳು ಸಾಮಾನ್ಯ ಸ್ತ್ರೀಯಾಗಿದ್ದಾಗ ನಡೆಸಿಕೊಂಡು ಹೋಗುವ ರೀತಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಅಲ್ಲದೆ ತನ್ನನ್ನು ಕೀಳಾಗಿ ನೋಡಿದಂತಹ ವ್ಯಕ್ತಿಗಳನ್ನು ದಂಡಿಸುವಂತಹ ಕೆಲಸವನ್ನು ಕೂಡ ಗೌರಸಂದ್ರದ ಮಾರಮ್ಮ ಮಾಡುತ್ತಾಳೆ.

ಗೌರಸಂದ್ರದ ಮಾರಮ್ಮನನ್ನು ಹೊರತುಪಡಿಸಿದರೆ ಜುಂಜಪ್ಪನ ಕಾವ್ಯಗಳಲ್ಲಿ ಕಂಡುಬರುವ ಇತರ ಮಾರಿಯರೆಂದರೆ ಕರಿಬೇವಿನ ಹಳ್ಳಿ ಮಾರಿ, ಬೇವಿನಹಳ್ಳಿ ಕರಿಯಮ್ಮ, ಕದ್ರಂಬಳೆ ಮಾರಿ, ಹಾಗಲವಾಡಿ ಕರಿಯಮ್ಮ, ದಣ್ಣೆನು ಮಾರಮ್ಮ, ಸಿಕ್ಕವಳ್ಳಿ ಕರಿಯಮ್ಮ ಇನ್ನು ಮುಂತಾದವರು. ಇವರು ಒಂದಲ್ಲ ಒಂದು ದೃಷ್ಟಿಯಿಂದ ಜುಂಜಪ್ಪನಿಗೆ ಅಧೀನರಾಗಿರುವುದು ಕಂಡುಬರುತ್ತದೆ. ಇವರೆಲ್ಲರನ್ನು ಜುಂಜಪ್ಪ ತನ್ನ ವಿರುದ್ಧ ಧ್ವನಿ ಎತ್ತಿದವರನ್ನು ಸಂಹಾರ ಮಾಡಲು ಅಥವಾ ಬುದ್ಧಿ ಕಲಿಸುವ ಅಸ್ತ್ರವಾಗಿ ಬಳಸುತ್ತಾನೆ. ಹಾಗಾಗಿ ಜುಂಜಪ್ಪ ಅವರನ್ನೆಲ್ಲಾ ಕರೆದಾಗ ಅವರು ಜುಂಜಪ್ಪನ ಹತ್ತಿರ ಓಡೋಡಿ ಬರುವುದನ್ನು ಕಾಣಬಹುದು. ಇಲ್ಲಿ ಮತ್ತೆ ಪುರುಷಪ್ರಧಾನ ವ್ಯವಸ್ಥೆಯ ಹಿಡಿತವನ್ನು ಗಮನಿಸಬಹುದು. ಒಂದು ಕಡೆ ಇಡೀ ಕಾವ್ಯದ ಸೂತ್ರಧಾರಳಾಗಿ ಬರುವ ಮಾರಮ್ಮ ವಿಶಿಷ್ಟವಾದ ಪಾತ್ರದಲ್ಲಿ ಕಂಡರೆ ಅದೇ ಉಳಿದ ಮಾರಿಯರು ಕೇವಲ ಆಜ್ಞಾಪಾಲಕರಾಗಿ ಕಂಡು ಬರುವುದನ್ನು ನೋಡಬಹುದು. ಜುಂಜಪ್ಪನ ಕಾವ್ಯದಲ್ಲಿ ಕಂಡು ಬರುವ ಮತ್ತೊಂದು ವಿಭಿನ್ನವಾದ ಪಾತ್ರ ತಾಳೇದುರುಗಿಯದು. ಉಳಿದ ಸ್ತ್ರೀ ಪಾತ್ರಗಳು ಜುಂಜಪ್ಪನ ಪರವಾಗಿ ನಿಂತರೆ ಈ ಪಾತ್ರ ಮಾತ್ರ ಜುಂಜಪ್ಪನಿಗೆ ಸವಾಲು ಎಸೆಯುವಂತಹ ಪಾತ್ರವಾಗಿ ಕಂಡುಬರುತ್ತದೆ. ಇಲ್ಲಿ ಇದನ್ನು ವಿಸ್ತರಿಸಲು ಸಾಧ್ಯವಾಗದ ಕಾರಣ ಅದರ ಪರಿಚಯವನ್ನು ಮಾತ್ರ ಕೊಟ್ಟಿದ್ದೇನೆ.

ಒಟ್ಟಾರೆಯಾಗಿ ಹೇಳುವುದಾದರೆ ಗೌರಸಂದ್ರದ ಮಾರಮ್ಮಜುಂಜಪ್ಪನ ಕಾವ್ಯದಲ್ಲಿ ಪೋಷಕ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾಳೆ ಎಂದೆನಿಸಿದರೂ ಅವಳೇ ಮುಖ್ಯ ಭೂಮಿಕೆಯಲ್ಲಿ ಕಂಡುಬರುತ್ತಾಳೆ. ಮಾತೃ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯು ನಿರ್ವಹಿಸುತ್ತಿದ್ದ ಎಲ್ಲಾ ರೀತಿಯ ಪಾತ್ರಗಳನ್ನು ಇಲ್ಲಿ ಗೌರಸಂದ್ರದ ಮಾರಮ್ಮ ನಿರ್ವಹಿಸಿದ್ದಾರೆ. ಜುಂಜಪ್ಪನ ಹುಟ್ಟಿನಿಂದ ಪ್ರಾರಂಭವಾದ ಅವಳ ಅಸ್ತಿತ್ವ ಇಡೀ ಕಾವ್ಯದ ತುಂಬಾ ಆವರಿಸಿಕೊಂಡಿದೆ.

ಆಕರ ಗ್ರಂಥಗಳು:


1. ಮಹಿಳೆ, ಸಾಹಿತ್ಯ – ಸಂಸ್ಕೃತಿ– ಡಾ.ಶಾಂತಾ  ಇಮ್ರಾಪುರ, ಚೇತನಾ ಪ್ರಕಾಶನ, ಧಾರವಾಡ
2. ಜುಂಜಪ್ಪ– ಬುಡಕಟ್ಟು ಮಹಾಕಾವ್ಯ ಮಾಲೆ , ಸಂ., ಚಲವರಾಜು, ಪ್ರಸಾರಾಂಗ ಕನ್ನಡ ವಿವಿ ಹಂಪಿ
3. ಜನಪದ ಮಹಾಕಾವ್ಯ– ತೀ. ನಂ. ಶಂಕರನಾರಾಯಣ, ಕರ್ನಾಟಕ ಸಂಘ, ಪುತ್ತೂರು.
4. ಮಹಿಳಾ ಸಂಕಥನ– ಡಾ. ಗಾಯತ್ರೀ ನಾವಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
5. ಪ್ರಭುತ್ವ ಮತ್ತು ಸಂಘರ್ಷ– ಡಾ. ಎಸ್.ಎಂ. ಮುತ್ತಯ್ಯ, ಸಿವಿಜೆ ಪಬ್ಲಿಕೇಷನ್ಸ್, ಬೆಂಗಳೂರು.


***

# 31. ಜುಂಜಪ್ಪನ ಕಾವ್ಯ: ಮಹಿಳೆಯನ್ನು ಕಾಡುವ ಸತ್ವ ಪರೀಕ್ಷೆಗಳು

ಡಾ.ಪುಷ್ಪಭಾರತಿ ಆರ್.ಎ

ಮಹಾಕಾವ್ಯ ಪರಂಪರೆ ಪ್ರಪಂಚದಾದ್ಯಂತ ಹರಡಿರುವ ಬೇರ ಬೇರೆ ಸಂಸ್ಕೃತಿಗಳ ಕನ್ನಡಿಯಾಗಿರುತ್ತ, ಎಲ್ಲ ದೇಶಗಳ, ಎಲ್ಲಾ ಭಾಷೆಗಳ ಒಳಗೂ ಮಹಾಕಾವ್ಯಗಳು ಇದ್ದೇ ಇರುವ ಸಾಧ್ಯತೆಯನ್ನು ಊಹಿಸಲು ಆಗಿದ್ದು ಜನಪದ ಮಹಾಕಾವ್ಯ ಪರಂಪರೆಯನ್ನು ಕಂಡುಕೊಂಡ ಮೇಲೆಯೇ ಅಕ್ಷರಸ್ಥ ಸಮಾಜದ ಮಹಾಕಾವ್ಯಗಳು ಜನರ ಮನ್ನಣೆಗಳಿಸುತ್ತ ಹೋಗಿದ್ದವು. ಅವುಗಳ ಪಠಣ, ಶ್ರವಣ ಪುಣ್ಯ ಸಂಚಯನದ ಮಾರ್ಗವೆನಿಸಿಕೊಂಡ ಜನಪ್ರಿಯವೂ ಆಗಿದ್ದವು. ಇದರ ಹುಟ್ಟು ಮತ್ತು ಬೆಳವಣಿಗೆಗೆ ತಳಹದಿಯಾಗಿ ಬಂದಿದ್ದ ಅನಕ್ಷರಸ್ಥ ಜಾನಪದ ಸಾಹಿತ್ಯ ಶಕ್ತಿ ಮುನ್ನೆಲೆಗೆ ಬಂದಿದ್ದು ಬಹುತಡವಾಗಿ. ಅಕ್ಷರ ರೂಪದಲ್ಲಿದ್ದ ಭಾರತೀಯ ಧಾರ್ಮಿಕ ಮಹಾಕಾವ್ಯಗಳಾಗಿ ರಾಮಾಯಣ, ಮಹಾಭಾರತಗಳು, ಹಳಗನ್ನಡ ಕಾಲದ ನಿರ್ದಿಷ್ಟ ಲಕ್ಷಣಗಳ, ಅಷ್ಟಾದಶವರ್ಣನೆಗಳ ಮಹಾ ಕಾವ್ಯಗಳಾಗಿ ಜನರ ಮನ್ನಣೆಗೆ ಬಹುಕಾಲ ಪಾತ್ರವಾಗಿದ್ದವು. ಪಾಶ್ಚಾತ್ಯರ ಚಿಂತನೆಗಳು ಭಾರತಕ್ಕೆ ಹರಿದಾಗ ಜನಪದ ಮಹಾಕಾವ್ಯಗಳ ಕಡೆಗೆ ಗಮನ ನೀಡುವಂತಾಯಿತು. "ಸಿ.ಎಂ.ಬೋವ್ರನಂಥ ಒಬ್ಬ ಪ್ರಮುಖ ವಿದ್ವಾಂಸ ಈ ಮೌಖಿಕ ಮಹಾಕಾವ್ಯ ಮತ್ತು ಶಿಷ್ಟ ಮಹಾಕಾವ್ಯದ ಸ್ವರೂಪದ ಬಗ್ಗೆ ಚರ್ಚಿಸುತ್ತಾ ಈ ಎರಡು ಬಗೆಯ ಮಹಾಕಾವ್ಯಗಳಲ್ಲಿ ವಾಚಕ ಮಹಾಕಾವ್ಯವೇ ಶುದ್ಧವಾದ, ಸಹಜವಾದ, ನೇರವಾದ, ನಿರರ್ಗಳವಾದ, ನಾಗರೀಕತೆಯಿಂದ ಕಲುಷಿತವಾಗದ ಕವಿಯವಾಣಿ ಎಂದು ಘೋಷಿಸಿದ"[1] ಅಂತಹ ಶುದ್ಧ ಮೌಖಿಕ ಜನಪದ ಮಹಾ ಕಾವ್ಯಗಳಾಗಿ ಪಾಶ್ಚಾತ್ಯರಲ್ಲಿ ಕಲೇವಾಲಾ, ಗಿಲ್ಗಮಿಷ್, ಬೋವುಲ್ಫ್‌ಗಳು, ಕನ್ನಡದಲ್ಲಿ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ ಮಹಾಕಾವ್ಯಗಳು ಶ್ರೀಮಂತ ಕರ್ನಾಟಕ ಸಂಸ್ಕೃತಿಯ ಪ್ರತೀಕಗಳಾಗಿವೆ.

ಶಿಷ್ಟ ಮಹಾಕಾವ್ಯಗಳಿಗೂ, ಜನಪದ ಮಹಾಕಾವ್ಯಗಳಿಗೂ ಹೋಲಿಕೆ–ವ್ಯತ್ಯಾಸಗಳಿವೆ. ಅಕ್ಷರ ಕಾವ್ಯಗಳಲ್ಲಿ ಪ್ರಜ್ಞಾಪೂರ್ವಕವಾಗಿ, ಪ್ರಯತ್ನ ಪೂರ್ವಕವಾಗಿ ಜನಜೀವನ ವರ್ಣಿಸಲ್ಪಡುತ್ತದೆ. ಮೌಖಿಕ ಮಹಾಕಾವ್ಯಗಳಲ್ಲಿ ಜನಜೀನವ ಹೇಗಿತ್ತೋ ಹಾಗೆ ವಿವರಿಸಲ್ಪಡುತ್ತದೆ. ಶಿಷ್ಟ ಮಹಾಕಾವ್ಯಗಳಲ್ಲಿನ ಅದ್ಭುತ, ರಮ್ಯ ಪ್ರಸಂಗಗಳು ಸಾಧನೆಗಳು, ಶೌರ್ಯ, ಪವಾಡಗಳೆನಿಸಿದರೆ, ಜನಪದ ಮಹಾಕಾವ್ಯಗಳಲ್ಲಿ ಉತ್ಪ್ರೇಕ್ಷೆಯ ಹಿಂದಿನ ಆಶಯಗಳಾಗಿರುತ್ತವೆ.

ಹಾಗೆಯೇ ಹೋಲಿಕೆಗಳು ಸಾಮಾನ್ಯವಾಗಿರುವುದನ್ನು ಗಮನಿಸಬಹುದು. ಎರಡೂ ಕಡೆ ಮಹಿಳೆಯ ಸ್ಥಾನ ಮಾತ್ರ ಕೊಂಚವೂ ಅಲುಗಿಲ್ಲ. ಕತ್ತಿ ಅಲಗಿನ ಮೇಲೆಯೇ ನಡೆಯುವ ಹೆಣ್ಣು ಶಿಷ್ಟ ಮಹಾಕಾವ್ಯದಲ್ಲಿ, ಜನಪದ ಮಹಾಕಾವ್ಯದಲ್ಲಿ ಸಹಜವೆನ್ನುವಷ್ಟು ಸಾಮಾನ್ಯ. ರಾಮಾಯಣದ ಸೀತೆಯಷ್ಟೇ ಮಹಾಭಾರತದ ದ್ರೌಪದಿಯಷ್ಟೇ ಕಷ್ಟ, ಸಂಕಟ, ನೋವು ಅನುಮಾನ, ಅಪಮಾನಗಳಿಗೆ ಮಲೆಮಾದೇಶ್ವರ ಕಾವ್ಯದ ನೀಲೇಗೌಡನ ಹೆಂಡತಿ ಸಂಕಮ್ಮನೂ, ಜುಂಜಪ್ಪನ ಮಹಾಕಾವ್ಯದ ಜುಂಜಪ್ಪನ ತಾಯಿ ಸಿನ್ನಮ್ಮನೂ ಗುರಿಯಾಗಿದ್ದಾರೆ.

ಪ್ರಸ್ತುತ ಲೇಖನದಲ್ಲಿ ಅಂತಹ ಬದುಕು ಬಾಳಿದ ಸಿನ್ನಮ್ಮನ ಜೀವನವನ್ನು ಕುರಿತು ಒಂದು ವಿಶ್ಲೇಷಣೆಯನ್ನು ಮಾಡುವ ಮೂಲಕ ಭಾರತೀಯ ಮಹಿಳೆ ಮುಖಾಮುಖಿಯಾದ, ಆಗುತ್ತಿರುವ ಸಂದಿಗ್ಧಗಳ ಬಗೆಗೆ ವಿಚಾರ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

1. ಕೃತಿ: ಬುಡಕಟ್ಟು ಮಹಾಕಾವ್ಯ ಮಾಲೆ: ಜುಂಜಪ್ಪ: ಸಂಪಾದಕರು: ಚೆಲುವರಾಜು: ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ವಿದ್ಯಾರಣ್ಯ, ಕಮಲಾಪುರ, ಪ್ರಸ್ತಾವನೆ : ಹಿ.ಚಿ ಬೋರಲಿಂಗಯ್ಯ ಮತ್ತು ಡಾ.ಜಿ.ಎಸ್.ಶಿವರುದ್ರಪ್ಪ, ಮಹಾಕಾವ್ಯ ಸ್ವರೂಪ

ಮಹಾಕಾವ್ಯದ ನಾಯಕ ಶಿವ–ವಿಷ್ಣು ಇಬ್ಬರ ಅಂಶ ಹೊಂದಿದ ಅವತಾರ ಪುರುಷ ಜುಂಜಪ್ಪ, ಶಿವನ ಒಂದಂಶದ ರೂಪವಾದ ವೀರಭದ್ರನ ಅವತಾರವಾಗಿ, ಕೃಷ್ಣನ ಅವತಾರವಾಗಿ ಜುಂಜಪ್ಪನನ್ನು ಗುರುತಿಸುವುದಿದೆ. "ಬಹುಶಃ ಮೂಲದಲ್ಲಿ ಶೈವರಾಗಿದ್ದ ಕಾಡುಗೊಲ್ಲರು ನಂತರದ ಅವಸ್ಥಾಂತರದಲ್ಲಿ ವೈಷ್ಣವರಾಗಿರುವಂತೆ ಕಾಣುತ್ತದೆ. ದೈವವಾಗಿ ಪೂಜಿಸಲ್ಪಡುತ್ತಿರುವ ಜುಂಜಪ್ಪ ಕೂಡ ವೀರಭದ್ರನ ಅವತಾರ ಎಂದೇ ಅವರು ನಂಬುತ್ತಾರೆ. ಹಾಗೆಯೇ ಜುಂಜುಪ್ಪನನ್ನು ಶ್ರೀಕೃಷ್ಣ ಸಂವಾದಿಯಾಗಿ ಕೂಡ ಕಾಣುತ್ತಿದೆ."[2]

ISBN – 978-93-5526-247-9

ಮಲ್ಲೇಗೌಡ–ಚಿನ್ನಮ್ಮನ ವಿವಾಹ ನಂತರ ಮಲ್ಲೇಗೌಡನು ಪತ್ನಿಯನ್ನು ಬಿಟ್ಟು ಜರುಮಲೆ ಸೀಮೆಗೆ ಹೋಗುತ್ತಾನೆ. ಇತ್ತ ಮಾವನ ಮನೆಯಲ್ಲುಳಿದ ಚಿನ್ನಮ್ಮನನ್ನು ಎಲ್ಲರೂ ಬಂಜೆ ಬಂಜೆ ಎಂದು ಹೀಯಾಳಿಸುತ್ತಾರೆ. ಅದನ್ನು ಕೇಳಿಸಿಕೊಳ್ಳಲಾರದೆ ಅರಣ್ಯಕ್ಕೆ ಹೋಗಿ ಸಾಯುವ ಪ್ರಯತ್ನದಲ್ಲಿ ಇದ್ದ ಚಿನ್ನಮ್ಮನಿಗೆ ಗೌರಸಂದ್ರದ ಮಾರಮ್ಮ ಕಣಿ ಹೇಳುವವಳಾಗಿ ಬಂದು ಶಿವನ ತಪಸ್ಸು ಮಾಡಿದರೆ ಮಕ್ಕಳಾಗುತ್ತವೆಂದು ಹೇಳುತ್ತಾಳೆ. ಹಾಗೆಯೇ ಚಿನ್ನಮ್ಮ ತಪಸ್ಸು ಮಾಡಿ ಗಂಡನಿಲ್ಲದೆಯೇ ಶಿವನ ವರದಿಂದ ಮೂವರು ಗಂಡು ಮಕ್ಕಳು ಒಂದು ಹೆಣ್ಣುಮಗುವನ್ನು ಪಡೆಯುತ್ತಾಳೆ. ಮೂರು ಗಂಡು ಮಕ್ಕಳ ನಂತರ ಹೆಣ್ಣು ಮಗು ಜನಿಸಿದರೆ ಆ ಮಕ್ಕಳ ತಂದೆ ಸಾಯುತ್ತಾನೆ ಎಂಬ ಪ್ರತೀತಿ ನಿಜವಾಗಿ ಚಿನ್ನಮ್ಮನ ಗಂಡ ಸತ್ತು ಹೋಗುತ್ತಾನೆ. ಚಿನ್ನಮ್ಮನ ಮಾವ ಆಲೇಗೌಡ ಚಿನ್ನಮ್ಮ ಮತ್ತು ಅವಳ ನಾಲ್ಕು ಮಕ್ಕಳಿಗೆ ಭಾಗ ಕೊಟ್ಟು ಬೇರೊಂದು ಅರಮನೆ ಕಟ್ಟಿಸಿ ಅಲ್ಲಿರಿಸುತ್ತಾನೆ. ಇವರೆಲ್ಲ ಕೆಲದಿನ ಸುಖವಾಗಿಯೇ ಇರುತ್ತಾರೆ. ನಂತರ ಅವರಿಗೆ ಬಡತನ ಬಂದೊದಗುತ್ತದೆ. ಚಿನ್ನಮ್ಮ ಕಾಡಿನಲ್ಲಿ ಸೌದೆ ತಂದು ಮಾರಿ ಜೀವನ ಮಾಡಬೇಕಾಗುತ್ತದೆ. ಅಂಥ ಕಷ್ಟದಲ್ಲಿ ಮಕ್ಕಳನ್ನು ಸಾಕುವ ಆ ತಾಯಿಗೆ ಎದುರಾಗುವ ಕಷ್ಟಗಳು ಯಾವ ಶಿಷ್ಟ ಮಹಾಕಾವ್ಯದ ನಾಯಕಿಯೂ ಎದುರಿಸದಂಥದು.

"ಸೌದೆ ಕಡಿಯಲು ಕಾಡಿಗೆ ಹೋದ ಚಿನ್ನಮ್ಮನಿಗೆ ದೊಡ್ಡ ಮಗನಾದ ಜುಂಜಪ್ಪ ಹೇಳಿರುತ್ತಾನೆ.
ಒಂದು ರಾತ್ರಿ ನೀನು ಈ ಕಿರುವಿನಂದ ಆಚೆಲಿದ್ದಮ್ಯಾಲೆ
ನೀನು ತಾಯಿಲ್ಲ ನಾನು ಮಗನಲ್ಲ
ಊರೊಳಗೆ ಒಂದೇ ಒಂದು ರಾತ್ರಿ ನಿಂತವುಳೆ ಅಂದ್ರೆ
ಕೆಟ್ಹೋಗವ್ವೆ ಅಂತ"[3]

ಅವಳಿಗೆ ಹಾಗೆ ಕಟ್ಟು ಮಾಡುವುದು ಗಂಡನಲ್ಲ – ಮಗ! ಜುಂಜಪ್ಪನು ಚಿನ್ನಮ್ಮನ ಮಗನೇ ಆಗಿದ್ದರೂ ಅವನು ಹೇಗೆ ಹೇಳುತ್ತಾನೋ ಹಾಗೇ ನಡೆಯಬೇಕು. ಆ ತಾಯಿ ಅದಕ್ಕೆ ಕೊಂಚ ಆಕಡೆ ಈ ಕಡೆ ಆದರೂ ಅವಳು ಬಲು ಕಷ್ಟಪಡಬೇಕಾಗುತ್ತದೆ.

ಮಕ್ಕಳನ್ನು ಸಾಕಲು ಕಾಡಿಗೆ ಹೋಗಿ ಸೌದೆ ತರುವ ತಾಯಿಗೆ "ಆ ಸೌದೆಯನ್ನು ಒಬ್ಬ ಕ್ವಾಮಟಿಗ ಶೆಟ್ಟಿ ಕೇಳುತ್ತಾನೆ. ಮೂರು ದುಡ್ಡಿಗೆ ಮಾರಿ ಆ ದುಡ್ಡಿನಿಂದ ಒಂದು ದುಡ್ಡಿಗೆ ಉಪ್ಪು ಮೆಣಸಿನ ಕಾಯಿ, ನಿನಗೆ ಬಾಯಿಗೆ ಅಡಿಕೆ ಎಲೆ, ಒಂದು ದುಡ್ಡಿಗೆ ಒಂದು ಪಾಷ್ಕೆ, ಒಂದು ದುಡ್ಡಿಗೆ ಒಂದು ಪಾವು ಹಸಿಕಡಲೆ– ತೆಗೆದುಕೊಂಡು ಬಾ" ಎಂದು ಹೇಳಿ ಕಳಿಸಿರುತ್ತಾನೆ.

2. ಕೃತಿ: ಬುಡಕಟ್ಟು ಮಹಾಕಾವ್ಯ ಮಾಲೆ: ಜುಂಜಪ್ಪ: ಸಂಪಾದಕರು: ಚೆಲುವರಾಜು: ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ವಿದ್ಯಾರಣ್ಯ, ಕಮಲಾಪುರ, ಪ್ರಸ್ತಾವನೆ : ಹಿ.ಚಿ ಬೋರಲಿಂಗಯ್ಯ ಮತ್ತು ಡಾ.ಜಿ.ಎಸ್.ಶಿವರುದ್ರಪ್ಪ, ಮಹಾಕಾವ್ಯ ಸ್ವರೂಪ.
3. ಕೃತಿ: ಜುಂಜಪ್ಪ: ಸಂಪಾದಕರು–0 ಚಲುವರಾಜು: ಪ್ರಕಾಶನ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ–206.

ಆದರೆ ಅಷ್ಟು ಕಷ್ಟ ಪಟ್ಟು ಸೌದೆ ಹೊರೆ ಮಾಡಿಕೊಂಡು ಬಂದದ್ದನ್ನು ಮೂರು ದುಡ್ಡಿಗೆ ಕೊಡಲು ಮನಸಾಗದೆ ಇಷ್ಟು ದೊಡ್ಡ ಹೊರೆಗೆ ನಾಲ್ಕಾಣ್' ಆಗುತ್ತದೆ. ನೀನು ಮೂರುದುಡ್ಡಿಗೆ ಕೇಳುತ್ತೀಯಾ? ಎನ್ನುತ್ತಾಳೆ. ಆತ ಹಾಗಾದರೆ ಮುಂದೆ ಹೋಗು ಎನ್ನುತ್ತಾನೆ. ತನ್ನ ಶ್ರಮಕ್ಕೆ ತಕ್ಕ ಬೆಲೆ ಹುಡುಕಿಕೊಂಡು ಮುಂದೆ ಹೋದ ಆ ಹೆಣ್ಣುಮಗಳಿಗೆ ಅವಳ ಸೌದೆ ಕೊಳ್ಳಲು ಯಾರೂ ಮುಂದೆ ಬರದಂತೆ ಮಾಡುತ್ತಾನೆ. ಮಗ ಜುಂಜಪ್ಪ ಕೇವ'ಲ, ಆಕೆ ತನ್ನ ಮಾತು ಮೀರಿದಳು ಎಂಬ ಕಾರಣಕ್ಕೆ. ಶ್ರಮ ಅವಳದು, ಆದರೆ ಅದರ ಬೆಲೆ ನಿರ್ಧ'ರಿಸುವವನು ಅವಳ ಮಗ ಜುಂಜಪ್ಪ. ಇಲ್ಲಿ ಮಹಿಳೆಯ ಶ್ರಮದ ಬಳಕೆ ಮಾಡಿಕೊಂಡು, ಆರ್ಥಿಕತೆಯ ನಿಯಂತ್ರಣವನ್ನು ತನ್ನ ಕೈಯಲ್ಲಿ ಇಟ್ಟುಕೊಂಡ ಪುರಷಾಳ್ವಿಕೆಯ ಮನೋಭಾವವನ್ನು ನೋಡಬಹುದು. ಸೌದೆಯನ್ನು ಹೆಚ್ಚಿನ ಬೆಲೆಗೇ ಇರಲಿ, ಮೊದಲು ಕೇಳಿದಂತೆ ಮೂರುದುಡ್ಡಿಗೂ ಯಾರೂ ಕೊಳ್ಳಲು ಮುಂದೆ ಬರದಾದಾಗ ತಿರುತಿರುಗಿ ಕಂಗೆಟ್ಟ ಚಿನ್ನಮ್ಮ ಮಗನ ಪಾದವನ್ನು ನೆನೆಯುತ್ತಾಳೆ.

"ಮಗನೇ
ನಿನ್ನಮಾತನ್ನ ಉಲ್ಲಂಘಿಸಿ

ISBN – 978-93-5526-247-9

ನಾನು ಬಂದಿದ್ದು ತನ್ನ ತಪ್ಪು
ಈಗ ಯಾರಾದರೂ ಬಾರಮ್ಮ
ಮೂರು ದುಡ್ಡಿಗೆ ಸೌದೆ ಹಾಕು ಅಂತ ಕರೆದ್ರೆ
ಹಾಕ್ತಿನಪ್ಪ ಮಗನೇ ಅಂದು
ಜುಂಜಪ್ಪನ ಪಾದ ನೆನೆಸಿದ್ಲು ಸಿನ್ನಮ್ಮ"[4]

ಆಗ ಅದೇ ಕ್ವಾಮಟಿಗಶೆಟ್ಟಿ ಕರೆಯುತ್ತಾನೆ. ಇವಳು ಅದೇ ಮೂರು ದುಡ್ಡಿಗೆ ಸೌದೆ ಹಾಕಿ ಜುಂಜಪ್ಪ ಹೇಳಿದ ವಸ್ತುಗಳನ್ನಷ್ಟೇ ಕೊಂಡು ಮರಳಿ ಕಾಡಿಗೆ ಬರುತ್ತಾಳೆ.

ಮಹಿಳೆಯನ್ನು ಕೌಟುಂಬಿಕವಾಗಿ, ಸಾಮಾಜಿಕವಾಗಿ ನಿಯಂತ್ರಣದಲ್ಲಿಡುವ ಮತ್ತು ಆರ್ಥಿಕತೆಯಲ್ಲಿ ಮಹಿಳೆ ಯಾವುದೇ ಹಕ್ಕು ಸಾಧಿಸದಂತೆ ಗಂಡಾಳ್ವಿಕೆ ತನ್ನ ಹಿಡಿತದಲ್ಲಿಟ್ಟುಕೊಳ್ಳುವ ವಿಧಾನ ಮತ್ತು ಸ್ವರೂಪವನ್ನು ಇಲ್ಲಿ ನೋಡಬಹುದಾಗಿದೆ. ಅದಕ್ಕೆ ಮಹಿಳೆಯನ್ನು ತಮ್ಮ ಮಾತುಮೀರಿದರೆ ಕುಟುಂಬದಿಂದ, ಜಾತಿಯಿಂದ ಹೊರಗೆ ಹಾಕುವ ಬೆದರಿಕೆಯನ್ನೂ ಬಳಸಿಕೊಳ್ಳಲಾಗುತ್ತದೆ. ಧರ್ಮದ, ಸಂಪ್ರದಾಯದ ಚೌಕಟ್ಟು ಹಾಕಲಾಗುತ್ತದೆ. ಇಲ್ಲಿ ನರಳುವ ಮಹಿಳೆ ಇನ್ನೊವೆಮ್ಮ ಯಾವ ಸಾಹಸಕ್ಕೂ ಕೈಹಾಕದೆ ಮೌನವಾಗಿ ಗುಲಾಮಗಿರಿಗೆ ಬಾಗಿಬಿಡುತ್ತಾಳೆ.

ಇಲ್ಲೊಂದು ಮಾರುಕಟ್ಟೆ ತಂತ್ರವನ್ನೂ ನೋಡಬಹುದು. ಉತ್ಪಾದಕನು ವ್ಯಾಪಾರಿಗೆ ತನ್ನ ಸರಕು ಮಾರುವಾಗ ವ್ಯಾಪಾರಿ ಹೇಳಿದ ಬೆಲೆಗೇ ಮಾರಬೇಕು, ಇಲ್ಲದಿದ್ದರೆ ಯಾರೂ ಕೊಳ್ಳರ ಸ್ಥಿತಿ ನಿರ್ಮಾಣಮಾಡುತ್ತಾರೆ ಅವರು. ಆಗ ಉತ್ಪಾದಕ ತನಗೆ' ಬೇಕಾದ ಬೆಲೆ ಸಿಗದೇ ಇದ್ದರೂ ಅನಿವಾರ್ಯವಾಗಿ ಕಡಿಮೆ ಬೆಲೆಗೆ ಸರಕನ್ನು ಮಾರಬೇಕಾಗುತ್ತದೆ. ಸಣ್ಣಪುಟ್ಟ ಉತ್ಪಾದಕನಾಗಿದ್ದರಂತೂ ವ್ಯಾಪಾರಿಗಳು ಅವನನ್ನು (ಳನ್ನು) ಬಗ್ಗು ಬಡಿದು ಬಿಡುವ ತಂತ್ರ ಇದು! ತಕ್ಷಣದ ಅಗತ್ಯಕ್ಕೆ ಬೇಕಾಗಿರುವ ಹಣ ದೊರೆಯದೆ, ಸರಕನ್ನು ಸಂರಕ್ಷಿಸಿಡಲಾಗದೆ, ಮಾರುಕಟ್ಟೆಯೂ ದೊರೆಯದೆ ಕಂಗಾಲಾಗುವ ಉತ್ಪಾದಕನು ಸಗಟು ವ್ಯಾಪಾರಿಗೆ ಅತಿಕಡಿಮೆ ಬೆಲೆಗೆ ಸರಕು ಮಾರಬೇಕಾದ ಸಂದಿಗ್ಧಕ್ಕೆ ಸಿಲುಕಿಸುವ ಹುನಾರುಗಳು ಇಲ್ಲಿ ಕಾಣುತ್ತವೆ.

4. ಕೃತಿ: ಜುಂಜಪ್ಪ: ಸಂಪಾದಕರು– ಚಲುವರಾಜು: ಪ್ರಕಾಶನ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ–207.

ಇದಕ್ಕೆ ಬಲಿಯಾದದ್ದು ಆ ಹೆಣ್ಣು ಮಗಳು ಚಿನ್ನಮ್ಮ ಅದೂ ತನ್ನ ಮಗನಿಂದಲೇ ಏನು ಕಾರಣವೂ ಇಲ್ಲದೆ ಕಷ್ಟ ಕೊಡಬೇಕೆಂದು ಬರುವ ಕಷ್ಟಗಳ ಸಾಲು ಸಾಲನ್ನೇ ಚಿನ್ನಮ್ಮ ಅನುಭವಿಸಬೇಕಾಗುತ್ತದೆ.

ಮಾರನೆಯ ದಿನ ಸೌದೆ ಕಡಿಯಲು ಅರಣ್ಯಕ್ಕೆ ಹೋದವಳಿಗೆ ಕೆಲಸ ಮುಗಿದ ಮೇಲೆ ಕ್ಷಣ ಹೊತ್ತು ಸುಧಾರಿಸಿಕೊಳ್ಳುವ ತವಕ. ಆದರೆ ಆ ಸಮುಯದಲ್ಲಿಯೂ ಅವಳನ್ನು ಕಾಡುವುದು ತನ್ನ ಬದುಕು ಹೀಗಾಯಿತಲ್ಲಾ ಎಂಬ ಶೋಕ ಅದರಲ್ಲೇ ಇರುವಾಗ ಸಂಜೆಯಾಗುತ್ತದೆ. ವಿಹ್ವಲಳಾದ ಆಕೆ ತನ್ನ ಮಗನ ಕಟ್ಟಪ್ಪಣೆಯ ಮಾತನ್ನು ನೆನಪಿಸಿಕೊಂಡು ಮನೆಗೆ ಹೊರಡಲು ಎದ್ದರೆ ಕಾರಣವೇ ಇಲ್ಲದೆ ಅವಳುಟ್ಟ ಸೀರೆ ಜರಿದು ಬಿದ್ದುಬಿಡುತ್ತದೆ. ಎತ್ತಿಕೊಳ್ಳಲು ಹೋದರೆ ಪುಡಿಪುಡಿಯಾಗುತ್ತದೆ. ಅವಳಿಗಿದ್ದ ಆ ಒಂದೇ ಸೀರೆಯ ಜೀರ್ಣಶೀರ್ಣ ಸ್ಥಿತಿಯೇ ಅವಳಿದ್ದ ಪರಿಸ್ಥಿತಿಯ ಅರಿವು ಮಾಡಿಸುತ್ತದೆ ನಮಗೆ. ಇನ್ನು ಮೈಮೇಲೆ ಬಟ್ಟೆ ಇಲ್ಲದ ಸ್ಥಿತಿ ಎಂದರೆ ಹೆಣ್ಣಿಗೆ ಬೇರೆ ಮಾರ್ಗವೇ ಇಲ್ಲ ಸಾವೊಂದನ್ನುಳಿದು! ಇಲ್ಲಿಯವರೆಗೂ ಪತಿವ್ರತೆಯಾಗಿದ್ದ ತನ್ನ ಮಾನ ಹೀಗೆ ಭಂಗವಾಯ್ತಂದು ಚಿನ್ನಮ್ಮ ಆತ್ಮಹತ್ಯೆಗೆ ಶರಣಾಗಲು ನೀರಿನ ಕೊಳ ಹುಡುಕಿಕೊಂಡು ಓಡುತ್ತಾಳೆ. ಆಗ ಜುಂಜಪ್ಪನೇ ದಿವ್ಯ ನೋಟದಿಂದ ನೋಡಿ ತೇಗದ ಎಲೆ ಕೊಟ್ಟ ಅನ್ನುತ್ತದೆ ಕಾವ್ಯ. ಹಾಗೆಯೇ ಅವಳ ತಲೆಗೂದಲು ಉದುರಿ ಹೋಗುತ್ತದೆ. ಸೊಪ್ಪು ಸುತ್ತಿದ ಮೈಯಲ್ಲಿ, ಬೋಳುತಲೆಯ ಮೇಲೆ ಸೌದೆಯ ಹೊರೆ ಹೊತ್ತು, ಮೂರೇ ದುಡ್ಡಿಗೆ ಮಾರಿ ಅದರಿಂದ ಕನಿಷ್ಠ ಮಟ್ಟದ ಜೀವನ ನಡೆಸುತ್ತಾ ಇರಬೇಕಾಗುತ್ತದೆ. ಆಕೆ ಹೀಗಿರುವಾಗ ಒಮ್ಮೆ ಕಾಡಿನಲ್ಲಿ ಸೌದೆ ಹೊರೆ ಸಿದ್ದ ಮಾಡಿ ತನ್ನ ಕಷ್ಟ ನೆನೆದು ಮರುಗುತ್ತಾ ಕುಳಿತಿರುವಾಗ ಆ ದಾರಿಯಾಗಿ ತನ್ನಣ್ಣಂದಿರು ಬರುವ ಸುಳಿವು ಸಿಕ್ಕಿ ಪೊದೆಯಲ್ಲಿ ಅಡಗಿ ಕೂರುತ್ತಾಳೆ. ಅಣ್ಣಂದಿರಿಗೆ, ಅತ್ತಿಗೆಯರಿಗೆ ತನ್ನ ಸ್ಥಿತಿ ತಿಳಿಯಬಾರದು, ಅದು ತನಗೆ ಅವಮಾನವೆಂದು ಭಾವಿಸುತ್ತಾಳೆ. ಆದರೆ ಆ ಅಣ್ಣಂದಿರು ಇವಳನ್ನು ಹುಡುಕಿ ಮನೆಗೆ ಕರೆದೊಯ್ದು ಬಟ್ಟೆ ಒಡವೆ ಎಲ್ಲಾ ಕೊಟ್ಟು ಸತ್ಕರಿಸುತ್ತಾರೆ.

ಸಂಜೆಯಾಗುತ್ತಿದ್ದಂತೆ ಚಿನ್ನಮ್ಮನಿಗೆ ಭಯ ಶುರು ಆಗುತ್ತದೆ. 'ಅಣ್ಣಯ್ಯ ನನ್ ಮಗ ಒಂದು ಆಜ್ಞೆಮಾಡಿದ್ದ ನನಗೆ, ಸೂರ್ಯ ಮುಳುಕಿದ ಮ್ಯಾಲೆ, ನೀನು ಕಳ್ಳೇ ಕಿರಿವಿನಿಂದ ಆಚೆ ಇದ್ದರೆ, ನೀನು ತಾಯಿಯಲ್ಲ ನಾನು ಮಗನಲ್ಲ ಅಂತ ಅದಕ್ಕೆ ನಾನು ಹೋಗುತ್ತೇನೆಂದರೆ, ಅವಳ ಅಣ್ಣಂದಿರು ಅದೆ'ಕ್ಕಿಲ್ಲ ಗಮನಕೊಡದೆ ತಮ್ಮ ಮನೆಗೆ ಬಲವಂತದಿಂದ ಕರೆದೊಯ್ಯುತ್ತಾರೆ. ಆದರೆ ಆಕೆ ಅವರ ಮನೆಯಲ್ಲಿ ತಿಂದ ಅನ್ನ ಗಂಟಲಿಲ್ಲಿಳಿಯದೆ ವಾಂತಿ ಆಗುತ್ತದೆ. ಅವಳಿಗೆ ತನ್ನ ಮಕ್ಕಳದೇ ಚಿಂತೆ. ಹೊರಗೆ ಉಳಿದು ಮಾರನೇದಿನ ಮಕ್ಕಳನ್ನು ಹುಡುಕಿಕೊಂಡು ತಾಯಿ ಅರಣ್ಯಕ್ಕೆ ಬಂದಾಗ ಮಗ ಜುಂಜಪ್ಪ ತನ್ನ ತಮ್ಮ ತ'ಂಗಿಯರ ಬಳಿ ತಮ್ಮ ತಾಯಿಯ ಬಗ್ಗೆಯೇ ಕೆಟ್ಟ ಮಾತುಗಳನ್ನು ಹೇಳುತ್ತಾನೆ.

"ನೋಡಿದ್ರ ನಮ್ ತಾಯಿ ಮಾಡೋ ಕೆಲ್ಸ
......ಆ ಕ್ವಾಮುಟಿಗರೋನ್ನ ಒಳಕೆ ಮಾಡ್ಕೊಂಡು
ಅವುನ ಮನೆಯೊಳಗೆ ನಿಂತೋಗಿ ಬುಟ್ಟವ್ಳೆ ಇವೋತ್ತು
ಬೆಳಗ್ಗೆ ಎದ್ದು ತೌರು ಮನೆಗೆ ಹೋದೋಳ ಹಂಗೆ
ಬಿಳಿಸೀರೆ ಮಡ್ಲಕ್ಕಿ ತಕ್ಕೊಂಡ್ ಬತ್ತಾವ್ಳೆ
ಒಪ್ಪು ಬ್ಯಾಡಿ ಅದುನ್ನ"

ಎಂದು ತಮ್ಮ ತಂಗಿಯರಿಗೆ ಹೇಳಿಕೊಡುತ್ತಾನೆ.
ಅವನು ತನ್ನ ತಾಯಿ ಮೇಲೆ ಮಾಡುವ ಆರೋಪವಾದರೂ ಎಂಥದು!
"ಆಯಮ್ಮನ ತೋಳಿನ ಮೇಲೆ ಅವುನ ತಲೆ
ಅವುನ ತೋಳಿನ ಮೇಲೆ ಆಯಮ್ಮನ ತಲೆ......"

ಆರೋಪಕ್ಕೂ ಒಂದು ಮಿತಿಬೇಡವೇ? ನಡೆಯದೇ ಇದ್ದುದನ್ನು ನಡೆದಂತೆ, ಕಂಡಂತೆ ಹೇಳುವ ಮಹಿಮೆಗಾರನ ಸುಳ್ಳು ಸತ್ಯವೇ ಆಗಿ ಭಾಸವಾಗುವುದೇ ಸಮಾಜದಲ್ಲಿನ ದುರಂತವಲ್ಲವೇ? ಜುಂಜಪ್ಪನಿಗೆ ಹಾಗನ್ನಿಸಿದೆ ಎಂದಿದ್ದರೆ ತನ್ನ ದಿವ್ಯ ದೃಷ್ಟಿಯಿಂದ ಏನಾಯಿತೆಂದು ತಿಳಿಯಬಹುದಿತ್ತು ! ಇಲ್ಲವೇ, ಜನ ಅವಳ ಮೇಲೆ ಏನಾದರೂ ಭಾವಿಸಿಯಾರೆಂದಿದ್ದರೆ ತನ್ನ ದಿವ್ಯ ಶಕ್ತಿಯಿಂದ ಅವರಿಗೆ ಅರಿವು ಮೂಡಿಸಬಹುದಿತ್ತು! ಇಲ್ಲಿ ಅದಕ್ಕೆಲ್ಲ ಜಾಗವೇ ಇಲ್ಲ, ಹೆಣ್ಣು ಸಿಕ್ಕಿಹಾಕಿಕೊಂಡಿದ್ದಾಳೆ ತಪ್ಪು ಮಾಡದೆಯೇ ! ಆಳಿಗೊಂದು ಕಲ್ಲೆಸೆಯುವುದೇ ಸರಿ ಎಂಬ ಧೋರಣೆ ಎದ್ದು ಕಾಣುತ್ತದೆ.

ಚಿನ್ನಮ್ಮ ತಾನು ಅಂಥ ಕೆಟ್ಟ ಕೆಲಸ ಮಾಡಿಲ್ಲವೆಂದರೆ ಒಪ್ಪಲು ಜುಂಜಪ್ಪ ತಯಾರಿಲ್ಲ. ಯಾವ ಮಟ್ಟಿಗೆಂದರೆ ಅವರ ತಾತ ಹೊನ್ನಟ್ಟಾಲೇಗೌಡ, 'ಮೊಮ್ಮಗನೇ ನನ್ನ ಸೊಸೆ ಮಹಾಪತುವ್ರತೆ ಆಯಮ್ಮನ್ನ ಪ್ರಪಂಚಕ್ಕೆಲ್ಲಾ ಯಾಕೆ ಬೆಳಕು ಮಾಡ್ತಿಯಪ್ಪ ತಾಯಿ ಮಕ್ಕಳು ಒಂದಾಗ್ರಿ' (ಅದೇ ಪುಟ 222) ಎಂದರೂ ಅವ ಕೇಳುವುದಿಲ್ಲ. ಕೊನೆಗೆ ಚಿನ್ನಮ್ಮ ತಾನು ಪತಿವ್ರತೆಯೆಂದು ಸಾಬೀತುಮಾಡಲು ಜುಂಜಪ್ಪ ಹೇಳಿದ ಸತ್ವ ಪರೀಕ್ಷೆಗಳನ್ನೆದುರಿಸಿ ಗೆದ್ದು ಬರಬೇಕಾಗುತ್ತದೆ.

ಒಣಗಿದ ಒನಕೆಯನ್ನು ಚಚ್ಚಿ ಚಚ್ಚಿ ನಾರು ತರಿಸಬೇಕು, ತೂತು ಕಣ್ಣಿನ ಜರಡೆಯಲ್ಲಿ ನೀರು ತಂದು ಜುಂಜಪ್ಪನ ಪಾದಕ್ಕೆ ಅರ್ಪಿಸಬೇಕು, ಸಮುದ್ರಕ್ಕೆ ಜುಂಜಪ್ಪ ಎಸೆದ ಮುತ್ತಿನುಂಗುರವನ್ನು ಹಗಲು ಹನ್ನೆರಡು ಗಂಟೆಯೊಳಗೆ ತರಬೇಕು, ಒಂದೊಂದು ಸೆಂಟಿಮೀಟರ್ ಉದ್ದ ಇರುವ ಸೀಗೆ ಎಲೆಯನ್ನು ಒಬ್ಬ ಊಟ ಮಾಡುವಷ್ಟು ಅಗಲಕ್ಕೆ ಊಟದ ತಟ್ಟೆಯಾಗಿ ಇಸ್ತ್ರಿ ಕಟ್ಟಬೇಕು. ಇವೆಲ್ಲವನ್ನೂ ಸಿನ್ನಮ್ಮ ಪತಿವ್ರತೆಯಾಗಿದ್ದುದರಿಂದಲೂ, ಪರಮೇಶ್ವರನ ಸಹಾಯದಿಂದಲೂ ಮಾಡಿ ಗೆದ್ದು ಬಂದಳು. ಆದರೆ ಇವುಗಳೆಲ್ಲ ಕ್ಯಾಮ್ಟಿಗರವನ ಮಾಯೆಯಿಂದ ಸಾಧಿಸಿದ್ದಾಳೆ ಎಂಬ ಇನ್ನೊಂದು ಆರೋಪ ಹೊರಿಸಿದ ಜುಂಜಪ್ಪ ಅಗ್ನಿ ಹಾಯುವ ಪರೀಕ್ಷೆ ಇಟ್ಟನಂತರ ಸತ್ತು ಏಳುವರುಷವಾಗಿರುವ ತಂದೆಯನ್ನ ಎಬ್ಬಿಸಿ ಮಾತನಾಡಿಸಬೇಕು ಎಂದ ಅದೂ ಆಯಿತು, ಸತ್ತಿದ್ದ ತಂದೆ ಕೆಂಗರು ಮಲ್ಲೇಗೌಡನೇ ಎದ್ದು ನಾನಿಲ್ಲವೆಂದು ನನ್ನ' ಹೆಂಡತಿಗೆ ಕಷ್ಟ ಕೊಡಬೇಡಿ, ಅವಳು ಪತಿವ್ರತೆ ಎಂದರೂ ಒಪ್ಪದೆ ಇನ್ನೂ ಏನೇನೋ ಪರೀಕ್ಷೆ

ISBN – 978-93-5526-247-9 

ಒಡ್ಡಿದ ಕೊನೆಗೆ ಏಳು ತೆರೆಗಳ ಆಚೀಚೆಗೆ ತಾಯಿ ಮಕ್ಕಳು ನಿಂತು ತಾಯಹಾಲು ಮಕ್ಕಳ ಬಾಯಿಗೆ ಬೀಳುವಂತೆ ಆಗಿ ನಮ್ಮಗಳ ಹೊಟ್ಟೆ ತುಂಬಿದರೆ ಇವಳು ಪತಿವ್ರತೆ ಎಂದು ಒಪ್ಪುತ್ತೇನೆ ಎಂದ. ಅದೂ ಸಾಧಿತವಾದಮೇಲೆ ನಮ್ಮ ತಾಯಿ ಪತಿವ್ರತೆ ಅವಳು ಶಾಪವಿಟ್ಟರೆ ಕಷ್ಟ ಎಂದು ಅವಳ ಕಾಲು ಹಿಡಿದರು. ಆದರೆ ಆ ತಾಯಿ ಏನೆನ್ನುತ್ತಾಳೆ –

"ಒಳ್ಳೆದು ಮಕ್ಕಳ್ರ
ನಿಮಗೆ ಜಯಕೊಟ್ಟು
ಕಾಪಡ್ಲಪ್ಪದೇವ್ರು"[5]

ಹೀಗೆ ತನಗೆಷ್ಟು ಕಷ್ಟ ಕೊಟ್ಟರೂ, ಅವಮಾನ ಮಾಡಿದರೂ ತಾಯಿ ಎಂದರೆ ಮಕ್ಕಳಿಗೆ ಒಳಿತು ಹಾರೈಸುವವಳೇ ಆಗಿದ್ದಾಳೆ. ಆಗಬೇಕು ಆಗ ಮಾತ್ರ ಆಕೆ ತಾಯಿ! ಮಹಿಳೆಯ ನೋವು, ನಲಿವು, ಬೇಗುದಿಗಳನ್ನು ನಮ್ಮ ಜನಪದ ಮತ್ತು ಶಿಷ್ಟ ಮಹಾಕಾವ್ಯಗಳೆರಡೂ ದಾಖಲಿಸಿವೆ. ಪ್ರಸ್ತುತದ ಜುಂಜಪ್ಪನ ಮಹಾಕಾವ್ಯದ ವೈಶಿಷ್ಟ್ಯವೇನೆಂದರೆ ಜುಂಜಪ್ಪ ಪರಂಪರೆಯ ಸಂಪ್ರದಾಯದಲ್ಲಿ ಮಹಿಳೆಯನ್ನು ಅತ್ಯಂತ ಕಟ್ಟುಪಾಡಿನಲ್ಲಿ ಇಟ್ಟಿರುವುದು ಕಾವ್ಯದಲ್ಲಿ ನಿರೂಪಿತವಾಗಿದೆ. ಋತುಮತಿಯಾದ, ಬಾಣಂತಿಯಾದ, ರಜಸ್ವಲೆತಿಯಾದ ಹೆಣ್ಣುಮಗಳು ಊರಿನಿಂದ ಹೊರಗೆ ಗುಡಿಸಲಿನಲ್ಲಿ ಐದು ದಿನ ಕಳೆದು, ಸೂತಕ ಕಳೆದುಕೊಂಡು ಒಳಬರಬೇಕು ಎಂಬ ನಿಯಮ ಇಂದಿಗೂ ಜಾರಿಯಲ್ಲಿ ಇದೆ. ಎಷ್ಟೋ ಪ್ರಗತಿಪರರು, ಸಂಸ್ಕೃತಿ ಸಚಿವೆಯಾಗಿದ್ದ

5. ಕೃತಿ: ಜುಂಜಪ್ಪ: ಸಂಪಾದಕರು– ಚಲುವರಾಜು: ಪ್ರಕಾಶನ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ–238.

ಶ್ರೀಮತಿ ಉಮಾಶ್ರೀ ಅವರು ಯಾರೆಲ್ಲ ಈ ಸಮುದಾಯಕ್ಕೆ ತಿಳಿವಳಿಕೆ ಹೇಳಿ ಹೆಣ್ಣು ಮಗಳ ರಕ್ಷಣೆಯ ದೃಷ್ಟಿಯಿಂದ ಈ ಸಂಪ್ರದಾಯ ಬಿಡಬೇಕು ಎಂದು ತಿಳಿಹೇಳಿದ ಸುದ್ದಿ ಪತ್ರಿಕೆಯಲ್ಲಿ ಫೋಟೋ ಸಹಿತ ಪ್ರಕಟವಾಗಿದ್ದುದನ್ನು ನೆನಪಿಸಿಕೊಳ್ಳಬಹುದು. ಈ ಕಟ್ಟುಪಾಡು ಮಹಿಳೆಗಿದೆ. ಆದರೆ ವಿಧವೆಯಾದ ಹೆಣ್ಣುಮಗಳು ತನ್ನ ಅಲಂಕಾರಗಳನ್ನು ತೆಗೆಯಬೇಕು ಎಂಬ ನಿಯಮವಿಲ್ಲ. ಏಕೆಂದರೆ ಕಾಡುಗೊಲ್ಲ ಸಮುದಾಯದ ಜುಂಜಪ್ಪ ಅರಾಧನೆಯ ಜನಾಂಗದ ಎಲ್ಲ ಹೆಣ್ಣು ಮಕ್ಕಳಿಗೆ ತಮ್ಮ ದೇವರು ಕೃಷ್ಣನೇ ಗಂಡ. ಆದ್ದರಿಂದ ಇಹದ ಗಂಡ ಸತ್ತರೂ ಅವರು ವಿಧವೆಯ ರೂಪು ಪಡೆಯಬೇಕಾದ್ದಿಲ್ಲ. "ಕೃಷ್ಣನೆ ಗಂಡ ಹೆಂಗಸ್ರಿಗೆ ಗಂಡ ಸತ್ರೂ ಅವರು ಮುಂಡೇರಾಗಂಗಿಲ್ಲ." ಹೀಗೆ ವಿವಿಧ ಸಾಂಸ್ಕೃತಿಕ, ಸಾಮಾಜಿಕ ವೈಶಿಷ್ಟಗಳ ಜೊತೆ ಮಹಿಳೆಯನ್ನು ಪ್ರಸ್ತುತಪಡಿಸುವ ವಿಶಿಷ್ಟ ಮಹಾಕಾವ್ಯ ಜುಂಜಪ್ಪ ಮಹಾಕಾವ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**

1) ಜುಂಜಪ್ಪ,
ಸಂಪಾದಕರು ಚಲುವರಾಜು.
2) ಜಾನಪದ
ಹಾ.ಮಾ.ನಾಯಕ್
3) ಜನಪದ ಸಿದ್ಧಾಂತಗಳು
ಡಾ.ವೀರಣ್ಣ ದಂಡೆ

***

ISBN – 978-93-5526-247-9

# 32.ಜನಪದ ಕಾವ್ಯಗಳಲ್ಲಿ ಹೆಣ್ಣು

ಮೋಹನ್.ಎಂ

ನನ್ನಾರೂವರಿಯರು
ನಾನು ಸ್ವರ್ಗಿಯಲ್ಲ ನಾನು ಅಪವರ್ಗಿಯಲ್ಲ
ನನ್ನನಾರೂವರಿಯರು ನಾನು ಮುಕ್ತಳಲ್ಲ ಅಮುಕ್ತಳಲ್ಲ
ನನ್ನನಾರೂ ಅರಿಯರು
ಸಂಗಯ್ಯನಲ್ಲಿ ರೂಪಿಲ್ಲದ ಹೆಣ್ಣಾದ ಕಾರಣ ನನ್ನನಾರೂ ಅರಿಯರು.
–ನೀಲಮ್ಮ

ಎಲ್ಲಾ ಗಂಡಿನೊಳಗು ಹೆಣ್ಣಿನ ಗುಣಗಳಿರುತ್ತದೆ ಎಲ್ಲಾ ಹೆಣ್ಣಿನೊಳಗು ಗಂಡಿನ ಗುಣಗಳಿರುತ್ತವೆ. ಆದರೆ ಇಂತಹ ಭಾವನೆಗಳನ್ನು ಹೊರಸೂಸಲು ಗಂಡು ಮತ್ತು ಹೆಣ್ಣು ಇಬ್ಬರೂ ಹಿಂಜರಿಯುವುದು ಸಹಜವಾದ ವಿಚಾರವಾಗಿದೆ. ಅದರಲ್ಲೂ ಗಂಡು ಹೆಣ್ಣಿನ ಭಾವನೆಗಳನ್ನು ಹೊರಹಾಕುವುದು ತನ್ನ ಪುರುಷಾರ್ಥಕ್ಕೆ ಬಹುದೊಡ್ಡ ಅವಮಾನ ಎನ್ನುವಂತೆ ಪುರಷ ನಂಬಿಬಿಟ್ಟಿದ್ದಾನೆ. ಹೆಣ್ಣಿಗೂ ಕೂಡ ಇಂತಹ ಕೆಲವು ವಿಚಾರಗಳು ತಮ್ಮ ಭಾವನೆಗಳನ್ನು (ಹೆಣ್ಣಿನ ಭಾವನೆಯಾದರೂ ಅಥವಾ ಅವಳೊಳಗಿರುವ ಗಂಡಿನ ಭಾವನೆಯಾದರೂ) ಹೊರಹಾಕಲೂ ಹಿಂಜರಿಯುತ್ತಾಳೆ. ಇದಕ್ಕೆ ಧರ್ಮ, ಸಮಾಜ, ಕುಟುಂಬ ಎಲ್ಲವೂ ಕೂಡ ಅವಳಿಗೆ ತೊಡಕುಗಳನ್ನು ನಿರಂತರವಾಗಿ ಒಡ್ಡುತ್ತಿರುತ್ತವೆ. ಇಂತಹ ಸಮಸ್ಯೆಗಳ ಕಾರಣದಿಂದಲೇ ಬಹುತೇಕ ಜನಪದ ಕಾವ್ಯಗಳಾಗಲಿ ಅಥವಾ ಅನೇಕ ಬರಹಗಾರ್ತಿಯರೆಲ್ಲರೂ ತಮ್ಮ ಮನಸ್ಸಲ್ಲಿ ಹುಟ್ಟುವ ಕತೆ ಕವನಗಳೆಲ್ಲವೂ ಕೂಡ ಸ್ವಗತದ ಮಾದರಿಯಲ್ಲಿಯೇ ರಚಿಸಲ್ಪಟ್ಟಿರುವಂತೆ ತೋರುತ್ತದೆ.

ನಮ್ಮ ಬಹುತೇಕ ಜನಪದ ಕಾವ್ಯಗಳನ್ನು ಗಮನಿಸಿದರೆ ಅಲ್ಲಿ ಕಂಡು ಬರುವ ಹೆಣ್ಣಿನ ಬದುಕಿನ ಚೌಕಟ್ಟು ವಿಶಾಲವಾದುದಲ್ಲವೆಂದು ತೋರುತ್ತದೆ. "ಅವಳು ಕೇವಲ ಮನೆ, ಮನೆಯೊಳಗಿನ ಸಂಬಂಧ ಇವುಗಳೆ ಅವಳ ಕಾವ್ಯದ ವಸ್ತುವೆಂದು ಡಾ. ಸಿ ವೀರಣ್ಣನವರ ಮಾತು ಸರಿಯೇಂದೇ ತೋರುತ್ತದೆ". ಇಲ್ಲಿ ಜನಪದರ ಸಮಾಜ ಹೆಣ್ಣನ್ನು ಯಾವ ರೀತಿಯಾಗಿ ಇರಬೇಕೆಂದು ಅಪೇಕ್ಷಿಸುತ್ತದೆ. ಅದರಂತೆಯೇ ಅವಳು ಬದುಕಿ ಸಾಗುತ್ತಾಳೆ. ಆದ್ದರಿಂದ ಜನಪದ ಸಮಾಜದಲ್ಲಿನ ಹೆಣ್ಣಿನ ಚೌಕಟ್ಟು ಬಹಳ ಚಿಕ್ಕದೆಂದು ಹೇಳಬಹುದಾಗಿದೆ. ಜನಪದ ಹೆಣ್ಣಿನ ಬದುಕು ಆರಂಭವಾಗುವುದು ಅವಳ ಮದುವೆಯಿಂದಲೇ ಎನ್ನಬಹುದು. ಅದು ಮಾತ್ರವಲ್ಲದೆ ಅವಳು ತನ್ನ ಗಂಡನನ್ನು ಆಧರಿಸಿ ಬದುಕು ನಡೆಸುತ್ತಾಳೆ. ಇಲ್ಲಿ ಗಂಡನ ಕಾಯಕ ಗುಣ, ಸ್ವಭಾವಗಳು, ವರ್ತನೆಗಳು, ರೂಪಗಳೆಲ್ಲವೂ ಕೂಡ ಅವಳ ಕಾವ್ಯ ವಸ್ತುಗಳಾಗಿ ಪರಿಣಮಿಸಿಬಿಡುತ್ತದೆ.

ಕೂಲಿ ಮಾಡಿದರೇನ ಕೋರಿ ಹೊತ್ತರೇನ
ನನಗೆ ನಮರಾಯ ಬಡವೇನ ಬಂಗಾರ
ಮಾಲು ಇದ್ದಾಂಗ ಮನೆಯಾಗ

ತನ್ನ ಗಂಡ ಬಡವನಾದರೂ ಆತ ಯಾವ ದುಡುಮೆಯನ್ನು ಮಾಡಿದರು ಸರಿಯೇ ತನಗವನು ಚಿನ್ನವಿದ್ದಂತೆ ಎನ್ನುತ್ತಾಳೆ. ತನ್ನ ಗಂಡನ ನಂತರದಲ್ಲಿ ಅವಳು ಹೆಚ್ಚಾಗಿ ಚಿಂತಿಸುವುದು ತನ್ನ ಗಂಡನ ಮನೆಯ ಬಗೆಗೆ ಇಲ್ಲಿ ಅತ್ತೆಯರು ತನ್ನ ಮಗನಿಗಾಗಿ ಎಂತಹ ಹೆಣ್ಣನ್ನು ಹುಡುಕಬೇಕೆನ್ನುವುದರಲ್ಲಿ ಬಹಳ ಗಮನವಹಿಸುತ್ತಿದ್ದರೆಂದು ತೋರುತ್ತದೆ. ಕೆಲವು ಸಮಯಗಳಲ್ಲಿ ಮಗನಿಗಾಗಿ ಬಡವರ ಹೆಣ್ಣು ಮಕ್ಕಳನ್ನು ಸೊಸೆಯಾಗಿ ತರಬೇಕೆಂದು ಅಪೇಕ್ಷೆಪಡುತ್ತಾರೆ. ಬಡವರ ಮನೆಯ ಹೆಣ್ಣು ಎಲ್ಲದ್ದಕ್ಕೂ ಹೊಂದಿಕೊಳ್ಳುತ್ತಾಳೆಂಬ ಕಾರಣಕ್ಕಾಗಿ ಅತ್ತೆಯರು ಇಂತಹ ತೀರ್ಮಾನಗಳನ್ನು ಮಾಡುತ್ತಾರೆ.

ಹಾಗಲ ಹೆಣ್ಣೀಗೆ ಹನ್ನೊಂದು ಸಾಂಬಾರ
ಉಂಡು ನೋಡಣ್ಣ ರುಚಿಸವಿ ಬಡವರ ಮಗಳ
ತಂದು ನೋಡಣ್ಣ ಬದುಕೀಗೆ

ಎನ್ನುವ ಮಾತುಗಳೆಲ್ಲವೂ ಬಡವರ ಮನೆಯ ಹೆಣ್ಣು ಮಕ್ಕಳು ಮನೆಗೆಲಸ ಮಾಡಿಕೊಂಡು ಹೇಳಿದಂತೆ ಕೇಳುತ್ತಾರೆ ಎಂಬುದೇ ಅದರ ಉದ್ದೇಶವಾಗಿರುತ್ತದೆ.

ISBN – 978-93-5526-247-9

ಜನಪದ ಕಾವ್ಯಗಳಲ್ಲಿ ಬಹುತೇಕ ಹೆಣ್ಣು ಕಾಣಿಸಿಕೊಳ್ಳುವುದು ಸೊಸೆ, ತಾಯಿ ಮುಂತಾದ ಪಾತ್ರಗಳಲ್ಲಿ ಹೀಗಿರುವಾಗ ಒಬ್ಬ ಸೊಸೆಯ ಜವಾಬ್ದಾರಿ ಮತ್ತು ಅವಳು ಪಾಲಿಸಬೇಕಾದ ಅಂಶಗಳು ಎಂತವುಗಳಾಗಿರಬೇಕೆನ್ನುವುದಕ್ಕೆ ಅನೇಕ ಬಗೆಯ ನಿಯಮಗಳನ್ನು ರೂಪಿಸಿಟ್ಟರಬೇಕು ಈ ನಿಯಮಗಳು ಸಹ ಒಂದು ಬಗೆಯಲ್ಲಿ ಶಿಷ್ಟ ಸಮಾಜ ನಿಯಮಗಳೇ ಆಗಿರುವಂತಹವುಗಳೆಂದು ತೋರುತ್ತದೆ.

ಅತ್ತೆ ಮಾವನ ಪಾದ ತಂದೆ ತಾಯಿಯ ಪಾದ
ಮತ್ತೆ ಹಿರಿಯೋರ ಶ್ರೀಪಾದ ನೆನೆದಾರೆ
ಬೆನ್ನ ಹಿಂದಿದ್ದೋ ಕೈಲಾಸ
ಅತ್ತೆ ಮಾವಗಂಜಿ ಸುತ್ತೇಳು ನೆರೆಗಂಜೀ
ಅತ್ತೆ ನೀ ಪತಿಯ ದನಿಗಂಜಿ ಇದ್ದರ
ಉತ್ತಮರ ಮಗಳು ಇವಳೆನರೆ

ಮೇಲಿನ ವಾಕ್ಯಗಳಲ್ಲಿ ಒಂದು ಹೆಣ್ಣು ಸೊಸೆಯಾಗಿ ಹೇಗೆ ನಡೆದುಕೊಳ್ಳಬೇಕೆಂದು ತವರು ಮನೆಯವರು ತಿಳಿಸಿ ಹೇಳುವ ವಿಚಾರವಾಗಿದೆ. ಬಹುತೇಕ ತವರುಮನೆಯ ಸದಸ್ಯರೆಲ್ಲರೂ ತನ್ನ ಮನೆ ಮಗಳಿಗೆ ಇಂತಹ ವಿಚಾರಗಳನ್ನು ಹೇಳಿ ಅವಳನ್ನು ಉತ್ತಮ ಸೊಸೆಯಾಗಿಸುವ ಪರಿಯನ್ನು ಹಂತ ಹಂತವಾಗಿ ತಲೆಗೆ ತುಂಬಿಸುತ್ತಲೆ ಇರುತ್ತಾರೆ. ಈ ಎಲ್ಲಾ ಸಂದರ್ಭಗಳಲ್ಲಿ ಹೆಣ್ಣು ಉತ್ತಮ ಸೊಸೆಯಾಗಬೇಕೆನ್ನುವ ಒತ್ತಡದಲ್ಲಿ ಅವಳು ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಕಳೆದುಕೊಳ್ಳುತ್ತಾ ಸಾಗುತ್ತಾಳೆ. ಹಲವೊಮ್ಮೆ ಇದು ಅವಳ ಅರಿವಿಗೆ ಬರದೆಯೇ ನಡೆದು ಬಿಡುತ್ತದೆ. ಗಂಡನ ಮನೆಗೆ ಹೋದ ಅವಳ ನಡವಳಿಕೆಗಳಿಂದ ತವರು ಮನೆಯ ಮಾನ ಮರ್ಯಾದೆಗಳನ್ನು ಗಂಡನ ಮನೆಯ ಗೌರವವನ್ನು ಉಳಿಸಬೇಕೆನ್ನುವ ಜವಾಬ್ದಾರಿಯಲ್ಲಿ ಬದುಕುವ ಹೆಣ್ಣು ನಿರಂತರವಾಗಿ ಅನೇಕಾನೇಕ ಸಮಸ್ಯೆಗಳನ್ನು ಎದುರಿಸುತ್ತಾ ಸಾಗುತ್ತಾಳೆ. ತನ್ನ ಬದುಕನ್ನು ಸಂದಿಗ್ಧ ಸ್ಥಿತಿಯಲ್ಲೇ ನಡೆಸುತ್ತಿರುತ್ತಾಳೆ.

ಹುಚ್ಚನಂತಹ ಗಂಡ ಹುಲಿಯಂತಹ ಮೈದುನ
ದತ್ತೋರೆವ್ವ ನನ್ನ ಬರಹೇಳಿ ಅತ್ತೆಮನಿ
ಇಗ್ಗರ ಭಾಳ ಇರಲಾರ.

ಅತ್ತೆಯ ಮನೆಯ ನೋವುಗಳು ಒಂದೆಡೆಯಾದರೆ ಸಮಾಜ ರೂಪಿಸಿರುವ ಸಮಸ್ಯೆಗಳೇ ಒಂದಾಗಿರುತ್ತದೆ. ಒಂದು ಹೆಣ್ಣು ಗರ್ಭವತಿಯಾಗದಿದ್ದಾಗ ಅದಕ್ಕೆ ಕಾರಣ ಪುರುಷನಾಗಿದ್ದರೂ ಕೂಡ ನಮ್ಮ ಸಮಾಜ ತಪ್ಪನ್ನು ಹೆಣ್ಣಿಗೆ ಹೊರಿಸಿಬಿಡುತ್ತದೆ. ಆದ್ದರಿಂದ ಇಲ್ಲಿ ಹೆಣ್ಣು "ಮಕ್ಕಳಿರಲವ್ವ ಮನೆತುಂಬ" ಎಂದೇ ಆಸೆ ಪಡುತ್ತಾಳೆ. ಅಪ್ಪಿತಪ್ಪಿ ಅವಳು ಬಂಜೆಯೆನಾದರೂ ಆಗಿದ್ದೇ ಆದರೆ ಅವಳನ್ನು ತನ್ನ ಅತ್ತೆ ಮನೆ ಮತ್ತು ಸುತ್ತಲ ಸಮಾಜದಿಂದ ಅನುಭವಿಸಬಾರದ ನೋವನ್ನು ಅನುಭವಿಸಿಬಿಡುತ್ತಾಳೆ.

ಸಂಜೆಗೆ ಕೊಟ್ಟು ನೀ ಮುಂಜಾನೆ ಕೊಳ್ಳಯ್ಯ
ಬಂಜೆಯ ಶಬುದ ಮರೆಸಯ್ಯ ಶಿವನೆ
ಆಗಲೇ ಕೊಟ್ಟು ಆಗಲೆ ಕೊಳ್ಳಯ್ಯ

ಎಂದು ದೇವರಲ್ಲಿ ಮೊರೆಯಿಡುತ್ತಾಳೆ.

ಜನಪದ ಕಾವ್ಯಗಳಲ್ಲಿ ಹೆಣ್ಣಿನ ಅನೇಕ ನೋವುಗಳಲ್ಲಿ ವೈಧವ್ಯವು ಒಂದು. ಸಣ್ಣ ವಯಸ್ಸಿನಲ್ಲೆ ಗಂಡನ ಸಾವು, ಹೆಣ್ಣಿನ ಬದುಕಿಗೆ ಬಹುದೊಡ್ಡ ಶಾಪವೇ ಸರಿ. ಗಂಡನನ್ನು ಕಳೆದುಕೊಂಡ ಹೆಣ್ಣು ಮತ್ತೊಂದು ಮದುವೆಯಾಗುವುದಕ್ಕೆ ಅವಕಾಶಗಳಿದ್ದರೂ ಕೂಡ ಅಂತಹ ವಿಚಾರಗಳಿಗಿಂತ ಹೆಚ್ಚಾಗಿ ಅವಳ ವೈಧವ್ಯದ ಬಗೆಗೆ ಹೆಚ್ಚು ಗಮನಕೊಡುವಂತೆ ಕಾಣುತ್ತದೆ.

ಚಿಕ್ಕ ತಿಲಕ ಇಕ್ಕದಿರು ಎಲೆಹೆಣ್ಣೆ
ಚಿಕ್ಕ ಪ್ರಾಯದಲಿ ನಿನಗಂಡ ಹೋದ್ಮೇಲೆ
ಚಿಕ್ಕ ಬಟ್ಟಿಟ್ಟು ಫಲವೇನು
ಗಂಡ ಸತ್ತರಿನ್ನು ಗಂಧ್ಯಾಕ ಕುಂಕುಮ್ಯಾಕ
ಬಂಗಾರವ್ಯಾಕ ಬಳಿಯಾಕ ಕೊರಳೀನ
ಸಿಂಗಾರ ಸಿವನೆ ಕಸಗೊಂಡ

ISBN – 978-93-5526-247-9

ಎಂದು ಗಂಡನ ಸಾವಿನ ನಂತರ ಹೆಣ್ಣು ಏನೆಲ್ಲವನ್ನು ಬಿಡಬೇಕೆನ್ನುವ ಆಣತಿಯೇ ಇಲ್ಲಿ ಹೆಚ್ಚಾಗಿ ಕಾಣಿಸುತ್ತದೆ. ಗಂಡನ ಸಾವಿನ ನಂತರ ಹೆಣ್ಣು ಬೇರಾವ ಕೆಲಸಕ್ಕೂ ಸರಿಯಾದವಳೆಂದು ಅಂದುಕೊಳ್ಳದೆ ಅವಳನ್ನು ಮೂಲೆಗೆ ತಳ್ಳಿಬಿಡಲಾಗುತ್ತದೆ. ಇಂತಹ ನೋವುಗಳಿಂದ ಬೇಸತ್ತ ಹೆಣ್ಣು ಅಲ್ಲಲ್ಲಿ ಅದನ್ನು ಪ್ರತಿಭಟಿಸುವುದನ್ನು ಕಾಣಬಹುದಾಗಿದೆ.

ಗಂಡ ಸತ್ತವ್ವಗ ರಂಡೆ ಮುಂಡೆನಬೇಡ
ಕಂದನ ಹಿಡಿದು ತಪಹಾಳ ಅವಳೀಗ
ಗಂಗಾದೇವೆಂದು ಕರೀಬೇಕು.

ಭಾರತೀಯ ಪರಂಪರೆಯೊಳಗೆ ಆಚರಣೆಯಲ್ಲಿದ್ದ ಅನಿಷ್ಠ ಪದ್ಧತಿಗಳಲ್ಲಿ ಪ್ರಮುಖವಾದ ಪದ್ಧತಿಯೆಂದರೆ ಸತಿಸಹಗಮನ ಪದ್ಧತಿಯನ್ನು ಹೇಳಬಹುದು. ಹೆಣ್ಣಿನ ಆಂತರ್ಯವನ್ನು ಅರಿಯದ ಸಮಾಜ ಅವಳನ್ನು ಸತಿಸಹಗಮನ ಪದ್ಧತಿಗೆ ನೂಕುತಿತ್ತು. ಜನಪದ ಕಾವ್ಯಗಳಲ್ಲಿ ಇಂತಹ ಸಹಗಮನ ಪದ್ಧತಿ ಚಿತ್ರಣಗಳು ಅನೇಕ ಸಂದರ್ಭದಲ್ಲಿ ಕಾಣಬಹುದಾಗಿದೆ. ಈರೋಬಿ, ನಾಗವ್ವ, ಕೊಂಡದ ಕಾಟವ್ವರ ವೃತ್ತಾಂತಗಳನ್ನು ಇಲ್ಲಿ ನೆನಯಬಹುದು. ಇಚ್ಛೆ ಇದ್ದು ಇಚ್ಛೆಯಿಲ್ಲದೆ ಕೊಂಡದೊಳಗೆ ಬಿದ್ದು ಪ್ರಾಣ ಬಿಟ್ಟು ಊರೊಳಗೆ ಸತಿ ಕಲ್ಲುಗಳಾಗಿ ನಿಂತವರೆಷ್ಟೋ, ಯಾವುದೋ ಶಿಷ್ಟ ಸಮಾಜವೊಂದರ ಅನಿಷ್ಟ ಪದ್ಧತಿಗಳು ಜನಪದರ ಮೇಲೆ ತೀವ್ರವಾದ ಪ್ರಭಾವ ಬೀರಿದ ಪರಿಣಾಮದಿಂದ ಪತಿಯೊಡನೆ ತನ್ನನ್ನು ಕೊಂದುಕೊಳ್ಳುವುದೇ ಧರ್ಮವೆಂದು ನಂಬಿದಳು ಹೆಣ್ಣು. ಸತಿಸಹಗಮನ ಆಚರಣೆಗಳು ಒಂದು ಕಡೆಯಾದರೆ ಮತ್ತೊಂದು ಕಡೆ ಕೆರೆ–ಬಾವಿಗಳನ್ನು ನಿರ್ಮಿಸಿ ನೀರು ನಿಲ್ಲಬೇಕೆಂದು ಹೆಣ್ಣನ್ನು ಬಲಿಕೊಡುವ ವಿಚಾರಗಳು ಸಹ ನಡೆದಿತ್ತು. ಹೀಗೆ ಈ ಸಮಾಜ ತನ್ನ ಸ್ವಾರ್ಥಕ್ಕಾಗಿ ಹೆಣ್ಣನ್ನು ನಿರಂತರವಾಗಿ ಬಲಿಗೀಡುಮಾಡುತ್ತಲೇ ಬಂದಿದೆ. ಹೆಣ್ಣನ್ನು ಯಾವ ಧರ್ಮವೂ ಸಮಾನವಾಗಿ ಕಂಡಿಲ್ಲವೆನ್ನುವ ಮಾತು ಸತ್ಯವೆಂದೇ ಕಾಣುತ್ತದೆ. ಹೆಣ್ಣಾದವಳಿಗೆ ಗಂಡನೇ ದೇವರಾಗುತ್ತಾನೆ, ಸಮಾಜ ಅವನನ್ನೆ ಅವಳು ಆರಾಧಿಸಬೇಕೆನ್ನುವ ನಿಯಮಗಳನ್ನು ಬಹುತೇಕ ಗಂಡಿಗೆ ಇಲ್ಲವಾಗಿಸಿಬಿಟ್ಟಿವೆ. ಇದಕ್ಕೆ ವಿರುದ್ಧವಾಗಿ ಹೆಣ್ಣು ನಡೆದುಕೊಂಡರೆ ಅವಳನ್ನು ಈ ಸಮಾಜ ಒಪ್ಪದೆ ಇಲ್ಲವಾಗಿಸಿಬಿಡುತ್ತವೆ. ಆದರೆ ಇಲ್ಲಿ ಆಶ್ಚರ್ಯವೆಂಬಂತೆ ಹೆಣ್ಣಿನ ಅನೈತಿಕ ಸಂಬಂಧಗಳ ಬಗ್ಗೆಯೂ ಕೂಡ ಜನಪದ ಕಾವ್ಯಗಳು ಬೆಳಕು ಚೆಲ್ಲಿದೆ.

ದನಿ ಹೆಂಗೆ ತೋರಾಲಿ ಕದ ಹೆಂಗೆ ತೆರೆಯಾಲಿ
ಮಗ್ಗುಲಲ್ಲವನೆ ಮನೆಪುರುಷ ಎಲೆ ಗೆಣೆಯ
ಮಗ್ಗಾಗಿ ಬಾರೋ ತುರುಬೀಗೆ

ಎಂದು ಹೆಣ್ಣು ತನ್ನ ಗೆಳಯನನ್ನು ಹತ್ತಿರಕ್ಕೆ ಕರೆಯುವುದರ ಜೊತೆಗೆ ಅವಳ ಈ ಸಂಬಂಧ ಊರವರಿಗೆ ತಿಳಿದುಬಂದಾಗ ಅವಳು ಸಾಯಲು ಸಹ ಮುಂದಾಗುತಿದ್ದಳು.

ದಾರಿ ಸೇರಿ ಬೇರೆ ಹೋಗೋಣ
ಹೊಳೆಯ ದಡದಲ್ಲಿ ಮನೆಯ ಕಟ್ಟೋಣ
ಸಮಾನಗಾರ
ಹೊಳೆಯು ಬಂದರೆ ತೇಲಿ ಹೋಗೋಣ

ಇಂತಹ ಸನ್ನಿವೇಶಗಳನ್ನು ಗಮನಿಸಿದಾಗ ಜನಪದರು ತಮ್ಮ ಸುತ್ತಲ ಸಮಾಜವನ್ನು ಗಮನಿಸುವುದರ ಜೊತೆಗೆ ಅವುಗಳನ್ನು ಮುಚ್ಚುಮರೆಯಿಲ್ಲದೆ ತಮ್ಮ ಕಾವ್ಯಗಳಲ್ಲಿ ಹೇಳುವುದಕ್ಕೆ ಹಿಂಜರಿಯುತ್ತಿರಲಿಲ್ಲವೆಂದು ಕಾಣುತ್ತದೆ.

ಒಟ್ಟಾರೆಯಾಗಿ ಹೆಣ್ಣಿನ ಬದುಕು ದುಃಖದಿಂದಲೇ ಕೂಡಿರುತ್ತದೆ ಎಂದು ಅನೇಕ ಜನಪದ ಕಾವ್ಯಗಳು ಹೇಳಿವೆ. ಇದನ್ನು ಅವಳು ಅನಿವಾರ್ಯವಾಗಿ ಒಪ್ಪಿಕೊಂಡೆ ತನ್ನ ಜೀವನವನ್ನು ನಡೆಸುತ್ತಾಳೆ. ಅವಳ ಈ ಜೀವನವನ್ನು ಕಂಡಾಗ ಧರ್ಮಶಾಸ್ತ್ರಗಳೆಲ್ಲವೂ ಒಂದು ಹೆಣ್ಣನ್ನು ಯಾವ ರೀತಿ ಇರಬೇಕೆಂದು ಅಂದುಕೊಂಡವೋ ಅದೇ ಬಗೆಯಲ್ಲಿ ಅವಳು ಇದ್ದು ಬಿಟ್ಟಿದ್ದಾಳೆಂದು ತೋರುತ್ತದೆ. ಈ ಸಮಾಜ ಅವಳ ಪಾಲಿಗೆ ಉಳಿಸಿದ ವಿಚಾರಗಳೆಂದರೆ ಕಷ್ಟ, ನೋವು, ದುಃಖ, ನಿರಂತರ ದುಡಿಮೆಗಳಷ್ಟೆ.

ಆಕರ ಗ್ರಂಥಗಳು

ಜಾನಪದ – ಸಂ. ಡಾ. ಬಸವರಾಜ ನೆಲ್ಲಿಸಾರ
ಕನ್ನಡ ಕಾವ್ಯಕಂಡ ಹೆಣ್ಣು – ಡಾ. ಸಿ.ವೀರಣ್ಣ
ಅವಲೋಕನ – ಕರ್ನಾಟಕ ಜಾನಪದ – ಜೀ. ಶಂ. ಪರಮಶಿವಯ್ಯ

***

# 33.ಜನಪದ ಕಾವ್ಯಗಳಲ್ಲಿ ದೈವಿಕತೆ

**ವೆಂಕಟೇಶ್.ಟಿ.ಕೆ**

20ನೇ ಶತಮಾನದ ಆರಂಭದಲ್ಲಿ ಪ್ರಪಂಚದಲ್ಲಿ ಜರುಗಿದ ಜಾಗತಿಕ ಯುದ್ಧಗಳ ಪರಿಣಾಮದಿಂದ ಜಾಗತಿಕವಾಗಿ ಗ್ರಾಮೀಣ ಸಮುದಾಯ, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ನಗರ ಸಂಸ್ಕೃತಿಗಳಲ್ಲೂ ಬದಲಾವಣೆಯಾಗತೊಡಗಿತು. ಹಾಗೆಯೇ ಭಾರತವು ವಸಾಹತೀಕರಣದಿಂದ ಆಗ ತಾನೇ ಹೊರಬಂದು ತನ್ನ ಮೂಲದ ಬೇರನ್ನು ಗಟ್ಟಿಮಾಡಿಕೊಳ್ಳುವ ಕಡೆಗೆ ಮುಖಮಾಡಿತ್ತು. ಇದರಲ್ಲಿ ಧರ್ಮ ಪ್ರಮುಖ ಪಾತ್ರವಹಿಸಿತ್ತು. ಏಕೆಂದರೆ ಬ್ರಿಟಿಷರ ಅಧೀನದಲ್ಲಿದ್ದಾಗ ಕ್ರೈಸ್ತ ಧರ್ಮದ ಪ್ರಭಾವ, ಮುಸಲ್ಮಾನರ ಆಡಳಿತದಡಿಯಲ್ಲಿ ಮುಸ್ಲಿಂ ಧರ್ಮದ ಪ್ರಭಾವ ಇದರ ನಡುವೆ ಹಿಂದೂ ಧರ್ಮವನ್ನು, ಧರ್ಮೀಯರನ್ನು ಒಟ್ಟುಗೂಡಿಸಿ, ಒಗ್ಗಟ್ಟು ಪ್ರದರ್ಶಿಸಬೇಕಿತ್ತು. ಆಗ ನಮ್ಮ ಶಿಷ್ಟ ಸಂಸ್ಕೃತಿಯಿಂದ ನಮ್ಮ ಪುರಾತನರ ಕಡೆಗೆ ಮುಖಮಾಡಲಾಯಿತು. ಆಗ ಅವರನ್ನು ಒಂದುಗೂಡಿಸಿದ್ದು ಧರ್ಮದ ಹಿನ್ನೆಲೆಯಲ್ಲಿನ ದೈವಿಕತೆ.

ಇಂದು ಶಿಷ್ಟ ಸಂಸ್ಕೃತಿ ಹೇಗಿದೆಯೆಂದರೆ ಬಸವಣ್ಣನವರ ವಚನದ ಮಾತಾದ "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಮಾತಿಗೆ ವಿರುದ್ಧವಾಗಿದೆ. ಈ ಮಾತಿಗೆ ಅನ್ವರ್ಥಕವಾಗಿ ನಮಗೆ ಕಾಣುವುದು ಜನಪದರು. ಇವರು ಪ್ರತಿ ಜೀವಿಗಳಲ್ಲಿ, ವಸ್ತುಗಳಲ್ಲಿ ದೇವರನ್ನು ಕಾಣುತ್ತಿದ್ದರು. ಜೊತೆಗೆ ಇಷ್ಟದ ರೀತಿಯಲ್ಲಿ ಪೂಜಿಸುವ ಸ್ವತಂತ್ರವನ್ನು ಪಡೆದಿದ್ದರು, ಆದರೆ ನಾಗರಿಕ ವ್ಯಕ್ತಿ ಧಾರ್ಮಿಕತೆ/ದೈವಿಕತೆಗಳನ್ನು ಸಂಕೀರ್ಣಗೊಳಿಸಿಬಿಟ್ಟಿದ್ದಾನೆ ಮತ್ತು ಸ್ವತಂತ್ರವನ್ನು ಕಳೆದುಕೊಂಡುಬಿಟ್ಟಿದ್ದಾನೆ.

ಇವನ ಪರಿಕಲ್ಪನೆಯಲ್ಲಿ 'ಸ್ಥಾವರಗಳೇ' ಎಲ್ಲ ನೆಲೆಗಳ ಮೂಲ ಎಂದು ನಂಬಿದ್ದಾನೆ. ಆದರೆ ಜನಪದರು ಜಂಗಮದ ರೀತಿಯಂತೆ ನಂಬಿಕೆ ಹೊಂದಿದ್ದಾರೆ ಹೇಗೆಂದರೆ ನಾಗರೀಕ ಪರಂಪರೆಯಲ್ಲಿ ನಾಗರೀಕ ವಸ್ತುಗಳ ಅವಲಂಬನೆಯನ್ನು ಬೆಳಿಗ್ಗೆಯಿಂದ ಮಲಗುವವರೆಗೂ ತೋರ್ಪಡಿಸುತ್ತಾ ಹೋಗುತ್ತಾನೆ. ಆದರೆ ಇದರ ನಡುವೆ ದೇವರ ನೆನಪು ಕೂಡ ಆಗದ ಸ್ಥಿತಿಯಲ್ಲಿರುತ್ತಾನೆ.

ಜನಪದರು ನಾಗರಿಕ ಸಂಸ್ಕೃತಿಗಿಂತ ಭಿನ್ನವಾಗಿ ತಮ್ಮನ್ನು ತೋರ್ಪಡಿಸಿಕೊಳ್ಳುವ ಮೂಲಕ ನೈಸರ್ಗಿಕತೆಗೆ ಒತ್ತು ನೀಡಿದ್ದಾರೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಬೆಳಿಗ್ಗೆ ಏಳುತ್ತಿದ್ದಂತೆಯೇ ದೇವರನ್ನು ಸ್ಮರಿಸುವ ಮೂಲಕ ತಮ್ಮ ದಿನನಿತ್ಯದ ಕೆಲಸಗಳಲ್ಲಿ ತೊಡಗುತ್ತಾರೆ. ಜನಪದರು ಮುಖ್ಯವಾಗಿ ಹಳ್ಳಿಯವರು ಅವರ ಕಸುಬು ಒಕ್ಕಲುತನ/ಕೃಷಿಕತನ. ಇದರಿಂದ ತಾವು ಒಕ್ಕಲು ಮಾಡುವ ಭೂಮಿಯೇ ಅವರಿಗೆ ದೇವರಂತೆ ಕಾಣುತ್ತದೆ ಈ ದೇವರನ್ನು ಅವರು ನೆನೆಯುವುದು

ಏಳುತ್ತಾಲೆ ಎದ್ದು ಯಾರ್‍ಯಾರ ನೆನೆಯಾಲೆ
ಎಳ್ಳು ಜೀರಿಗೆ ಬೆಳೆಯೊಳ/ ಭೂತಾಯಿ
ಎದ್ದೊಂದು ಗಳಿಗೆ ನೆನೆದೇನು

ಇದರ ಮೂಲಕ ನಮ್ಮ ಜನಪದರು ಕಣ್ಣಿಗೆ ಕಾಣದ ದೇವರಿಗಿಂತ ನಮಗೆ ಬೇಕಾದ್ದನ್ನು ಬೆಳೆಯಲು ಅವಕಾಶನೀಡಿರುವ ಭೂತಾಯಿಯನ್ನು ನೆನೆಯುತ್ತಾರೆ ಎಂಬುದನ್ನು ತಿಳಿಯಬಹುದು.

ಮನುಷ್ಯ ತನ್ನ ಪಾಪ–ಪರಿಹರಿಸಿಕೊಳ್ಳಬೇಕೆಂದು ತೀರ್ಥಯಾತ್ರೆ ಕೈಗೊಳ್ಳುತ್ತಾನೆ. ಆದರೆ ಜನಪದರು ತಮ್ಮ ಪಾಪವನ್ನು ಪರಿಹಾರ ಮಾಡಿಕೊಳ್ಳುವುದೇಗೆಂದರೆ

ಮೊದಲಾಗಿ ನೆನೆವೇನು ಮದನ ಗೋವಿಂದನ
ಹದಿನೆಂಟು ನಾಮದೊಡೆಯನ ನೆನೆದಾರೆ
ಹೊತ್ತಿದ್ದ ಪಾಪ ಪರಿಹಾರ

ISBN – 978-93-5526-247-9

ಇದು ಜನಪದರು ತಾವು ದೈವಕ್ಕೆ ನೀಡಿರುವ ಪ್ರಾಮುಖ್ಯತೆಯ ಜೊತೆಗೆ ಸರಳವಾಗಿ ತಾವಿರುವಲ್ಲಿಯೇ ತಮ್ಮ ಪಾಪ ಪರಿಹರಿಸಿಕೊಳ್ಳುತ್ತಾರೆ. ಇದಕ್ಕೆ ಅನ್ವರ್ಥಕವಾಗಿ ಅಲೆಮಾರಿ ಅಂಡಮಾನ್‌ನಲ್ಲಿ – ತೇಜಸ್ವಿ "ಯಾರಿಗೆ ತಾವಿರುವಲ್ಲೇ ಸಂತೋಷ, ಉತ್ಸಾಹ, ಕುತೂಹಲಗಳಿರುವುದಿಲ್ಲೋ ಅವರು ಅದನ್ನು ಹುಡುಕಿಕೊಂಡು ಎಲ್ಲಿಗೆ ಪ್ರವಾಸ ಹೋಗುವುದು ವ್ಯರ್ಥ" ಇದೇ ಮಾತಿನಂತೆ ಜನಪದರು ತಾವಿರುವಲ್ಲಿಯೇ ದೇವರನ್ನು ಕಂಡರು.

ಜನಪದರು ತಾವು ನಂಬಿರುವ ದೈವಗಳನ್ನು ಆರಾಧಿಸುತ್ತಾ ತಮ್ಮ ಅಂತರಂಗದ ಅರಿವನ್ನು ಕೂಡ ನಿರೂಪಿಸುವುದರ ಜೊತೆಗೆ ತಮ್ಮ ಬದುಕಿನ ಅನುಭವಗಳನ್ನು ಪ್ರತಿಪಾದಿಸಿದರು. ಹಾಗೇ ಜನಪದರು ಆಗ ಉಂಟಾಗುತ್ತಿದ್ದ ಗುಡುಗು-ಮಿಂಚು-ಸಿಡಿಲು, ರಭಸವಾದ ಮಳೆ, ಕ್ರೂರ ಮೃಗಗಳಿಂದ ಉಂಟಾಗುವ ಅನಾಹುತವನ್ನು ನೆನೆದು ಭಯಗ್ರಸ್ಥರಾಗುತ್ತಿದ್ದರು. ಇದರಿಂದ ತಮಗೆ ಬೆಂಬಲವಾಗಿರಲೆಂದು, ಭಯದಿಂದ ಮುಕ್ತರನ್ನಾಗಿಸಲು ಯಾರಾದರೂ ಒಬ್ಬ ಬೇಕಿತ್ತು. ಆಗ ಬಂದಿದ್ದೆ ದೇವರು. ಪ್ರತಿಯೊಂದು ಕೆಲಸ, ಅಶು-ಅಶುಭ ಯಾವುದೇ ಸಂದರ್ಭದಲ್ಲೂ ದೇವರನ್ನು ಧ್ಯಾನಿಸಲು ಮುಂದಾದರು. ಹೀಗೆ ಒಬ್ಬ ಹೆಣ್ಣು ಮಗಳು

ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪನಿನಗುಡಿಗೆ ಬರುವೆನೋ – ಮಾದಯ್ಯ
ಮುತ್ತೀನ ಬಾಗೀಲು ತೆರೆದೀರು

ಎಂದು ತನ್ನ ದೈವವನ್ನು ಆರಾಧಿಸುವ ಸ್ವಾತಂತ್ರವನ್ನು ತೋರಿದ್ದಾಳೆ. ಹಾಗೆಯೇ ಯಾವ ಸಂದರ್ಭದಲ್ಲೂ ನಮ್ಮನ್ನು ಉದ್ಧರಿಸುತ್ತಾನೆ ಎಂದು ನಂಬಿರುವದನ್ನು ತೋರಿದೆ.

ಜನಪದ ಹೆಣ್ಣು ಮಗಳಿಗೆ ತನ್ನ ತಾಯಿಯೇ ವಿಶ್ವನಾಥ, ತನ್ನ ತವರು ಮನೆ ಕಾಶಿಯೇ ಆಗಿದೆ. ಇದರ ಮೂಲಕ ದೇವರು ತಂದೆ-ತಾಯಿಯ ಮೂಲಕ ಸಾಕಾರ ಪಡೆದಿರುವುದನ್ನು ತೋರಿಸುತ್ತದೆ.

ಕಾಶಿಗೆ ಹೋಗಲಿಕೆ ಏಸೊಂದು ದಿನಬೇಕು
ತಾಸ್ಹೊತ್ತಿನ ಹಾದಿ ತವರೂರು – ಮನೆಯಲ್ಲಿ
ಕಾಶಿ ಕುಂತವಳೆ ಹಡೆದವ್ವ

ಇದು ತಾಯಿ ದೇವರ ಪಾವಿತ್ರ್ಯತೆಯನ್ನು ಎತ್ತಿ ತೋರಿಸುತ್ತದೆ.

ಜನಪದರು ಪ್ರತಿ ಮರ, ಪಕ್ಷಿ, ಪ್ರಾಣಿಗಳಲ್ಲೂ ದೇವರ ಪರಿಕಲ್ಪನೆಯನ್ನು ಕಂಡಿದ್ದಾರೆ. ಇದು ಅವರ ಸಮಷ್ಠಿ ಪರಕಲ್ಪನೆಯಾಗಿದೆ. ಇದರಿಂದಾಗಿ ತಮ್ಮ ಅಂತರಂಗದ ಒಳಹುಗಳನ್ನು ತೋರ್ಪಡಿಸವ ಮೂಲಕ ಮನುಷ್ಯನಂತಯೇ ಅವು ಎಂದು ತಿಳಿದು ಮನುಷ್ಯನಿಗೆ ಸಮನಾಗಿಸಿ ದೇವರ ಛಾಯೆಯನ್ನು ನೀಡಿದ್ದಾರೆ. ನಮ್ಮಲ್ಲಿ ಜೇನು ಕುರುಬರು ಇದ್ದಾರೆ, ಅವರ ಜೇನು ಬೇಟೆಯನ್ನು ಆರಾಧನಾ ರೂಪದಲ್ಲಿ ಆಚರಿಸುವ ಹಲವು ಪದ್ಧತಿಗಳು ನಮ್ಮ ಮುಂದೆ ಈಗಲೂ ಕಾಣುತ್ತೇವೆ. ಅದೇ ರೀತಿಯಲ್ಲಿ ಜೇನನ್ನು ಬೇಟೆಯಾಡಲು ಹೋಗುವ ಸೋಲಿಗರು ಜೇನು ದೇವತೆಯನ್ನು ಪೂಜಿಸುವ ವಿಧಾನವನ್ನು ಕಾಣುತ್ತೇವೆ. ಇವನ್ನು ಶಿಷ್ಟ ಸಮಾಜ ಮೂಢನಂಬಿಕೆ ಎಂದು ಪ್ರತಿಕ್ರಿಯಿಸುತ್ತದೆ ಆದರೆ ಅದೇ ಶಿಷ್ಟ ಸಮಾಜ ಒಪ್ಪಿ ನಡೆಯುತ್ತೆ.

'ಹಂತಿಯ ಹಾಡು'ಗಳಲ್ಲಿಯೂ ದೈವೀ ಭಾವನೆಯ ಸಾಂಪ್ರದಾಯಿಕ ಆಚರಣೆಯನ್ನು ಕಾಣಬಹುದು ಇಲ್ಲಿ ಒಂದು ಕಡೆ ಕೆಲಸ ಇನ್ನೊಂದು ಕಡೆ ಆಚರಣೆ ಎರಡನ್ನು ಕಾಣುತ್ತಾ ಹೋಗುತ್ತದೆ.

ಅಡಿಗಲ್ಲು ಅಡಿಗಟ್ಟಿ ಪೂಜೆ ಮೊದಲ ಹೊಂಬಲ ಪೂಜಿ
ಕೂರಿಗಿ ಪೂಜಿ ಮೊದಲೀಗೆ/ ಮ್ಯಾಲಿರುವ

ಶಿವಲಿಂಗ ಪೂಜೆ ಸರಯ್ಯಾಗೊ

ಕೃಷಿ ಸಮಯದಲ್ಲಿ ಕೂರಿಗೆಯನ್ನು ಪೂಜಿಸಿ ತಮ್ಮ ಆಚರಣೆಯನ್ನು ಶಿಸ್ತಿನಿಂದಲೇ ನಡೆಸುತ್ತಾರೆ.

ಭಗವಂತನು ಸರ್ವಾಂತರ್ಯಾಮಿ, ಸರ್ವಜ್ಞ, ಸರ್ವಶಕ್ತತೆ ಹೊಂದಿರವವನು ಎಂಬ ಭಾವನೆಯನ್ನು ಹೊಂದಿದ್ದರು. ಅವನು ಮತ್ತು ನಮ್ಮ ನಡುವೆ ಅಂತರ್ ಸಂಬಂಧವಿದೆ, ಭಾವನಾತ್ಮಕತೆಯಿದೆ. ಒಬ್ಬರಿಗೊಬ್ಬರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಅದರ ಮೂಲಕ ಪರಿಹಾರ ಕಂಡುಕೊಳ್ಳುವ ಮಾರ್ಗದಂತೆಯೂ ಕಾಣುತ್ತದೆ ಎಂಬುದನ್ನು ಈ ಪದ್ಯದಲ್ಲಿ ಗಮನಿಸಬಹುದು.

ಕೂಡಲ ಸಂಗಯ್ಯ ಹೊಳಿಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ ಸಣ್ಣ ಮಳಲೊತ್ತಿ/ ಗಂಗೇಯ
ನೀರೊತ್ತಿ ಲಿಂಗ ನೆನೆದಾನ

ಜನಪದರ ದೈವಭಕ್ತಿಯಲ್ಲಿ ಮುಗ್ಧ ಭಕ್ತಿಯ ಅಭಿವ್ಯಕ್ತಿಯಿದೆ. ಹಾಗೆಯೇ ಆ ದೈವವನ್ನು ತಾಯಿಯಲ್ಲಿ ಕಂಡೂ ಇದ್ದಾರೆ. ಹೀಗೆ ಅವರು ಏಕದೇವ ಕೇಂದ್ರಿತವಾಗದೆ ಎಲ್ಲಾ ದೇವರುಗಳನ್ನು ದೇವ–ದೇವತೆಗಳು, ಮರ, ಪಕ್ಷಿ,ಪ್ರಾಣಿ, ಇಂದ್ರ, ಚಂದ್ರ, ಗಂಡು ದೇವರು, ಹೆಣ್ಣು ದೇವರುಗಳನ್ನು ಅವರು ಪೂಜಿಸವ ಮೂಲಕ ದೇವರನ್ನು ವಿಶ್ವರೂಪದ ಪ್ರತೀಕದಂತೆ ತೋರ್ಪಡಿಸಿದ್ದಾರೆ. ಎಲ್ಲ ಕಾರ್ಯಚಟುವಟಿಕೆಗಳಿಗೂ ಈತನೇ ಮೂಲ. ಜೊತೆಗೆ ತಮ್ಮ ಭಕ್ತಿಯನ್ನು ಆಢಂಬರದಲ್ಲಿ ತೋರುವುದಿಲ್ಲ. ಇದರ ಮೂಲಕ ದೇವರಲ್ಲಿ ನಿಸ್ವಾರ್ಥತೆಯಿಂದ ಕೂಡಿದ ಭಕ್ತಿಯನ್ನು ಅರ್ಪಿಸಿದ್ದಾರೆ. ನಮ್ಮ ಬದುಕು ಕಷ್ಟ ಸುಖಗಳಿಂದ ಕೂಡಿದ್ದರೆ ಅದಕ್ಕೆ ನಾವು ನಂಬಿರುವ ಪರಮಾತ್ಮನೇ ಕಾರಣನಾಗಿರುತ್ತಾನೆ. ಇದರಿಂದ ಅವನು ನೀಡಿರುವ ಮನುಷ್ಯನ ಬದುಕನ್ನು ಸಮನಾಗಿ ಕಾಣಬೇಕೆಂಬ ಆಶಯವನ್ನು ಹೊಂದಿದವರು. ಇದರೊಂದಿಗೆ ಭಾರತವನ್ನು ವೈವಿಧ್ಯಯಲ್ಲಿ ಏಕತೆ ಹೊಂದಿರುವ ದೇಶ ಎಂದು ಕರೆಯಲು ನಮ್ಮ ಜನಪದರು ರೂಢಿಸಿ ಪೀಳಿಗೆಯಿಂದ ಪೀಳಿಗೆಗೆ ತಲುಪಿಸಿದ ನಮ್ಮ ವೈವಿಧ್ಯತೆಗಳು, ಅದರಲ್ಲಿ ಹಬ್ಬ, ಜಾತ್ರೆ, ಏನೇ ಆದರೂ ಅವುಗಳ ಮೂಲಕ ಧಾರ್ಮಿಕ ಜೀವನವನ್ನು ನಮ್ಮ ನಡುವೆ ಬೆಳೆಸಿ ಇದರ ಮೂಲಕ ನಮ್ಮ ನುಡಿಗಳಲ್ಲೂ ಪರಮಾತ್ಮನನ್ನು ಕಾಣಬಹುದನ್ನಾಗಿಸಿದ್ದಾರೆ.

ಆಕರ ಗ್ರಂಥಗಳು

ಜಾನಪದ – ಸಂ. ಡಾ. ಬಸವರಾಜ ನೆಲ್ಲಿಸಾರ
ಅವಲೋಕನ – ಕರ್ನಾಟಕ ಜಾನಪದ – ಜೀ. ಶಂ. ಪರಮಶಿವಯ್ಯ
ಸುವರ್ಣ ಜಾನಪದ ಲೇಖನಗಳು – ಸಂ. ಡಾ. ವೀರಣ್ಣ ದಂಡೆ
ಡಾ. ಶ್ರೀಪಾದ ಶೆಟ್ಟಿ
ಕನ್ನಡ ಜನಪದ ಕಥೆಗಳು – ಜೀ.ಶಂ ಪರಮಶಿವಯ್ಯ

***

ISBN – 978-93-5526-247-9

# 34.ಮಲೆಮಹದೇಶ್ವರ ಜನಪದ ಮಹಾಕಾವ್ಯ: ಸಂಕಮ್ಮನ ಪ್ರತಿರೋಧದ ನೆಲೆ

**ಪ್ರತಿಮಾ ಎಂ ಸಿ**

ಕನ್ನಡ ಜನಪದ ಸಾಹಿತ್ಯ ತನ್ನ ಸೃಜನಶೀಲ ಸಾಮರ್ಥ್ಯದ ಎತ್ತರದಿಂದಾಗಿ ಅವಿಚ್ಛಿನ್ನ ಸಂಪತ್ತಾಗಿದೆ. ಕನ್ನಡದ ಜನಾನುರಾಗದ ಕವಿ ಕುಮಾರವ್ಯಾಸನ ಮಾತಿನಂತೆ ಕನ್ನಡಿಗರು ಕುಳಿತು ಓದದೆಯೂ ಕಾವ್ಯರಚನೆಯ ಪರಿಣತಿ ಉಳ್ಳ ಸಾಮರ್ಥ್ಯ ಹೊಂದಿರುವವರು. ಈ ಮಾತು ನಮ್ಮ ಕನ್ನಡ ಜನಪದ ಸಾಹಿತ್ಯವನ್ನು ಅವಲೋಕಿಸಿದಾಗ ಸಾಬೀತಾಗುತ್ತದೆ. ಮೌಖಿಕವಾಹಿನಿಯಾದರೂ ಜನಬದುಕಿನ ಕ್ರಮಗಳಿಂದಲೇ ಜಾಗೃತಿ ಹೊಂದಿ ಸಾಂಸ್ಕೃತಿಕ ಮಹತ್ವವನ್ನು ಪಡೆದಿವೆ. ಮನುಷ್ಯನಿಗೆ ತನ್ನ ಜೀವಿತ ಅವಧಿಯಲ್ಲಿ ಅತಿ ತೀವ್ರವಾಗಿ ಮುಖ್ಯವಾಗಬೇಕಾದ ಆಯ್ಕೆಗಳು ಯಾವುದೆಂಬ ತಿಳುವಿನ ಅನಾವರಣವನ್ನು ಮಾಡಿವೆ. ನೈತಿಕತೆ ಹಾಗು ದುಡಿಮೆಯ ನಂಬಿ ಬದುಕೆಂಬ ಬಹುದೊಡ್ಡ ಸಂದೇಶವನ್ನು ಹೊತ್ತು ಶ್ರಮಸಂಸ್ಕೃತಿಯ ಅರಿವಿನ ಆದ್ಯತೆಯಿಂದ ಭವಿಷ್ಯದಲ್ಲಿ ಸುಖ ನೆಮ್ಮದಿ ಸಾಕಾರಗೊಳ್ಳುವುದೆಂಬ ಸಹಜ ಸರಳ ಸೂತ್ರವನ್ನು ಪ್ರತಿಪಾದಿಸಿವೆ.

ನಡೆ ನುಡಿ, ಆಚಾರ ವಿಚಾರಗಳೇ ಸಂಸ್ಕೃತಿಯಾಗಿ ಗ್ರಾಮ್ಯ ಹಾಗೂ ಕೃಷಿಸಂಸ್ಕೃತಿಯ ಪ್ರಾಧಾನ್ಯತೆ ಜನಪದ ಸಾಹಿತ್ಯದಲ್ಲಿ ಮುನ್ನೆಲೆಯಲ್ಲಿ ಇರುವಂತೆ ಕಂಡುಬಂದರೂ, ಸಂಪ್ರದಾಯ ಪುರಾಣ ಮಹಿಮೆಯ ಸಾಂಸ್ಕೃತಿಕ ಮಹತ್ವದ ಪ್ರತಿಪಾದನೆಯಿದೆ. ವರ್ಣನಾತ್ಮಕ ಕಾವ್ಯಾನು ಕರುಣೆಯಾಗಿ ತಾವು ನಂಬಿದ ದೈವಾರಾಧನೆ, ಸಿದ್ಧ ಪುರುಷರ, ನಾಯಕರ, ಮನೆತನಗಳ ಹಾಗೂ ತಾವು ಆಚರಿಸುವ ಪದ್ದತಿಗಳ ಕಥೆಗಳಿವೆ. ಸ್ತ್ರೀ ಪುರುಷ ಸಂಬಂಧಗಳನ್ನು ಮನರಂಜನೆಗೆ ಹಾಗೂ ನೀತಿ ಭೋದನೆಗಾಗಿ ಬಳಸಿಕೊಳ್ಳಲಾಗಿದೆ. ಜೀವನಕ್ಕೆ ಕೌಟುಂಬಿಕ ಘಟಕದ ಪ್ರಾಮುಖ್ಯತೆ ಎಲ್ಲ ಹಂತಗಳಲ್ಲೂ ಇರುತ್ತದೆ. ನಮ್ಮ ಜಾನಪದರು ಕುಟುಂಬ ಪ್ರತಿಯೊಬ್ಬ ಮನುಜನನ್ನು ಕಾಯ್ದು ಸಲಹುವಂತೆ ಪ್ರಭಾವಿಸಬಲ್ಲದು ಎಂದು ಮಹತ್ವದ ಸ್ಥಾನವನ್ನು ನೀಡಿದ್ದಾರೆ. ಎಲ್ಲ ಜನಪದ ಹಾಡು, ಕಥೆ, ಗಾದೆ, ಕಥನಗೀತೆ, ಒಡಪು, ಒಗಟು, ಪದಗಳು ಮಹಾಕಾವ್ಯಗಳಲ್ಲಿ ಕುಟುಂಬಕ್ಕೆ ನೀಡಿರುವ ಆದ್ಯತೆಯ ಪರಂಪರೆಯನ್ನು ಗುರುತಿಸಬಹುದಾಗಿದೆ.

ಜನಪದ ಸಾಹಿತ್ಯಕ್ಕೆ ಕುಟುಂಬದ ಕಣ್ಣಾದ ಮಹಿಳೆಯ ಕೊಡುಗಯೇ ಅಪಾರ ಎನ್ನುವಮಾತಿದೆ. ಜನಪದ ಹಾಡಿನಿಂದ ಮೊದಲಾಗಿ ಮಹಾಕಾವ್ಯಗಳು ಮಹಿಳೆಯರ ಬದುಕು ಬವಣೆಗಳನ್ನು ತ್ಯಾಗ ಬಲಿದಾನಗಳನ್ನು ಪಾತಿವ್ರತ್ಯ ಗುಣಶೀಲ ಸ್ವಭಾವಗಳನ್ನುಹೇಳುತ್ತಲೇ ಬಂದಿವೆ. ಅಜ್ಞಾತ ಮಹಿಳೆಯರು ತಾವು ಅನುಭವಿಸಿದ ನೋವು ನಲಿವುಗಳನ್ನು ವ್ಯಕ್ತಪಡಿಸಿರುವುದು ವಿಶೇಷದ ಸಂಗತಿ ಎನಿಸಿದೆ, ತನ್ನ ಕೌಟುಂಬಿಕ ವಲಯದಲ್ಲಿ ಹೆಣ್ಣು ಸಾಕಷ್ಟು ಸಹನಶೀಲಳಾಗಿರುವಂತೆ, ಸಮಯ ಸಂದರ್ಭದಲ್ಲಿ ಒದಗಿ ಬರುವ ಸಮಸ್ಯೆಗಳನ್ನು ಹುನಾರಿನಿಂದ ಎದಿರಿಸುವ ಕುಶಲಳೂ ಆಗಿದ್ದಾಳೆ. ತಾನು ನಂಬಿದ ವ್ಯವಸ್ಥೆಯಿಂದ ಅವಮಾನ ತಿರಸ್ಕಾರಗಳಾದಾಗ ಪ್ರತಿಭಟಿಸುವ ಪ್ರತಿರೋಧ ವ್ಯಕ್ತಪಡಿಸುವ ಹಲವು ಪಾತ್ರಗಳು ಬರುತ್ತವೆ. ಅದರಲ್ಲಿ ಸಂಕಮ್ಮನ ಸಾಲು ಬಹುಮುಖ್ಯವಾಗಿ ಸ್ತ್ರೀ ಸಂವೇದನೆಯ ಹೊಳಹು ಕಾಣದೊರೆಯುತ್ತದೆ. ಮಹಿಳೆಯ ಜಗತ್ತೇ ಬಹಳ ವೈವಿಧ್ಯಮಯ ಅನುಭವಗಳಿಂದ ಕೂಡಿರುವಂತೆ ಬಹು ಕ್ಲಿಷ್ಟ ಸಂಕೀರ್ಣತೆಯನ್ನು ಹೊಂದಿರುವುದು ವಾಸ್ತವದ ಸಂಗತಿ.

ಹೆಬ್ಬಳ್ಳದ ಕೆರೆಗೆ ಬರ್ತಾ ಇದ್ರೆ ಸಂಕಮ್ಮ
ಮ್ಯಾಲಾಕೆ ಅಂತ ನೋಡಲಿಲ್ಲ
ಅಕ್ಕಪಕ್ಕದವರ ದೃಷ್ಟಿಯಿಟ್ಟು ನೋಡಲಿಲ್ಲ
ಭೂಮಿತಾಯಿಗೆ ಬೊಕ್ಕಂಡು
ನಿಧಾನವಾಗಿ ಪುಟ್ಟ ಗೆಜ್ಜೆ ಹಾಕ್ಕೊಂಡು ಬರ್ತಾ ಇದ್ದಳು
ನೀಲೇಗೌಡ ಆಲದ ಮರದ ನೆಳ್ಳಲ್ಲಿ ಕೂತ್ಕೊಂಡು ನೋಡ್ದ
ಎಲ್ಲ ಹೆಣ್ಣು ಮಕ್ಕಳೂ ಒಂದೇ ರೀತಿಯಾಗಿ ಬತ್ತಾವ್ರೆ
ಮಧ್ಯ ಬರುವಂಥ ಹೆಣ್ಣುಮಗಳೂ

ISBN – 978-93-5526-247-9 

ಮ್ಯಾಲಾಕೆ ಅಂತ ನೋಡ್ದೆ ಬರ್ತಾ ಇದ್ದಾಳೆ ಅಂತ್ಹೇಳಿ
ಆ ಸಂಕಮ್ಮನ ಮೇಲೆ ದೃಷ್ಟಿ ಇಡ್ತಾವ್ನೆ

ಹೆಣ್ಣು ಹೇಗಿರಬೇಕೆಂಬ ಮಾದರಿಯೊಂದನ್ನು ಎಲ್ಲ ಕಾಲದಲ್ಲೂ ಹೇರಲ್ಪಟ್ಟಿರುವ ಸಂಗತಿಯನ್ನು ಇಲ್ಲಿ ಗುರುತಿಸಬಹುದು. ಹೆಣ್ಣಿನ ನೋಟ ನಿಲುವು ಮಾತು ಎಲ್ಲವನ್ನು ಸ್ಥಾಪಿತ ಚೌಕಟ್ಟೊಂದರಲ್ಲಿ ಇರಿಸಿ,ಪ್ರಶ್ನಿಸದೆ ಒಪ್ಪಿನಡೆದರೆ ಮಾತ್ರ ಗುಣವಂತೆ ಎಂದು ನಂಬಿಸಲಾಗಿದೆ. ಇದರಿಂದಾಗಿ ಸ್ವಾರ್ಥ ಪುರುಷ ಸಮಾಜ ಬಯಸುವ ಎಲ್ಲ ವಿಚಾರಗಳನ್ನು ಚಾಚೂ ತಪ್ಪದೆ ಪಾಲಿಸಬೇಕಾಗಿತ್ತು. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ವರ್ತಮಾನ ಸಂದರ್ಭದಲ್ಲೂ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಜನಪದ ಸಾಹಿತ್ಯವೇ ಪರಿಹಾರ ಹಾಗು ಪರ್ಯಾಯ ಮಾದರಿಗಳನ್ನು ನೀಡಬಲ್ಲದು. ಹೆಣ್ಣು ಜೀವದ ಅವಶ್ಯಕತೆಯನ್ನು ತಿಳಿಸಿ, ಇಡೀ ಸಮಾಜ ಮನಸ್ಸು ಮಾಡಿದರೆ ಭವಿಷ್ಯದಲ್ಲಿ ಸಮಾನತೆಯನ್ನು ಜಾರಿಗೊಳಿಸಬಹುದಾದ ಸಾಧ್ಯತೆಗಳನ್ನು ಮನಗಾಣಿಸಿವೆ. ಮೌಖಿಕ ಸಾಹಿತ್ಯ ಸಂಸ್ಕೃತಿಯಾದರೂ ಇಂದಿನ ಆಧುನಿಕ ಜಗತ್ತನ್ನು ವಿಶೇಷವಾಗಿ ಎಚ್ಚರಿಸುವ ಬಹುರೂಪಿ ಸಾಮರ್ಥ್ಯವನ್ನು ಜನಪದ ಸಾಹಿತ್ಯ ಹೊಂದಿದೆ.

ಸಂಕಮ್ಮನ ಸಾಲು ಸಂಕಮ್ಮನ ಬಗೆಗೆ ಕರುಣೆಯನ್ನು ಹುಟ್ಟಿಸುವಂತೆಯೇ ಸ್ತ್ರೀ ಪುರುಷ ಯಾರೇ ಆಗಲಿ ಮೌಲ್ಯವೆಂಬುದು  ನೊಂದವರ ಪರವಾಗಿ ನಿಲ್ಲಬೇಕೆಂಬ  ಎಂಬ ಸಂದೇಶವನ್ನು ನೀಡುತ್ತವೆ. ವ್ಯವಸ್ಥೆಯ ಭಾಗವಾಗಿ ಸ್ತ್ರೀಪುರುಷರು ತಳೆದಿರುವ ಮೌಢ್ಯ ದೃಷ್ಟಿಕೋನವನ್ನು ಖಂಡಿಸಲು ಪ್ರೇರೇಪಿಸುತ್ತವೆ. ಏನೂ ತಪ್ಪು ಮಾಡದ ಹೆಣ್ಣೊಬ್ಬಳು ಅನುಭವಿಸಬೇಕಾಗಿ ಬಂದ ಶೋಷಣೆಯ ಬಗೆಗೆ ಅಳಲಿದೆ. ನೊಂದು ನೋಯುತ್ತಲೇ ಸಂಕಮ್ಮನಲ್ಲಿ ಅವತರಿಸಿದ ಸ್ತ್ರೀಶಕ್ತಿಯ ಸಾತ್ವಿಕತೆಯಲ್ಲಿನ ಗಟ್ಟಿತನವನ್ನು ಮನಗಾಣಬಹುದು. ಸ್ತ್ರೀಯರನ್ನು ಸೀಮಿತ ಅವಕಾಶದಲ್ಲಿರಿಸಿ ಗಂಡು ಯಜಮಾನಿಕೆಯಿಂದ ಪುರುಷ ಅಧಿಕಾರವನ್ನು ಚಲಾಯಿಸುವ ವಿಕೃತ ಮನಸ್ಸುಗಳು ಚಿತ್ರಿತವಾಗಿವೆ. ಅದರಂತೆಯೇ ಜನಪದ ಹೆಣ್ಣುಮಗಳ ಮನದಾಳದ ಇಂಗಿತವನ್ನು ವ್ಯಕ್ತಪಡಿಸಿ ಅವಳ ಪ್ರತಿರೋಧದ ಹಿಂದನ ತತ್ವವನ್ನು ಹಿಡಿದಿವೆ.

ಯಜಮಾನರೇ ಯಜಮಾನ
ಎಂಥ ಮಾತು ಹೇಳ್ತಾ ಇದ್ದೀರಿ ಯಜಮಾನ
ಏಕಾಂತವಾಗಿ ನನ್ನ ಭಾಷೆ ಕೇಳ್ತಾ ಇದ್ದೀರಲ್ಲ
ಕಳನಿಲ್ಲ ಗಳವರಿಗೆ ಒಳಗಾಗನಿಲ್ಲ
ಪರಪುರುಷರ  ಕಣ್ಣೆತ್ತು ನೋಡ್ನಿಲ್ಲ
ಯಜಮಾನರೇ ನಾನು ಭಾಷೆ ಕೊಡಬೇಕಾ ನಿಮಗೆ?
ಅಯ್ಯ ನನ್ನಲ್ಲಿ ತಪ್ಪ ತೋರಯ್ಯ
ನೀನು ಆಮೇಲೆ ಭಾಷೆ ಕೇಳಯ್ಯ

ಈ ರೀತಿ ಸಂಕಮ್ಮ ತನ್ನ ಗಂಡನನ್ನು ಪ್ರಶ್ನಿಸುವ ದಿಟ್ಟತನ ತೋರುತ್ತಾಳೆ. ಪುರುಷ ಅಧೀರತೆ ಪಿತೃಪ್ರಧಾನ ವ್ಯವಸ್ಥೆಯ ಮೇಲಾಟ ತಂತ್ರಗಳಿಂದಲೇ ಗಟ್ಟಿ ತನವನ್ನು ಹೊಂದಿದಂತೆ ಕಂಡುಬರುತ್ತಾಳೆ. ಬದುಕೆಂಬುದು ಹೋರಾಟವೆಂಬಂತೆ ತನ್ನ ಇಡೀ ಬದುಕಿನುದ್ದಕ್ಕೂ ಸೋಲಿಸಲು ಮುಂದಾಗುವ ಹುನ್ನಾರುಗಳಿಗೆ ಧೃತಿಗೆಡದೆ ಧೈರ್ಯವಾಗಿ ಪ್ರತಿಕ್ರಿಯಿಸಿದ್ದಾಳೆ. ಸ್ತ್ರೀಯರು ತಮ್ಮ ಅಸ್ತಿತ್ವದಲ್ಲೇ ಸ್ವಾಭಿಮಾನ ಹಾಗೂ ಸ್ವಾಯತ್ತತೆಯನ್ನು ಉಳ್ಳವರಾಗಿ ಪ್ರಭಾವ ಬೀರಬಲ್ಲ ಶಕ್ತಿ ಹೊಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಗಂಡನಿಗೆ ತಿಳುವಳಿಕೆ ಮೂಡಿಸಲು ಯತ್ನಿಸುವ ಸಂಕಮ್ಮನ ದನಿಯಲ್ಲಿ ಪರಿಪೂರ್ಣವಾದ ಪ್ರತಿರೋಧದ ಅಭಿವ್ಯಕ್ತಿಯು ಬಹು ಮಾರ್ಮಿಕವಾಗಿ ಒಡಮೂಡಿದೆ.

"ನನ್ನ ಬಂಜೆ ಕೈಯಿನ ಭಾಷೆ ಬೇಡ್ವೋ ಸುಮ್ಮನೆ ಹೋಗೋ ಯಜಮಾನ"  ಎಂದಿರುವಲ್ಲಿ ಕಣ್ಣೀರು ತರಿಸುವ ಹೆಣ್ಣಿನ ಬಂಜೆತನದ ಬೇಗೆಯ ಅಳಲಿದೆ. ಸಂಕಮ್ಮನ ಬಂಜೆತನದ ಕಾರಣವನ್ನು ತನ್ನ ಪತ್ನಿಯ ಮೇಲೆ ಹೊರಿಸಿ ತಾನು ನುಣುಚಿಕೊಂಡು ಬಿಡುವ ಗಂಡಿನಲ್ಲಾಗಲೀ, ಸುತ್ತಲ ಸ್ತ್ರೀ ಸಮುದಾಯದಲ್ಲಾಗಲಿ ಸ್ವಲ್ಪವೂ

ISBN – 978-93-5526-247-9

ಕರುಣೆಯಿಲ್ಲ. ಪುರುಷ ಯಜಮಾನಿಕೆಯನ್ನು ಪೋಷಿಸುವಂತೆ ಇಡೀ ಸಮಾಜದ ಎಲ್ಲ ಹಿರಿಯ ಕಿರಿಯರು ಬಂಧುಬಳಗ ಗೆಳತಿಯರು ಸಂಕಮ್ಮನನ್ನು ನಿಕೃಷ್ಟವಾಗಿಕಾಣುವರು. ಇಡೀ ಸಮಾಜವೇ ಹೆಣ್ಣಾಗಿ ಹುಟ್ಟಿದ ಮೇಲೆ ಗರತಿಯೆನಿಸಿ ತಾಯಾಗಬೇಕು, ಹೆರದಿದ್ದರೆ ಮುಕ್ತಿ ಸಿಗದು, ಅವಳ ಬದುಕಿಗೆ ಅರ್ಥವಾಗಲಿ ಬೆಲೆಯಾಗಲಿ ದಕ್ಕದು ಎಂದು ಕ್ರೌರ್ಯವನ್ನು ಮೆರೆಯುತ್ತದೆ. ಹೀಗೆ ಸಮಾಜ ಸ್ತ್ರೀಯ ಮೇಲೆ ತಪ್ಪು ಹೊರಿಸಲು ಸದಾಃ ಮುಂದಾಗುವುದರ ವಿಪುಲ ದರ್ಶನವಿದೆ.

ಸಂಕಮ್ಮನ ಸಾಲಿನಲ್ಲಿ ಮಹಿಳೆಯರ ಮೇಲೆ ಹೇರಲಾಗುವ ಪಾವಿತ್ರತೆಯ ಅನಾವರಣವಿದೆ. ಪ್ರಶ್ನೆಗಳಿದ್ದರೂ ಅಸಹಾಯಕತೆಯಿಂದ ಪುರುಷಅಧಿಪತ್ಯವನ್ನು ಒಪ್ಪಿಕೊಂಡಂತೆ ತೋರುತ್ತದೆ. ಬಂಜೆತನದ ನೆವವೊಡ್ಡಿ ಅಪಮಾನಿಸುವ ಅನುಭವಗಳನ್ನು ದಾಖಲಿಸುತ್ತಲೇ ಮಾದೇಶ್ವರನನ್ನು ನಂಬಿ ಬದುಕುವರಾರು ಹಾಳಾಗರೆಂಬ ದೈವದ ಬಗೆಗಿನ ನಂಬಿಕೆ ಹಾಗು ಭರವಸೆಗಳನ್ನು ತಳೆಯಲಾಗಿದೆ. ಸಂಕಮ್ಮ ನೊಂದರು ತಾನು ದಿಟ್ಟತನದಿಂದ ಸಮಾಜದ ಕ್ರೌರ್ಯವನ್ನು ಅವೈಜ್ಞಾನಿಕ ನಂಬಿಕೆಗಳನ್ನು ಅಲ್ಲಗಳೆದಿರುವುದು ವಿಶೇಷವಾಗಿ ಮೂಡಿಬಂದಿದೆ. ಪತ್ನಿಯನ್ನೇ ಶಂಕಿಸುವ ಪತಿ ನೀಲೇಗೌಡನ ಎಲ್ಲ ಪ್ರಶ್ನೆಗಳಿಗೂ ಸಂಕಮ್ಮ ಅವಮಾನದ ಸುಳಿಯಲ್ಲಿ ಸಿಲುಕಿಯೂ ಸತ್ಯಸಂಗತಿಯನ್ನು ಹಾಗು ದೈವದ ಮಹಿಮೆಯನ್ನು ಮನಗಾಣಿಸುವ ದೃಢನಿರ್ಧಾರವನ್ನು ಮಾಡಿದ್ದ ವಿಚಾರವಂತೆಯಾಗಿದ್ದಾಳೆ. ತನ್ನ ತಪ್ಪಿಲ್ಲದಿರುವಾಗ ಭಾಷೆ ನೀಡಬೇಕಾದ ಯಾವುದೇ ಪ್ರಮೇಯ ತನಗಿಲ್ಲವೆಂದು ಇಡೀ ವ್ಯವಸ್ಥೆಯನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ.

ನೀನು ಕಟ್ಟಿದ ತೆರುವ ತಕ್ಕಯ್ಯ
ನನ್ನ ಹಟ್ಟಿಂದಾಚೆ ಕಳುವಯ್ಯ
ನಿನ್ನದಾರ್ಯ ನೀ ನೋಡಯ್ಯ
ನನ್ನ ದಾರಿಯ ನಾನು ನೋಡ್ತೀನಿ
ನಾನು ಬಲಗೈ ಮುಟ್ಟಿ ಭಾಷೆಯ
ಕೊಡುವಂಥ ಮಗಳಲ್ಲ ಹೋಗೋ ಯಜಮಾನ

ಸಹನೆ ಮಿತಿಮೀರಿದಾಗ ವಿನಾಕಾರಣ ಮಾಡುವ ಆಪಾದನೆಯನ್ನು ಸಹಿಸದ ಸಂಕಮ್ಮ ತನ್ನ ದಾರಿಯನ್ನು ತಾನು ನೋಡಿಕೊಳ್ಳುವುದು ಉಚಿತವೆಂದು ಹೇಳುವಳು. ಹೀಗೆ ಆಧುನಿಕ ಚಿಂತನೆಂಯು ಎಲ್ಲರಲ್ಲಿ, ಎಲ್ಲಕಾಲದಲ್ಲೂ ಸ್ಥಾಯಿಯಾಗಿರುವುದನ್ನು ಗುರುತಿಸಬಹುದು. ಹೀಗೆ ಸಂಕಮ್ಮನ ಸಾಲು ಕಟ್ಟುಪಾಡಿನಿಂದ ಬಂಧಿಸುವ ಎಲ್ಲ ಪ್ರಯತ್ನವನ್ನು ಹೆಣ್ಣು ಮನಸ್ಸು ಮಾಡಿದರೆ ಮೀರಿ ತನ್ನ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳಬಲ್ಲ ಸಾಮರ್ಥ್ಯವುಳ್ಳವಳು ಎಂಬುದನ್ನು ಸ್ಪಷ್ಟೀಕರಿಸಿದೆ. ಈ ಎಲ್ಲ ಕಾರಣಗಳಿಂದ ಮಾದೇಶ್ವರ ಕಾವ್ಯವು ಮಹತ್ವವು ಪ್ರಸ್ತುತವೂ ಆಗಿದೆ. ಇಂದಿನ ಜಾಗತಿಕ ವಿದ್ಯಾಮಾನದಲ್ಲಿಯೂ ಹೆಣ್ಣನ್ನು ಅವಜ್ಞೆಯಿಂದ ಹಿಂದಿಕ್ಕಲು ಯತ್ನಿಸುತ್ತಿರುವ ಸಾಮಾಜಿಕ ಸಂದರ್ಭಕ್ಕೆ ಸಂಕಮ್ಮನಸಾಲು ಸ್ತ್ರೀಸಂವೇದನೆಯಲ್ಲಿನ ಪ್ರತಿರೋಧವನ್ನು ಮನಗಾಣಿಸಿ ಚಿಂತನೆಗೆ ಪ್ರೇರೇಪಿಸುತ್ತದೆ.

***

ISBN – 978-93-5526-247-9

# 35.ಜಾನಪದ ಕಾವ್ಯದೊಳಗಿನ ಮಹಿಳೆ

ಮಿಲನ್ ಎಂ. ಹೆಚ್

ಜಾನಪದ ನೆಲ ಸಂಸ್ಕೃತಿಯ ತಿರುಳು. ಈ ಮೂಲವನ್ನು ಹುಡುಕಿದಂತೆಲ್ಲ ಆಲದ ಬೇರಿನ ತುದಿಯನ್ನು ಅರಸುವಂತೆ ಅಲ್ಲಲ್ಲಿ ಬಿದ್ದ ಬಿಳಲು ಸಹ ಮೂಲ ಬೇರಿನಂತೆ ಆಳದ ಸಂಸ್ಕೃತಿಯನ್ನೇ ತೋರುತ್ತದೆ. ಶಿಷ್ಟ ಹೆದ್ದಾರಿಯ ಬೃಹತ್ ಕಾಲು ಹಾದಿಯ ನಾಗರೀಕತೆ(ನಾಗರೀಕತೆ ಎಂಬ ಪದವನ್ನು ಜನಪದದೊಳಗಿನ ರೂಢಿ, ಸಂಪ್ರದಾಯದ ಹೆಸರಿಗೆ ಸಂವಾದಿಯಾಗಿ ಬಳಸುತ್ತಿದ್ದೇನೆ.) ಕೃತಕತೆ ಕಾಣದ ಸಾಮಾಜಿಕ ರಚನೆ, ಧರ್ಮ ಗ್ರಂಥಗಳು ಮನುಷ್ಯ ಹಾದಿಗೆ ನೀತಿಗಳೇಗೋ ಜಾನಪದದಲ್ಲಿನ ಮಾತು, ಹಾಡುಗಬ್ಬವೂ ಹಾಗೆ ಇವತ್ತಿನ ವಿಮರ್ಶೆ, ವೈಚಾರಿಕತೆಯ ಮೊದಲ ಹಂತವನ್ನು ಜನಪದದ ಮಾತಿನಲ್ಲಿ ಬಂದೋಗುವ ರೂಪಕ, ಅಲಂಕಾರಗಳು ಇದಕ್ಕೆ ಸಾಕ್ಷಿ.

ಇವತ್ತಿನ ಪದಗಳಂತೆ(ಕಾವ್ಯ) ನಿಗೂಢಾರ್ಥಗಳನ್ನು ಹುಡುಕಿ ಹೆಕ್ಕುವ ಅನಿವಾರ್ಯತೆ ಇಲ್ಲ, ಸರಳ ಹಾಗೂ ಸತ್ವಯುತ ಪದಗಳ ಲೌಖಿಕ ಮಾತಿನ ಕಟು ಬದ್ಧಲಯ. ಇಂತಹ ನೆಲ ಸಂಸ್ಕೃತಿಯನ್ನು ಕೆಳ ಸಂಸ್ಕೃತಿ ಎಂಬಂತೆ ಪರಿಭಾವಿಸಿದ್ದು ದುರಂತದ ಮೊದಲ ಹೆಜ್ಜೆ. ಆವೊತ್ತಿನ ಪಂಡಿತರು ಸಹ ಇದನ್ನು ಕಡೆಗಣಿಸಿದ ಪರಿ ಈ ರೀತಿಯದ್ದು..

ಪಂಡಿತರುಂ, ವಿವಿಧ ಕಳಾ ಮಂಢಿತರುಂ
ಕೇಳತಕ್ಕ ಕೃತಿಯಂ
ಕ್ಷಿತಿಯೊಳ್ ಕಂಡರದ ಕೇಳ್ವಡೆ
ಗೊರವರ ದುಂಡುಚಿಯೇ
ಬೀದಿವರೆಯೆ? ಬೀರನ ಕಥೆಯೆ?[1]

ಹೀಗೆ ಮಧುರ ಕವಿ ಹೇಳುವುದನ್ನು ಕಾಣಬಹುದು. ಅಂದಿನ ಆಶ್ರಿತ ಪಂಡಿತ, ವಿದ್ವಾಂಸರು ಜನಪದ ಸಾಹಿತ್ಯದ ಬಗ್ಗೆ ಹೊಂದಿದ್ದ ನಿಲುವುಗಳು ಕಂಡುಬಂದಿದೆ. ಆದರೆ ಇದು ಮಣ್ಣಿನ ಹುಂಡಿಯಲ್ಲಿ ಕಾಪಿಟ್ಟುಕೊಂಡ ಚಿನ್ನ. ಅಕ್ಷರಸ್ಥ ವರ್ಗ ಹೊಗಳು ಭಟ್ಟರಾಗಿ, ಲಾಭದಾಯಕ ಹುದ್ದೆಗಳನ್ನು ಕಂಡ ಸಂದರ್ಭದಲ್ಲಿ ಯಾವುದೇ ಆಸೆ ಆಕಾಂಕ್ಷೆಗಳನ್ನು ಅಂಟಿಸಿಕೊಳ್ಳದೆ ಇಂತಹ ಸಮೃದ್ಧ ಜಾನಪದ ಕಲೆಯನ್ನು ತಲೆಮಾರುಗಳಿಗೆ ಬಿಟ್ಟು ಹೋದ ಸಂಪತ್ತು.

ಜನಪದ ಸಾಹಿತ್ಯದ ಕಲಾತ್ಮಕ ಮೌಲ್ಯಗಳಿಗೆ ಮಹಿಳೆ ಕೊಟ್ಟಂತ ಕೊಡುಗೆ ಬಹಳ ಅಪಾರವಾದದ್ದು. ಇಂತಹ ಜಾನಪದ ಸಾಹಿತ್ಯದೊಳಗೆ ಮಹಿಳೆ ಎನ್ನುವ ಪದಬಂಧ ಅನಿವಾರ್ಯವೂ, ಅವಶ್ಯಕವೂ ಆಗಿದೆ. ಇವತ್ತಿನ ಶಿಷ್ಟ ಸಾಹಿತ್ಯದೊಳಗೆ ನೋಡುವ ಮಹಿಳೆ ತನ್ನ ಕಟ್ಟು ಬಂಧಗಳನ್ನು ಕಿತ್ತೊಗೆದು ಸಮಾನ ಬದುಕಿನ ಅವಣಿಕೆ ಕಾಣುತ್ತಿದ್ದರೆ, ಜನಪದ ಸಾಹಿತ್ಯ ತನ್ನೊಳಗೆ ಎರಡು ಧ್ವನಿಗಳನ್ನು ಸಮಾನವಾಗಿಯೇ ಹೊರಡಿಸುತ್ತಾ ತನ್ನೊಳಗಿನ ಹಾಡು ಪಾಡುಗಳನ್ನು ಹಂಚಿ ತಮ್ಮದೇ ಹೊಸ ಸೃಷ್ಟಿಯನ್ನು ಕಾಪಾಡಿಕೊಂಡಿದೆ. ಪ್ರತಿಭಾರಿ ಪರಂಪರೆಯೊಂದಿಗೆ ಮುಖಾಮುಖಿಯಾಗುವ ಮಹಿಳೆ ಯಜಮಾನಿಕೆ ಸಂಸ್ಕೃತಿ ಆಚೆ ಇದ್ದಾಳೆ. ಇದರೊಂದಿಗೆ ಬಹುಪಾಲು ಪದಗಳು ಮಹಿಳೆಯರ ಪ್ರತಿಭೆಯ ಸ್ವತ್ತಾಗಿಯೇ ನೋಡಬಹುದಾಗಿದೆ

ಹೆಣ್ಣಿದ್ದ ಮನೆಗೆ ಕನ್ನಡಿಯಾತಕ್ಕೆ
ಹೆಣ್ಣು ಸಣ್ಣವಳು ಒಳಗಿರಲು ನನಮಗಳು
ಕನ್ನಡಿಯಾಂಗ ಹೊಳೆಯುವಳು.

ಹೀಗೆ ಹೆಣ್ಣನ್ನು ಪರಿಭಾವಿಸುವ ನೆಲೆ ಜಾನಪದಗಳಲ್ಲಿ ಮಾತ್ರ ಸಿಗುತ್ತದೆ. ಇಂತಹವು ವೈದಿಕ ಸಂಸ್ಕೃತಿಯಿಂದ ಭಿನ್ನತೆ ಮತ್ತು ಸನಾತನ ಪರಂಪರೆಯನ್ನು ದೂಡಿದಂತ ಕುರುಹುಗಳನ್ನು ನೀಡುತ್ತವೆ. ಮಹಿಳೆಯನ್ನು ಸಾಮಾಜಿಕ, ಧಾರ್ಮಿಕ, ಸಾಂಸಾರಿಕ ಜೀವನಗಳಲ್ಲಿ ಅವಳ ಅನಂತ ಪಾಲುದಾರಿಕೆ ಜನಪದದಲ್ಲಿ ನಾವು ಸ್ಮರಿಸಬಹುದು. ಮಹಿಳೆ ಹೇರಳ ಸಂಬಂಧಗಳ ಸೂತ್ರದ ಬಿಂದು. ತವರು, ಗಂಡನ ಮನೆ ಅದರೊಳಗಿನ ಸಂಬಂಧಗಳ ತುಲನಾತ್ಮಕ ಜವಾಬ್ದಾರಿಯನ್ನು

ISBN – 978-93-5526-247-9

ತೊಡಿಸಲಾಗಿದೆ. ಇದರೊಂದಿಗೆ ತಾನು ಒಂದೊಂದು ಜಾಗದಲ್ಲಿ ವಹಿಸುವ ಪಾತ್ರಗಳಲ್ಲಿ ಒಂದೊಂದು ಆಕೃತಿಯನ್ನು ಪಡೆಯುತ್ತಾಳೆ. ಸ್ವ ಪ್ರತಿಭೆಯನ್ನು ಹೊಂದುತ್ತಾ ಹೋಗುತ್ತಾಳೆ.

ಸಂಪ್ರದಾಯ ತಾಯ್ತನದ ಪರಿಭಾಷೆಯನ್ನು ಪ್ರತಿಭಾರಿ ಹೆಣ್ಣಿನ ಹುಟ್ಟಿನೊಂದಿಗೆ ತೊಡಿಸುತ್ತೇವೆ. ಈ ತಾಯ್ತನವನ್ನು ಅನುಭವಿಸುವಾಗ ತಾನು ಆಡಿಬೆಳೆದ ಮನೆ ಮತ್ತು ತಾಯಿಯನ್ನು

'ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾದಿ
ನಾ ಹುಟ್ಟಿ ಮನೆಗೆ ಎರವಾದೆ ಹಡೆದವ್ವ
ನೀ ಕೊಟ್ಟ ಮನೆಗೆ ಹೆಸರಾದೆ'

ತಾನು ಹುಟ್ಟಿದ ಮನೆಗೆ ಭಾರವಾದರೂ, ಕೊಟ್ಟ ಮನೆಗೆ ತಾನು ಹೆಸರಾಗಿದ್ದೇನೆ. ಈ ಹೆಸರಿಗೆ ನೀ ಕಲಿಸಿಕೊಟ್ಟ ಸಂಸ್ಕೃತಿ ಇಂತಹ ಸಂಸ್ಕೃತವಂತ ನೆರಳಿಗೆ ತಾಯಿಯಾದವಳು ಹೊಂಗೆಯ ಮರದಂತೆ ನಿಂತಿದ್ದಾಳೆ ನೆನೆಯುವುದುನ್ನು ಕಾಣಬಹುದಾಗಿದೆ.

ಇನ್ನೊಂದು ಬಗೆಯಲ್ಲಿ 'ಗೌರಿಯ ಮದುವೆ' ಎಂಬ ಕಥನಕವನದಲ್ಲಿ ವ್ಯಕ್ತವಾಗುವ ಸಂಭಾಷಣೆ, ಶಿವನನ್ನು ಬಯಸಿದ ಗೌರಿಗೆ ಅವಳ ತಂದೆ ತಾಯಿ ಹೇಳುತ್ತಾರೆ :

ಆಕಾಶೆಂಬೋದು ಇಲ್ಲಿಗೆ ಕಾಣೋದಿಲ್ಲ
ನರರಿಲ್ಲ ನರರ ಸುಳಿವಿಲ್ಲ ಆ ಕೋಟ್ಗೆ
ಮಗಳೆ ಸಿರಿಗೌರಿ ಮನಸಾದೆ

ಇಂತಹ ಮಾತುಗಳಿಗೆ ಪ್ರತ್ಯುತ್ತರವಾಗಿ ಗೌರಿ :

ಆಕಾಶ ಎಂಬೋದು ಇಲ್ಲಿಗೂ ಕಾಣತ್ತೈತೆ
ನರರುಂಡು ನರರ ಸುಳಿವುಂಟು ತಾಯವ್ವ
ಹ್ಯಾಗಿದ್ರೂ ನಮ್ಮ ಕೊಡಬೇಕು[2]

ಇಂತಹ ಮಾತುಗಳು ಜನಪದ ಕಾವ್ಯಗಳಲ್ಲಿ ಮಾತ್ರ ಕಾಣಲು ಸಾಧ್ಯ. ಇಲ್ಲಿ ಹೆಣ್ಣಿನ ಉತ್ತರಗಳು ಅವಳ ಜೀವನದ ಬದುಕನ್ನ ರೂಪಿಸಿಕೊಳ್ಳುವಷ್ಟು ಸ್ವತಂತ್ರ ಮತ್ತು ಆಯ್ಕೆಗಳಿಗೆ ನೀಡಿದಂತಹ ಪ್ರಶಸ್ತ್ಯದ ಬಗ್ಗೆ ಮಾತಾಡುತ್ತದೆ. ಇನ್ನೊಂದು ಬಗೆಯಲ್ಲಿ ಜನಪದರ ಮೂಲ ಆರಾಧ್ಯ ದೈವವೂ 'ಶಿವ'ನೇ ಆಗಿದ್ದಾನೆ. ಇಲ್ಲಿ ಹೆಣ್ಣನ್ನು ಚಿತ್ರಿಸುವ ರೀತಿಯು ಬಹು ಪ್ರಶಂಸನೀಯ ಎಂದೇ ಹೇಳಬಹುದು, ಒಂದು ಕಡೆ ಗೌರಿಯನ್ನು ತನ್ನ ತಲೆಯ ಮೇಲೆ ಕೂರಿಸಿದ್ದರೆ, ಪಾರ್ವತಿಯನ್ನು ಅರ್ಧ ದೇಹಿಯಾಗಿ ಕಾಣುತ್ತಾನೆ. ಇಂತಹ ಸ್ವತಂತ್ರವನ್ನು ಜನಪದರಲ್ಲಿ ಮಾತ್ರ ಕಾಣಸಿಗುತ್ತವೆ. ದೈವೀ ಪರಿಕಲ್ಪನೆಯಲ್ಲಿ ಈ ರೀತಿಯಾದರೆ ಕೌಟುಂಬಿಕ ಭಾಗದಲ್ಲಿ ಅತ್ತೆ ತನ್ನ ಮನೆ ಮತ್ತು ಮಗನಿಗೆ ತಂದ ಹೆಣ್ಣನ್ನು ಕುರಿತು "ಸೊಸಿ ಬಂದು ಮಗನ ಕಸಗೊಂಡು ಬಾಳ್ವಾಗ ಮಗಲೀಗಿ ಬಾಯ ತಗದಾಳ" ಎಂದು ಉದ್ಗರಿಸುತ್ತಾಳೆ, ಇನ್ನೊಂದು ಕಡೆ

"ಹೋಗಿ ಬಾರೆ ನೀನು ಹೊನ್ನೋಲೆ ಕಿವಿಯೋಳೆ
ಕೆನ್ನೇಲಿ ಸೂರ್ಯ ಹೊಳೆವವಳೆ ಸೊಸೆಮುದ್ದೆ
ತೌರು ಒಳ್ಳೇದೆಂದು ಇರಬೇಡ"

ಎಂದು ವರ್ಣಿಸಿ ಸೊಸೆ ಇಲ್ಲದಿರುವಿಕೆಯನ್ನು ಮತ್ತೆ ಬರುವಿಕೆಯನ್ನು ಆಶಿಸುತ್ತಾ ಹೇಳುವುದನ್ನು ಕಾಣುತ್ತೇವೆ.

ಹೆಣ್ಣು ತವರು ಬಿಟ್ಟು ಗಂಡನ ಮನಗೆ ಹೋದ ಸಂದರ್ಭದಲ್ಲಿ ಎಲ್ಲಿ ಅವಳ ಹಾವ ಭಾವಗಳನ್ನು ಕಂಡ ಆ ಮನೆಯ ಮಗಳು ತನ್ನ ಅಣ್ಣನಿಗೆ ಹೇಳುವ ಕಿವಿ ಮಾತು :

ಕೆಂಪು ಹೆಂಡಿತಿಯೆಂದು ಸಂತೋಷಪಡಬ್ಯಾಡ
ಅತ್ತಿಯ ಹಣ್ಣ ಅತಿಕೆಂಪು ಇದ್ದರು
ಒಡೆದು ನೋಡಿದರೆ ಹುಳ ಭಾಳ

ಚೆಲುವ ಚೆಲುವಿಯಂತ ಅತಿಬಾಯಿ ಬಿಡಬ್ಯಾಡ
ಚೆಲುವಿದ್ದರೇನು ಗುಣವಿಲ್ಲ ಕೊಳೆನೀರ
ತಿಳಿಯಿದ್ದರೇನು ರುಚಿಯಿಲ್ಲ

ಅತ್ತಿಯ ಹಣ್ಣಿನ ಒಳಗುಣವನ್ನು ಸೊಸೆಯಾಗಿ ಬಂದ ಹೆಣ್ಣಿನ ಆಂತರ್ಯಕ್ಕೆ ಹೋಲಿಸಿ ವಿಶ್ಲೇಷಿಸುವುದು ಅಲ್ಲಿನ ಕೌಟುಂಬಿಕ ಸಮಾಜವೊಂದರ ಸ್ಥಿತಿಯನ್ನು ಕಾಣಬಹುದು. ಗರ್ಭಿಣಿಯಾದ ಹೆಣ್ಣಿನ ತುಂಬು ತನವನ್ನು ಹೆಣ್ಣಿನ ಆಂತರ್ಯವನ್ನು ವರ್ಣಿಸುವ

"ಬಸವನ ಹೆಂಡತಿ ಹಸುಮಗಳು ನೀಲಮ್ಮ
ಬಸರಾದದ್ವ್ಯಾಂಗ ನಡೆದಾಳ ಗೋದಿಯ
ಸಸಿಯಾಗ ನವಿಲು ನಡೆದ್ಹಾಂಗ"

ಹೆಣ್ಣಿನೊಂದಿಗಿನ ಬೋಗವೇ ಪ್ರಧಾನವಾಗಿದ್ದ ಪುರುಷಾವಸ್ಥೆಯಲ್ಲಿ ಹೆಣ್ಣಿನ ತಾಯ್ತನದ ಸುಖಗಳನ್ನು ಹಾಡಿ ಹೊಗಳಿದ್ದಾರೆ. ಹೆಣ್ಣಿನ ಜಗುಪ್ಸೆಯ ತೀವ್ರತೆ ಪರಿಣಾಮಕಾರಿಯಾಗಿ ವ್ಯಕ್ತವಾಗುವ ರೀತಿಯಲ್ಲಿ ಅಭಿವ್ಯಕ್ತಿ ನೆಲೆಯಾದದ್ದನ್ನು ಕಾಣುತ್ತೇವೆ. ಈ ಮೌಖಿಕ ಪರಂಪರೆಯಲ್ಲಿ ಮಾತೃಪ್ರಧಾನವಾದ ಸ್ತ್ರೀ ಪ್ರತಿಮೆಗಳು ನಿಲ್ಲುತ್ತವೆ.

ಇನ್ನೊಂದು ತೆರನಲ್ಲಿ ಹೆಣ್ಣು ಸಾಧಿಸಬೇಕಾದ ಬಹುಮುಖ್ಯವಾದ ಮೌಲ್ಯಗಳಲ್ಲಿ ಪಾತಿವ್ರತ್ಯವೂ ಒಂದು. ಇದನ್ನು ಗುಪ್ತವಾಗಿಯೇ ಹೇರಲಾಗಿದೆ. ಈರೀತಿ ಸಾಧಿಸಿದ ಮಹಿಳೆಯರನ್ನು ದೈವಿಕತೆಯ ಭಾವನೆಯಿಂದಲೂ ಕಾಣುವ ಪರಿ ನೋಡಬಹುದು. ಮಾಸ್ತಿಗಲ್ಲಿನ ಉದಾಹರಣೆಗಳನ್ನು ಕಾರಂತರ 'ಸರಸಮ್ಮನ ಸಮಾಧಿ'ಯಂತಹ ಕಾದಂಬರಿಗಳಿಲ್ಲಿ ಕಾಣುತ್ತೇವೆ. ಊರಿನಲ್ಲಿ ಕಟ್ಟಿಸಿದ ಕೆರೆಗೆ ನೀರು ಬರದಿದ್ದಾಗ ಹೆಣ್ಣೊಬ್ಬಳನ್ನು ಅದಕ್ಕೆ ಬಲಿ ಕೊಡುವಂತಹ ಪ್ರಸಂಗಗಳನ್ನು 'ಕೆರೆಗೆ ಹಾರ'ದಂತಹ ಕಾವ್ಯಗಳಲ್ಲಿ ಕಾಣಬಹುದಾಗಿದೆ. ಮತ್ತೆ ಪ್ರವಾಹದ ಸಂದರ್ಭಗಳಲ್ಲಿ ಬಲಿಯಾಗುವ ಹೆಣ್ಣಿನ ಪ್ರಸಂಗಗಳನ್ನು ಕಾಣಸಿಗುತ್ತವೆ. ಇವರನ್ನು 'ಮಹಾಸತಿ'ಯರು ಎಂಬಂತೆ ಚಿತ್ರಿಸಲಾಗುತ್ತದೆ. ಮಲ್ಲಾಡದಲ್ಲಿ ಮಳೆಬಿದ್ದು ಮಲಪ್ರಭಾನದಿ ಒಡ್ಡೊಡೆದು ಹೊರಚೆಲ್ಲಿ ಊರು ಕೊಚ್ಚಿಹೋಗುವಾಗ "ಗರತಿಯಿದ್ದಾಕಿ ಹೊರ ಬೀಳ ; ಹೆಡೆದವ್ವ, ಹೊಳೆಯಳೆದು ಊರ ಉಳಿಸು" ಎಂದು ಬೀದಿಯಲ್ಲಿ ಸಾಗುವಾಗ ಇದರ ಅನಿವಾರ್ಯತೆ ಎದುರಾದಾಗ ಹಿಂದುಮುಂದು ನೋಡದೆ ಸಿದ್ದವಾಗುವ ಹೆಣ್ಣೊಬ್ಬಳ ಬದುಕನ್ನು "ಗರತಿ ಗಂಗವ್ವ' ಎಂಬ ಜಾನಪದ ಕಥೆಯಲ್ಲಿ ಕಾಣುತ್ತೇವೆ.[3]

ಪುರಾಣ, ಧರ್ಮಗ್ರಂಥಗಳಲ್ಲಿ ಸೀತೆ, ಸಾವಿತ್ರಿ, ದ್ರೌಪದಿಯಂತಹ ಮಹಿಳೆಯರು ತಮ್ಮ ಪಾತಿವ್ರತ್ಯ ಶಂಕೆಗೆ ಒಳಗಾಗಿ ಹಲವಾರು ರೀತಿಯ ಪರೀಕ್ಷೆಗೆ ಒಳಗಾಗಿ ದೇವತೆಗಳೆನಿಸಿದ್ದಾರೆ. ಆದರೆ ಜನಪದರ ಪೂಜ್ಯ ಸ್ತ್ರೀ ಮಾರಮ್ಮನ ಕಥೆ ಇದಕ್ಕೆ ಭಿನ್ನವಾಗಿದೆ. ಬ್ರಾಹ್ಮಣ ಕನ್ಯೆಯಾಗಿದ್ದ ಮಾರಮ್ಮನನ್ನು ಸಮಗಾರನೊಬ್ಬ ಮದುವೆಯಾಗುತ್ತಾನೆ. ನಂತರ ಇವನ ಕುಲದ ಸತ್ಯ ಸಂಗತಿ ತಿಳಿದ ಮಾರಮ್ಮ ತನ್ನ ಕುಲ ಹಾಳು ಮಾಡಿದ್ದಾನೆಂದು ಕತ್ತಿ ಹಿಡಿದು ಬೆನ್ನು ಹತ್ತುವಳು ಇದರಿಂದ ತಪ್ಪಿಸಿಕೊಳ್ಳಲು ಮಗ ಮತ್ತು ಗಂಡ ಇಬ್ಬರು, ಗಂಡ ಹೋಗಿ ಕೋಣದ ಮೈ ಸೇರುವನು, ಮಗ ಕುರಿಯ ಮೈ ಸೇರುವನು ಈ ಎರಡು ಪ್ರಾಣಿಗಳ ತಲೆ ಕತ್ತರಿಸಿ ಸೇಡು ತೀರಿಸಿಕೊಳ್ಳುವಳು. ಇದು ಜನಪದರಲ್ಲಿ ಹೆಣ್ಣು ದೇವತೆಗಳನ್ನು ಇಂದಿಗೂ ಜಾತ್ರೆ ನಡೆಸಿ ಬಲಿಕೊಡುವ ಪದ್ದತಿಗಳನ್ನು ರೂಢಿಸಿಕೊಂಡು ಬಂದಿದ್ದಾರೆ.

ISBN – 978-93-5526-247-9

ತುಳು ಮಹಾಕಾವ್ಯ ಸಿರಿ ಕಥೆಯಲ್ಲಿ ಗಂಡನನ್ನು ತಿರಸ್ಕರಿಸಿ ವಿಚ್ಛೇದಿಸುವ ಕಥನ ಬಹು ಅಪರೂಪದ ಕತೆಯನ್ನು ಇಲ್ಲಿ ಕಾಣುತ್ತೇವೆ. ಬಸರೂರು ಗುತ್ತಿನ ಕಾಂತುಪೂಂಜನೊಂದಿಗೆ ಸಿರಿಯ ಮದುವೆಯಾಗುತ್ತದೆ. ಸಿರಿಯ ಗರ್ಭಾವಸ್ಥೆಯಲ್ಲಿ ಗಂಡ ನೀಡಬೇಕಾದ 'ಬಯಕೆ ಸೀರೆ'ಯನ್ನು ಅವನ ಸೂಳೆ ಉಟ್ಟು ಮೈಲಿಗೆಯಾಗಿದೆ ತಾನು ಸ್ವೀಕರಿಸಲಾರೆ ಎಂದು ಸಾರ್ವಜನಿಕವಾಗಿ ಪ್ರತಿಭಟಿಸಿ ವಿಚ್ಛೇದನ ನೀಡಿ "ಕತ್ತಿನ ಕರಿಮಣಿ, ಮೂಗಿನ ಮೂಗುತಿ ಕಿತ್ತು ಅರಮನೆಯ ಕಂಬಕ್ಕೆ ಕಟ್ಟುತ್ತಾಳೆ. ಕೈಬಳೆಗಳನ್ನು ಒತ್ತಿಟ್ಟು ಒಡೆದು ಒಗೆಯುತ್ತಾಳೆ. ನಿಮ್ಮ ಹೆಗಲಿಗೆ ನೊಗ ಇರಿಸಿ ಕೊರಳಿಗೆ ನೇಗಿಲು ಕಟ್ಟಿ ಯಾವಾಗ ನನ್ನ ಕಾಲ ಬುಡಕಲ್ಗೆ ಬರುತ್ತೀರೊ, ಯಾವಾಗ ನಿಮಗೆ ಎರಡು ಎತ್ತಿಗೂ, ಒಂದು ಕಳಸೆ ಬಿತ್ತಿಗೂ ಕೊರತಡ ಬರುತ್ತದೋ ಅಂದಿಗೆ ನಾನು ನೀವೂ ಜತೆಯಾಗೋನ, ಅಲ್ಲಿಯವರೆಗೆ ನಿಮಗೆ 'ಬರ' ಹೇಳುತ್ತೇನೆ" ಇಲ್ಲಿ ಸಿರಿ ಹೇಳುವ ದಾಟಿ ರಾಮಾಯಣದ ಸ್ತ್ರೀಯ ಶೋಷಣೆಯ ಮುಖಕ್ಕೆ ಮುಸಿ ಬಳಿದು ಧಿಕ್ಕರಿಸುವ ಅಧಿಕಾರ ಮತ್ತು ಮುತ್ತೈದೆ ತನದ ಪರಿಕರಗಳನ್ನು ಕಳಚುವ ಕ್ರಮ ಪುರುಷ ಪ್ರಭುತ್ವಕ್ಕೆ ಬಿದ್ದ ಹೊಡೆತದಂತೆ ತೋರುತ್ತದೆ. ಇದು ಜನಪದ ಸಾಮಾನ್ಯರ ಮೇಲೆ ಬೀಳುವ ಪರಿಣಾಮದಂತೆ ತೋರುತ್ತದೆ.[4]

ಮಲೆಯ ಮಾದೇಶ್ವರ ಕಾವ್ಯದ ನೀಲಯ್ಯ ಮತ್ತು ಸಂಕಮ್ಮನ ಪ್ರಕರಣದಲ್ಲಿಯೂ ಸಹ ಪಾತಿವ್ರತ್ಯದ ಪ್ರಶ್ನೆ ಬಂದಾಗ ಸಂಕಮ್ಮ ತನ್ನ ಅಸ್ತಿತ್ವ ಮತ್ತು ಸ್ವಾತಂತ್ರವನ್ನು ಅಲ್ಲಗೆಳೆಯುವ ಪರಿಪಾಠದಂತೆ ಕಂಡು ಅದನ್ನ ಒಪ್ಪದೆ ತನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆಯದೇ ತನ್ನ ತ್ಯಜಿಸುವಂತೆ ಗಾಂಭೀರ್ಯವಾಗಿಯೇ ನುಡಿಯುತ್ತಾಳೆ.

ನೀನು ಕಟ್ಟಿದ ತೆರವ ತಕ್ಕಯ್ಯ
ನನ್ನ ಹಟ್ಟಿಂದಾಚೆ ಕಳುವಯ್ಯ
ನಿನ್ನ ದಾರಿಯ ನೀನು ನೋಡಯ್ಯ
ನನ್ನ ದಾರಿಯ ನಾನು ನೋಡ್ತೀನಿ
ನಾನು ಬಲಗೈಮುಟ್ಟಿ ಭಾಷೆ ಕೊಡುವಂತ
ಮಗಳಲ್ಲ, ಹೋಗೋ ಯಜಮಾನ

ಎಂದು ಸವಾಲೆಸೆಯುತ್ತಾಳೆ. ತನ್ನ ಆತ್ಮಗೌರವದ ಪ್ರಶ್ನೆ ಬಂದಾಗ ಎಂತಹ ಹೆಣ್ಣು ಸಹ ಸ್ತ್ರೀ ಧರ್ಮ ಪರಿಪಾಲಕಳಾಗುತ್ತಾಳೆ. ಪತಿಯನ್ನ ಪೂಜ್ಯ ಸ್ಥಾನದಲ್ಲಿಟ್ಟು ನೋಡಬೇಕೆನ್ನುವ ಸ್ತ್ರೀ ವಿರೋಧಿ ಧರ್ಮಕ್ಕೆ ಹೊಡೆಯುತ್ತಾಳೆ. ಮೇಲಿನ ಸಾಲುಗಳಲ್ಲಿ 'ಹೋಗೋ ಯಜಮಾನ' ಅನ್ನುವ ಶಬ್ದ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಪಿತೃಪ್ರಧಾನ ಮೌಲ್ಯ, ಆಚರಣೆಗಳಿಗೆ ಒಡೆತವಾಗುತ್ತದೆ. ಮದುವೆ ಸಂಪ್ರದಾಯದೊಳಗಿನ ಚೌಕಟ್ಟೇ ವಿನಃ ಮನದೊಳಗಿನ ಚೌಕಟೇನಲ್ಲ ಆದರಿಂದ ನಿರಾಕರಿಸುವ ಕ್ರಮ ಇಬ್ಬರಲ್ಲೂ ಸರಿಸಮಾನವಾಗಿಯೇ ಆತ್ಮತೃಪ್ತಿದಾಯಕವಾಗಿರಬೇಕು.

ನಂತರದಲ್ಲಿ ನೀಲಯ್ಯನ ಅನುಪಸ್ಥಿತಿಯಲ್ಲಿ ಮಾದಯ್ಯನಿಗೆ ಮಾರುಹೋದ ಸಂಕಮ್ಮ ಮಕ್ಕಳ ಫಲಾಪೇಕ್ಷೆಯನ್ನು ಮುಂದಿಡುತ್ತಾಳೆ.

"ಮಕ್ಕಳ ಫಲವನ್ನು ನೀವು ಕೊಟ್ರೆ ಸರಿ
ಇಲ್ಲದೆ ಹೋದ ಪಕ್ಷದಲ್ಲಿ
ನಿಮ್ಮ ಪಾದದ ಮ್ಯಾಲೆ ಬಿದ್ದು
ಪ್ರಾಣನಾದರೆ ಬುಡುತಿನಿ"[5]

ಇಲ್ಲಿ ನಾವು ಸಂಕಮ್ಮನ ಮುಕ್ತ ಅಪೇಕ್ಷೆಯನ್ನು ಕಾಣಬಹುದು ತಾನು ಬಯಸುವ ಗಂಡನಿಂದ ತನ್ನ ತಾಯ್ತನದ ಆಕಾಂಕ್ಷೆ ಸ್ವತಂತ್ರತೆಯನ್ನು ಇಲ್ಲಿ ಪ್ರತಿಬಿಂಬಿಸಲಾಗುವುದು. ಸತಿ ಧರ್ಮವನ್ನು ಹೊಡೆಯದೆ, ಹಾದರದ ಪರಿಕಲ್ಪನೆಯನ್ನೂ ಸೃಷ್ಟಸದೇ ತಮ್ಮ ಆತ್ಮ ತೃಪ್ತಿಯನ್ನು ಬಯಸುವ ಕ್ರಮ ಸೂಕ್ಷ್ಮ ಎನಿಸುತ್ತದೆ.

ಈ ರೀತಿಯ ಅನುಭವ ಕಥನ ಕಾವ್ಯಗಳು, ಗ್ರಾಮೀಣ ಬದುಕಿನ ತಾಜ ಅನುಭವವನ್ನು ಕಟ್ಟಿಕೊಡುವ ಹೆಣ್ಣು ಬದುಕಿನ ಬವಣೆಗಳನು ಪದಗಳಾಗಿ ಕಟ್ಟಿ ಹಾಡುತ್ತಾಳೆ. ಗಂಡು ಶೌರ್ಯವನ್ನು ಪ್ರತಿಬಿಂಬಿಸುವ ಕಲೆಗಳಲ್ಲಿ ಆಟೋಟಗಳಲ್ಲಿ

ISBN – 978-93-5526-247-9

ಗಮನ ಹರಿಸಿದ್ದರೆ ಬಹುಪಾಲು ಹಾಡುಗಳನ್ನು ತಾಯಿ, ತವರು, ದೇವರು, ಮಗು, ತೊಟ್ಟಿಲ ಹಾಡು, ಭೂಮಿ, ಮದುವೆ, ಪ್ರೇಮ ಕಾಮ, ಆಚಾರ ಸಂಪ್ರದಾಯ ಕುರಿತಂತೆ ಅಕ್ಷರಸ್ಥರು ನಾಚುವಂತೆ ಹಾಡಿದ್ದಾಳೆ.

**ಅಡಿಟಿಪ್ಪಣಿ :**

1) ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ : ಕಾಳೇಗೌಡ ನಾಗವಾರ
2) ಜನಪದ ಸರಸ್ವತಿ, ಸಿಪಿಕೆ ಪು : 16,17
3) ಜನಪದ ಸರಸ್ವತಿ, ಒಂದು ಅಪೂರ್ವ ಕಥನ ಗೀತೆ 'ಗರತಿ ಗಂಗಮ್ಮ'
4) ಮಹಿಳಾ ಸಂಕಥನ, ಜನಪದ ಮಹಾಕಾವ್ಯಗಳು ಮತ್ತು ಮಹಿಳಾ ಸಂವೇದನೆ
5) ಮಹಿಳಾ ಸಂಕಥನ, ಜನಪದ ಮಹಾಕಾವ್ಯಗಳು ಮತ್ತು ಮಹಿಳಾ ಸಂವೇದನೆ

**ಪರಮರ್ಶಕ ಕೃತಿ :**

1) ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ : ಕಾಳೇಗೌಡ ನಾಗವಾರ
2) ಜನಪದ ಸರಸ್ವತಿ, ಸಿಪಿಕೆ
3) ಮಹಿಳಾ ಸಂಕಥನ : ಡಾ. ಗಾಯತ್ರೀ ನಾವಡ

***

# 36.ಮಲೆಮಹದೇಶ್ವರ ಕಾವ್ಯದ ಸಂಕಮ್ಮನ ಸಾಲು

ರವಿ. ಎನ್

ಜನಪದ ಕಾವ್ಯ ಅಕ್ಷರದ ಸಹಾಯವಿಲ್ಲದೆ ಅನಕ್ಷರಸ್ಥ ಜನ ಸಮುದಾಯದಲ್ಲಿ ಬೆಳೆದು ಬಂದದ್ದು. ಅನಾದಿ ಕಾಲದ ಭಾಷೆಯೇ ಕಾವ್ಯದ ರೂಪದಲ್ಲಿರುತ್ತಿತ್ತು. ಮನುಷ್ಯನಲ್ಲಿ ಪ್ರತಿಭೆ ಮತ್ತು ವೈಚಾರಿಕ ದೃಷ್ಟಿ ಬೆಳೆದಂತೆ ಭಾಷೆಯನ್ನು ಇನ್ನಷ್ಟು ದುಡಿಸಿಕೊಂಡು ಕಾವ್ಯ ಕಟ್ಟಲಾಯಿತು. ಕನ್ನಡ ಜಾನಪದ ಕ್ಷೇತ್ರ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ವೈಜ್ಞಾನಿಕವಾಗಿ ಸಂಗ್ರಹಿಸಿ ಸಂಪಾದಿಸಿರುವ ಮೊದಲ ಜನಪದ ಮಹಾಕಾವ್ಯವೇ 'ಮಲೆಯ ಮಾದೇಶ್ವರ' ಈ ಮಹಾಕಾವ್ಯವನ್ನು ಸಂಗ್ರಹಿಸಿಕೊಟ್ಟ ಶ್ರೇಯಸ್ಸು ಡಾ. ಪಿ.ಕೆ. ರಾಜಶೇಖರ್ ಅವರದ್ದು. ಅನೇಕ ಸಮುದಾಯಗಳನ್ನು ತನ್ನ ಕಕ್ಷೆ ಪ್ರಭಾವಳಿಯೊಳಗೆ ತೆಗೆದುಕೊಂಡ ದೀರ್ಘ ಪಯಣದ ಕಥೆ ಮಹದೇಶ್ವರ ಕಾವ್ಯ. ಸಂಕಮ್ಮನ ಸಾಲು ಇದರ ಒಂದು ಪುಟ್ಟ ಭಾಗ. ಮಲೆಯ ಮಾದೇಶ್ವರ ಮೈಸೂರು ಪ್ರಾಂತ್ಯದ ಒಬ್ಬ ಜನಪದ ನಾಯಕ. ಜನಮಾನಸದಲ್ಲಿ ದೈವತ್ವದ ಮಟ್ಟಕ್ಕೆ ಏರಿದ ಆತನ ಕಥೆ ಅತ್ಯಂತ ರೋಚಕ. ಇಂದಿಗೂ ಮಾದೇಶ್ವರ ಕರ್ನಾಟಕದ ಪ್ರಭಾವಶಾಲೀ ಸಾಂಸ್ಕೃತಿಕ ಶಕ್ತಿ. ಕನ್ನಡದ ಮೌಖಿಕ ಪರಂಪರೆಯಲ್ಲಿ ಮಲೆ ಮಹದೇಶ್ವರ ಕಾವ್ಯವು ಅತ್ಯಂತ ಚಲನಶೀಲವಾದುದು.

ಈ ಮಹಾಕಾವ್ಯದಲ್ಲಿ ಅತ್ಯಂತ ಗೇಯಾತ್ಮಕವೂ, ಕಾವ್ಯಾತ್ಮಕವೂ ಆದ ಕಥಾಭಾಗವೆಂದರೆ 'ಸಂಕಮ್ಮನ ಸಾಲು' ಕಂಸಾಳೆಯನ್ನು ಹಿಡಿದ ಯಾವ ಗುಡ್ಡನೇ ಆಗಲಿ ಈ ಕಥೆಯನ್ನು ತುಸುವಾದರು 'ಹಂಗನ್ನ'ದಿದ್ದರೆ ಅವನು ದೇವರಗುಡ್ಡನೇ ಅಲ್ಲ ಎನ್ನುವಷ್ಟರ ಮಟ್ಟಿಗೆ ಜನ ಮನ್ನಣೆ ಪಡೆದಿದೆ. ದೇವರ ಗುಡ್ಡರ ಜೋಳಿಗೆ ತುಂಬ ತುಳುಕಬೇಕಾದರೂ ಅವರು ಸಂಕಮ್ಮನ ಕಥೆ ಹಾಡಬಲ್ಲವರಾಗಿರಬೇಕು. ಇದಕ್ಕೆ ಕಾರಣ ಹೆಣ್ಣಿನ ಹೃದಯವನ್ನು ಹಿಂಡುವ ಬಂಜೆತನದ ಬೇಗೆ ಒಂದಾದರೆ, ಹೆಣ್ಣಿನ ಬಗೆಗೆ ಗಂಡು ತಾಳುವ ಅನುಮಾನ ಮತ್ತು ಅದರ ಪರಿಣಾಮವಾಗಿ ತೋರುವ ಕ್ರೌರ್ಯ ಮತ್ತೊಂದು. ಆ ಹಾಡಿನ ಸಾಲನ್ನು ಈ ಕೆಳಗಿನಂತೆ ಗಮನಿಸಬಹುದು.

> ಕೋಲು ಮಂಡೆ ಜಂಗುಮರು
> ಕೋರಣ್ಯಕ್ಕೆ ಬಿಜು ಮಾಡವುರೆ ।
> ಕೋರಣ್ಯ ನೀಡಮ್ಮ ಕೋಡುಗಲ್ಲ ಮುನಿಗೆ ॥

ಕನ್ನಡದ ಮೌಖಿಕ ಪರಂಪರೆಯ ಮಲೆ ಮಹದೇಶ್ವರ ಕಾವ್ಯವನ್ನು ಸಮಕಾಲೀನ ಸಂದರ್ಭದಲ್ಲೂ ಈ ಕಾವ್ಯವನ್ನು ಹಿಡಿದಿಟ್ಟುಕೊಂಡು ನೋಡಬಹುದು. ಆದರೆ ನಾನಿಲ್ಲಿ ಮಾಡುತ್ತಿರುವುದು ಈ ಕಾವ್ಯದಲ್ಲಿನ ಆಶಯಗಳನ್ನು ಕುರಿತ ಚಿಂತನೆಯೆ ಹೊರತು ವಿಮರ್ಶೆಯಲ್ಲ. ಏಕೆಂದರೆ ಕಾವ್ಯದ ಆಶಯ ಎಂದೂ ಬದಲಾಗುವುದಿಲ್ಲ ಎಂಬ ನಂಬಿಕೆಯ ಕಾರಣದಿಂದಾಗಿ. 'ಸಂಕಮ್ಮನ ಸಾಲಿ'ನ ಈ ಭಾಗಕ್ಕೆ ಎರಡು ಪ್ರಮುಖ ಉದ್ದೇಶಗಳಿವೆ. ಇವುಗಳನ್ನು ಕಾವ್ಯೋದ್ದೇಶ ಮತ್ತು ಕಥಾ ನಾಯಕನಾದ ಮಾದೇಶ್ವರನ ಮಹಿಮೆಯನ್ನು ಸಾರುವುದು ಇಡೀ ಕಾವ್ಯದ ಪ್ರಧಾನ ಉದ್ದೇಶವಾಗಿದೆ.

ಇದು ಮುಖ್ಯವಾಗಿ ಕಾಡಿನ ಜೀವಿಗಳಾದ ಸೋಲಿಗ ದಂಪತಿಗಳ ಕಥೆ. ಸೋಲಿಗರ ನೀಲಯ್ಯ ಒಬ್ಬ ಪಶುಪಾಲಕ. ಈತನ ಮಡದಿ ಸಂಕಮ್ಮ. ಸದ್ಯಕ್ಕೆ ಬಂಜೆ. ಇವರಿಬ್ಬರ ನಡುವೆ ಮಾದೇಶನ ಪ್ರವೇಶವಾಗುತ್ತದೆ. ಈ ಮೂರು ಪಾತ್ರಗಳ ನಡುವೆ ಮಾತ್ರ ಈ ಕಥೆ ಬೆಳೆಯುತ್ತ ಹೋಗುತ್ತದೆ. ಇಲ್ಲಿ ಪ್ರಧಾನವಾಗಿ ನಾವು ಏಳು ಸಂಗತಿಗಳನ್ನು ಗಮನಿಸಬೇಕಾಗಿದೆ. 1. ಸೋಲಿಗರ ಬೇಟೆ 2. ಬೇಟೆಯ ಅವಧಿ 3. ಸಂಕಮ್ಮನ ಫಲಾಪೇಕ್ಷೆ 4. ನೀಲಯ್ಯನ ಅನುಮಾನ 5. ಮಾಟದ ಪ್ರಾಮುಖ್ಯತೆ 6. ಮಕ್ಕಳ ಭಾಗ್ಯ ನೀಡುವ ಕ್ರಿಯೆ 7. ಹುಟ್ಟಿದ ಮಕ್ಕಳನ್ನು ಮೀಸಲು ಬಿಡುವ ಒಪ್ಪಂದ.

ಇಲ್ಲಿನ ಸಂಕಮ್ಮನ ಫಲಾಪೇಕ್ಷೆಯ ಹಂಬಲಕ್ಕೂ ಕುಲದ ಬೇಟೆಯ ಸಂಪ್ರದಾಯಕ್ಕೂ ಒಳಸಂಬಂಧವೇರ್ಪಡುತ್ತದೆ. ಸಂಕಮ್ಮನಿಗೆ ಬಂಜೆತನ ಅಳಿಯಬೇಕು. ಮಾದಯ್ಯನಿಗೆ ಸಂಕಮ್ಮನ ಮಕ್ಕಳು ಒಕ್ಕಲಾಗಬೇಕು. ಅದರಲ್ಲೂ ಈ ಸಾಂಪ್ರದಾಯಿಕ ಬೇಟೆಯ ಅವಧಿ ಒಂಬತ್ತು ತಿಂಗಳು ಎನ್ನುವಾಗ ಇಲ್ಲಿನ ಕಾವ್ಯೋದ್ದೇಶ ನಿಚ್ಚಳವಾಗುತ್ತದೆ. ಕುಲದ ಬೇಟೆ ಹಾಗೂ ಸೋಲಿಗರ ಆಹಾರ ಸಂಗ್ರಹಣೆಯ ರೀತಿನೀತಿಗಳು ಬುಡಕಟ್ಟು

ISBN – 978-93-5526-247-9 

ಸಮಾಜವೊಂದರ ಜೀವನ ಕ್ರಮದ ಬಗ್ಗೆ ಬೆಳಕು ಚೆಲ್ಲುತ್ತದೆ. ಕುಲದ ಹಿರಿಯರ ಆದೇಶದಂತೆ ಒಂಭತ್ತು ತಿಂಗಳ ಬೇಟೆಗೆ ಹೊರಟ ನೀಲಯ್ಯ ರೂಪಸಿಯಾದ ಹೆಂಡತಿಯ ಪಾತಿವ್ರತ್ಯ ಉಳಿಯುವ ಬಗ್ಗೆ ಆತಂಕ ಪಡುತ್ತಾನೆ. ಸಂಕಮ್ಮನ ಬಂಜೆತನಕ್ಕೆ ತಾನೂ ಕಾರಣನಿರಬಹುದೆಂಬ ಒಳದನಿ ಅವನನ್ನು ಈ ಅನುಮಾನಕ್ಕೆ ತಳ್ಳಿರಬಹುದು. ಫಲಾಪೇಕ್ಷೆಯ ತೀವ್ರ ಹಂಬಲದಲ್ಲಿರುವ ಸಂಕಮ್ಮ ಸಹಜವಾಗಿ ಯಾರಿಗಾದರೂ ತನ್ನ ಗೈರುಹಾಜರಿಯಲ್ಲಿ ಒಲಿದುಬಿಟ್ಟರೆ? ಆದರೆ ಹೆಂಡತಿಯ ಮಾತಿನಲ್ಲಿ ಅವನಿಗೆ ನಂಬಿಕೆ ಇದೆ. ಅದಕ್ಕಾಗಿ ಅವನು ಸಂಕಮ್ಮನನ್ನು ಭಾಷೆ ಕೊಡುವಂತೆ ಕೇಳುತ್ತಾನೆ. ಇಲ್ಲಿಂದ ಕಥೆ ಬೇರೆಯದೆ ತಿರುವನ್ನು ಪಡೆಯುತ್ತದೆ. ಇದು ಪರಸ್ಪರರ ಸ್ವಾಭಿಮಾನವನ್ನು ಕೆರಳಿಸುವ ಪ್ರಶ್ನೆಯಾಗುತ್ತದೆ. ಈ ಬಿಕ್ಕಟ್ಟಿನ ಸಂದರ್ಭ ಕಾವ್ಯಕ್ಕೆ ಸೊಗಡು ತುಂಬುತ್ತದೆ.

ಅತ್ತೀಯ ಹೂವ ನೋಡಬಹುದು । ಕೊತ್ತೀಯ ಮಾಸ ಕಾಣಬಹುದು
ಬಿಳಿ ಕಾಗೇಯ ನೋಡಬಹುದು । ಮೀನಿನ ಹೆಜ್ಜೆಯ ಕಾಣಬಹುದು
ನೀರಲ್ಲಿರುವ ಕಪ್ಪೇಯು । ನೀರಕುಡಿತದೊ ಇಲ್ವೊ ನೋಡಬಹುದು
ನಿಮ್ಮ ಹೆಣ್ಣು ಅಂಬೊ ಹೆಣ್ ಜಾತ್ಯ । ನಂಬೋದು ಹ್ಯಾಗೆ ಸಂಕ್ಕೆ'ಣ್ಣೆ
ಹೆಣ್ಣೇ ಹೆಣ್ಣಿನ ಮರ್ಮ ಯಾರು ಬಲ್ರು । ಬಲಗೈ ಭಾಷೆ ಕೊಡು ಮಡದಿ

ಈ ಮಾತಿಗೆ ಸಂಕವ್ವ ಜಗ್ಗುವುದಿಲ್ಲ. ಅವಳೂ ದನಿ ಎತ್ತರಿಸುತ್ತಾಳೆ. ಸಂಕಮ್ಮ ಮತ್ತು ನೀಲಯ್ಯರ ನಡುವಿನ ನೀತಿ ಅನೀತಿಗಳ ಹಾಗೂ ನ್ಯಾಯ ಅನ್ಯಾಯಗಳ ಈ ಸಂಘರ್ಷ ಹಾಡುವ ಗಾಯಕನ ಪ್ರತಿಭೆಗೆ ಅನುಸಾರವಾಗಿ ಬೆಳೆಯುತ್ತದೆ ಮತ್ತು ಗಾಂಭೀರ್ಯಗೊಳ್ಳುತ್ತದೆ. ಕಡೆಗೆ ಸಂಕಮ್ಮ ನೀಲಯ್ಯನ ತೆರವನ್ನು ಹಿಂದಕ್ಕೆ ಕೊಟ್ಟು ಅವನನ್ನು ತೊರೆಯಲು ಸಿದ್ಧಳಾಗುತ್ತಾಳಾದರೂ ಭಾಷೆ ನೀಡುವ ಮೂಲಕ ಕಟ್ಟುಪಾಡಿಗೆ ಒಳಗಾಗಲು ಬಯಸುವುದಿಲ್ಲ.

ಅಯ್ಯೊ ಯಜಮಾನ
ಯಾರೂ ಕಟ್ಟಬಾರ್ದ ತೆರ ನೀವ್ ಕಟ್ಟದ್ದೀರ್ಯಾ
ಯಾರೂ ಮುಟ್ಟಿಸ್‌ಬಾರ್ದ ಮುಟ್ಟುವಳಿ ಮುಟ್ಟಿಸಿದ್ದೀರ್ಯಾ –

ನೀನು ಕಟ್ಟಿದ ತೆರವ ತಕ್ಕಯ್ಯ । ನನ್ನ ಹಟ್ಟಿಂದಾಚೆ ಕಳುವಯ್ಯ
ನಿನ್ನದಾರ್ಯ ನೀನು ನೋಡಯ್ಯ । ನನ್ನದಾರ್ಯ ನಾನು ನೋಡ್ತೀನಿ
ನಾನು ಬಲಗೈ ಮುಟ್ಟಿ ಭಾಷೆ ಕೊಡುವಂತ
ಮಗಳಲ್ಲ ಹೋಗೋ ಯಜಮಾನ –

ಕಡೆಗೂ ಭಾಷೆಯನ್ನು ಪಡೆಯಲಾರದ ನೀಲಯ್ಯ ಮಾಟದ ಕ್ರಿಯೆಗಳಿಂದ ಅವಳನ್ನು ಬಂಧಿಸಿ ಕಾವಲಿಗೆ ಸೃಷ್ಟಿಸಲ್ಪಟ್ಟ ರಾಕ್ಷಸರನ್ನು ನಿಲ್ಲಿಸಿ ಕುಲದ ಬೇಟೆಗೆ ತೆರಳುತ್ತಾನೆ. ಈ ಎಲ್ಲಾ ಅಂಶಗಳು ಮಾದೇಶ್ವರನ ಪ್ರಧಾನ ಉದ್ದೇಶಕ್ಕೆ ಅನುಗುಣವಾಗಿಯೇ ನಡೆಯುತ್ತದೆ. ಕಷ್ಟದಲ್ಲಿದ್ದವರನ್ನು ರಕ್ಷಿಸುವುದು ದೈವದ ಕರ್ತವ್ಯ ತಾನೇ? ಇಲ್ಲಿ ಮಾದಪ್ಪ ಒಬ್ಬ ಕರುಣಿಯಾಗಿ, ಅಬಲೆಯರನ್ನು ರಕ್ಷಿಸುವ ಆಪತ್ಬಾಂದವನಾಗಿ ಕಾಣಿಸಿಕೊಳುತ್ತಾನೆ. ಅಂದಿನ ಜನತೆಯಲ್ಲಿದ್ದ ಬಹುಪಾಲು ನಂಬಿಕೆಗಳು, ವಿಚಿತ್ರ ಪದ್ಧತಿಗಳು, ಸಂಪ್ರದಾಯದ ಬೆನ್ನು ಬಿಡದ ವಿಚಾರಗಳು, ಮಂಕು ಮಾಡುವ ಪವಾಡಗಳು, ಭಕ್ತಿಯ ಕಾರಣಕ್ಕಾಗಿ ಎಲ್ಲವನ್ನೂ ಮರೆತು ಮಾದಯ್ಯನಲ್ಲಿ ಒಂದಾಗುವವರೂ – ಹೀಗೆ ಬೆಳೆಯುತ್ತಾ ಸಾಗುವ ಕಾವ್ಯದಲ್ಲಿ ಸಾಂಸ್ಕೃತಿಕವಾದ ಅಧ್ಯಯನಕ್ಕೆ ಬೇಕಾಗುವ ಹೆಚ್ಚಿನ ಸಾಮಾಗ್ರಿ ದೊರೆಯುತ್ತದೆ.

ಇಲ್ಲಿ ಮಾದೇಶ್ವರನಿಗೆ ಕೆಲವು ಪ್ರಮುಖ ನಾಯಕತ್ವದ ಲಕ್ಷಣಗಳಿವೆ. ಇವನು ಸದಾ ಅನ್ಯಾಯದ ವಿರುದ್ಧ ಇರುತ್ತಾನೆ ಮತ್ತು ಅಹಂಕಾರಿಗಳನ್ನು ವಿವೇಕಿಗಳನ್ನಾಗಿಸುತ್ತಾನೆ. ಇವೆಲ್ಲದರ ಜೊತೆಗೆ ಮಾಟಕ್ಕೆ ಪ್ರತಿಮಾಟ ತಂತ್ರಕ್ಕೆ ಪ್ರತಿತಂತ್ರ ಬಳಸಬಲ್ಲ ಮಹಾ ಮೋಡಿಕಾರನಾಗಿರುತ್ತಾನೆ. ಮಾದೇಶ್ವರನಿಗೆ ಹುಲಿ ವಾಹನವಾಗಿರುತ್ತದೆ. ಇಲ್ಲಿ ಆದಿವಾಸಿ ಸಮುದಾಯದ ನೀಲಯ್ಯ ಒಬ್ಬ ಮಹಾ ಮೋಡಿಕಾರನಾಗಿ ಚಿತ್ರಿತವಾಗಿದ್ದಾನೆ. ಪ್ರಕೃತಿಯ ಎಲ್ಲವನ್ನೂ ಒಲಿಸಿಕೊಳ್ಳುವ

ISBN – 978-93-5526-247-9

ಮನುಷ್ಯನ ಮಹತ್ವಕಾಂಕ್ಷೆಯ ಫಲವಾದ ಈ ಮೋಡಿವಿದ್ಯೆ ಇಡೀ ಮಹದೇಶ್ವರನ ಕಾವ್ಯದ ಜೀವಾಳ. ನಿರೀಕ್ಷೆಯಂತೆ ಮಾದೇವ ನೀಲಯ್ಯನ ಎಲ್ಲಾ ಮಂಡಲವನ್ನು ಮತ್ತು ಕಟ್ಟುಗಳನ್ನು ನಿರರ್ಥಕಗೊಳಿಸಿ ಸಂಕಮ್ಮನನ್ನು ರಕ್ಷಿಸುತ್ತಾನೆ.

ಸಂಕಮ್ಮ ನೀಲಯ್ಯನ ಮಾಟದ ಮಂಡಲದಿಂದ ಬಿಡಿಸಿಕೊಂಡಳೆಂದರೆ ಪಾತಿವ್ರತ್ಯದ ಸಂಕೋಲೆಯಿಂದ ಬಿಡಿಸಿಕೊಂಡಳೆಂದೆ ಅರ್ಥ. ಪಶ್ಚಿಮಕ್ಕೆ ಬೆನ್ನು ಹಾಕಿ ಈರಮಂಡಿಗಾಲೂರಿ ಕೂತ ಸಂಕಮ್ಮನಿಗೆ ಕಾಡು ಬೆಂಡೆಕಾಯಿಯಲ್ಲಿ 'ಪಿಂಡು ಪರಸಾದ' ತುಂಬಿ ಬೆನ್ನು ಭಾಗದಿಂದ ಪರಸಾದ ನೀಡುತ್ತಾನೆ ಮಾದೇವ! ಇದಕ್ಕೆ ಪೂರಕವಾಗಿ ಈ ಫಲ ನೀಡುವ ಕ್ರಿಯೆಗೆ ಮೊದಲು ಮಾದೇವನ ಬಾಯಿಂದಲೇ ಬರುವ "ಮಕ್ಕಳ ಫಲ ಕೊಡೋದ್ಕೆ ನಾನೇನ ಇಸ್ನು ಬ್ರಹ್ಮ ಈಸ್ವರ ಕೆಟ್ಬೋದ್ನ, ಯಾರ ಮಕ್ಳ ತಂದು ನಿನ್ನೊಟ್ಟೇಲಿ ಕೊಡ್ಲಿ ಕಂದಮ್ಮ ಒಣಮರವನ್ನು ನೆಟ್ಟಿ ಪಾತಿ ತುಂಬ ನೀರೂದ್ರೆ ಒಣ್ಮರ ಚಿಗ್ರಿ ಹೂ ಬುಡ್ತದ ಕಂದ" ಎಂಬ ಮಾತುಗಳು ತುಂಬ ಅರ್ಥ ಗರ್ಭಿತವಾಗಿದೆ. ಕಾಡು ಬೆಂಡೇಕಾಯಿ–ಪಿಂಡು ಪರಸಾದ–ಈರಮಂಡಿಗಾಲು ಅಲ್ಲಿ ನಡೆದಿರಬಹುದಾದ ಮಿಲನವನ್ನು ಸಂಕೇತಿಸಿರಬಹುದಾಗಿದೆ. ನೀಲಯ್ಯನು ಬೇಟೆಗೆ ಹೊರಡುವ ಮೊದಲು 'ಬರೊದು ಒಂಭತ್ತು ತಿಂಗಳಾಗುತ್ತದೆ' ಎಂದು ಹೇಳುವುದಕ್ಕೂ ಮಾದೇವ ಕೊಟ್ಟ 'ಪಿಂಡ ಪರಸಾದ' ಫಲ ನೀಡುವುದಕ್ಕೂ ಇರುವ ಸಮಯದಲ್ಲಿ ಯಾವುದೇ ವ್ಯತ್ಯಾಸವಿಲ್ಲ.

ಸಂಕಮ್ಮನೊಂದಿಗೆ ಕೂಡುವ ಅಥವಾ ಭೋಗಿಸುವ ಉದ್ದೇಶ ಮಾದೇವನದಲ್ಲ. ಈ ಸಂಬಂಧ ಏರ್ಪಡಿಸಿಕೊಳ್ಳುವ ಮೂಲಕ ಹುಟ್ಟುವ ಮಕ್ಕಳನ್ನು ಹಾಗೂ ಆ ಕುಲವನ್ನು ತನ್ನ ಪಂಥಕ್ಕೆ ಸೇರಿಸಿಕೊಳ್ಳುವುದು ಇಲ್ಲಿ ಮುಖ್ಯ. ಮುಂದೆ ಹುಟ್ಟುವ ಕಾರಯ್ಯ–ಬಿಲ್ಲಯ್ಯ ಎಂಬ ಮಕ್ಕಳು ಮಾದೇವನ ಸೇವೆಗೆ ಮೀಸಲಾದವರಾಗಿ ದೀಕ್ಷೆ ಪಡೆದು ಗುಡ್ಡರಾಗುತ್ತಾರೆ. ಇದನ್ನು ಸಾಧಿಸುವುದಕ್ಕಾಗಿ ಮಕ್ಕಳ ಫಲ ಕೊಡಲು ಒಪ್ಪುವ ಮೊದಲೇ ಈ ಮಕ್ಕಳನ್ನು ತನಗೆ ಮೀಸಲು ಬಿಡುವ ಭಾಷೆ ಪಡೆಯುತ್ತಾನೆ.

ಸಂಕಮ್ಮ ಹೆಣ್ತನದ ಸ್ವಾಭಿಮಾನವನ್ನು ಮೆರೆದ ದಿಟ್ಟ ಹೆಣ್ಣು. ತನ್ನ ಗಂಡ ನೀಲೇಗೌಡನ ದರ್ಪ, ದಬ್ಬಾಳಿಕೆ, ಶೋಷಣೆ, ಅನುಮಾನಗಳನ್ನು ಸಹಿಸಿಯೂ ತನ್ನ ಸ್ವಾಭಿಮಾನ, ಸ್ವಾತಂತ್ರ್ಯಗಳನ್ನು ಬಿಟ್ಟುಕೊಡಲು ಒಪ್ಪದವಳು. ತನ್ನ ಮೇಲೆ ನಂಬಿಕೆ ಇರದಿದ್ದರೆ ತನ್ನನ್ನು ತೊರೆದು ಬಿಡುವಂತೆ ದಿಟ್ಟ ಉತ್ತರ ನೀಡಿದ ಸಂಕಮ್ಮ ಗಂಡ ಚಿತ್ರಹಿಂಸೆಗಳನ್ನು ನೀಡಿದರೂ ಬಲಗೈ ಮುಟ್ಟಿ ಭಾಷೆ ಕೊಡಲು ನಿರಾಕರಿಸುತ್ತಾಳೆ. ಪುರಾಣದ ಶಿಷ್ಟ ಮಹಾಕಾವ್ಯಗಳ ಸ್ತ್ರೀಯರಿಗಿಂತ ಅತ್ಯಂತ ಆಧುನಿಕವಾಗಿ, ನಿಸರ್ಗ ಸಹಜವಾಗಿ, ಸ್ವಾಭಿಮಾನಿಯಾಗಿ ನಿಲ್ಲುವ ಸಂಕಮ್ಮನದು ವಿಶಿಷ್ಟ ವ್ಯಕ್ತಿತ್ವ. ಹೆಣ್ಣಿಗೆ ಕಣ್ಣಿರು ಇದ್ದರೂ ಅದೇ ಕೊನೆಯಲ್ಲ. ಆ ಕಣ್ಣೀರಿಗೆ ಶಿವನನ್ನೇ ಭೂಮಿಗೆ ಕರೆ ತರುವ ಶಕ್ತಿಯಿದೆ. ಇಲ್ಲಿಯ ಸಂಕಮ್ಮ ದ್ರೌಪದಿ ಸೀತೆಯಂತರಲ್ಲ. ದ್ರೌಪದಿಯ ಬೌದ್ಧಿಕ ಶಕ್ತಿ, ಸೀತೆಯ ಭಾವನಾತ್ಮಕ ಶಕ್ತಿಗಳೆರಡನ್ನೂ ಒಳಗೊಂಡು ಗಂಡಿನ ಅನುಮಾನವನ್ನು ಪ್ರಶ್ನಿಸುತ್ತಾ ಅದಕ್ಕೆ ಸೋಲದೆ ತನ್ನ ನಿಲುವಿಗೆ ಬದ್ಧಳಾಗಿ ಬದುಕುವ ವಿಶಿಷ್ಟ ಗರತಿಯಾಗಿದ್ದಾಳೆ. ಸಂಕಮ್ಮ ದೃಢ ಭಕ್ತೆ. ಗಂಡನ ಅನುಮಾನ, ಸಾಮಾಜಿಕ ನಿಂದನೆಗೆ ಹೆದರದ ಸಂಕಮ್ಮ ತನ್ನ ತಾಯ್ತನದ ಬಯಕೆಯನ್ನು ಗಂಡನಿಲ್ಲದ ಹೊತ್ತಿನಲ್ಲೂ ಮಾದೇವನ ಹರಕೆಯಿಂದ ಪೂರೈಸಿಕೊಳ್ಳುತ್ತಾಳೆ. ಗಂಡಸಿನ ಸೂಕ್ಷ್ಮ ಕ್ರೂರತನವನ್ನು ಮೀರುವ ಹೆಣ್ಣಿನ ಮನಸ್ಸು ಮತ್ತು ಕ್ರಿಯೆಗಳಿಗೆ ಸಂಕಮ್ಮ ಸಂಕೇತವಾಗಿ ನಿಲ್ಲುತ್ತಾಳೆ.

ಪರಾಮರ್ಶನ ಗ್ರಂಥಗಳು:


1. ಕಾಡು ಕಾಂಕ್ರಿಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
2. ಜನಪದ ಸಾಹಿತ್ಯ, ಪ್ರಸಾರಾಂಗ ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ, ಶಿವಮೊಗ್ಗ.
3. ಜಾನಪದ ಸ್ವರೂಪ, ಡಾ. ಹಾಮಾ ನಾಯಕ, ಗೀತಾಂಜಲಿ ಪುಸ್ತಕ ಪ್ರಕಾಶನ ಶಿವಮೊಗ್ಗ.
4. ಜನಪದ ಸಾಹಿತ್ಯ, ಡಾ. ಕಾಳೇಗೌಡ ನಾಗವಾರ, ಯುಗಾದಿ ಪ್ರಕಾಶನ ಬೆಂಗಳೂರು.
5.


***

## 37. ಆಧುನಿಕ ಸಂವೇದನೆಯ ನಾಟಕ: ಎಚ್. ಎಸ್. ಶಿವಪ್ರಕಾಶರ ಮಂಟೇಸ್ವಾಮಿ ಕಥಾಪ್ರಸಂಗ

ಡಾ. ತಾರಾಮಣಿ. ಆರ್

ಕರ್ನಾಟಕದ ಬಹುಮುಖ್ಯ ಸಾಂಸ್ಕೃತಿಕ ಪರಂಪರೆಗಳಲ್ಲಿ ಮಂಟೇಸ್ವಾಮಿ ಪರಂಪರೆಯೂ ಒಂದು. ಮಂಟೇಸ್ವಾಮಿ 15–17ನೇ ಶತಮಾನದಲ್ಲಿ ಬದುಕಿದ್ದನೆಂದು ಹೇಳಲಾಗುವ ಚಾರಿತ್ರಿಕ ವ್ಯಕ್ತಿ. ಅಲ್ಲಿಂದ ಮುಂದೆ ಈ ಸಾಂಸ್ಕೃತಿಕ ವೀರ ದೈವೀಕರಣಗೊಂಡಿರುವುದನ್ನು ಕಾಣಬಹುದು. 12ನೇ ಶತಮಾನದಲ್ಲಿ ಕ್ರಾಂತಿಕಾರಕವಾಗಿ ಮೂಡಿಬಂದ ವಚನ ಚಳುವಳಿ ನಂತರದ ದಿನಗಳಲ್ಲಿ ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿತು. ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ತೀವ್ರವಾಗಿ ವಿರೋಧಿಸಿದ ಚಳುವಳಿ ನಂತರದ ದಿನಗಳಲ್ಲಿ ತನ್ನದೇ ಆದ ಶ್ರೇಣೀಕೃತ ಪ್ರತಿ ವ್ಯವಸ್ಥೆಯನ್ನು ಕಟ್ಟಿಕೊಂಡಿತು. ಈ ವಿಷಮ ಪರಿಸ್ಥಿತಿಯಲ್ಲಿ ಅಲಕ್ಷಿತ ಸಮುದಾಯ ಹಾಗೂ ದುಡಿಯುವ ದಲಿತ ಸಮುದಾಯಗಳಲ್ಲಿ ಮರುಹುಟ್ಟು ಪಡೆದ ಸಾಂಸ್ಕೃತಿಕ ನಾಯಕ ಮಂಟೇಸ್ವಾಮಿ. ಈತ 12ನೇ ಶತಮಾನದ ಶರಣ ಚಳುವಳಿಯನ್ನು ಮುಖಾಮುಖಿಯಾಗುವುದು ವಿಚಿತ್ರ ಎನಿಸಿದರೂ ಆತನ ಸೃಷ್ಟಿಯ ಹಿಂದೆ ನವಸಮಾಜ ನಿರ್ಮಾಣದ ಆಶಯಗಳಿವೆ. ಹಾಗಾಗಿಯೇ ಒಂದು ಕಾಲಕ್ಕೆ ಅತ್ಯಂತ ಮಹತ್ವದ್ದಾಗಿದ್ದ ಶರಣ ಚಳುವಳಿಯ ನೆಲದಿಂದಲೇ ಮಂಟೇಸ್ವಾಮಿಯ ಪಯಣ ಶುರುವಾಗುತ್ತದೆ ಆದರೆ "ಮಂಟೇಸ್ವಾಮಿ ಎನ್ನುವುದು ಒಂದು ಜೀವಂತ ಪರಂಪರೆ. ಇದಕ್ಕೆ ಚರಿತ್ರೆಯಿಲ್ಲ. ಇದಕ್ಕೆ ವರ್ತಮಾನ ಇದೆ, ನಿರಂತರವಾಗಿ ಬದಲಾಗುತ್ತಾ ಮುಂದುವರೆಯುವ ವರ್ತಮಾನ ಇದು". ಆದುದರಿಂದ ಮಂಟೇಸ್ವಾಮಿಯ ಬದುಕಿನ ಹೋರಾಟ ನಮ್ಮ ವರ್ತಮಾನ ಹಾಗೂ ಭವಿಷ್ಯತ್ತನ್ನು ಒಟ್ಟಾಗಿಯೇ ಒಳಗೊಂಡಿದೆ. ಹೀಗೆ ಮಂಟೇಸ್ವಾಮಿ ಕಾವ್ಯದ ವಸ್ತು ಕಾಲಾದೇಶ ಸಮಾಜಾತೀತವಾದುದಾಗಿದ್ದು ಈ ವಸ್ತುವಿಗೆ ಎಚ್.ಎಸ್. ಶಿವಪ್ರಕಾಶ್‌ರು ಇತಿಹಾಸ, ಪುರಾಣ ಕಲ್ಪನೆಯನ್ನು ಮೇಳೈಸಿ ಆಧುನಿಕ ಸಂವೇದನೆಯ ಹಿನ್ನೆಲೆಯಲ್ಲಿ ಮಂಟೇಸ್ವಾಮಿ ಕಥಾಪ್ರಸಂಗ ನಾಟಕವನ್ನು ರಚಿಸಿದ್ದಾರೆ.

ಮಂಟೇಸ್ವಾಮಿಯ ಜೀವನ ಆರಂಭವಾಗುವುದು ಶೂನ್ಯದಿಂದ. ಭೂಮಿ ಹುಟ್ಟುವ ಮೊದಲೇ ಮಂಟೇಸ್ವಾಮಿ ಹುಟ್ಟಿದ ಎಂಬುದು ಈ ಪರಂಪರೆಯ ತಿಳುವಳಿಕೆ. ಹಾಗಾಗಿಯೇ ಈತನನ್ನು 'ಧರೆಗೆದೊಡ್ಡವರು' ಎಂದು ಕರೆಯುವುದು. ಮಂಟೇಸ್ವಾಮಿಯೇ ಈ ಭೂಮಿ–ಆಕಾಶ, ಸೂರ್ಯ–ಚಂದ್ರ, ಬ್ರಹ್ಮ–ವಿಷ್ಣು–ಮಹೇಶ್ವರರನ್ನು, ಮನುಷ್ಯ–ಪ್ರಾಣಿ ಮೊದಲಾದ ಸಕಲ ಜೀವಕೋಟಿಯನ್ನು ಸೃಷ್ಟಿಸುತ್ತಾನೆ. ಇದು ಮಂಟೇಸ್ವಾಮಿಯ ಜೀವನದ ಪೌರಾಣಿಕ ಪರಿಕಲ್ಪನೆ. "ಪೌರಾಣಿಕ ಪರಿಕಲ್ಪನೆಗಳನ್ನು ಪುರೋಹಿತಶಾಹಿಗಳು ಕಾಲಕಾಲಕ್ಕೆ ಕಟ್ಟಿಕೊಟ್ಟು ಜನತೆಯನ್ನು ನಂಬಿಸಿರುವುದಕ್ಕೂ ಹಾಗೂ ಅದೇ ಪುರಾಣ ಪಾತ್ರ ಸನ್ನಿವೇಶಗಳನ್ನು ಜನಪದರು ತಮ್ಮ ಬದುಕಿನ ಭಾಗವಾಗಿ ಪರಿಭಾವಿಸಿ ಜನಪದ ಕಾವ್ಯಗಳಲ್ಲಿ ಅನಾವರಣ ಮಾಡಿರುವುದಕ್ಕೂ ಅಗಾಧವಾದ ವ್ಯತ್ಯಾಸಗಳಿವೆ. ಪಾತ್ರಗಳಲ್ಲಿ ಸಾಮ್ಯತೆಗಳಿವೆಯಾದರೂ ಸನ್ನಿವೇಶಗಳು ಹಾಗೂ ಕಥಾನಿರೂಪಣೆಗಳು ವಿಭಿನ್ನವಾಗಿವೆ. ಪುರೋಹಿತಶಾಹಿ ವರ್ಗವು ಸ್ವರ್ಗ ನರಕ ದೇವಲೋಕಗಳ ಅಲೌಕಿಕ ಪ್ರಪಂಚವೊಂದನ್ನು ಸೃಷ್ಟಿಸಿ ಅದಕ್ಕೆ ಪೂರಕವಾಗಿ ಕಥೆಗಳನ್ನು ಕಟ್ಟುತ್ತಾ ದೇವಾನುದೇವತೆಗಳನ್ನು ಆರಾಧನಾ ಮೂರ್ತಿಗಳನ್ನಾಗಿ ಭಕ್ತಿ ಭಯದ ಕೇಂದ್ರವಾಗಿಸಿ ವೈಭವೀಕರಿಸುತ್ತಾ ಬಂದಿದ್ದರೆ, ಶ್ರಮಸಂಸ್ಕೃತಿಯ ಹರಿಕಾರರಾದ ಜನಪದರು ದೇವತೆಗಳನ್ನು ಅವುಗಳ ದಿವ್ಯ ಪಟ್ಟದಿಂದ ಕೆಳಗಿಳಿಸಿ ಸಾಮಾನ್ಯ ಮನುಷ್ಯನ ಪ್ರತಿರೂಪವನ್ನಾಗಿಸಿ ಕಥೆ ಕಾವ್ಯಗಳನ್ನು ಕಟ್ಟಿ ಜನಸಾಮಾನ್ಯರಿಗೆ ದೇವರನ್ನು ಹತ್ತಿರವಾಗಿಸಿದರು. ಮೇಲ್ವರ್ಗದವರ ಪುರಾಣ ಸೃಷ್ಟಿಗೆ ಪ್ರತಿಯಾಗಿ ತಳ ಸಮುದಾಯಗಳು ಸೃಷ್ಟಿಸಿದ ಮಿಥ್ಗಳು ಸಾಂಸ್ಕೃತಿಕ ಸಂಘರ್ಷದ ಭಾಗವಾಗಿಯೇ ಬೆಳೆದುಬಂದವು. ಮಂಟೇಸ್ವಾಮಿ, ಮಾದೇಶ್ವರ ಅಂತೆಯೇ ಇನ್ನಿತರ ತಳಸಮುದಾಯದ ಜನಪದ ಮಹಾಕಾವ್ಯಗಳು ತಮ್ಮ ಜಾತಿ ಅಸಮಾನತೆಯ ಸಂಕಷ್ಟಗಳನ್ನು ಮೀರಲು ಪ್ರಧಾನ ಸಂಸ್ಕೃತಿಯೆದುರು ತಮ್ಮದೇ ಐಡೆಂಟಿಟಿಗಳನ್ನು ಕಟ್ಟಿಕೊಳ್ಳಲು ಗಟ್ಟಿಯಾದ ಕಾವ್ಯ ಪ್ರಕಾರಗಳನ್ನು ಮೌಖಿಕ ಪರಂಪರೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ಉಳಿಸಿ ಬೆಳೆಸುತ್ತಲೇ ಬಂದರು". ಅಂತಹ ಜನಪದ ಕಾವ್ಯಗಳಲ್ಲಿ ಮಂಟೇಸ್ವಾಮಿಯೂ ಒಂದು. ಜನಪದ ಕಾವ್ಯವಾದ ಮಂಟೇಸ್ವಾಮಿಯ ಕತೆಯನ್ನು ಆಧರಿಸಿ ಎಚ್.ಎಸ್.ಶಿವಪ್ರಕಾಶರು ಮಂಟೇಸ್ವಾಮಿ ಕಥಾ ಪ್ರಸಂಗ ಎಂಬ ನಾಟಕವನ್ನು ರಚಿಸಿದ್ದಾರೆ. "ಈ ನಾಟಕವನ್ನು ಮಂಟೇಸ್ವಾಮಿ ಕಾವ್ಯದ ಕಥಾಸೂತ್ರದ ಎಳೆಯಲ್ಲಿ ಅದರ ನಾಟಕೀಯ ಅಂಶಗಳೊಂದಿಗೆ ಸೃಷ್ಟಿಸಲಾಗಿದೆ. ನೀಲಗಾರರ ಭಾಷೆಯನ್ನೇ ಇಲ್ಲಿ ಮುಖ್ಯವಾಗಿ ಬಳಸಿದೆ" ಎಂದು ನಾಟಕಕಾರರು ಹೇಳಿರುವುದರಿಂದ ನಾಟಕದ ಚಾರಿತ್ರಿಕತೆಯನ್ನು ಪರೀಕ್ಷಿಸುವ ಗೋಜಿಗೆ ಹೋಗದೆ ಜಾನಪದ ಪರಂಪರೆಯಲ್ಲಿರುವ ಪವಾಡಮಯವಾದ ಕಥಾಪ್ರಸಂಗವನ್ನೇ ಸಂವಾದ ಹಾಡುಗಳ ಮೂಲಕ ಸುಂದರವಾಗಿ ನಿರೂಪಿಸಿರುವುದನ್ನು

ISBN – 978-93-5526-247-9

ನಾಟಕದಲ್ಲಿ ಕಾಣುತ್ತೇವೆ. ಆದರೆ ಲೇಖನದ ಮುಖ್ಯ ಉದ್ದೇಶವಿರುವುದು ಅಂದಿನ ಕಲ್ಯಾಣ ಪಟ್ಟಣ ಹಾಗೂ ಪುರೋಹಿತಶಾಹಿ ವ್ಯವಸ್ಥೆಯ ಕರಾಳತೆಯನ್ನು ಆಧುನಿಕ ಕಾಲದ ಹಿನ್ನೆಲೆಯಲ್ಲಿಟ್ಟು ನೋಡುವ ಕ್ರಮವನ್ನು ಈ ಕೆಳಕಂಡ ಅಂಶಗಳ ಹಿನ್ನೆಲೆಯಲ್ಲಿ ಚರ್ಚಿಸುವುದೇ ಆಗಿದೆ.

## ಕಲ್ಯಾಣ ಪಟ್ಟಣದ ಸಾಂಕೇತಿಕತೆ:

ವಾಸ್ತವವಾಗಿ ನೋಡಿದಾಗ ಕಲ್ಯಾಣವನ್ನು 15ನೇಯ ಶತಮಾನದಲ್ಲಿದ್ದ ಮಂಟೇಸ್ವಾಮಿ ಕಲ್ಯಾಣವನ್ನು ಪ್ರವೇಶಿಸುವ, ಬಸವಣ್ಣ ಮತ್ತು ಕಲ್ಯಾಣದ ಶರಣರನ್ನು ಪರೀಕ್ಷಿಸುವ ಸಾಧ್ಯತೆಯೇ ಇಲ್ಲ. ಆದ್ದರಿಂದ ಈ ಭಾಗದಲ್ಲಿ ಬರುವ ಘಟನೆಯು ರೂಪಕದಂತೆ ಚಿತ್ರಿತವಾಗಿದೆ. ಕಲ್ಯಾಣದಲ್ಲಿ ನಡೆದ ಚಳುವಳಿ ಒಂದು ಆದರ್ಶ ಚಳುವಳಿ. ಎಲ್ಲಾ ಜಾತಿ ಮತದವರನ್ನು ಒಂದುಗೂಡಿಸುವ ಪ್ರಯತ್ನ ಪ್ರಾರಂಭವಾಗಿದ್ದು ಕಲ್ಯಾಣದಿಂದಲೇ. ಹಾಗಾಗಿ ತಳಸಮುದಾಯಗಳ ಸಾಂಸ್ಕೃತಿಕ ನಾಯಕನಾದ ಮಂಟೇಸ್ವಾಮಿಯು ಕಲ್ಯಾಣಕ್ಕೆ ಹೋಗಲೇ ಬೇಕು. "ಎಂಥಾ ಬಂಡಾಯಕ್ಕೂ ಒಂದು ಪರಂಪರೆಯ ಚೌಕಟ್ಟಿನಲ್ಲಿ ಮನ್ನಣೆಗಳಿಸುವ ಬಯಕೆ ಉಂಟು. ಪರಂಪರೆಯ ಚೌಕಟ್ಟಿನೊಳಗೆ ಮೂಡಿಬಂದ ಬಂಡಾಯಕ್ಕೆ ಮಾತ್ರ ಕೊಲೆಗೀಡಾಗುವ ಭಯವಿಲ್ಲ. ಉಳಿದು ಬೆಳೆಯುವ ಭರವಸೆ ಇರುತ್ತದೆ. ಈ ಪ್ರಮೇಯವನ್ನು ರಾಜಕೀಯ, ಸಾಮಾಜಿಕ ದಂಗೆಗಳಿಗೆ ಅನ್ವಯಿಸಲಾಗದಿದ್ದರೂ, ಧರ್ಮದ ಮಟ್ಟಿಗಂತೂ ಪೂರಾ ನಿಜ ಎಂದೇ ಹೇಳಬೇಕು. ಬಂಡಾಯವೂ ಪರಂಪರೆಯ ಜೊತೆಗೆ ನಂಟು ಹಾಕಿಕೊಳ್ಳಲೇಬೇಕು ಎನ್ನುವುದು ವ್ಯಂಗ್ಯದಂತೆ ಕಂಡರೂ ವಾಸ್ತವ". ಏನೇ ಆದರೂ ಮಂಟೇಸ್ವಾಮಿಯ ಬಂಡಾಯಕ್ಕೆ ಸೂಕ್ತ ಪ್ರತಿಫಲಸಿಗುವುದು ಕಲ್ಯಾಣದಲ್ಲಿಯೇ ಆದುದರಿಂದ ಕಲ್ಯಾಣಕ್ಕೆ ಆತನ ಪ್ರಯಾಣ ಅನಿವಾರ್ಯ. ಆದರೆ ಮಂಟೇಸ್ವಾಮಿ ಪ್ರವೇಶಿಸುವ ಕಲ್ಯಾಣ ಆದಿಕಲ್ಯಾಣವಲ್ಲ "ಇದು ಚರಿತ್ರೆಯ ಕಲ್ಯಾಣವಲ್ಲ. ಚರಿತ್ರೆಯ ಕಲ್ಯಾಣದಲ್ಲಿ ಒಂದು ಹಾಳು ಕೋಟೆ ಇದೆ ಅಷ್ಟೇ. ಯಾವ ಮೌಲ್ಯಗಳನ್ನು ಈ ಸಂತರು ತಮ್ಮ ಜೀವನದಲ್ಲಿ ಅಳವಡಿಸಿ ಬೇರೆಯವರಿಗೆ ಅದನ್ನು ಹಂಚುವುದಕ್ಕೆ ಶುರುಮಾಡಿದರೂ ಈ ಮೌಲ್ಯಗಳ ಒಂದು ವಿಕಾಸವನ್ನು ನಾವು ಈ ಪರಂಪರೆಯಲ್ಲಿ ಕಾಣುತ್ತೇವೆ". ಹಾಗಾಗಿಯೇ ನಾಟಕಕಾರರಿಗೂ ಆಧುನಿಕ ಜಗತ್ತು ತಾನು ಕಟ್ಟಿಕೊಂಡಿರುವ ಸಂಸ್ಕೃತಿಯ ಬಿಕ್ಕಟ್ಟುಗಳಿಂದ, ಸಮಸ್ಯೆಗಳಿಂದ ಪಾರಾಗಲು ಕಲ್ಯಾಣವೇ ಸೂಕ್ತವೆನಿಸಿದಂತಿದೆ.

ನಾಟಕವು ಸರ್ವಕಾಲದಲ್ಲೂ ಕಾಣುವ ಮನುಷ್ಯನ ಹೆಣ್ಣು, ಹೊನ್ನು, ಮಣ್ಣನ್ನು ಪಡೆಯುವ ಹಂಬಲದಲ್ಲಿ ದುರಾಸೆ, ಅಹಂಕಾರ, ಚಪಲತೆ, ಚಂಚಲತೆಯು ಎಲ್ಲಾ ಕಾಲದಲ್ಲೂ ಮೇರೆಮೀರಿರುವುದನ್ನು ಚಿತ್ರಿಸುತ್ತದೆ. ಕಲ್ಯಾಣ ಪಟ್ಟಣ ಅರಾಜಕತೆಯ ಸಂಕೇತವಾಗಿದೆ. 12ನೇಯ ಶತಮಾನದಲ್ಲಿ ಬಸವಣ್ಣ ಕಟ್ಟಿದ ಕಲ್ಯಾಣ ಮಂಟೇಸ್ವಾಮಿಯ ಕಾಲಕ್ಕೆ ಅಂದರೆ ಸುಮಾರು 15ನೇಯ ಶತಮಾನದ ಕಾಲಕ್ಕಾಗಲೇ ಜೀವಂತಿಕೆಯನ್ನು ಕಳೆದುಕೊಂಡಿದೆ. ಅಂದು ತೀವ್ರವಾಗಿ ವಿರೋಧಿಸಿದ ಶ್ರೇಣೀಕೃತ ಜಾತಿ ವ್ಯವಸ್ಥೆಯು ಮತ್ತೆ ಜೀವಪಡೆದಿದೆ. ಈ ಸಂದರ್ಭದಲ್ಲಿ ದುಡ್ಡು ನನ್ನದೆನ್ನುವವರ ಒದ್ದು ನೆಲಕೆ ಕೆಡವಬಲ್ಲ, ಹೊನ್ನು ನನ್ನದೆನ್ನುವವರ ಮಣ್ಣುಪಾಲು ಮಾಡಬಲ್ಲ, ಮಣ್ಣು ನನ್ನದೆನ್ನುವವರ ಕಣ್ಣು ಕುರುಡು ಮಾಡಬಲ್ಲ ಪವಾಡ ಪುರುಷ ಮಂಟೇಸ್ವಾಮಿಯನ್ನು ನೀಲಗಾರರು ಆಹ್ವಾನಿಸುತ್ತಾರೆ. ವಚನಕಾರರು ಬಾಳಿ ಬದುಕಿದ್ದ ಕಲ್ಯಾಣ ಈಗ ಕುಲಗೆಟ್ಟು ಹೋಗಿದೆ. ಸಮಾನತೆಯ ಹರಿಕಾರರಾಗ ಬೇಕಾಗಿದ್ದ ಜಂಗಮರು ತಾವೇ ದೇವರ ಅವತಾರ ಎನ್ನುತ್ತ ಜನತೆಯನ್ನು ಮತ್ತದೇ ಕಂದಾಚಾರದಲ್ಲಿ ಬಂಧಿಸಿದ್ದಾರೆ. ಅಷ್ಟೇ ಅಲ್ಲದೆ ರಾಕ್ಷಸ ಮುಖವಾಡ ಧರಿಸಿದ ಜಂಗಮರು ಮತ್ತು ಮಠಾಧಿಪತಿಗಳು, ಪಾಪಿಗಳು, ಕೋಪಿಷ್ಠರು, ಅಸತ್ಯರು, ಅನಾಚಾರಿಗಳು ಕಲ್ಯಾಣದಲ್ಲಿ ನೆಲೆಸಿ ಕೊಲೆ, ಸುಲಿಗೆ, ಮಾನಭಂಗದಂತಹ ನೀಚ ಕೃತ್ಯಗಳಲ್ಲಿಯೂ ತೊಡಗಿದ್ದಾರೆ. ಇದರಿಂದ ನೊಂದ ಬಸವಣ್ಣ ತನಗಿಂತಲೂ ಹೆಚ್ಚಿನ ಗುರುವಿನ ಹುಡುಕಾಟದಲ್ಲಿ ತೊಡಗುತ್ತಾನೆ. ನೀಲಾಂಬಿಕೆಯ ಸಹಕಾರದಂತೆ ತನಗಿಂತಲೂ ಹೆಚ್ಚಾದ ಗುರುವನ್ನು ಪಡೆಯಲು ಕಲ್ಯಾಣದ ಮೂಡಲ ಹೆಬ್ಬಾಗಿಲಿನಲ್ಲಿ 'ನಾಲಿಗಿಲ್ಲದ ಗಂಟೆ, ಒಂದು ಕಲ್ಲು ಕೋಳಿ, ಒಂದು ಕಲ್ಲು ಬಸವನನ್ನು ನಿಲ್ಲಿಸುತ್ತಾರೆ. ಬಸವಣ್ಣನಿಗಿಂತ ದೊಡ್ಡ ಗುರು ಕಲ್ಯಾಣ ಪಟ್ಟಣವನ್ನು ಪ್ರವೇಶಿಸಿದರೆ 'ನಾಲಿಗಿಲ್ಲದ ಗಂಟೆ ನಾದ ಶಬ್ದ ಮಾಡುತ್ತದೆ, ಕಲ್ಲು ಕೋಳಿ ಕೂಗುತ್ತದೆ, ಕಲ್ಲು ಬಸವ ಗುಟುರು ಹಾಕುತ್ತದೆ'. ಹೀಗೆ ಬಸವಣ್ಣ ಮತ್ತು ನೀಲಾಂಬಿಕೆ ತಪಸ್ಸನ್ನು ಆಚರಿಸುತ್ತಾ ಗುರುವಿನ ನಿರೀಕ್ಷೆಯಲ್ಲಿರುವಾಗ ನೀಲಾಂಬಿಕೆಯ ಮಾತಿನಂತೆ ಪವಾಡ ಜರುಗುತ್ತದೆ. ಬಸವಣ್ಣನ ಗದ್ದಿಗೆಯಲ್ಲಿ ಪುಂಡ ಜಂಗಮರಿದ್ದಾರೆ, ನೀತಿ–ನಿಯಮಗಳನ್ನು ಮರೆತ ಜಂಗಮರಿದ್ದಾರೆ ಹಾಗೂ ಶಿವಜ್ಞಾನವ ಮರೆತ ಜಂಗಮರಿದ್ದಾರೆ, ನೇಮವ ತೊರೆದ ಜಂಗಮರಿದ್ದಾರೆ, ಇವರೆಲ್ಲರನ್ನು ಪರೀಕ್ಷಿಸುವ ಸಲುವಾಗಿ ಗುರುವಾದ ಮಂಟೇಸ್ವಾಮಿ ಹರಳಯ್ಯನ ತಿಪ್ಪೆಗುಂಡಿಯ

ISBN – 978-93-5526-247-9

ಮೂಲಕ ಕಲ್ಯಾಣ ಪಟ್ಟಣವನ್ನು ಪ್ರವೇಶಿಸುತ್ತಾನೆ. ಕಾವ್ಯದಲ್ಲಿ ಮಂಟೇಸ್ವಾಮಿ ಕಲ್ಯಾಣವನ್ನು ಪ್ರವೇಶಿಸುವ ಭಾಗ ಬಹಳ ಸುಂದರವಾಗಿ ಮೂಡಿಬಂದಿದೆ

ಅವರು ಕಾಲು ಸೊತ್ತು ಮಾಡಿ
ಗುರುವೇ ಕೈಯಿ ಸೊತ್ತು ಮಾಡಿ
ಅವರು ಕುಷ್ಟರೋಗಿ ಯಾಸವನ್ನೇ
ತಾಳಿಕಂಡರು ಮಾಯಿಕಾರ ಸಿದ್ದಯ್ಯ
........................................

ಹೀಗೆ ವೇಷ ಮರೆಸಿಕೊಂಡು ಬರುತ್ತಾರೆ. ನಾಟಕದಲ್ಲಿ ಹರಳಯ್ಯನ ತಿಪ್ಪೆಯ ಗುಂಡಿಯಲ್ಲಿ ಮೈಯೆಲ್ಲಾ ನಾರುವ ವಾಸನೆಯಿಂದ ಕೂಡಿದವರಾಗಿ ಹೊರ ಬರುವ ಮಂಟೇಸ್ವಾಮಿಯನ್ನು ಜಂಗಮರು ಕಾಡುಪಾಪ, ತಿಪ್ಪೇಹುಳ, ಹೊಲಸು ಮುಂಡೇಗಂಡ, ನೋಡಿದ ತಕ್ಷಣ ವಾಕರಿಕೆ ಬರುತ್ತದೆಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ದೂರ ತಳ್ಳುತ್ತಾರೆ. ಹೀಗೆ ಕಲ್ಯಾಣ ನಗರವನ್ನು ಪ್ರವೇಶಿಸಿದ ಮಂಟೇಸ್ವಾಮಿಯು,

- ವೈದಿಕ ಧರ್ಮ ಅಮಾನ್ಯ ಮಾಡಿದ ವಿಚಾರಗಳನ್ನು ಮಾನ್ಯಮಾಡುವುದು
- ಸ್ಥಾವರ ಲಿಂಗದ ನಿರಾಕರಣೆ ಮಾಡುವುದು
- ಮಠಾಧಿಪತಿಗಳ ಧೋರಣೆಯನ್ನು ಖಂಡಿಸುವುದು, ಈ ಮೂಲಕ ಬಂಡಾಯವೇಳುತ್ತಾನೆ.

## ವೈದಿಕ ಧರ್ಮ ಅಮಾನ್ಯ ಮಾಡಿದ ವಿಚಾರಗಳನ್ನು ಮಾನ್ಯಮಾಡುವುದು:

12ನೇ ಶತಮಾನದ ತರುವಾಯ ಬಸವಣ್ಣ ಹಾಗೂ ಅಲ್ಲಮಪ್ರಭುಗಳಿಂದ ಪ್ರಾರಂಭಗೊಂಡ ವಚನ ಚಳುವಳಿ ತನ್ನ ಅಸ್ಥಿತ್ವವನ್ನು ಕಳೆದುಕೊಂಡಿತು. ಇದಕ್ಕೆ ಮೂಲ ಕಾರಣ ಎಲ್ಲಾ ಜಾತಿಗಳು ಒಂದುಗೂಡಿ ಒಂದು ಜಾತ್ಯಾತೀತ ಪರಿಸರ ನಿರ್ಮಿಸ ಬೇಕಾಗಿದ್ದ ಶರಣಚಳುವಳಿ ಅಥವಾ ಲಿಂಗಾಯತ ಧರ್ಮ ಜಾತಿಯಾಗಿ ಮಾರ್ಪಟ್ಟು ವೈದಿಕರ ತೆಕ್ಕೆಗೆ ಒಳಗಾಯಿತು. ಸುಮಾರು 15–17ನೇಯ ಶತಮಾನದಲ್ಲಿ ಬಂದವನೆಂದು ಹೇಳಲಾಗುವ ಮಂಟೇಸ್ವಾಮಿ ಶಿಷ್ಟ ಅಥವಾ ವೈದಿಕ ಸಂಸ್ಕೃತಿ ಯಾವುದನ್ನು ತುಚ್ಚವೆಂದು ನಿರಾಕರಿಸಿತ್ತೋ ಅಂತಹ ವಸ್ತುಗಳನ್ನೇ ತನ್ನ ಪರಂಪರೆಯ ಧಾರ್ಮಿಕ ಸಂಕೇತಗಳಾಗಿ ಮಾರ್ಪಡಿಸುವುದರ ಮೂಲಕ ಬಂಡಾಯವೇಳುತ್ತಾನೆ. ಹಾಗಾಗಿ ಮೊದಲಿಗೆ ಮಂಟೇಸ್ವಾಮಿ ಕಲ್ಯಾಣದಲ್ಲಿ ಕಾಣಿಸಿಕೊಳ್ಳುವುದು ಹರಳಯ್ಯನ ತಿಪ್ಪೆಗುಂಡಿಯಲ್ಲಿ ಕೀವು–ರಸಕಿನಿಂದ ನಾರುವ ಕೊಳಕು ಜಂಗಮನಾಗಿ. ಲಿಂಗವಂತರೆಂದು ಮೆರೆಯುತ್ತಿದ್ದ ಜಂಗಮರೆಲ್ಲಾ ಇವನನ್ನು ನಿರಾಕರಿಸುತ್ತಾರೆ. ಹೀಗೆ ತಮ್ಮನ್ನು ನಿರಾಕರಿಸಿದವರ ವಿರುದ್ಧ ಹಲವಾರು ಪ್ರತಿಭಟನೆಗಳು ಜರುಗುತ್ತವೆ. ಇಂತಹ ಪ್ರತಿಭಟನೆಗಳನ್ನು ಮಂಟೇಸ್ವಾಮಿಯ ಈ ಪ್ರಸಂಗವು ಹೇಳುತ್ತಿರುವುದರಿಂದ ಅದು ಐತಿಹಾಸಿಕವಾಗಿ ಕೇವಲ 12ನೇ ಶತಮಾನದ ಬಗ್ಗೆ ಮಾತ್ರ ಹೇಳುತ್ತಿಲ್ಲ ಬದಲಿಗೆ ನಂತರದ ದಿನಗಳಲ್ಲಿ ಏಕಮುಖವಾಗಿ ಬೆಳವಣಿಗೆಯನ್ನು ಹೊಂದಿದ ವೀರಶೈವ ಧರ್ಮವನ್ನು ತೀವ್ರವಾಗಿ ವಿರೋಧಿಸುತ್ತಿದೆ. ಅದರೊಂದಿಗೆ ಶಿಷ್ಟ ಪರಂಪರೆ ಸೃಷ್ಟಿಸಿದ ನಾಯಕ ಕಲ್ಪನೆಯನ್ನು ಹೊಡೆದು ಹಾಕಿ ವಿಲಕ್ಷಣ ನಾಯಕನನ್ನು ತಮ್ಮ ನಾಯಕನನ್ನಾಗಿಸಿಕೊಂಡಿರುವುದು ಹಾಗೂ ಅಪವಿತ್ರವೆಂದ ವಸ್ತುಗಳಿಂದ ಪವಿತ್ರತೆಯನ್ನು ಹುಟ್ಟುಹಾಕಿದೆ. ವೈದಿಕ ಧರ್ಮದ ಸಂಕೇತಗಳಾದ ಜುಟ್ಟು–ಜನಿವಾರ, ವಿಭೂತಿ–ನಾಮಧಾರಣೆ, ಮುದ್ರೆಗಳು, ಶಿಲುಬೆಯ ಚಿಹ್ನೆಗಳ ಬದಲಿಗೆ ತಳಸಮುದಾಯದ ಸಂಕೇತಗಳಾದ ಮಧ್ಯ, ಮಾಂಸ, ಭಂಗೀ, ಕುಷ್ಠರೋಗ, ಕೊಳಕು ದೇಹ, ಕೊಳಕು ವಸ್ತ್ರಗಳು ತಳಸಮುದಾಯದ ಸಂಕೇತಗಳಾಗಿ ಮಾರ್ಪಟ್ಟವು. “ಒಂದು ಕಾಲ ಘಟ್ಟದ ನಂತರ ಎಲ್ಲಾ ಧರ್ಮಗಳು ಢೋಂಗೀ ಜನರನ್ನು ಆಕರ್ಷಿಸುತ್ತದೆ ಮತ್ತು ಆ ಬಗೆಯ ಹೆಚ್ಚಿನ ಅನುಯಾಯಿಗಳು ಆ ಧರ್ಮದ ಬಾಹ್ಯ ಲಕ್ಷಣಗಳಿಗೇ ಬೆಲೆ ಕೊಡುತ್ತಾ ಅದರ ಮೂಲ ತತ್ವಗಳನ್ನು ಮರೆಯುತ್ತಾರೆ ಎಂಬ ಅಂಶವನ್ನು ಮಂಟೇಸ್ವಾಮಿಯು ಮಾಡುವ ಶರಣ ಧರ್ಮದ ಟೀಕೆಯಲ್ಲಿ ನಾವು ಕಾಣಬಹುದು. ಇನ್ನೂ ಮುಖ್ಯವಾಗಿ ಹೇಗೆ ಮಾನವ ಸಮುದಾಯಗಳು ಯಾವುದಾದರೂ ರೂಪದ (ವಿಗ್ರಹ, ಧ್ವಜ, ನ್ಯಾಯಾಸ್ಥಾನ ಇತ್ಯಾದಿ) ಸಂಕೇತವಿಲ್ಲದೆ ಬದುಕಲಾರರು: ಮತ್ತು ಕೆಲಕಾಲ ನಂತರ ಆ ಬಗೆಯ ಸಂಕೇತಗಳೇ ವಾಸ್ತವಕ್ಕಿಂತ ಮುಖ್ಯವಾಗುತ್ತವೆ ಎಂಬುದನ್ನು ನಾವು ಗ್ರಹಿಸಬಹುದು”.[33] ಇಲ್ಲಿ ಮಂಟೇಸ್ವಾಮಿಯು ವೈದಿಕ ಧರ್ಮದ ಈ ಸಂಕೇತಗಳನ್ನು ನಿರಾಕರಿಸುವುದರಿಂದ

ISBN – 978-93-5526-247-9

ಆತ ಹೆಂಡದ ಗಡಿಗೆ, ಭಂಗೀ, ಮಧ್ಯಪಾನ ಮಾಡಿದವನಾಗಿ ಹರಳಯ್ಯನ ತಿಪ್ಪೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಇದು ವೈದಿಕ ಧರ್ಮದ ವಿರುದ್ಧ ಮಂಟೇಸ್ವಾಮಿಯ ಬಹು ದೊಡ್ಡ ಪ್ರತಿರೋಧವಾಗಿ ಕಂಡುಬರುತ್ತದೆ. ಹೀಗೆ ಪ್ರವೇಶಿಸಿದ ಮಂಟೇಸ್ವಾಮಿಯನ್ನು ಜಂಗಮರು "ಹೊಲಸು ಮುಂಡೇಗಂಡ, ಏ ತಿಪ್ಪೇಹುಳ ದೂರ ಹೋಗು, ಹತ್ರ ಬಂದು ನಮ್ಮನ್ ಮೈಲ್ಗೆ ಮಾಡಬೇಡ" ಎಂದು ಹೀನಾಯವಾಗಿ ಜರಿಯುತ್ತಾರೆ. ಮಂಟೇಸ್ವಾಮಿ ತನ್ನನ್ನು ಬಸವಣ್ಣನ ಗುರುವೆಂದು ಹೇಳಿದಾಗ ಗುರುವಿನ ಸಂಕೇತಗಳೆಂದು ವೈದಿಕ ಪರಂಪರೆ ಭಾವಿಸಿದ್ದ ರುದ್ರಾಕ್ಷಿ, ವಿಭೂತಿ, ಲಿಂಗ, ಕಮಂಡ್ಲಗಳೆಲ್ಲಿ ಎಂದು ಪ್ರಶ್ನಿಸುತ್ತಾರೆ. ಕೇವಲ ಬಾಹ್ಯ ಚಿಹ್ನೆಗಳಿಗೆ ಬೆಲೆಕೊಡುವ ಜಂಗಮರ ಅಜ್ಞಾನವನ್ನು ನಾಟಕ ಹೀಗೆ ಚಿತ್ರಿಸುತ್ತದೆ.

> ಜಂಗಮ 1: ನೀನ್ ಗುರು ಆಗಿದ್ರೆ ಕೊಳ್ಳಾಗಿನ್ ರುದ್ರಾಕ್ಷಿ ಎಲ್ಲಿ?
> ಜಂಗಮ 2: ಅಣೆ ಮೇಲೆ ಈಬತ್ತಿ ಎಲ್ಲಿ?
> ಜಂಗಮ 1: ಎದೆ ಮೇಲೆ ಲಿಂಗ ಎಲ್ಲಿ
> ಜಂಗಮ 2: ಕೈಯಲ್ಲಿ ಕಮಂಡ್ಲ ಎಲ್ಲಿ
> ಜಂಗಮ 1: ಇವೆಲ್ಲ ಇಲ್ದಿದ್ ಮೇಲೆ ನೀನ್ಯಾವ ಸೀಮೆ ಗುರುನೋ?

ಎಂದು ಜರಿದು ಮಂಟೇಸ್ವಾಮಿಯನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಗುರುವಿನ ಮಹಿಮೆಯನ್ನು ಅರಿತ ಬಸವಣ್ಣ ಅವರನ್ನು ತನ್ನ ಮಹಾಮನೆಗೆ ಕರೆದುಕೊಂಡು ಹೋಗುತ್ತಾನೆ. ಅದನ್ನು ಸಹಿಸದ ಜಂಗಮರು ಬಸವಣ್ಣನನ್ನು ತೊರೆದು ಹೋದಾಗ ಮಾಯವಾದ ಅವರ ಲಿಂಗಗಳನ್ನು ಮಂಟೇಸ್ವಾಮಿ ಹುಡುಕಲು ಹೇಳುವುದು ಈ ಸುರದ ಗಡಿಗೆಯಲ್ಲಿಯೇ.

### ಸ್ಥಾವರ ಲಿಂಗದ ನಿರಾಕರಣೆ ಮಾಡುವುದು:

ನಾಟಕವು ಲಿಂಗ ಪರಿಕಲ್ಪನೆಯನ್ನು ಯಾವ ರೀತಿಯಾಗಿ ನೋಡುತ್ತದೆ ಎನ್ನುವುದನ್ನು ಗಮನಿಸುವುದಕ್ಕೂ ಮುನ್ನ 12ನೇ ಶತಮಾನದಲ್ಲಿ ಶರಣರು ಲಿಂಗ ಪರಿಕಲ್ಪನೆಯ ಬಗೆಗೆ ತಳೆದ ನಿಲುವು ಮುಖ್ಯವಾಗುತ್ತದೆ. ಶರಣರು ಸ್ಥಾವರ ಲಿಂಗಗಳನ್ನು ನಿರಾಕರಿಸಿ ಇಷ್ಟಲಿಂಗಗಳನ್ನು ಕೊಟ್ಟರು. ಏಕೆಂದರೆ ಸ್ಥಾವರ ಲಿಂಗಗಳಿರುವ ಕಡೆಗಳಲ್ಲಿ ಕೆಳಜಾತಿಯವರಿಗೆ ಪ್ರವೇಶವಿರಲಿಲ್ಲ. ಯಾವ ದೇವರನ್ನು ಕೆಳವರ್ಗದ ಜನರು ಪೂಜಿಸಲು ಅವಕಾಶವಿರಲಿಲ್ಲವೋ ಆ ದೇವರನ್ನು ಬಸವಣ್ಣ ತನ್ನ ವಚನವೊಂದರಲ್ಲಿ 'ಉಳ್ಳವರು ಶಿವಾಲಯವ ಮಾಡುವರು' ಎಂದು ನಿರಾಕರಿಸಿದರೆ, ಪ್ರಭುದೇವರು 'ದೇವ ಬಂದರೆ ದೇಗುಲ ಓಡಿದ್ದ ಕಂಡೆ' ಇದು ದೇವಸ್ಥಾನ, ಇದು ನನಗೆ ಬೇಡ. ಮಾದಾರ ಚೆನ್ನಯ್ಯನಂತಹ ನಿಜ ದೈವತ್ವವನ್ನು ಅಂಗೀಕರಿಸಿಕೊಂಡಿರುವಂತನನ್ನು ಒಳಗೊಳ್ಳದ ದೇವಸ್ಥಾನ ಬೇಡ ಎಂದು ದೇವಸ್ಥಾನವನ್ನು ನಿರಾಕರಿಸಿದರು. ಸ್ಥಾವರ ಲಿಂಗವನ್ನು ನಿರಾಕರಿಸಿ ಇಷ್ಟ ಲಿಂಗವನ್ನು ಕೊಟ್ಟರು. ಆದರೆ ಶರಣರು ನೀಡಿದ ಈ ಇಷ್ಟಲಿಂಗ ಪರಿಕಲ್ಪನೆಯೂ ಕೂಡ ಮತ್ತೆ ಸ್ಥಾವರ ರೂಪ ಪಡೆಯಿತು. ಈ ಸ್ಥಾವರವನ್ನು ಮತ್ತೊಮ್ಮೆ ಜಂಗಮಗೊಳಿಸುವ ಪ್ರಕ್ರಿಯೆಯನ್ನು ನಾಟಕವು ಪ್ರಸ್ತುತ ಪಡಿಸುತ್ತದೆ. ಯಾವಾಗ ಮಂಟೇಸ್ವಾಮಿ ಕಲ್ಯಾಣವನ್ನು ಪ್ರವೇಶಿಸುತ್ತಾನೋ ಆಗ ಈ ಜಂಗಮಯ್ಯಗಳು ಮಂಟೇ ಸ್ವಾಮಿಯನ್ನು ಕಲ್ಯಾಣದೊಳಕ್ಕೆ ಸೇರಿಸುವುದಿಲ್ಲ. ಏಕೆಂದರೆ ಕೊರಳಲ್ಲಿ ಲಿಂಗವಿಲ್ಲ, ಹಣೆಯಲ್ಲಿ ವಿಭೂತಿಯಿಲ್ಲ, ನೀನೆಂತಹ ಜಂಗಮ ನೀನೇಕೆ ಬಂದೆ ಎನ್ನುತ್ತಾರೆ. ಆದರೆ ಮಂಟೇಸ್ವಾಮಿ ತನ್ನ ಪವಾಡದ ಮೂಲಕ ಅವರ ಲಿಂಗಗಳನ್ನು ಮಾಯ ಮಾಡುತ್ತಾನೆ. ಬಸವಣ್ಣನನ್ನು ಬಿಟ್ಟು ಹೋಗಿದ್ದ ಜಂಗಮರು ಲಿಂಗಗಳನ್ನು ಹುಡುಕಿ ಬಂದಾಗ ಲಿಂಗಗಳು ಮಂಟೇಸ್ವಾಮಿಯ ಹೆಂಡದ ಗಡಿಗೆಯಲ್ಲಿರುತ್ತವೆ. ಆಗ ಮಂಟೇಸ್ವಾಮಿ 'ನೋಡಿ ನಿಮ್ಮ ಲಿಂಗಗಳು ಈ ಮಡಿಕೆಯಲ್ಲಿವೆ ತೆಗೆದುಕೊಳ್ಳಿ' ಎನ್ನುತ್ತಾನೆ. ಆಗ ಜಂಗಮರು ಅದನ್ನು ಮುಟ್ಟಲಾರರು ಬಿಡಲಾರರು ಅಂತಹ ಪರಿಸ್ಥಿತಿ, ಮುಟ್ಟಿದರೆ ತಮ್ಮ ಜಾತಿ ಹೊರಟು ಹೋಗುತ್ತದೆ, ಮುಟ್ಟದಿದ್ದರೆ ತಮ್ಮ ಲಿಂಗ ಸಿಗುವುದಿಲ್ಲ. ಕೊನೆಗೆ ಮಂಟೇಸ್ವಾಮಿ 'ನೋಡಿ ಜಂಗಮರಾ ನೀವು ಉಳಿ ಮುಟ್ಟಿದ ಲಿಂಗವ ನೀವು ಬಿಟ್ಟು ಬಿಡಿ, ಉಳಿ ಮುಟ್ಟದ ಲಿಂಗವನ್ನು ಇಟ್ಟುಕೊಂಡು ನೀವು ಐಕ್ಯವಾಗಿ ಹೋಗಿರಪ್ಪ ಎನ್ನುತ್ತಾನೆ. ಅಂದರೆ ದೇವಸ್ಥಾನದಲ್ಲಿನ ಲಿಂಗಗಳು ಉಳಿಯಲ್ಲಿ ಮಾಡಿದ್ದು ಅಂದರೆ ಮಂಟೇಸ್ವಾಮಿ ಆ ಲಿಂಗಗಳನ್ನು ಬೇಡ ಎನ್ನುವುದಕ್ಕೆ ನಿಜವಾದ ಕಾರಣ ಇದು ಮನುಷ್ಯನಿಂದ ನಿರ್ಮಿತಗೊಂಡಿರುವುದು. ಈ ಉಳಿ ಮುಟ್ಟದ ಲಿಂಗವನ್ನು ಮಂಟೇಸ್ವಾಮಿ ಸೂಚಿಸುವ ಉದ್ದೇಶ ಮನುಷ್ಯ ತನ್ನ ಅಂತರಂಗದ ಜ್ಯೋತಿಯನ್ನು ಬೆಳಗಿಸಿಕೊಳ್ಳಬೇಕು

ISBN – 978-93-5526-247-9

ಎನ್ನುವುದಾಗಿದೆ. ಆ ಅಂತರಂಗದ ಜ್ಯೋತಿಯನ್ನು ನಿರಾಕರಿಸಿದರೆ ದೇವಾಲಯದ ಲಿಂಗ ಸ್ಥಾವರಗೊಳ್ಳುವುದರೊಂದಿಗೆ ಇಷ್ಟಲಿಂಗವೂ ಸ್ಥಾವರಗೊಳ್ಳುತ್ತದೆ ಎಂಬ ಕಾರಣಕ್ಕಾಗಿ ಉಳಿ ಮುಟ್ಟದ ಲಿಂಗವನ್ನು ಇಟ್ಟುಕೊಳ್ಳಿ ಎಂಬ ಸಲಹೆಯನ್ನು ನೀಡುತ್ತಾನೆ. ಜಂಗಮರ ವರ್ತನೆಯಲ್ಲಿ ಯಾವುದೇ ಬದಲಾವಣೆಗಳಾಗದೆ ಜಂಗಮರು ಅವನನ್ನು ಮಾಟಗಾರ, ಮಂತ್ರಗಾರನೆಂದು ಜರೆದು, ಅವನ ಮೇಲೆ ಉಗುಳತ್ತಾರೆ. ಆಗ ಬಸವಣ್ಣನನ್ನು ಕುರಿತು " ಅಪ್ಪಾ ಬಸವಣ್ಣೋರೆ, ಈ ಉಳಿ ಮುಟ್ಟದ ಲಿಂಗವನ್ನು ಕಂಡ್‌ಕೊಳಕ್ಕೋಸ್ಕರ ನಾವು ಎಷ್ಟೋ ಕೋಟಿ ವರ್ಷ ಏಲು, ಉಚ್ಚೆ, ಉಗುಳಿನ ಪರ್ವತಗಳಲ್ಲಿ ನಿಂತ್ಕಂಡು ಸಿವಧ್ಯಾನವನ್ನ ಮಾಡಿದ್ದೀವಿ ಕಣಪ್ಪ, ಇವ್ರ ಉಗ್ತ ನಮಗೆ ಇನ್ಯಾವ ಮೂಲೆಗೆ? ಸಂದಾಗಿ ಗೆಪ್ತಿ ಮಡಿಕಳ್ಳಿ ಬಸವಣ್ಣೋರೆ "ನೀವು ಕಟ್ಟಿದ ಕಲ್ಯಾಣ ಕರಗೋಯ್ತದೆ ಮಾಮನೆ ಮಣ್ಣಾಯ್ತದೆ, ನೀವಿನ್ನ ಕಲಿ ಬತ್ತಾ ಇರ್ವಾಗ ಉಳಿ ಮುಟ್ಟದ ಲಿಂಗವನ್ನು ಬಿಟ್ಟು, ಉಳಿ ಮುಟ್ಟದ ಲಿಂಗವನ್ನು ಇಡ್ಕಂಡು ಐಕ್ಯವಾಗೋಗಿ" ಎಂದು ಮಂಟೇಸ್ವಾಮಿ ಬಸವಣ್ಣನಿಗೆ ಕಲ್ಯಾಣದ ಜಂಗಮರ ನಿಜ ಸ್ವರೂಪವನ್ನು ಪರಿಚಯಿಸುತ್ತಾನೆ.

**ಮಠಾಧಿಪತಿಗಳ ವಿಡಂಬನೆ :**

ನಾಟಕದ ಆರಂಭದಲ್ಲಿ ಇಂದಿನ ಜಂಗಮರು, ಹಾಗೂ ಮಠಾಧಿಪತಿಗಳನ್ನು ನೇರವಾಗಿ ವಿಡಂಬಿಸಿದ್ದಾರೆ. ಹಿಂದೆ ಜನ ಸಾಮಾನ್ಯರನ್ನು ಸರಿ ಮಾರ್ಗದಲ್ಲಿ ನಡೆಯುವಂತೆ ದಾರಿ ತೋರುತ್ತಿದ್ದ ಮಠಗಳು ಮತ್ತು ಮಠಾಧಿಪತಿಗಳು ಇಂದು ಅವ್ಯವಸ್ಥೆಯ ಆಗರವಾಗಿವೆ. ಸಾಂಸಾರಿಕ ಜೀವನವನ್ನು ತೊರೆದು ಜಗತ್ತಿನ ಏಳಿಗೆಗೆಂದು ತಮ್ಮ ಜೀವನವನ್ನು ಮುಡುಪಾಗಿಟ್ಟು ಸಂನ್ಯಾಸವನ್ನು ಸ್ವೀಕರಿಸಿ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ್ದವರು ಇಂದು ಹಣದ ಮೋಹಕ್ಕೆ ಒಳಗಾಗಿ ದುಷ್ಟ–ಭ್ರಷ್ಟ ವ್ಯಕ್ತಿಗಳನ್ನು ಪೋಷಿಸುವ ಹೊಣೆಯನ್ನು ಹೊತ್ತವರಂತೆ ಕಂಡು ಬರುತ್ತಿದ್ದಾರೆ. ಹಾಗಾಗಿಯೇ ನಾಟಕದ ಪ್ರಾರಂಭದಲ್ಲಿ ಬರುವ ಜಂಗಮರು ಮತ್ತು ಮಠಾಧಿಪತಿಗಳನ್ನು ನಾಟಕಕಾರರು "ರಾಕ್ಷಸ ಮುಖವಾಡ ಧರಿಸಿದವರು" ಎಂದು ಜರಿಯುತ್ತಾರೆ. ಹೀಗೆ ಹೊರಗೊಂದು ಒಳಗೊಂದು ಮುಖವಾಡವನ್ನು ಧರಿಸಿರುವ ಇವರು ಲೈಂಗಿಕ ಶೋಷಣೆಯಲ್ಲಿ ತೊಡಗಿರುವುದು ಕಂಡು ಬರುತ್ತದೆ.

ಬಸವಣ್ಣ ಕಟ್ಟಿದ ಕಲ್ಯಾಣ ಸಮಾಜಕ್ಕೆ ಮಾದರಿಯಾದ ಕಲ್ಯಾಣವಾಗಿತ್ತು. ಶಾಂತಿ, ಸಮಾನತೆ, ಸೌಹಾರ್ದತೆಯಿಂದ ಮಾದರಿಯಾಗಿ ಬಾಳಿ ಬದುಕುತ್ತಿದ್ದ ಕಲ್ಯಾಣದಂತ ಪಟ್ಟಣದಲ್ಲಿಯೇ ಕೊಲೆ, ಸುಲಿಗೆ, ಮಾನಭಂಗಗಳು, ಮೋಸ ವಂಚನೆಗಳು ಜರುಗುತ್ತಿದ್ದು, ಅದಕ್ಕೆ ಮೂಲ ಕಾರಣರು ಜಂಗಮರು ಮತ್ತು ಮಠಾಧಿಪತಿಗಳೇ ಆಗಿರುವುದನ್ನು ಕಾಣುತ್ತೇವೆ. ಕಲ್ಯಾಣದ ಇಂತಹ ಸ್ಥಿತಿಗೆ ಬಸವಣ್ಣ ನೀಲಾಂಬಿಕೆಯರೂ ದುಃಖಿತರಾಗಿದ್ದು ತಮಗಿಂತಲೂ ಹೆಚ್ಚಿನ ಗುರುವಿನ ಹುಡುಕಾಟದಲ್ಲಿ ತೊಡಗಿದ್ದಾರೆ. ಬಸವಣ್ಣ ಮತ್ತು ನೀಲಾಂಬಿಕೆಯರ ಹೆಚ್ಚಿನ ಗುರುವಿನ ಹುಡುಕಾಟವನ್ನು ಕಲ್ಯಾಣದ ಜಂಗಮರು ಮತ್ತು ಮಠಾಧಿಪತಿಗಳು ಜರೆಯುತ್ತಾರೆ. ತಮಗಿಂತಲೂ ಹೆಚ್ಚಿನ ಗುರು ಇರಲು ಸಾದ್ಯವಿಲ್ಲವೆಂದು ಅಹಂಕಾರದಿಂದ ಬೀಗುತ್ತಾರೆ.

ಜಗದ್ಗುರು : ಲೋ ಉದ್ಧಟ, ಕೇಳು. ನಾವು ಯಾರು, ಸರಿಯಾಗಿ ಕೇಳಿಸಿಕೊಂಡು ಚಾಚೂ ತಪ್ಪದೆ ಆ ನಿನ್ನ ಯಜಮಾನರಿಗೆ ಒಪ್ಪಿಸು. ಅಪ್ಪಾ ಶಿಷ್ಯರಾ, ನಮ್ಮ ಬಿರುದು ಹೇಳ್ರಪ್ಪ.

ಪಲ್ಲಕ್ಕಿಯವ 1 : ಸಮಾಜ ಸೇವಾ ದುರಂಧರ....

ಜಗದ್ಗುರು :– ಈ ಕ್ಷೇತ್ರದಲ್ಲಿ ನಮ್ಮ ಸೇವೆ?

ಪಲ್ಲಕ್ಕಿಯವ 2 : ಆರು ಮೆಡಿಕಲ್ ಕಾಲೇಜು, ಹನ್ನೆರಡು ಇಂಜಿನಿಯರಿಂಗ್ ಕಾಲೇಜು....

ಪಲ್ಲಕ್ಕಿಯವ 3 : ಇಪ್ಪತ್ತಾರು ಫಸ್ಟ್‌ಗ್ರೇಡ್ ಕಾಲೇಜು, ಐವತ್ತೆರಡು ಜ್ಯೂನಿಯರ್ ಕಾಲೇಜು...

ಪಲ್ಲಕ್ಕಿಯವ 4 : ನೂರಾರು ಇಂಗ್ಲೀಷ್ ಮೀಡಿಯಂ ಸ್ಕೂಲುಗಳು...

ಪಲ್ಲಕ್ಕಿಯವ 1 : ಅನಾಥ ರಕ್ಷಕ ಕೃಪಾಕರ...........

ಇಂದು ಮಠಾಧಿಪತಿಗಳು ಮಾಡುತ್ತಿರುವ ಅನ್ಯಾಯ ಅಕ್ರಮಗಳನ್ನು ಮೇಲಿನ ಮಾತುಗಳಲ್ಲಿ ಕಾಣುತ್ತೇವೆ. ಇಲ್ಲಿ ತನ್ನ ಸಾಧನೆಗಳೆಂದು ಹೇಳಿಕೊಂಡು ಬೀಗುತ್ತಿರುವ ಜಗದ್ಗುರು ಇಂದಿನ ಮಠಾಧಿಪತಿಗಳ ಅನೈತಿಕತೆಯ ಸಂಕೇತವಾಗಿ ಕಂಡು ಬರುತ್ತಾನೆ. ಮಠಗಳು ಆಧ್ಯಾತ್ಮ ಕೇಂದ್ರಗಳು. ಧರ್ಮ ಭೋಧನೆ ಹಾಗೂ ಧರ್ಮ ಪ್ರಸಾರ ಆ ಕೇಂದ್ರದ ಮುಖ್ಯ ಕೆಲಸವಾಗಿರುತ್ತದೆ. ಈ ಮಠಗಳಲ್ಲಿರುವ ಮಠಾಧಿಪತಿಗಳ ಮುಖ್ಯ ಕಲಸ ಜ್ಞಾನಾನ್ವೇಷಣೆ ಮತ್ತು

ISBN – 978-93-5526-247-9

ಜ್ಞಾನಪ್ರಸಾರ. ಲೌಕಿಕ ವ್ಯವಹಾರಗಳನ್ನು ತ್ಯಜಿಸಿ ಗಹನವಾದ ತಾತ್ತ್ವಿಕ ವಿಚಾರಗಳ ಅನ್ವೇಷಣೆಯಲ್ಲಿ ತೊಡಗಿರುವುದು, ಹಾಗೂ ತನ್ನ ಸಿದ್ಧಿಯಿಂದ ಗಳಿಸಿದ ಜ್ಞಾನವನ್ನು ತನ್ನ ಶಿಷ್ಯರಿಗೆ ಮತ್ತು ಸಮಾನ್ಯರಿಗೆ ಭೋದಿಸುವ ಕಾರ್ಯದಲ್ಲಿ ತೊಡಗುವುದು. ಬಸವಣ್ಣನ ಕಾಲದಲ್ಲಿ ಕಲ್ಯಾಣದಲ್ಲಿದ್ದ ಅನುಭವ ಮಂಟಪ ಹಲವಾರು ಶಿಷ್ಯರನ್ನು ಒಳಗೊಂಡ ಸಾಂಸ್ಕೃತಿಕ ಕೇಂದ್ರವಾಗಿತ್ತು. ಇಲ್ಲಿ ಅನ್ನದಾಸೋಹ, ಜ್ಞಾನದಾಸೋಹಗಳು ನಡೆಯುತ್ತಿದ್ದವು. ಆದರೆ ಇಂತಹ ಆಧ್ಯಾತ್ಮಿಕ ಕೇಂದ್ರಗಳಲ್ಲಿ ಇಂದು ಬೀದಿ ಕಾಮಣ್ಣರಂತಹ ಪುಂಡ ಪೋಕರಿಗಳು ಕುಳಿತು ದರ್ಬಾರನ್ನು ನಡೆಸುತ್ತಾ, ಧಾರ್ಮಿಕ ಜಾಗೃತಿಯನ್ನು ಮೂಡಿಸುವ ಕಡೆಯಲ್ಲಿ ಗೂಂಡಾ ಪಡೆಗಳನ್ನು ಹುಟ್ಟುಹಾಕುತ್ತಿವೆ. ರಾಜಕಾರಣಿಗಳು ನಡೆಸುವಂತೆ ಬಲಪ್ರದರ್ಶನಗಳನ್ನು ನಡೆಸುತ್ತ, ಸಾಮಾಜಿಕರಿಗೆ ಧಾರ್ಮಿಕ ಬೆದರಿಕೆಗಳನ್ನು ಒಡ್ಡುತ್ತ ಬೆಳೆಯುತ್ತಿವೆ. ಹಣ, ಆಸ್ತಿ, ಸಂಪತ್ತನ್ನು ಗಳಿಸುವ ಆಸೆ ಬುರುಕತನ ಹೆಚ್ಚಾಗಿ ಬೆಳೆದಿದೆ. ಹಾಗಾಗಿಯೇ ನಾಟಕಕಾರರು ಇಂದಿನ ಜಗದ್ಗುರುವು ಸ್ಥಾಪಿಸಿರುವ ಶಿಕ್ಷಣ ಸಂಸ್ಥೆಗಳು, ಅನಾಥಾಶ್ರಮಗಳು, ಆಸ್ಪತ್ರೆಗಳು, ಅಂಧಾಶ್ರಮಗಳು, ಯೋಗಾಶ್ರಮ, ವೃದ್ಧಾಶ್ರಮಗಳು, ಬಡವರ, ದೀನ-ದಲಿತರ ಉದ್ಧಾರಕ್ಕಾಗಿ ಅಲ್ಲದೆ ಹಣಗಳಿಕೆಯ ತಂತ್ರವಾಗಿ ಬೆಳವಣಿಗೆ ಹೊಂದುತ್ತಿರುವುದನ್ನು ತಮ್ಮ ನಾಟಕದಲ್ಲಿ ಕಟುವಾಗಿ ಟೀಕಿಸುತ್ತಾರೆ.

**ಪರಾಮರ್ಶನ ಗ್ರಂಥಗಳು**

1. ಮಲೆಯ ಮಾದಪ್ಪನ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಡಾ.ವೆಂಕಟೇಶ ಇಂದ್ವಾಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.
2. ಮಂಟೇಸ್ವಾಮಿ ಸೃಜನಶೀಲ ಅನುಸಂಧಾನ, ಎಚ್.ಎಸ್.ಶಿವಪ್ರಕಾಶ್, ಕನ್ನಡ ಅಧ್ಯಯನ, ಮಳೆ ಸಂಚಿಕೆ.
3. ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಡಿ.ಆರ್.ನಾಗರಾಜ್
4. ವಿಸರ್ಜಿತ ಲೋಕಗಳಿಂದ ಹುಟ್ಟಿ ಬಂದ ಆಧ್ಯಾತ್ಮಿಕ ದಂಗೆ ಕೋರ, ಲೇಖನ, ಡಿ.ಆರ್.ನಾಗರಾಜ್, ಮಂಟೇಸ್ವಾಮಿ ಕಾವ್ಯ, ಸಂಪಾದಕರು-ವೆಂಕಟೇಶ ಇಂದ್ವಾಡಿ, 2004.
5. ಮಂಟೇಸ್ವಾಮಿ ಕಾವ್ಯ-ಅಂತರ್ ಪಠ್ಯೀಯತೆ- ಲೇಖನ, ಸಿ.ಎನ್.ರಾಮಚಂದ್ರನ್, ಮಂಟೇಸ್ವಾಮಿ ಕಾವ್ಯ, ಸಂಪಾದಕರು-ವೆಂಕಟೇಶ ಇಂದ್ವಾಡಿ, 2004.

***

ISBN – 978-93-5526-247-9

# 38. ಜನಪದ ಮಹಾಕಾವ್ಯಗಳನ್ನು ಹಾಡುವ ವೃತ್ತಿಗಾಯಕರ ಕಲೆ ಮತ್ತು ಬದುಕು

**ಪ್ರೊ. ಹರೀಶ ಎಂ.ಸಿ**

ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ–ತಲೆಮಾರುಗಳಿಂದ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಜ್ಞಾನವೇ ಜಾನಪದ. ಅನಕ್ಷರಸ್ಥರಿಂದ ಅರಳಿ ಅಕ್ಷರಸ್ಥರನ್ನು ಆಶ್ಚರ್ಯಗೊಳಿಸಿರುವ ಜನಪದ ಮನಸ್ಸು–ಮನಸ್ಸುಗಳ ನಡುವೆ ಕಂದಕವನ್ನು ಹೋಗಲಾಡಿಸುವಂತಹ ಮದ್ದು, ಸಹಬಾಳ್ವೆ, ತಾಳ್ಮೆ, ಸಹಿಷ್ಣುತೆ ಸಮನ್ವಯತೆ ಮತ್ತು ಭ್ರಾತೃತ್ವವನ್ನು ಕಲಿಸಿ ಸಾಮರಸ್ಯದೆಡೆಗೆ ಕೊಂಡೊಯ್ಯುತ್ತಿರುವ ದಾರಿದೀಪ. ಜಾನಪದ ಈ ನಾಡಿನ ಸಿರಿಸಂಪತ್ತು ನಮ್ಮ ಬದುಕಿನ ಅನನ್ಯ ಭಾಗ ಮತ್ತು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿದ್ಯೆ, ಆಡು ಮುಟ್ಟದ ಸೊಪ್ಪಿಲ್ಲವೆಂಬಂತೆ ಜನಪದವಿಲ್ಲದ ನೆಲವಿಲ್ಲ, ಜನರ ಬಾಯಿಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಪ್ರವಹಿಸಿ ಸರ್ವರ ಬದುಕಿನಲ್ಲೂ ಹಾಸು ಹೊಕ್ಕಾಗಿದೆ.

ಜನಪದ ಮಹಾಕಾವ್ಯ ಎಂಬುದು ಮಹತ್ವದ ಐತಿಹಾಸಿಕ ಘಟನೆಗಳ ಬಗ್ಗೆ ಹೇಳುವ ಪದ್ಯ ಅಥವಾ ಗದ್ಯದಲ್ಲಿ ವ್ಯಾಪಕವಾದ ಕಾಲ್ಪನಿಕ ಕೃತಿಯಾಗಿದೆ. ಸಾಮಾನ್ಯವಾಗಿ ಒಂದು ನಿರ್ದಿಷ್ಟ ಐತಿಹಾಸಿಕ ಯುಗದಲ್ಲಿ ಪ್ರಮುಖ ಘಟನೆಗಳ ಸರಣಿಯನ್ನು ವಿವರಿಸುತ್ತದೆ. ಇದು ಮೂಲತಃ ವಿರೋಚಿತ ಘಟನೆಗಳನ್ನು ವಿವರಿಸುವ ಗುರಿಯನ್ನು ಹೊಂದಿದೆ. ಘಟನೆಗಳ ಕಥೆ, ವೀರರ ಭವಿಷ್ಯ ಅಥವಾ ಸಾಂಸ್ಕೃತಿಕ ನಾಯಕರ ಕಾರ್ಯಗಳು, ಸಾಹಸಗಳು ಮತ್ತು ಭಾವನೆಗಳನ್ನು ನೇರವಾಗಿ ಅಭಿವ್ಯಕ್ತ ಪಡಿಸಬಹುದು.

ಶಿಷ್ಟ ಸಾಹಿತ್ಯದಲ್ಲಿ ಮಹಾಭಾರತ, ರಾಮಾಯಣ, ಮಹಾಕಾವ್ಯಗಳು ಇರುವಂತೆ ನಮ್ಮ ಜನಪದರಿಗೆ ಅವರದೇ ಆದ ಜನಪದ ಮಹಾಕಾವ್ಯಗಳಿವೆ. **‘ಶಿಷ್ಟ ಮಹಾಕಾವ್ಯಗಳ ಹಾಸು ಬೀಸು, ವಸ್ತು ವೈವಿದ್ಯ ಮತ್ತು ಒಬ್ಬೊಬ್ಬ ಸಾಂಸ್ಕೃತಿಕ ವೀರ ನಾಯಕನಾಗಿ ಜನಮನದಲ್ಲಿ ಆಳಿರುವುದು ಕಂಡು ಬರುತ್ತದೆ’**[1]. ವೀರರ ಸಾಹಸ ಸಾಧನೆಗಳು ಬಾಯಿಂದ ಬಾಯಿಗೆ ಹರಿದುಕೊಂಡು ಬಂದ ದೀರ್ಘವಾದ ಹಾಡುಗಳ ಸಂಕಲನವೇ ಜನಪದ ಮಹಾಕಾವ್ಯಗಳು. ಇವುಗಳು ಹಲವಾರು ಸಾಂಸ್ಕೃತಿಕ ನಾಯಕರುಗಳಿಂದ ಸೃಷ್ಠಿಯಾಗಿ ಹಲವಾರು ರೀತಿ ವಿಕಾಸ ಹೊಂದುತ್ತಾ ಬರುತ್ತವೆ.

ಕನ್ನಡದಲ್ಲಿ ಮಲೆಮಹದೇಶ್ವರ ಸ್ವಾಮಿ, ಮಂಟೇಸ್ವಾಮಿ, ಜುಂಜಪ್ಪ, ಚೌಡಿಕೆ ಎಲ್ಲಮ್ಮ, ಮೈಲಾರಲಿಂಗ, ಹಾಲುಮತ ಮೊದಲಾದ ಜನಪದ ಮಹಾಕಾವ್ಯಗಳಿವೆ. ನಮ್ಮ ಕರ್ನಾಟಕದ ಗುಡ್ಡಗಾಡಿನ ಬುಡ ಕಟ್ಟು ಜನಾಂಗಗಳಲ್ಲೂ ಸಹ ಜನಪದ ಮಹಾಕಾವ್ಯಗಳಿವೆ.

## ಜನಪದ ವೃತ್ತಿಗಾಯಕರು :

ಕನ್ನಡದ ಜನಪದ ಸಾಹಿತ್ಯಕ್ಕೆ ಹೆಚ್ಚಿನ ವೈವಿಧ್ಯತೆಯನ್ನು ತಂದವರು ನಮ್ಮ ಜನಪದ ವೃತ್ತಿಗಾಯಕರು. ಇವರು ಬಂದಂತಹ ಸಾಂಪ್ರದಾಯಿಕ ಹಿನ್ನೆಲೆಯು ತುಂಬಾ ಗಮನಾರ್ಹವಾಗಿದೆ. ಅನೇಕ ಉತ್ತಮವೂ ದೀರ್ಘವೂ ಆದ ಜನಪದ ಮಹಾಕಾವ್ಯಗಳನ್ನು ವೃತ್ತಿಗಾಯಕರು ತಮ್ಮ ಶ್ರೀಮಂತ ಕಂಠದಿಂದ ಹಾಡಬಲ್ಲರು. ಹಾಡುವುದೇ ಇವರ ಮುಖ್ಯ ವೃತ್ತಿ[2.] ಧಾರ್ಮಿಕ ಮತ್ತು ಲೌಕಿಕವಾದ ಕಥೆಗಳನ್ನು ಹಾಡುತ್ತಾರೆ. ಕೆಲ ವೃತ್ತಿಗಾಯಕರು ನಿಂತಲ್ಲಿ ನಿಲ್ಲದೆ ಜನಪದ ಕಥೆಗಳನ್ನು ಹಾಡಿಕೊಂಡು ಹಾಡುತ್ತಾರೆ. ಕಥೆಗಳನ್ನು ಹಾಡಿಕೊಂಡು ಧವಸ ಧಾನ್ಯ, ಬಟ್ಟೆ ಬರೆಗಳನ್ನು ಪಡೆದುಕೊಂಡು ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಿರುತ್ತಾರೆ. ಜನಪದ ಮಹಾಕಾವ್ಯಗಳನ್ನು ಹಾಡುವ, ಹೇಳುವ ಈ ವೃತ್ತಿ ಗಾಯಕರನ್ನು ಜನ ಅತ್ಯಂತ ಪ್ರೀತಿಯಿಂದ ಗೌರವಿಸುತ್ತಾರೆ. ಪ್ರಮುಖವಾಗಿ ಸುಗ್ಗಿ ಕಾಲದಲ್ಲಿ ರಾತ್ರಿ ವೇಳೆಯಲ್ಲಿ ಜನರು ತಮ್ಮ ಹಳ್ಳಿಗಳಲ್ಲಿ ಇವರನ್ನು ತಡೆದು ಕಥೆಯನ್ನು ಹೇಳಿಸುತ್ತಾರೆ. ಇವರಲ್ಲಿ ಕಂಸಾಳೆಯವರು, ನೀಲಗಾರರು, ಚೌಡಿಕೆಯವರು, ಗಣೆಗಾರರು, ಗೊರವರು, ಜೋಗಿಗಳು, ಹೆಳವರು, ಕರಪಾಲದವರು, ದೊಂಬಿದಾಸರು, ತಂಬೂರಿಯವರು, ತೆಲಗು ಜಂಗಮರು ಹೀಗೆ ಅನೇಕ ಸಂಪ್ರದಾಯಗಳ ವೃತ್ತಿಗಾಯಕರು ಇದ್ದಾರೆ.

ISBN – 978-93-5526-247-9

**ಕಂಸಾಳೆಯವರು :**

ಕಂಸಾಳೆ ನಮ್ಮ ಜನಪದ ಕಲೆಗಳಲ್ಲಿ ತಮ್ಮದೇ ಆದ ಹಿರಿಮೆಯನ್ನು ಹೊಂದಿದೆ ಜಾನಪದ ಗಂಡು ಕಲೆಯಾಗಿ ನಿಲ್ಲುವಂತದ್ದು 'ಕಂಸಾಳೆ' ಕಾಂಸ್ಯ(ಕಂಚು) ತಾಳವೇ ಕಂಸಾಳೆಯಾಗಿದೆ. ಕಂಸಾಳೆಯ ಪದ ನಿಷ್ಪತ್ತಿಯನ್ನು ಕೇಶಿರಾಜನ ಶಬ್ಧಮಣಿ ದರ್ಪಣದಿಂದ ಗುರುತಿಸಬಹುದು. ಜಾನಪದೀಯಾಗಿ ಹೇಳಲಾಗುತ್ತದೆ. ಕಂಸಾಳೆ, ಕೈತಾಳ, ಕೌಸಳೆ, ಬಟ್ಲು ಎಂಬಿತ್ಯಾದಿ ಪದಗಳು ರೂಢಿಯಲ್ಲಿರುವುದು ಕಂಸಾಳೆಯವರು ಪ್ರಮುಖವಾಗಿ ಮೈಸೂರು ಜಿಲ್ಲೆಯ ಮಲೆಮಹದೇಶ್ವರನ ಭಕ್ತರು. ಮಂಡ್ಯ, ಬೆಂಗಳೂರು, ರಾಮನಗರ, ಚಾಮರಾಜನಗರ ಜಿಲ್ಲೆಗಳಲ್ಲಿ ಕಾಣಸಿಗುತ್ತಾರಡ. ಜಾನಪದ ಸತ್ವವುಳ್ಳ ಕಥನಗೀತೆ, ಕಂಚಿನ ತಾಳಗಳ ವಿಶಿಷ್ಟವಾದ ಶಬ್ಧ ಹಾಗೂ ವೃತ್ತಿಗಾಯಕರ ಕೈ ಚಳಕಗಳ ಸುಂದರ ಸಮ್ಮಿಲನದಿಂದಾಗಿ ವಿಸ್ಮಯಕಾರಕವಾಗಿ ಜನಮನವನ್ನು ತಣಿಸಿ ಶ್ರವಣಾನಂದವನ್ನು ಉಂಟುಮಾಡುತ್ತದೆ. ಕಂಸಾಳೆಯವರ ಕೈಯಲ್ಲಿ ಕಂಸಾಳೆ ಎನ್ನುವುದು ಒಂದು ಬಗೆಯ ವಾದ್ಯ ವಿಶೇಷ. ಭಿಕ್ಷೆಪಾತ್ರೆಯಂತಿರುವ ಮಧ್ಯೆದಾರದ ಕುಚ್ಚು ಕಟ್ಟಿದ, ಅಂಗೈ ಅಗಲದ ಮಿಶ್ರ ಲೋಹದ ಒಂದು ಬಟ್ಟಲು ಎಡಗೈಲಿದ್ದರೆ, ಬಲಗೈಯಲ್ಲಿ ಮಟ್ಟಸವಾದ ತಾಳವಿರುತ್ತದೆ ಮುಚ್ಚಳದ ನಡುವಿನ ಹೊರಭಾಗ ಉಬ್ಬಿರುತ್ತದೆ. ಆ ಉಬ್ಬಿನ ರಂಧ್ರದಿಂದ ಬಿಗಿದ ನೀಳವಾದ ದಾರ ಗೋಡೆಗಳಿಂದ ಅಲಂಕೃತವಾಗಿ ಬಲಗೈ ಮೇಲಿಂದ ಇಳೆಬಿದ್ದಿರುತ್ತದೆ. ಹಬ್ಬ ಹರಿದಿನಗಳಲ್ಲಿ ಶಿವರಾತ್ರಿ ನವರಾತ್ರಿ ಕಾಲದಲ್ಲಿ ಮಹದೇಶ್ವರ ಜಾತ್ರಾ ಸಂದರ್ಭದಲ್ಲಿ ಕೈಯಲ್ಲಿ ಕಂಸಾಳೆ ಹಿಡಿದು ಮಾದಯ್ಯನ ನಾಗಬೆತ್ತವನ್ನು ಕಂಕಳಲ್ಲಿಟ್ಟುಕೊಂಡು, ಬುತ್ತಿಯ ಗಂಟನ್ನು ತಲೆಯ ಮೇಲಿಟ್ಟುಕೊಂಡು ಯಾತ್ರೆ ಹೊರಡುವುದು, ಮೈಸೂರು ಜಿಲ್ಲೆಯಲ್ಲಿ ಸಾಮಾನ್ಯ ದೃಶ್ಯ. ಕಂಸಾಳೆಯವರಲ್ಲಿ ಮಹದೇಶ್ವರನ ಹುಟ್ಟು, ಬಾಲ್ಯ, ಬಾಲಲೀಲೆ, ಯೌವ್ವನ, ವಿನೋದ, ವಿರಸ, ಮುಪ್ಪು ಮಹಿಮೆಗಳು ಕಂಠಸ್ಥವಾಗಿ ನಿಂತಿವೆ. ಈ ಕಾವ್ಯವನ್ನು ಇಡೀ ರಾತ್ರಿ ಹಾಡಿ ಕುಣಿಸುವ ಅವರ ಕಲೆಗಾರಿಕೆ ಮೆಚ್ಚುವಂತಹುದು.

ಕಂಸಾಳೆಯವರು ಕಂಸಾಳೆ ಮೇಳದಲ್ಲಿ 3 ರಿಂದ 12 ಜನ ಕಲಾವಿದರಿರುತ್ತಾರೆ. ಇವರಿಗೆ ಮೇಳದ ಸಂದರ್ಭದಲ್ಲಿ ಇಂತಹುದೇ ವೇಶಭೂಷಣಗಳು ಇರಬೇಕೆಂಬ ನಿಯಮವೇನಿಲ್ಲ. ನಿತ್ಯದ ಅಂಗಿ, ಪಂಚೆ, ಹೆಗಲಿಗೆ ಜೋಳಿಗೆ, ಕೊರಳಿಗೆ ರುದ್ರಾಕ್ಷಿ, ಹಣೆಗೆ ವಿಭೂತಿಯನ್ನು ಇಟ್ಟಿರುತ್ತಾರೆ. ಮುಖ್ಯವಾಗಿ ತಮ್ಮ ಆರಾಧ್ಯ ದೈವ ಮಲೆಮಹದೇಶ್ವರನ ಪವಾಡ ಕುರಿತು ಹಾಡುತ್ತಾರೆ. ಅನೇಕ ರಾತ್ರಿಗಳ ಕಾಲ ಹಾಡಬಹುದಾದ ಜನಪದ ಮಹಾಕಾವ್ಯ 'ಮಲೆಮಹದೇಶ್ವರ' ಕಂಸಾಳೆಯವರ ನೆಚ್ಚಿನ ಧಾರ್ಮಿಕ ಕಾವ್ಯ.

ಕಂಸಾಳೆಯವರು ತಮ್ಮ ಆರಾಧ್ಯ ದೈವವಾದ ಕಥೆಯನ್ನು ಅಲ್ಲದೇ ನಂಜುಂಡ, ಚಾಮುಂಡಿ, ಪಿರಿಯಾಪಟ್ಟಣದ ಕಾಳಗ, ಬಾಲನಾಗಮ್ಮ, ಚೆನ್ನಿಗರಾಯ ಮೊದಲಾದ ಲೌಕಿಕ ಕಾವ್ಯಗಳನ್ನು ಆಯಾ ಪ್ರದೇಶಗಳಲ್ಲಿ ಹಾಡುತ್ತಾರೆ. ಕರ್ನಾಟಕದ ಅತ್ಯಂತ ಉತ್ಕೃಷ್ಟ ಧಾರ್ಮಿಕ ವೃತ್ತಿಗಾಯಕ ಪರಂಪರೆಗೆ ಸೇರಿದ ಈ ಕಂಸಾಳೆಯವರ ಅಮೂಲ್ಯವಾದ ಸಾಹಿತ್ಯ ನಿಧಿ ಇದೆ. ಕಂಸಾಳೆ ಕಾವ್ಯಗಳನ್ನು ಜೀ. ಸಂ ಪರಮಶಿವಯ್ಯ, ಪಿ.ಕೆ ರಾಜಶೇಖರ, ಚಕ್ಕೆರೆ ಶಿವಶಂಕರ, ಹಿ.ಚಿ ಬೋರಲಿಂಗಯ್ಯ ಮುಂತಾದ ವಿದ್ವಾಂಸರು ಸಂಗ್ರಹಿಸುತ್ತಾರೆ.

**ನೀಲಗಾರರು :**

ದಕ್ಷಿಣ ಕರ್ನಾಟಕದ ಜನಪದ ಗಾಯಕರಲ್ಲಿ ಮಂಟೇಸ್ವಾಮಿ ಪರಂಪರೆಗೆ ಸೇರಿದ ನೀಲಗಾರರು ಪ್ರಮುಖರಾದವರು ಹಾವಿನ ಹೆಡೆ ಅಥವಾ ಸಿಂಹ ಮುಖದ ಮಟ್ಟಸವಾದ ತಂಬೂರಿ ಇವರ ಪ್ರಮುಖ ವಾದ್ಯ. ನಾಲ್ಕು ತಂತಿಯ ಈ ವಾದ್ಯವನ್ನು ನುಡಿಸುತ್ತಾ ಇವರ ತಾಳಮೇಳಗಳೊಡನೆ ಸುವಿಸ್ತಾರವಾಗಿ ಹಾಡುಗಳನ್ನು ಹಾಡುತ್ತಾರೆ. 'ತಲೆಯ ಮೇಲೆ ಕೆಂಪು ಮುಂಡಾಸು, ಮೈಮೇಲೆ ಬಣ್ಣದ ನಿಲುವಂಗಿ ಶುಭ್ರವಾದ ಕಚ್ಚೆಯ ಪಂಚೆ ನಡುವಿಗೆ ಸುತ್ತಿದ ವಸ್ತುಗಳೊಡನೆ ಅತ್ಯಂತ ಠೀವಿಯಿಂದ ಈ ನೀಲಗಾರರು ಹೊರಗೆ ಹೊರಡುತ್ತಾರೆ ಹಣೆಯಲ್ಲಿ ವಿಭೂತಿ ಗಂಧ ಎರಡನೇ ಧರಿಸುತ್ತಾರೆ, ಕೊರಳಲ್ಲಿ ರುದ್ರಾಕ್ಷಿ ಮಣಿಗಳು ಇರುತ್ತವೆ'.[3]

ನೀಲಗಾರರು ಧಾರ್ಮಿಕ ಸಂಪ್ರದಾಯದ ವೃತ್ತಿಗಾಯಕರು ಇವರ ಸಂಪ್ರದಾಯದ ಮೂಲ ಪುರುಷ 'ಮಂಟೇಸ್ವಾಮಿ' ಇವರು ಮಂಡ್ಯ, ಮೈಸೂರು, ಬೆಂಗಳೂರು–ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುವ ನೀಲಗಾರರು ತಮ್ಮ ಆರಾಧ್ಯ ದೈವದಿಂದ ಮಂಟೇಸ್ವಾಮಿ ನೆಲೆಸಿರುವ ಬೊಪ್ಪಗೌಡ ಪುರಕ್ಕೆ ಮತ್ತು ಮಂಟೇಸ್ವಾಮಿ ಶಿಷ್ಯರಾದ

ISBN – 978-93-5526-247-9

ಸಿದ್ದಪ್ಪಾಜಿ, ರಾಚಪ್ಪಾಜಿ ಇರುವ ಚಿಕ್ಕಲೂರು, ಕಪ್ಪಡಿಗಳಿಗೆ ನಡೆದುಕೊಂಡು ಹೋಗುತ್ತಾರೆ ಇವರು ಅಲ್ಲಮ ಪ್ರಭುವೇ, ಮಂಟೇಸ್ವಾಮಿ ಎಂದು ನಂಬುತ್ತಾರೆ. ಮಂಟೇಸ್ವಾಮಿ ಮಹಾನ್ ಲೀಲೆಗಾರ ತಮ್ಮ ಆರಾಧ್ಯ ದೈವದ ಲೀಲೆಗಳನ್ನು ಹಾಡಿ ಕೊಂಡಾಡುವರು. ಲೀಲೆಗಾರರು ಬಹುಶಃ ನೀಲಗಾರ ಎಂಬ ಪದವು ಲೀಲೆಗಾರ ಎಂಬುದರಿಂದ ನಿಷ್ಪನ್ನಗೊಂಡಿರಬಹುದು.

ನೀಲಗಾರರಲ್ಲಿ ಸಾಧಾರಣ ನೀಲಗಾರರು ಇವರು ಕಾವ್ಯಗಳನ್ನು ಹಾಡುವುದಿಲ್ಲ, ತಂಬೂರಿ ನೀಲಗಾರರು ದೇವರ ಕಥೆಗಳನ್ನು ಹಾಡುತ್ತಾ ಧಾರ್ಮಿಕ ವಿಧಿಗಳಲ್ಲಿ ಬಾಗಿಯಾಗುತ್ತಾರೆ. ತಮ್ಮನ್ನು ಮಂಟೇದಯ್ಯ, ಮಂಟೇದವರು ಎಂದು ಕರೆದುಕೊಳ್ಳುವ ನೀಲಗಾರರು ಕರ್ನಾಟಕದ ಅತ್ಯಂತ ಉತ್ಕೃಷ್ಟ ವೃತ್ತಿಗಾಯಕ ಪರಂಪರೆಗೆ ಸೇರಿದವರು. ಇವರು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದವರೆಂದು ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನ ಪುರದಲ್ಲಿ ಮಠವನ್ನು ಸ್ಥಾಪಿಸಿ ಸೊಕ್ಕಿದವರನ್ನೇ ಮುರಿದು ಬಗ್ಗಿದವರನ್ನು ಶಿಷ್ಯರನ್ನಾಗಿ ಸ್ವೀಕರಿಸಿ ಮಂಟೇಸ್ವಾಮಿಯ ಕಥೆಯನ್ನು ನಾಲ್ಕು ಸಾಲುಗಳಲ್ಲಿ ಹಾಡುತ್ತಾರೆ. ರಾಚಪ್ಪಾಜಿ ಸಾಲು, ಸಿದ್ದಪ್ಪಾಜಿ ಸಾಲು, ಚಿಕ್ಕಲ್ಲೂರ ಸಾಲು, ಧರೆಗೆ ದೊಡ್ಡವರ ಸಾಲುಗಳೆಂದು ನಾಲ್ಕು ಸಾಲುಗಳಲ್ಲಿ ತಾಳದಿಂದ ತುದಿಯವರೆಗೆ ಕಥೆ ಹಾಡುತ್ತಾರೆ. ತಮ್ಮ ಆರಾಧ್ಯ ದೇವರ ಜೊತೆ ಅರ್ಜುನ ಜೋಗಿ ಹಾಡು, ಬಾಲನಾಗಮ್ಮ ಮುಂತಾದ ಲೌಕಿಕ ಕಾವ್ಯಗಳನ್ನು ಹಾಡುತ್ತಾರೆ. ನೀಲಗಾರರ ಹಾಡಿನ ರೀತಿ ಇರದೆ ವೃತ್ತಿ ಗಾಯಕರಿಗಿಂತ ತುಂಬಾ ಭಿನ್ನವಾಗಿದ್ದು ಅಬ್ಬರವಿಲ್ಲದ ಸುಕೋಮಲ ರಾಗದ ಹಾಡುಗಳು ಕೇಳುಗರಿಗೆ ಇಂಪಾಗಿ ಕೇಳುವಂತೆ ಹಾಡುತ್ತಾರೆ. ಕುಣಿತವಿಲ್ಲದ ಇವರ  ಮೇಳಕ್ಕೆ ರಂಗಸ್ಥಳ ಬೇಕಿಲ್ಲವೆನ್ನಬಹುದು.

ಮಂಟೇಸ್ವಾಮಿ ಪರಂಪರೆಯ ಕೆಲವು ಜಾತ್ರೆಗಳು ವರ್ಷಾವಧಿ ನಡೆಯುತ್ತವೆ. ಚಿಕ್ಕಲ್ಲೂರ ಜಾತ್ರೆ, ಕಪ್ಪಡಿ ಜಾತ್ರೆ, ಬೊಪ್ಪಗೌಡನ ಜಾತ್ರೆ ಈ ಜಾತ್ರೆಗಳು ಮೈಸೂರು, ಮಂಡ್ಯ ಜಿಲ್ಲೆಗಳಿಂದಲೇ ಅಕ್ಕಪಕ್ಕದ ಜಿಲ್ಲೆ ಮತ್ತು ರಾಜ್ಯಗಳಿಂದಲೂ ಜನ ಭಾಗವಹಿಸುತ್ತಾರೆ. ತಮ್ಮ ಗುರು ಪರಂಪರೆಯ  ಕ್ಷೇತ್ರ ದರ್ಶನವಲ್ಲದೇ ಸೇವೆಯ ನೆಪದಲ್ಲಿ ಕಲಾವಿದರ ಒಂದು ಗೋಷ್ಠಿಯೇ ನಡೆಯುತ್ತದೆ. ವಿವಿಧ ಪ್ರದೇಶಗಳಿಂದ ತಂಬೂರಿ ಹಿಡಿದು ನೂರಾರು ಕಲಾವಿದರು ಬರುವುದುದರಿಂದ ಕತೆ ಕಾವ್ಯಗಳು ಪರಸ್ಪರ ವಿನಿಮಯ ನಡೆಸುತ್ತಾರೆ. ಇವರಿಗೂ ನೀಲಗಾರರ ಬದುಕು ಸುಖದ ಸೋಪಾನವೇನೂ ಅಲ್ಲ ಅಂದ ಮಾತ್ರಕ್ಕೆ ಪ್ರಾಮಾಣಿಕವಾಗಿ ಈ ಪರಂಪರೆಯನ್ನು ಮುನ್ನಡೆಸುತ್ತಾ ಬಂದವರಿಗೆ ಅನ್ಯಾಯವಾಗಿಲ್ಲ. ಸಾಮಾಜಿಕವಾಗಿ ಹಿಂದುಳಿದ ಈ ವರ್ಗಕ್ಕೆ ಗಾಯಕ ವೃತ್ತಿಯಿಂದಲೇ ಆದಾಯ ದೊರಕಿದರು ಇಲ್ಲಿರುವಂತಹ ಸಮಸ್ಯೆಯೇ ಬೇರೆ ಆಗಿದೆ. ಆಧುನಿಕ ಸಂಗೀತಗಳ ಭರಾಟೆಯ ಮಧ್ಯೆ ಇವರ ಧಾರ್ಮಿಕ ಮತ್ತು ಸಾಂಪ್ರದಾಯಿಕ ಹಾಡುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ವರ್ಷದಿಂದ ವರ್ಷಕಕ್ಕೆ ಈ ಪರಂಪರೆ ಮುಕ್ತಾಯದ ಕಡೆಗೂ ಹೆಜ್ಜೆ ಹಿಡುತ್ತದೆ. ಹೊಸ ತಲೆಮಾರಿನ ಜನರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಆಸಕ್ತಿಯನ್ನು ಕಳೆದುಕೊಂಡಿದ್ದಾರೆ. ಆಧುನಿಕ ಸ್ವರೂಪದ ಕಲಿಕಾ ವಿಧಾನವನ್ನು ಅಳವಡಿಸಿದ್ದರು ಸದ್ಯದ ಹಿನ್ನೆಲೆಯಲ್ಲಿ ಈ ಪರಂಪರೆ ಉಳಿಯುವುದು ಕೆಲವೇ ಕೆಲವು ವರ್ಷಗಳು ಮಾತ್ರ. ವಿಶಿಷ್ಟ ವಸ್ತುವಿನ ಅಷ್ಟೇ ಮಾಧುರ್ಯದ ಕಾವ್ಯ ಧಾರ್ಮಿಕ ನೆಲೆಯಲ್ಲಿ ಉಳಿಯುವ ಯಾವ ಲಕ್ಷಣವೂ ಕಾಣುತ್ತಿಲ್ಲ ಎನ್ನುವುದೇ ವಿಷಾದ.

**ಚೌಡಿಕೆಯವರು :**

ಚೌಡಿಕೆಯವರು ಎಲ್ಲಮ್ಮನ ಮಹಿಮೆಯನ್ನು ಪ್ರಸಾರ ಮಾಡುವ ವಿಶಿಷ್ಟ ವರ್ಗದ ಕಲಾವಿದರಾಗಿ ಕಂಡು ಬಂದಿದ್ದಾರೆ. ಉತ್ತರ ಕರ್ನಾಟಕದಲ್ಲಿ ವಿಶಿಷ್ಟವಾಗಿ ಬಳಕೆಯಲ್ಲಿರುವ ಈ ಚೌಡಿಕೆ ಮೇಳದಲ್ಲಿ ಸಾಹಿತ್ಯ, ಸಂಗೀತ, ನೃತ್ಯ ಮೂರು ಏಕಕಾಲಕ್ಕೆ ಪ್ರದರ್ಶನಗೊಳ್ಳುವುದು. ಕರ್ನಾಟಕದ ಧಾರ್ಮಿಕ ಸಂಪ್ರಧಾಯಕ್ಕೆ ಸೇರಿದ ವಿಶಿಷ್ಟ ವೃತ್ತಿಗಾಯಕರಾದ ಚೌಡಿಕೆಯವರು ಸವದತ್ತಿ ಎಲ್ಲಮ್ಮನ ಭಕ್ತರು. ಕರ್ನಾಟಕದ ರಾಯಚೂರು, ಬೆಳಗಾವಿ, ಬಳ್ಳಾರಿ, ಧಾರವಾಡ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕ್ರಮವಾಗಿ ಮಂಡ್ಯ, ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿ ಅಪರೂಪಕ್ಕೆ ಕಂಡುಬರುತ್ತಾರೆ. 'ಚೌಡಿಕೆ ಪ್ರಕಾರವು ಸ್ತ್ರೀ ದೇವತೆಗೆ ಸಂಬಂಧಿಸಿದ್ದು. ಈ ಸಂಪ್ರದಾಯದಲ್ಲಿ ಹೆಂಗಸರು, ಗಂಡಸರು, ನಪುಂಸಕರು ಇದ್ದರೆ ಇವರನ್ನು ಎಲ್ಲಮ್ಮನ ಜೋತೇರು ಜೋಗಪ್ಪಗಳು ಎಂದು ಕರೆಯುತ್ತಾರೆ'[4.]

ISBN – 978-93-5526-247-9

ಜೋಗಪ್ಪಗಳು ಬಿಳಿಯ ನಿಲುವಂಗಿ ಮಾಲೆ ಕರಿಯ ಕೋಟು ಬಿಳಿಯ ಅಥವಾ ಹಳದಿ ಬಣ್ಣದ ಕಾಸೆ ಪಂಚೆ, ಕೊರಳಿನಿಂದ ಎರಡು ಕಡೆ ಇಳಿಬಿಟ್ಟು ಧೋತ, ಕಾಲಿಗೆ ಗೆಜ್ಜೆ, ಹಣೆಯಲ್ಲಿ ಎಲ್ಲಮ್ಮ ದೇವಿಯ ಭಂಡಾರದ ಬೊಟ್ಟು ಕೊರಳಲ್ಲಿ ದರುಶನದ ಮಣೀ ಧರಿಸುತ್ತಾರೆ. ಜೋಗತಿಯವರು ಕೆಂಪು ಬಳೆ, ಹಣೆಯಲ್ಲಿ ಕುಂಕುಮ ಮತ್ತು ಭಂಡಾರ, ಕಾಲಿಗೆ ಗೆಜ್ಜೆ, ತಲೆಯ ಮೋರೆ ಎಲ್ಲಮ್ಮನ ಮುಖವಾಡವಿರುವ ತಾಮ್ರದ ಕೊಡ ಹೊತ್ತಿರುತ್ತಾರೆ. ವಾದ್ಯ ಪ್ರಧಾನವಾದ ಈ ವ್ಯಕ್ತಿಗಾಯನ ಮೇಳದಲ್ಲಿ ವಿಶಿಷ್ಟವಾದ ಚೌಡಿಕೆ ವಾದ್ಯದ ಕಾರಣದಿಂದಾಗಿಯೇ ಎಲ್ಲಮ್ಮ ದೇವಿಯ ಗುಡ್ಡರನ್ನು ಚೌಡಿಕೆಯವರು ಎಂದು ಗುರುತಿಸುತ್ತಾರೆ. ಕೊಳಗದಕಾರದ ಮರದ ಒಲವು ಒಂದಕ್ಕೆ ಒಂದು ಕಡೆ ಆಡಿನ ಚರ್ಮ ಬಿಗಿದು ಅದರೊಳಗಿನಿಂದ ಕುರಿಯ ಕೊರಳಿನಿಂದ ತಯಾರಿಸಿದ ಬೀವನ್ನು ಎಳೆದು ಕಟ್ಟಿರುತ್ತಾರೆ. ಕಡ್ಡಿಯೊಂದರ ಸಹಾಯದಿಂದ ಈ ಬೀವನ್ನು ಮೀಟುವುದರ ಮುಖಾಂತರ ಉಂಟಾಗುವ ನಾದದ ಹಿನ್ನೆಲೆಯಲ್ಲಿ ಚೌಡಿಕೆಯವರು ದೇವಿಯ ಕಥೆಯನ್ನು ಆರಂಭಿಸುತ್ತಾರೆ.

ಚೌಡಿಕೆ ಮೇಳವು ಸಾಹಿತ್ಯ–ಸಂಗೀತ–ನೃತ್ಯ ಇವು ಮೂರು ಮುಕ್ತಿಗೊಂಡ ಕಲೆ ಬಾರಿಕೆ ಚೌಡಿಕೆ ಮತ್ತು ಶೃತಿ ಬಾಡಿಕೆಗಳೆಂದು ಎರಡು ಬಗೆಗೆಳಿದ್ದು ಚೌಡಿಕೆ ಮೇಳೆದಲ್ಲಿ ಬಾರಿಕೆ ಚೌಡಿಕೆಯೇ ಮುಖ್ಯವಾದುದು. ಮುಖ್ಯ ಗಾಯಕ ಬಾರಿಕೆ ಚೌಡಿಕೆ ಮೇಳದಲ್ಲಿ ಚೌಡಿಕೆಯನ್ನು ಹಿಡಿಯಲು ಹಾಡಿಗೆ ತಕ್ಕಂತೆ ನಾದದಲ್ಲಿ ಏರಿಳಿತ ಮಾಡಿಕೊಂಡು ವಿವಿಧ ಗತ್ತಿನಲ್ಲಿ ನುಡಿಸುತ್ತಾ ಕಥೆಯನ್ನು ನಿರೂಪಿಸುತ್ತಾರೆ.

ಚೌಡಿಕೆ ಮೇಳದವರು ತಮ್ಮ ಆರಾಧ್ಯ ದೈವದ ಪುರಾನ ಮೂಲ ರೇಣುಕಾ ಚರಿತ್ರೆ. ಜನಪದ ಮೂಲದ ಎಲ್ಲಮ್ಮನ ಚರಿತ್ರೆಯನ್ನಲ್ಲದೆ ಹೊನ್ನಾದೇವಿಯ ಕಥೆ. ಬಳ್ಳಾರಿ ತತ್ವ, ಅಣ್ಣ–ತಂಗಿ, ಬಂಜೆ ಹೊನ್ನಮ್ಮ ಮಾರಮ್ಮ ಮೊದಲಾದ ಕಾವ್ಯಗಳನ್ನು ಸಹ ಹಾಡುತ್ತಾರೆ.

**ಗಣೆಯವರು :**

ವೃತ್ತಿ ಗಾಯಕರು ಸಂಪ್ರದಾಯಗಳಲ್ಲಿ ಗಮನಸೆಳೆಯುವ ಮತ್ತೊಂದು ಗಾಯನ ಪರಂಪರೆ. ಜುಂಜಪ್ಪನ ಗಣೆಯವರುದು ಜುಂಜಪ್ಪನ ಗಣೆಗಳನ್ನು ಹೊತ್ತು ಸಂಚರಿಸುವ ಕಾಣಿಕೆಯವರು ಈ ಹಾಡುಗಾರಿಕೆಯನ್ನು ನಡೆಸಿಕೊಡುತ್ತಾರೆ. ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತಾರೆ. ಗಣೆಯವರು ಬಳಸುವ ವಾದ್ಯ ಗಣೆ ಮೂರು ಅಡಿ ಉದ್ದದ, ಮೂರು ಗೇಣ್ಣಿನ ದೊಡ್ಡ ಆಕಾರದ ಕೊಳಲು ಇದು, ಇದನ್ನು ಊದಿಕೊಂಡು ಕೆಲವರು ಜುಂಜಪ್ಪನ ಕಥೆಯನ್ನ ಹಾಡುತ್ತಾರೆ. ಇಬ್ಬರು ಮೇಳದಲ್ಲಿ ಕಥೆ ಮಾಡಿಕೊಂಡು ಹೋದರೆ, ಒಬ್ಬನು ಗಣೆಯನ್ನು ಊದುತ್ತಾ ಸಾಗುತ್ತಾನೆ. ಮಧುರವಾದ ನಾದ ಅದರಿಂದ ಹೊಮ್ಮಿ ಹಾಡುಗಾರಿಕೆಗೆ ವಿಶೇಷ ಮೆರಗು ತಂದು ಕೊಡುತ್ತಾನೆ.

ಗಣೆಗೆ ವಿಭೂತಿ ಹಚ್ಚಿ, ಕಾಯಿ ಹೊಡೆದು ಪೂಜೆ ಮಾಡುವ ಸಂಪ್ರದಾಯವಿದೆ. ಈ ಗಣೆಯನ್ನು ಹೊತ್ತು ಹಳ್ಳಿಗಳ ಮೇಲೆ ಜುಂಜಪ್ಪನ ಕಾಣಿಕೆಯೆಂದು ಹರಳು, ಎಣ್ಣೆ, ಹಣಬತ್ತಿಯನ್ನು ವಸೂಲಿ ಮಾಡಿ ಹೊಟ್ಟೆ ಹೊರೆಯುತ್ತಾರೆ.

**ಗೊರವರು :**

ವೃತ್ತಿ ಗಾಯಕ ಸಾಲಿನಲ್ಲಿ ಮೈಲಾರಲಿಂಗನ ಗೊರವರು ಕೂಡ ಮುಖ್ಯರು. ಸಮಗ್ರ ರಾತ್ರಿ ನಡೆಯುವ ಇವರ ಮೇಳವನ್ನು ಗೊರವರ ಮೇಳ ಎಂದೇ ಕರೆಯಲಾಗುತ್ತದೆ. ಇತರ ಮೇಳಗಳಂತೆ ಇಲ್ಲಿಯೂ ಮೂರು ಗೊರವರು ಕಲೆಯನ್ನು ಕಲಿತು ಮೇಳೆ ನಡೆಸುತ್ತಾರೆ. ಮಧ್ಯೆ ಕುಳಿತ ಮುಖ್ಯ ನಿರೂಪಕ ಢಮರುಗ ಆಡಿಸುತ್ತಾ ಕಥೆಯನ್ನು ನಿರೂಪಿಸಿಕೊಂಡು ಹೋದರೆ ಮಿಕ್ಕವರು ಹಾಗೆಯೇ ನುಡಿಸುತ್ತಾ ಹಿಮ್ಮೇಳನ ಹಾಡುತ್ತಾರೆ ಗೊರವರನ್ನು ಗೊರವ, ಗೊಗ್ಗಯ್ಯ, ಗಡಬಡಯ್ಯ ಎಂಬ ಹೆಸರುಗಳಲ್ಲಿ ಕರೆಯಲಾಗುತ್ತದೆ. ಗೊರವರ ವೇಷಭೂಷಣ ಆಕರ್ಷಕವಾದುದ್ದು. ಕಂಬಳಿಯ ನಿಲುವಂಗಿ, ಕೊರಳಲ್ಲಿ ಹುಲಿ ಚರ್ಮದ ಬಂಡಾರದ ಚೀಲ, ಕವಡೆಸರ, ಹೆಗಲಲ್ಲಿ ಭಿಕ್ಷಾಪಾತ್ರೆ, ಕೈಯಲ್ಲಿ ಢಮರುಗ, ತ್ರಿಶೂಲ ಮುಂತಾದವು ಇದರ ಜೊತೆಗೆ ಹಣೆ ಮತ್ತು ಕಣ್ಣುಗಳು ತುಂಬುವಂತೆ ವಿಭೂತಿ ಬಳಿದು ನಡುವೆ ಕುಂಕುಮ ಲೇಪಿಸುವರು. ಕೆಂಪುಗಳಿಂದ ತುಂಬಿ ಮುಖ ನಾನಾ ರೀತಿಯ ಚಿತ್ರ ವಿಚಿತ್ರ ವೇಷ ಭೂಷಣಗಳಿಂದ ಗೊರವಯ್ಯನ ಆಕೃತಿಯೇ ಮೈನವಿರೇಳಿಸುವಂತಿರುತ್ತದೆ.

ಇತರೆ ಗಾಯಕರಂತೆ ಮೈಲಾರಲಿಂಗನ ಗೊರವರಿಗೆ ಧೀಕ್ಷೆಯನ್ನು ಕೊಡಲಾಗುತ್ತದೆ. ಸಾಮಾನ್ಯವಾಗಿ ಮನೆಯ ಹಿರಿಮಗ ಈ ದೀಕ್ಷೆಗೆ ಅರ್ಹನಾದವನು. ಹಾಲುಮತದವರು, ಹರಿಜನರು ಮತ್ತು ಇತರೆ ಹಿಂದುಳಿದ ಸಮೂಹಗಳು ಈ ದೀಕ್ಷೆಯನ್ನು ಪಡೆಯುತ್ತಾರೆ. 'ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ ಮೂರು ರಾಜ್ಯಗಳಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಸಂಪ್ರದಾಯ ಜಾತಿ ಚೌಕಟ್ಟನ್ನು ಮೀರಿ ಬೆಳೆದಂತೆ ತೋರುತ್ತದೆ. ಎಲ್ಲ ಜಾತಿಯವರು ಗೊರವರಾಗಿರುವುದು ಜಾತಿ ಪದ್ದತಿಗಿಂತ ಮಿಗಿಲಾದ ಸಾಮರಸ್ಯವನ್ನು ಈ ಗೊರವರಲ್ಲಿ ಕಾಣಬಹುದು'[5]. ಹೀಗೆ ಜೀವನೋಪಾಯಕ್ಕಾಗಿ ಜನಪದ ಮಹಾಕಾವ್ಯವನ್ನು ಆಶ್ರಹಿಸಿ ಬಹುಮಟ್ಟಿಗೆ ಈ ಕಲೆಯನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ.

ಬದಲಾದ ಸನ್ನಿವೇಷದಲ್ಲಿ ಬಹುತೇಕ ಜನಪದ ವೃತ್ತಿಗಾಯಕ ಸಂಪ್ರದಾಯಗಳು ಅವನತಿಯ ಹಾದಿಯಲ್ಲಿವೆ. ಹೆಚ್ಚಿನವುಗಳಲ್ಲಿ ವಾದ್ಯಗಳು ಎಂದಿನಂತೆಯೇ ಉಳಿದುಕೊಂಡು ಬಂದಿವೆ. ಹಾಗೆಂದ ಮಾತ್ರಕ್ಕೆ ಈ ಎಲ್ಲಾ ಹಾಡುಗಾರಿಕೆಯ ಸಂಪ್ರದಾಯಗಳು ತಮ್ಮ ಎಂದಿನ ಭವ್ಯ ಸ್ವರೂಪದಲ್ಲೇ ಉಳಿದುಬಂದಿವೆ ಎಂದಲ್ಲ ಅವುಗಳಲ್ಲಿ ಅವನತಿಯ ಛಾಯೆಯನ್ನು ನಾವು ಪ್ರಸ್ತುತ ದಿನಗಳಲ್ಲಿ ಕಾಣಬಹುದು. ಬದಲಾದ ವಿದ್ಯಮಾನದಿಂದಾಗಿ ಜನರ ಆಸಕ್ತಿಗಳು ಬದಲಾಗುತ್ತಿವೆ. ಹಾಗೆಯೇ ಮನರಂಜನೆಯ ಮಾಧ್ಯಮಗಳು ಸಹ ಬದಲಾಗುತ್ತಿವೆ. ಇನ್ನೂ ಕೆಲವು ವರ್ಷಗಳಲ್ಲಿ ಈ ವೃತ್ತಿಗಾಯಕ ಪರಂಪರೆ ಕಣ್ಮರೆಯಾಗಿ ಹೋಗುವ ಆತಂಕ ಎಲ್ಲೆಡೆ ಮೂಡುತ್ತಿವೆ. ಈ ಪರಂಪರೆಯನ್ನು ಹೇಗೆ ಉಳಿಸಿಕೊಳ್ಳುವುದು ಎಂಬುದರ ಬಗ್ಗೆ ತೀವ್ರವಾಗಿ ನಾವೆಲ್ಲ ಯೋಚಿಸಬೇಕಾಗಿದೆ.

ಜನಪದ ಮೂಲ ವೃತ್ತಿ ಗಾಯಕರನ್ನು ಗುರುತಿಸಿ ಅವರಿಗೆ ಒಂದಷ್ಟು ನೆರವು ಗೌರವ ನೀಡಬೇಕು. ಆಕಾಶವಾಣಿ, ದೂರದರ್ಶನ ಇನ್ನೂ ಮುಂತಾದ ಸಮೂಹ ಮಾಧ್ಯಮಗಳಲ್ಲಿ ಹೆಚ್ಚು ಹೆಚ್ಚು ಕಲೆಗೆ ಅವಕಾಶವನ್ನು ನೀಡಬೇಕು. ತಾಲೂಕು ಅಥವಾ ಜಿಲ್ಲೆಗೊಂದು ಜನಪದ ಅಕಾಡೆಮಿ ಸ್ಥಾಪನೆಯಾಗಬೇಕು. ಆ ಮುಖಾಂತರ ಜನಪದ ಗೀತಗಾಯನ ತರಬೇತಿ ಶಿಬಿರ, ಸಂಶೋಧನ ಕಮ್ಮಟಗಳನ್ನು ಏರ್ಪಡಿಸಬೇಕು. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಜನಪದ ವೃತ್ತಿ ಗಾಯನದ(ಸಂಗೀತ) ಕಲಿಕೆ ಕಡ್ಡಾಯವಾಗಬೇಕು ಮೂಲ ಮಟ್ಟುಗಳಲ್ಲಿ ಆಡುವ ವೃತ್ತಿ ಗಾಯಕನ್ನು ಆಯ್ಕೆ ಮಾಡಿ ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಬೇಕು. ಜನಪದ ಜೀವನದ ಸತ್ಯ ಮತ್ತು ತತ್ವಗಳು ಮಾನವನ ಪ್ರೀತಿಯ ಸಂವರ್ಧನೆಗೆ ನೆರವಾಗುವ ಬಗೆಯನ್ನು ಕಲಿಸಬೇಕು ಇದರಿಂದ ಜನಪದ ನಿರಂತರ ಜೀವಂತಿಕೆಯನ್ನ ಕಾಪಾಡಿಕೊಳ್ಳುವುದು ಸಾಧ್ಯ.

ಈಗಿನ ಯುವ ಸಮೂಹ ಜನಪದ ವೃತ್ತಿಗಾಯಕರನ್ನು ಪ್ರೀತಿಸಬೇಕು. ಹಾಡುಗಳ ಮೂಲಕ ಕಲೆಯನ್ನ ಪಸರಿಸಲು ಪ್ರಯತ್ನಿಸಬೇಕು. ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗದೆ ಜನಪದ ಕಲೆ ಮತ್ತು ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೀತಿಸಿ ಮುಂದಿನ ಪೀಳಿಗೆಗೆ ಜಾನಪದ ಸಾಹಿತ್ಯವನ್ನು, ವೃತ್ತಿ ಗಾಯಕರನ್ನು ಉಳಿಸಿ ಬೆಳಸಬೇಕಾಗುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ.

**ಅಡಿ ಟಿಪ್ಪಣಿಗಳು :**

1) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ (3ನೇ ಮುದ್ರಣ) ಡಾ. ಚಿ.ಸಿ ನಿಂಗಣ್ಣ
2) ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ(ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ 7) ಕಾಳೇಗೌಡ ನಾಗವಾರ
3) ಕರ್ನಾಟಕ ಜಾನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು (1977) ಗೊ.ರು ಚನ್ನಬಸಪ್ಪ
4) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ (3ನೇ ಮುದ್ರಣ) ಡಾ. ಚಿ.ಸಿ ನಿಂಗಣ್ಣ
5) ದಕ್ಷಿಣ ಭಾರತದ ಜಾನಪದ ಕಲೆಗಳು, ಗೊ.ರು. ಚೆನ್ನಬಸಪ್ಪ

**ಪರಮರ್ಶನ ಗ್ರಂಥಗಳು :**

1) ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು – ಜಿ.ಶಂ ಪರಮಶಿವಯ್ಯ

2) ಜನಪದ ವೃತ್ತಿಗಾಯಕರು – ಡಾ. ಚಕ್ಕೆರೆ ಶಿವಶಂಕರ್

3) ಕರ್ನಾಟಕ ಜಾನಪದ ಕಲೆಗಳು – ಗೊ.ರು. ಚೆನ್ನಬಸಪ್ಪ

4) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಚಿ.ಸಿ ನಿಂಗಣ್ಣ

5) ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ – ಕಾಳೇಗೌಡ ನಾಗವಾರ

***

## 39.ಸಂಕಮ್ಮನ ಬಲಗೈ ಭಾಷೆ ಕವಟ್ಲು: ಅಸ್ಮಿತೆಗಾಗಿ ಹೆಣ್ಣಿನ ಹೋರಾಟ

ರಶ್ಮಿ ಪಿ

19ನೇ ಶತಮಾನದಲ್ಲಿ ಪಾಶ್ಚಿಮಾತ್ಯರ ಆಗಮನದಿಂದ ಜಾನಪದ ಪರಿಕಲ್ಪನೆ ನಮ್ಮ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸಿತು. ಕ್ರೈಸ್ತ ಮಿಷನರಿಗಳಿಂದ ಆರಂಭವಾದ ಜಾನಪದ ಸಂಗ್ರಹಕಾರ್ಯಕ್ಕೆ ಅಬೆದುಬಾಯ್, ಚಾರ್ಲ್ಸ್ ಇ ಗೋವರ್, ಕಿಟೆಲ್, ಫ್ಲೀಟ್, ಮೇರಿ ಫೆರ್ರಿ, ಬ್ರೂಕ್ನರ್ ಮೊದಲಾದವರು ತೋರಿದ ಆಸಕ್ತಿ ಹಾಗೂ ನೀಡಿದ ಕೊಡುಗೆಯನ್ನು ಇಂದಿಗೂ ಸ್ಮರಿಸಬಹುದು. ಆದರೂ ನಮ್ಮ ದೇಸೀ ವಿದ್ವಾಂಸರಲ್ಲಿ ಅಷ್ಟು ವ್ಯಾಪಕವಾಗಿ ಜಾನಪದ ಸಂಗ್ರಹಕಾರ್ಯವಾಗಲಿ, ಅಧ್ಯಯನವಾಗಲಿ ಆ ವೇಳೆಯಲ್ಲಿ ನಡೆಯಲಿಲ್ಲ. ತದನಂತರ 20ನೇ ಶತಮಾನದಲ್ಲಿ ಜನಪದ ಸಂಗ್ರಹಕಾರ್ಯ ಉತ್ತರಕರ್ನಾಟಕದಲ್ಲಿ ಹಲಸಂಗಿ ಗೆಳೆಯರಿಂದ ಆರಂಭವಾಗಿ, ದಕ್ಷಿಣಭಾಗದಲ್ಲಿ ಕನ್ನಡದ ಆದ್ಯ ಜಾನಪದ' ಸಂಗ್ರಹಕಾರರಲ್ಲೊಬ್ಬರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ ಅವರಿಂದ ಮುಂದುವರೆದುದು ಗಮನಾರ್ಹವಾಗಿದೆ. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಜಾನಪದದ ವಿವಿಧ ಪ್ರಕಾರಗಳಲ್ಲಿ ಬಿ.ಎಸ್.ಗದ್ದಗೀಮಠ, ಜಿ.ಶಂ.ಪರಮಶಿವಯ್ಯ, ಆರ್.ಎಸ್.ಪಂಚಮುಖಿ, ದೇಜಗೌ ಹಾಗೂ ಪಿ.ಕೆ. ರಾಜಶೇಖರ್‌ರಂತಹ ಸೇವೆಯೂ ಈ ಸಂದರ್ಭದಲ್ಲಿ ಸ್ಮರಣೀಯವಾದುದು.

ಜನಪದ ಮಹಾಕಾವ್ಯಗಳಲ್ಲಿ ವಿಸ್ತಾರವಾದ ಹಾಗೂ ಪ್ರಸಿದ್ಧವಾದ 'ಮಲೆಯ ಮಾದೇಶ್ವರ ಮಹಾಕಾವ್ಯ'ದ ಒಂದು ಪ್ರಮುಖವಾದ ಭಾಗ 'ಸಂಕಮ್ಮನ ಸಾಲು'. ಈ ಕಾವ್ಯವನ್ನು ಹಾಡುವವರನ್ನು ದೇವರಗುಡ್ಡರು ಅಥವಾ ಕಂಸಾಳೆಯವರು ಎಂದು ಕರೆಯುತ್ತಾರೆ. ಇವರು ಮಾದೇಶ್ವರರಿಗೆ ಸಂಬಂಧಿಸಿದ ಕಾವ್ಯಗಳನ್ನು ವಾರಗಳವರೆಗೆ ಹಲವು ವಿಭಾಗಗಳನ್ನು ಮಾಡಿಕೊಂಡು ಹಾಡುತ್ತಾರೆ. ಈ ಒಂದೊಂದು ವಿಭಾಗಕ್ಕೂ 'ಸಾಲು' ಎನ್ನುತ್ತಾರೆ. ಇದು ಒಂದೊಂದು ರಾತ್ರಿ ಹಾಡಬಹುದಾದ ದೀರ್ಘವಾದ ಕಾವ್ಯವಾಗಿದೆ. ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಭಾಗದಲ್ಲಿ ದೇವರಗುಡ್ಡರು ಹೆಚ್ಚಾಗಿ ಕಂಡು ಬರುತ್ತಾರೆ. ಈ ಕಾವ್ಯದಲ್ಲಿ ಒಟ್ಟು 14 ಕವಲುಗಳಿವೆ. ಈ 14 ಸಾಲುಗಳಲ್ಲಿ ಮಾದೇಶ್ವರರ ಮಹಿಮೆ, ಪವಾಡ ಇರುವುದರಿಂದ ಹಾಗೂ ಜನಪದ ಕಾವ್ಯಗಳಲ್ಲೇ ವಿಸ್ತಾರವಾದದ್ದರಿಂದ ಇದನ್ನು ಮಹಾಕಾವ್ಯವೆನ್ನಬಹುದಾಗಿದೆ. 700 ವರ್ಷಗಳ ಹಿಂದೆ ಮಾದೇಶ್ವರರು ಶಿಷ್ಟ ರಕ್ಷಣೆಗಾಗಿ ದುಷ್ಟ ಶಿಕ್ಷಕರಾಗಿ ಜನ್ಮವೆತ್ತಿದರೆಂಬುದು ನಮ್ಮ ಜನಪದರ ನಂಬಿಕೆ. ಈ ನೆಲೆಯಲ್ಲಿ ಸಂಕಮ್ಮನ ಸಾಲು ಶಿಷ್ಟ ರಕ್ಷಣೆಯನ್ನು ಪ್ರತಿಪಾದಿಸುವ ಕವಲಾಗಿದೆ. ಅಲ್ಲದೇ ಉಳಿದ 6 ಸಾಲುಗಳಿಗಿಂತಲೂ ಹೆಚ್ಚು ಪ್ರಸಿದ್ಧಿಯನ್ನು ಪಡೆದ ಕವಲು ಇದಾಗಿದೆ. ಮೊದಲಬಾರಿಗೆ ಈ ಮಹಾಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿದವರು ಪಿ.ಕೆ.ರಾಜಶೇಖರ್. 1973ರಲ್ಲಿ ಪ್ರಕಟವಾದ ಈ ಮಹಾಕಾವ್ಯ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದುಕೊಂಡು ಕನ್ನಡ ಜಾನಪದವನ್ನು ವಿಶ್ವ ಜಾನಪದದೆತ್ತರಕ್ಕೆ ಏರಿಸಿತು.

ಈ ಮಹಾಕಾವ್ಯದಲ್ಲಿನ ಸಂಕಮ್ಮ ಜನಪದರಿಗೆ ಮಾತ್ರವಲ್ಲದೇ ಈಗಿನ ತಲೆಮಾರಿನವರೆಗೂ ಕೂಡ ಆದರ್ಶಪ್ರಾಯಳು. 'ಮಲೆಯ ಮಾದೇಶ್ವರ' ಜನಪದ ಮಹಾಕಾವ್ಯದಲ್ಲಿ ಬರುವ ಸಂಕಮ್ಮನ ಸಾಲು ಮಹಾಕಾವ್ಯದಲ್ಲಿ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಇಲ್ಲಿನ ಆಕೆಯ ತಾಳ್ಮೆ, ಸಹನಾ ಶಕ್ತಿ, ಕ್ಷಮಾಗುಣ, ಸತೀತ್ವ ಹಾಗೂ ಸ್ವಾಭಿಮಾನ ಮಹಾಕಾವ್ಯದ ಓದುಗರಿಗೂ, ಕೇಳುಗರಿಗೂ ಪ್ರಿಯವಾಗದೆ ಇರದು. ಇಲ್ಲಿ ಸಂಕಮ್ಮ ಗಂಡಿನ ಅಹಂಕಾರವನ್ನು ಪ್ರತಿಭಟಿಸುವ ದಿಟ್ಟ ಹೆಣ್ಣಾಗಿದ್ದಾಳೆ. ಜನಪದ ಸಾಹಿತ್ಯದಲ್ಲಿ ಸ್ತ್ರೀಯರು ಸರಳ ಸಜ್ಜನಿಕೆಯ, ಪತಿಭಕ್ತಿಯನ್ನಾಚರಿಸುವ ಗೃಹಿಣಿಯಾಗಿ ಕಂಡುಬರುತ್ತಾರೆ. ಆದರೆ ಈ ಭಾಗದಲ್ಲಿ ಪತಿಯ ವಿರುದ್ಧ ತಿರುಗಿ ನಿಂತ ಹೆಣ್ಣಿನ ಚಿತ್ರಣವಿದೆ. ಸಂಕಮ್ಮನ ಸಾಲಿನಲ್ಲಿ ಬರುವ ಕತೆಯನ್ನು ಸ್ಥೂಲವಾಗಿ ನೋಡುವುದಾದರೆ, ಕುಲದಲ್ಲಿ ಕುರುಬೊಕ್ಕಲುಗೌಡ, ಜಾತಿಯಲ್ಲಿ ಸೋಲಿಗನಾದ ನೀಲಯ್ಯ ತನ್ನ 6 ಜನ ಸಹೋದರರಿಗೆ ಕಿರಿಯವನು. ಮೂರು ಲೋಕವನ್ನು ಸುತ್ತಿ ಬಂದರೂ ತನಗೆ ತಕ್ಕ ಹೆಣ್ಣು ಸಿಗದೆ ಬಹುಕಾಲ ಅವಿವಾಹಿತನಾಗಿದ್ದ ಇವನು ಒಮ್ಮೆ ತುಂಬೆಸೋಲಿಗನ ಒಬ್ಬಳೇ ಮಗಳಾದ ಸುಂದರಿ ಸಂಕಮ್ಮಳನ್ನು ಕಾಡಿ ಬೇಡಿ ಮದುವೆಯಾಗುತ್ತಾನೆ. ದಿನಕಳೆದಂತೆ ಸಂಕಮ್ಮಳಿಗೆ ಮಕ್ಕಳಾಗದ ಕಾರಣ ಆಕೆಯ ಅತ್ತಿಗೆ, ನಾದಿನಿ, ಓರಗಿತ್ತಿಯರು ಬಂಜೆಯೆಂದು ನಿಂದಿಸಿದ್ದರಿಂದ ನೀಲಯ್ಯ ತನ್ನ ಹೆಂಡತಿಯನ್ನು ಕರೆದುಕೊಂಡು ಒಂಟಿ ದೊಡ್ಡಿಯಲ್ಲಿ ಬಂದು ನೆಲೆ ನಿಲ್ಲುತ್ತಾನೆ. ವಾಡಿಕೆಯಂತೆ ಕುಲದೇವರ ಜಾತ್ರೆಯ ಸಿದ್ಧತೆಗಾಗಿ ಕುಲದವರೆಲ್ಲರೂ ವಜ್ರದ ಹೂಮಲೆಗೆ ಹೆಜ್ಜೇನು ಬೇಟೆಗೆ ಪ್ರತಿ ಮನೆಯಿಂದ ಒಂದಾಳು ತಪ್ಪದೆ ಬರಬೇಕೆಂಬ ಕುಲದ ಯಜಮಾನನ ಆಜ್ಞೆಯಂತೆ ಹೊರಡಬೇಕಾದ ಸಂದರ್ಭ ಬಂತು. ಆದರೆ ಕಡು ಚೆಲುವೆಯಾದ ಸಂಕಮ್ಮಳನ್ನು ಒಂಟಿಯಾಗಿ ಬಿಟ್ಟು ಬರಲು ನೀಲಯ್ಯನಿಗೆ ಅನುಮಾನ. ಹಾಗಾಗಿ ಕುಲದ ಯಜಮಾನನ ಬಳಿ ಬಂದು ಬೇಟೆಗೆ

ISBN – 978-93-5526-247-9

ಬರಲಾಗುವುದಿಲ್ಲ, ದಂಡವನ್ನು ತೆತ್ತಲೂ ಸಿದ್ಧನಿದ್ದೇನೆಂದು ಭಿನ್ನೈಸಿದ. ಆತನ ಮಾತಿಗೊಪ್ಪದ ಮುಖಂಡ ಕುಲದಿಂದ ಬಹಿಷ್ಕಾರ ಹಾಕುವುದಾಗಿ ಹೇಳಿದಾಗ, ಕುಲದ ಮಾತು ಮೀರಬಾರದೆಂದು ನಿಶ್ಚಯಿಸಿ ಒಲ್ಲದ ಮನಸ್ಸಿನಿಂದ ಹೊರಡಲು ಅಣಿಯಾಗಿ ಸಂಕಮ್ಮಳಿಂದ ಬಲಗೈ ಭಾಷೆ ತೆಗೆದುಕೊಳ್ಳಲು ಮುಂದಾಗುತ್ತಾನೆ.

ಪಾತೀವ್ರತ್ಯವನ್ನು ವೈಭವೀಕರಿಸುವ ಅನೇಕ ಕತೆಗಳು, ಕಾವ್ಯಗಳು ಜಾನಪದ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. ಜಾನಪದ ಸಾಹಿತ್ಯವನ್ನು ಸಂಪೂರ್ಣವಾಗಿ ಗಮನಿಸಿದ್ದೇ ಆದರೆ ಹೆಣ್ಣಿನ ದನಿಗೆ ಮನ್ನಣೆ ದೊರೆಯದೆ ಇರುವ ಕಾವ್ಯಗಳು ಮಾತ್ರವಲ್ಲದೇ, ಧ್ವನಿ ಎತ್ತಿದ ಕಾವ್ಯಗಳೂ ಸಾಕಷ್ಟಿವೆ ಎಂಬುದು ತಿಳಿಯುತ್ತದೆ. ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಸಿಡಿದು ಬಿದ್ದ ಮಹಿಳೆಯರು ಜಾನಪದ ಸಾಹಿತ್ಯದಲ್ಲಿ ಕಂಡುಬರುತ್ತಾರೆ. ಅಂತಹವರಲ್ಲಿ ತುಳುನಾಡಿನ ಸಿರಿಯೂ ಕೂಡ ಒಬ್ಬಳು. ಆದರೆ ಆ ಭಾಗದಲ್ಲಿನ ಸಿರಿಗೂ, ದಕ್ಷಿಣ ಭಾಗದ ಈ ಸಂಕಮ್ಮಳಿಗೂ ಬಹಳ ವ್ಯತ್ಯಾಸವಿದೆ. ಗಂಡಿನ ಅಹಂಕಾರಕ್ಕೆ ಪ್ರತಿಭಟಿಸುವ ಹೆಣ್ಣು ಸಂಕಮ್ಮ, ಸ್ವಭಾವದ ಹಿನ್ನೆಲೆಯಲ್ಲಿ ಸತೀತ್ವ, ಪತಿಭಕ್ತಿಯನ್ನಾಚರಿಸುವವಳು. ಹೆಜ್ಜೇನು ಬೇಟೆಗೆ ಹೊರಡಬೇಕಾದ ನೀಲಯ್ಯನಿಗೆ 9 ತಿಂಗಳು ತನ್ನ ಮಡದಿಯನ್ನು ಬಿಟ್ಟು ಹೋಗಲು ಭಯ. ಕಾರಣ ತಾನಿಲ್ಲದ ವೇಳೆಯಲ್ಲಿ ತನ್ನ ಹೆಂಡತಿಯನ್ನು ಯಾರದರೂ ಒಲಿಸಿಕೊಳ್ಳಬಹುದೆಂಬ ಗುಮಾನಿ. ಆ ಕಾರಣಕ್ಕಾಗಿ ಬಲಗೈ ಭಾಷೆಯನ್ನು ಕೇಳುತ್ತಾನೆ. ತನ್ನನ್ನೇ ಸರ್ವಸ್ವವೆಂದು ಪ್ರೀತಿಸಿ ಮದುವೆಯಾದ ಗಂಡನ ಬಾಯಲ್ಲಿ ಇಂತಹ ಮಾತನ್ನು ಕೇಳಿದ ಸಂಕಮ್ಮ ನೊಂದು, ಅನುಮಾನಿಸುವುದು ತರವಲ್ಲವೆಂದೂ, ತನ್ನಲ್ಲಿ ದೋಷಗಳನ್ನು ಕಂಡಿದ್ದೇ ಆದಲ್ಲಿ ಪರಿವಾರ, ಕುಲದವರನ್ನು ಕರೆದು ತಪ್ಪನ್ನು ತೋರಿಸಿ, ತೆರವನ್ನು ತೆಗೆದುಕೊಂಡು ಬಿಟ್ಟುಬಿಡು ಎನ್ನುತಾಳೆ. ಈ ಮಾತು ಹೆಣ್ಣೊಬ್ಬಳು ತನ್ನ ಅಸ್ಮಿತೆಗಾಗಿ ಸಂಬಂಧವನ್ನು ತಿರಸ್ಕರಿಸುವುದನ್ನು ಸೂಚಿಸುತ್ತದೆ. ಬಹುಶಃ ನೀಲಯ್ಯನಿಗೆ ಸಂಕಮ್ಮಳ ಬಂಜೆತನಕ್ಕೆ ತಾನೇ ಕಾರಣನೆಂಬ ಅನುಮಾನ. ಹಾಗಾಗಿ ತನ್ನ ಅನುಪಸ್ಥಿತಿಯಲ್ಲಿ ಬೇರೆ ಪುರುಷರೊಡನೆ ಸಂಪರ್ಕ ಬಯಸಬಹುದೆಂಬ ಸಂಕುಚಿತ ಆಲೋಚನೆ ಈತನದು. ಆದರೆ ಸಂಕಮ್ಮ 9 ತಿಂಗಳು ಬೇಟೆಗೆ ಹೊರಟಿರುವ ತನ್ನ ಗಂಡನನ್ನು ಪ್ರಶ್ನಿಸುವುದಾಗಲೀ ಅಥವಾ 9 ತಿಂಗಳ ತರುವಾಯ ಹಿಂತಿರುಗಿ ಬರುವ ಗಂಡನ ಪಾತೀವ್ರತ್ಯವನ್ನು ಪರೀಕ್ಷಿಸುವುದಾಗಲೀ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಹೇಗೆ ತಾನೆ ಸಾಧ್ಯ?. ಆರಂಭದಲ್ಲಿ ಕುಲದ ಮುಖಂಡರು ಬಹಿಷ್ಕಾರ ಹಾಕುವುದಾಗಿ ಹೇಳಿದಾಗ ಹೆದರಿ ಒಪ್ಪಿಕೊಂಡು ಬಂದವನು ಹೆಂಡತಿಗೆ ದರ್ಪ ತೋರಿಸುತ್ತಾನೆ. ಇದಕ್ಕೆ ಒಂದಷ್ಟು ಘಟನೆಗಳನ್ನು ಉದಾಹರಿಸುವುದಾದರೆ, ಬೆಂಕಿ ಬಿಸಿನೀರಿನ ನೆಪದಲ್ಲಿ ನನ್ನ ಅಣ್ಣ-ತಮ್ಮಂದಿರು ಬಂದು ನಿನ್ನ ಸೌಂದರ್ಯಕ್ಕೆ ಮರುಳಾಗಿ, ನಿನಗೆ ಒಲುಮೆಯ ಮದ್ದು ಕೊಟ್ಟು ಒಲಿಸಿಕೊಂಡು ಹೋಗುತ್ತಾರೆ ಎನ್ನುವಾಗ ತನ್ನ ಒಡಹುಟ್ಟಿದವರ ಮೇಲೆಯೇ ನಂಬಿಕೆ ಇಲ್ಲದ ನೀಲಯ್ಯ ಯಾವುದೋ ಘಳಿಗೆಯಲ್ಲಿ ರೂಪವತಿಯಾದ ಸಂಕಮ್ಮಳಿಗೆ ಮನಸೋತು ಮದುವೆಯಾದವನು ಆಕೆಯನ್ನು ಸಂಪೂರ್ಣವಾಗಿ ನಂಬಲು ಹೇಗೆ ತಾನೆ ಸಾಧ್ಯ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೆ ಸಂಕಮ್ಮ ಇಂತಹ ಪಾಪದ ಮಾತನ್ನು ಆಡಬೇಡ ಎಂದು ಸಂಬಂಧಗಳ ಮೌಲ್ಯವನ್ನು ವಿವರಿಸುತ್ತಾಳೆ. ಆದರೂ ಕಾಮಾಲೆ ಕಣ್ಣಿಗೆ ಕಂಡದ್ದೆಲ್ಲ ಹಳದಿ ಎಂಬಂತೆ ಮತ್ತೆ ನೀನೊಬ್ಬಳೇ ಇರುವಾಗ ಮುತ್ತು ಮಾರಲು ಮುತ್ತಿನ ಶೆಟ್ಟಿ ಬಂದಾಗ ಮುತ್ತನ್ನು ಕೊಳ್ಳುವಾಸೆಯಿಂದ ಆತನನ್ನು ಮನೆಗೆ ಕರೆದಾಗ ಮುತ್ತಿನ ಶೆಟ್ಟಿ ನಿನ್ನ ಅಂದ-ಚೆಂದ, ದಪ್ಪ-ದುಡುವ, ಕೆಂಪು-ರಂಪು, ನಡು-ನಡುಗೆ ನೋಡಿ ನಿನ್ನ ಮೇಲೆ ಕಣ್ಣ ಮಡಗಿ ಒಲುಮೆ ಮದ್ದು ಕೊಟ್ಟು ಹಾರಿಸಿಕೊಂಡು ಹೋಗುತ್ತಾನೆ ಎನ್ನುವಾಗ ಪರಿಸ್ಥಿತಿಯ ಲಾಭ ಪಡೆಯಲು ಕಾಯುತ್ತಿರುವವರು ಪುರುಷರೇ ಎಂಬುದನ್ನು ನೀಲಯ್ಯನ ಮಾತಿನಲ್ಲೇ ಅರ್ಥೈಸಬಹುದುದಲ್ಲವೇ?. ಮುಂದುವರೆದು ಬಳೆಗಾರ ಬಂದಾಗ ಬಳೆತೊಡಿಸುವ ನೆಪದಲ್ಲಿ ನಿನ್ನ ದುಂಡಾದ ತೋಳ ಹಿಡಿದು ಕಂಡು ಕಾಣದ ಹಾಗೆ ನಿನ್ನ ಕೈ ಹಿಸುಕುತ್ತಾನೆ ಎನ್ನುವಾಗಲೂ ಪರುಷರನ್ನೇ ಆತ ಅನುಮಾನಿಸುವುದು ಸ್ಪಷ್ಟವಾಗುತ್ತದೆ. ಆದರೆ ಇಂತಹ ಮಾತುಗಳಿಂದ ನೋವಾಗುತ್ತಿರುವುದು ಹೆಣ್ಣಿಗೆ ಎಂಬುದನ್ನು ಇಲ್ಲಿ ಮನಗಾಣಬಹುದು. ಇದೆಲ್ಲವನ್ನು ಕೇಳಿದ ಸಂಕಮ್ಮ ಮಾಯ್ಕಾರ ಮಾದೇವ ಕೊಟ್ಟಿರುವ ಸಂಪತ್ತು ಮನೆ ತುಂಬಾ ಇದೆ ಅದನ್ನೇ ಕೊಡುತ್ತೇನೆ ಹೊರತು ಅವರೊಂದಿಗೆ ಓಡಿ ಹೋಗುವ ಮಗಳಲ್ಲ ಎಂದು ದಿಟ್ಟತನದಿಂದ ಉತ್ತರಿಸುತ್ತಾಳೆ. ಅಲ್ಲದೇ ಪತ್ನಿಯ ಶೀಲವನ್ನು ಶಂಕಿಸಿ ಹೀಗೆಲ್ಲ ಮಾತನಾಡಬೇಡ ನಿನ್ನ ಪಾದವನ್ನು ತಲೆಯ ಮೇಲೆ ಹೊರುತ್ತೇನೆ ಎಂಬ ಅವಳ ಮಾತು, ಆತನ ಮಾತುಗಳಿಂದ ಈಕೆಯ ಮನಸ್ಸಿಗೆ ಆಗುತ್ತಿರುವಂತಹ ಘಾಸಿಯನ್ನು ಚಿತ್ರಿಸುತ್ತದೆ. ವಾಸ್ತವವಾಗಿ ಹೆಣ್ಣನ್ನು ಸಂಪ್ರದಾಯ-ಸಂಸ್ಕೃತಿಯ ಹೆಸರಿನಲ್ಲಿ ಬಳೆ, ಕಾಲುಂಗುರ, ಕಾಲ್ಗೆಜ್ಜೆಗಳಂತಹ ಅಲಂಕಾರಿಕ ವಸ್ತುಗಳಿಂದ ನಿಯಂತ್ರಿದ್ದು ಪುರುಷಪ್ರಧಾನ ಸಮಾಜವೇ. ಆದರೆ ಈಗ ಹೆಣ್ಣಿಗೆ ಅಲಂಕಾರಪ್ರಿಯಳು, ವಸ್ತುಪ್ರಿಯಳು ಎಂಬ ಬಿರುದುಗಳನ್ನು ನೀಡುತ್ತಿರುವುದು ಇದೇ ಸಮಾಜವೆಂಬುದನ್ನು ಅರಿಯಬೇಕು.

ISBN – 978-93-5526-247-9 

ಇಷ್ಟೆಲ್ಲಾ ಮಾತು ಮುಂದುವರೆಯುವಾಗ ಈತನ ಅನುಮಾನಗಳಿಗೆ ಬೇಸತ್ತು ಸಂಕಮ್ಮ ತನ್ನನ್ನೂ ಬೇಟೆಗೆ ಜೊತೆಯಲ್ಲಿ ಕರೆದುಕೊಂಡು ಹೋಗಲು ಹೇಳಿದಾಗ ಉಳಿದ ಬೇಟೆಗಾರರು ಆಕ್ಷೇಪ ಎತ್ತುತ್ತಾರೆ ಎಂಬುದರ ಜೊತೆಗೆ "ದೊಂಬನೊಂದಿಗೆ ದೊಂಬ್ತಿ ಬಂದಂಗೆ ನೀನೆಲ್ಲಿಗೆ ಬಂದಿ ಸಂಕೆಣ್ಣೆ" ಎನ್ನುತ್ತಾನೆ. ಇಲ್ಲಿ ಹೊಟ್ಟೆಪಾಡಿಗೆ ಕಸರತ್ತು ಮಾಡಿ ರಂಜಿಸುವ ಒಂದು ತಳಸಮುದಾಯವನ್ನು ಹಾಗೂ ಆ ಸಮುದಾಯವು ಸ್ತ್ರೀಗೆ ಕೊಟ್ಟ ಸ್ವಾತಂತ್ರ್ಯವನ್ನು ಈತ ಅಲ್ಲಗಳೆಯುವಂತೆ ತೋರುತ್ತಿದೆ. ಈ ಮಾತಿಗೆ ಸ್ವಲ್ಪ ಗಟ್ಟಿಯಾಗಿಯೇ ಪ್ರತಿಕ್ರಿಯಿಸಿದ ಸಂಕಮ್ಮ ತಾನೇನು ಸುಮ್ಮನೆ ಬಂದವಳಲ್ಲ, ಶಾಸ್ತ್ರೋಕ್ತವಾಗಿ ವಿವಾಹ ಆದವಳೆಂದೂ ನಾನು ಜೊತೆಯಲ್ಲಿ ಬರುವುದರಿಂದ ಮರ್ಯಾದೆ ಕಡಿಮೆ ಆಗುತ್ತದೆಯೆ? ಎಂದೇ ಪ್ರಶ್ನಿಸುತ್ತಾಳೆ. ಇದರಿಂದ ಕುಪಿತನಾದ ನೀಲಯ್ಯ ಗಂಡನಿಗೆ ತಿರುಗಿ ಮಾತನಾಡುವುದು ಅವಿಧೇಯತೆಯೆಂದು ಭಾಷೆ ಕೊಡಲು ಒತ್ತಾಯಿಸುತ್ತಾನೆ. ಹೆಣ್ಣೆಂಬ ಜಾತಿಯನ್ನು ನಂಬುವುದಕ್ಕೆ ಆಗುವುದಿಲ್ಲ ಎಂಬ ನೀಲಯ್ಯನ ಮಾತು ಕೇವಲ ಪುರುಷರು ಮಾತ್ರ ನಂಬಿಕೆಗೆ ಅರ್ಹರೇ? ಎಂಬ ಪ್ರಶ್ನೆ ಮೂಡುವಂತೆ ಮಾಡುತ್ತದೆ. ಮುಂದೆ ಸಂಕಮ್ಮ ತನ್ನ ಗಂಡನ ಮಾತುಗಳಿಂದಾದ ನೋವನ್ನು ಮರೆತು, ತಾನೆಷ್ಟು ಸುಂದರವಾಗಿದ್ದಾಳೆಂಬುದನ್ನು ಬಣ್ಣಿಸಲು ಕೇಳುವಾಗ ಆ ಸಮಯವನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುವ ನೀಲಯ್ಯ ಆಗಲಾದರೂ ಭಾಷೆ ಕೊಡುತ್ತೀಯಾ ಎನ್ನುತ್ತಾನೆ. ಬುದ್ಧಿವಂತೆ ಸಂಕಮ್ಮ ಉತ್ತರಿಸದೆ ವರ್ಣಿಸಲು ಹೇಳುತ್ತಾಳೆ. ನೀಲಯ್ಯ ಸಂಕಮ್ಮಳ ಸೌಂದರ್ಯವನ್ನು ವರ್ಣಿಸುತ್ತಾ 'ಹುಟ್ಟುಬಂಜೆ' ಎಂದು ಸಂಬೋಧಿಸುತ್ತಾನೆ. ಪ್ರೀತಿಸಿ ಮದುವೆಯಾದ ಈತನೇ ಆಕೆಯ ತಾಯ್ತನದ ಕುರಿತು ಮಾತನಾಡಿದಾಗ ಸಂಕಮ್ಮ ಗೊಡ್ಡು ಹಠಕ್ಕೆ ಮುಂದಾಗಿ ಭಾಷೆ ಕೊಡಲು ನಿರಾಕರಿಸುತ್ತಾಳೆ. ಹೆಣ್ಣಿನ ಬದುಕು ಪೂರ್ಣಗೊಳ್ಳುವುದು ತಾಯ್ತನದ ನಂತರವೇ ಎಂದು ಪ್ರತಿಪಾದಿಸಿ ಮಾನಸಿಕವಾಗಿ ಹಿಂಸಿಸುವ ಕ್ರೌರ್ಯ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇಂದಿಗೂ ಇರುವುದನ್ನು ಕಾಣಬಹುದು. ಕೊನೆಯದಾಗಿ ಕುರಿಗಾಹಿ, ಗೊಲ್ಲರನ್ನೂ ಬಿಡದೆ ಅನುಮಾನಿಸುವಾಗ ಆತನ ಅನುಮಾನದ ಮಾತುಗಳಿಂದ ಬೇಸತ್ತ ಸಂಕಮ್ಮ ಭಾಷೆ ನೀಡಲು ನಿರಾಕರಿಸುತ್ತಾಳೆ. ನಿರಾಕರಣೆಯ ಹಿಂದೆ ಆಕೆಗಾಗಿರಬಹುದಾದ ಮಾನಸಿಕ ನೋವು, ಹಿಂಸೆಗಳ ಜೊತೆಗೆ ಆಕೆಯ ಆತ್ಮಗೌರವ ಹಾಗೂ ಸ್ವಾಭಿಮಾನಕ್ಕೆ ಉಂಟಾಗಿರುವ ಅವಮಾನವನ್ನು ಇಲ್ಲಿ ಗಮನಿಸಬಹುದಾಗಿದೆ. ಅಂತಿಮವಾಗಿ ನೀಲಯ್ಯನ ಕೋಪ ಕ್ರೌರ್ಯಕ್ಕೆ ತಿರುಗಿ ದೈಹಿಕವಾಗಿ ಹಿಂಸೆ ಕೊಡಲು ಮುಂದಾಗುತ್ತಾನೆ. ಆಕೆಯ ಮುಂದಲೆಯನ್ನು ಹಿಡಿದು ಕಾಗೆ-ಗೂಬೆಗಳ ಧ್ವನಿಯೂ ಇಲ್ಲದ ನಿರ್ಜನ ಪ್ರದೇಶಕ್ಕೆ ಎಳೆದು ತಂದು, ತೊಟ್ಟ ಆಭರಣಗಳನ್ನು ತೆಗೆಯಿಸಿ, ಉಟ್ಟ ಸೀರೆಯನ್ನು ತೆಗೆಯಲು ಹೇಳಿದಾಗ "ಹೆಂಡ್ತಿ ಅನ್ನೋ ಆಸೆ ನನುಗೆ ಬ್ಯಾಡ ಗಂಡ ಅನ್ನೋ ಆಸೆ ನಿನುಗೆ ಬ್ಯಾಡ, ಒಡವೆ ವಸ್ತ್ರನೆಲ್ಲ ಕೊಡ್ತೀನಿ ಸ್ವಾಮಿ-ಉಟ್ಟ ಸೀರೆ ಕೇಳುಬ್ಯಾಡಿ ನಿಮ್ಮ ಪಾದ ಹೊತ್ತೇನು" ಎಂದು ಕಣ್ಣೀರು ಸುರಿಸುತ್ತಾ ಸಂಕಮ್ಮ ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ. ಗಂಡನ ಈ ಹೀನಕೃತ್ಯಕ್ಕೆ ಸಂಬಂಧವನ್ನೇ ಕಡಿದುಕೊಳ್ಳಲು ಮುಂದಾಗುತ್ತಿದ್ದಾಳೆಂದರೆ ಸಂಬಂಧಕ್ಕಿಂತ ತನ್ನ ಮಾನ ಮುಖ್ಯವೆಂದು ಈಕೆ ಅರಿತ್ತಿದ್ದಷ್ಟು ನೀಲಯ್ಯ ಅರಿತಿದ್ದರೆ ಹೆಂಡತಿಯನ್ನು ಅನುಮಾನಿಸುತ್ತಿರಲಿಲ್ಲವೆಂಬುದು ಗಮನಿಸಬಹುದಾದ ಅಂಶವಾಗಿದೆ. ಆದಾಗ್ಯೂ ಆಕೆಯ ಮಾನಸಿಕ ತಳಮಳವನ್ನು ಲಕ್ಷಿಸದೆ ವಿವಸ್ತ್ರಗೊಳಿಸಿ ಹಿಂಸಿಸುತ್ತಾನೆ. ಈ ಹಿಂಸೆಗಳ ನಡುವೆಯೂ ಭಾಷೆ ಕೊಡಲು ಮತ್ತೂ ಪೀಡಿಸುತ್ತಾನೆ. ಇದಕ್ಕೆ ಸೊಪ್ಪು ಹಾಕದ ಸಂಕಮ್ಮಳನ್ನು ಈ ಸ್ಥಿತಿಯಲ್ಲಿ ಹೀಗೆ ಬಿಟ್ಟು ಹೋದರೆ ಯಾರಾದರೂ ಹಾರಿಸಿಕೊಂಡು ಹೋಗುತ್ತಾರೆಂದು ಯೋಚಿಸುತ್ತಾ, ತಾನು ಕಲಿತ ಮಂತ್ರ ವಿದ್ಯೆಗಳನ್ನು ಪ್ರಯೋಗಿಸಿ ಮೃಗಗಳು, ವಿಷಜಂತುಗಳನ್ನು ಕರೆದು ಆಕೆಗೆ ಕಾವಲಾಗಿರಿಸಿ ಬೇಟೆಗೆ ಹೋಗುತ್ತಾನೆ. ಅಂತೂ ಇಂತಹ ಸ್ಥಿತಿಯಲ್ಲೂ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಹೆಣ್ಣಿನ ಬಾಳನ್ನು ಹಾಳುಗೆಡವುದರಲ್ಲಿ ಪುರುಷರು ನಿಸ್ಸೀಮರು ಎಂಬುದನ್ನು ಈತನ ಮಾತು ಹಾಗೂ ಕ್ರಿಯೆಗಳೇ ಬಿಂಬಿಸುತ್ತವೆ.

ನೀಲಯ್ಯ ಸಂಕಮ್ಮಳ ಮೇಲಿನ ಅಪಾರವಾದ ಪ್ರೀತಿಯಿಂದ ಆಕೆಯೊಬ್ಬಳನ್ನೇ ಬಿಟ್ಟು ಹೋಗಲು ಮನಸ್ಸಿಲ್ಲದ ಕಾರಣ ಹೀಗೆ ಮಾಡಿದ ಎಂದು ಸಮರ್ಥಿಸಿಕೊಳ್ಳುವುದು ಸರಿಯಲ್ಲ. ಸಂಕಮ್ಮಳಿಗೆ ನಿಜವಾಗಿ ತನ್ನ ಗಂಡನ ಮೇಲಿದ್ದ ಗೌರವ, ಪ್ರೀತಿಯಿಂದಲೇ ಈ ನೋವುಗಳನ್ನು ಸಹಿಸಿಕೊಂಡದ್ದು ಗೋಚರವಾಗುವಂತಹದ್ದು. ಹಾಗೆಂದ ಮಾತ್ರಕ್ಕೆ ಪ್ರೀತಿ ಎಂದರೆ ಸೈರಣೆ ಎಂಬರ್ಥ ಕಲ್ಪಿಸಿಕೊಳ್ಳಬಾರದು. ಪ್ರೀತಿಯ ಹಿಂದಿನ ಕ್ರೌರ್ಯವನ್ನು, ಪ್ರೀತಿಯ ಮಗ್ಗುಲಲ್ಲೇ ಇರುವ ಅನುಮಾನವನ್ನು ನೀಲಯ್ಯನ ಮೂಲಕ ಕಾವ್ಯದ ಈ ಭಾಗ ತೆರೆದಿಡುತ್ತದೆ.

ಒಟ್ಬಾರೆ ಸಂಪ್ರದಾಯದ ನಿಮಿತ್ತ ಬೇಟೆಗೆ ಹೋಗುವ ನೀಲಯ್ಯನಿಂದ ಪುರುಷಪ್ರಧಾನ ವ್ಯವಸ್ಥೆಯ ಸ್ವಾರ್ಥದಲ್ಲಿ ಸಂಕಮ್ಮ ಹೇಗೆ ನಲುಗಿ ಹೋಗುತ್ತಾಳೆ ಎಂಬುದನ್ನು ಕಾವ್ಯದ ಈ ಭಾಗ ಚಿತ್ರಿಸುತ್ತದೆ. ಪತಿಯಾದವನು ಈಕೆಯ ಆಂತರ್ಯದ ತುಮುಲಗಳನ್ನು ಅರಿಯಲು ಪ್ರಯತ್ನಿಸುವುದೇ ಇಲ್ಲ. ಸಂಕಮ್ಮ ಇಂದಿನ ಶೋಷಿತ ಹೆಣ್ಣಿನ

ISBN – 978-93-5526-247-9

ಪ್ರತೀಕವಾಗಿ ಮಾತ್ರವಲ್ಲದೆ ತನ್ನ ಅಸ್ಮಿತೆ, ಆತ್ಮಾಭಿಮಾನಕ್ಕೆ ಹೋರಾಟ ಮಾಡುವ ಹೆಣ್ಣಾಗಿ ಕಾಣುತ್ತಾಳೆ. ಹೆಣ್ಣಿನ ಅಂತರಾಳದ ಒಳಧ್ವನಿಯನ್ನು ಕೇಳಿಸಿಕೊಳ್ಳದ ವ್ಯವಸ್ಥೆ ಪ್ರಸ್ತುತ ಸಮಾಜದಲ್ಲಿಯೂ ಜೀವಂತವಾಗಿದೆ. ಇದಕ್ಕೆ ಜ್ವಲಂತ ಉದಾಹರಣೆಗಳ ಅಗತ್ಯವಿಲ್ಲ. ಒಟ್ಟಾರೆ ಪುರುಷಪ್ರಧಾನ ಸಮಾಜದ ಹೆಣ್ಣಿನ ಮೇಲಿನ ಗ್ರಹಿಕೆಗಳು ಬದಲಾದರೆ ಹೆಣ್ಣಿನ ಬದುಕು ಬದಲಾಗುತ್ತದೆ.

**ಆಕರಗ್ರಂಥಗಳು:**


1. ಅಂಬಳಿಕೆ ಹಿರಿಯಣ್ಣ : ಜಾನಪದ ಪರಿಭಾವನ, ಸಂವಹನ ಪ್ರಕಾಶನ, ಮೈಸೂರು, 2001
2. ಅರವಿಂದ ಮಾಲಗತ್ತಿ (ಪ್ರ.ಸಂ) : ಜಾನಪದ ತತ್ವಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1999.
3. ಕೃಷ್ಣಕುಮಾರ್ ಸಿ ಪಿ : ಜನಪದ ಸಾಹಿತ್ಯ ಪ್ರವೇಶಿಕೆ, ಚಿತ್ರಭಾನು ಪ್ರಕಾಶನ, ಮೈಸೂರು, 1981.
4. ಗಂಗಾಧರ ಕೆ. ಎಸ್ (ಪ್ರ.ಸಂ) : ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ , ಮೈಸೂರು ವಿ.ವಿ, 2011
5. ಪರಮಶಿವಯ್ಯ ಜಿ. ಶಂ : ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಅಭಿನವ ಪ್ರಕಾಶನ, ಬೆಂಗಳೂರು.
6. ಭಾನುಮತಿ ವೈ ಸಿ : ಜಾನಪದ ಭಿತ್ತಿ, ಸಂವಹನ ಪ್ರಕಾಶನ, ಮೈಸೂರು, 1999.
7. ರಾಜಶೇಖರ ಪಿ ಕೆ (ಸಂ) : ಮಲೆಯ ಮಾದೇಶ್ವರ, ಸಂಯುಕ್ತ ಪ್ರಕಾಶನ ಮೈಸೂರು, 1973.
8. ವೀರಣ್ಣ ದಂಡೆ (ಸಂ) : ಸುವರ್ಣ ಜಾನಪದ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,


***

# 40.ಜನಪದ ವೃತ್ತಿ ಗಾಯಕ ಸಂಪ್ರದಾಯ

ಅನಿತ ಕೆ.ವಿ

ಜನಪದವು ಒಂದು ಸಮೂಹ ಕಲೆ. ಹೇಳುವ, ಕೇಳುವ ಈ ಎರಡೂ ಹಿನ್ನಲೆಯಲ್ಲೂ ಒಂದು ಸಮೂಹದೊಂದಿಗೆ ಸಾಗುತ್ತದೆ. ಇದು ಮೌಖಿಕ ಪರಂಪರೆ. ಈ ಮೌಖಿಕ ಪರಂಪರೆಯು ಇಂದು ಲಿಖಿತ ಪರಂಪರೆಯಾದ ಕಾರಣವಾಗಿ, ವಿಶ್ವದ ಹಲವು ಜನಪದ ಇಲ್ಲವೇ ಇತರ ಯಾವುದೇ ಸಾಹಿತ್ಯದ ಜೊತೆಯಲ್ಲಿ ನಿಲ್ಲಿಸಿ ಅರ್ಥೈಸಬಹುದಾಗಿದೆ. ವಿಶ್ವದಲ್ಲಿ ಒಂದೇ ಪರಂಪರೆಯಂತೆ ಜಾನಪದ ಪರಂಪರೆಯು ದಾಖಲಾದರೂ, ಅಣುವಂತೆ ಚಿಕ್ಕ ಚಿಕ್ಕ ಘಟಕದಲ್ಲೂ ಅದರ ವಿಭಿನ್ನತೆಯನ್ನು ಸಂಶೋಧಿಸಬಹುದು. ಈ ಜಾನಪದ ಸಮುದ್ರವು ನಿರ್ದಿಷ್ಟ ಕ್ಷೇತ್ರದಲ್ಲಿಯೂ, ಅದರಾಚೆಯ ಲೋಕ ವ್ಯಾಪಕವಾಗಿಯೂ ಹರಿವನ್ನು ಅವಲಂಬಿಸಿದೆ.

ಜಾನಪದವೆಂಬ ಸಂಗೀತದೊಳಗೆ ಜನಪದ ರಾಗದ ಹಲವು ಶ್ರುತಿಗಳು ಮೇಳೈಸಿವೆ. ಈ ಸೊಲ್ಲು ಆಯಾ ಮಣ್ಣಿನದು. ಈ ಮಣ್ಣಿನಿಂದ ಮೂಡಿದ ವ್ಯಕ್ತಿತ್ವದ ರಚನೆಯಾಗಿದೆ. ಮಾನವಿಕ ಶಾಸ್ತ್ರದ ಮೂಲ ನೆಲೆಯಾಗಿ ಜೈವಿಕ ಹಾಗೂ ಭೌತಿಕ ರಚನೆಗಳನ್ನು ಸಂಘಟಿಸಿದೆ. ಇಲ್ಲಿ ಮನುಷ್ಯ ಮೂಲ ಆಕರ. ಅವನ ಸೊಲ್ಲನ್ನು ಮೂಲವಸ್ತುವಾಗಿ ಗುರ್ತಿಸಬಹುದು. ಈ ಆಂಶಿಕ ಸ್ವರೂಪದ ಜಾನಪದವು ಮಾನವಿಕ ನೆಲೆಯಲ್ಲಿ ನೆಲೆಯೂರಿದ ಬಗೆಯು ವಿಶೇಷವಾದುದು. ವಿಶ್ವವ್ಯಾಪಿಯ ಈ ಕಲೆಯು ಮನುಷ್ಯನ ಬದುಕನ್ನು ಪ್ರಕಟಿಸುವ ಒಂದು ಭಾಗವಾಯಿತು. ಒಟ್ಟಾರೆಯಾಗಿ ಜಾನಪದವು ವಿಶ್ವದ ಎಲ್ಲಾ ಸಾಹಿತ್ಯಕ್ಕೂ ತಾಯಿಯಾಗಿ ತನ್ನ ವೈವಿಧ್ಯನೆಲೆಯ ಕೂಸುಗಳಿಗೆ ಜನ್ಮನೀಡಿದೆ. ಇಂದಿನ ಎಲ್ಲಾ ಭಾಷೆಗಳಲ್ಲೂ ಅಭೂತಪೂರ್ವವಾಗಿ ಬೆಳವಣಿಗೆ ಸಾಧಿಸಿರುವ ಸಾಹಿತ್ಯದ ಹಿಂದೆ ಜನಪದ ಬೇರುಗಳು ದಟ್ಟವಾಗಿ ಬೆಳೆದಿವೆ. ಆಧುನಿಕತೆ ಎಂಬುದೇ ಜಾನಪದ ಬೇರಿನ ಸತ್ವಯುತ ಫಲ.

ಈ ಜಾನಪದವನ್ನು ಹಲವು ಜನಪದರು ಎರಡು ಮಾದರಿಯಲ್ಲಿ ಇಂದಿಗೂ ಕಾಪಿಡುತ್ತಿದ್ದಾರೆ. ನಿರ್ವಚಿಸುವ ಪರಂಪರೆ ಮತ್ತು ಸ್ವೀಕರಿಸುವ ಪರಂಪರೆ. ಇಲ್ಲಿ ನಿರ್ವಚಿಸುವ ಪರಂಪರೆ ಎಂದರೆ ನೀಡುವ, ಹೇಳುವ ಎಂಬರ್ಥದಲ್ಲಿ ಗಮನಿಸಬಹುದು. ಇವರಿಗೆ ಬಹುದೊಡ್ಡ ಜವಾಬ್ದಾರಿ ಇರುತ್ತದೆ. ಒಂದು ಪರಂಪರೆಯನ್ನು ತನ್ನ ಸಂಪತ್ತು ಎಂಬಂತೆ ಉಳಿಸುತ್ತಾ, ತನ್ನಂತಹ ಆಸಕ್ತ ಮನಸ್ಸುಗಳ ಮೂಲಕ ಬೆಳೆಸುತ್ತಾ ಸಾಗುತ್ತಾರೆ. ಈ ಸ್ವೀಕರಿಸುವ ಪರಂಪರೆಯ ಜವಾಬ್ದಾರಿಯು ವಿಭಿನ್ನವಾದುದು. ಇವರದು ಬೆಳೆಸುವ ಮನೋವಿಶಾಲತೆಯಲ್ಲಿ ಒಂದು ಸಂಸ್ಕೃತಿಯ ಮುಂದುವರಿಕೆ ಅಡಗಿರುತ್ತದೆ. ನಿರ್ವಚಿಸುವ ಪರಂಪರೆಯಲ್ಲಿ ರುಚಿ, ಅಭಿರುಚಿ ಹಾಗೂ ಉದ್ಯೋಗ ವಕ್ತಾರ ಪರಂಪರೆಗಳು ಕಂಡುಬರುತ್ತವೆ. ಈ ರುಚಿ ಹಾಗೂ ಅಭಿರುಚಿಗಳು ಹಲವರಲ್ಲಿ ಮೂಡುವುದು ಸಹಜ. ತನ್ನ ಆಸಕ್ತ ಮನಸ್ಸು ಹಾಗೂ ಕಾಲಕ್ಕೆ ಅನುಗುಣವಾಗಿ ನಿರ್ವಚಿಸುತ್ತಾ ಸಾಗುತ್ತಾರೆ. ಆದರೆ ಉದ್ಯೋಗ ವಕ್ತಾರರು ತಮ್ಮ ಸಂಪತ್ತು ಎಂಬಂತೆ ಸ್ವೀಕರಿಸಿ, ಈ ಪರಂಪರೆಯ ಸಂಪೂರ್ಣ ಭಾಗವಾಗಿರುತ್ತಾರೆ. ಜಾನಪದ ಪರಂಪರೆಯು ಇವರ ಮೂಲಕವೇ ಒಂದು ಶಕ್ತಿಯುತ ಪರಂಪರೆಯಾಗಿ ಸಾಗುತ್ತಿದೆ. ಇವರನ್ನು ವೃತ್ತಿಗಾಯಕರು ಎಂದು ಕರೆಯಲಾಗುತ್ತದೆ. ಇವರು ಈ ಕಾರ್ಯದಲ್ಲಿ ತೊಡಗಲು ಮೂಲ ಕಾರಣ ಭಕ್ತಿ ಹಾಗೂ ನಂಬಿಕೆ. ಇನ್ನು ಕೆಲವರಿಗೆ ಬದುಕು. ಜಾನಪದದ ವಕ್ತಾರರಾದ ಇವರ ಕುರಿತು ವಿಶೇಷ ಅಧ್ಯಯನವೇ ಈ ಪ್ರಬಂಧದ ಉದ್ದೇಶವಾಗಿದೆ.

## ವೃತ್ತಿ ಗಾಯಕ ಪರಂಪರೆ

ಈ ವೃತ್ತಿಗಾಯಕ ಪರಂಪರೆ ಎಂಬುದನ್ನು ನಮ್ಮ ಕನ್ನಡ ಮಣ್ಣಿನ ನೆಪದಲ್ಲಿ ಗಮನಿಸಿದಾಗ ಅದರ ವಿಸ್ತಾರ, ಬಹುಳತೆ ಎಲ್ಲವೂ ವಿಶ್ವವ್ಯಾಪ್ತಿಯ ಸ್ವರೂಪವನ್ನೇ ತೆರೆದಿಡುತ್ತವೆ. ಈ ಅಧ್ಯಯನವು ವಿಶ್ವದ ಒಂದು ಬಿಂದುವಿನಷ್ಟರ ಕಥೆಯಾದರೆ, ವಿಶ್ವದ ಕಥೆಯೂ ಇದೇ ಮಾದರಿಯ ಬೃಹತ್ ಲೋಕವೆನ್ನಬಹುದು.

ಈ ವೃತ್ತಿಗಾಯಕರನ್ನು ಜಿ.ಶಂ ಪರಮಶಿವಯ್ಯ ಅವರು ಎರಡು ಮಾದರಿಯಲ್ಲಿ ವಿಂಗಡಿಸಿ ಅಧ್ಯಯನ ಮಾಡಿದ್ದಾರೆ. 1. ಧಾರ್ಮಿಕ ಕಥೋಪಜೀವಿಗಳು 2. ಲೌಕಿಕ ಕಥೋಪಜೀವಿಗಳು ಈ ವಿಂಗಡಣೆಯು ಸುಮಾರು 1972ರಲ್ಲಿ ನಡೆಸಿದ ಸಂಶೋಧನೆಯ ವಿಚಾರವಿದು. ಐವತ್ತು ವರ್ಷಗಳಲ್ಲಿ ಜನಪದ ಕ್ಷೇತ್ರದಲ್ಲಿ ಅಷ್ಟು ವ್ಯಾಪಕತೆಯ ಬೆಳವಣಿಗೆಗಳು ಕಂಡುಬರದಿದ್ದರೂ ನಶಿಸಬಹುದಾದ ಜನಪದ ಸಂಸ್ಕೃತಿಯು ಹೊಸ ರೂಪಗಳನ್ನು ತಾಳುತ್ತಿರುವುದು

ISBN – 978-93-5526-247-9

ವಿಶೇಷ. ಆದ್ದರಿಂದ ಈ ವಿಂಗಡಣೆಗಳನ್ನು ಸಮ್ಮಿಲನಗೊಳಿಸಿ ಒಂದೇ ಮುಖದಲ್ಲಿ ಕಾಣಬಹುದು. ಇವರನ್ನು ಸಾಂಸ್ಕೃತಿಕ ಪ್ರದರ್ಶಕರು ಎನ್ನಬಹುದು. ಇವರಲ್ಲಿ ಪರಂಪರೆ ಉಳಿದಿದೆ ಎನ್ನುವುದಕ್ಕಿಂತ ಪರಂಪರೆಯನ್ನು ಪ್ರತಿನಿಧಿಸುತ್ತಿದ್ದಾರೆ ಎನ್ನಬಹುದು. ಪ್ರಾದೇಶಿಕ ವಿಭಿನ್ನತೆಯ ಆಧಾರದ ಮೇಲೆ ಅಲ್ಲಿನ ಸಾಂಸ್ಕೃತಿಕ ಪ್ರಚುರತೆ ವಿಕಾಸಗೊಳ್ಳುತ್ತದೆ. ಈ ವಿಕಾಸದ ನೆಲೆಯಲ್ಲಿ ಐದು ರೀತಿಯ ಜಾನಪದ ಪ್ರಾದೇಶಿಕ ವಿಂಗಡಣೆಗಳು ಹೀಗೆ ಇವೆ. ಇನ್ನೂ ಒಳ ವಿಂಗಡಣೆಗಳ ಲಕ್ಷಣಗಳನ್ನು ಹೊಂದುತ್ತಾ ಸಾಗುತ್ತಿವೆ. ಆದರೆ ಸಂಸ್ಕೃತಿಯು ಈಗ ವಿಶ್ವದೊಳಗಿನ ಏಕ ಮಾದರಿಯ ಅನುಕರಣೆಗೆ ಸಿಲುಕಿರುವ ಕಾರಣ, ಪ್ರಾದೇಶಿಕ, ಸ್ಥಳೀಯ ಎನ್ನುವ ಪರಂಪರೆಗಳು ಉಳಿಕೆಯ ಪಳವಳಿಕೆಯಂತೆ ದರ್ಶನವಾಗುತ್ತಿವೆ. ತೊಗಲು ಅನ್ಯದ್ದಾದರೂ ಜೀವ ಮಾತ್ರ ನಮ್ಮದು ಎಂಬಂತಿದೆ. ಈ ಸಂದರ್ಭದಲ್ಲಿ ನಮ್ಮ ವೃತ್ತಿಗಾಯಕರ ಸಂಪ್ರದಾಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಬಹುದು.

## ದೇವರ ಗುಡ್ಡರು ಹಾಗೂ ನೀಲಗಾರರ ಸಂಪ್ರದಾಯ

ಮೈಸೂರು ಜಿಲ್ಲೆಯ ಅದರಲ್ಲೂ ಮಲೆಮಾದೇಶ್ವರ ಬೆಟ್ಟದ ಸುತ್ತಣ ಪ್ರಾದೇಶಿಕ ಪರಂಪರೆಯಂತೆ ಕಂಡುಬರುವ ದೇವರಗುಡ್ಡರು ಮಾದೇಶ್ವರನ ಸಂಪ್ರದಾಯದ ವಕ್ತಾರರು. ಇದರಲ್ಲಿಯೇ ಹಲವು ಆಚರಣೆಯ ಭಿನ್ನತೆಗಳಿದ್ದರೂ ಎಲ್ಲರ ಮೂಲೋದ್ದೇಶವು ಒಂದೇ ಆಗಿದೆ. ಸಿರಿಯ ದೇವರಗುಡ್ಡರು ಮತ್ತು ಅಲೆಮಾರಿ ಗುಡ್ಡರು ಎಂಬುದಾಗಿ ಕಂಡುಬಂದರೂ ಈಗ ಈ ಪಂಗಡಗಳು ಹೆಸರಿಗಷ್ಟೇ ಉಳಿದಿವೆ. ಇವರು ಬಳಸುವ ಕಂಸಾಳೆಯು ಶತಮಾನಗಳ ಇತಿಹಾಸವೊಂದಿದೆ. ಸಾಹಿತ್ಯದ ಪ್ರಮುಖ ವಾದ್ಯವೆಂಬಂತೆ ಕಾವ್ಯಗಳಲ್ಲಿ ಭಿತ್ತರಗೊಂಡಿದೆ. ಕಾಂಸ್ಯ ಎಂದರೆ ಕಂಚು ತಾಳವೇ ಕಂಸಾಳೆಯಾಗಿದೆ ಎಂದು ತಿಳಿಯಬಹುದು. ಕೇಶಿರಾಜನು ಶಬ್ದಮಣಿದರ್ಪಣದಲ್ಲಿ "ಪೂರ್ವ ಪದಾಂತಕ್ಕೆ ದೀರ್ಘಮುಂ ಉತ್ತರ ಪದಾದಿಗೆ ಲೋಪಮುಮಾಗಿ ಕಾಂಸ್ಯತಾಳಕ್ಕೆ ಕಂಸಾಳಂ ಎಂದಾಯ್ತು"(ಸೂತ್ರ.208) ಈ ರೀತಿಯಲ್ಲಿ ಉಲ್ಲೇಖಿಸಿದ್ದಾನೆ. ಈ ಕಂಸಾಳೆ ಪದವನ್ನು ಹರಿಹರ, ವಿರೂಪಾಕ್ಷಪಮಡಿತ, ರಾಘವಾಂಕ, ಭೀಮಕವಿ, ಸೂರ್ಯಕವಿ, ಗೋವಿಂದ ವೈದ್ಯ ಮೊದಲಾದ ಕವಿಗಳು ಹಳಗನ್ನಡ, ನಡುಗನ್ನಡ ಸಾಹಿತ್ಯದಲ್ಲಿ ಬಳಸಿದ್ದಾರೆ.

ದೇವರ ಗುಡ್ಡರ ಕುರಿತು ಅಭೂತಪೂರ್ವ ಅಧ್ಯಯನಗಳು, ಸಂಶೋಧನೆಗಳು ನಡೆದಿವೆ. ಇಂದಿಗೂ ಈ ಪರಂಪರೆಯನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಆದರೆ ಈ ದೇವರಗುಡ್ಡರ ಸಾಂಸ್ಕೃತಿಕ ಪರಂಪರೆಯಲ್ಲಿ ಕೆಲವರು ಕಂಸಾಳೆಯವರಾಗಿ ಅಭಿರುಚಿ ಪರಂಪರೆಯಲ್ಲಿ ಯಶಸ್ವಿಯಾಗಿದ್ದಾರೆ. ಇವರಲ್ಲಿ ಕೆಲವರು ತಂಡವನ್ನು ರಚಿಸಿಕೊಂಡು, ಮಾದೇಶ್ವರನ ಕಾವ್ಯದ ಸೊಬಗನ್ನು ಕಂಸಾಳೆಯಲ್ಲಿ ಪ್ರದರ್ಶನ ಕಲೆಯಂತೆ, ಅಭಿನಯ ಕಲೆಯಂತೆ ಕಾಣಿಸುತ್ತಿದ್ದಾರೆ. ಕೆಲವರು ಹಣಕ್ಕಾಗಿ ಅಭಿನಯವನ್ನು ವ್ಯಾಪಾರೀಕರಣ ಮಾಡಿದ್ದರೂ ಇವರು ಈ ಪರಂಪರೆಯನ್ನು ವೃತ್ತಿಕಾಯಕದಲ್ಲಿ ಮುಂದುವರೆಸದೇ ಅದೊಂದು ಪ್ರವೃತ್ತಿಯ ಆದಾಯವಾಗಿ ಮುಂದುವರೆಸುತ್ತಿದ್ದಾರೆ. ಆದರೆ ಇಂತಹ ಅಪರೂಪದ ಕಲೆಗಳನ್ನು ಹಣದ ಮೂಲಕ ಕುಣಿಸುವ, ಹಾಡಿಸುವ ಕಲೆಯಾಗಿ ಪರಿವರ್ತಿಸುತ್ತಿರುವ ಕೇಳುಗ-ವಲಯವೂ ಆನಂದದ ಸವಿಯನ್ನು ವ್ಯಾಪಾರೀಕರಣ ಮಾಡುತ್ತಿರುವುದು ಜನಪದ ಕಲೆಯ 'ಅವನತಿಯ ಪರಿವರ್ತನೆ' ಎನ್ನಬಹುದು. ಈ ವಿಚಾರವು ಜನಪ್ರಿಯಗೊಂಡ ಎಲ್ಲಾ ಜನಪದ ಕಲೆಗಳಿಗೂ ಅನ್ವಯಿಸುತ್ತದೆ. ಇಲ್ಲಿ ಬಳಕೆಯಾಗುವ ವಿದ್ಯೆ, ಪ್ರಾಣಿ-ಪಕ್ಷಿಗಳು, ಕುಟುಂಬ ವ್ಯವಸ್ಥೆ ಈ ವ್ಯಾಪಾರೀಕರಣದ ಸರಕಾಗಿ ಉಳಿದಿವೆ. ಇಲ್ಲಿ ಮಹಾಕಾವ್ಯ ಸ್ವರೂಪಿ ಕಥನಗೀತೆಗಳು ಕಂಠಪಾಠದ ಸೊಲ್ಲುಗಳಾಗಿ ಶರೀರವೂ, ಶಾರೀರವೂ ಇಲ್ಲದೆ 'ನಡುವೆ ಸುಳಿವಾತ್ಮ'ಗಳಾಗಿ ಕರಗುತ್ತಿವೆ.

ನೀಲಗಾರರು ಮೂಲತಃ ದೇವರಗುಡ್ಡರಂತೆ ಕಂಡುಬರುವ ವಿಭಿನ್ನ ಸಂಪ್ರದಾಯದವರು ಒಂದೇ ಪರಿಸರದಲ್ಲಿ ಇರುವ ಇವರಿಬ್ಬರೂ ವೇಷಭೂಷಣ ಹಾಗೂ ಬಳಸುವ ವಾದ್ಯ, ಸಾಹಿತ್ಯದಲ್ಲಿ ವಿಶೇಷವಾಗಿ ಪರಸ್ಪರ ಆಕರ್ಷಿತರಾಗುತ್ತಾರೆ. ದೇವರಗುಡ್ಡರು ರುದ್ರಾಕ್ಷಿಧಾರಿಗಳಾದರೆ, ನೀಲಗಾರರು ಕರಿಯ ನಿಲುವಂಗಿಯೊಂದಿಗೆ ಕೆಂಪುಪೇಟ, ಕಚ್ಚೆಯ ಪಂಚೆ ಜೊತೆಗೆ ಜೋಳಿಗೆ ಹೊಂದಿರುತ್ತಾರೆ. ಇವರಿಗೂ ಚೌಡಿಕೆಯವರಿಗೂ ಅಂತಹ ವ್ಯತ್ಯಾಸವಿಲ್ಲದಿದ್ದರೂ ಪೇಟದಲ್ಲಿ ಮಾತ್ರ ಬೇರೆ ಬೇರೆಯಾಗಿ ಕೆಲವು ಸಲ ನೋಡುಗರು ಗೊಂದವಾಗಿ ಕಾಣುತ್ತಾರೆ. ಚೌಡಿಕೆಯವರು ಬಿಳಿಯಪೇಟ ಧರಿಸಿ ಚೌಡಿಕೆ ಹೊಂದಿರುತ್ತಾರೆ. ನೀಲಗಾರರು ತಂಬೂರಿ ವಾದ್ಯದವರು. ಇವರು ಮೂಲತಃ ವೈಷ್ಣವ ಸಂಪ್ರದಾಯದವರು. ಇವರು ಲೌಕಿಕ ಕಥೆಗಳನ್ನು ಮುಕ್ತವಾಗಿ ಹಾಡುತ್ತಾ ಬಂದವರು. ಇವರ ಸಹಚರರು ತಾಳ ಮತ್ತು ಢಕ್ಕೆಗಳ ಮೂಲಕ ಹಿಮ್ಮೇಳ ನೀಡುವರು. ಮನೆಮನೆಗೂ ಸಾಗುತ್ತಾ ಹಾಡುವ ಇವರು ಭಿಕ್ಷಾಟನೆಯ ಮಾರ್ಗವಾಗಿಯೂ ದೈವಭಕ್ತಿ ರೂಪಿಸಿರುವದನ್ನು ಕಾಣಬಹುದು. ಈ ಚೌಡಿಕೆಯವರು ವೇಷದಲ್ಲಿ

ISBN – 978-93-5526-247-9

ನೀಲಗಾರರಂತೆ ಕಂಡುಬಂದರೂ ಸಂಸ್ಕೃತಿಯಲ್ಲಿ ಸಂಪೂರ್ಣವಾಗಿ ಬೇರೆಯದೇ ಆಯಾಮ ಹೊಂದಿದ್ದಾರೆ. ಅಲೌಕಿಕ ಸಾಧನೆಯ ಪರಮೋನ್ನತಿ ಇವರದು. ಶಕ್ತಿ ದೇವತೆಯಾದ ದೇವಿಯ ಆರಾಧಕರು ಇವರು. ದೇವಿಸ್ತುತಿಯಲ್ಲಿ ಭಿಕ್ಷೆ ಪಡೆಯುತ್ತಾರೆ. ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ, ರಾಯಚೂರು ಜಿಲ್ಲೆಯ ಮುನೀರಾಬಾದ್, ಬಳ್ಳಾರಿ ಜಿಲ್ಲೆಯ ಉಚ್ಚಂಗಿಯಲ್ಲಿ ಕಂಡುಬಂದರೂ ಅತಿಹೆಚ್ಚು ಜನಪ್ರಿಯವೆಂದರೆ ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಚೌಡಿಕೆಯವರು ಪ್ರಸಿದ್ಧ. ರೇಣುಕೆಯ ಮಹಿಮೆಯಲ್ಲಿ ಮೂವರು ಗಾಯಕರು ಒಟ್ಟಿಗೆ ಸಾಗುತ್ತಾರೆ. ಒಬ್ಬರು ಪ್ರಧಾನ ಗಾಯಕರಾಗಿ ಜೊತೆಯವರು ಹಿಮ್ಮೇಳದವರಾಗಿ ಸಾಗುತ್ತಾರೆ. ಗೊಂದಲಿಗರಾದ ಇವರನ್ನು ಜೋಗತಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಇವರಲ್ಲಿ ಪುರುಷವೇಷದ ಜೋಗಪ್ಪ, ಸ್ತ್ರೀ ವೇಷದ ಜೋಗತಿಯರು ಕಂಡುಬರುತ್ತಾರೆ. ಬಿಂದಿಗೆಯಂತೆಯೇ ಎಲ್ಲಮ್ಮನ ಮುಖವಾಡವನ್ನು (ಜಗ – ದುಂಡಾದ ಬಿದಿರು ಬುಟ್ಟಿಯ ನಡುವೆ ದೇವಿಯ ಮುಖವಾಡವನ್ನು ಇರಿಸಿ, ಅಲಂಕರಿಸಿ ತಲೆಯಲ್ಲಿ ಹೊತ್ತು ಸಾಗುವುದು) ಜಗದಲ್ಲಿ ಇಟ್ಟು ತಿರುಗುವ ಚೌಡಿಕೆಯರನ್ನೂ ಕಾಣಬಹುದು. ಇವರು ನುಡಿಯುವ ಭವಿಷ್ಯ ಕುರಿತು ಜನಗಳಿಗೆ ಅಪಾರವಾದ ನಂಬಿಕೆ. ಭಯ ಹಾಗೂ ಭಕ್ತಿಯಲ್ಲಿ ಇಂದಿಗೂ ಸಾಕಷ್ಟು ಜನ ಪರಂಪರೆಯಂತೆ ಸಂಪ್ರದಾಯಬದ್ಧರಾಗಿದ್ದಾರೆ. ನಗರೀಕರಣದಲ್ಲಿ, ಚಿತ್ರೀಕರಣದಲ್ಲಿ ಪ್ರದರ್ಶನ ಕಲೆಯಾಗಿಯೂ ಸಾಗುತ್ತಿದೆ.

## ಗೊರವರು ಮತ್ತು ಗಣೆಯವರು

ಇವರು ಪ್ರಮುಖವಾಗಿ ಜಾತಿ ಸೂಚಿತವಾಗಿ ಕಂಡುಬರುವ ಸಂಪ್ರದಾಯದವರು. ಜನಪದ ಸಂಪ್ರದಾಯಗಳೇ ಜಾತಿ ಸಂಸ್ಕೃತಿಯೊಳಗೆ ಅರಳುವ ವಿಶಿಷ್ಟ ಕಲೆಗಳು. ಕೆಲವು ಕಲೆಗಳು ಮುಕ್ತವಾಗಿಯೂ ಇವೆ. ಪ್ರಪಂಚದ ಯಾವುದೇ ಭಾಗದಲ್ಲೂ ಜಾತಿ ಸ್ವರೂಪದಲ್ಲಿ ಒಂದೊಂದು ಕಲೆಯನ್ನು ಅದರ ವೃತ್ತಿ ವಕ್ತಾರರನ್ನೂ ಸ್ಪಷ್ಟವಾಗಿ ಕಾಣಬಹುದು. ಗೊರವರು ಹಿರಿಯ ಮೈಲಾರದಿಂದ ಮುಡುಕುತೊರೆಯವರೆಗೂ ಹಲವು ಉಪಕ್ಷೇತ್ರಗಳನ್ನು, ಮಂದಿರಗಳನ್ನು ಒಳಗೊಂಡ ಮೈಲಾರಲಿಂಗನ ಗುಡ್ಡರಾಗಿ ಕಂಡುಬರುತ್ತಾರೆ. ಇವರನ್ನು ಗಡಬಡಯ್ಯ, ವಗ್ಗಯ್ಯ ಎಂಬ ಹೆಸರಿನಿಂದ ಕರೆದರೂ ಗೊರವಯ್ಯ ಎಂಬ ಹೆಸರು ಎಲ್ಲಾ ದಿಕ್ಕಿನಿಂದಲೂ ಜನಜನಿತ. ಢಮರುಗ–ಕೊಳಲು ವಾದ್ಯವನ್ನು ಹೊಂದಿರುವ ಇವರು ಕರಡಿ ಕೂದಲಿನ ಟೊಪ್ಪಿಗೆ, ಕವಡೆ ಸರ, ಕಪ್ಪು ನಿಲುವಂಗಿಯನ್ನು ಧರಿಸಿ ಹಣೆ ಮತ್ತು ಕಣ್ಣುಗಳ ಪೂರ್ತಿ ವಿಭೂತಿ ಪಟ್ಟಿಯನ್ನು ಧರಿಸಿ ನಡುವೆ ಕುಂಕುಮ ಲೇಪಿಸುವರು. ಕೆಲವರು ಹರಿಶಿಣವನ್ನು ಧರಿಸಿ ವಿಶೇಷವಾಗಿ ಆಕರ್ಷಿತರಾಗುವರು. ಈ ಗೊರವರಿಗೆ ಭಕ್ತಿ, ಮಡಿವಂತಿಕೆ, ಸ್ವಾಮಿನಿಷ್ಠೆ ಜಾಸ್ತಿ ಇರುತ್ತದೆ.

ಈ ಗೊರವ ಅನ್ನುವ ಪದ ವಿಶೇಷವಾದುದು. ಜಾತಿ ಸೂಚಕವಾಗಿಯೂ ಗ್ರಾಮಜಗತ್ತಿನ ಆವರಿಸಿರುವುದುಂಟು. ಕಿಟೆಲ್ ಕೋಶದಲ್ಲಿ 'ಎ ಕ್ಲಾಸ್ ಆಫ್ ಶಿವ ಬೆಗ್ಗರ್ಸ್' ಎಂಬಂತಿದೆ. ಇದೇ ಕೋಶದಲ್ಲಿ ಗೊಗ್ಗ ಎಂಬ ಪದಕ್ಕೆ 'ಮೈಲಾರ ಲಿಂಗನ ಹಿಂಬಾಲಕರು' ಎಂಬ ಅರ್ಥವೂ ಇದೆ.(ಕಿಟಲ್ ಕೋಶ – ಭಾಗ 2, ಪುಟ ಸಂಖ್ಯೆ 601) ನಯಸೇನನು ಮೈಲಾರನ ಭಕ್ತರೆಂದು 'ಗೊರವ'ರನ್ನು ಪ್ರಾಸಂಗಿಕವಾಗಿ ತನ್ನ ಧರ್ಮಾಮೃತದಲ್ಲಿ ವರ್ಣಿಸಿದ್ದಾನೆ. ಮಧುರ ಕವಿಯು 'ಗೊರವರ ಡುಂಡುಚಿ' ಎಂದಿದ್ದಾನೆ. ಹೀಗೆ ಈ ಗೊರವ ಅನ್ನುವ ಪದ ಸಾಹಿತ್ಯದ ಇತಿಹಾಸದಲ್ಲಿ ಉಲ್ಲೇಖವಾಗಿದೆ. ಇಂದು ಗೊರವರು ಸಂಪ್ರದಾಯಸ್ಥ ಆಚರಣೆಯ ಪ್ರತಿನಿಧಿಗಳಾಗಿ ಕಂಡುಬರುತ್ತಾರೆ. ಇವರು ಪ್ರದರ್ಶನಕ್ಕೆ, ಅಷ್ಟು ಬರದಿದ್ದರೂ ಕೆಲವು ಕಡೆ ಸಂಸ್ಕೃತಿ ಪ್ರದರ್ಶನದ ಸಂದರ್ಭದಲ್ಲಿ ಸಂಕೇತವಾಗಿ ಪರಿಚಯಿಸಲಾಗುತ್ತಿದೆ.

ಗಣೆಯವರು, ಕಾಣಿಕೆಯವರು ಎಂದರೆ ಕಾಡುಗೊಲ್ಲ ಸಂಪ್ರದಾಯದ ಜುಂಜಪ್ಪನ ಭಕ್ತರು. ಜನಪದ ಮಹಾಕಾವ್ಯಗಳಲ್ಲಿಯೇ ಕಥನದ ದೃಷ್ಟಿಯಿಂದ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿರುವ ಮಹಾಕಾವ್ಯ ಜುಂಜಪ್ಪ ಕಾವ್ಯ. ಈ ಸಂಸ್ಕೃತಿಯು ಬಹುವಿಧದಲ್ಲಿ ಅತ್ಯಂತ ನಿಯಮಬದ್ಧ ಸಂಪ್ರದಾಯದಂತೆ ಬೆಳವಣಿಗೆ ಸಾಧಿಸಿರುವುದನ್ನು ಕಾಣಬಹುದು. ಒಂದು ಜಾತಿಯು ತನ್ನ ಪೂರ್ವ ನಾಯಕನನ್ನೇ ದೇವರೆಂದು ಆರಾಧಿಸುವುದು ಸಹಜವಾದರೂ ಅತ್ಯಂತ ಮೂಢನಂಬಿಕೆ ಹಾಗೂ ಅನಾಗರೀಕ ಸಂಪ್ರದಾಯಗಳನ್ನು ಕೊಂಡೊಯ್ಯುತ್ತಿರುವ ಪರಂಪರೆಯೆಂದೇ ಗುರ್ತಿಸಬಹುದು. ಶಿಕ್ಷಣವೂ ಇಲ್ಲಿ ಮುಖ್ಯ ಬದಲಾವಣೆಯ ಸೂಚಕವಾಗದಿರುವುದು ಅತ್ಯಂತ ಗಂಭೀರವಾಗಿ ಕಾಣುತ್ತದೆ. ಹೆಣ್ಣು ಹಾಗೂ ಆಚರಣೆಯಲ್ಲಿ ಈ ಕಾಡುಗೊಲ್ಲರ ಸಂಪ್ರದಾಯಗಳು ಅತ್ಯಂತ ಹೆಚ್ಚು ಟೀಕೆಗಳಿಗೆ ಕಾರಣಗಳಾಗಿವೆ. ಇವರ ಸಂಪ್ರದಾಯವು ಜಾತಿ ಸೀಮಿತವಾದ ಆಚರಣೆಯಾಗಿರುವ ಕಾರಣ ಸಮಾಜ ಸೂಚಕ

ಸಂಸ್ಕೃತಿಯೆಂದು ಪರಿಗಣಿಸಲಾಗದು. ಇಂತಹ ಮಹಾಕಾವ್ಯ ಪರಂಂಪರೆಯನ್ನು ವೃತ್ತಿಗಾಯಕರು ವೈಜ್ಞಾನಿಕ ಹಾಗೂ ಸಮಾಜಮುಖಿಯಾಗಿ ಗಮನಿಸುತ್ತಾ ಹಾಡಿದರೆ, ಹೊಸ ಮಾದರಿಗಳನ್ನು ಸೃಷ್ಟಿಸಿದರೆ ಒಂದು ಶ್ರೇಷ್ಠ ಜನಪದ ಮಹಾಕಾವ್ಯವನ್ನು, ಒಂದು ಜನಾಂಗದ ಸಹಜ ಚರಿತ್ರೆಯನ್ನು ಮರುರಚಿಸಿದ ಅರ್ಥಪೂರ್ಣ ಕಾರ್ಯವಾಗುತ್ತದೆ.

ಲೌಕಿಕ ಸಂಪ್ರದಾಯದಲ್ಲಿ ಕಂಡುಬರುವ ಕರಪಾಲದವರು, ದೊಂಬಿದಾಸರು, ತೆಲುಗುಜಂಗಮರು, ಹೆಳವರು, ಜೋಗಿಗಳು, ತಂಬೂರಿಯವರು ಇವರೆಲ್ಲಾ ಒಂದು ದಿಕ್ಕಿಗೆ ಸೂಚಕವಾಗದೇ ಕರ್ನಾಟಕದ ಹಲವು ಕಡೆ ವಿವಿಧ ಸಂಸ್ಕೃತಿಗಳೊಂದಿಗೆ ಬೆರೆತಿರುವ ಲೌಕಿಕ ವೃತ್ತಿಗಾಯಕರಾಗಿದ್ದಾರೆ. ಇವರು ವೃತ್ತಿಗಾಯಕರಾಗಿ ಕಂಡುಬಂದರೂ ಜನಪದ ಗಾಯನವೇ ವೃತ್ತಿಯಾಗದಿರುವುದು ವಿಶೇಷ. ಮಲೆನಾಡಿನ ಅಂಟಿಗೆ ಪಂಟಿಗೆ, ಕರಾವಳಿಯ ಯಕ್ಷಗಾನ ಮೇಳಗಳು ಇವರೂ ಕೂಡ ಒಂದು ರೀತಿಯಲ್ಲಿ ವೃತ್ತಿಗಾಯಕರೇ ಆಗಿದ್ದಾರೆ. ಈ ಎಲ್ಲರನ್ನೂ ಕೇವಲ ಲೌಕಿಕ ಚೌಕಟ್ಟಿನ ಸಂಪ್ರದಾಯಕ್ಕೆ ಸೀಮಿತಗೊಳಿಸಲು ಬರುವುದಿಲ್ಲ. ಅಲೌಕಿಕತೆಯಲ್ಲೂ ಅತ್ಯಂತ ಗಂಭೀರವಾಗಿ ನಡೆಯಬಲ್ಲರು. ದೇವರನ್ನು ಭಕ್ತಿಯಿಂದ ಕಾಣುವಷ್ಟೇ ಆಳಕ್ಕೆ ಆಧುನಿಕ ಪಲ್ಲಟಗಳ ಜೊತೆಯಲ್ಲಿ ಸ್ಪಂದಿಸಬಲ್ಲರು. ಇವರು ಜನಪದವನ್ನು ಉಸಿರಾಡುತ್ತಾರೆ. ಆದರೆ ಜನಪದವೇ ಇವರ ವೃತ್ತಿ ಬದುಕಾಗಿರುವುದಿಲ್ಲ. ವಿಶೇಷದಿನ, ಹಬ್ಬ–ಆಚರಣೆಗಳು, ಸಾಂದರ್ಭಿಕ ಪ್ರಸರಣಗಳಲ್ಲಿ ಇವರು ವೃತ್ತಿ ಗಾಯಕರಾಗಿ, ನಟರಾಗಿ ಮುಂದುವರೆಸುತ್ತಾರೆ.

## ವೃತ್ತಿಗಾಯಕ ಪರಂಪರೆಯ ಆಧುನಿಕ ಜಿಜ್ಞಾಸೆಗಳು

1. ತನ್ನ ಜಾತಿ, ಸಮುದಾಯಗಳ ಸಂಸ್ಕೃತಿಯಲ್ಲಿ ದೇವರು ಅದರೊಂದಿಗೆ ಸಂಪ್ರದಾಯಗಳ ಆಚರಣೆಯನ್ನು ಮುಂದುವರೆಸುವುದು ಸಮಾಜದ ಬಹುದೊಡ್ಡ ಹೊಣೆಗಾರಿಕೆ. ಆದರೆ ಈ ಆಚರಣೆಗಳಲ್ಲಿ ಅಡಗಿರುವ ಅವೈಜ್ಞಾನಿಕತೆಯನ್ನು ಬದಲಿಸಿಕೊಳ್ಳದಿರುವುದು ಸ್ಥಗಿತಚರಿತ್ರೆಯ ನಿರೂಪಣೆಯಾಗುತ್ತದೆ. ಬೇರೊಂದು ಸಂಸ್ಕೃತಿಯನ್ನು ಅತಿಯಾಗಿ ಸ್ವೀಕರಿಸಿ ಆಧುನಿಕರಣಗೊಳಿಸುವುದು ಪರಿವರ್ತನಾವಿನಾಶವಾಗುತ್ತದೆ.

2. ಹಬ್ಬ, ಯಾತ್ರೆ, ಜಾತ್ರೆಗಳ ಸಂಕೇತ ಸ್ವರೂಪಗಳಾಗಿ ಮೂಡಿಬಂದ ಸಂಸ್ಕೃತಿಯನ್ನು ಅಧ್ಯಯನ, ಬರಹರೂಪ, ಧ್ವನಿ–ದೃಶ್ಯರೂಪಗಳಲ್ಲಿ ಮುದ್ರಿಸಿ ಮುಂದಿನ ಜನಾಂಗಕ್ಕೆ ಕಾಣಿಕೆಯಾಗಿ ಕಾಪಿಡುವುದು ಅರ್ಥಪೂರ್ಣ ಕಾರ್ಯವಾಗಿದೆ. ಆದರೆ ಪ್ರದರ್ಶನ ಸೂಚಕವಾಗಿ, ವ್ಯಾಪಾರೀ–ಧೋರಣೆಗೆ ಈ ಸಂಸ್ಕೃತಿಗಳ ಬಳಕೆಯಾಗುವುದು ಸ್ವರೂಪ ನಾಶಕ್ಕೂ, ಭವಿಷ್ಯದಲ್ಲಿ ಸಂಸ್ಕೃತಿಯ ವಿನಾಶದ ಸೂಚಕವಾಗಿಯೂ ರೂಪಿತವಾಗುತ್ತದೆ.

3. ಕಥೆಯು ಸಂಗೀತದಲ್ಲಿ ಸೇರುತ್ತಾ ಸಮಾಜದ ಜನಪದರ ಧ್ವನಿ ಸಂಸ್ಕೃತಿಯಾಗುವುದು ಸ್ವಾಗತಾರ್ಹ. ಆದರೆ, ಪ್ರಕ್ಷಿಪ್ತಗಳು, ಸೇರ್ಪಡೆಗಳು ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಸಂಗೀತಕ್ಕೆ ಹೊಂದಿಕೆ ಮಾಡುವುದು ನಮ್ಮ ಸಾಹಿತ್ಯ ಸಂಸ್ಕೃತಿಯನ್ನು ಸಡಿಲಮಾಡಿದಂತೆ ಹಾಗೂ ಅನರ್ಥಗೊಳಿಸುತ್ತಾ ಅಪಮೌಲ್ಯಗೊಳಿಸುತ್ತೇವೆ.

4. ವೃತ್ತಿಗಾಯಕರು ಆಧುನಿಕ ಬದುಕಿಗೆ ತೆರೆದುಕೊಳ್ಳುವುದು ತಪ್ಪೇನು ಅಲ್ಲ, ಆದರೆ ಮೌಢ್ಯಗಳ ವಕ್ತಾರರೂ, ಪ್ರಸರಕರೂ ಆಗಬಾರದು. ಶಿಕ್ಷಣದೊಂದಿಗೆ ಸಂಸ್ಕೃತಿಗಳನ್ನು ವೃತ್ತಿಗಳಾಗಿ ಅವಲಂಬಿಸುವುದು ಸೂಕ್ತವೇ ಸರಿ. ದೈವವೆಂಬ ಕಟ್ಟುಪಾಡುಗಳಿಗಿಂತ ನಮ್ಮ ಸಂಸ್ಕೃತಿಯ ಅನಾವರಣ ಹಾಗೂ ರಕ್ಷಣೆ ಬಹಳ ಮುಖ್ಯವಾಗಿದೆ.

5. ಗಾಯಕ ಪರಂಪರೆ ಹಾಗೂ ಜನಪದ ಕಲೆಗಳನ್ನು ಇಂದು ಶಿಕ್ಷಣ ಪಡೆದವರು 'ತರಬೇತುದಾರರಾಗಿ' ವೃತ್ತಿಯಾಗಿಸಿಕೊಂಡಿದ್ದಾರೆ. ಈ ವಿಚಾರವು ಉತ್ತಮ ಪರಿವರ್ತನೆಯೇ ಆದರೂ ಇಲ್ಲಿ ಅನ್ಯ ಸಂಸ್ಕೃತಿಗಳ ಸಮ್ಮಿಳಿತದೊಂದಿಗೆ ಒಂದು ಸಂಸ್ಕೃತಿಯ ಸರ್ವನಾಶಕರಾಗಿಯೂ ಕಂಡುಬರುವುದನ್ನು ಗಮನಿಸಬಹುದು. ಬದಲಾವಣೆಯ ಸಂದರ್ಭದಲ್ಲಿ ನಮಗೆ ಹಿತವನ್ನು ತುಂಬಬಹುದು. ಆದರೆ ಮೂಲ ಸಂಸ್ಕೃತಿಯು ನಾಶವಾದ ಮೇಲೆ ನಮ್ಮ ಸಂಸ್ಕೃತಿ ಎಂದು ಗುರ್ತಿಸಲು ಅಸಾಧ್ಯವಾಗುತ್ತದೆ. ಹಳೇಬೇರುಗಳ ಅವನತಿಯಲ್ಲಿ ಹೊಸ ಚಿಗುರುಗಳು ಬಾಡಲೇಬೇಕು ಕಸಿ ಎಂಬುದು ಮೂಲದ ಉಳಿಕೆಯಲ್ಲ, ಹೊಸತನದ ಗಳಿಕೆಯೂ ಅಲ್ಲ.

ಈ ಎಲ್ಲಾ ದೃಷ್ಟಿಕೋನಗಳ ಮೂಲಕ ವೃತ್ತಿ ಗಾಯಕ ಸಂಪ್ರದಾಯವನ್ನು ಚರ್ಚಿಸಬಹುದು. ಯಾವುದೇ ವೃತ್ತಿ ಗಾಯಕ ಪರಂಪರೆಯವರು ತಮ್ಮ ಕಲೆಯ ಕುರಿತು ವೈಜ್ಞಾನಿಕ ತರ್ಕಗಳನ್ನು ಸ್ವೀಕರಿಸದಿದ್ದರೆ ಅವರು ಕಲೆಯನ್ನು ಉಳಿಸಬಹುದು ಆದರೆ ಬೆಳೆಸಲಾರರು. ಈ ದೃಷ್ಟಿಕೋನವನ್ನು ಶಿಕ್ಷಣವು ಪ್ರತಿ ಕಲಿಕೆಯಲ್ಲೂ ತುಂಬಬೇಕಿದೆ.

ISBN – 978-93-5526-247-9

**ಪರಾಮರ್ಶನ ಗ್ರಂಥಗಳು :**


1. ಕನ್ನಡ ವೃತ್ತಿಗಾಯಕ ಕಾವ್ಯಗಳು., ಜೀ.ಶಂ. ಪರಮಶಿವಯ್ಯ., ಸಾಗರ್ ಪ್ರಕಾಶನ, ಬೆಂಗಳೂರು., 1981., 2012
2. ಜನಪದ ಸಾಹಿತ್ಯ ಸಮೀಕ್ಷೆ., ಜೀ.ಶಂ. ಪರಮಶಿವಯ್ಯ., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು., 1967, 2017
3. ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು., ಜೀ.ಶಂ. ಪರಮಶಿವಯ್ಯ., ಅಭಿನವ, ಬೆಂಗಳೂರು., 2015
4. ಮಲೆಯ ಮಾದೇಶ್ವರ., ಸ್ವಾಮಿ ಬಿ.ಎಸ್(ಸಂ)., ದಾಮಿನಿ ಸಾಹಿತ್ಯ ಬೆಂಗಳೂರು., 2001
5. ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯಪರಂಪರೆ., ಅಂಬಳಿಕೆ ಹಿರಿಯಣ್ಣ., ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ., 2014
6. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ., ಶಂಕರನಾರಾಯಣ ತೀ.ನಂ, ವೆಂಕಟೇಶ ಎಂ.ಎನ್(ಸಂ)., ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ., 2014
7. ಹಾಲುಮತ ದರ್ಶನ., ಜೋಶಿ ಶಂ.ಬಾ., ವಸಂತ ಮುದ್ರಣಾಲಯ, ಧಾರವಾಡ., 1960


***

# 41. ಜನಪದ ವೃತ್ತಿಗಾಯಕರು : ಒಂದು ಅವಲೋಕನ

**ಪ್ರಭಾವತಿ ಜೆ.**

ಜನಪದ ಮೌಖಿಕ ಪರಂಪರೆ, ಜನಪರ ಸಾಹಿತ್ಯವೂ ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿದ್ದು, ಜೀವನ ಮೌಲ್ಯಗಳನ್ನು ಹೊಂದಿದೆ. ಕಲೆ, ಸಾಹಿತ್ಯ, ನೃತ್ಯ, ನಾಟಕ ಮಹಾಕಾವ್ಯ, ಖಂಡಕಾವ್ಯ, ಮೊದಲುಗೊಂಡಂತೆ ಸಾಹಿತ್ಯಕವಾಗಿಯೂ ಸಂಪದ್ಭರಿತವಾದದ್ದಾಗಿದೆ. ಪ್ರಮುಖವಾಗಿ ಕನ್ನಡ ಜಾನಪದ ಸಂಸ್ಕೃತಿಯ ಒಂದು ಭಾಗವಾದ ಜಾನಪದ ವೃತ್ತಿ ಗಾಯಕರು, ಇಂದಿಗೂ ತಮ್ಮ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಕನ್ನಡ ಜಾನಪದ ಸಂಸ್ಕೃತಿಯು ಒಂದು ಭಾಗವಾದ ಜಾನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡನ್ನು ಮುಂದಿನ ಪೀಳಿಗೆಗೂ ಉಳಿಸಿಕೊಂಡು ಬರುತ್ತಿದೆ.

ಜನಪದ ವೃತ್ತಿಗಾಯಕರ ಹಿನ್ನೆಲೆ ಅಥವಾ ಮೂಲಕ್ಕೆ ಹೋಗುವುದಾದರೆ ಜಾನಪದ ಗೀತೆಗಳನ್ನು ಸೃಷ್ಟಿಸಿದವರು ಯಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇವು ಗ್ರಾಮೀಣ ಭಾಗದಲ್ಲಿ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹರಿದು ಬಂದು ಮುಂದೆ ಇದನ್ನೇ ವೃತ್ತಿಯನ್ನಾಗಿಸಿಕೊಂಡಿರುವುದಾಗಿ ಮತ್ತು ತನ್ನದೇ ಆದ ಜೀವನ ಶೈಲಿ, ಸಂಸ್ಕೃತಿಯನ್ನು ಒಳಗೊಂಡಿರುವುದು ಸಂಶೋಧನೆಗಳ ಹಿನ್ನೆಲೆಯಲ್ಲಿ ತಿಳಿದು ಬರುತ್ತದೆ. ಅಂತೆಯೇ ಧಾರ್ಮಿಕ ಪರಂಪರೆಯನ್ನು ಮುಂದುವರೆಸಲು ಅನುವಾಗುವಂತೆ ಗಾಯನವನ್ನು ವೃತ್ತಿಯಾಗಿಸಿಕೊಂಡರು. ಈ ರೀತಿಯ ಗಾಯಕರು ಜನಪದ ವಾದ್ಯಗಳನ್ನು ಹಿಡಿದು ನಾಡಿನ ಮೂಲೆ ಮೂಲೆಗಳನ್ನು ಅಪಾರ ಸಂಖ್ಯೆಯಲ್ಲಿ ವೈವಿಧ್ಯಮಯ ರೀತಿಯಲ್ಲಿ ಪದಗಳನ್ನು ಕಟ್ಟುತ್ತಾ – ಹಾಡುತ್ತಾ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಈ ರೀತಿಯ ವೃತ್ತಿಗಾಯಕರಲ್ಲಿ, ಗೊಂದಲಿಗರು, ದೊಂಬಿದಾಸರು, ಹೆಳವರು, ಕಿನ್ನರಿ ಜೋಗಿಗಳು, ಕಂಸಾಳೆಯರು, ನೀಲಗಾರರು, ಮಂಟೇಸ್ವಾಮಿಯವರು ಹೀಗೆ ಎಷ್ಟೋ ರೀತಿಯಲ್ಲಿ ಕಾಣಬಹುದು. ಅಂತಹವರ ಜೀವನಶೈಲಿ, ಹಿನ್ನೆಲೆ, ಸಂಸ್ಕೃತಿಯ ಕಿರು ಪರಿಚಯವನ್ನು ಮುಂದೆ ತಿಳಿಸುವ ಪ್ರಯತ್ನ ಮಾಡುತ್ತಿದ್ದೇನೆ.

**ಹೆಳವರು :**

ಹೆಳವರು ಜನಪದ ವೃತ್ತಿಗಾಯಕರಲ್ಲಿ ಮುಖ್ಯರಾದವರು. ಲೌಕಿಕ ವೃತ್ತಿಗಾಯಕ ವರ್ಗಕ್ಕೆ ಸೇರುವ ಇವರು ಕರ್ನಾಟಕ ಉತ್ತರ ಮತ್ತು ದಕ್ಷಿಣ ಎರಡು ಭಾಗಗಳಲ್ಲೂ ಕಾಣಿಸುತ್ತಾರೆ. 'ಹೆಳವ' ಶಬ್ದ ಒಂದು 'ಜನಾಂಗ' ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ. ಇವರ ಮಾತೃಭಾಷೆ, ಆಡುಭಾಷೆ ತೆಲುಗು ಮತ್ತು ಕನ್ನಡ ಆಗಿರುತ್ತದೆ. ಹೆಳವ ಎಂಬ ಶಬ್ದ 'ಅಂಗಹೀನ' ಎಂಬ ಅರ್ಥ ನೀಡುತ್ತದೆ. ಆದರೆ ಈ ಹೆಸರು ವೃತ್ತಿಗಾಯಕ ಪರಂಪರೆಯೊಂದಕ್ಕೆ ಬಂದಿರುವುದು ಮೂಲಗಳಿಂದ ತಿಳಿದಿದೆ. ಕಿಟ್ಟಲ್ ಕೋಶದಲ್ಲಿ ಸಹ ಈ ಶಬ್ದಕ್ಕೆ ಒಂದೇ ಅರ್ಥವನ್ನು ಕೊಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಈ ಜನಾಂಗದ ಮೂಲಪುರುಷನೊಬ್ಬನಿಗೆ ಸಂಬಂಧಿಸಿದಂತೆ ಪುರಾಣದಲ್ಲಿ ಒಕ್ಕಲಿಗ ಮುದ್ದೇಗೌಡನಿಗೆ ನಾಲ್ಕು ಜನಕ್ಕೆ ನೀಡಿ ಅನಂತರ ಕೊನೆಯವನು ಹೆಳವ, ಆಸ್ತಿ ಹಂಚಿಕೆಯೂ ಮೊದಲು ಮೂರು ಜನಕ್ಕೆ ನೀಡಿ ಅನಂತರ ಕೊನೆಯ ಹೆಳವನಿಗೆ ಅವರುಗಳು ಸಹಕಾರಿಯಾಗಿ ನಿಲ್ಲಬೇಕೆಂಬಂತೆ ಮಾತಾಗುತ್ತದೆ. ಅಂತೆಯೇ ಈ ಹೆಳವ ಊರಿನಾಚೆ ಗುಡಿಸಲು ಕಟ್ಟಿಕೊಂಡು ವರ್ಷಕ್ಕೊಮ್ಮೆ ಎತ್ತಿನ ಮೇಲೆ ಬಂದು ತನ್ನ ಪಾಲಿನ ದವಸ ಧಾನ್ಯಗಳನ್ನು ಸ್ವೀಕರಿಸಿ ಹೋಗುತ್ತಿದ್ದ ಹಾಗೂ ಆತ ತಾನು ಬರುವ ಸೂಚನಾರ್ಥವಾಗಿ ಗಂಟೆ ಬಾರಿಸಿಕೊಂಡು ಬರುತ್ತಿದ್ದ ಮತ್ತು ತನ್ನ ಕಾಲಿನ ಊನ ಸ್ಥಿತಿ ತಿಳಿಯದಿರಲೆಂದು ಕಾಲಿಗೆ ಬಟ್ಟೆ ಸುತ್ತಿಕೊಂಡು ಇರುತ್ತಿದ್ದ. ಮುಂದೆ ಇದೇ ರೀತಿ ಪದ್ಧತಿ ನಡೆದುಕೊಂಡು ಬರುತ್ತದೆ ಎಂಬುದು ತಿಳಿಯುತ್ತದೆ.

'ಹೆಳವರು' ಮೇಲೆ ತಿಳಿಸಿದ ಪುರಾಣ ಪುರುಷನ ರೀತಿಯೇ ಎತ್ತಿನ ಮೇಲೆ, ಗಂಟೆ ಬಾರಿಸಿಕೊಂಡು ಊರಿನೊಳಗೆ ಬಂದು ದವಸಧಾನ್ಯ ಬೇಡುವುದು. ಬೆಳೆದು ಬಂದ ಕಾಲಘಟ್ಟದಲ್ಲಿ ಅದು ಬದಲಾವಣೆಗೊಂಡು ಈಗ ಗಂಟೆ ಬಾರಿಸುವುದು ಮಾತ್ರ ಉಳಿದುಕೊಂಡಿದೆ. ಇವರ ಜೀವನ ಕ್ರಮ ಸುಧಾರಿಸಿದಂತೆ ವ್ಯವಸಾಯ, ಇತರ ವೃತ್ತಿಗಳನ್ನು ಅವಲಂಬಿಸುತ್ತಿದ್ದಾರೆ.

ISBN – 978-93-5526-247-9 

ಹೆಳವರು ಬಳಸುವ ವಾದ್ಯ ಗಂಟೆ ಇದರ ತಾಳಕ್ಕೆ ಅನುಗುಣವಾಗಿ ಅವರು ಹಾಡುಗಳನ್ನು ಈ ಲಾವಣಿಗಳನ್ನೂ ಅಳವಡಿಸಿಕೊಂಡು ಹಾಡುತ್ತಾರೆ. ಈ ಗಂಟೆ ಪೂಜೆಯ ಗಂಟೆಗಿಂತ ದೊಡ್ಡದು. ಕೈ ಹೊಲಿಗೆಯಿಂದ ಮಾಡಿದ ಪಟ್ಟಿಯನ್ನು ಗಂಟೆಯ ಕೊಕ್ಕೆಗೆ ಸೇರಿಸಿ ಎಡಗೈಯಲ್ಲಿ ಹಿಡಿದಿರುತ್ತಾರೆ. ಇವರು ಹಾಡುವುದು 'ಕುಲದ ಕತೆ' ವಿಜಯನಗರ ಸಾಮ್ರಾಜ್ಯ, ಮಹಮದೀಯ ಸುಲ್ತಾನ ಬಗ್ಗೆ ಹೇಳುತ್ತದೆ.

ಹೆಳವರು ವಂಶಾವಳಿಗಳನ್ನು ಹೇಳುವುದರ ಜೊತೆಗೆ ಸುದೀರ್ಘ ಜನಪದ ಕಾವ್ಯಗಳನ್ನು ಹಾಡುತ್ತಾರೆ. ಇವರಲ್ಲಿ ಕರಿ ಬಂಟನ ಕತೆ, ಯಮದಾಳು ದೇವಮ್ಮ, ಮಾಸ್ತಮ್ಮನ ಕತೆ, ಯಮಧರ್ಮನ ಕತೆ, ಮಾಗಡಿ ಕೆಂಪೇಗೌಡ, ಮೈಸೂರು ಜಿಲ್ಲೆಯ ಹೆಳವರು ಮಾದೇಶ್ವರ, ಮಂಟೇಸ್ವಾಮಿಗಳ ಮೇಲೂ ಹಾಡುತ್ತಾರೆ. ಸ್ಥಳೀಯ ದೈವಗಳಿಗೆ ಸಂಬಂಧಪಟ್ಟ ಕತೆಗಳನ್ನು ತಮ್ಮ ಸಂಪ್ರದಾಯಕ್ಕೆ ಅಳವಡಿಸಿಕೊಂಡು ಧಾರ್ಮಿಕ ಚಟುವಟಿಕೆಯನ್ನು ಮುಂದುವರೆಸಿದ್ದಾರೆ. ಇವರು ತಮ್ಮ ಹಾಡುಗಳನ್ನು ಗಂಟೆಯ ನಾದ–ಗತ್ತಿಗೆ ತಕ್ಕಂತೆ ಹಾಡಿಕೊಂಡು ಹೋಗುತ್ತಾರೆ. ಅಂತೆಯೇ ಇವರು ಲಾವಣಿಗಳನ್ನು ಸಹ ಸಾದರ ಪಡಿಸುತ್ತಾರೆ. ಸಂಶೋಧನಾ ಮೂಲಗಳು ತಿಳಿಸುವಂತೆ ಈಗ ಹೆಳವ ವೃತ್ತಿಗಾಯಕರ ಪರಂಪರೆ ಗಣನೀಯವಾಗಿ ಇಳಿಕೆ ಕಾಣುತ್ತಿದೆ, ಹಿರಿಯ ತಲೆಮಾರಿನ ಅತ್ಯುತ್ತಮ ಗಾಯಕರೆಲ್ಲಾ ಕಣ್ಮರೆಯಾದ ನಂತರ ಹೊಸ ತಲೆಮಾರಿನ ಯುವಕರು ಆಧುನೀಕರಣದ ಸೋಗಿಗೆ ಒಳಗಾಗಿ, ಅತ್ಯಮೂಲ್ಯವಾದ ಪರಂಪರೆ ಅವಸಾನದ ಅಂಚಿಗೆ ಬಂದಿದೆ.

**ದೊಂಬಿದಾಸರು :**

ದೊಂಬಿದಾಸರನ್ನು ಸಂಚಾರಿ ಗಾಯಕರು ಎಂದು ಕರೆಯಲಾಗುತ್ತದೆ. ಇವರು ವೃತ್ತಿಗಾಯಕ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಜನಪದ ಸಾಹಿತ್ಯದ ಆಕರ್ಷಣೆಯ ಭಾಗವಾದ ಲಾವಣಿಗಳನ್ನು ಪ್ರಸಾರ ಮಾಡಿಕೊಂಡು ಬಂದಿರುವ ವೃತ್ತಿಗಾಯಕರಲ್ಲಿ ದೊಂಬಿದಾಸರು ಅತ್ಯಂತ ಜನಪ್ರಿಯರಾದವರು. ದಕ್ಷಿಣ ಕರ್ನಾಟಕ, ತುಮಕೂರು, ಬೆಂಗಳೂರು, ಮಂಡ್ಯ, ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಸದಾ ಸಂಚಾರಶೀಲರೂ ಆಗಿದ್ದು ಉತ್ತರ ಕರ್ನಾಟಕದ ಬಹುಪಾಲು ಭಾಗಗಳಲ್ಲಿ ಸಂಚರಿಸುತ್ತಾ "ದುಂಬೇದಾಸರು" ಎಂದು ಪ್ರಸಿದ್ಧಿ ಪಡೆದಿದ್ದಾರೆ. ಇವರು ವೀರಕಾವ್ಯಗಳನ್ನು, ಲೌಕಿಕ ಕಾವ್ಯಗಳನ್ನು, ರಮ್ಯ ಕಥೆಗಳನ್ನೂ ಹಾಡಿಕೊಂಡು ಬಂದಿರುತ್ತಾರೆ. ಜೋಗಿ, ಹೆಳವ, ತೆಲುಗು ಜಂಗಮರಂತೆ ದೊಂಬಿದಾಸರು ಗಾಯನವನ್ನೇ ಪ್ರಧಾನ ವೃತ್ತಿಯನ್ನಾಗಿಸಿಕೊಂಡಿದ್ದಾರೆ.

ದೊಂಬಿದಾಸರು ನರಸಿಂಹಸ್ವಾಮಿ, ವೆಂಕಟರಮಣ ಸ್ವಾಮಿ ಮತ್ತು ಹೆಣ್ಣು ದೈವಗಳ ಆರಾಧಕರಾಗಿದ್ದಾರೆ. ಹಾಗೂ ತಿರುಪತಿ ತಿಮ್ಮಪ್ಪನಿಗೆ ವಾರ್ಷಿಕ ಕಾಣಿಕೆಯನ್ನು ಸಲ್ಲಿಸುವ ಪದ್ಧತಿ ನಡೆಸಿಕೊಂಡು ಬಂದಿರುತ್ತಾರೆ. ಬಡತನದ ಬವಣೆಯಲ್ಲಿ ತೊಳಲುತ್ತ ಆ ಕಾಣಿಕೆಯನ್ನು ಸರಿಯಾಗಿ ಸಲ್ಲಿಸದೆ 'ದೊಂಗದಾಸ' (ಕಳ್ಳದಾಸ) ರಾದರು.

ಇದು ಮುಂದೆ 'ದೊಂಬಿದಾಸ' ಆಗಿದೆ ಎಂಬ ಊಹೆ ಇದೆ. ಒಟ್ಟಿನಲ್ಲಿ ಇವರು ವಿಷ್ಣುವಿನ ಆರಾಧಕರು. ಮಾತೃಭಾಷೆ ತೆಲುಗು, ಕನ್ನಡ ಆಗಿರುತ್ತದೆ. ಇವರ 'ಶಾಸ್ತ್ರ ಸಂಬಂಧ' ಒಕ್ಕಲಿಗರಂತೆಯೇ ಆದರೆ ಮದುವೆಗೆ ಪುರೋಹಿತರು ಬರುವುದಿಲ್ಲ ವರನ ಮನೆಯ ಬಾಗಿಲಿನಲ್ಲಿ ಮದುವೆ ನಡೆಯುತ್ತದೆ. ಇಷ್ಟೆಲ್ಲಾ ಸಂಸ್ಕೃತಿ ಆಚರಣೆಯಲ್ಲಿ ಶ್ರೀಮಂತಿಕೆ ಇದ್ದರೂ ಸಹ ಇವರು "ನೆಲೆಯಿಲ್ಲದ ಜನ" ಹಾಳು ಮಂಟಪ, ಪಾಳುಗುಂಡಿಗಳಲ್ಲಿ ವಾಸಿಸುತ್ತಿರುತ್ತಾರೆ. ಇತ್ತೀಚಿಗೆ ಬೇಸಾಯ ರೂಢಿಸಿಕೊಂಡಿರುತ್ತಾರೆ. ಏಕದಾರಿ ಹಿಡಿದು ಊರೂರು ಯಾತ್ರೆ ಹೊರಡುತ್ತಾರೆ. ಜೋಳಿಗೆ ಹೆಗಲಿಗೇರಿಸಿಕೊಂಡು ಹಾಡುತ್ತಾ ದಿನಸಿಯನ್ನು ಸಂಪಾದಿಸುತ್ತಾರೆ.

ದೊಂಬಿದಾಸರು ಅನೇಕ ದೀರ್ಘಕಾವ್ಯಗಳನ್ನು ಹಾಡುತ್ತಾರೆ. ಶಿವಕತೆಗಳು, ಕೃಷ್ಣ ಕತೆಗಳು, ಚಾರಿತ್ರಿಕ ಕತೆಗಳನ್ನು ಹಾಡುತ್ತಾರೆ. ಗೌರಿಯ ಮದುವೆ, ಗಂಗೆ ಗೌರಿ ಜಗಳ, ಶ್ರೀಕೃಷ್ಣ–ಕೊರವಂಜಿ, ಶ್ರೀಕೃಷ್ಣ ಪಾರಿಜಾತ, ಬಾಲನಾಗಮ್ಮ, ಬಂಜೆ ಹೊನ್ನಮ್ಮ ಹಾಗೂ ಲಾವಣಿಗಳು ಮತ್ತು ಐತಿಹಾಸಿಕ ಮಾಗಡಿ ಕೆಂಪೇಗೌಡ ಇಂತಹ ಹಾಡ್ಗತೆಗಳನ್ನು ಹಾಡುತ್ತಾರೆ. ಹಾಗೆಯೇ ಕಿರುಲಾವಣಿಗಳ ಜೊತೆಗೆ ದೀರ್ಘಕಾವ್ಯಗಳನ್ನೂ ಹಾಡಿ ಜನರನ್ನ ರಂಜಿಸುತ್ತಾ ಬಂದಿದ್ದಾರೆ. ವೃತ್ತಿಗಾಯಕರಲ್ಲಿ ಪ್ರಮುಖ ಸ್ಥಾನ ಪಡೆದಿರುವ ಇವರು ಕರ್ನಾಟಕ ಉದ್ದಗಲಕ್ಕೂ ಸಂಚರಿಸಿ ಹಾಡುತ್ತಾ ಚಿರ ಪರಿಚಿತರಾಗಿದ್ದಾರೆ. ಹೀಗೆ ಕಾವ್ಯಗಳನ್ನು ಹಾಡಿ ನಾಟಕಗಳನ್ನು ಆಡಿ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ.

ISBN – 978-93-5526-247-9

**ಮಂಟೇಸ್ವಾಮಿಯ ನೀಲಗಾರರು:**

ಇವರ ಮೂಲಗುರು ಧರೆಗೆ ದೊಡ್ಡವರು. ಮಂಡ್ಯ ಜಿಲ್ಲೆಯ ಮಳವಳ್ಳಿಯ ತಪ್ಪಲಿನ ಬೊಪ್ಪಗೌಡನಪುರದ ಪ್ರಾಚೀನ ಮಠವಿದೆ. ಇದು ಮಂಟೇಸ್ವಾಮಿ ಮಠ. ಇವರು ಶಿವಶರಣರ ತತ್ವದಂತೆ ಮೇಲು–ಕೀಳುಗಳನ್ನು ತೊಡೆದು ಹಾಕಿ ಎಲ್ಲರನ್ನೂ ಸಮಾನತೆಯಿಂದ ಕಾಣಬೇಕೆಂದು ತೋರಿಸಿದರು. ಧಾರ್ಮಿಕ ವಿಷಯದಲ್ಲಿ ಜಾತಿಭೇದ ಬಿಡಬೇಕು ಎಂದು ತಮ್ಮ ಗಾಯನದ ಮೂಲಕ ತೋರಿಸಿಕೊಟ್ಟವರು. ಕಲ್ಯಾಣದ ಶರಣರ ಸಮಕಾಲೀನರಾದ ಮಂಟೇಸ್ವಾಮಿಗಳು ಹನ್ನೆರಡನೆಯ ಶತಮಾನದ ಪವಾಡಪುರುಷರಲ್ಲಿ ಒಬ್ಬರು. ಇವರನ್ನು ಧರೆಗೆ ದೊಡ್ಡವರು ಪರಂಜ್ಯೋತಿ ಸ್ವರೂಪರು ಎಂದು ಸಹ  ಕರೆಯುತ್ತಾರೆ.

ಮಂಟೇಸ್ವಾಮಿಯ ಒಕ್ಕಲುಗಳು ಮೈಸೂರು, ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ತಮ್ಮ ಧರ್ಮಗುರು ಮಂಟೇಸ್ವಾಮಿ ಮತ್ತು ಅವರ ಶಿಷ್ಯರಾದ ರಾಚಪ್ಪಾಜಿ ಮತ್ತು ಸಿದ್ದಪ್ಪಾಜಿಯವರ ಮೇಲೆ ನೀಲಗಾರರು ಹಾಡುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಒಂದು ದೀರ್ಘ ಜನಪದ ಕಾವ್ಯವಿದೆ. ಇದನ್ನೇ ನೀಲಗಾರರು ಹಾಡುತ್ತಾರೆ. ಅಲ್ಲದೆ ಇದು ಒಂದು ಧಾರ್ಮಿಕ ಕಾವ್ಯ.

ಮಂಟೇಸ್ವಾಮಿಯ ಸಿದ್ದ ಶಿಷ್ಯರಾದ ಸಿದ್ದಪ್ಪಾಜಿಯು ಗುರುವಿನ ಲೀಲೆಗಳನ್ನು ಹಾಡಿ ನಾನಾ ಕಡೆ ಪ್ರಸಾರ ಮಾಡಿ ಮಂಟೇಸ್ವಾಮಿಯ ಪವಾಡ, ಮಹಿಮೆಯನ್ನು ಮೆರೆಯಿಸಿದರು. ತಾನೇ ತಂಬೂರಿ ಹಿಡಿದು ಗುರು ಲೀಲೆಗಳನ್ನು ಮೆರೆದು 'ಘನಲೀಲೆಸಿದ್ಧಯ್ಯ' ಎಂಬ ಪ್ರಖ್ಯಾತಿ ಪಾತ್ರರಾದರು. ಇದನ್ನೇ ನೀಲಗಾರರು ಮುಂದುವರೆಸಿದುದು. ತಂಬೂರಿ ಹಿಡಿದು ತಮ್ಮ ಗುರುವಿನ ಲೀಲೆಗಳನ್ನು ಹಾಡುತ್ತಾ "ಲೀಲೆಗಾರರು" ಆಗಿದ್ದ ಇವರು ಜನಮಾನಸದಲ್ಲಿ "ನೀಲಗಾರರು" ಎಂದು ಮನೆಮಾತಾದರು.

ನೀಲಗಾರರನ್ನು ಸಿದ್ದಪ್ಪಾಜಿಯವರ ಶಿಶು ಮಕ್ಕಳು, ನೀಲಿಸಿದ್ದಯ್ಯನ ಶಿಷ್ಯರು ಎಂದು ಕರೆದುಕೊಳ್ಳುತ್ತಾರೆ. ಇವರು ಮಂಟೇಸ್ವಾಮಿಯ ಪರಂಪರೆಯವರಾದುದರಿಂದ ಅವರನ್ನು ಅದೇ ಹೆಸರಿನಲ್ಲಿ ಕರೆಯುತ್ತಾರೆ. ಮಂಟೇಸ್ವಾಮಿಯ ಹೆಸರಲ್ಲಿ ದೀಕ್ಷೆ ಪಡೆದವರು ಹೆಚ್ಚಾಗಿ ಹರಿಜನ, ಎಪ್ಪಲಿಶೆಟ್ಟರು, ಮಡಿವಾಳರು, ಅಕ್ಕಸಾಲಿಗರು, ಕುಂಬಾರರು ಆಗಿದ್ದು ಇವರು ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುತ್ತಾರೆ.

ನೀಲಗಾರರು ಮಂಟೇಸ್ವಾಮಿಯ ಕಾವ್ಯವನ್ನು ಹಾಡುತ್ತಾ, ಪಸರಿಸುತ್ತಾ, ಪವಾಡಗಳನ್ನು ಮೆರೆಸುತ್ತಾ ಧಾರ್ಮಿಕ ಪರಂಪರೆಯನ್ನು ವೃತ್ತಿ ಗಾಯನದ ಮೂಲಕ ಇಂದಿಗೂ ಸಾಕಾರ ಗೊಳಿಸಿದ್ದಾರೆ.

ಒಟ್ಟಾರೆ ಜನಪದ ವೃತ್ತಿಗಾಯಕರ ಅವಲೋಕನ ಎಂದಾಗ ಪುಟಗಟ್ಟಲೆ ಬರೆದಷ್ಟು ವಿಚಾರಗಳು, ವಿವರಣೆಗಳು ಸಿಗುತ್ತದೆ. ಸಂಶೋಧನೆಯ ಹಿನ್ನೆಲೆಯಲ್ಲಿ ಮಾಹಿತಿಯ ಭಂಡಾರವೇ ಸಿಗುತ್ತದೆ.

ವೃತ್ತಿಗಾಯಕರು ಪರಂಪರೆಯಿಂದ ಇಂದಿಗೂ ಸಂಸ್ಕೃತಿ ಹಾಗೂ ಧಾರ್ಮಿಕ ಚಟುವಟಿಕೆಗಳು ಮುಂದುವರೆಯುತ್ತಿದೆ. ಅನೇಕ ವೃತ್ತಿಗಾಯಕ ಪರಂಪರೆ ಹೊಂದಿರುವ ಶ್ರೀಮಂತ ಜನಪದ ಸಾಹಿತ್ಯ ಇಂದಿನ ಆಧುನೀಕರಣಕ್ಕೆ ಒಳಗಾಗಿ ಅವಸಾನ ಅಂಚಿಗೆ ತಳ್ಳಲ್ಪಟ್ಟಿದೆ. ಆದರೆ ಈಗಲೂ ಹಲವು ಕಡೆ ಧಾರ್ಮಿಕ ಆಚರಣೆ ಸಂದರ್ಭದಲ್ಲಿ ಜಾತ್ರೆ, ದೇವರ ಮೆರವಣಿಗೆ ಇಂತಹ ಕಡೆ ವೃತ್ತಿಗಾಯಕರು ಕಂಸಾಳೆ, ತಂಬೂರಿ ಹಿಡಿದವರು ಕರಪಾಲದವರು, ಗೊರವಯ್ಯನವರನ್ನು ಕರೆಯಿಸಿ ಹಾಡಿಸುವುದರಿಂದ ಮತ್ತು ಮಲೆ ಮಹಾದೇಶ್ವರ, ಮಂಟೇಸ್ವಾಮಿ ಪವಾಡಗಳನ್ನು ಹಾಡುವವರು ಇರುವುದರಿಂದ ವೃತ್ತಿಗಾಯಕ ಪರಂಪರೆ ಸಂಪೂರ್ಣವಾಗಿ ನಶಿಸಿಲ್ಲವೆಂಬ ಆಶಾಭಾವನೆ ಮೂಡುತ್ತದೆ. ಈ ನಿಟ್ಟಿನಲ್ಲಿ ನನ್ನ ಸಂಶೋಧನೆ ಒಂದು ಸಣ್ಣ ಪ್ರಯತ್ನವಾಗಿದೆ.

**ಆಕಾರ ಗ್ರಂಥಗಳು:**

1. ಜನಪದ ಕಾವ್ಯ ಕಥೆಗಳು ಮತ್ತು ಗೀತಮೇಳಗಳು
   : ಜೀ. ಶಂ. ಪರಮಶಿವಯ್ಯ
2. ಜಾನಪದ ಖಂಡಕಾವ್ಯಗಳು : ಜೀ. ಶಂ. ಪರಮಶಿವಯ್ಯ
3. ಜನಪದ ಸಾಹಿತ್ಯ : ಡಾ. ಕಾಳೇಗೌಡ ನಾಗವಾರ.

***

# 42.ಜನಪದ ವೃತ್ತಿಗಾಯಕರು

**ಸುಜಾತ.ಎ**

**ಪೀಠಿಕೆ:–** ಎಡಗಡೆಗಂಡಾಯ
ಬಲಗಡೆತಂಬೂರಿ
ಈ ರಾಜು ಬೀದೀಲಿ ಪರಂಜ್ಯೋತಿವರ
ಈ ಬರುವಾಗ ನೋಡಯ್ಯ
ಬಾರಮ್ಮ ನಮ್ಮತಾಯಿ
ತೋಪಿನ ದೊಡ್ಡಮ್ಮ
ಬಾರಪ್ಪ ನನ್ನಕಿರುಗಣ್ಣ
ರಿಜುಪಾಗಿಯ ನಂದರಾಗ

ಜಾನಪದ ಕಲೆಯು ಸಾಂಪ್ರದಾಯಕವಾದ ಕಲೆ ಮತ್ತು ಕರಕುಶಲ ಮೂಲಕ ಸಾಂಸ್ಕೃತಿಕ ಮತ್ತು ಸಾಂಪ್ರದಾಯಕ ವೈಭವವನ್ನು ಚಿತ್ರಿಸಿದ ಭೂಮಿ ಭಾರತವೂ ಎಂದು ತಿಳಿದುಬಂದಿದೆ. ಭಾರತದಲ್ಲಿನ ಪ್ರತಿಯೊಂದು ಪ್ರದೇಶವೂ ತನ್ನ ಶೈಲಿಯನ್ನು ಹಾಗು ಕಲೆಯ ವಿನ್ಯಾಸವನ್ನು ಹೊಂದಿದೆ ಇದನ್ನು ಜಾನಪದ ಕಲೆ ಎಂದು ಕರೆಯಲಾಗಿದೆ.

ಹಲವಾರು ಬುಡಕಟ್ಟು ಜನಾಂಗದವರು ಅಥವಾ ಗ್ರಾಮೀಣ ಜನರಿಂದ ಆಚರಿಸಲ್ಪಟ್ಟಿರುವ ಸಾಂಪ್ರದಾಯಿಕ ಕಲೆಯಾಗಿದೆ. ಜನಪದ ಮಹಾಕಾವ್ಯಗಳು ಸುದೀರ್ಘವಾದ ರಚನೆಗಳು ಹಲವಾರು ರಾತ್ರಿಗಳ ಕಾಲ ಹಾಡುವ ಹಾಡುಗಳು ಈ ದೀರ್ಘವಾದ ಕಾವ್ಯಗಳನ್ನು ಹಾಡುಗಾರರು ಹೇಗೆ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಸೂತ್ರಬದ್ಧವಾದ ರಚನೆಗಳ ಮೂಲಕ ರಚಿಸುತ್ತಾ ಪುನರಾವರ್ತನೆ ಮಾಡುತ್ತಾ ಹಾಡುತ್ತಿರುತ್ತಾರೆ. ಜನಪದ ವೃತ್ತಿಗಾರರು ಶಾಸ್ತ್ರ, ಪಾಂಡಿತ್ಯಬಲ್ಲವರಲ್ಲ. ಅವರಿಗಿದ್ದದ್ದು ದಟ್ಟವಾದ ಅನುಭವ.

ಜನಪದ ವೃತ್ತಿಗಾಯಕರಲ್ಲಿ ಸಾಹಸಮಯ ಸನ್ನಿವೇಶಗಳನ್ನು ಕಾಣಬಹುದು. ಕುತೂಹಲವನ್ನು ಕೆರಳಿಸುವ ರೋಚಕ ಘಟನೆಗಳನ್ನು ಮಾಯಾವಿ ಶಕ್ತಿಯನ್ನು ವರ್ಣಿಸುವ ಮನರಂಜಿಸುವ ಬದುಕಿಗೆ ಸ್ಪೂರ್ತಿದಾಯಕವಾದ ಸನ್ನಿವೇಶಗಳನ್ನು ಕಾಣಬಹುದು. ಪುರಾಣಗಳು, ಮಹಾಭಾರತ ರಾಮಾಯಣ ಕಥೆಗಳನ್ನು ಇವರ ಜೀವನಕ್ಕೆ ಆಶಾದಾಯಕವಾಗಿದೆ.

ಹಿಂದಿನ ಕಾಲದಲ್ಲಿ ಹಿರಿಯರು ಊರಲ್ಲೇ ಈ ಹಾಡುಗಾರರನ್ನು ಬೇಸಿಗೆ, ಮಳೆಗಾಲದಲ್ಲಿ ಮನೆಗೆ ಕರೆತಂದು ಸುತ್ತಮುತ್ತಲಿನ ಜನರನ್ನು ಸೇರಿಸಿಕೊಂಡು ಕೇಳುತ್ತಿದ್ದರು. ಹಾಸ್ಯ, ಭಕ್ತಿ, ಕಷ್ಟ ಬಂದಾಗ ಅದರಿಂದ ಹೊರಬರಬೇಕಾದ ಕಾರ್ಯತಂತ್ರಗಳು ಇಲ್ಲಿ ಹೆಣೆದು ಸಣ್ಣವರನ್ನು ಆಕರ್ಷಿಸುವಂತೆ ಮಾಡುತ್ತಿದ್ದರು. ಯಕ್ಷಗಾನ, ಮೂಡಲಪಾಯ, ತಾಳಮದ್ದಳೆ, ಸಣ್ಣಾಟ, ತೊಗಲುಗೊಂಬೆ ಆಟ, ಸೂತ್ರದಗೊಂಬೆ ಆಟ, ಶ್ರೀಕೃಷ್ಣಪಾರಿಜಾತ, ಹಾಗು ಪೌರಾಣಿಕ ವಸ್ತುವನ್ನು ಅವಲಂಬಿಸಿ ಗಾಯಕ ವೃತ್ತಿಯನ್ನು ಅವಲಂಬಿಸಿಕೊಂಡು ಬಂದಿದ್ದಾರೆ. ಪ್ರಾಣಿ, ಪ್ರಕೃತಿ, ಕೌಟಂಬಿಕ ಹಾಗು ಸಂಕೀರ್ಣ ಸಂಬಂದವು ಜನಪದ ವೃತ್ತಿಗಾರರ ಬದುಕಿನ ಕ್ರಮವಾಗಿರುತ್ತದೆ. ವೃತ್ತಿಗಾರರ ಜನಪದ ಜೀವನ ಹೇಗೆ ಭಿನ್ನವೋ ಹಾಗೆಯೇ ಭಾಷೆಯು ಬಿನ್ನವಾಗಿರುತ್ತದೆ.

ಜನಪದ ವೃತ್ತಿಗಾಯಕರು ದೈವೀಶಕ್ತಿಯನ್ನು ಮೊದಲಿನಿಂದಲು ಆರಾದಿಸಿಕೊಂಡು ಬಂದಿದ್ದಾರೆ. ಆರಾದ್ಯ ವಸ್ತುವಿನ ಪೂಜೆಯಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುತ್ತಾ ಬಂದಿದ್ದಾರೆ. ಬದುಕಿನ ಎಲ್ಲಾ ಆಗು ಹೋಗುಗಳನ್ನು ನಿರ್ದೇಶಿಸುವ ಅಸದೃಶ ಶಕ್ತಿಯನ್ನು ಸಂತೃಪ್ತಿಪಡಿಸುವುದೇ ಆಗಿದೆ. ಆ ಶಕ್ತಿಯನ್ನು ಪೂಜಿಸುವಾಗ ಹೃದಯತುಂಬಿ ಹಾಡತೊಡಗುತ್ತಾರೆ, ಮೈಮರೆತುಕುಣಿಯುತ್ತಾರೆ. ಗ್ರಾಮ ಕಲೆಗಳಲ್ಲಿ ಬಹುತೇಕ ಕಲೆಗಳು ದೈವೀ ಆರಾದನೆಯ ಹಿನ್ನಲೆಯಲ್ಲೇ ಬೆಳೆದುಬಂದಿದೆ. ಅವುಗಳಲ್ಲಿ ವಾದ್ಯ ಪ್ರದಾನವಾದ ಕಲೆಗಳುಕೆಲವಿದ್ದರೆ, ಗೀತಪ್ರದಾನವಾದ ಕಲೆಗಳು

ISBN – 978-93-5526-247-9

ಮತ್ತೆ ಕೆಲವಿದೆ, ಭೂತಾರಾದನೆ, ನಾಗಮಂಡಲ, ಗೊರವರು, ಕಂಬಿ, ಬಾಮದೇವರು, ಹರಿಗೆ ಸೇವೆ, ತೊಂಡಲ ದೇವರು, ಮೊದಲಾದವು ಕೇವಲ ಧಾರ್ಮಿಕ ಆಚರಣೆಗಳೇ ಆದರೂ ಕುಣಿತ ಮತ್ತು ವಾದ್ಯ ಬಡಿತದ ಅಂಶವಿರುವುದರಿಂದ ಅವುಗಳನ್ನೆಲ್ಲಾ ಕಲೆಯನ್ನಾಗಿ ಪರಿಗಣಿಸಬೇಕು.
ಉದಾ:– ಸುಗ್ಗಿ ಕುಣಿತ, ಹೆಜ್ಜೆ ಮೇಳ, ರಂಗದ ಕುಣಿತ, ವೀರ ಮಕ್ಕಳ ಕುಣಿತ, ಮಾರೆ ಕುಣಿತ, ಕೋಲಾಟ, ಸೋಮನ ಕುಣಿತ ಮುಂತಾದವು.

**ಜನಪದ ವೃತ್ತಿಗಾಯಕರು**

- ಕಂಸಾಳೆಯವರು — ಗೊಂದಲಿಗರು
- ಕಿನ್ನರಿ ಜೋಗಿಗಳು — ನೀಲಗಾರರು
- ಹೆಳವರು — ಚೌಡಿಕೆಯವರು
- ವಾಘಮುರುಳಿ — ಗೊರವರು
- ಸಾರುವಯ್ಯನವರು — ಕರಪಾಲದವರು
- ತೆಲುಗುಜಂಗಮರು — ದೊಂಬಿದಾಸರು
- ಸಿದ್ದಿಕಿ ಸಿದ್ದಿ — ದಾಸಯ್ಯ
- ಹಾಲಕ್ಕಿ ಒಕ್ಕಲಿಗರು — ತಂಬೂರಿಯವರು

**ಕಂಸಾಳೆಯವರು:–**

ಇದೊಂದು ಕೌಶಲ ಪೂರ್ಣವಾದ ಜನಪದ ಕಲೆ. ಕಂಸಾಳೆಯವರನ್ನು "ದೇವರಗುಡ್ಡ"ರೆಂದು ಕರೆಯುತ್ತಾರೆ. ಗುಡ್ಡರೆಂದರೆ ಮಹದೇಶ್ವರನ ಭಕ್ತರು ಆ ಭಕ್ತರ ಲೀಲೆಗಳನ್ನು ಕಥೆಯಾಗಿಸಿ ಹಾಡಿನರೂಪದಲ್ಲಿ ವ್ಯಕ್ತಪಡಿಸುವ ವಿಶಿಷ್ಟ ಸಂಪ್ರದಾಯ ಕರ್ನಾಟಕದಲ್ಲಿದೆ. ಈ ಗುಡ್ಡರು ಮಹದೇಶ್ವರನ ಒಕ್ಕಲಿನವರು. ಮನೆಗೊಬ್ಬ ಗುಡ್ಡನನ್ನು ಬಿಡಬೇಕಾದುದು ಕಡ್ಡಾಯ. ಕಷ್ಟ ಪರಿಹಾರಕ್ಕಾಗಿ ಮಹದೇಶ್ವರನಲ್ಲಿ ಹರಕೆ ಹೊತ್ತಿಕೊಳ್ಳುವ ಮೂಲಕ ಗುಡ್ಡನನ್ನು ಬಿಡುವುದು ಉಂಟುಗುಡ್ಡರು ಕಂಸಾಳೆ ವಾದ್ಯ ಹಾಗೂ ಪದಗಳನ್ನು ಕಲಿತು ಹಾಡುವ ಮೂಲಕ ಮಹದೇಶ್ವರನ ಸೇವೆ ಮಾಡುತ್ತಾರೆ. ಇವರನ್ನು ಧಾರ್ಮಿಕ ವೃತ್ತಿಗಾರರೆಂದು ಕರೆಯುತ್ತಾರೆ. ಇವರು ಎರಡು ಕೈಯಲ್ಲಿ ಒಂದೊಂದು ಕಂಚಿನ ಬಟ್ಟಲುಗಳನ್ನು ಹಿಡಿದುಕೊಂಡು ಬಡಿಯುತ್ತ ಹಾಡುತ್ತ ಬಿಕ್ಷಾಟನೆಯನ್ನು ಮಾಡುತ್ತಿರುತ್ತಾರೆ. ಕಂಸಾಳೆಯವರಲ್ಲಿ ಸಾಮಾನ್ಯವಾಗಿ ಮೂವರಿರುತ್ತಾರೆ, ಈ ಮೇಳದಲ್ಲಿ ಮುಖ್ಯಗುಡ್ಡ ಕಂಸಾಳೆ ಹಿಡಿದಿದ್ದರೆ ಉಳಿದಿಬ್ಬರು ಏಕತಾರಿದಮ್ಮಡಿ ಹಿಡಿದು ಹಿಮ್ಮೇಳದವರಾಗಿರುತ್ತಾರೆ, ಏಕತಾರಿ ದಮ್ಮಡಿಗಳಿಲ್ಲದೆ ಒಬ್ಬನೇ ಗುಡ್ಡಮನೆಯ ಮುಂದೆ ಕಂಸಾಳೆಯನ್ನು ಭಾರಿಸುತ್ತ ಮಹದೇಶ್ವರನ ಮಹಿಮೆಯನ್ನು ಕೊಂಡಾಡುತ್ತಾರೆ. ಕೆಲವೊಮ್ಮೆ ಇಬ್ಬರು ಗುಡ್ಡರು ಜೋಡಿಯಾಗಿ ಕಂಸಾಳೆ ಬಾರಿಸುತ್ತಾ ಹಾಡುವುದುಂಟು. ಕಂಸಾಳೆಯ ಗತ್ತು ಮತ್ತು ತಾಳಕ್ಕೆ ಅನುಗುಣವಾಗಿ ಗುಡ್ಡುರು ಅನೇಕ ಗೀತೆ ಮತ್ತು ಲಾವಣಿಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಬಿಳಿಯ ಅಂಗಿ, ಪಂಚೆ, ಹೆಗಲಲ್ಲಿ ಜೋಳಿಗೆ, ಕೊರಳಲ್ಲಿ ರುದ್ರಾಕ್ಷಿ ಹಣೆಯಲ್ಲಿ ವಿಭೂತಿ ಇದು ಗುಡ್ಡರ ವೇಷಭೂಷಣ. ಕಂಸಾಳೆ ಬಟ್ಟಲು ಅವರ ದೇವರಿಗೆ ಸಾಂಕೇತಿಕರೂಪ. ನವರಾತ್ರಿ, ಶಿವರಾತ್ರಿ, ಕಂಸಾಳೆಯ ನಾದದಿಂದ ಗುಡ್ಡರ ಹಾಡುಗಾರಿಕೆಯಿಂದ ಜನತುಂಬಿ ಹೋಗಿರುತ್ತಾರೆ. ಇವರು ಹೆಚ್ಚಾಗಿ ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಕಂಚಿನ ಬಟ್ಟಲು ಹಿಡಿದಿರುವುದ ರಿಂದ ಇವರನ್ನು ಕಂಸಾಳೆಯವರೆನ್ನುತ್ತಾರೆ.

**ನೀಲಗಾರರು;**

ಇವರು ಲೌಕಿಕ ವೃತ್ತಿಗಾಯಕರು. ನೀಲಗಾರರ ಮಂಟೇಸ್ವಾಮಿ ಅವತಾರ ಪುರುಷ ಬಸವೇಶ್ವರನಿಗಿಂತಲೂ ದೊಡ್ಡವನು. ಕಲ್ಯಾಣದ ಬಸವೇಶ್ವರ ಮತ್ತು ನೀಲಮ್ಮನವರ ಸತ್ಯವನ್ನು ಪರೀಕ್ಷಿಸಲು ಕೈಲಾಸದಿಂದ ನೇರವಾಗಿ ಬಂದ ಪರಂಜ್ಯೋತಿ ಸ್ವರೂಪಿ ಸ್ವಾಮಿಕಾವ್ಯ ಕಲ್ಯಾಣದಿಂದ ಪ್ರಾರಂಭವಾಗುತ್ತದೆ. ಪ್ರಭುಸ್ವಾಮಿ, ಪ್ರಭುದೇವರು ಧರೆಗೆದೊಡ್ಡವರು ಎಂದಿದ್ದ ಇವರಿಗೆ ಒಂದು ವಿಚಿತ್ರ ಪ್ರಸಂಗದಿಂದ ಮಂಟೆಸ್ವಾಮಿ ಎಂದು ಹೆಸರಾಗುತ್ತದೆ. ಜುಲೈ ತಿಂಗಳಲ್ಲಿ ಮಂಟೆ

ISBN – 978-93-5526-247-9

ದೇವರು ಹಬ್ಬವನ್ನು ಆಚರಿಸಲಾಗುತ್ತದೆ. ಇದನ್ನು ಭಂಗಿ ಸೇವೆ ಎಂದುಕರೆಯುತ್ತಾರೆ. ನೀಲಗಾರರ ಮೇಲೆ ದೇವರು ಬರುವುದುಉಂಟು. ನೀಲಗಾರರು ಕೈಯಲ್ಲಿ ಜಾಗಟೆ ಹಿಡಿದಿರುತ್ತಾರೆ, ಕಂಕುಳಿನಲ್ಲಿ ಬೆತ್ತ ಇಟ್ಟಿರುತ್ತಾರೆ, ಭುಜದಲ್ಲಿ ಜೋಳಿಗೆ ಹಾಕಿಕೊಂಡಿರುತ್ತಾರೆ, ಕೊರಳಿಗೆ ಮಣಿಯನ್ನು ಕಟ್ಟಿಕೊಡಿರುತ್ತಾರೆ, ಇವರು ಲೌಕಿಕ ವೃತ್ತಿಗಾಯಕರು. ಬಿಕ್ಷಾಟನೆ ಮಾಡಿಜೀವನ ಸಾಗಿಸುತ್ತಾರೆ. ಮಳವಳ್ಳಿ, ಹಲಗೂರು, ಬೊಪ್ಪಗೌಡನಪುರ ಇಲ್ಲಿ ಉಳಿದಿರುವ ಅವಶೇಷ ಇಂದಿಗೂ ಸಾಕ್ಷಿಯಾಗಿದೆ. ಸಿದ್ದಯ್ಯ ಸ್ವಾಮಿ ಬನ್ನಿ! ಪವಾಡವಗೆದ್ದಯ್ಯ ನೀವೇ ಬನ್ನಿ ಎಂದು ಹಾಡುವ ಹಾಡು ಬಹಳ ಪ್ರಸಿದ್ಧವಾದುದು.

**ಚೌಡಿಕೆಯವರು;**

ಚೌಡಿಕೆಯನ್ನು ಹಿಡಿದುಕೊಂಡು ಹಾಡನ್ನು ಹೇಳುತ್ತಾರೆ. ಇವರು ಎಲ್ಲಮ್ಮನ ಕಥೆ, ಸರ್ಜಪ್ಪನಾಯಕ, ಇಲ್ಲವೆ ಮಾಗಡಿ ಕೆಂಪೇಗೌಡ ಮೊದಲಾದವರ ಲಾವಣಿಗಳನ್ನು ಹಾಡುವಾಗ ಈ ವಾದ್ಯವನ್ನು ಬಳಸುತ್ತಾರೆ. ಇವರು ಸವದತ್ತಿ ಎಲ್ಲಮ್ಮನ ಆರಾದಕರು. ಪರಶುರಾಮ ತನ್ನ ತಾಯಿ ರೇಣುಕೆಯನ್ನು ಸಂತೋಷ ಪಡಿಸಲು ಕಾರ್ತವೀರ್ಯನನ್ನು ಕೊಂದು ಅವನನ್ನೇ ವಾದ್ಯವನ್ನಾಗಿ ಮಾಡಿಕೊಂಡನಂತೆ ಅದೇ ಚೌಡಿಕೆರೇಣುಕೆಯ ಅವತಾರವೇ ಈ ಎಲ್ಲಮ್ಮ. ಇವರು ಈಕೆಯ ಕಥಯನ್ನು ಚೌಡಿಕೆ ವಾದ್ಯದೊಂದಿಗೆ ಹಾಡುತ್ತಾರೆ. ಎಲ್ಲಮ್ಮ ಹೊರಂಗಲ್ಲು ದೊರೆಯ ಸೊಕ್ಕನ್ನು ಅಡಗಿಸಿದ ಪ್ರಸಂಗವನ್ನು ಚೌಡಿಕೆಯವರು ಸೊಗಸಾಗಿ ಹಾಡುತ್ತಾರೆ. ಎಲ್ಲಮ್ಮನ ಪೂಜಾ ವೇಳೆಯಲ್ಲಿ ಇವರು ಚೌಡಿಕೆಯನ್ನು ಪೂಜಿಸುತ್ತಾರೆ. ಇವರು ತಾವು ಪರಶುರಾಮನ ಪರಂಪರೆಯವರೆಂದು ಹೇಳಿಕೊಳ್ಳುವುದುಂಟು. ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳಲ್ಲೂ ಊರೂರುತಿರುಗಿ ಬಿಕ್ಷೆ ಮಾಡುತ್ತಾರೆ. ಎಲ್ಲಮ್ಮನ ಕಥೆಗಳನ್ನು ಸೊಗಸಾಗಿ ಹಾಡುತ್ತಾರೆ. ಸಾಮಾನ್ಯವಾಗಿ ಇಬ್ಬರು ಇರುವ ಈ ಕಲೆಯಲ್ಲಿ ಹಾಡು, ಕುಣಿತ, ಮಾತುಗಳಿರುತ್ತವೆ. ಮಾತು ಮಾತಿಗು ಹೌದ ಹೌದ ಎನ್ನುವ ಮತ್ತೊಬ್ಬ ಪ್ರಮುಖನ ಜೊತೆ ತಾನುಕುಣಿಯುತ್ತಾನೆ. ಕುಟುಂಬ ಯೋಜನೆ, ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆಯನ್ನು ಜನರಲ್ಲಿ ಬಿತ್ತುತ್ತಾರೆ.

**ಗೊರವರು;**

ಇವರು ಶೈವ ಬಿಕ್ಷುಕರು. ಕೂದಲಿನಿಂದ ಮಾಡಿದಟೊಪ್ಪಿಗೆ ಹಾಕಿ ಕವಡೆಗಳಿಂದ ಅಲಂಕೃತವಾದ ಕಪ್ಪು ಮತ್ತು ನೀಲಿ ಅಂಗಿಯನ್ನು ತೊಟ್ಟಿರುತ್ತಾರೆ. ಇದನ್ನು ಕಂಬಳಿಯಿಂದ ತಯಾರಿಸಿರುತ್ತಾರೆ, ಡಮರುಗದಂಥ ಚರ್ಮ ವಾದ್ಯವೊಂದು ಅವರ ಕೈಯಲ್ಲಿರುತ್ತದೆ. ಅದನ್ನು ಅತ್ತಿತ್ತ ಅಲುಗಾಡಿಸಿದಾಗ "ಬಡ್ಡ ಬಡ್ಡ ಬಡ್ಡ" ಎನ್ನುವ ಭಾರೀ ಸದ್ದು ಬರುತ್ತದೆ. ಈ ಸದ್ದಿಗೆ ಮಕ್ಕಳು ಹೆದರಿಕೊಳ್ಳುವುದುಂಟು. ಹಳ್ಳಿಯಲ್ಲಿ ಮಕ್ಕಳು ಅತ್ತಾಗ ಹಟಮಾಡಿದಾಗ ಹೆದರಿಸುವುದಕ್ಕಾಗಿ "ಗೋಡ ಬಡ್ಡಯ್ಯನಿಗೆ ಹಿಡಿದುಕೊಡುತ್ತೇವೆ" ಎನ್ನುತ್ತಾರೆ. ಇವರ ಕರಡಿಯ ವೇಷ ಅವರು ನುಡಿಸುವ ವಾದ್ಯದ ಸದ್ದು ನೆನೆದು ಮಕ್ಕಳು ಅಳು ನಿಲ್ಲಿಸುತ್ತಾರೆ. ಇವರು ಮೈಲಾರಲಿ ಮಗನ ಭಕ್ತರು. ಇವರ ಬೆನ್ನಿನ್ನಲ್ಲಿ ಹಲಗೆಯ ಬಟ್ಟಲು ಇರುತ್ತದೆ. ಬಟ್ಟಲಲ್ಲಿ ಊಟ ಮಾಡುತ್ತಾರೆ. ಕರಿ ಬಣ್ಣದ ಇವರು ಜನಪದ ಕಲಾವಿದರಲ್ಲಿ ಬಹಳ ಆಕರ್ಷಕವಾಗಿರಿತ್ತಾರೆ.

**ಕರಪಾಲದವರು;**

ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧವಾದ ಜನಪದಕಲೆ. ಕರಪಲ್ಲ, ಕರಪಲ್ಲವ, ಕರಪಾಲ ಎಂಬ ಹೆಸರುಗಳಿಂದ ಇದನ್ನು ಕರೆಯುತ್ತಾರೆ. ತಮ್ಮ ಬೆರಳುಗಳ ಸಂಜ್ಞೆಯಿಂದಲೇ ಇಷ್ಟಪಟ್ಟ ಪ್ರೇಕ್ಷಕನ ಹೆಸರನ್ನು ಹೇಳುವ ಕಲೆ. ಇದರ ವಿಶೇಷ. ಒಟ್ಟು ಮೂರು ಜನರಿರುವ ಈ ಮೇಳದಲ್ಲಿ ಒಬ್ಬ ಗುರು ಇನ್ನಿಬ್ಬರು ಶಿಷ್ಯರು. ಗುರು ನಿರ್ದಿಷ್ಟ ಪ್ರೇಕ್ಷಕನ ಹೆಸರನ್ನು ಕೇಳಿ ತಿಳಿದುಕೊಂಡು ತನಗಿಂತ ಸುಮಾರು ನೂರಿನ್ನೂರು ಅಡಿ ದೂರದಲ್ಲಿರುವ ಶಿಷ್ಯರಿಗೆ ತನ್ನ ಕೈ ಬೆರಳಿನ ಸಂಜ್ಞೆಯ ಮೂಲಕ ತಿಳಿಸುತ್ತಾರೆ. ಆಗ ಶಿಷ್ಯರು ಸಂಜ್ಞೆಯನ್ನು ಗ್ರಹಿಸಿಕೊಂಡು ಪ್ರೇಕ್ಷಕನ ಹೆಸರನ್ನು ಹಾಡುಗಳೊಂದಿಗೆ ಹಾಡುತ್ತಾರೆ. ಇದು ಊರ ಬಯಲಲ್ಲಿ, ಜಾವಡಿಯಲ್ಲಿ ನಡೆಯುವ ಆಟ. ಇವರ ವೇಷಭೂಷಣಗಳೆಂದರೆ ಮುಖ್ಯ ನಿರೂಪಕನಿಗೆ ಕೋಡಂಗಿಯ ಟೋಪಿ ತರ ಒಂದು ಕಿರೀಟವಿರುತ್ತದೆ. ಇದು ಬಲ ಬುಜದಲ್ಲಿ ಇಳಿಬಿದ್ದ ತುರಾಯಿ, ಕುತ್ತಿಗೆಗೆ ರುದ್ರಾಕ್ಷಿ ಸರ, ಕೈಯಲ್ಲಿ ತಾಳ, ವಿಭೂತಿ ಬಳಿದ ಮುಖ, ಸೊಂಟಕ್ಕೆ ಕರವಸ್ತ್ರಗಳು ಇರುತ್ತದೆ. ಈತನ ಬಲ ಬಾಗದಲ್ಲಿ ನಿಂತ ಶಿಷ್ಯ ವೀರನಂತೆ ಪಂಚೆ, ಬಿಳಿ ನಿಲುವಂಗಿ ನಡುವಿಗೆ ಒಂದು ವಸ್ತ್ರ, ತಲೆಗೆ ರುಮಾಲು, ಕಾಲಿಗೆ ಗೆಜ್ಜೆ ಧರಿಸಿರುತ್ತಾನೆ. ಇವನ ನಡುವಿನಲ್ಲಿ ಮಣ್ಣಿನ ಅಚ್ಚಿನಡುಮುಕಿ ಇರುತ್ತದೆ. ಹಾಡಿಗೆತಕ್ಕಂತೆ ನೃತ್ಯಗಳಿರುತ್ತವೆ. ನಿರೂಪಕನ

ಎಡ ಬದಿಯಲ್ಲಿ ನಿಂತಶಿಷ್ಯ ಕೂಡ ಬಲ ಬದಿಯವನಂತೆಯೇ ವೇಷ ಧರಿಸಿರುತ್ತಾನೆ. ಅವನ ಕೈಯಲ್ಲಿ ತಾಳಗಳು ಮಾತ್ರಾ ಇರುತ್ತವೆ. ಆಟಕ್ಕೆ ಮೊದಲು ದೇವರ ಪಟವನ್ನು ಇಟ್ಟು ಪೂಜಿಸುತ್ತಾರೆ. ಆರಂಭಕ್ಕೆ ನಿರೂಪಕ "ನಾವು ಬಲ್ಲವರಲ್ಲ ನಾವು ತಿಳಿದವರಲ್ಲ ಎಂದು ಕಥೆ ಆರಂಭಿಸುತ್ತಾರೆ.

**ದೊಂಬಿದಾಸರು;**

ಕರ್ನಾಟಕ ಜಾನಪದ ಸಾಹಿತ್ಯ ವೃತ್ತಿಗಾಯಕರಲ್ಲಿ ಅತ್ಯಂತ ಪ್ರಮುಖರಲ್ಲಿ ಒಬ್ಬರು ದೊಂಬಿದಾಸರು. ಇವರು ಗಾಯನಕಲೆಯನ್ನು ಅವಲಂಬಿಸಿ ಲಾವಣಿಗಳು ಗ್ರಾಮೀಣ ಪ್ರದೇಶದಲ್ಲಿ ಪ್ರಸಾರ ಮಾಡುತ್ತಾ ತಮ್ಮ ಕಲಾ ಪ್ರತಿಭೆಯನ್ನು ವೃದ್ಧಿಸಿಕೊಂಡವರು. ದಕ್ಷಿಣ ಕರ್ನಾಟಕ ಜಿಲ್ಲೆಗಳಾದ ತುಮಕೂರು, ಬೆಂಗಳೂರು, ಕೋಲಾರ, ಮಂಡ್ಯ ಜಿಲ್ಲೆಗಳಲ್ಲಿ ಸದಾ ಸಂಚರಿಸುತ್ತಾ ಜನಪದ ಹಾಡು ಲಾವಣಿಗಳನ್ನು ಹೇಳುತ್ತಾ ರಾಜ್ಯದ ಸುತ್ತಾ ಸಂಚರಿಸಿ ತಮ್ಮ ಕಲೆಯನ್ನು ಪ್ರಸಾರ ಮಾಡಿ ಜನಪ್ರಿಯರಾಗಿದ್ದಾರೆ. ಇವರು ಐತಿಹಾಸಿಕ ವೀರ ಕಾವ್ಯಗಳನ್ನು ಕೆಲವು ಲೌಕಿಕ ಕಾವ್ಯಗಳನ್ನು ಹಾಡಿಕೊಂಡು ಬಂದಿದ್ದಾರೆ. ಇವರು ಬಯಲಾಟವನ್ನು ಆಡುತ್ತಾರೆ. ಹತ್ತಾರು ಆಟಗಳನ್ನು ತಮ್ಮೊಂದಿಗೆ ಊರಿಂದ ಊರಿಗೆ ತಲೆಮಾರಿನಿಂದ ತಲೆಮಾರಿಗೆ ಸಾಗಿಸಿಕೊಂಡು ಬಂದಿರುವ ಇವರು ಕಲೆಯನ್ನು ಉಸಿರೆಂದೇ ತಿಳಿದುಕೊಂಡವರು.

**ದಾಸಯ್ಯ;**

"ಗೋವಿಂದಾ ಗೋವಿಂದಾ" ಎಂದು ದಾಸಯ್ಯನಿಂದ ದೇವರ ನಾಮಸ್ಮರಣೆ ಮಾಡಿದರೆ ಒಳ್ಳೆಯದಾಗುವುದು ಎಂಬುದು ಗ್ರಾಮೀಣರ ನಂಬಿಕೆ. ಆದುದರಿಂದ ಹಬ್ಬ ಹರಿದಿನಗಳಲ್ಲಿ, ಮದುವೆ ಮಂಗಳ ಕಾರ್ಯಗಳಲ್ಲಿ ಅಹ್ವಾನ ಬರುವುದು. ಗ್ರಾಮೀಣರು ಕರೆದಾಗ ದಾಸಯ್ಯ ಹೋಗಿ ಶಂಖ ಜಾಗಟೆ ಬಡಿದು "ವೆಂಕಟರಮಣ ಗೋವಿಂದಾ ಗೋವಿಂದಾ"ಎಂದು ಹೇಳುತ್ತಾರೆ. ಗೊಲ್ಲರು, ಕುರುಬರು, ಬಣಜಿಗರು, ಹೆಚ್ಚು ಪ್ರಚಲಿತವಿದೆ. ಹಿರಿಯರಿಂದ "ಮುದ್ರೆ"ಒತ್ತಿಸಿಕೊಂಡೇ ದಾಸಯ್ಯರಾಗಬೇಕು. ಗರುಡಗಂಭ ಹಿಡಿದಿರುವುದರಿಂದ 'ಗರುಡ ವಂಶದವರು' ಎಂದು ಇವರನ್ನು ಕರೆಯುತ್ತಾರೆ. ದಾಸಯ್ಯನ ವಂಶಜರಲ್ಲಿ ಹೆಚ್ಚಾಗಿ "ದಾಸಪ್ಪ, ದಾಸಜ್ಜ, ದಾಸಣ್ಣ ಎಂಬ ಹೆಸರು ಇರುತ್ತದೆ. ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ದಾಸಗೌಡರು ಈ ಬಗೆಯವರು. ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿರುವ ದಾಸಯ್ಯಗಳು ಕೆಳಜಾತಿಗಳ ಪುರೋಹಿತರಾಗಿದ್ದಾರೆ. ಇವರೆಲ್ಲ ತಿರುಪತಿ ತಿಮ್ಮಪ್ಪನ ಒಕ್ಕಲುಗಳು. ಮನೆಮನೆಗೆ ಭವನಾಸಿಯನ್ನು ಹಿಡಿದು 'ಶ್ರೀಮದ್ ರಮಾ ರಮಣ ಗೋವಿಂದಾ ಗೋವಿಂದಾ'ಎಂದು ಬಿಕ್ಷೆಗೆ ಹೋಗುತ್ತಾರೆ. ಮನೆಗೆ ಬಂದ ದಾಸಯ್ಯನಿಗೆ ಹಸಿ ಹಿಟ್ಟು, ದವಸ ನೀಡಿ ಕಾಲಿಗೆ ಬೀಳುವುದು ಜನರ ರೂಢಿಯಾಗಿದೆ.

**ತಂಬೂರಿಯವರು;**

ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆ ಹಾಗು ಉತ್ತರ ಕೊಡಗಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಕಂಡು ಬರುವ ಲೌಕಿಕ ವೃತ್ತಿಗಾಯಕರು. ಇವರ ವಾದ್ಯ ತಂಬೂರಿ ಜೊತೆಗೆ ಬಟ್ಟು, ತಾಳ ಹಾಗು ಗುಮಟೆಗಳನ್ನು ಬಳಸುತ್ತಾರೆ. ತಂಬೂರಿಯನ್ನು ಕಣಿಗಲೆ, ಪಕ್ಷೆ, ಕೊಳಿ ತೇಗ ಹಲಸು ಮುಂತಾದ ಮರಗಳಲ್ಲಿ ಮಾಡುತ್ತಾರೆ. ಮೂರುವರೆ ಅಡಿ ಉದ್ದವಿರುವ ತಂಬೂರಿಯ ಮೇಲಿನ ಭಾಗದಲ್ಲಿ ನಾಗರ ಹಾವಿನ ಹೆಡೆಯ ಕೆತ್ತನೆ ಇರುತ್ತದೆ. ನಾಲ್ಕು ತಂತಿಗಳನ್ನು ಶೃತಿ ಮಾಡಿಕೊಳ್ಳುವ ನಾಲ್ಕು ಬಿರಡೆಗಳಿರುತ್ತವೆ. ಇವರು ಹಾಡುವ ರಾಮಾಯಣ ಹಾಗೂ ಮಹಾಭಾರತಗಳಿಂದ ಹಾಗೂ ಪೌರಾಣಿಕ, ಐತಿಹಾಸಿಕ ಹಾಗೂ ಇತರ ಕಾವ್ಯಗಳನ್ನು ಹಾಡುತ್ತಾರೆ. ಜನಪದ ಕಥೆಗಳನ್ನು ಕಾವ್ಯವನ್ನಾಗಿ ಮಾರ್ಪಡಿಸಿಕೊಂಡಿರುವುದೇ ಇವರ ಕಾವ್ಯ. ಊರೊಟ್ಟಿನ ಮದುವೆ ಮುಂಜಿಗಳಲ್ಲಿ ವಾದ್ಯವನ್ನು ನುಡಿಸುತ್ತಾರೆ. ಇವರ ಚಿಟಮೇಳ ಕರಡೆ, ಕೋಲು, ಡುಮ್ಮಿ, ಮೋರಿಗೆಗಳಿಂದ ಕೂಡಿದ ಜನಪದ ನೃತ್ಯ.

**ಗೊಂದಲಿಗರು;**

ಅಂಭಾಭವಾನಿಯ ಹೆಸರಿನಲ್ಲಿ ಗೊಂದಲ ಹಾಕುವುದನ್ನೇ ಪ್ರಧಾನವನ್ನಾಗಿ ಮಾಡಿಕೊಂಡಿರುವ ಜನಾಂಗ ಇವರು. ಬಿಜಾಪುರ, ಬೆಳಗಾವಿ, ಧಾರವಾಡ, ಶಿವಮೊಗ್ಗ, ಬೀದರ್, ಗುಲ್ಬರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಮತ್ತು ಮೈಸೂರು, ಮಂಡ್ಯಜಿಲ್ಲೆಯ ಕೆಲವೆಡೆಗಳಲ್ಲಿ ಕಂಡುಬರುತ್ತಾರೆ. ಈ ಜನಾಂಗವನ್ನು ಗೋಂಧಾಳಿ, ಗೊಂದಲಿ ಎಂಬ ಹೆಸರಿನಿಂದ

ISBN – 978-93-5526-247-9

ಗುರುತಿಸುತ್ತಾರೆ. ಗೊಂದಲಿಗ ಎಂದರೆ ಪಾರ್ವತಿಯ ಹೆಸರಿನಲ್ಲಿ ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು ಎಂದರ್ಥ. ಜಮದಗ್ನಿ ಮತ್ತು ಆತನ ಹೆಂಡತಿ ರೇಣುಕೆ ಈ ಜನಾಂಗದ ಸ್ಥಾಪಕರು. ಅಂಭಾಭವಾನಿ ಇವರಕುಲದೇವತೆ ಮಹಾರಾಷ್ಟ್ರದ ತುಳಜಾಪುರ ಈ ದೇವತೆಯ ಮೂಲ ಸ್ಥಾನ. ಗೊಂದಲಿಗರಲ್ಲಿ ಎರಡು ಗೋತ್ರಗಳಿವೆ. 1. ಸ್ವಗೋತ್ರ 2. ಬಿನ್ನಗೋತ್ರ. ಬುಡುಬುಡುಕೆಯವರು, ಗೊಂದಲಿಗರು, ಜೋಗಿಗಳು ಇವರೆಲ್ಲಾ ಸೇರಿ ಹಬ್ಬಗಳನ್ನು ಆಚರಿಸುತ್ತಾರೆ. ಸಂಪ್ರದಾಯಸ್ಥರಾಗಿರುತ್ತಾರೆ, ನ್ಯಾಯವಂತರಾಗಿರುತ್ತಾರೆ. ಮೊಹರಂ ಮತ್ತು ಹೋಳಿ ಹಬ್ಬಗಳಲ್ಲಿ ಇರುವ ಕಟ್ಟುವ ವೇಷಗಳನ್ನು ಸೋಂಗು ತೆಗೆಯುವುದು ಎನ್ನುವರು. ಹಣ ಗಳಿಕೆ ಈ ವೇಷಗಳ ಪ್ರಧಾನ ಉದ್ದೇಶ ಗಣಪತಿ ಸ್ತೋತ್ರದಿಂದ ಗೊಂದಲ ಪ್ರಾರಂಭವಾಗುತ್ತದೆ. ಸ್ತೋತ್ರ ಕನ್ನಡ, ಮರಾಠಿ ಭಾಷೆಯಲ್ಲಿರುತ್ತದೆ. ಗೊಂದಲ ಹಾಕುವಾಗ ಹೇಳೂವ ಕಥೆಗಳು, ಕಥೆಗಳಿಗೆ ಹೊಂದಿಕೊಂಡು ನಡುನಡುವೆ ಬರುವ ಹಾಡುಗಳು ಹೆಣ್ಣುಮಕ್ಕಳು ಪಂಚಮಿಯಲ್ಲಿ ಹಾಡುವ ಹಾಡುಗಳು ಬರುತ್ತವೆ.

**ಕಿನ್ನರಿ ಜೋಗಿಗಳು;**

ಕಿನ್ನರಿ ಬಾರಿಸುತ್ತಾ ಹಾಡು ಹೇಳಿಕೊಂಡು ಬಿಕ್ಷೆ ಬೇಡುವ ಒಂದು ವಿಶಿಷ್ಟ ಜನಾಂಗ ಕಿನ್ನರಿ ಅಥವಾ ಕಿಂದರಿ. ಮೂರು ಅಥವಾ ಐದು ಸೋರೆ ಬುರುಡೆಗಳನ್ನು ಒಂದು ಬಿದರಿನ ಕೊಳವೆಗೆ ಜೋಡಿಸಿ ನಾಲ್ಕೈದು ತಂತಿ ಬಿಗಿದು ಮಾಡಿದ ಒಂದು ವಾದ್ಯ. ಈ ವಾದ್ಯ ಹಿಡಿದು ಹಾಡುವ ಜನರಿಗೆ ಜೋಗಿ(ಯೋಗಿ) ಎಂಬ ಹೆಸರು ಬಂದಿದೆ. ಆದಿಚುಂಚನಗಿರಿಯ ಬೈರವೇಶ್ವರನ ಒಕ್ಕಲು, ದೀಕ್ಷಾ ಬದ್ದರಾದ ಜನ. ಕಿವಿಗಳಿಗೆ ಮದ್ರೆ ಹಾಕಿಸಿಕೊಂಡಿರುತ್ತಾರೆ. ಹಳದಿ ಅಂಗಿ ಹಾರೋಗಚ್ಚೆ, ಸೊಂಟಕ್ಕೆ ಮತ್ತು ತಲೆಗೆ ಕೆಂಪು ವಸ್ತ್ರ, ಕಾಲಿಗೆ ಗೆಜ್ಜೆ ಇವರ ಉಡುಪು. ಕಿನ್ನರಿ ಜೋಗಿಗಳು ಮುಕ್ಯವಾಗಿ ಹಾಡುವುದು ಅರ್ಜುನ ಜೋಗಿ ಹಾಡು. ಅರ್ಜುನ ಸುಭದ್ರೆಯನ್ನು ಕದಿಯಲು ಹೋದಾಗಜೋಗಿ ವೇಷ ಹಾಕಿಕೊಂಡು ಕಿನ್ನರಿ ಹಿಡಿದು ಭಾರಿಸುತ್ತಾ ಹೋದನೆಂದು ಒಂದು ಜಾನಪದಕಥೆಯುಂಟು. ಆದಿಚುಂಚನಗಿರಿಯ ಬೈರವ ಮಾಳವ್ವರಕತೆಯೂ ಇದೆ.

**ಹೆಳವರು;**

ಹೆಳವರು ಲೌಕಿಕ ವೃತ್ತಿಗಾಯಕರ ಗುಂಪಿಗೆ ಸೇರಿರುವವರು. ದಾಯಾದಿ ಸಂಬಂಧ ಹೇಳಿಕೊಂಡು ಊರೂರಿಗೆ ಹೋಗಿ ಮನೆಮನೆಗಳಲ್ಲಿ ವಂಶಾವಳಿಯ ಕಥೆಯನ್ನು ಹೇಳುವರು. ಇವರಲ್ಲಿ ಎತ್ತಿನ ಹೆಳವರು, ಗಂಟೆ ಹೆಳವರು, ಜಾಪೆ ಹೆಳವರು ಎಂಬ ಪಂಗಡಗಳಿವೆ. "ಹೆಳವ" ಎಂದರೆ ಕಾಲಿಲ್ಲದವ ಎಂದು ಅರ್ಥ. ಇವರು ವಂಶಾವಳಿ ಹೇಳುವವರಾದ್ದರಿಂದ ಹೇಳುವವರು ಆಗಿ ಕ್ರಮೇಣ ಹೆಳವರಾಗಿರಬಹುದು. ಹೆಳವರನ್ನು "ಒಂಟಿಗಾಲಿನ ಭೃಂಗಿ" ಎಂದುಕರೆಯುತ್ತಾರೆ. ಈ ವೃತ್ತಿ ವಂಶಪಾರಂಪರ್ಯವಾಗಿ ಬಂದಿದೆ. ಹಿಂದೆ ವಿಜಯನಗರ ಸುತ್ತಾಮುತ್ತಾ ಆಳುತ್ತಿದ್ದ ಅರಸು ಮಕ್ಕಳಾದ ಏಳು ಜನ ಅಣ್ಣತಮ್ಮಂದಿರಲ್ಲಿ ಕೊನೆಯವನು ಹೆಳವ. ಅವನಿಗೆ ಕೈಕಾಲು ಊನವಾಗಿದ್ದರಿಂದ ಅವನ ಅಣ್ಣಂದಿರು ಆಸ್ತಿಯಲ್ಲಿ ಸಮಭಾಗಕೊಡದೆ "ನೀನು ಒಂದೊಂದು ದಿನ ಒಬ್ಬೊಬ್ಬರ ಮನೆಯಲ್ಲಿ ಊಟ ಮಾಡಿಕೊಂಡು ಹೋಗು ಎಂದು ಹೇಳುತ್ತಾರೆ. ಅದರಂತೆ ಅವನು ಅಣ್ಣಂದಿರ ಮನೆಗಳಲ್ಲಿ ಊಟ ಮಾಡಿಕೊಂಡು ಜೀವನಸಾಗಿಸುತ್ತಾನೆ. ಅದೇ ವೃತ್ತಿಯಾಗುತ್ತದೆ. ಈಗಲೂ ಬಿಕ್ಷೆಗೆ ಹೋದರೆ "ನಮ್ಮ ಅಣ್ಣಂದಿರ ಮನೆಗೆ ಹೋಗುತ್ತೇನೆ" ಎಂಬ ನಂಬಿಕೆ ಅವರದು. ಬಿಕ್ಷೆ ನೀಡುವ ಮನೆಯವರೂ ಅಷ್ಟೆ ತಮ್ಮನೆಂಬ ಅಭಿಮಾನದಿಂದಲೇ ಅವನನ್ನು ಉಪಚರಿಸುತ್ತಾರೆ.

**ವಾಘಮುರುಳಿ;**

ಉತ್ತರಕರ್ನಾಟಕದ ಕಡೆಖಂಡೋಬ ದೇವರ ಹೆಸರಿನಲ್ಲಿ 'ಸೂಳೆ' ಬಿಡುವ ಹೆಣ್ಣು ಮಕ್ಕಳಿಗೆ "ವಾಘ ಮುರುಳಿ"ಎಂದು ಕರೆಯುತ್ತಾರೆ. ಇವರು ಹಳ್ಳಿಯಿಂದ ಹಳ್ಳಿಗೆ ಮನೆಯಿಂದ ಮನೆಗೆ ಅಲೆಯುತ್ತಾರೆ. ಇವರು ಸೀರೆ ಕುಪ್ಪಸ ಧರಿಸಿ ಹಣೆ ಮತ್ತು ಎರಡುಕಣ್ಣಿನ ಬದಿಯಲ್ಲಿ ಡಾಳವಾದ ಹಣಚಿ ಹೊಟ್ಟು ಇಟ್ಟುಕೊಂಡಿರುತ್ತಾರೆ. ಅರಿಶಿಣವನ್ನು ಹಣೆತುಂಬಾ ಬಳಿದು ಅದರ ಮೇಲೆ ಕುಂಕುಮದ ದಪ್ಪಗಿನ ಗೆರೆಯನ್ನು ಅಡ್ಡವಾಗಿ ಎಳೆದುಕೊಂಡಿರುತ್ತಾರೆ. ಒಂದು ಚಿಕ್ಕಗಂಟೆಯನ್ನು ವಸ್ತ್ರಕ್ಕೆಕಟ್ಟಿ ಅದನ್ನು ಬಲಗೈಯಲ್ಲಿ ಹಿಡಿದುಕೊಂಡು ಹಾಡಿಕೊಂಡು ಕುಣಿಯುತ್ತಾರೆ. ಇವರ ಹಾಡುಗಳೆಲ್ಲಾ ಅಶ್ಲೀಲವಾಗಿದ್ದು ಹೆಣ್ಣಿನ ಮೈಕಟ್ಟು, ಕುಚಗಳ ವರ್ಣನೆ ತುಂಬಿದ್ದು ಅದರ ರೂಪ ನಮ್ಮ ಕಣ್ಣಮುಂದೆ ನಿಲ್ಲುವಂತೆ ಮಾಡುತ್ತಾರೆ.

**ಸಾರುವಯ್ಯನವರು;**

ಉತ್ತರಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಸಾರುವಯ್ಯರು ಕಂಡುಬರುತ್ತಾರೆ. ಹೆಸರೇ ಸೂಚಿಸುವಂತೆ ಓಣಿ, ಬೀದಿಗಳಲ್ಲಿ ಹೇಳಿಕೆಗಳನ್ನು ಸಾರುವವರು ಸಾರುವಯ್ಯನವರು. ಇವರನ್ನು "ಕೊಡೆಕಲ್ಲಅಯ್ಯ" ಎಂದು ಕರೆಯುವುದುಂಟು. ಕೊಡೆಯನ್ನು ಹಿಡಿದುಕೊಂಡು ಬೀದಿಗಳಲ್ಲಿ ಕಾಲಜ್ಞಾನ ಹೇಳುವ ಕಾಯಕ ಇವರದು. ಇವರು 12ನೆಯ ಶತಮಾನದ ಶರಣರ ಕಾಲದಲ್ಲಿ ಬಂದ ಪರಂಪರೆಯವರೆಂದು ಹೇಳುತ್ತಾರೆ. ಶಿವರಾತ್ರಿಯಿಂದ ಶಿವರಾತ್ರಿಯವರೆಗೆ ಒಂದು ವರ್ಷಗಳ ಕಾಲ ಮಳೆ, ಬೆಳೆ, ರಾಜಕೀಯ ಮುಂತಾದ ಆಗುಹೋಗುಗಳ ಭವಿಷ್ಯವನ್ನು ಸ್ವಾರಸ್ಯವಾಗಿ ಸರಳವಾಗಿ ಹೇಳುತ್ತಾರೆ. ಗ್ರಾಮೀಣರಿಗೆ ಸಾರುವಯ್ಯನ ಮಾತೇ ವೇದವಾಕ್ಯ. ನಿಲುವಂಗು, ಕಾವಿ ರುಮಾಲು, ಕೊರಳಲ್ಲಿ ರುದ್ರಾಕ್ಷಿಮಾಲೆ, ಕೈಯಲ್ಲಿ ಕಂದೀಲು, ಹಣೆಗೆ ವಿಭೂತಿ, ಕೈಯಲ್ಲಿ ಕೊಡೆ ಇಷ್ಟು ಸಾರುವಯ್ಯನ ವೇಷಭೂಷಣ. ಇವರು ಕೈಯಲ್ಲಿ ಕಂಚಿನ ತಾಳವನ್ನು ಹಿಡಿಯುವುದು ಉಂಟು. ಸಾರುವಯ್ಯನವರು ಇತರ ವೃತ್ತಿಗಾಯಕರಂತೆ ಮನೆಬಾಗಿಲಿಗೆ ಹೋಗಿ ಕೈಚಾಚಿ ಬಿಕ್ಷೆ ಬೇಡುವುದಿಲ್ಲ ಜನಕೊಟ್ಟಿದ್ದನ್ನಷ್ಟೇ ಸ್ವೀಕರಿಸುತ್ತಾರೆ.

**ತೆಲುಗು ಜಂಗಮರು;**

ಕರ್ನಾಟಕ ವೃತ್ತಿಗಾಯಕರಲ್ಲಿ ತೆಲುಗು ಜಂಗಮರು ಮುಖ್ಯರು. ಇವರು ಕನ್ನಡದಲ್ಲಿ ಕಾವ್ಯಗಳನ್ನು ಹಾಡುತ್ತಾರೆ. ಇವರು ತುಮಕೂರು ಜಿಲ್ಲೆಯ ತಿಪಟೂರು ಭಾಗದಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ತಿಪಟೂರಿನ ಸಮೀಪದ ಚಿಣ್ಣೇನಹಳ್ಳಿ ಹಾಗೂ ಬೊಮ್ಮನಹಳ್ಳಿಗಳು ಇವರುಕಟ್ಟಿದ ಊರುಗಳು. ಮೈಸೂರು, ಬೆಂಗಳೂರು, ಚಾಮರಾಜನಗರ, ಕೊಳ್ಳೆಗಾಲದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಇವರನ್ನು ತೆಲುಗು ಬಣಜಿಗರೆಂದು ಕರೆಯುತ್ತಾರೆ. ಈ ಬಣಜಿಗರಲ್ಲಿ ನಾನಾ ರೀತಿಯ ಬಗೆಗಳಿವೆ. ಇವರು ಊರೂರು ತಿರುಗುವುದಿಲ್ಲ ಆದರೆ ಊರಿನ ಸುತ್ತಾಮುತ್ತಾ ಸುಮಾರು 20 ಕಿ.ಮೀ ಸುತ್ತಳತೆಯಲ್ಲಿ ಬಿಕ್ಷೆ ಮಾಡಿ ಜೀವನ ಮಾಡುತ್ತಾರೆ. ಹಬ್ಬ ಹರಿದಿನಗಳಲ್ಲಿ ವಾದ್ಯಗಳ ಜೊತೆಗೆ ಧ್ವನಿಗೂಡಿಸುತ್ತ ಕಥೆಯನ್ನು ಹೇಳುತ್ತಾರೆ. ಈ ರೀತಿ ಮಾಡುವುದರಿಂದ ದವಸ ಧಾನ್ಯಗಳನ್ನು ಪಡೆದುಕೊಳ್ಳುತ್ತಾರೆ. ಇವರ ಸಂಪ್ರದಾಯದಲ್ಲಿ ಬೆಳೆದು ಬಂದ ಕಥೆಗಳಲ್ಲಿ "ಕಾಡುಸಿದ್ದಮ್ಮನ ಕಥೆ' ಸಾಕಷ್ಟು ವಿಸ್ತಾರವಾದದ್ದು. "ಬಾಲನಾಗಮ್ಮನ ಕಥೆ" ಇದು ಕರ್ನಾಟಕ, ಆಂದ್ರಗಳೆರಡರಲ್ಲು ಪ್ರಸಿದ್ಧವಾಗಿದೆ. ವೃತ್ತಿಗಾಯಕರಲಿ ಲ್ಲಒಂದು ದೊಡ್ಡ ಕಾವ್ಯವಾಗಿದ್ದರೆ ಸಾಮಾನ್ಯ ಗಾಯಕರಲ್ಲಿ ಚಿಕ್ಕಕಾವ್ಯವಾಗಿದೆ. "ಪುಣ್ಯವಂತೆಗುಣವಂತೆ" ಒಂದು ಅತಿಮಾನುಷ ಕಥೆಯಾಗಿದೆ. ಇವರ ಕಾವ್ಯಗಳಲ್ಲಿ "ಮಾಗಡಿಕೆಂಪೇಗೌಡ" ಒಂದು ವಿಶಿಷ್ಟ ರೂಪದಕಾವ್ಯವಾಗಿ ಉಳಿದು ಬಂದಿದೆ.

**ಸಿದ್ದಿಕಿ ಸಿದ್ದಿ;**

ಕರ್ನಾಟಕದ ಒಂದು ಅಲೆಮಾರಿ ಜನಾಂಗ. ಇವರು ವೃತ್ತಿಗಾಯಕರು. ಉತ್ತರಕರ್ನಾಟಕದ ಅನೇಕ ಭಾಗಗಳಲ್ಲಿ ಕಂಡು ಬರುವ ಇವರು ಮುಸಲ್ಮಾನ ಪಂಗಡಕ್ಕೆ ಸೇರಿದವರು. ಮೊದಲಿಗೆ ಹಿಂದುಗಳಾಗಿದ್ದ ಇವರು ತಮ್ಮನ್ನು ಜಾತಿಗಾರರು, ಬೈರೂಪಗಾರರು ಎಂದು ಕರೆದುಕೊಳ್ಳುತ್ತಾರೆ. ಮೂಲತಃ ಇವರು ನಿಗ್ರೋ ಬುಡಕಟ್ಟಿನವರು. ಇವರ ಹೆಣ್ಣು ಮಕ್ಕಳು ಅರಿವೆಯ ಡೇರೆಗಳನ್ನು ತಯಾರಿಸುವ ಕಸುಬಿನಲ್ಲಿ ಸಿದ್ದಹಸ್ತರು. ಪುರುಷರು ಮಕ್ಕಳು ಸೋಗು ಹಾಕಿ ಕಾಣಿಕೆ ಪಡೆಯುವುದರ ಜೊತೆಗೆ ಎಮ್ಮೆಗಳನ್ನು ಸಾಕುವುದು ಸಿದ್ದಿಕಿ. ಸಿದ್ದಿಗಳು ಹಾಕುವ ಸಿದ್ದಿಯ ಸೋಗು ಮನರಂಜಕವಾದದು ಇವರು ಹಾಕುವ ಬಯಲು ಸೋಗುಗಳಲ್ಲಿ ಚಿಮ್ಮಣಿ ಸೋಗು, ಸಿದ್ದಿ ಸೋಗು, ಮುಖರಿ ಸೋಗು, ಬ್ರಾಡ್ರಾ ಸೋಗು, ಕುದರಿ ಸೋಗು ಮುಖ್ಯವಾದವು. ಇವರು ಬಯಲು ಆಟಗಳನ್ನು ಆಡುವುದರಲ್ಲಿ ನಿಸ್ಸೀಮರು.

**ಹಾಲಕ್ಕಿ ಒಕ್ಕಲಿಗರು;**

ಉತ್ತರಕನ್ನಡ ಜಿಲ್ಲೆಯ ಘಟ್ಟದ ಕೆಳಗಿನ ಹಳ್ಳಿಗಳು, ನದಿದಂಡೆ, ಗುಡ್ಡಗಳ ಇಳಿಜಾರಿನಲ್ಲಿ ಹಾಲಕ್ಕಿ ಒಕ್ಕಲಿಗರು ವಾಸಿಸುತ್ತಾರೆ. ಬಹುತೇಕ ವ್ಯವಸಾಯ ಮಾಡುತ್ತಾರೆ. ಪಶುಪಾಲನೆ, ಜೇನು ಸಂಗ್ರಹಣೆ, ದಿನಗೂಲಿ ಮಾಡುತ್ತಾರೆ. ಕೆಲವು ಸಸ್ಯ ಪ್ರಾಣಿಗಳ ಕುಲಕ್ಕೆ ಸೇರಿದವರು. ಇದನ್ನು 'ಬಳಿ' ಪದ್ದತಿ ಎನ್ನುತ್ತಾರೆ. ಬಹುತೇಕ ಮಾಂಸಹಾರಿಗಳು ಹಲವು ಮನೆಗಳ ಸಮೂಹವನ್ನು ಕೊಪ್ಪ ಎನ್ನುತ್ತಾರೆ. ಹಲವು ಕೊಪ್ಪಗಳು ಸೇರಿ 'ಸೀಮೆ'.ಉತ್ತರ ಕನ್ನಡಜಿಲ್ಲೆಯಲ್ಲಿ

ISBN – 978-93-5526-247-9

ಹಾಲಕ್ಕಿ ಒಕ್ಕಲಿಗರ ಇಂತಹ ಏಳು ಸೀಮೆಗಳಿವೆ. ಕೊಪ್ಪಗಳಲ್ಲಿ ಕೂಟ ಸಭೆಗಳನ್ನು ನಡೆಸುತ್ತಾರೆ. ಹಿರಿಯರಾಗಿ ಗೌಡ, ಬುದವಂತ, ಕೋಲಾಕಾರ ಎಂಬ ಅಧಿಕಾರಿಗಳಿರುತ್ತಾರೆ. ಸೀಮೆಗಳಲ್ಲಿನ ಕೂಟವನ್ನು ಸೀಮೆ ಕೂಟವೆಂದು ಕರೆಯುತ್ತಾರೆ. ಇಲ್ಲಿಯೂ ಗುರುಗೌಡ, ಅರಸು ಪ್ರದಾನ ಸೀಮೆ, ಬುದವಂತ ಸೀಮೆ, ಶಾನುಬೋಗ ಸೀಮೆ, ಕೋಲಾಕಾರ ಇರುತ್ತಾರೆ. ಇವರು ಗುರುಗೌಡನಿಂದ ನವಿಲು ಗರಿಯಕಟ್ಟನ್ನು ಪಡೆಯುವ ಮೂಲಕ ಅಧಿಕಾರ ಸ್ವೀಕರಿಸುತ್ತಾನೆ. ಮದುವೆ ಮಹಿಳೆಯರು ಅನೈತಿಕವಾಗಿ ಗರ್ಭವತಿಯಾದರೆ ಆಕೆಯನ್ನು ಬಹಿಷ್ಕರಿಸುವುದಕ್ಕೆ ಜಾತಿಕಟ್ಟೆಯೆಂದು ಕರೆಯುತ್ತಾರೆ. "ತೆರ" ಪದ್ದತಿ ಇದೆ. ಮದುವೆಯಾದ ಹೆಂಗಸರು ಬಂದಿ ಎಂಬ ಬೆಳ್ಳಿಯ ಆಭರಣವನ್ನು ಕೊರಳಲ್ಲಿ ಧರಿಸುತ್ತಾರೆ. ತಿರುಪತಿ ತಿಮ್ಮಪ್ಪನ ಭಕ್ತರು, ತುಳಸಿಯು ತಿಮ್ಮಪ್ಪನ ಹೆಂಡತಿ, ಸುಗ್ಗಿ ಕುಣಿತ ವಿಶೇಷ, ಅಲಾವಿ ಕುಣಿತ, ಹಗರಣ ಎಂಬ ರಾತ್ರಿ ಇಡೀ ಹಾಡುವ ವೇಷಗಾರಿಕೆ. ಗುಮಟೆ ಎಂಬ ವಾದ್ಯ ಮುಖ್ಯವಾದವುಗಳು. ನಿಸರ್ಗವನ್ನು ಪ್ರಾರ್ಥಿಸುವ 'ತಾರ್ಲೆ'ಪದದ ಸಾಹಿತ್ಯ ವಿಶೇಷವಾಗಿದೆ. ದನಗಳ ಕೂದಲುಗಳಿಗೆ ದೀಪಾವಳಿ ಹಬ್ಬದಂದು "ಚವಲು"ಎಂಬ ಅಲಂಕಾರ ಮಾಡುತ್ತಾರೆ. ಬೇಟೆಯಡುವುದು ಹವ್ಯಾಸ. ಮುಖ್ಯವಾಗಿ ಹುಲಿದೇವರ ಪೂಜೆ ಮಾಡುತ್ತಾರೆ. ಭೂತ ಪಿಶಾಚಿಗಳಲ್ಲಿ ನಂಬಿಕೆಯುಂಟು.

ಇಂದಿನ ದಿನಮಾನಗಳಲ್ಲಿ ವೃತ್ತಿಗಾಯಕರ ಗೀತೆಗಳನ್ನು ಕೇಳುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಕೇಳುವವರ ಸಂಖ್ಯೆ ಕಡಿಮೆಯಾದಂತೆ ಹಾಡುಗರೂ ಕೂಡ ಕಣ್ಮರೆಯಾಗಿದ್ದಾರೆ. ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ವೃತ್ತಿಗಾಯಕರು ತಮ್ಮ ಜೀವನೋಪಾಯಕ್ಕಾಗಿ ಬೇರೆ ಉದ್ಯೋಗಗಳನ್ನರಸಿ ನಗರ ಪ್ರದೇಶಗಳಿಗೆ ಬಂದು ನೆಲೆಸಿದ್ದಾರೆ. ನಗರ ಪ್ರದೇಶದ ಜೀವನಕ್ಕನುಗುಣವಾಗಿ ಬದುಕಬೇಕಾದ ಅನಿವಾರ್ಯತೆಗಾಗಿ ತಮಗೆ ಬಳುವಳಿಯಾಗಿ ಬಂದಂತಹ ಹಾಡುಗಾರಿಕೆಯ ಪ್ರತಿಭೆಯನ್ನು ಮರೆಮಾಚುತ್ತಿದ್ದಾರೆ. ಎಲ್ಲೋ ಕೆಲವರು ಮಾತ್ರ ಹವ್ಯಾಸವನ್ನು ಉಳಿಸಿಕೊಂಡಿದ್ದಾರೆರೆ.

**ಆಧಾರ ಗ್ರಂಥಗಳು**


1. ಕನ್ನಡ ಸಾಹಿತ್ಯ ಕೋಶ– ಡಾ. ರಾಜಪ್ಪ ದಳವಾಯಿ
2. ಹಳ್ಳಿಯ ಹಾಡುಗಳು – ಗೊರೂರು ರಾಮಸ್ವಾಮಿ ಅಯ್ಯಂಗಾರ್
3. ಜನಪದ ಸಾಹಿತ್ಯ ಸಮೀಕ್ಷೆ – ಜಿ.ಶಂ. ಪರಮಶಿವಯ್ಯ


***

ISBN – 978-93-5526-247-9

# 43.ಜನಪದ ಮಹಾಕಾವ್ಯಗಳ ರಾಚನಿಕ ಸ್ವರೂಪ

**ಶೋಭಾರಾಣಿ. ಎನ್**

ಜನಪದರ ಅಭಿವ್ಯಕ್ತಿಗೆ ಒದಗಿ ಬಂದ ಸಾಧನಗಳಲ್ಲಿ ಮಹಾಕಾವ್ಯ ಪ್ರಕಾರವೂ ಒಂದು. ಶಿಷ್ಟ ಪರಂಪರೆಯಲ್ಲಿ ಇರುವಂತೆ ಜನಪದ ಸಾಹಿತ್ಯ ಪರಂಪರೆಯಲ್ಲಿಯೂ ಸಹಾ ಮಹಾಕಾವ್ಯಗಳ ಅಸ್ತಿತ್ವವಿದೆ. ಮೊದಲಿಗೆ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿ, ಸಂಪಾದಿಸಿ ಅದರ ಬಗ್ಗೆ ಅಧ್ಯಯನಗಳನ್ನು ನಡೆಸಿದವರು ಫಿನ್ಲೆಂಡಿನ ಜಾನಪದ ವಿದ್ವಾಂಸರು. ಇಲ್ಲಿನ ಜನಪದ ಮಹಾಕಾವ್ಯ 'ಕಾಲೇವಾಲ'ದ ಸಂಗ್ರಹ ಕಾರ್ಯ ಜಗತ್ತಿನ ಇತರ ದೇಶಗಳ ಜನಪದ ಮಹಾಕಾವ್ಯಗಳ ಸಂಗ್ರಹ, ಸಂಪಾದನೆ ಹಾಗೂ ಅಧ್ಯಯನಗಳಿಗೆ ಪ್ರೇರಣೆಯನ್ನು ನೀಡಿತು. ಸಾಹಿತ್ಯಾಧ್ಯಯನ ಕ್ಷೇತ್ರಗಳಲ್ಲಿ ಬಹಳ ಕಾಲ ಶಿಷ್ಟ ಮಹಾಕಾವ್ಯಗಳನ್ನು ಮಾತ್ರ ಲಕ್ಷಿಸಿ, ಜನಪದ ಮಹಾಕಾವ್ಯಗಳನ್ನು ಕಡೆಗಣಿಸಲಾಗಿತ್ತು. ಆದರೆ ಒಂದು ಸಂಸ್ಕೃತಿಯ ಸಾರವನ್ನು ಅರ್ಥಮಾಡಿಕೊಳ್ಳಲು ಮತ್ತು ಆದ್ಯಂತವಾಗಿ ಗ್ರಹಿಸಲು ಅಲ್ಲಿನ ಶಿಷ್ಟ ಮಹಾಕಾವ್ಯಗಳಂತೆಯೇ ಜನಪದ ಮಹಾಕಾವ್ಯಗಳ ಅಧ್ಯಯನವೂ ಅಗತ್ಯ ಎಂಬ ಅರಿವು ಆಧುನಿಕ ಕಾಲ ಘಟ್ಟದಲ್ಲಿ ಜಾನಪದ ಅಧ್ಯಯನದಿಂದ ಮೂಡಿತು.

1980ರ ದಶಕಗಳಿಂದ ಜಾನಪದದ ಬೇರೆಲ್ಲ ಪ್ರಕಾರಕ್ಕಿಂತಲೂ ಹೆಚ್ಚಿನ ಅಧ್ಯಯನ ಜನಪದ ಮಹಾಕಾವ್ಯಗಳ ಬಗ್ಗೆ ನಡೆಯುತ್ತಿದೆ. ವಸಾಹತುಶಾಹಿಯಿಂದ ಬಿಡುಗಡೆ ಪಡೆದ ರಾಷ್ಟಗಳು ತಮ್ಮ ರಾಷ್ಟೀಯ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವ ಸಲುವಾಗಿ ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಿವೆ. ಭಾರತೀಯ ಸಮಾಜ ಬಹು ಸಂಸ್ಕೃತಿಗಳಿಂದ ಕೂಡಿದ್ದು, ಎಲ್ಲವೂ ತಮ್ಮ ತಮ್ಮ ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬರುವುದರಲ್ಲಿ ಆಸಕ್ತಿ ವಹಿಸುತ್ತವೆ. ಹಿಂದುಳಿದ ಸಮುದಾಯಗಳು ತಮ್ಮ ಸಾಂಸ್ಕೃತಿಕ ಕೀಳರಿಮೆಯನ್ನು ಮೀರುವ ಮಾರ್ಗವಾಗಿಯೂ ಜಾನಪದದ ನೆರವನ್ನು ಪಡೆಯುತ್ತಿವೆ.

ಜಾನಪದ ವಿದ್ವಾಂಸರು ಜನಪದ ಮಹಾಕಾವ್ಯಗಳ ಗಾತ್ರ, ಸ್ವರೂಪ ಮತ್ತು ಉದ್ದೇಶಗಳನ್ನು ಆಧರಿಸಿ ಮೂರು ಬಗೆಯ ಮಹಾಕಾವ್ಯಗಳ ಅಸ್ತಿತ್ವವನ್ನು ಗುರುತಿಸುತ್ತಾರೆ. ಮೊದಲನೆಯದು ಲಾವಣಿ ಚಕ್ರ. ಇವು ಗಾತ್ರದಲ್ಲಿ ಮಹಾಕಾವ್ಯಗಳಿಗಿಂತ ಚಿಕ್ಕದಾಗಿದ್ದು ಪೂರ್ಣ ಕಥೆಯನ್ನು ಹೊಂದಿರುವುದಿಲ್ಲ. ಇವು ಸ್ವಲ್ಪ ವಿಸ್ತೃತ ಎನಿಸುವ ಲಾವಣಿಗಳ ಆವರ್ತನ ಚಕ್ರಗಳಾಗಿವೆ. ಉದಾಹರಣೆಗೆ ಫಿನ್ಲೆಂಡಿನ ಜನಪದ ಮಹಾಕಾವ್ಯ ಕಲೇವಾಲ. ಇದು ಒಬ್ಬ ಹಾಡುಗಾರ ಹಾಡಿದ ಪೂರ್ಣ ಪ್ರಮಾಣದ ಮಹಾಕಾವ್ಯವಲ್ಲ. ಎಲಿಯಾಸ್ಲೊನ್ರಾಟ್ ಎಂಬ ವಿದ್ವಾಂಸ ಅನೇಕ ಹಾಡುಗಾರರಿಂದ ಸಂಗ್ರಹಿಸಿ, ಅವೆಲ್ಲವನ್ನೂ ವ್ಯವಸ್ಥಿತವಾಗಿ ಜೋಡಿಸಿ, ಮಹಾಕಾವ್ಯದ ಆಕಾರವನ್ನು ನೀಡಿದರು. ಇದು ಪಾಶ್ಚಾತ್ಯ ದೇಶಗಳಲ್ಲಿ ಜನಪದ ಮಹಾಕಾವ್ಯ ರೂಪುಗೊಂಡ ಬಗೆ.

ಮತ್ತೊಂದು ಬಗೆಯೆಂದರೆ, ಚಿಕ್ಕ ಪುಟ್ಟ ದೇಶಗಳು ರಾಜಕೀಯ, ಸಾಂಸ್ಕೃತಿಕ ದಬ್ಬಾಳಿಕೆಗಳಿಗೆ ಒಳಗಾಗಿ ಬಿಡುಗಡೆ ಪಡೆಯುವ ಪ್ರಯತ್ನದಲ್ಲಿರುವಾಗ ತಮ್ಮ ಸಾಂಸ್ಕೃತಿಕ ಅಸ್ಮಿತೆ ಮತ್ತು ಅನನ್ಯತೆಗಳನ್ನು ಎತ್ತಿ ಹಿಡಿಯುವಾಗ ಕೆಲವು ಮಹಾಕಾವ್ಯಗಳು ರೂಪುಗೊಂಡಿರುವುದುಂಟು. ವಸಾಹತು ಸಂದರ್ಭಗಳಲ್ಲಿ ಇಂತಹ ಮಹಾಕಾವ್ಯಗಳನ್ನು ರೂಪಿಸಿರುವುದನ್ನು ಗಮನಿಸಬಹುದು. ಇವುಗಳನ್ನುಆಲನ್ಡಂಡೆಸ್ 'ಖೋಟಾ ಜಾನಪದ' ಎಂಬ ಪರಿಕಲ್ಪನೆಯ ಮೂಲಕ ವಿವರಿಸಿದ್ದಾರೆ.

ಮೂರನೆಯ ಬಗೆಯ ಜನಪದ ಮಹಾಕಾವ್ಯಗಳು ಒಬ್ಬನೇ ಹಾಡುಗಾರ ಒಬ್ಬ ಸಾಂಸ್ಕೃತಿಕ ವೀರನಿಗೆ ಸಂಬಂಧಿಸಿದಂತೆ ಹಾಡುವ ಸಹಜ ರಚನೆಗಳು. ಇದರಲ್ಲಿ ಬರುವ ಎಲ್ಲಾ ಪ್ರಸಂಗಗಳನ್ನು ಹಾಡುಗಾರ ಒಂದೇ ನಿಟ್ಟಿನಲ್ಲಿ ಒಂದೇ ಸಂದರ್ಭದಲ್ಲಿ ಹಾಡದಿದ್ದರೂ ಅವನಿಗೆ ಅವುಗಳ ಪರಿಚಯವಿರುತ್ತದೆ. ಕನ್ನಡದಲ್ಲಿ ಸಂಗ್ರಹಗೊಂಡಿರುವ 'ಮಲೆಮಾದೇಶ್ವರಕಾವ್ಯ', 'ಮಂಟೇಸ್ವಾಮಿಕಾವ್ಯ', 'ಜುಂಜಪ್ಪನಕಾವ್ಯ' ಮೊದಲಾದವು, ತುಳುವಿನ 'ಸಿರಿಪಾಡ್ದನ', 'ಕೋಟಿಚೆನ್ನಯ' ಮೊದಲಾದವು, ಕೊಡಗಿನ 'ಬಾಯಿನಕಾವ್ಯ' ಈ ಬಗೆಯ ಸಹಜ ಜನಪದ ಮಹಾಕಾವ್ಯಗಳು.

ISBN – 978-93-5526-247-9 

ಜನಪದ ಮಹಾಕಾವ್ಯಗಳ ಸ್ವರೂಪವನ್ನು ಕುರಿತು ಚರ್ಚಿಸಿರುವವರ ಪೈಕಿ **ಆ್ಯಕ್ಸೆಲ್‌ಓಲ್ರಿಕ್**, ಬ್ರೆಂಡಾಬೆಕ್ಮತ್ತು ಕನ್ನಡದ ಸಂದರ್ಭದಲ್ಲಿ ಜೀಶಂಪ ರವರ ಗ್ರಹಿಕೆಗಳು ಪ್ರಮುಖವಾದವು. ಜನಪದ ಮಹಾಕಾವ್ಯಗಳ ರಾಚನಿಕ ಸ್ವರೂಪವನ್ನು ಅರಿಯುವ ನಿಟ್ಟಿನಲ್ಲಿ ನಾವು ಜೀಶಂಪರವರ ಗ್ರಹಿಕೆಗಳನ್ನು ವಿಶೇಷವಾಗಿ ಇಲ್ಲಿ ಗಮನಿಸಬಹುದು. ಜೀಶಂಪ ಅವರು ತಮ್ಮ **"**ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು**"** ಗ್ರಂಥದಲ್ಲಿ ಮಹಾಕಾವ್ಯ ಪರಂಪರೆಯ ಲಕ್ಷಣಗಳನ್ನು ವಿಸ್ತಾರವಾಗಿ ಪಟ್ಟಿ ಮಾಡುತ್ತಾರೆ. ಅವುಗಳನ್ನು ಕ್ರೋಢೀಕರಿಸಿ ಹೇಳುವುದಾದರೆ, ಬಹುತೇಕ ಸಮುದಾಯಗಳು ತಮ್ಮ ಅಧಿದೈವಕ್ಕೆ ಸಂಬಂಧಿಸಿದ ಜನಪದ ಕಾವ್ಯವೊಂದನ್ನು ಪರಂಪರಾಗತವಾಗಿ ಕಾಪಾಡಿಕೊಂಡು ಬಂದ, ಹಾಡಿಕೊಂಡು ಬಂದ ವಿಶಿಷ್ಟ ಗಾಯಕ ವರ್ಗವೊಂದು ಇರುತ್ತದೆ. ಕೊನೆಯ ಪಕ್ಷ ಒಂದು ರಾತ್ರಿಯಾದರೂ ಹಾಡುವಷ್ಟು ವ್ಯಾಪಕತೆ ಆ ಕಾವ್ಯಗಳಲ್ಲಿರುತ್ತದೆ. ಹತ್ತು ಹಲವು ರಾತ್ರಿ ಹಾಡುವಷ್ಟು ವಿಸ್ತಾರವಾಗಿಯೂ ಇರಬಹುದು. ಸಾಮಾನ್ಯವಾಗಿ ಅಧಿದೈವ ಕಥಾ ನಾಯಕನಾಗಿ ಅಥವಾ ಮುಖ್ಯ ಪಾತ್ರವಾಗಿ ಕಾಣಿಸಿಕೊಳ್ಳಬಹುದು. ಇಲ್ಲವೆ ಆ ದೈವದ ದಳಪತಿ, ಶಿಷ್ಯ, ಹಿಂಬಾಲಕ ಆಸ್ಥಾನದಲ್ಲಿ ಸ್ಥಾಪಿತವಾಗಬಹುದು. ಒಕ್ಕಲು ಮಾಡಿಕೊಳ್ಳುವ ಭಕ್ತರನ್ನು, ಶಿಷ್ಯರನ್ನು ಪಡೆಯುವ ಉದ್ದೇಶದಲ್ಲಿ ಕಥಾನಾಯಕ ತನ್ನ ಮಹಿಮೆಗಳನ್ನು ಮೆರೆಯಬಹುದು. ಇಲ್ಲವೆ ದುಷ್ಟ ಶಿಕ್ಷಣ ಶಿಷ್ಟರಕ್ಷಣೆಯ ಉದ್ದೇಶವನ್ನು ಹೊಂದಿರಬಹುದು. ಕಥಾ ನಾಯಕ ದೈವದ ವ್ಯಾಪ್ತಿಗೆ ಏರಿದ ಬ್ಬ ಮಹಾ ಪುರುಷನಾಗಿರಬಹುದು ಅಥವಾ ಅನಿರೀಕ್ಷಿತವಾಗಿ ಉದ್ಭವವಾದ ಶಕ್ತಿ ವಿಶೇಷವಾಗಿರಬಹುದು. ಕಥೆಗೆ ಸಂಬಂಧಿಸಿದ ಮತ್ತು ನಾಯಕನಿಗೆ ಸಂಬಂಧಿಸಿದ ಅವಶೇಷಗಳೂ ಹಾಗೂ ಅವುಗಳ ಐತಿಹ್ಯಗಳೂ ನಿರ್ದಿಷ್ಟ ಸ್ಥಳಗಳಲ್ಲಿ ದೊರೆಯುವಂತಿರಬೇಕು. ಹೀಗೆ ಜೀಶಂಪರವರು ಮಹಾಕಾವ್ಯದ ಲಕ್ಷಣಗಳನ್ನು ಗುರುತಿಸಿದ್ದಾರೆ.

ಮಹಾಕಾವ್ಯಗಳು ಉಳಿದೆಲ್ಲ ಜನಪದ ಸಾಹಿತ್ಯಗಳಂತೆಯೇ ಮೌಖಿಕ ಪರಂಪರೆಯಲ್ಲಿ ಸಾಗಿ ಬಂದ ರಚನೆಗಳು. ಜನಪದ ಮಹಾಕಾವ್ಯಗಳ ಮೂಲ ಕರ್ತೃಯಾರೆಂದು ತಿಳಿಸಿರುವುದಿಲ್ಲ. ಅಜ್ಞಾತ ಕರ್ತೃತ್ವ ಇವುಗಳ ಪ್ರಮುಖ ಲಕ್ಷಣ. ಇವು ಯಾವುದೋ ಕಾಲಘಟ್ಟದಲ್ಲಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹದಲ್ಲಿ ಹುಟ್ಟು ಪಡೆದು ನಂತರದಲ್ಲಿ ಪೀಳಿಗೆಯಿಂದ ಪೀಳಿಗೆಗೆ ಬೆಳೆಯುತ್ತಾ ಸಮೂಹ ಸೃಷ್ಟಿಯಾಗಿರುತ್ತವೆ. ಮೌಖಿಕ ಪರಂಪರೆಯಲ್ಲಿನ ಯಾವ ಅಭಿವ್ಯಕ್ತಿ ಪ್ರಕಾರವೂ ಏಕ ಕರ್ತೃಕವಲ್ಲ. ಮಹಾಕಾವ್ಯವೂ ಇದಕ್ಕೆ ಹೊರತಲ್ಲ. ಮಹಾಕಾವ್ಯದ ಭಾಗಗಳು ಸುದೀರ್ಘ ಕಾಲಾವಧಿಯಲ್ಲಿ ನಿರಂತರ ನಿರ್ಮಾಣ ಪ್ರಕ್ರಿಯೆಗೆ ಗುರಿಯಾಗಿರುತ್ತವೆ. ಇದರಿಂದಾಗಿ ಕೆಲವೊಮ್ಮೆ ಮಹಾಕಾವ್ಯ ರಚನೆಯ ಆಂತರ್ಯದಲ್ಲಿ ಕಾಲ–ಕ್ರಿಯೆ ಮತ್ತು ಸಂವಿಧಾನದ ರಚನೆಗಳನ್ನು ಕಾಣಬಹುದು. ಕೀಳರಿಮೆಯಿಂದ ನರಳಿದ್ದ ದಮನಿತ ದೇಶಗಳು ತಮ್ಮ ದೇಶದ ಜನರಲ್ಲಿ ದೇಶಾಭಿಮಾನಗಳನ್ನು ಉದ್ದೀಪಿಸುವ ದೃಷ್ಟಿಯಿಂದ ಉದ್ದೇಶ ಪೂರ್ವಕವಾಗಿ ಕೆಲವು ಜನಪದ ನೆಲೆಯಲ್ಲಿ ಸಾಂಗತ್ಯದ ಕೊರತೆ ಎದ್ದು ಕಾಣುವ ಸಂಭವ ಇರುತ್ತದೆ. ಆದರೆ ಇದು ಜಾನಪದದ ಎಲ್ಲ ಪ್ರಕಾರಗಳಲ್ಲೂ ಸರ್ವೇ ಸಾಮಾನ್ಯವಾಗಿ ಕಂಡು ಬರುವ ಅಂಶ.

ಜನಪದ ಮಹಾಕಾವ್ಯ ಪ್ರಧಾನವಾಗಿ ಹಾಡುವಂಥದಾದುದರಿಂದ ಅದರ ಪ್ರದರ್ಶನ ಶ್ರೋತೃಗಳ ಸಮ್ಮುಖದಲ್ಲೇ ಜರುಗುತ್ತದೆ. ಶ್ರೋತೃಗಳು ಬಹುತೇಕ ಶ್ರಮಿಕ ವರ್ಗದವರಾಗಿದ್ದು ಇವರಿಗೆ ರಾತ್ರಿಯು ಬಿಡುವಿನ ವೇಳೆಯಾಗಿರುತ್ತಿದ್ದುದರಿಂದ ಹಾಡುಗಾರಿಕೆ ಮತ್ತು ಪ್ರದರ್ಶನ ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲೇ ಜರುಗುತ್ತಿದ್ದುದು ರೂಢಿ. ಇದಕ್ಕೆ ಅಪವಾದವೆಂಬಂತೆ ಜಾತ್ರೆ, ಉತ್ಸವ ಮೊದಲಾದ ಸಂದರ್ಭಗಳಲ್ಲಿ ಮಾತ್ರ ಹಗಲು ಮತ್ತು ರಾತ್ರಿ ಎರಡೂ ಸಮಯಗಳಲ್ಲಿ ಪ್ರದರ್ಶನಗಳು ನಡೆಯುತ್ತಿದ್ದವು. ಪ್ರಾರಂಭದಲ್ಲಿ ಇವು ಚಿಕ್ಕಕಥೆ ಅಥವಾ ಸಣ್ಣ ಪ್ರಸಂಗಗಳ ರೂಪದಲ್ಲಿದ್ದು ತದ ನಂತರ ಹಾಡುಗಾರರಿಂದ ಬೆಳವಣಿಗೆ ಹೊಂದಿ ವಿಸ್ತಾರಗೊಂಡಿರುವ ಸಾಧ್ಯತೆಗಳೂ ಇವೆ. ಕಥೆಯ ಚೌಕಟ್ಟು, ಕಥಾ ಸಂವಿಧಾನ ಒಂದೇ ಇದ್ದರೂ ವರ್ಣನೆ ಮತ್ತು ವಿವರಗಳು ಕಾಲದಿಂದ ಕಾಲಕ್ಕೆ ಹಾಡುಗಾರರಿಂದ ಹಾಡುಗಾರರಿಗೆ ಬದಲಾಗುತ್ತಾ ಹೋಗುತ್ತವೆ.

ಸಾಮಾನ್ಯವಾಗಿ ಜಾತ್ರೆಗಳಲ್ಲಿ ನಡೆಯುವ ಆಚರಣೆಗಳಲ್ಲಿ ಜನಪದ ಮಹಾಕಾವ್ಯಗಳ ಕೆಲವು ಭಾಗಗಳನ್ನು ಹಾಡುಗಾರರು ಹಾಡುತ್ತಾರೆ, ಇಲ್ಲವೇ ನಾಟಕಗಳ ಮಾದರಿಗಳಲ್ಲಿ ಈ ಕಥೆಗಳನ್ನು ಪುನರಭಿನಯ ಮಾಡುತ್ತಾರೆ. ಪ್ರಾಚೀನ ಗ್ರೀಕ್ನಲ್ಲಿ ನಡೆಯುತ್ತಿದ್ದ ನಾಟಕ ಪ್ರದರ್ಶನಗಳನ್ನು ಇಲ್ಲಿ ನೆನೆಯಬಹುದು. ಗಾಯಕರು ಇಡೀ ಕಾವ್ಯವನ್ನು ಹಾಡುತ್ತಾರಾದರೂ ಅಂಥವರ ಸಂಖ್ಯೆ ಕಡಿಮೆ. ಬಹುತೇಕ ಹಾಡುಗಾರರು ವಿಸ್ತೃತ ಮಹಾಕಾವ್ಯದ ಕೆಲವು ಜನಪ್ರಿಯ ಬಿಡಿ ಭಾಗಗಳನ್ನು ಮಾತ್ರ ಹಾಡುತ್ತಾರೆ ಅಥವಾ ಇವರು ಹಾಡುವ ಭಾಗಗಳು ಹೆಚ್ಚು ಜನಪ್ರಿಯವಾಗಿರಲೂಬಹುದು,

**ISBN – 978-93-5526-247-9**

ಜೊತೆಗೆ ಎಲ್ಲ ಮಹಾಕಾವ್ಯಗಳನ್ನೂ ಎಲ್ಲಾ ಹಾಡುಗಾರರು ಹಾಡುವುದಿಲ್ಲ. ಆಯಾ ಕಾವ್ಯಗಳನ್ನು ಹಾಡುವ ವೃತ್ತಿ ಗಾಯಕರಿರುತ್ತಾರೆ.

ಉದಾಹರಣೆಗೆ: ಮಾದೇಶ್ವರ ಕಾವ್ಯವನ್ನು ದೇವರಗುಡ್ಡರು, ಮಂಟೇಸ್ವಾಮಿ ಕಾವ್ಯವನ್ನು ನೀಲಗಾರರು, ಮೈಲಾರಲಿಂಗ ಕಾವ್ಯವನ್ನು ಗೊರವರು, ಜುಂಜಪ್ಪನ ಕಾವ್ಯವನ್ನು ಗಣೆಯವರು, ಎಲ್ಲಮ್ಮನ ಕಾವ್ಯವನ್ನೂ ಚೌಡಿಕೆಯವರೂ, ಜನಪದ ಬಸವಪುರಾಣವನ್ನು ತಂಬೂರಿಯವರು ಮತ್ತು ಕರಪಾಲರು ಹಾಡುವುದು ಪರಂಪರಾಗತವಾಗಿ ಬಂದಿದೆ. ಜಗತ್ತಿನ ಬಹುತೇಕ ಸಮುದಾಯ/ನಾಗರೀಕತೆಗಳಲ್ಲಿ ಕಂಡು ಬರುವಂತೆ ಕರ್ನಾಟಕದ ಜನಪದ ಮಹಾಕಾವ್ಯಗಳೂ ಸಹಾ ನಿರ್ದಿಷ್ಟ ಸಮುದಾಯಗಳ ಧಾರ್ಮಿಕ ಪರಂಪರೆಗೆ ಸೇರಿದವುಗಳಾಗಿದ್ದು, ಈ ಪರಂಪರೆಗೆ ಸೇರಿದ ಗಾಯಕರು ತಮ್ಮ ದೈವದ ಆರಾಧನೆಯ ಕ್ರಮವಾಗಿ ಇವುಗಳನ್ನು ಹಾಡುತ್ತಾ ಪ್ರಸಾರ ಮಾಡುತ್ತಾರೆ. ಇಲ್ಲಿ ಹಾಡುವ ಕ್ರಿಯೆ ಮತ್ತು ಅಲ್ಲಿ ಬಳಸುವ ವಾದ್ಯಗಳು ಕೇವಲ ಸಂಗೀತ ಸಾಧನಗಳಾಗಿರದೆ, ಭಕ್ತಿ ಮತ್ತು ಆರಾಧನೆಗಳನ್ನೊಳಗೊಂಡ ಧಾರ್ಮಿಕ ಮಹತ್ವ ಪಡೆದಿವೆ.

ಜನಪದ ಮಹಾಕಾವ್ಯಗಳ ರಾಚನಿಕ ಸ್ವರೂಪ ವಿಶಿಷ್ಟವಾದುದು. ಜನಪದ ಮಹಾಕಾವ್ಯಗಳು ಸುವಿಸ್ತಾರ ರಚನೆಗಳಾದ್ದರಿಂದ ಅವುಗಳ ಬಿಡಿ ಕಥಾನಕಗಳನ್ನಷ್ಟೇ ಹಾಡಿ ಪ್ರದರ್ಶನ ನೀಡುವುದು ಕ್ರಮ. ಇಲ್ಲಿ ಪ್ರದರ್ಶನದ ಸಂದರ್ಭ, ಹಾಡುಗಾರಿಕೆ ನಡೆಸಿಕೊಡುವವರ ಸಾಮರ್ಥ್ಯ ಹಾಗೂ ಕೇಳುಗರ ಆಸಕ್ತಿ ಮುಂತಾದವು ಗಣನೆಗೆ ಬರುತ್ತವೆ. ಸಾಮಾನ್ಯವಾಗಿ ಜನಪದ ಮಹಾಕಾವ್ಯದ ಬಿಡಿ ಪ್ರಸಂಗಗಳು ಸ್ವತಂತ್ರ ಅಸ್ತಿತ್ವ ಪಡೆದು ತಮ್ಮಷ್ಟಕ್ಕೆ ತಾವು ಪರಿಪೂರ್ಣವಾಗಿರುತ್ತವೆ. ಮಲೆಯ ಮಾದೇಶ್ವರದ ಏಳು ಸಾಲುಗಳು,  ಮಂಟೇಸ್ವಾಮಿ ಕಾವ್ಯದ ನಾಲ್ಕು ಸಂಧಿಗಳು ಪ್ರತ್ಯೇಕ ಅಸ್ತಿತ್ವ ಹೊಂದಿದ ಸ್ವತಂತ್ರ ಪ್ರಸಂಗಗಳೇ ಆಗಿವೆ. ಹೀಗೆ ಪ್ರತ್ಯೇಕ ಅಸ್ತಿತ್ವ ಹೊಂದಿದ ಬಿಡಿ ಪ್ರಸಂಗಗಳಲ್ಲೂ ಏಕ ಸೂತ್ರತೆ ಎಳೆಯೂ ಒಂದಿದ್ದು ಆ ಪ್ರಸಂಗಗಳು ಒಂದೇ ಕಾವ್ಯದ ಭಾಗಗಳು ಎಂಬುದನ್ನು ಸಮರ್ಥಿಸುವಂತಿರುತ್ತವೆ.

ಜನಪದ ಮಹಾಕಾವ್ಯಗಳು ಗಾತ್ರದಲ್ಲಿ ದೊಡ್ಡದಾಗಿದ್ದು ವೀರರ ಸಾಹಸಗಳನ್ನೂ, ಧಾರ್ಮಿಕ ವ್ಯಕ್ತಿಗಳ ಸಾಧನೆಗಳನ್ನೂ ವಿವರಿಸುತ್ತವೆ. ಸಾಂಸ್ಕೃತಿಕ ವೀರನೊಬ್ಬನ ಜೀವನಗಾಥೆಯು ಸಮಕಾಲೀನ ಜನಪದರ ಹೃದಯವನ್ನು ಸೂರೆಗೊಂಡು ನಂತರದ ಪೀಳಿಗೆಗಳ ಪ್ರಜ್ಞೆಯಲ್ಲಿ ದಾಖಲಾಗಿ ತನ್ನ ಐತಿಹಾಸಿಕ ಚಹರೆಗಳನ್ನು ಕೊಂಚ ಮಟ್ಟಿಗೆ ಮಸುಕುಗೊಳಿಸಿಕೊಂಡು ಪುರಾಣವಾಗಿ ಮಾರ್ಪಡುತ್ತದೆ. ತದ ನಂತರ ಈ ಪುರಾಣದ ಕಥೆ ಕಥನಕಾವ್ಯದ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಹೀಗಾಗಿ ಜನಪದ ಮಹಾಕಾವ್ಯಗಳು ಇತಿಹಾಸ ಮತ್ತು ಪುರಾಣ–ಈ ಎರಡೂ ಪ್ರಕಾರಗಳ ಸ್ವರೂಪವನ್ನೂ ತನ್ನದಾಗಿಸಿಕೊಂಡಿದೆ. ಮೌಖಿಕ ಸಂಪ್ರದಾಯದಲ್ಲಿ ಸಾಗಿ ಬರುವ ಹಾದಿಯಲ್ಲಿ ಈ ಕಾವ್ಯಗಳು ಹಲವು ಬದಲಾವಣೆಗಳಿಗೆ ಪಕ್ಕಾಗಿ ಪುನರ್ನಿರ್ಮಾಣಗೊಳ್ಳುತ್ತಾ ಬರುತ್ತವೆ. ಹೀಗೆ ಬೆಳೆದ ಕಾವ್ಯ ಒಬ್ಬ ವ್ಯಕ್ತಿಯದಾಗಿ ಉಳಿಯದೆ ಸಮಷ್ಟಿಯ ಸ್ವತ್ತಾಗಿ ಪರಿಣಮಿಸುತ್ತದೆ. ಇವು ಆ ಸಮುದಾಯದ ಸಮಷ್ಟಿ ಪ್ರಜ್ಞೆಯ ಉನ್ನತಿಕೆಯನ್ನು ಪ್ರತಿನಿಧಿಸುವುದಲ್ಲದೆ ಅವರ ಸಂಸ್ಕೃತಿಯ ಪ್ರತೀಕವಾಗಿ ನಿಲ್ಲುತ್ತದೆ. ಹೀಗೆ ಜನಪದ ಮಹಾಕಾವ್ಯಗಳು ಏಕ ವ್ಯಕ್ತಿ ಕೃತವಾಗಿರದೆ ಸಮಷ್ಠಿ ರಚನೆಗಳಾಗಿದ್ದು, ನಿರಂತರ ಬದಲಾವಣೆಗಳಿಗೆ ಒಳಗಾಗುತ್ತಿರುವುದರಿಂದ ಇವುಗಳನ್ನು ವಿಕಾಸಶೀಲ ಮಹಾಕಾವ್ಯ ಎನ್ನಲಾಗಿದೆ.

ಜನಪದ ಮಹಾಕಾವ್ಯ ಬಹುಮುಖ್ಯವಾಗಿ ನಾಯಕ ಕೇಂದ್ರಿತವಾದ ಕಥಾ ವಸ್ತುವುಳ್ಳದ್ದು. ಸಾಮಾನ್ಯವಾಗಿ ಇಲ್ಲಿನ ನಾಯಕ–ನಾಯಕಿಯರು ಸಾಮಾಜಿಕವಾಗಿ ತಳವರ್ಗಕ್ಕೆ ಸೇರಿದವರಾಗಿರುತ್ತಾರೆ. ತನ್ನ ಘನತೆಯನ್ನು ಕಾಪಾಡಿಕೊಳ್ಳಲು ನಾಯಕನು ಯಾವುದೇ ರೀತಿಯ ಸವಾಲನ್ನು ಎದುರಿಸಲು ತಯಾರಿರುತ್ತಾನೆ. ಈ ಉದ್ದೇಶ ಸಾಧನೆಗಾಗಿ ಅವನು ಮಾನುಷ ಹಾಗೂ ಅತಿಮಾನುಷ ಶಕ್ತಿಗಳೊಡನೆ ಮುಖಾಮುಖಿಯಾಗಿ ಹೋರಾಡುತ್ತಾನೆ. ಈ ನಾಯಕ ಧೀರೋಧಾತ್ತನಾಗಿರುತ್ತಾನೆ. ಅವನಿಗೆ ಪ್ರತಿಯಾಗಿ ಒಬ್ಬ ಪ್ರತಿ ನಾಯಕನಿರುತ್ತಾನೆ. ಈ ಎರಡೂ ವಿರುದ್ಧ ಶಕ್ತಿಗಳ ನಡುವಣ ಸಂಘರ್ಷದಲ್ಲಿ ಒಳಿತಿಗೆ ಗೆಲುವು ಪ್ರಾಪ್ತವಾಗಿ, ಕೆಡುಕು ಸೋತು ನಾಶವಾಗುತ್ತವೆ. ದುಷ್ಟರಿಗೆ ಶಿಕ್ಷೆ ಮತ್ತು ಶಿಷ್ಟರಿಗೆ ರಕ್ಷೆ ಎಂಬ ತತ್ವ ಇಲ್ಲಿ ಮುಖ್ಯವಾಗಿದ್ದು, ನಾಯಕ–ನಾಯಕಿಯರು ಶಿಷ್ಟ ಶಕ್ತಿಯ ಪ್ರತೀಕವಾಗಿರುತ್ತಾರೆ. ಕಾವ್ಯದ ಉದ್ದಕ್ಕೂ ದೈವಿಕ ಹಾಗೂ ಮಾನುಷ ಶಕ್ತಿಗಳು ನಾಯಕನ ಜೀವನವನ್ನು ನಿಯಂತ್ರಿಸುತ್ತವೆ. ಇವರ ಹುಟ್ಟು, ಉಡುಗೆ–ತೊಡುಗೆ, ಜೀವನಶೈಲಿ ಎಲ್ಲವೂ ವಿಶಿಷ್ಟವಾಗಿರುತ್ತವೆ. ಅತಿಮಾನುಷತೆ ಈ ಪಾತ್ರಗಳ ಲಕ್ಷಣವಾಗಿದೆ. ಇತಿಹಾಸ, ಐತಿಹ್ಯ ಮತ್ತು ಪುರಾಣ – ಈ ಮೂರೂ ಅಂಶಗಳು ಸಮ್ಮಿಳಿತವಾಗಿ ಮೌಖಿಕ ಮಹಾಕಾವ್ಯಗಳು

ರೂಪುಗೊಂಡಿವೆ. ಅರೆಐತಿಹಾಸಿಕ ಹಾಗೂ ಅರೆಪೌರಾಣಿಕ ಸಂಗತಿಗಳನ್ನು ವಸ್ತುವಾಗಿ ಒಳಗೊಂಡಿರುವ ಮಹಾಕಾವ್ಯಗಳು ತನ್ಮೂಲಕ ಸಾಂಸ್ಕೃತಿಕ ಪುನಾರಚನೆಗೆ ಎಡೆ ಮಾಡಿಕೊಡುತ್ತವೆ. ಜನಪದ ಮಹಾಕಾವ್ಯಗಳಲ್ಲಿ ನಾಯಕ–ನಾಯಕಿಯರೇ ಮೊದಲಾದ ಮುಖ್ಯ ಪಾತ್ರಗಳಾಗಿರಲಿ ಅಥವಾ ಅಮುಖ್ಯ ಪಾತ್ರಗಳಾಗಿರಲಿ ಎಲ್ಲವೂ ಮಾನವೀಯತೆಗೆ ಒತ್ತು ಕೊಡುವುದು ಬಹುಮುಖ್ಯವಾಗಿ ಗಮನಿಸಬೇಕಾದ ಅಂಶ.

ಜನಪದ ಮಹಾಕಾವ್ಯಗಳು ತಮ್ಮ ಸ್ವರೂಪದಲ್ಲಿ ಸರಳತೆ ಮತ್ತು ವಿಸ್ತಾರತೆ ಎರಡೂ ಗುಣಗಳನ್ನು ಮೈಗೂಡಿಸಿಕೊಂಡಿವೆ. ಕ್ರಿಯಾ ವೈವಿಧ್ಯದ ದೃಷ್ಟಿಯಿಂದ ಇವು ಸರಳವಾದ ರಚನೆಗಳು. ಇಲ್ಲಿ ಕಥೆ ದೀರ್ಘವಾಗಿದ್ದರೂ ಕ್ರಿಯೆಗಳ ಸಂಖ್ಯೆ ತುಂಬ ಸೀಮಿತ. ಒಂದೇ ಬಗೆಯ ಕ್ರಿಯೆ ಮತ್ತು ಕ್ರಿಯಾ ಸರಣಿಗಳು ಮತ್ತೆ ಮತ್ತೆ ಪುನರಾವರ್ತಿತವಾಗುತ್ತವೆ. ಉಪ ಕಥೆಗಳಲ್ಲಿಯೂ ಇವೇ ವಿನ್ಯಾಸಗಳು ಕಾಣಿಸಿಕೊಳ್ಳುತ್ತವೆ. ಆರಂಭ ಮತ್ತು ಮುಕ್ತಾಯಗಳು ಸಂಕೀರ್ಣವೂ, ತೀವ್ರವೂ ಆಗಿರದೆ ಸಾವಕಾಶವಾದ ನಡಿಗೆಯಿಂದ ಸಾಗುತ್ತವೆ. ಆದರೆ ಆಶಯಗಳಲ್ಲಿ ಮಾತ್ರ ಜನಪದ ಮಹಾಕಾವ್ಯಗಳು ವೈವಿಧ್ಯಮಯ ವಿಸ್ತಾರ ಹೊಂದಿವೆ. ರಚನೆಯಲ್ಲಿನ ಸಹಜ ಸೌಂದರ್ಯ ಮತ್ತು ಮಾನವನ ಕಲ್ಪನಾ ಶಕ್ತಿಯ ವಿಲಾಸಗಳು ಅದರ ಸೀಮೆಯನ್ನು ಮುಟ್ಟಿ ನಿಲ್ಲುತ್ತವೆ. ಇವುಗಳ ಜೊತೆಯಲ್ಲಿ ನಿರ್ದಿಷ್ಟ ಸಮುದಾಯಗಳ ಪ್ರಾದೇಶಿಕ ಮತ್ತು ಚಾರಿತ್ರಿಕ ವೈಶಿಷ್ಟ್ಯತೆಗಳು, ಸಾಮಾಜಿಕ ಮೌಲ್ಯ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಚಹರೆಗಳನ್ನು ಜನಪದ ಮಹಾಕಾವ್ಯಗಳು ಗರ್ಭೀಕರಿಸಿಕೊಂಡಿರುತ್ತವೆ.

ಜನ ಜೀವನದ ವಾಸ್ತವ ಚಿತ್ರವನ್ನು ಕಟ್ಟಿ ಕೊಡುವ ಪ್ರಯತ್ನವಿರುವ ಕಾರಣದಿಂದಲೂ ಜನಪದ ಮಹಾಕಾವ್ಯಗಳು ನಮಗೆ ಮುಖ್ಯವಾಗುತ್ತವೆ. ಇಲ್ಲಿ ಹಾಡುಗಾರನು ನಿತ್ಯ ಜೀವನದ ವಿವರಗಳನ್ನು ಕಾವ್ಯದ ವರ್ಣನೆಯ ಜೊತೆಗೆ ಮೇಳೈಸಿ ಕೊಡುವುದರಿಂದ ಕಾವ್ಯ ಮತ್ತಷ್ಟು ಸಮಕಾಲೀನ ಮತ್ತು ಆಪ್ತವಾಗುತ್ತದೆ. ಹೀಗೆ ವ್ಯಾಪಕವಾದ ನೆಲೆಯುಳ್ಳ ಅನೇಕ ಪಾತ್ರ ಮತ್ತು ಘಟನೆಗಳಿಂದ ಕೂಡಿದ ದೀರ್ಘವಾದ ಕಥೆ ಹಾಗೂ ವಿಸ್ತಾರವಾದ ಹರವುಳ್ಳ ರಚನೆಗಳಾದ ಜನಪದ ಮಹಾಕಾವ್ಯಗಳು ಇಡೀ ಸಮೂಹದ ಸೃಷ್ಟಿಯಾಗಿ ಒಂದು ಇಡೀ ಸಮುದಾಯದ ಜೀವನ, ಸಂಸ್ಕೃತಿ ಹಾಗೂ ಇತಿಹಾಸಗಳ ಪ್ರತೀಕವಾಗಿ ಜನಪದರ ಬದುಕಿಗೆ ಮಾರ್ಗದರ್ಶಕವಾಗಿ ಆದರ್ಶವಾಗಿ ನಿಂತಿವೆ.

**ಪರಾಮರ್ಶನಗ್ರಂಥಗಳು:**


1. ಜಾನಪದ ಅಧ್ಯಯನ; ದೇ.ಜವರೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು; 2001.

2. ಜನಪದ ಸಾಹಿತ್ಯ ಪ್ರಕಾರಗಳು; ಸಂ. ಡಾ.ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್.ವೆಂಕಟೇಶ್; ಕರ್ನಾಟಕಜಾನಪದಮತ್ತುಯಕ್ಷಗಾನಅಕಾಡೆಮಿ, ಬೆಂಗಳೂರು; 2004.

3. ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು; ಡಾ. ವೀರಣ್ಣದಂಡೆ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು; 2007

4. ಕರ್ನಾಟಕ ಜನಪದ ಮಹಾಕಾವ್ಯಗಳು; ಸ. ಡಾ.ತೀ.ನಂ. ಶಂಕರನಾರಾಯಣ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; 1998.


***

ISBN – 978-93-5526-247-9

## 44.ಮಲೆಯ ಮಾದೇಶ್ವರ ಮಹಾಕಾವ್ಯದ ನಾಯಕಿಯಾಗಿ ಸತ್ಯಶರಣೆ ಸಂಕಮ್ಮ

ಡಾ.ಅಶ್ವಿನಿ ನಾಯಕ್

ಭಾರತೀಯ ಸಮಾಜದಲ್ಲಿ ಪಾವಿತ್ರ್ಯದ ಕಲ್ಪನೆಗೆ ಬಹುದೊಡ್ಡ ಸ್ಥಾನವಿದೆ. ಹೆಣ್ಣು ಪವಿತ್ರಳಾಗಿರಬೇಕೆಂಬ ಮಾತು ಎಲ್ಲಡೆಯೂ ವ್ಯಾಪಿಸಿದೆ. ಆದರೆ ಈ ಮಾತು ಪುರುಷರಿಗೆ ಹೊರತಾಗಿರುವುದು ವಿಪರ್ಯಾಸವಾಗಿದೆ. ಪುರುಷರ ಪಾವಿತ್ರ್ಯವನ್ನು ಯಾರೂ ಸೂಕ್ಷ್ಮವಾಗಿ ಪರಿಗಣಿಸುವುದಿಲ್ಲ. ಅದು ಅವರ ಸಹಜ ಸ್ವಭಾವವೆಂತಲೂ ಅಥವಾ ಕ್ಷಮೆಗೆ ಅರ್ಹವಾದ ಅಪರಾಧವೆಂತಲೂ ಭಾವಿಸುವುದೇ ಹೆಚ್ಚು. ಪುರುಷ ದೃಷ್ಟಿಕೋನವೇ ಹೆಣ್ಣಿಗೆ ಪಾವಿತ್ರ್ಯದ ಮೌಲ್ಯವನ್ನು ರೂಪಿಸಿದೆ ಹಾಗೂ ತನಗೆ ಅನುಕೂಲವಾಗುವಂತೆ ಮಾರ್ಪಡಿಸಿಕೊಂಡಿದೆ. ಪಾವಿತ್ರ್ಯತೆಯು  ನೈತಿಕವಾಗಿ ಇರಬೇಕಾದ ಸಂಗತಿಯೆನ್ನುವುದನ್ನು ಅಲ್ಲಗಳೆಯಲಾಗದಿದ್ದರೂ ಅದನ್ನು ಒಮ್ಮುಖವಾಗಿ ಹೇರುವ ಪ್ರಯತ್ನ ಪುರುಷ ಸಮಾಜ ಮಾಡುತ್ತಿದೆ. ಹೆಣ್ಣಿನ ಹಕ್ಕನ್ನು ಕಸಿದುಕೊಂಡು ಅವರ ವ್ಯಕ್ತಿತ್ವವನ್ನು ಕುಬ್ಜಗೊಳಿಸುವ ಕೆಲಸ ಮಾಡುತ್ತಿದೆ.

ಅನಾದಿ ಕಾಲದಿಂದಲೂ ಪುರುಷ ಕೇಂದ್ರಿತ ಸಮಾಜ ಸ್ತ್ರೀಯರ ವ್ಯಕ್ತಿತ್ವದ ಸ್ವತಂತ್ರ ಬೆಳವಣಿಗೆಯ ಬಗ್ಗೆ ಅಪನಂಬಿಕೆಯನ್ನು ತೋರಿಸುತ್ತಲೇ ಬಂದಿದೆ. ವಿಧೇಯತೆ, ಪತಿನಿಷ್ಠೆ, ಪರಾವಲಂಬನೆ ಮುಂತಾದ ಸೀಮಿತ ದೃಷ್ಟಿಕೋನ ಹೆಣ್ಣಿನ ವ್ಯಕ್ತಿತ್ವವನ್ನು ಸಾಮಾಜಿಕ ಪರಿಸರದಲ್ಲಿ ಬೆಳೆಯಲು ಅವಕಾಶ ಮಾಡಿಕೊಡುವುದಿಲ್ಲ. ಅವಳನ್ನು ಸಮಾನಳಾಗಿ ಕಾಣದ ಮನೋಭಾವವೇ ಇಂಥಹ ಮೌಲ್ಯಗಳನ್ನು ಸೃಷ್ಟಿಸಿರುವುದು. ಈ ಕಾರಣದಿಂದಾಗಿಯೇ ಹೆಣ್ಣು ಪುರುಷ ರಚಿತ ಹಿಂಜರಿಕೆ ಕಟ್ಟುಪಾಡುಗಳಿಗೆ ಬದ್ಧವಾಗಿ ನಡೆಯುವಂತಾಗಿದೆ. ಇಂಥಹ ವಿಚಾರಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಜನಪದವು ಸಮಷ್ಟಿಯ ಪ್ರತೀಕವಾಗಿದ್ದು ಜನಪದ ಮಹಿಳೆಯರ ಬದುಕಿನಲ್ಲಿ ವ್ಯಕ್ತಿ ಹಿತಕ್ಕಿಂತ ಸಮಷ್ಟಿ ಹಿತವು ಪ್ರಧಾನವಾಗಿದೆ. ಅಂತೆಯೇ ಜನಪದ ಸಾಹಿತ್ಯವು ವಿವಿಧ ಮಗ್ಗಲುಗಳಲ್ಲಿ ಸ್ತ್ರೀಯ ಬದುಕಿನ ಚಿತ್ರಣವನ್ನು ತೋರ್ಪಡಿಸಲು ಅನುವು ಮಾಡಿಕೊಟ್ಟಿದ್ದು ಮಹಿಳೆಯರು ಅನುಭವಿಸುವ ನೋವು, ಕ್ರೌರ್ಯ, ಹಿಂಸೆ ಹಾಗೂ ತನ್ನ ಅಸ್ಮಿತೆಯನ್ನು ಗುರುತಿಸಿಕೊಳ್ಳುವ ನೆಲೆಯಲ್ಲಿ ಪರೋಕ್ಷವಾಗಿ ಹೋರಾಟ ಮಾಡಿರುವುದನ್ನು ಜನಪದ ಮಹಾಕಾವ್ಯಗಳು ತೆರೆದಿಡುತ್ತವೆ. ಸ್ಥಾಪಿತ ವ್ಯವಸ್ಥೆಯನ್ನು ಪ್ರಶ್ನಿಸಲಾಗದೆ ಅದಕ್ಕೆ ತಕ್ಕಂತೆ ಹೊಂದಿಕೊಂಡು ನಡೆಯುವ ಸ್ತ್ರೀ ಸಮುದಾಯ ಒಂದೆಡೆಯಾದರೆ ಪುರುಷ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ತೋರುವ ಹೆಣ್ಣುಮಕ್ಕಳು ಸಮಾಜದಲ್ಲಿ ಕಾಣಸಿಗುತ್ತಾರೆ. ಅಂತಹ ಒಂದು ಪ್ರಸಂಗವೇ 'ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ'ದಲ್ಲಿ ಬರುವ ಸ್ತ್ರೀ ಪಾತ್ರ ಸಂಕಮ್ಮಳದ್ದು. ಗಂಡಿನ ಅಹಮಿಕೆಗೆ ಹೆಣ್ಣಿನ ಪ್ರತಿಭಟನೆಯ ಸ್ವರೂಪ ಇಲ್ಲಿ ಕಾಣಸಿಗುತ್ತದೆ. ಸಾಮಾನ್ಯವಾಗಿ ಜನಪದ ಸ್ತ್ರೀಯರು ಸರಳ ಸ್ವಭಾವದ ಪತಿಭಕ್ತೆಯರಾಗಿರುವುದೇ ಹೆಚ್ಚು. ಆದರೆ ಇಲ್ಲಿ ಪತಿಯ ವಿರುದ್ಧ ಪ್ರತಿಭಟಿಸುವ ಹೆಣ್ಣಿನ ಚಿತ್ರಣವಿದೆ. ಹೆಂಡತಿಯ ಭಾಷೆಗಾಗಿ ಆಗ್ರಹಿಸುವ ಗಂಡ ಹಾಗೂ ಅವನು ಕೊಡುವ ಯಾವುದೇ ರೀತಿಯ ಚಿತ್ರಹಿಂಸೆಗೂ ತಗ್ಗದೆ ತನ್ನ ಶೀಲ ಹಾಗೂ ವ್ಯಕ್ತಿತ್ವದ ಬಗ್ಗೆ ಪ್ರಶ್ನೆ ಬಂದಾಗ ತನ್ನ ನಿರ್ಧಾರಕ್ಕೆ ಬದ್ಧಳಾಗಿ ವಿನಾಶಕಾರಿ ಸವಾಲುಗಳನ್ನು ಎದುರಿಸಿ ನಿಲ್ಲುವ ಸ್ವಾಭಿಮಾನವನ್ನು ಪ್ರಕಟಿಸುವ ಒಬ್ಬ ಸ್ತ್ರೀಯಾಗಿ ನಾಯಕಿಯಾಗಿ ಸಂಕಮ್ಮ ಕಂಡುಬರುತ್ತಾಳೆ.

ಕಾಡು ಕುರುಬ ಸೋಲಿಗ ನೀಲೇಗೌಡನಿಗೆ ಇದ್ದ ಏಳು ಜನ ಗಂಡುಮಕ್ಕಳಲ್ಲಿ ಆರು ಮಕ್ಕಳಿಗೆ ವಿವಾಹವಾಗಿದೆ. ಕಿರಿ ಮಗನಾದ ನೀಲೇಗೌಡ(ಅಪ್ಪ ಹಾಗೂ ಮಗನ ಹೆಸರು ಒಂದೇ) ಚೆಲುವೆಯಾದ ಹೆಣ್ಣನ್ನು ಬಯಸುತ್ತಿದ್ದ. ನೀಲೇಗೌಡ ಹೆತ್ತವರು ನೋಡಿದ ಹೆಣ್ಣುಗಳಲ್ಲಿ ಯಾರನ್ನೂ ಒಪ್ಪದೇ ತಾನೇ ಹೆಣ್ಣು ಹುಡುಕಲು ಹೊರಟನು. ದುಂಡೇಗೌಡನ ಮಗಳು ಸಂಕಮ್ಮಳನ್ನು ಕಂಡು ಕುಲದ ಪದ್ಧತಿಯಂತೆ ಮದುವೆಯಾದನು. ಹಲವಾರು ವರ್ಷಗಳಾದರೂ ಸಂಕಮ್ಮಳಿಗೆ ಮಕ್ಕಳಾಗದ್ದರಿಂದ ಮನೆಯಲ್ಲಿ ಓರಗಿತ್ತಿಯರು ಬಂಜೆ ಎಂದು ಹಂಗಿಸುತ್ತಿದ್ದರು. 'ಹುಟ್ಟು ಬಂಜೆ ದಟ್ಟ ಧರಣಿ ಇವುಳ್ ತಿರುಗಾಡುವಂತ ಸ್ಥಳದಲ್ಲಿ ನಾವು ನಮ್ ಮಕ್ಳು ನಮ್ ಗಂಡ್ದೀರು ತಿರುಗಾಡುದ್ರೆ ಬಂಜೆಯರಾಗ್ತಾರೆ' ಎಂದು ಜರೆಯುತ್ತಾರೆ. ದುಃಖತಪ್ತ ಮಡದಿಯಿಂದ ವಿಷಯ ತಿಳಿದ ನೀಲೇಗೌಡನು ಮನೆಯಿಂದ ಹೊರಬಂದು ಪ್ರತ್ಯೇಕವಾದ ಮನೆಯನ್ನು ಮಾಡಿ ಸತಿಪತಿಯರಿಬ್ಬರು ವಾಸಿಸತೊಡಗುತ್ತಾರೆ. ಸೋಲಿಗರ ಪದ್ಧತಿಯಲ್ಲಿ  ಏಳೂರ ಗಡಿಕಾರರು ಒಂದೆಡೆ ಸೇರಿ  ಹೆಜ್ಜೇನು ಮಲೆಗೆ ಹೋಗಬೇಕೆಂದು ಮನೆಗೊಬ್ಬರು ಬರಬೇಕೆಂದು ತೀರ್ಮಾನಿಸುತ್ತಾರೆ. ಅದರಂತೆ ಪ್ರತ್ಯೇಕ ಮನೆ ಮಾಡಿದ್ದರಿಂದ ನೀಲೇಗೌಡ ಹೊರಡಬೇಕಾಗುತ್ತದೆ. ಹೆಜ್ಜೇನು ಬೇಟೆಗೆ ಹೋಗುವುದೆಂದರೆ ಸರಿಸುಮಾರು ವರ್ಷಾವಧಿಯ ಸುದೀರ್ಘವಾದ ಪಯಣ. ಹಾಗೆ

ISBN – 978-93-5526-247-9

ಹೊರಡಬೇಕಾದ ಸಂದರ್ಭ ಬಂದಾಗ ನೀಲೇಗೌಡ ಮಡದಿ ಒಬ್ಬಳನ್ನೇ ಬಿಟ್ಟು ಹೋಗಲಾರದೆ ಕುಲದವರ ಒಟ್ಟಿಗೆ ಹೋಗದೆಯೂ ಇರಲಾರದೆ ಮಡದಿಯನ್ನು ಪ್ರಶ್ನಿಸುತ್ತಾನೆ. ಆಕೆಯು

'ವನಾ ಮೀರಿದ ಪಕ್ಷಿ, ಕುಲಾ ಮೀರಿದ ಮನಸು ಎರಡೂ ಒಂದಲ್ವ ಸ್ವಾಮಿ. ನನ್ನ ನೀವು ಬುಟ್ಟರು ನಿಮ್ಮ ಕುಲವನ್ನು ನೀವು ಬುಡಬ್ಯಾಡಿ' ಎಂದು ಉತ್ತರಿಸುತ್ತಾಳೆ. ಆ ಮಾತಿನಿಂದ ಕೋಪಗೊಂಡ ನೀಲೇಗೌಡ 'ಎಲಾಎಲಾ ಕೆಟ್ಟ ಆದರ್‍ಗಿತ್ತಿ ಮಗ್ಳೆ ಒಂಬತ್ತು ತಿಂಗ್ಳುವರ್‍ಗೂ ಹೆಂಗೆ ನಂಬಲಿ ಹೇಂಗೆ ನಚ್ಚಲಿ' ಎಂದು ಪತ್ನಿಯ ಶೀಲದ ಬಗ್ಗೆ ಸಂಶಯವನ್ನು ತಾಳುತ್ತಾನೆ.

'ನನಗೆ ಬಲಗೈ ಭಾಷೆ ಮಾಡ್ಕೊಣ್ಣೆ
ನನ್ನ ಹೆಜ್ಜೇನು ಮಲೆಗೆ ಕಳುಗೆಣ್ಣೆ'

ಎಂದು ಭಾಷೆಯನ್ನು ಕೇಳುತ್ತಾನೆ. ಆದರೆ ಅವಳು ಒಪ್ಪುವುದಿಲ್ಲ. ಬಂಜೆ ಎಂಬ ಪದಕ್ಕಿಂತಲೂ ಶೀಲವನ್ನು ಶಂಕಿಸುವ ಮಾತು ಅವಳಿಗೆ ಹೆಚ್ಚು ಆಘಾತವನ್ನುಂಟುಮಾಡುತ್ತದೆ. ಯಾವುದೇ ದೋಷವಿಲ್ಲದ ತನ್ನನ್ನು ಅವಮಾನಿಸುವ ಗಂಡನಿಗೆ ಭಾಷೆಕೊಡಲು ನಿರಾಕರಿಸುತ್ತಾಳೆ. ಅನುಮಾನ ಸರಿಯಲ್ಲ ಎನ್ನುತ್ತಾ ವಾದದಲ್ಲಿ ಗಂಡನನ್ನು ಕಟ್ಟಿಹಾಕುತ್ತಾಳೆ. 'ನಾನೆಂದಿಗೂ ಬಲಗೈ ಭಾಷೆ ಕೊಡುವಂಥ ಮಗಳಲ್ಲ ಹೋಗೋ ಯಜಮಾನ' ಎಂದು ಏರುದನಿಯಲ್ಲಿ ಬಂಡಾಯದ ಮಾತನಾಡುತ್ತಾಳೆ.

'ಕಳನಿಲ್ಲ ಕಳವರಿಗೆ ಒಳಗಾಗನಿಲ್ಲ
ಪರಪುರುಷರ ಕಣ್ಣೆತ್ತು ನೋಡ್ನಿಲ್ಲ
ಯಜಮಾನರೆ ನಾನು ಭಾಷೆ ಕೊಡಬೇಕಾ ನಿಮಗೆ
ಅಯ್ಯಾ ನನ್ನಲ್ಲಿ ತಪ್ಪ ತೋರಯ್ಯ ನೀನು ಆಮೇಲೆ ಭಾಷೆ ಕೇಳಯ್ಯ'

ಎಂದು ನುಡಿಯುತ್ತಾಳೆ. ಇಲ್ಲಿ ಸತಿಪತಿಯರ ನಡುವೆ ನಂಬಿಕೆಯೇ ಪ್ರಮಾಣ ಎಂಬುದು ವಿದಿತವಾಗುತ್ತದೆ. ಇದರಿಂದ ಕೋಪಗೊಂಡ ನೀಲಯ್ಯನು ನಿನ್ನನ್ನು ಒಂಟಿಯಾಗಿ ಬಿಟ್ಟು ಹೋಗನಾರೆ ಏಕೆಂದರೆ ನೀನು ಒಬ್ಬಳೆ ಇರುವಾಗ ಪರಪುರುಷರು ನಿನ್ನ ಮೇಲೆ ಕಣ್ಣಿಡುತ್ತಾರೆ. ಅದಕ್ಕಾಗಿ ಬಲಗೈ ಭಾಷೆಯನ್ನು ಕೊಡು ಎಂದು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಸಂಕಮ್ಮಳು ದಿಟ್ಟತನದಿಂದ ಹೀಗೆ ಉತ್ತರಿಸುತ್ತಾಳೆ.

'ಕೇಳಿ ಯಜಮಾನರೆ
ಭೂಮಿತಾಯಿ ಆಕಾಸವೇಣಿ ಸಾಕ್ಷಿಯಾಗಿ
ಪತಿಗೆ ಭಾಷೆ ಕೊಡುವುದಿಲ್ಲ
ಭಾಷೆ ಕೊಟ್ಟ ಮೇಲೆ ನನ್ನ ಧರ್ಮ ಉಳಿಯೋದಿಲ್ಲ'

ಎಂದು ಹೇಳುತ್ತಾಳೆ. ಹೆಂಡತಿಯ ಪಾತಿವ್ರತ್ಯದ ಬಗೆಗೆ ಸಂಶಯ ಪಡುವ ನೀಲೇಗೌಡನಿಗೆ ಹೆಂಡತಿ ನೀಡುವ ಭಾಷೆಯ ಮೇಲೆ ಅಪಾರ ನಂಬಿಕೆಯಿದೆ. ಆಕೆಯು ಭಾಷೆಯನ್ನು ನೀಡಿಯೂ ತಾನಿಲ್ಲದಾಗ ಪರಪುರುಷರಿಗೆ ಒಲಿದರೆ? ಎಂಬ ಸಂಶಯವಿಲ್ಲ. ಮಾತಿಗೆ ತಪ್ಪಿ ನಡೆಯಳು ಎಂಬ ನಂಬಿಕೆಯಿದೆ. ಆದರೆ ನೀಲೇಗೌಡನ ವರ್ತನೆಯಿಂದ ರೋಸಿಹೋದ ಸಂಕಮ್ಮ ತೀವ್ರವಾಗಿ ಪ್ರತಿಭಟಿಸುತ್ತಾಳೆ. 'ನೀನು ಕೊಟ್ಟಿರುವ ತೆರ ಹಿಂತೆಗೆದುಕೊಂಡು ನನ್ನನ್ನೇ ಬಿಟ್ಟುಬುಡು ಎನ್ನುತ್ತಾಳೆ. ಆ ಮೂಲಕ ತನ್ನ ಸ್ವಾಭಿಮಾನವನ್ನು ಮೆರೆಯುತ್ತಾಳೆ. ಈ ಹಿಂದೆ ನೀಲೇಗೌಡನು ಯಾರೂ ಇರದ ಸ್ಥಳದಲ್ಲಿ ಬದುಕೋಣ ಎಂದು ಸಂಕಮ್ಮಳನ್ನು ಕೇಳಿದಾಗ

'ಒಬ್ಬಾಳೆ ಹುಟ್ಟಿ ಬೆಳೆದವಳು
ತಾಯಿ ತಂದೆ ಉಳ್ಳವಳು
ಬಂಧು ಬಳಗ ಉಳ್ಳವಳು'

ISBN – 978-93-5526-247-9

ಎಂದು ಹೇಳುತ್ತಾ ನೀನು ಕರೆದೆ ಎಂದು ಎಲ್ಲರನ್ನು ಬಿಟ್ಟು ನಿನ್ನ ಹಿಂದೆ ಬರಲು ಸಾಧ್ಯವಿಲ್ಲ ಎಂಬುದಾಗಿ ಗಂಡನ ಮಾತನ್ನು ತಿರಸ್ಕರಿಸುತ್ತಾಳೆ. ಅನ್ಯಾಯ ಹಿಂಸೆಯಿಂದ ರೋಸಿಹೋದ ಆಕೆ ಗಂಡನ ವಿರುದ್ಧ ಪ್ರತಿಭಟಿಸುವುದನ್ನು ಕಂಡರೆ ಅಂದು ಸ್ತ್ರೀಯರಲ್ಲಿ ವ್ಯವಸ್ಥೆಯ ವಿರುದ್ಧ ಮೌನಮುರಿಯುವ ಮನೋಭಾವನೆಗಳು ರೂಪುಗೊಳ್ಳುತ್ತಿತ್ತು ಎಂಬುದನ್ನು ಗುರುತಿಸಬಹುದಾಗಿದೆ. ಮದುವೆಯ ಬಾಂಧವ್ಯವು ಕೂಡಿ ಬಾಳುವ ಸಂಕೇತವೇ ಹೊರತು ಬಂಧನವಲ್ಲ ಎಂಬುದು ಸಂಕಮ್ಮಳ ಮಾತಿನಲ್ಲಿ ತಿಳಿಯುತ್ತದೆ.

ಪತ್ನಿಯಾದವಳು ತನ್ನ ಇಷ್ಟದಂತೆ ಮಾತು ಕೇಳಬೇಕು. ತಪ್ಪು ಸರಿ ಪ್ರಶ್ನಿಸದೆ ತನ್ನ ಅಣತಿಯನ್ನು ಮೂಕವಾಗಿ ಪಾಲಿಸಬೇಕು. ಪ್ರಶ್ನಿಸಿದರೆ ಅಥವಾ ಪ್ರತಿಭಟಿಸಿದರೆ ಆಕೆಗೆ ನೀಡುವ ಶಿಕ್ಷೆ ಮನಕಲುಕುವಂಥದ್ದು. ಪತ್ನಿಯ ವಿರೋಧದ ಮಾತಿನಿಂದ ಕುಪಿತಗೊಂಡ ನೀಲೇಗೌಡ ವಿವೇಕವನ್ನು ಮರೆತು ಅತಿರೇಕದ ಕ್ರೌರ್ಯ ಮೆರೆಯುತ್ತಾನೆ. ಸಂಕಮ್ಮಳನ್ನು ನಡುಗಾಡಿಗೆ ಧರಧರನೆ ಎಳೆದೊಯ್ದು

‘ರುದ್ದರಗ್ವಾಪವನ್ನು ತಾಳ್ಕೊಂಡು ನೊರಾನೊರ್ನೆ ಹಲ್ಕಡೀತಾ
ಬೆಳ್ಳಿ ಬೆತ್ತ ತೆಗುದಾನು
ಬಲಗೈಲಾದ್ರೆ ಹಿಡಿದಾನು
ಕಾಣಬಾರದ ಕೋವಿನೊಳಗೆ
ಧಬ್ಬಾ ಧುಬ್ನೆ ಎಳುದವುನೆ’

ಹೀಗೆ ನಾನಾ ರೀತಿಯಲ್ಲಿ ಚಿತ್ರವಿಚಿತ್ರ ಹಿಂಸೆಗಳನ್ನು ನೀಡುತ್ತಾನೆ. ಈ ರೀತಿಯ ಹಿಂಸೆಗಳನ್ನು ಬೇರಾವ ಕಾವ್ಯದಲ್ಲೂ ಕಾಣಸಿಗದು. ಒಂದಕ್ಕಿಂತ ಇನ್ನೊಂದು ಕಠೋರ ಪರೀಕ್ಷೆಗಳನ್ನು ಒಡ್ಡುತ್ತಾನೆ. ಆ ಪರೀಕ್ಷೆಯ ಕಲ್ಪನೆಯೂ ಅತೀ ಭೀಕರವಾಗಿದೆ.

‘ಕಬ್ಬಳಿ ಹಂಬ ತಂದುವುನೆ
ಕೈ ಕಾಲನೆಲ್ಲ ಬಿಗುದವುನೆ
ಕಾರೆ ಮುಳ್ಳ ತಂದುವುನೆ
ಕಣ್ಣನ್ನಾದ್ರೆ ಹೊಲುದವುನೆ
ಕಿವಿ ಕರ್ಣನಾದರೆ ಚುಚ್ಚವುನೆ’

ಇವಳನ್ನು ಹೀಗೆಯೇ ಬಿಟ್ಟು ಹೋದರೆ ಯಾರಾದರೂ ಅಪಹರಿಸಿಕೊಂಡು ಹೋಗಬಹುದೆಂದು ಮಾಟ ವಿದ್ಯೆಯಿಂದ ಬಂಧಿಸಿಟ್ಟು ತಾನು ಬರುವವರೆಗೆ ಅಲುಗಾಡದ ಹಾಗೆ ಮಲಗಿರುವಂತೆ ಅವಳಿಗೆ ದಿಗ್ಬಂಧನ ಹಾಕಿ ತನ್ನ ಪೈಶಾಚಿಕ ಕೃತ್ಯ ಮೆರೆಯುತ್ತಾನೆ. ಈ ಚಿತ್ರಹಿಂಸೆಗೆ ಮುಖ್ಯ ಕಾರಣವಾಗಿದ್ದು ಸಂಕಮ್ಮಳ ಚೆಲುವು. ತಾನಿರದ ಸಂದರ್ಭದಲ್ಲಿ ಪರಪುರುಷರಿಗೆ ಒಲಿಯಬಹುದೆಂಬ ಭ್ರಮೆಗೆ ಒಳಗಾಗಿದ್ದಾನೆ. ಅದು ಅಂದಿನ ಕಾಲಘಟ್ಟದ ಮಹಿಳೆಯರ ಶೋಚನೀಯ ಸ್ಥಿತಿ ಎನಿಸಿದರೂ ಇಂದಿಗೂ ಸಹ ಹೆಣ್ಣಿನ ಪರಿಸ್ಥಿತಿಯು ಇದಕ್ಕೆ ಹೊರತಾಗಿಲ್ಲ ಅನಿಸುತ್ತದೆ. ಕೆಲವು ದುಷ್ಟಪುರುಷರ ದುಷ್ಕೃತ್ಯಗಳು ಹೆಣ್ಣನ್ನು ಸಮಾಜದಲ್ಲಿ ನೆಮ್ಮದಿಯಿಂದ ಬದುಕದಂತೆ ಮಾಡಿಬಿಟ್ಟಿವೆ. ಕಾಮುಕ ಪುರುಷರ ಭೀತಿಯೂ ನೀಲೇಗೌಡನಲ್ಲಿ ಬಲಗೊಂಡಿದೆ. ಜೇನುಮಲೆಗೆ ಹೊರಡುವಾಗ ನೀಲಯ್ಯನು ದೊಡ್ಡ ಕಾಳಿಂಗ ಸರ್ಪವನ್ನು ಸಂಕಮ್ಮಳ ಬಳಿಯಲಿರಿಸಿ ‘ನನ್ನ ಮಡ್ದಿಮ್ಯಾಲೆ ಯಾವುನಾದರೂ ಕಣ್ಣಿಟ್ಟು ಬಂದುದೇ ಆದ್ರೆ ಸರಸರನೋಡೋಗಿ ಅವುನ ಬಲಗಾಲುಂಗುಷ್ಟವನ್ನು ಕಚ್ಚುಡು’ ಎನ್ನುವ ಮಾತು ನೀಲೇಗೌಡನ ಮನೋವಿಕಾರತೆಯನ್ನು ಸಾಬೀತುಪಡಿಸುತ್ತದೆ.

ಇಷ್ಟಾದರೂ ಸಂಕಮ್ಮಳಿಗೆ ಗಂಡನ ಮೇಲೆ ದ್ವೇಷ ಹುಟ್ಟುವುದಿಲ್ಲ. ನೋವಿನಲ್ಲಿಯೂ ಪ್ರೀತಿಯು ಭಕ್ತಿಯ ಪ್ರವಾಹವಾಗಿ ತುಂಬಿ ಹರಿಯುತ್ತದೆ. ತನ್ನ ತವರ ಮನೆದೇವರು ಏಳುಮಲೆ ಮಾಯ್ಕಾರ ಮಾದಯ್ಯನಲ್ಲಿ ಮೊರೆಯಿಡುತ್ತಾಳೆ. ‘ನನ್ನ ದುಃಖ ಶೋಕ ನಿನಗೆ ಅರಿವಾಗಲಿಲ್ಲವೇ?’ ಎಂದು ಪ್ರಶ್ನಿಸುತ್ತಾಳೆ. ಆಕೆಯ ನೋವಿನ ಕಣ್ಣೀರು ‘ಶಿವುಸೇತ್ಮೇಲೆ ಹರ್‍ಕೊಂಡೋಗಿ’ ಕೈಲಾಸದ ಶಿವನನ್ನು ನೆಲಕ್ಕಿಳಿಸುತ್ತದೆ. ಸಂಕಮ್ಮ ಮಾದೇಶ್ವರನ ಅನುಗ್ರಹದಿಂದ ನೀಲೇಗೌಡನ ಮಾಟವಿದ್ಯೆಯನ್ನು ಭೇದಿಸುವಲ್ಲಿ ಯಶಸ್ವಿಯಾಗುತ್ತಾಳೆ. ತನ್ನ ಬಂಜೆತನವನ್ನು ನೀಗಿಕೊಂಡು ಮಕ್ಕಳನ್ನು

ISBN – 978-93-5526-247-9

ಹಡೆಯುತ್ತಾಳೆ. ಜೇನುಮಲೆಯಿಂದ ಮರಳಿ ಬಂದ ನೀಲಯ್ಯ ಯಾವುದನ್ನೂ ವಿಚಾರಿಸದೆ 'ಯಾವೋನೊ ಸಾವ್ಯಾತಿ ಮಡಿಕೊಂಡು ಅರ್ಮನೆ ಕಟ್ಟುಸ್ಕೊಂಡಿದ್ದಿಯೇ?' ಎಂದು ಸಂಕಮ್ಮಳನ್ನು ಆಕ್ಷೇಪಿಸುತ್ತಾನೆ. ಸಂಕಮ್ಮಳ ಪಾತಿವ್ರತ್ಯದ ಪರೀಕ್ಷೆಗಾಗಿ ಅನೇಕ ದಂಡನೆ ದಿವ್ಯಗಳನ್ನು ನಡೆಸುತ್ತಾನೆ. ಎಲ್ಲ ಸಂದರ್ಭದಲ್ಲಿಯೂ ಸಂಕಮ್ಮ ಗೆಲ್ಲುತ್ತಾಳೆ. ಸಂಕಮ್ಮಳ ಭಕ್ತಿ ತಾಳ್ಮೆಯ ಪ್ರಭಾವದಿಂದ ನೀಲೇಗೌಡನ ಮನಪರಿವರ್ತನೆಯಾಗುತ್ತದೆ. ಇಲ್ಲಿ ಸಂಕಮ್ಮಳು ಸ್ಥಾಪಿತ ವ್ಯವಸ್ಥೆಯನ್ನು ಪ್ರಶ್ನಿಸುವ ಹಂತವನ್ನು ತಲುಪಿರುವುದನ್ನು ಗಮನಿಸಬಹುದಾಗಿದೆ. ಅನ್ಯಾಯವನ್ನು ಪ್ರತಿಭಟಿಸುವ ಸ್ವಾಭಿಮಾನವನ್ನು ರಕ್ಷಿಸಿಕೊಳ್ಳುವ ಹೆಣ್ಣುಕುಲದ ಪ್ರತೀಕವಾಗಿ ಸಂಕಮ್ಮ ಕಂಡುಬರುತ್ತಾಳೆ.

ಹೆಣ್ಣಿಗೆ ಪ್ರಾಣಕ್ಕಿಂತ ಶೀಲ ದೊಡ್ಡದು. ಹೀಗಾಗಿ ಸ್ತ್ರೀಯಾದವಳು ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಪಡುವ ಸಂಕಷ್ಟಗಳು, ಸಂಶಯಗಳುಂಟಾದ ಸಂದರ್ಭದಲ್ಲಿ ಎದುರಾಗುವ ಸವಾಲುಗಳನ್ನು ಶಿಕ್ಷೆಗಳನ್ನು ಅನುಭವಿಸಿದ ಸ್ವರೂಪವನ್ನು ಜನಪದರು ಮಹಾಕಾವ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ. ಒಟ್ಟಿನಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ ಬದುಕಿನುದ್ದಕ್ಕೂ ಅನೇಕ ರೀತಿಯ ಸವಾಲು ಸಮಸ್ಯೆಗಳನ್ನು ಎದುರಿಸುತ್ತಲೇ ಬಾಳುತ್ತಾಳೆ. ಮೊದಲು ಮದುವೆಯ ಚಿಂತೆ, ಮದುವೆಯಾದೊಡನೆ ಮಕ್ಕಳಾಗದಿದ್ದರೆ ಬಂಜೆಯೆಂಬ ತಿರಸ್ಕಾರ, ಚೆಲುವೆಯಾಗಿದ್ದರೆ ಸಂದೇಹಿಸುವ ಗಂಡ, ಪವಿತ್ರಳಾಗಿದ್ದರೂ ತನ್ನ ಪಾವಿತ್ರ್ಯವನ್ನು ಋಜುಪಡಿಸಬೇಕಾದ ಒತ್ತಡ ಹೀಗೆ ಬದುಕಿನ ಪ್ರತಿ ಕ್ಷಣದಲ್ಲೂ ಹಿಂಸೆಯನ್ನು ಎದುರಿಸಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ಸ್ತ್ರೀಯ ಬದುಕು ಸಾಗುತ್ತದೆ.

**ಆಕರ ಗ್ರಂಥಗಳು**

ಡಾ.ಪಿ.ಕೆ.ರಾಜಶೇಖರ : ಜನಪದ ಮಹಾಕಾವ್ಯ–ಮಲೆಯ ಮಾದೇಶ್ವರ
ಸಂಪುಟ 1 ಮತ್ತು 2 ಕ.ಸಂ.ಇ ಬೆಂಗಳೂರು 2006

ಕೆ ಕೇಶವನ್ ಪ್ರಸಾದ –ಮಲೆ ಮಾದೇಶ್ವರ ಮಹಾಕಾವ್ಯ
ಕನ್ನಡ ವಿ.ವಿ. ಹಂಪಿ 1997

***

## 45.ಮಂಟೇಸ್ವಾಮಿ ಜನಪದ ಕಾವ್ಯದಲ್ಲಿ ಪವಾಡಗಳು: ಸಂಕ್ಷಿಪ್ತ ವಿಶ್ಲೇಷಣೆ

**ವೇಣುಗೋಪಾಲ್.ಆರ್**

ಕನ್ನಡ ನಾಡಿನಲ್ಲಿ ಜನಪದ ಸಾಹಿತ್ಯ ಸಂಪತ್ತು ಹೇರಳವಾಗಿದೆ. ಅನ್ಯರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ವೈವಿಧ್ಯಮಯವಾದ, ವೈಶಿಷ್ಟ್ಯಪೂರ್ಣವಾದ ಜನಪದ ಸಾಹಿತ್ಯ ಪ್ರಕಾರಗಳು ದೊರೆಯುತ್ತವೆ. 19–20ನೇ ಶತಮಾನಗಳಲ್ಲಿ ಸಂಗ್ರಹಿಸಲಾದ ಜನಪದ ಸಾಹಿತ್ಯಪ್ರಕಾರಗಳಲ್ಲಿ ಜನಪದ ಗೀತೆ ಮತ್ತು ಲಾವಣಿಗಳಿಗೆ ಸೀಮಿತವಾಗಿದ್ದವು. ಆದರೆ 20ನೇ ಶತಮಾನದ ಉತ್ತರಾರ್ಧದಲ್ಲಿ ಸಂಕಲನ ಮಾಡಲಾದ ಮಂಟೇಸ್ವಾಮಿ ಕಾವ್ಯ ಮತ್ತು ಮಲೆ ಮಾದೇಶ್ವರ ಕಾವ್ಯ ನಂತರ ಸಂಗ್ರಹಿಸಲಾದ ಹಾಲು ಮತ ಕಾವ್ಯ, ಜುಂಜಪ್ಪನ ಕಾವ್ಯ, ಮೈಲಾರ ಲಿಂಗನ ಕಾವ್ಯ, ಕೃಷ್ಣ ಗೊಲ್ಲರ ಕಾವ್ಯ, ಯಲ್ಲಮ್ಮನ ಕಾವ್ಯ, ಕುಮಾರ ರಾಮನ ಕಾವ್ಯ, ಕರಾವಳಿ ಕರ್ನಾಟಕದಲ್ಲಿ ಕಂಡುಬರುವ ಸಿರಿಮಹಾ ಕಾವ್ಯಗಳು ಇವು ಕರ್ನಾಟಕದ ಜನಪದ ಮಹಾಕಾವ್ಯಗಳು. ಪಾಶ್ಚಿಮಾತ್ಯ ವಸಾಹತು ಶಾಹಿಗಳು ಸೃಷ್ಟಿಸಿದ ನವನಾಗರೀಕತೆಗಳ ಪರಿಣಾಮಗಳಿಂದ ಈ ಜನಪದ ಸಾಹಿತ್ಯಪ್ರಕಾರಗಳು ನಾಶವಾಗದೆ ಇಂದಿಗೂ ಅವುಗಳು ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ತಮ್ಮ ಅಸ್ತಿತ್ವ ಮತ್ತು ಆಚರಣೆಗಳನ್ನು ಉಳಿಸಿಕೊಂಡು ಬರುತ್ತಿವೆ.

ನೆಲಮೂಲ ಸಂಸ್ಕೃತಿಗಳನ್ನು ನಾವು ಈ ಕಾವ್ಯಗಳ ಮುಖಾಂತರ ಪರಿಶೋಧಿಸಿಕೊಳ್ಳಬೇಕಾಗಿದೆ. ಮೇಲೆ ಉಲ್ಲೇಖಿಸಲಾದ ಜನಪದ ಮಹಾಕಾವ್ಯಗಳೆಲ್ಲವು ಅನನ್ಯವಾದ ವಸ್ತು ವಿಶೇಷಣಗಳನ್ನೊಳಗೊಂಡ ಕಾವ್ಯಗಳಾದರು ಅವುಗಳಲ್ಲಿ "ಮಂಟೆಸ್ವಾಮಿ ಕಾವ್ಯ" ವಿಭಿನ್ನತೆಯನ್ನೊಳಗೊಂಡಿದೆ. ಕಾರಣ ಈ ಕಾವ್ಯದ ನಾಯಕ ಮಂಟೇಸ್ವಾಮಿ 12ನೇ ಶತಮಾನದ ವಚನಕಾರರಲ್ಲಿ ವಿಭೂತಿಪುರುಷನಾದ ಅಲ್ಲಮ ಪ್ರಭುವಿನ ಪ್ರತಿರೂಪ ಎಂಬ ನಂಬಿಕೆ ಆಗಿನ ಅಲ್ಲಮ ಪ್ರಭು ಶರಣರಲ್ಲಿ ನವಚೈತನ್ಯ ವಿಚಾರಗಳನ್ನು ಕುರಿತು ಜಾಗೃತಿ ಮೂಡಿಸಿದರೆ, ನಂತರ ಕಾಣಿಸಿಕೊಳ್ಳುವ ಮಂಟೇಸ್ವಾಮಿ ಕೆಳಸ್ತರದ ಜನರಿಗೆ ಆತ್ಮವಿಶ್ವಾಸ ತುಂಬುವ ಕಾರ್ಯ ಕೈಂಕರ್ಯಗಳನ್ನು ಗಮನಿಸಬಹುದು. 12ನೇ ಶತಮಾನದಲ್ಲಿ ಬಸವಣ್ಣ ತಲತಲಾಂತರಗಳಿಂದ ತುಳಿತಕ್ಕೊಳಗಾದ ನಿರ್ಲಕ್ಷಿತ ಸಮುದಾಯಗಳ ಏಳಿಗೆಗಾಗಿ ಅವರ ಉದ್ದಾರಕ್ಕಾಗಿ ತನ್ನ ಜೀವನ ಸವೆಸುತ್ತಾರೆ. ಆದರೆ ಬಸವಣ್ಣನ ಕಾಲೈಕ್ಯದ ನಂತರ ವಚನ ಚಳುವಳಿ ಅವನತಿಯ ಕಡೆ ಸಾಗುತ್ತದೆ. ಮತ್ತೆ ಹಳೆಯ ಕಂದಾಚಾರ ಮತ್ತು ಸಂಪ್ರದಾಯವಾದಿಗಳ ಆಚರಣೆ ವಿಜೃಂಬಿಸತೊಡಗುತ್ತದೆ. ಆಗ ಮಂಟೆಸ್ವಾಮಿಯು ಉತ್ತರ ಕರ್ನಾಟಕ ಭಾಗದಿಂದ ದಕ್ಷಿಣ ಕರ್ನಾಟಕದ ಕಡೆ ತನ್ನ ಪರಿವರ್ತನ ಶೀಲ ಕಾರ್ಯದ ಯಾತ್ರೆ ಕೈಗೊಳ್ಳುತ್ತಾನೆ. ಪ್ರಸ್ತುತ ಲೇಖನದಲ್ಲಿ ಮಂಟೆಸ್ವಾಮಿಯು ಲೋಕಕಲ್ಯಾಣಕ್ಕಾಗಿ ಮಾಡಿದ ಪವಾಡಗಳನ್ನು ಮಂಟೆಸ್ವಾಮಿ ಕಾವ್ಯದ ಹಿನ್ನೆಯಲ್ಲಿ ನಿರೂಪಿಸಲಾಗಿದೆ. 12ನೇ ಶತಮಾನದ ವಚನ ಚಳುವಳಿಯ ಇಳಿಮುಖದ ಕಾಲಘಟ್ಟದಲ್ಲಿ ಸಾಮಾಜಿಕವಾಗಿ ಪ್ರಕ್ಷುಬ್ದ ಪರಿಸ್ಥಿತಿ ಉಂಟಾದಾಗ ಮಂಟೇಸ್ವಾಮಿ ಉದ್ಬವವಾಗುವ ಸನ್ನಿವೇಶ ಉಂಟಾಗುತ್ತದೆ. ಶರಣರು ಮಹಾಗುರುವಿನ ಆಗಮನಕ್ಕಾಗಿ ನಿರೀಕ್ಷೆಯಲ್ಲಿರುತ್ತಾರೆ. ಆಗ ಕಲ್ಯಾಣದ ಮಹಾದ್ವಾರದಲ್ಲಿ ಒಂದು ನಾಲಗೆ ಇಲ್ಲದ ಲೋಹದ ಗಂಟೆ, ಒಂದು ಕಲ್ಲು ಕೋಳಿ, ಮತ್ತು ಒಂದು ಕಲ್ಲು ಬಸವನನ್ನು ಹೆಬ್ಬಾಗಿಲಿನಲ್ಲಿ ನಿಲ್ಲಿಸುತ್ತಾರೆ. ಅವರ ಪ್ರಕಾರ ಮಹಾಜ್ಞಾನಿಗಳು ಆ ಹೆಬ್ಬಾಗಿಲಿನ ಮೂಲಕ ಹಾದು ಪ್ರವೇಶಿಸಿದರೆ ನಾಲಗೆ ಇಲ್ಲದ ಗಂಟೆ ತನ್ನಿಂದ ತಾನೆ ಶಬ್ದ ಮಾಡುತ್ತದೆ, ಕಲ್ಲು ಕೋಳಿ ಕೂಗುತ್ತದೆ, ಕಲ್ಲು ಬಸವ ಗುಟುರು ಹಾಕುತ್ತದೆ. ಪವಾಡಪುರುಷರ ಆಗಮನದಿಂದ ಮಾತ್ರ ಇವು ಸಾಧ್ಯವಾಗುತ್ತದೆ ಎಂದು ಆಗಿನ ಶರಣರ ನಂಬಿಕೆಯಾಗಿರುತ್ತದೆ. ಮುಂದೆ ಒಂದು ದಿನ ಮಂಟೇಸ್ವಾಮಿ, ಶರಣರ ಅಪೇಕ್ಷೆಯಂತೆ ತಿಪ್ಪೆಯ ಕಸದ ರಾಶಿಯಿಂದ ಆಚೆ ಬಂದು ಕಲ್ಯಾಣದ ನಗರಕ್ಕೆ ಪ್ರವೇಶಿಸಲು ಯತ್ನಿಸಿದಾಗ ಅಪಹಾಸ್ಯಕ್ಕೊಳಗಾಗುತ್ತಾನೆ. ಅಲ್ಲಿನ ಕಾವಲುಗಾರರು ಮತ್ತು ಜನ ಇವನ ವಿಕಾರ ಬಾಹ್ಯ ಸ್ವರೂಪಕ್ಕೆ ಅಸಹ್ಯ ಪಟ್ಟುಕೊಳ್ಳುತ್ತಾರೆ. ಆದರೆ ಇವನ ಆಗಮನದಿಂದ ನಾಲಗೆ ಇಲ್ಲದ ಗಂಟೆ ಶಬ್ದಮಾಡಿ, ಕಲ್ಲು ಕೋಳಿ ಕೂಗುತ್ತದೆ, ಕಲ್ಲಿನ ಬಸವ ಗುಟುರು ಹಾಕುತ್ತದೆ. ಇಲ್ಲಿ ನಡೆದ ಈ ಘಟನೆಯ ಮೂಲಕ ಮಂಟೇಸ್ವಾಮಿ ಪವಾಡಪುರುಷನಾಗಿ ಗುರುತಿಸ್ಪಡುತ್ತಾನೆ. ಈ ಮೂರು ಪ್ರಸಂಗಗಳ ಗೂಢಾರ್ಥಗಳನ್ನು ಬೇರೆ ರೀತಿಯಲ್ಲಿಯು ವಿಶ್ಲೇಷಿಸಿಕೊಳ್ಳಬಹುದು. ನಾಲಗೆಯಿಲ್ಲದ ಗಂಟೆಯ ಶಬ್ದವು ಜಗತ್ತಿನ ಮೂಲ ಸೃಷ್ಟಿಯ ಸಂಕೇತವಾಗಿಯೂ, ಕಲ್ಲು ಕೋಳಿಯ ಕೂಗು, ಜಾಗೃತಿ ಮತ್ತು ಜ್ಞಾನೋದಯದ ಸಂಕೇತವಾಗಿಯು, ಕಲ್ಲುಬಸವನ ಪ್ರತಿಮೆ ಸಮೃದ್ಧತೆಯ ಸಂಕೇತವಾಗಿಯೂ ಗ್ರಹಿಸಬಹುದು.

ISBN – 978-93-5526-247-9 

2) ಹಾಗೆಯೇ ಆಗಿನ ಕಾಲದ ಸಂಪ್ರದಾಯವಾದಿ ಜಂಗಮರು ಮೈಮೇಲೆ ಸ್ಥಾವರ ಲಿಂಗಗಳನ್ನು ಧರಿಸುತ್ತಿದ್ದರು. ಈ ಆಚರಣೆಯನ್ನು ಭಗ್ನಗೊಳಿಸಲು, ಸ್ಥಾವರ ಲಿಂಗಗಳಿಗಿಂತ ಜೀವ ಚೈತನ್ಯವೇ ಲೇಸು ಎಂದು ಪ್ರತಿಪಾದಿಸಲು ಮಂಟೇಸ್ವಾಮಿ ಅಲ್ಲೊಂದು ಪವಾಡ ಸೃಷ್ಟಿಸುತ್ತಾರೆ. ವೇಷಧಾರಿ ಜಂಗಮರ ಲಿಂಗಗಳನ್ನೆಲ್ಲಾ ಮಾಯಮಾಡಿ (ಅದೃಶ್ಯ) ಅವುಗಳನ್ನು ಯಂಡದ ಗಡಿಗೆಯಲ್ಲಿ ಇರುವಂತೆ ಮಾಡುತ್ತಾರೆ. ಜಂಗಮರು ಮಂಟೇಸ್ವಾಮಿಯ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಾರೆ. ಆಗ ಮಂಟೇಸ್ವಾಮಿಯು ಅನಿತ್ಯವಾದ ಸ್ಥಾವರಲಿಂಗ ಪೂಜೆಗಿಂತ, ನಾಶವಾಗದ ನಿತ್ಯ ಚೇತನ ಪೂಜೆ ಶ್ರೇಷ್ಠ ಎಂದು ಮನವರಿಕೆ ಮಾಡುತ್ತಾನೆ. ಅನಂತರದಲ್ಲಿ ಬಸವಣ್ಣನ ಅನುಯಾಯಿಯಾದ ರಾಚಪ್ಪಾಜಿಯನ್ನು ಕ್ವಾರಣ್ಯ ಭಿಕ್ಷೆ ಪಡೆದು ತನ್ನ ಸಿಸುಮಗನನ್ನಾಗಿ ಮಾಡಿಕೊಂಡು ದಕ್ಷಿಣ ಕರ್ನಾಟಕದ ಕಡೆ ಪ್ರಯಾಣ ಬೆಳೆಸುತ್ತಾನೆ. ಊರೂರು ಸುತ್ತುತ್ತಾ ತನ್ನ ಮಹಿಮೆಯನ್ನು ತೋರುತ್ತ ಸಿಸು(ಶಿಷ್ಯ) ವರ್ಗವನ್ನು ಪಡೆಯುತ್ತ ವಿಜಯನಗರ ಪಟ್ಟಣಕ್ಕೆ ಪ್ರವೇಶಿಸುತ್ತಾರೆ. ರಾಚಪ್ಪಾಜಿಯನ್ನು ನಗರ ವೀಕ್ಷಣೆಗೆ ಕಳುಹಿಸಿ ಮಂಟೇಸ್ವಾಮಿ ಕಾಡಿನಲ್ಲಿ ಗಿಡ ಮರಗಳಿಂದ ಹಣ್ಣು ಹಂಪಲು ಬಿಕ್ಷೆ ಬೇಡಲು ಹೋಗುತ್ತಾನೆ. ರಾಚಪ್ಪ ತನ್ನ ಚಮತ್ಕಾರದಿಂದ ಆ ನಗರದಲ್ಲಿ ಗೋಳಿ ಆಟ ಆಡಿ ಮಂಟೇಸ್ವಾಮಿ ಕೊಟ್ಟಿರುವ ಕಲ್ಲಿನ ಗೋಲಿಯಿಂದ ಎಲ್ಲರ ಬಳಿಯಿರುವ ಗೋಲಿಗಳನ್ನು ಗೆದ್ದುಕೊಳ್ಳುತ್ತಾನೆ. ಈ ಘಟನೆ ಕಾವ್ಯದಲ್ಲಿ ಮಾರ್ಮಿಕವಾಗಿ ಮೂಡಿಬಂದಿದೆ. ಗೋಲಿಯು ಶೂನ್ಯದ ಸಂಕೇತ ವಚನ ಸಾಹಿತ್ಯದಲ್ಲಿ ಶೂನ್ಯ ಅಥವಾ ಬಯಲು ಎಂಬ ರೂಪಕ ಅನುರಣಿತವಾಗಿದೆ. ಮಾನವ ತನ್ನ ಬಂದನಗಳನ್ನೆಲ್ಲ ಕಳಚಿ ಶೂನ್ಯ ಸ್ಥಿತಿಗೆ ತಲುಪುವ ಗುರಿಯೇ ಜೀವಿತದ ಮಹೋನ್ನತ ಸಾಧನೆ ಎಂಬ ಮಾರ್ಮಿಕ ಸಂದೇಶವನ್ನು ಗ್ರಹಿಸಬಹುದು.

ಅಲ್ಲಿಂದ ಮುಂದೆ ಸಕ್ಕರಾಯ ಪಟ್ಟಕ್ಕೆ ಬರುತ್ತಾರೆ. ಮಂಟೇಸ್ವಾಮಿ ಅಲ್ಲಿ ಹಲವಾರು ಸಿಸು ಮಕ್ಕಳನ್ನಾಗಿ ಮಾಡಿಕೊಂಡು ರಾಚಪ್ಪಾಜಿಯ ಜೊತೆ ಸಕ್ಕರಾಯ ಪಟ್ಟಣಕ್ಕೆ ಬರುತ್ತಾರೆ. ಅಲ್ಲಿ ದೊಡ್ಡಮ್ಮನ ಭೇಟಿ. ದೊಡ್ಡಮ್ಮ ಮಲತಾಯಿ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಾಗ ಅಲ್ಲಿ ಪ್ರತ್ಯಕ್ಷನಾಗುತ್ತಾನೆ. ಅಲ್ಲಿ ಸಾವು ಬದುಕಿನ ಬಗ್ಗೆ ಸ್ವಾರಸ್ಯಕರವಾದ ಸಂವಾದ ನಡೆಯುತ್ತದೆ. ದೊಡ್ಡಮ್ಮನ ಮಲತಾಯಿಯು, ಆಕೆಗೆ ಇಷ್ಟವಿಲ್ಲದ ಮದುವೆ ನಿಷ್ಕಾರ್ಷೆಯಾಗಿರುತ್ತದೆ. ಮದುವೆ ದಿನ ದೊಡ್ಡಮ್ಮ ನಿರ್ಜೀವ ಶವ ವಾಗಿರುತ್ತಾಳೆ. ಈ ಶವವನ್ನು ಮದುವೆ ದಿನ ಮಂಟೇಸ್ವಾಮಿ ಭಿಕ್ಷೆ ಬೇಡುತ್ತಾನೆ. ಆ ಶವಕ್ಕೆ ಜೀವ ಕೊಡುತ್ತಾನೆ.

ಬದುಕಿ ಸತ್ತ ಕಣ್ಣುಗಳಿಗೆ
ಸತ್ತ ಹಂಗೆ ಕಡೆಯಮ್ಮ
ಸತ್ತು ಬದುಕಿದ ಕಣ್ಣುಗಳಿಗೆ
ಎದ್ದುಬಾರೆ ನನ್ನ ಮಗಳೇ
ನಿದ್ದೆಯನ್ನು ಒದ್ದುಬಾರೆ ಮಗಳೇ
ಮೃತ್ಯುವನ್ನು ಗೆದ್ದುಬಾರೆ ನನ್ನ ಮಗಳೇ

ಆಗ ಶವವಾಗಿದ್ದ ದೊಡ್ಡಮ್ಮ ಮೇಲೇಳುತ್ತಾಳೆ. ಇಲ್ಲಿ ಮಂಟೇಸ್ವಾಮಿ ಪವಾಡವು ಧನ್ಯಾರ್ಥವನ್ನು ಪ್ರತಿಬಿಂಬಿಸುತ್ತದೆ. ಬದುಕ್ಕಿದ್ದರು ಸತ್ತಹಾಗೆ ಬದುಕುತ್ತಿರುವ ನಿರರ್ಥಕ ಜೀವನ ಚಿತ್ರವನ್ನು ವಿಡಂಬಿಸುತ್ತದೆ.

ಅಲ್ಲಿಂದ ಊರೂರು ಸುತ್ತುತ್ತ ಪವಾಡಗಳನ್ನು ಮೆರೆಯುತ್ತ ದಕ್ಷಿಣ ಭಾಗದ ಮಂಡ್ಯ ಜಿಲ್ಲೆಯ ಕುಂದೂರಿಗೆ ಬಂದು ನೆಲೆಸುತ್ತಾರೆ. ಇಲ್ಲಿ ಮಂಟೇಸ್ವಾಮಿಯು ಮೇರು ಪವಾಡಗಳನ್ನು ಮೆರೆಯುತ್ತಾರೆ. ಇಲ್ಲಿ ಮಂಟೇಸ್ವಾಮಿ ಕಾವ್ಯದ ಪ್ರಮುಖ ಘಟ್ಟವಾದ ಕೆಂಪಾಚಾರಿಯನ್ನು ಸಿದ್ದಪ್ಪಾಜಿಯನ್ನಾಗಿ ಪರಿವರ್ತಿಸಿ ತನ್ನ ಶಿಷ್ಯನನ್ನಾಗಿ ಮಾಡಿಕೊಂಡು ಸಿದ್ದಪುರುಷನಾಗಿಸಿ ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುತ್ತಾನೆ.

ಮಂಟೇಸ್ವಾಮಿ ಕಾವ್ಯದಲ್ಲಿ ಸಾರ್ವಕಾಲಿಕ ಸಮಸ್ಯೆಯಾದ ಏಕಸ್ವಾಮ್ಯವನ್ನು ಭಗ್ನಗೊಳಿಸುವ ಪಾಂಚಾಳ ರಾಜರ ಸೊಕ್ಕನ್ನು ಅಡಗಿಸುವ ಘಟ್ಟ ಅತ್ಯಂತ ಪ್ರಮುಖವಾದ್ದು. ಅಲ್ಲಿ ಪಾಂಚಾಳ ರಾಜರ ಕಬ್ಬಿಣದ ಏಕಸ್ವಾಮ್ಯವನ್ನು ಗೆಲ್ಲಲು ತನ್ನ ಶಿಷ್ಯನಾದ ಸಿದ್ದಪ್ಪಾಜಿಯನ್ನು ಕಳುಹಿಸುತ್ತಾನೆ. ಅದಕ್ಕೂ ಮೊದಲು ಅಹಂಕಾರಿಯಾಗಿದ್ದ

ISBN – 978-93-5526-247-9

ಕೆಂಪಾಚಾರಿಯನ್ನು, ನಿರಹಂಕಾರದ ಸಿದ್ದಪ್ಪಾಜಿಯನ್ನಾಗಿ ಪರಿವರ್ತಿಸುವ ಸಾಧನೆಯ ಘಟ್ಟ ಈ ಕಾವ್ಯದಲ್ಲಿ ಸೋದಾಹರಣವಾಗಿ ಮೂಡಿದೆ.

ಒಮ್ಮೆ ಮಂಟೇಸ್ವಾಮಿ ಸಿದ್ದಪ್ಪಾಜಿಯನ್ನು ದಾರಿಯಲ್ಲಿ ಹೋಗುತ್ತಿರುವ ಒಬ್ಬ ಅನಾಮಿಕ ವ್ಯಕ್ತಿಯನ್ನು ಬೇಟಿಯಾಗುತ್ತಾರೆ. ಆಗ ಆ ವ್ಯಕ್ತಿ ನಾನು ಕಲಿಪುರುಷನೆಂತಲು ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿಗೆ ಪ್ರಯಾಣ ಮಾಡುತ್ತಿರುವೆನೆಂತಲು ತಿಳಿಸಿ, ಉತ್ತರ ತುದಿ ತಲುಪಿದ ಮೇಲೆ ಇಡೀ ಬ್ರಂಹ್ಮಾಡವೆಲ್ಲ ಅಲ್ಲೋಲ ಕಲ್ಲೋಲವಾಗಿ ಜೀವರಾಶಿಗಳೆಲ್ಲ ನಾಶವಾಗುತ್ತವೆ ಎಂದು ತಿಳಿಸುತ್ತಾನೆ. ಆಗ ಮಂಟೇಸ್ವಾಮಿ ಸಿದ್ದಪ್ಪಾಜಿಗೆ ತನ್ನ ಬಾಯಿಯಿಂದ ಉಗುಳು ತೆಗೆದು ಆ ಕಲಿಪುರುಷನ ಮೇಲೆ ಚೆಲ್ಲಲು ಹೇಳುತ್ತಾನೆ. ಹಾಗೆ ಸಿದ್ದಪ್ಪಾಜಿ ಮಾಡಿದಾಗ ಆ ಕಲಿ ಪುರಷ ಕಲ್ಲಾಗಿ ಮಾರ್ಪಟ್ಟು ಕದಲದೆ ನಿಲ್ಲುತ್ತಾನೆ. ಆಗ ಸಿದ್ದಪ್ಪಾಜಿಯು ಇದರ ಉದ್ದೇಶವನ್ನು ಮಂಟೇಸ್ವಾಮಿಗೆ ಕೇಳಿದಾಗ ನಾನು ಇನ್ನು ಕೆಲವೇ ದಿನದಲ್ಲಿ ಭೂಮಿಯ ಪಾತಾಳಲೋಕ ಸೇರಿ ಈ ಭೂಮಿಯನ್ನು ಅಲುಗಾಡದೆ ನಿಲ್ಲಿಸಬೇಕು, ಈ ಸಕಲ ಜೀವರಾಶಿಗಳನ್ನು ಉಳಿಸಬೇಕು ಎಂದು ತಿಳಿಸುತ್ತಾನೆ. ಇಲ್ಲಿ ಜನಪದ ಕಾವ್ಯಗಳ ನಾಯಕರು ಜೀವದಯಾ ಪರವಾದ ಆಶಯಗಳನ್ನು ತಮ್ಮ ಪವಾಡಗಳ ಮೂಲಕ ಹೇಗೆ ನೆರವೇರಿಸುತ್ತಾರೆ. ಎಂಬುದನ್ನು ತಿಳಿಯಬಹುದು. ಸಕಲ ಜೀವರಾಶಿಗಳಿಗೆ ಲೇಸನ್ನೇ ಬಯಸುವುದು, ಲೇಸನ್ನೇ ಮಾಡುವ ಲೋಕ ಕಲ್ಯಾಣದ ಧ್ಯೇಯೋದ್ದೇಶಗಳು ಈ ಪವಾಡಗಳಿಗೆ ಮೂಲಕಾರಣಗಳಾಗಿರುತ್ತವೆ ಎಂಬುದನ್ನು ಮನಗಾಣಬಹುದು.

ಮಂಟೇಸ್ವಾಮಿ ಕಾವ್ಯದಲ್ಲಿ ಬಹಳ ಪ್ರಮುಖ ಸನ್ನಿವೇಶ ಮಂಟೇಸ್ವಾಮಿಯು ತನ್ನ ಸಿಸುಮಗನಾದ ಸಿದ್ದಪ್ಪಾಜಿಯನ್ನು ಅಲಗೂರಿನ ಪಾಂಚಾಳ ರಾಜರ ಬಳಿ ಕಬ್ಬಿಣದ ಭಿಕ್ಷೆ ಕೇಳಲು ಮತ್ತು ಅವರ ಅಹಂಕಾರವನ್ನು ನಾಶಮಾಡಲು ಕಳಿಸುವ ಸಂದರ್ಭ. ಏಳು ಜನ ಅಲಗೂರಿನ ಪಾಂಚಾಳ ರಾಜರು ಕಬ್ಬಿಣದ ಏಕಸ್ವಾಮ್ಯವನ್ನು ಸಾಧಿಸಿ, ಸಾವಿರಾರು ಜನರನ್ನು ಜೀತದಾಳುಗಳನ್ನಾಗಿಸಿಕೊಂಡು ಪಾಳೆಯಗಾರರಾಗಿ ಮೆರೆಯುತ್ತಿರುತ್ತಾರೆ. ಅವರನ್ನು ಸೋಲಿಸಲು ಮಂಟೇಸ್ವಾಮಿಯು ಸಿದ್ದಪ್ಪಾಜಿಯನ್ನು ಬೆನ್ನುತಟ್ಟಿ ಕಳುಹಿಸುತ್ತಾನೆ. ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಮುಂತಾದ ಪವಾಡ ದೇವತೆಗಳು (ಪಂಚಭೂತ) ಸಹ ಪಾಂಚಾಳ ರಾಜರ ಕಾಟದಿಂದ ಬೇಸತ್ತು ಮಾರಿಯರಾಗಿ ಅವರ ವಿರುದ್ಧವಾಗಿರುತ್ತಾರೆ. ಈ ಪಂಚಭೂತಗಳ ಸಹಾಯದಿಂದ ಅವರನ್ನು ಸೋಲಿಸಲು ಸಲಹೆ ನೀಡುತ್ತಾನೆ. ಬಂಡವಾಳಶಾಹಿಗಳ ಆರ್ಭಟ ಅಬ್ಬರ ಹೆಚ್ಚಾದರೆ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ. ಎಂಬುದನ್ನು ಈ ಕಾವ್ಯ ಮಾರ್ಮಿಕವಾಗಿ ತಿಳಿಸುತ್ತದೆ. ವರ್ತಮಾನದ ಜಗತ್ತಿನಲ್ಲಿ ಕೈಗಾರಿಕೋದ್ಯಮದಿಂದ, ಜಾಗತೀಕರಣದಿದಂದ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ (ಜಾಗತಿಕ ತಾಪಮಾನ, ಪರಿಸರ ನಾಶ) ಈ ಕಾವ್ಯದ ಹಿನ್ನೆಯಲ್ಲಿ ಗ್ರಹಿಸಬಹುದು.

ಮಂಟೇಸ್ವಾಮಿ ಕಾವ್ಯವು ಜೀವಪರವಾದ ಕಾಳಜಿಯನ್ನು ಅಭಿವ್ಯಕ್ತಿಸುವ ಕೃತಿ ಇಲ್ಲಿ ಪವಾಡಗಳನ್ನು ಹೊರತುಪಡಿಸಿದ ಕಾವ್ಯವನ್ನಾಗಲಿ, ಪವಾಡಗಳ ಹೊರತುಪಡಿಸಿದ ಮಂಟೇಸ್ವಾಮಿಯನ್ನಾಗಲಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಜನಪದ ಕಾವ್ಯಗಳಲ್ಲಿ ಬರುವ ಪವಾಡಗಳ ಹಿಂದೆ ಜನಪರವಾದ ದೂರದೃಷ್ಟಿ, ಸಮಾನತೆಯ ಆಶಯಗಳಿವೆ. ಜನಪದ ಕಾವ್ಯಗಳಲ್ಲಿ ನೆಲಮೂಲ ಸಂಸ್ಸೃತಿಗಳ ಜೀವನ, ಸಂಸ್ಕೃತಿ, ಆಚಾರಗಳು, ನಂಬಿಕೆಗಳು, ಕಾವ್ಯದ ನಾಯಕರ ಪವಾಡಗಳು ಓತಪ್ರೇತವಾಗಿ ಬೆಸೆದುಕೊಂಡಿರುತ್ತವೆ. ಇಂತಹ ಕಾವ್ಯಗಳಲ್ಲಿ ಕಂಡುಬರುವ ಪವಾಡಗಳನ್ನು ಅವುಗಳ ಒಟ್ಟಾರೆ ಆಶಯಗಳ ಹಿನ್ನೆಲೆಗಳ ಮೂಲಕ ಗುರುತಿಸಬೇಕೆ ವಿನಹ ಅವುಗಳನ್ನು ವೈಜ್ಞಾನಿಕ ಚೌಕಟ್ಟಿನಲ್ಲಿ ಅಳೆದು ನಿರ್ಲಕ್ಷಿಸುವಂತಿಲ್ಲ ಅಥವಾ ತಾರ್ತಿಕಿಕ ನೆಲೆಗಟ್ಟಿನಲ್ಲಿಯೂ ಅಳೆಯುವಂತಿಲ್ಲ. ಒಟ್ಟಾರೆಯಾಗಿ ಜನಪದ ಸಾಹಿತ್ಯಗಳ ಪವಾಡಗಳು/ಪವಾಡ ವ್ಯಕ್ತಿಗಳು ಮೋಸ, ವಂಚನೆ, ಅಪ್ರಾಮಾಣಿಕತೆಗಳಿಂದ ದೂರವಾಗಿ ಸಾರ್ವಜನಿಕರ ಒಳಿತಿಗಾಗಿ ಸಕಲ ಜೀವರಾಶಿಗಳ ಕಲ್ಯಾಣಕ್ಕಾಗಿ, ನಿಸರ್ಗ ಮತ್ತು ಜೀವ ಸಂಕುಲದ ಸಾಮರಸ್ಯಕ್ಕಾಗಿ ಮೂಡಿಬಂದಿವೆ. ಈ ಎಲ್ಲಾ ಕಾವ್ಯ ಕೃತಿಗಳ ಸಾರ್ವಕಾಲಿಕ ಸಂದೇಶಗಳು ಇದೇ ಆಗಿದೆ.

ISBN – 978-93-5526-247-9

**ಅಡಿ ಟಿಪ್ಪಣಿ:**

ಇಲ್ಲಿ ಪವಾಡಗಳನ್ನು ಹೊರತುಪಡಿಸಿದ ಕಾವ್ಯವನ್ನಾಗಲಿ, ಪವಾಡಗಳ ಹೊರತುಪಡಿಸಿದ ಮಂಟೇಸ್ವಾಮಿಯನ್ನಾಗಲಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಮಂಟೇಸ್ವಾಮಿ ಕಥಾಪ್ರಸಂಗ:– ಎಚ್.ಎಸ್ ಶಿವಪ್ರಕಾಶ್.

**ಆಕರ ಗ್ರಂಥಗಳು:–**

1. ಮಂಟೇಸ್ವಾಮಿ – ಸಂ. ಹಿ.ಚಿ ಬೋರಲಿಂಗಯ್ಯ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ– ಹಂಪಿ
2. ಮಂಟೇಸ್ವಾಮಿ ಕಥಾಪ್ರಸಂಗ:– ಎಚ್.ಎಸ್ ಶಿವಪ್ರಕಾಶ್.

***

# 46.ಅಮೋಘಸಿದ್ದ ಪರಂಪರೆಯ ವೈಶಿಷ್ಟ್ಯತೆ

ಸಾವಿತ್ರಿ ಮೋದಿ

ಕನ್ನಡದ ಮಹಾಕಾವ್ಯಗಳ ರಚನೆಗೆ ಸುಧೀರ್ಘವಾದ ಪರಂಪರೆಯಿದೆ. ಈ ಪರಂಪರೆಯಲ್ಲಿ ಲಿಖಿತ ಮತ್ತು ಮೌಖಿಕ ರೂಪದ ಮಹಾಕಾವ್ಯಗಳು ರಚನೆ ಗೊಳ್ಳುತ್ತಾ ಬಂದಿವೆ ಅವುಗಳೆ ಇಂದು ನಮ್ಮ ಮುಂದೆ ಇರುವ ಅನೇಕ ಮಹಾಕಾವ್ಯಗಳು, ಜನಪದ ಮಹಾಕಾವ್ಯ ಸಂಪಾದನೆಯ ಕೆಲಸ ಮತ್ತು ಕನ್ನಡದಲ್ಲಿ ಜನಪದ ಮಹಾಕಾವ್ಯಗಳ ಇರುವಿಕೆಯನ್ನು ನೆನಪಿಸಿಕೊಟ್ಟು ಅವುಗಳ ಅಧ್ಯಯನಕ್ಕೆ ಬೇಕಾದ ಒಂದು ವ್ಯವಸ್ಥಿತ ವೇದಿಕೆಯನ್ನು ನಿರ್ಮಿಸಿದವರು ಪ್ರೋ. ಜಿ ಶಂ ಪರಮಶಿವಯ್ಯ ನವರು ಬರೆದ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಎಂಬ ಸಂಶೋಧನ ಪ್ರಬಂಧದಲ್ಲಿ ಜನಪದ ಮಹಾಕಾವ್ಯಗಳ ಸಂಪಾದನೆಗೆ ಜಾನಪದ ವಿದ್ವಾಂಸರು ತೊಡಗಿಸಿಕೊಳ್ಳುವಂಥಹ ಹಲವಾರು ಪ್ರೇರಕ ಸಂಗತಿಗಳಿದ್ದವು, ಅಲ್ಲಿಂದ ಹಿಡಿದು ಇಲ್ಲಿಯವರೆಗೂ ಹಲವಾರು ಜನಪದ ಮಹಾಕಾವ್ಯಗಳು ಸಂಪಾದನೆಗೊಂಡಿವೆ. ಜನಪದ ಮಹಾಕಾವ್ಯದ ಗುಣಲಕ್ಷಣಗಳು ಆಶಯ ಮತ್ತು ಸ್ವರೂಪಗಳ ಬಗೆಗೆ ಚರ್ಚೆಗಳು ನಡೆದಿವೆ. ಜಿ ಶಂ ಪರಮಶಿವಯ್ಯ ಅವರು ಸಂಪಾದಿಸಿದ ಮಂಟೆಸ್ವಾಮೀ ಕಾವ್ಯ. ಡಾ.ಪಿ ಕೆ ರಾಜಶೇಕರ ಅವರು ಸಂಪಾದಿಸಿದ ಮಾದೇಶ್ವರ ಕಾವ್ಯ, ಜನಪದ ಬಸವ ಪುರಾಣ, ಪ್ರೋ. ಹಿ ಚಿ ಬೋರಲಿಂಗಯ್ಯ ಅವರು ಸಂಪಾದಿಸಿದ ಮಂಟೆಸ್ವಾಮಿ ಕಾವ್ಯ, ಚಲುವರಾಜು ಅವರು ಸಂಪಾದಿಸಿದ ಜುಂಜಪ್ಪ, ಡಾ. ಕೇಶವನ ಅವರು ಸಂಪಾದಿಸಿದ ಮಲೇಮಾದೇಶ್ವರ, ಪ್ರೋ. ಎಮ್ ಬಿ ನೇಗಿನಹಾಳ ಅವರು ಸಂಪಾದಿಸಿದ ಕಾವ್ಯ, ಡಾ. ಕೆ ಎಮ್ ಮೇತ್ರಿ ಅವರು ಸಂಪಾದಿಸಿದ ಕುಮಾರರಾಮ ಮತ್ತು ಕೃಷ್ಣಗೋಲ್ಲರ ಮಹಾಕಾವ್ಯ, ಡಾ.ಗಂಗಾಧರ ದೈವಜ್ಞ ಅವರು ಸಂಪಾದಿಸಿದ ಮಾಳಿಂಗರಾಯ ಕಾವ್ಯ, ಡಾ. ವೀರಣ್ಣದಂಡೆ ಅವರು ಸಂಪಾದಿಸಿದ ಜನಪದ ಹಾಲುಮತ ಮಹಾಕಾವ್ಯ, ಅಮೃತ ಸೋಮೇಶ್ವರ ಅವರು ಸಂಪಾದಿಸಿದ ತುಳು ಪಾಡ್ದನ ಸಂಪುಟ ಮುಂತಾದವು ಪ್ರಮುಖ ಸಂಪಾದಿತ ಜನಪದ ಮಹಾಕಾವ್ಯಗಳಾಗಿವೆ.

ವಿಶೇಷವಾಗಿ ಮೌಖಿಕ ರೂಪದಲ್ಲಿ ದೊರೆಯುವ ಮಹಾಕಾವ್ಯಗಳು ದೇಸಿ ಸಂಸ್ಕೃತಿಯ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ, ತುಂಬಾ ಮುಂದೆ ಹೋಗಿವೆ, ನಮ್ಮ ಜನಪದ ದೈವಗಳಾದ ಮಂಟೇಸ್ವಾಮಿ, ಜುಂಜಪ್ಪ, ಮಲೆಮಾದೇಶ್ವರ, ಮೈಲಾರ ಲಿಂಗೇಶ್ವರ, ಬೀರ ಲಿಂಗೇಶ್ವರ, ಮಾಳಿಂಗರಾಯ, ಅಮೋಘಸಿದ್ದೇಶ್ವರ ಮೊದಲಾದವರ ಚರಿತ್ರೆಯನ್ನು. ಜಾತ್ರೆ ಹಬ್ಬಗಳ ವಿಶಿಷ್ಟತೆಯನ್ನ, ಪವಾಡಗಳನ್ನ, ಪರಂಪರೆಯ ದೈವಗಳ ವಿಶೇಷತೆಯನ್ನ ಈ ಮಹಾಕವ್ಯಗಳಿಂದ ನಾವು ತಿಳಿದು ಕೊಳ್ಳಬಹುದು. ಮುಖ್ಯವಾಗಿ ಉತ್ತರ ಕರ್ನಾಟಕದ ಪ್ರಮುಖ ದೈವಗಳಲ್ಲಿ ಅಮೋಘಸಿದ್ದನು ಒಬ್ಬ ಹಾಲುಮತ ಸಮುದಾಯದ ಕುರುಬ ಸಮಾಜದ ಗುರುಪರಂಪರೆಯಲ್ಲಿ ಶ್ರೇಷ್ಠವ್ಯಕ್ತಿಯೆಂದು ಗುರುತಿಸಿ ಕೊಂಡಿದ್ದಾನೆ. ಇತನ ನೆಲೆ ವಿಜಯಪುರದ ಜಿಲ್ಲೆಯ ಅರಕೇರಿ, ಈತನ ಮಕ್ಕಳು ಶಿಷ್ಯ ಪ್ರಶಿಷ್ಯರ ಬಳಗ ತುಂಬ ವಿಸ್ತಾರವಾದುದು. ಈತನು ಕರ್ನಾಟಕ ಮಹಾರಾಷ್ಟ್ರದ ಜನರ ಆರಾದ್ಯ ದೈವವಾಗಿದ್ದಾನೆ. ಇತನ ಪರಿವಾರ ದೈವಗಳ ನೂರಾರು ಗುಡಿ ಗುಂಡಾರಗಳು, ಮತ ಮಂದಿರಗಳು ಇವೆ. ನಿರ್ಧಿಷ್ಟ ಅವಧಿಯಲ್ಲಿ ಆಚರಣೆ, ಸಂಪ್ರದಾಯ, ಜಾತ್ರೆ ಉತ್ಸವ, ಪಲ್ಲಕ್ಕಿಗಳ ಮಿಲನ ಬಹಳ ವಿಶಿಷ್ಟ ರೀತಿಯಲ್ಲಿ ಜರುಗುತ್ತದೆ.

## ಅಮೋಘಸಿದ್ದೇಶ್ವರ ಕುರಿತು

ಸಿದ್ದಪರಂಪರೆಯಲ್ಲಿ ಪ್ರಸಿದ್ಧನಾದ ಅಮೋಘಸಿದ್ಧನನ್ನು ಕಾವ್ಯ ಶಾಸನಗಳಲ್ಲಿ ಅಮೋಗಿದೇವ, ಅಮಾಕಸಿದ್ದ, ಅಮೋಘಸಿದ್ದೇಶ್ವರ ಹೀಗೆ ನಾನಾ ರೀತಿಯಲ್ಲಿ ಕರೆಯಲಾಗುತ್ತದೆ. ಮೌಖಿಕ ಆಕರಗಳಲ್ಲಿ ಇತನ ಬಗ್ಗೆ ಸಮೃದ್ದವಾದ ಮಾಹಿತಿಗಳು ದೊರೆಯುತ್ತವೆ. ಚರಿತ್ರೆಯ ಸ್ಮೃತಿ ವಾಸ್ತವಗಳ ಮುಖಾ ಮುಖಿಯಲ್ಲಿ ಅಮೋಘಸಿದ್ದ ಮತ್ತು ಅವನ ಪರಿವಾರದವರು ತಮ್ಮದೇ ಆದ ವಿಶಿಷ್ಟ ಪರಂಪರಯನ್ನ ರೂಪಿಸಿಕೊಂಡವರು ಈ ಪರಂಪರೆಯ ಸಿದ್ದರು ಇಂದಿಗೂ ಈ ಭಾಗದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಇದ್ದಾರೆ ಪರಂಪರೆಯ ಮೂಲ ಸಿದ್ದರ ಹೆಸರಿನಲ್ಲಿ ಗುಡಿ ಗುಂಡಾರಗಳನ್ನ ಕಟ್ಟಿ ಕಟ್ಟಿಸಿಕೊಂಡು ಅವರ ಹೆಸರಿನಲ್ಲಿ ಜಾತ್ರೆ ಉತ್ಸವಗಳನ್ನ ಆಚರಿಸಿಕೋಳ್ಳುತ್ತಾ ಈ ಪರಂಪರೆಯನ್ನು ವರ್ತಮಾನದೆಡೆಗೆ ತಂದಿದ್ದಾರೆ. ಈ ಪರಂಪರೆಯಲ್ಲಿ ನೂರಾರು ಜನ ಸಿದ್ದರು ದೈವಗಳಾಗಿ ಪೂಜೆಗೊಳ್ಳುತ್ತಾ ಬಂದಿದ್ದರೂ ಅವರ ಕುರಿತು ಒಂದು ಶಿಲಾ ಶಾಸನ ಲಬ್ಯವಿಲ್ಲ. ಭಕ್ತರ ನಾಲಿಗೆ ಮೇಲೆ ಹರಿದಾಡುವ ತೊಂಡಿ

ISBN – 978-93-5526-247-9

ಸಂಪ್ರದಾಯದಲ್ಲಿ ದೊರೆಯುವ ಡೊಳ್ಳಿನ ಹಾಡುಗಳು ಈ ಪರಂಪರೆಯ ಅಧ್ಯಯನಕ್ಕೆ ಪ್ರಮುಖ ಆಕರ.(1)ಅಮೋಘಸಿದ್ದನಿಗೆ ಪದ್ಮಾವತಿ ಹೆಸರಿನ ಹೆಂಡತಿಯಿದ್ದಳು ಈ ತನಿಗೆ ಮಾಸಿದ್ದ, ಮಂಗರಾಯ ಮತ್ತು ಮಲಕಾರಿಸಿದ್ದನೆಂಬ ಮೂವರು ಪುಣ್ಯದ ಮಕ್ಕಳು ನಾಲ್ಕು ಧರ್ಮದ ಮಕ್ಕಳು ಇದ್ದರು,ಅವರೆಂದರೆ1/ ಅವಧೂತಸಿದ್ದ 2/ಬಿಳಿಯಾನೆಸಿದ್ದ 3/ ಸೋಮಣ್ಣಮುತ್ತ್ಯಾ4/ಕನ್ನಮುತ್ತ್ಯಾ ಜೊತೆಗೆ ಒಬ್ಬ ರೆಬಕವ್ವ ಎಂಬ ಹೆಣ್ಣು ಮಗಳು ಇದ್ದಳು.

## ಅಮೋಘಸಿದ್ದನ ಮೊಕ್ಕಳು ಮೊಮ್ಮಕ್ಕಳ ವಿವರ

1)ಅವಧೂತಸಿದ್ದನ ಮಕ್ಕಳು–1) ಸಾಲಸಿದ್ದ 2) ಮಳಿಗಾಲಸಿದ್ದ 3)ಒಗೋಪ್ಪೋಡೆಯ 4) ನಾಗಪ್ಪೋಡೆಯ 5) ಕೆಂಚಸೋಮಯ್ಯ

2) ಬಿಳಿಯಾನೆಸಿದ್ದನ ಮಕ್ಕಳು– 1) ಬಳ್ಳೋಗಿಸಿದ್ದ 2) ಯೋಗಸಿದ್ದ 3)ಪದ್ಮೋಗಿಸಿದ್ದ 4) ಪಂಚ ಪೂಜಾದಗೌಡ 5) ಶೀಲಸಿದ್ದ

3) ಸೋಮಣ್ಣಮುತ್ತ್ಯ – 1) ಹಿರಿಮಲ್ಲಪ್ಪ ಒಡೆಯಾ.2 ಚಿಕ್ಕಮಲ್ಲಪ್ಪ ಒಡೆಯಾ 3) ಮುತ್ತೆಪ್ಪ ಒಡೆಯಾ 4) ಮಲಕಾರಿಸಿದ್ದ 5) ಒಗಣ್ಣ ಮುತ್ತ್ಯಾ

4) ಕನ್ನಮುತ್ತ್ಯಾ –1) ಕರಿಯೋಗಿಸಿದ್ದ 2) ಮಲಕಾರಿಸಿದ್ದ 3) ಮಾದಣ್ಣಸಿದ್ದ 4) ಜ್ಯೋತಿ ಲಕ್ಕಪ್ಪ 5) ಬ್ರಹ್ಮ ಒಡೆಯಾ 6)ತಂಗಿ ಗುಬ್ಬೆವ್ವ[(2)]

ಹೀಗೆ ಮಕ್ಕಳು ಮೊಕ್ಕಳು ಮೊಮ್ಮಕ್ಕಳು, ಶಿಷ್ಯರು, ಪ್ರಶಿಷ್ಯರಾಗಿ ಬೆಳೆದ ಈತನ ಸಂತತಿಯಿಂದ ಮತ್ತೆ ನೂರೊಂದು ಸಾವಿರದ ಒಂದು ಸಾವಿರದ ಏಳನೂರು ಹೀಗೆ ಈ ಸಂತತಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಈ ಸಂತತಿಯಿಂದ ಬಂದವರನ್ನ ಒಡೆಯರು ಎಂದು ಕರೆಯಲಾಗುತ್ತದೆ. ಇನ್ನು ಕೆಲವರು ಬ್ರಹ್ಮಚರ್ಯವನ್ನಾಚರಿಸಿ ಜನಕಲ್ಯಾಣ ಮಾಡುತ್ತ ಬೇರೆ ಬೇರೆ ಪ್ರದೇಶದಲ್ಲಿ ನೆಲೆ ನಿಂತಿದ್ದಾರೆ. ಹೀಗೆ ಅಮೋಘಸಿದ್ದನ ಪರಿವಾರ ದೈವಗಳು ಬೃಹದಾಕಾರವಾಗಿ ಬೆಳೆದು ಕರ್ನಾಟಕ ಹಾಗೂ ಮಹಾರಾಷ್ಟ್ರದ ಎಲ್ಲ ಕಡೆಯಲ್ಲೂ ನೆಲೆ ನಿಂತಿರುವುದನ್ನು ನಾವು ಕಾಣಬಹುದಾಗಿದೆ.

.

## ಅಮೋಘಸಿದ್ದನ ಪರಿವಾರದ ಜಾತ್ರೆಗಳ ವ್ಯಶಿಷ್ಟ್ಯ

ಅಮೋಘಸಿದ್ಧನ ಸಿದ್ದಿ ಸಾಧನೆಯ ಕ್ಷೇತ್ರವಾದ ಮಮ್ಮಟೆಗುಡ್ಡದಲ್ಲಿ ಪ್ರತಿ ವರ್ಷ ಛಟ್ಟಿ ಅಮಾವಾಸ್ಯಗೆ ಜಾತ್ರೆ ನಡೆಯುತ್ತದೆ. ಅಮೋಘಸಿದ್ದನ ಮೋಮ್ಮಕ್ಕಳಲ್ಲಿಯೇ ಅತ್ಯಂತ ಪ್ರಭಾವಶಾಲಿಯಾದ ಉಮದಿ ಮಲಕಾರಿಸಿದ್ದನ ಜಾತ್ರೆ ದೀಪಾವಳಿ ಹಾಗೂ ಉಗಾದಿಯಂದು ವರ್ಷದಲ್ಲಿ ಎರಡು ಸಲ ನಡೆಯುತ್ತದೆ. ಈ ಜಾತ್ರೆಗಳ ವ್ಯಶಿಷ್ಟ್ಯವೆನೆಂದರೆ ಅಮೋಘಸಿದ್ದನ ಪರಂಪರೆಯ ಸಿದ್ದರ ಪಲ್ಲಕ್ಕಿಗಳ ಮಿಲನ, ಮಿಲನಕ್ಕೆ ಪಲ್ಲಕ್ಕಿಗಳ ಸಂಖ್ಯೆ ಸಹಜವಾಗಿ ಮಮ್ಮಟೆ ಗುಡ್ಡದಲ್ಲಿ ಜಾಸ್ತಿ ಬರುತ್ತದೆ, ನಂತರದ ಸ್ಥಾನ ಉಮದಿ ಮಲಕಾರಿಸಿದ್ದನ ಜಾತ್ರೆಗೆ ಈ ಎರಡು ಜಾತ್ರೆಗೆ ಬಲವಾದ ಕೊಂತೆವ್ವನ ಪಲ್ಲಕ್ಕಿ ಬರುವುದು ವಿಶೇಷ. ಇದನ್ನ ಸಿದ್ದರ ಮಹಾ ಮಿಲನವೆಂದೇ ಕರೆಯಬಹುದು. ಅಪರೂಪಕ್ಕೆ ಬೇಟಿಯಾಗುವ ಈ ಸಿದ್ದರು ಅಗಲಿ ಹೊಗಲು ಮನಸ್ಸೆ ಇಲ್ಲದಂತೆ ಭಾವಾಭಿನಯ ಮಾಡುವುದು ನೂಡುವ ಭಕ್ತರ ಕಣ್ಣಲ್ಲಿ ನೀರು ಬರಿಸುತ್ತದೆ. ಐದೈದು ಪಲ್ಲಕ್ಕಿಗಳು ಒಂದಕ್ಕೊಂದು ಮುಖ ಸೇರಿಸಿಕೊಂಡು ಆಡುವುದನ್ನು ನೋಡಿದರೆ ಒಬ್ಬರಿಗೋಬ್ಬರು ತಬ್ಬಿಕೋಂಡು ನಿಂತಿರುವಂತೆ ಬಿಟ್ಟು ಹೋಗಲು ಮನಸ್ಸೆ ಇಲ್ಲದಂತೆ ಕಾಣಿಸುತ್ತಾರೆ.

ಈ ಜಾತ್ರೆಯ ವಿಶೇಷವೇ ತಮ್ಮ ವಂಶದ ಸಿದ್ದರೆನ್ನಲ್ಲಾ ಜಾತ್ರೆಯ ಹೆಸರಿನಲ್ಲಿ ಒಂದೆಡೆ ಕಲೆ ಹಾಕುವ ಉದ್ದೇಶವಾಗಿದೆ. ಎಲ್ಲ ಸಿದ್ದರು ಬೇರೆ ಬೇರೆ ಕಡೆಗೆ ಇರುವುದರಿಂದ, ಈ ಜಾತ್ರೆಯ ಸಂದರ್ಭದಲ್ಲಿ ಎಲ್ಲರೂ ಬೆಟ್ಟಿಯಾಗಿ ತಮ್ಮ ಮೂಲವನ್ನು ನೆನಪಿಸಿಕೊಳ್ಳುವುದಾಗಿದೆ. ಇಲ್ಲಿ ಅಣ್ಣ ತಮ್ಮಂದಿರರ ಸಂಬಂಧ ತಾಯಿ ಮಕ್ಕಳ ಸಂಬಂದ ಹೀಗೆ ಸಂಬಂಧಗಳ ಬೆಸುಗೆಯೇ ಇಲ್ಲಿ ನಡೆಯುತ್ತದೆ ಅದನ್ನು ನೋಡುವುದೇ ಒಂದು ಸಂತಸ, ಇಲ್ಲಿ ಇನ್ನೊಂದು ವಿಶೇಷವೆನೆಂದರೆ ಪಲ್ಲಿಕ್ಕಿಗಳ ಮಿಲನದ ಸಂದರ್ಭದಲ್ಲಿ ಭಕ್ತರು ತಂದ ಭಂಡಾರ ನೆಲ ಮುಗಿಲ ಹಳದಿವರ್ಣಮಯವಾಗಿಸುತ್ತೆ ಅಮೋಘಸಿದ್ದ ಪರಂಪರೆಯಲ್ಲಿ ತನ್ನ ಕುರುಬ ಮೂಲದ ಭಂಡಾರವನ್ನು ತೊರೆಯದೇ ಇರುವುದರ ಸಂಕೇತವಾಗಿದೆ. ಅಮೋಘಸಿದ್ದ ಪರಂಪರೆಯಲ್ಲಿ ದೇವರಿಗೆ ಸಂಬಂದಿಸಿದ ಜರುಗುವ ಆಚರಣೆಯಲ್ಲಿ

ISBN – 978-93-5526-247-9

ಜಾತ್ರೆಗಳ ನಂತರದ ಸ್ಥಾನ ಹಬ್ಬಗಳಿಗೆ ಇದೆ, ಜಾತ್ರೆಗಳು ಗುಡಿಯಲ್ಲಿ ನಡೆದರೆ ಹಬ್ಬಗಳು ಭಕ್ತರ ಬಯಕೆ ಇಚ್ಛೆಗನುಸಾರವಾಗಿ ಭಕ್ತರ ಮನೆಯಲ್ಲಿ ನಡೆಯುತ್ತದೆ. ಅಮೋಘಸಿದ್ಧ ಭಕ್ತರ ಮನೆಯಲ್ಲಿ ಏನೇ ಶುಭ ಕಾರ್ಯ ನಡೆಯುವದಿದ್ದರೂ ತಮ್ಮ ಮನೆಯಲ್ಲಿ ದೇವರು ಕರೆಯಿಸಿಕೋಳ್ಳುವುದು ವಾಡಿಕೆ ಇದೆ ತಮ್ಮ ಶಕ್ತಿಗೆ ಅನುಸಾರವಾಗಿ ಪಲ್ಲಕ್ಕಿಗಳನ್ನ ಕರೆಸಿಕೋಳ್ಳುತ್ತಾರೆ. ಒಂದು ಅಥವಾ ಒಂದಕ್ಕಿಂತ ಹೆಚ್ಚು ಪಲ್ಲಕ್ಕಿಗಳು ಕರೆಯಿಸಿಕೋಳ್ಳಬಹುದು. ಆ ಕರೆಸಿಕೊಂಡ ಪಲ್ಲಕ್ಕಿಗಳಲ್ಲಿ ಉಮದಿ ಮಲಕಾರಿ ಸಿದ್ದನ ಪಲ್ಲಕ್ಕಿಯ ಕುಣಿತ ವಿಶೇಷವಾಗಿದೆ.

ಮಲಕಾರಿ ಸಿದ್ದನು ನಸುಕಿನ ನಾಲ್ಕು ಗಂಟೆಯ ಸುಮಾರಿಗೆ ಹಣೆಗೆ ದಂಡಿ ಕಟ್ಟಿಕೊಂಡು ತಾಯಿಯ ಸೆರಗಿನಲ್ಲಿ ಆಡಿ ಆಮೇಲೆ ಕುಣಿತ ಪ್ರಾರಂಭಿಸುತ್ತಾನೆ, ಭಕ್ತರು ತಂದ ಹೂಗಳಿಂದ ಸಿದ್ದಗೊಳಿಸಿದ ರಂಗದ ಮೇಲೆ ಕುಣಿಯುವ ದೃಶ್ಯ ಅತ್ಯಂತ ರಮಣೀಯವಾದುದು, ಮದ್ದಳೆಯ ಲಯಬದ್ಧ ನಾದಕ್ಕೆ ಕೊಳಲು ನಾದದ ಶೃತಿ ಸೇರಿ ತುಂಬಾ ಇಂಪಾಗಿ ಕೇಳಿಸುತ್ತದೆ. ಕೊಂತೆಪ್ಪನ ಪಲ್ಲಕ್ಕಿ ಇದ್ದರೆ ಉಡಿತುಂಬುವ ಕಾರ್ಯಕ್ರಮ ನಡೆಯುತ್ತದೆ ಹೀಗೆ ಅಮೋಘಸಿದ್ಧ ಪರಿವಾರ ದೇವತೆಗಳ ಸುತ್ತಲೂ ಜಾತ್ರೆ ಉತ್ಸವ ಹಬ್ಬಗಳಿರುವಂತೆ ಅನೇಕ ನಂಬಿಕೆ ಆಚರಣೆಗಳು ಇವೆ, ಕುಂಭ ಕೂಡಿಸುವುದು, ಕೌಲು ಕಟ್ಟುವುದು, ಕಟ್ಟೆಮುಟ್ಟುವುದು, ನಿವಾಳಿಕೆ ಚಿಮ್ಮಾಳಿಕೆ, ಮತ್ತು ವುಗಾಳಿಕೆ, ಹೇಳಿಕೆಗಳು ಮುಂತಾದ ಆಚರಣೆಗಳು ವಿಶಿಷ್ಟವಾಗಿವೆ.

ಕೌಲು ಕಟ್ಟುವುದು – ದೇವರು ಹಾಗೂ ಭಕ್ತರ ನಡುವೆ ಅವಶ್ಯಕತೆ ಇಲ್ಲದೆ ನಡೆಯುವ ನಂಬಿಕೆಯಲ್ಲಿ ಕೌಲು ಕಟ್ಟುವುದು, ತುಂಬಾ ವಿಶಿಷ್ಟವಾದುದು. ದೇವರು ಹಾಗೂ ಭಕ್ತರ ನಡುವೆ ನೇರ ಸಂಪರ್ಕದ ನಂಬಿಕೆ ಇದೆ, ಕೌಲು ಎಂದರೆ ಕರಾರು ಅಥವಾ ಒಪ್ಪಂದ ಎಂಬ ಅರ್ಥವಿದೆ. ದೇವರು ಹಾಗೂ ಭಕ್ತರ ನಡುವೆ ನಡೆದ ಒಪ್ಪಂದವನ್ನ ನಾವಿಲ್ಲಿ ಕಾಣುತ್ತೇವೆ. ಭಕ್ತನಾದವನು ಒಂದು ಸಂಕಲ್ಪವನ್ನು ಇಟ್ಟುಕೊಂಡು ದೇವರಲ್ಲಿ ಹೋಗಿ ಆ ಸಂಕಲ್ಪ ಇಟ್ಟುಕೊಂಡು ದೇವರಲ್ಲಿ ಹೋಗಿ ಆ ಸಂಕಲ್ಪ ಈಡೆರುವುದೋ ಇಲ್ಲವೋ ಎಂಬುದನ್ನು ತಿಳಿದು ಕೋಳ್ಳುತ್ತಾರೆ. ದೇವರ ಮೂರ್ತಿಯ ಮೇಲೆ ಪತ್ರೆಯನ್ನಾಗಲಿ, ಹೂವನ್ನಾಗಲಿ ಎಸೆಯುತ್ತಾರೆ. ಸಂಕಲ್ಪ ಮಾಡುವ ವ್ಯಕ್ತಿ ದೇವರ ಎದುರಿಗೆ ಕುಳಿತು ಕೋಳ್ಳುತ್ತಾನೆ, ದೇವರ ಬಲಭಾಗದ ಹೂ/ಪತ್ರೆ ಬಿದ್ದರೆ ತಮ್ಮ ಸಂಕಲ್ಪ ಈಡೇರುತ್ತದೆ ಎಂದು ಭಾವಿಸುತ್ತಾರೆ, ಎಡಬದಿಯಲ್ಲಿ ಬಿದ್ದರೆ ತಮ್ಮ ಕೆಲಸ ಈಡೇರುವುದಿಲ್ಲ ಎಂದು ತಿಳಿದು ಕೊಳ್ಳುತ್ತಾರೆ. ತಮ್ಮ ಸಂಕಲ್ಪ ಈಡೇರುವ ಭರವಸೆ ನೀಡಿದ ಸಂಧರ್ಭದಲ್ಲಿ ಮನಸ್ಸಿನಲ್ಲಿಯೇ ಹರಕೆ ತಿರಿಸುವುದಾಗಿ ಹೇಳಿಕೊಂಡು ಬರುತ್ತಾರೆ. ಅಮೋಘಸಿದ್ದನ ಪರಂಪರೆಯಲ್ಲಿ ಕೌಲು ಕಟ್ಟುವುದಕ್ಕೆ ತುಂಬಾ ಮಹತ್ವದ ಸ್ತಾನವಿದೆ.

ಹೇಳಿಕೆಗಳು – ಕುರುಬ ಸಮಾಜದ ಮಾರಾಯರು ಸೃಷ್ಟಿಸಿದ ಮೌಖಿಕ ಸಾಹಿತ್ಯದಲ್ಲಿ ಹೇಳಿಕೆಗಳಿಗೆ ಅಗ್ರಸ್ಥಾನವಿದೆ. ತನನ್ನು ನಂಬಿದ ಭಕ್ತರಿಗೆ ಮಳೆ ಬೆಳೆ ಕುರಿತು ಜನ ಜಾನುವಾರಗಳ ಕುರಿತು, ವ್ಯಾಪಾರ ರಾಜಕಾರಣಿಗಳ ಕುರಿತು ಹೇಳಿಕೆಗಳನ್ನ ಹೇಳುತ್ತಾರೆ, ಇವರು ಯಾವಾಗಲು ನಿಸರ್ಗದ ಒಡನಾಟದಲ್ಲಿ ಸದಾ ಜೀವಿಸುವ ಇವರಿಗೆ ನಿಸರ್ಗದಲ್ಲಿ ನಡೆಯುವ ಎಲ್ಲ ಏರು–ಪೇರುಗಳ ಮೇಲೆ ಮಳೆ ಬೆಳೆಯ ಲೆಕ್ಕಾಚಾರ ಹಾಕುವ ಸಾಮರ್ಥ್ಯ ಬಂದಿರುತ್ತದೆ. ಇದೊಂದು ರೀತಿಯ ಪಾರಂಪರಿಕ ಜ್ಞಾನವೂ ಹೌದು. ಹೇಳಿಕೆಗಳನ್ನ ಜಾತ್ರ ಉತ್ಸವಗಳ ಸಂದರ್ಭದಲ್ಲಿ ಭಕ್ತ ಸಮುದಾಯದ ಎದುರಿಗೆ ಹೇಳಿಕೆಗಳನ್ನ ಮಾಡುತ್ತಾರೆ. ಊರು ಬಯಲಿನಲ್ಲಿ ನಿಂತು ವಿಸ್ತಾರವಾದ ಜಾಗದಲ್ಲಿ ಭಕ್ತರ ಸಮ್ಮುಖದಲ್ಲಿ ಹೇಳಿಗಳನ್ನ ಮಾಡುತ್ತಾರೆ.

ಉದಾ– ಹೇಳಿಕೆಗಳು 1 – 'ಮುಚ್ಚಿಟ್ಟ ಮಾತ ಬಿಚ್ಚಿಟ್ಟ ಹೇಳಿದ್ರ ಹುಚ್ಚು ಹಿಡಿದಿತ್ತ'

2 – 'ಮಳಿ ಮಲನಾಡ ನಾಗ ಒಂದು ಕಿವಿ ಹಾಸ್ಯದ ಒಂದು ಕಿವಿ ಹೊಚ್ಯಾದ
ಮುಂದಿನ ಮಿರಗಾತನ ಮಳಿ ಇಲ್ಲಲೆ ಲೌಡಿ ಎಂದು ನುಡಿದ'

ಹೇಳಿಕೆ ಎನ್ನುವ ಶಬ್ದ ಕೇಳಿಸಿಕೊಳ್ಳುವವನನ್ನು ಪೂರ್ವದಲ್ಲಿ ಗ್ರಹಿಸಿಕೊಳ್ಳುವಂತೆ ಮಾಡುತ್ತದೆ. ಈ ಆಚರಣೆಯು ಪೂರ್ಣ ಪ್ರಮಾಣದಲ್ಲಿ ಸಮುದಾಯ ಮುಖಿಯಾಗಿದೆ. ತನ್ನನ್ನು ನಂಬಿದ ಭಕ್ತರ ಇಡೀ ಬದುಕನ್ನು ಕುರಿತು ಇಲ್ಲಿನ ಹೇಳಿಕೆಗಳು ಧನಾತ್ಮಕವಾಗಿ ಹೇಳುತ್ತವೆಯಾದ್ದರಿಂದ ಇಂದಿನವರೆಗೂ ಹೇಳಿಕೆಗಳಿಗೆ ಭಕ್ತರ ಹೃದಯದಲ್ಲಿ ಬಹು ದೊಡ್ಡ ಪ್ರಮಾಣದ ಗೌರವವಿದೆ. ಉಗಾಳಿಕೆ, ಹರಕೆ, ಹೇಳಿಕೆ ಎಂಬುದನ್ನು ಒಡೆಯರ ಮೌಖಿಕ

ಸಾಹಿತ್ಯ ಮತ್ತು ಭಕ್ತರ ಬಗೆಗಿನ ನಂಬಿಕೆ ಗೌರವ ಇಲ್ಲಿ ನೋಡಬಹುದು. ಹೀಗೆ ಅಮೋಘಸಿದ್ದನ ಕುರಿತು ಹಲವಾರು ವಿಶಿಷ್ಟ ರೀತಿಯಲ್ಲಿ ಜಾತ್ರೆ, ಉತ್ಸವಗಳು ಒಡೆಯರ ಮೌಖಿಕ ರಚನೆಗಳು ನಡೆಯುತ್ತವೆ.

## ಅಡಿ ಟಿಪ್ಪಣಿ

1) ಅರಕೇರಿ ಅಮೋಘಸಿದ್ದೇಶ್ವರ ಡಾ. ಚನ್ನಪ್ಪ ಕಟ್ಟಿ (ಪುಟ ಸಂ 3)

2) ಶ್ರೀ ಸಿದ್ಧ ಸಂಪ್ರದಾಯ (ಮರಾಠಿ) ಯಲ್ಲಿದೆ ಭಿಮಾಶಂಕರ ಸಿದ್ದರಾಮ ಮಾತ್ರೆ (ಪುಟ ಸಂ 24)

## ಪರಾಮರ್ಶನ ಗ್ರಂಥಗಳು


1. ಅಮೋಘಸಿದ್ದ ಜನಪದ ಮಹಾಕಾವ್ಯ : ಡಾ. ಚನ್ನಪ್ಪ ಕಟ್ಟಿ 2020. ಪ್ರಕಾಶಕರು; ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
2. ಅಮೋಘಸಿದ್ದ ಪರಂಪರೆ: ಡಾ. ಚನ್ನಪ್ಪ ಕಟ್ಟಿ–2012 .ಪ್ರಕಾಶಕರು;ವಚನ ಪಿತಾಮಹ ಪ,ಗು. ಹಳಕಟ್ಟಿ ಸಂಶೋಧನಾ ಕೇಂದ್ರ ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ವಿಜಯಪುರ.
3. ಹಾಲುಮತ ಸಂಸ್ಕೃತಿ : ಡಾ. ಎಫ್ ಡಿ ಹಳ್ಳಿಕೇರ ಪ್ರಕಾಶಕರು; ಯಶೋದ ಪ್ರಕಾಶನ ಹೊಸಪೇಟೆ.
4. ಶ್ರೀ ಸಿದ್ದ ಸಂಪ್ರದಾಯ : (ಮರಾಠಿಯಲ್ಲಿದೆ) ಸಂಶೋಧಕ ಮತ್ತು ಸಂಕಲಕರು; ಶ್ರೀ ಭಿಮಾಶಂಕರ ಸಿದ್ದಾರಾಮ ಮಾತ್ರೆ ಮತ್ತು ಶ್ರೀ ರೇವಣಸಿದ್ದ ಮಹಾದೇವ ಹಾಲೋಳಿ; ಪ್ರಕಾಶನ; ಶ್ರೀ ಶೀಲಸಿದ್ದವ ವಶಿಷ್ಟ ಆಶ್ರಮ ಅಚೇಗಾವ
5. ಶ್ರೀ ಸಿದ್ದ ಸಿರಿ ಒಡೆಯರ : (ಶ್ರೀ ಅಮೋಘಸಿದ್ದೇಶ್ವರ ಚರಿತಾಮೃತ ಸಂಪುಟ 1)ಶ್ರೀ ಮದಗೊಂಡ ಧೊಂಡಪ್ಪ
   ಶ್ರೀ ಅಮೋಘಸಿದ್ದೇಶ್ವ ಪ್ರಕಾಶನ ಶಿರವಳ ತಾ; ದಕ್ಷಿಣ ಸೋಲಾಪುರ 1997
6. ಸಿದ್ದ ಸಾಹಿತ್ಯ : ಮ ಸು ಕೃಷ್ಣಮೂರ್ತಿ, ಪ್ರಸಾರಂಗ; ಮೈಸೂರು ವಿಶ್ವವಿದ್ಯಾನಿಲಯ ಮೈಸೂರು


***

ISBN – 978-93-5526-247-9

## 47.ಜನಪದ ಮಹಾಕಾವ್ಯಗಳಲ್ಲಿ 'ವಿವಾಹ' ಒಂದು ಅವಲೋಕನ

**ಡಾ.ಪ್ರೇಮಾ ಅಪಚಂದ**

ಮಾನವನ ವಿಕಾಸದ ಯಾವ ಹಂತದಲ್ಲಿ ಈ ವಿವಾಹ ಅಥವಾ ಮದುವೆ ಎಂಬ ವ್ಯವಸ್ಥೆ ಉಗಮವಾಯಿತ್ತೆಂದು ನಿರ್ಧರಿಸುವುದು ಕಷ್ಟ. ಇದು ಜಗತ್ತಿನ ಎಲ್ಲ ಸಮಾಜದಲ್ಲಿಯೂ ಕಂಡುಬರುತ್ತದೆ. ಇದಕ್ಕೆ ಸಾಮಾಜಿಕವಾದ, ಆರ್ಥಿಕವಾದ, ಧಾರ್ಮಿಕವಾದ, ನೈತಿಕವಾದ ಮಹತ್ವವಿದೆ. ಪ್ರಾಣಿಗಳಂತೆ ಬದುಕುತ್ತಿದ್ದ ಕಾಡು ಮಾನವ ವಿವೇಕ ವಿಕಾಸವಾದಂತೆ ಒಂದೆಡೆ ನೆಲೆನಿಂತು ತನ್ನ ಜೊತೆಗಾತಿ ಅಥವಾ ಜೊತೆಗಾರನೊಂದಿಗೆ ಕೂಡಿ ಬದುಕಲಿಕ್ಕೆ ಪ್ರಾರಂಭವಾದಾಗಲ್ಲೇ ವಿವಾಹ ಅಥವಾ ಮದುವೆ ಎಂಬ ವ್ಯವಸ್ಥೆ ಹುಟ್ಟಿಕೊಂಡಿತು. ಋತುಕಾಲ ನಿರ್ಬಂಧವಿಲ್ಲದ ಸತತ ಕಾಮವಾಸನೆಯ ತೃಪ್ತಿಗಾಗಿ ಗಂಡು–ಹೆಣ್ಣುಗಳ ಸಹಚರ್ಯವು ಸಹಜವಾಗಿ ಬರತೊಡಗಿತು. ಮುಂದೆ ಸ್ವಚ್ಛಂದವಾಗಿ ನಡೆಸುವ ಲೈಂಗಿಕ ವ್ಯವಹಾರಕ್ಕೆ 'ವಿವಾಹ ಅಥವಾ ಮದುವೆ' ಎಂಬ ಚೌಕಟ್ಟು ನಿರ್ಮಾಣವಾಯಿತು. ಸಮಾಜಶಾಸ್ತ್ರಜ್ಞರ ಹೇಳಿಕೆಯಂತೆ ಸ್ತ್ರೀ ಪುರುಷರು ಸಮಾಜ ನಿಶ್ಚಿತಪಡಿಸಿದ ನಿಯಮಗಳಿಗೆ ಅನುಸಾರವಾಗಿ ಬಹಿರಂಗದಲ್ಲಿ ಜೊತೆಗೂಡಿ ಪತಿ–ಪತ್ನಿಯಾಗಿ ಬಾಳುವುದೆ ಮದುವೆ ಅಥವಾ ವಿವಾಹ.

ಸ್ತ್ರೀ–ಪುರುಷರು ಜೊತೆಯಾಗಿ ಬದುಕಲು ಸಮಾಜವು ಅನುಮತಿ ನೀಡುವ ಸಂದರ್ಭವೆ ಸಮಾರಂಭವಾಗಿ, ಅದಕ್ಕೆ ಕೆಲವು ವಿಧಿ–ವಿಧಾನಗಳು ನಿರ್ಧರಿಸಲ್ಪಟ್ಟವು. ಅಂತಹ ವಿಧಿ–ವಿಧಾನಗಳು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ನಡೆಯುತ್ತಿರುವುದನ್ನು ಜನಪದ ಮಹಾಕಾವ್ಯಗಳು ವಿಧಿತಪಡಿಸುತ್ತವೆ. ಈ ಜನಪದ ಮಹಾಕಾವ್ಯಗಳನ್ನು ನೋಡಿದರೆ ಅವರಲ್ಲಿ ತಮ್ಮ ತಮ್ಮ ಸಂಗಾತಿಗಳ ಆಯ್ಕೆಯನ್ನು ತಾವು ತಾವೇ ಮಾಡಿಕೊಳ್ಳುವ ಬದಲಾಗಿ ತಂದೆ–ತಾಯಿಯರೇ ಮಗನಿಗೆ ಹೆಣ್ಣನ್ನು ಅಥವಾ ಮಗಳಿಗೆ ಗಂಡನ್ನು ನೋಡಿ ಮದುವೆಯನ್ನು ಮಾಡುವ ಪದ್ಧತಿ ಇದ್ದುದ್ದು ಕಂಡು ಬರುತ್ತದೆ. ಸೂಕ್ತ ಕಾಲದಲ್ಲಿ ಮಕ್ಕಳಿಗೆ ಮದುವೆ ಮಾಡಬೇಕಾದುದು ಪಾಲಕರ ಜವಾಬ್ದಾರಿ ಎಂದು ಅರಿತಿದ್ದ ಅವರು–

"ನೋಡಪ್ಪ ಮಗನೇ ನೀಲೇಗೌಡ
ನಮಗೆ ನೀನು ಕಿರಿ ಮಗನು
ಬಹಳ ಹೆಚ್ಚಳದಲಿ ಸಂತೋಷದಲಿ ಲಗ್ನ ಮಾಡ್ತೀವಿ
ಏಳೇಳು ಹದಿನಾಲ್ಕು ದೊಡ್ಡಿ ಇವೆ
ಆ ದೊಡ್ಡಿಯೊಳಗೆ ಹೆಣ್ಣು ನೋಡ್ಕೊಂಡು ಬತ್ತೀವಿ".[1]

ಎಂದು ನುಡಿದು ಹೆಣ್ಣನ್ನು ಹುಡುಕಲು ಹೊರಡುತ್ತಿದ್ದರು. ತಂದೆ–ತಾಯಿ ಮನೆಯವರಷ್ಟೇ ಅಲ್ಲದೇ, ಹಿತೈಷಿಗಳೂ, ಊರ ಪ್ರಮುಖರೂ, ಅವರು ಬೇರೆ ಬೇರೆ ಜಾತಿಯವರೆ ಆದರೂ ಕೂಡಾ ಹೆಣ್ಣನ್ನು ನೋಡಲು ಹೋಗುವುದರ ಚಿತ್ರ ಕಾಣಸಿಗುತ್ತದೆ. ಅದರಲ್ಲೂ ವ್ಯಕ್ತಿಗೆ ಹತ್ತಿರದ ಸಂಬಂಧಿಕರು ಇಲ್ಲವೆಂದಾದರೆ ಈ ಹಿತೈಷಿಗಳೇ ಜವಾಬ್ದಾರಿ ವಹಿಸುತ್ತಿದ್ದರು. ಅಂಥವರೆಲ್ಲರೂ ಸೇರಿ–

"ನಿನಗೆ ಲಗ್ಗೆ ಮಾಡ್ತೀವಿ ನಾವು
ಅಂತ ರೈತ ಶಾನುಭೋಗ್ರು
ತಲೆವಾರಿನ್ನವರು ಊರಾ ಬಿಟ್ರು".[2]

ಹೆಣ್ಣನ್ನು ನೋಡಲು ಕೇಳಲು ಹೊರಡುತ್ತಿದ್ದರು. ಒಂದುವೇಳೆ ತಮಗೆ ಮೆಚ್ಚಿಗೆಯಾಗುವ ವಧು ಸಿಗದಿದ್ದರೆ ಸ್ವತಃ ವರನಿಗೆ ಹೆಂಡತಿಯಾಗುವವಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡುತ್ತಿದ್ದರು.

ತನಗೆ ಒಪ್ಪಿಗೆಯಾಗಬಹುದಾದ ಹೆಣ್ಣನ್ನು ಕಂಡು ಮಾತಾಡಿಸಿದರೆ ಆ ಹೆಣ್ಣು ಸಲಿಗೆ ವಹಿಸಿ ಆತನನ್ನು ನೋಡುತ್ತಾ ಮಾತಾಡದೇ–

"ಆವಾಗ ಸಂಕಮ್ಮ ಮ್ಯಾಲಕೆ ಆಂತು ನೋಡ್ನಿಲ್ಲ.
ಕೆಳಗೆ ಬಕ್ಕೊಂಡು".[3]

ISBN – 978-93-5526-247-9 

ಮಾತಾಡುತ್ತಿದ್ದಳು. ಅಂದರೆ ಆಕೆಗೆ ಒಪ್ಪಿಗೆಯಾಗಿದ್ದರೂ ಅದನ್ನು ನೇರವಾಗಿ ಹೇಳದೇ ತನ್ನ ತಂದೆಯನ್ನು ಕೇಳೆಂದು ಹೇಳುವಲ್ಲಿ ಹೆಣ್ಣಿನ ಸದ್ಗುಣವು ವ್ಯಕ್ತವಾಗುವುದು. ಸಂಕಮ್ಮಳನ್ನು ಕಂಡು ಮಾತಾಡಿಸಿದ ನೀಲೇಗೌಡನು–

"ತನ್ನ ಗ್ವಾಟೆವೊಳ್ಗೆ ಮಡಗಿದ್ದ ಮ್ಯಾಣಗಂಪಣದ ಚೀಲ್ದಲ್ಲಿ
ಪಂಚಮುಖದ ಕವ್ಡೆ ಬಿಟ್ಟು ನೋಡ್ದ
ಶಾಸ್ತ್ರ ಸರಿಯಾಗಿ ಬಂದುಬಿಡ್ತು
ಶಿಲ್ಪಿ ಪಂಚಾಂಗ ಒಡ್ದು ಓದ್ದ
ಸಂಕಮ್ಮುನ್ಗೂ ನೀಲೇಗೌಡ್ಗೂವೆ
ಹೆಸರು ಬಲ ಗುರ್ಬಲ ಕೂಟ ಗಣ ಸರಿಯಾಗಿ ಬಂದುಬುಡ್ತು".[4]

ಎಂಬ ಮಾತನ್ನು ಅವಲೋಕಿಸಿದರೆ ಶಿಷ್ಟ ಸಂಪ್ರದಾಯದ ಜಾತಕಗಳನ್ನು ನೋಡಿ ಮದುವೆ ನಿರ್ಧರಿಸುವಂತೆ ಅವರದೇ ಆದ ರೀತಿಗಳಲ್ಲಿ ಕೂಟ ಗಣಗಳನ್ನು ನೋಡಿ ಕೂಡಿ ಬಂದರೆ ಮಾತ್ರ ಮದುವೆಯನ್ನು ನಡೆಸುವ ಪದ್ಧತಿಯು ಇದ್ದುದ್ದು ಕಂಡು ಬರುತ್ತದೆ. ಇಷ್ಟೆಲ್ಲ ವ್ಯವಸ್ಥೆ ಆದಮೇಲೆ ಮದುವೆಯನ್ನು ನಿರ್ಧರಿಸುವಾಗ ಮುಖ್ಯವಾಗಿ–

"ಅವರ ತಂದೆ ತಾಯಿ ಕರೆದವರೆ
ಅಣ್ಣ ತಮ್ಮನ ಕರೆದವರೆ
ಕುಲದೋರ್ನೆಲ್ಲ ಕೂಡ್ಸವರೆ
ಅಕ್ಕತಂಗೀರ ಕರೆದವರೆ
ಜಾತಿಯರ್ನೆಲ್ಲ ಸೇರಿಸ್ಯವರೆ
ಸೇರಿ ಮಾತನ್ನಾಡವರೆ".[5]

ಹೀಗೆ ಗುರುಹಿರಿಯರು ಬಂಧುಬಾಂಧವರೆಲ್ಲ ಸೇರಿಯೇ ಮದುವೆಯನ್ನು ನಿರ್ಧರಿಸುತ್ತಿದ್ದರು. ಈ ನಿಶ್ಚಿತಾರ್ಥವನ್ನು ನಡೆಸುವುದು ಕೂಡಾ ವಿಶಿಷ್ಟವಾದ ರೀತಿಯಲ್ಲಿಯೇ ಆಗಿರುತ್ತಿತ್ತು. ಎಲ್ಲರೂ ಸೇರಿದ ಮೇಲೆ ಅವರು–

"ಹಂತಿವೊಳಗೆ ಊಟಮಾಡಿ
ಪಂತಿವೊಳಗೆ ವೀಳ್ಯ ತಿದ್ದಿ
ಒಂದು ಪಂಚವೀಳ್ಯ ಅಂದ್ರೆ
ಅವರ ಹೆಣ್ಣವ್ರ ಕಡೆ ನಾಲ್ಕಾರು ಜನ
ಗಂಡಿನೋರ್ಕಡೆ ನಾಲ್ಕಾರು ಜನ
ಕೂತ್ಕಂಡು ಮಧ್ಯೆ ಒಪ್ಪಂದ ವೀಳ್ಯ ತಕ್ಕೊಂಡ್ರು"[6]

ಹೀಗೆ ಗಂಡು ಮತ್ತು ಹೆಣ್ಣಿನ ಕಡೆಯವರು ಸಹಪಂಕ್ತಿಯಲ್ಲಿ ಉಂಡು, ವೀಳ್ಯವನ್ನು ಬದಲಾಯಿಸಿಕೊಳ್ಳುತ್ತಿದ್ದರು. ಅಲ್ಲಿಗೆ ಅವರು ಹೆಣ್ಣನ್ನು ಕೊಡುವುದಕ್ಕೂ, ಹೆಣ್ಣನ್ನು ಮದುವೆಯಾಗಿ ಕರೆದೊಯ್ಯುವುದಕ್ಕೂ ಪರಸ್ಪರ ಒಪ್ಪಂದವನ್ನು ಮಾಡಿಕೊಂಡಂತಾಯಿತು. ಈ ಒಪ್ಪಂದವು ಮುರಿಯಲಾರದಂಥದ್ದು. ಒಂದು ರೀತಿಯ ಅಲಿಖಿತ ಸಂವಿಧಾನವಿದ್ದಂತೆ ಆ ಜನರಿಗೆ ಇಂತಹ ಸಂಪ್ರದಾಯ ಇಂದು ನಾಡಿನಾದ್ಯಂತ ಕೆಲವು ಬುಡಕಟ್ಟು ಸಮಾಜದಲ್ಲಿ ಮುಂದುವರಿದಿದೆ. ಮುಖ್ಯವಾಗಿ ಮಾತಾಡಿದ ಮೇಲೆ ಅದಕ್ಕೆ ಬದ್ಧವಾಗಿ ನಡೆಯಲೇ ಬೇಕಾದಂಥಹ ಸಂಸ್ಕೃತಿ. ಮಾತಿಗೆ ತಪ್ಪಿ ನಡೆಯುವುದು ಅವರಿಗೆ ಸಮ್ಮತವಲ್ಲ. ಆ ಮಾತುಗಳಿಗೆ ಭದ್ರತೆ ಆಧಾರ ಗುರುಹಿರಿಯರೇ ಆಗಿರುತ್ತಿದ್ದರು. ಒಮ್ಮೊಮ್ಮೆ ನಿಶ್ಚಿತಾರ್ಥದ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಅನುಕೂಲಸ್ಥರಾಗಿದ್ದು, ಗಂಡು ಸಂತಾನವಿಲ್ಲದಿದ್ದವರಾಗಿದ್ದರೆ–

"ನೋಡಪ್ಪಾ ಮನಿತನಾ ಇದ್ರೆ
ಮನೀಮುಂದೆ ನಾನು ಲಗ್ನ ಮಾಡ್ತೀನಿ

ISBN – 978-93-5526-247-9

ಮನಿ ಮಗ ಇದ್ದಂಗ
ಸಾಯೋತನಕ ನನ್ನ ಆಜ್ಞೆದಲ್ಲಿ
ನನ್ನ ಕೈಯಾಗ ನಡೀಬೇಕು".[7]

ಎಂದು ಮನೆ ಅಳಿಯನಾಗಿರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದುದು ಉಂಟು. ಆದರೆ ಬಹುತೇಕ ಯುವಕರು ಹೀಗೆ ಮಾವನ ಮನೆಯಲ್ಲಿ ಇರುವುದ ಅವಮಾನ, ಹಂಗು ಎಂಬ ಭಾವನೆಯಿಂದ ಸ್ವಾಭಿಮಾನದಿಂದ ಆ ಮಾತಿಗೆ ಒಪ್ಪುತಿದ್ದಿರಲಿಲ್ಲವೆಂಬುದು ಬೇರೆ ವಿಷಯ.

ಹೀಗೆ ಕುಲಬಾಂಧವರು, ಗುರುಹಿರಿಯರೂ, ಇಷ್ಟಮಿತ್ರರೂ ಸೇರಿ ನಡೆಸುವ ನಿಶ್ಚಿತಾರ್ಥದಂತೆಯೇ ಮದುವೆಯೂ ಸಮಾರಂಭವೂ ಕೂಡ ಸಮಾಜದ ಇತರ ವರ್ಗದವರ ಸಹಭಾಗಿತ್ವದಲ್ಲಿ ನಡೆಯುತ್ತಿತ್ತು. ಅಂದರೆ ಪುರುಷನಿಗೆ ಈ ಸ್ತ್ರೀಯೊಂದಿಗೆ ಗ್ರಹಸ್ಥ ಜೀವನ ನಡೆಸಲು ಸಮಾಜದವರೆಲ್ಲರೂ ಸೇರಿ ಅನುಮತಿಯನ್ನು ನೀಡಿದ್ದಾರೆ ಎಂಬುದೇ ಈ ಕಾರ್ಯಕ್ರಮಗಳ ಅಂತರಾರ್ಥವಾಗಿದೆ. ಆದುದರಿಂದ ಒಂದು ಮದುವೆ ಕಾರ್ಯಕ್ರಮದಲ್ಲಿ–

"ಒಂದ ಸೀತಾಳ ಚಪ್ಪರ ಹಾಕವರೆ
ಹೊಲೇರ ಹೊನ್ನಯ್ಯ ಬಂದವರೆ
ವಾದ್ಯವನ್ನಾದರೆ ಮಾಡವರೆ
ಮಡಿವಾಳ ಮಾಚಯ್ಯ ಬಂದವರೆ
ನೀಲಿಮಡಿಯ ಕಟ್ಟವರೆ
ಹನ್ನೆರಡು ತೋರಣವ ಕಟ್ಟವರೆ
ಹವಳಾದ ತೋರಣ ಕಟ್ಟವರೆ
ಮಲೆಯ ಸ್ವಾಲುಗ ನೀಲಯ್ಯಾ
ಒಂದ ಕಂಬ ಮೂರ್ತ ಮಾಡವರಂತೆ".[8]

ಇದು ಇಷ್ಟಕ್ಕೆ ಮುಗಿಯದೇ ಇತರೇ ವರ್ಗದ ಜನರಿಗೂ ಬೇರೆ ಬೇರೆ ಜವಾಬ್ದಾರಿಗಳನ್ನು ವಹಿಸಿದುದು ಕಂಡುಬರುತ್ತದೆ. ಅವರಾರಾರೆಂದರೆ–

"ಕೆಲ್ಸಿ ಕುಳ್ಳಯ್ಯ ಬಂದವರೆ
ತೊಂಡಾಲು ಬಾಸಿಂಗ ತಂದವರೆ
ವಾಜರ ಮಲ್ಲಯ್ಯ ಬಂದವರೆ
ಮಾಂಗಲ್ಯ ಸೂತ್ರ ತಂದವರೆ
ಕಾಸಿ ಪುರೋಹಿತರು ಬಂದವರೆ
ಸಂಬಂಧ ಮಾಲೆ ತಂದವರೆ
ಧರ್ಮದೇವತೆ ಬಂದವರೆ
ದಾರೆಗಾದರೆ ನಿಂತವರೆ
ಐದುಜನ ಮುತ್ತೈದೇರು ಬಂದವರೆ
ಶಾಸ್ತ್ರನ್ನಾದರೆ ಮಾಡವರೆ
ಶೋಭಾನನಾದರೆ ಹೇಳವರೆ
ಒಳ್ಗೆಗಳಿಗೆ ನೋಡವರೆ
ಧಾರೆ ಮೂರ್ತಕೆ ನಿಲ್ಸಿಸವರೆ"[9]

ಹೀಗೆ ಸಮಾಜದ ವಿವಿಧ ವರ್ಗದವರೆಲ್ಲರೂ ಸೇರಿ ಮದುವೆಯನ್ನು ಮಾಡಿಸುವುದರಲ್ಲಿ ಎಲ್ಲರೂ ಕೂಡಿ ಬದುಕಬೇಕೆಂಬ ಸದಿಚ್ಛೆ ಇರುವುದರಿಂದಲೇ ಸಮಾಜದ ಒಂದೊಂದು ಜಾತಿಯವರಿಗೆ ಒಂದೊಂದು

ISBN – 978-93-5526-247-9

ಜವಾಬ್ದಾರಿಯನ್ನು ವಹಿಸಿಕೊಟ್ಟಿರುವುದನ್ನು ನೋಡಿದರೆ ಸಹಬಾಳ್ವೆ ಸಂಸ್ಕೃತಿ ಕಂಡುಬರುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಜಾತಿಯಿಂದ ಜಾತಿಗೆ, ಧರ್ಮದಿಂದ ಧರ್ಮಕ್ಕೆ ವರನನ್ನು ಶೃಂಗರಿಸುವುದರಲ್ಲಿ ವೈವಿಧ್ಯತೆ ಇರುವಂತೆಯೇ ಜಾನಪದ ಮಹಾಕಾವ್ಯಗಳಲ್ಲಿ ಬರುವ ಮದುವಣಿಗನನ್ನು ಶೃಂಗರಿಸುವ ಪದ್ಧತಿಯದೇ ಒಂದು ವೈಶಿಷ್ಟ್ಯ. ವರನಿಗೆ ಸ್ನಾನಾದಿ ಕಾರ್ಯ ಮುಗಿದಮೇಲೆ–

"ಆಗ ಪದುರನ ನ ಪಂಚೆ ಉಡಿಸ್ಯರಣ್ಣಾ
ಆಗ ಇನ್‌ಶರಟ್ ವಾಕೆರಣ್ಣಾ
ಶರಟು ಮ್ಯಾಲೆ ಕರೆ ಕೋಟು ವಾಕಸಿನಯ್ಯಾ
——————————————
ಕರೆಕೋಟು ತೊಡಸಿ
ಗುಂಡು ರುಮಾಲು ಸುತ್ತಿ ಬಿಟ್ರು
ಆಗ ಗುಂಡು ರುಮಾಲು ಸುತ್ತಿ
ಕರೇಕಂಬಳಿ ಹೆಗಲಿಗ್ಹಾಕಿದರು
ಕೋಲುಕತ್ತಿ ಚೂರಿ ಕೈಗೆ ಕೊಟ್ಟು"[10]

–ಹೀಗೆ ಶೃಂಗರಿಸಿಕೊಂಡು ಹಸೆಗೆ ಕರೆತರುತ್ತಿದ್ದರು. ಹಾಗೆ ಕರೆತರುವಾಗ ಆತನಿಂದ ದೇವತಾರ್ಜನೆಯನ್ನು ನೆರವೇರಿಸುವರು. ಆಮೇಲೆ ಅವನು–

"ದೇವರಿಗೆಲ್ಲ ಕಾಯಿ ಮುಡಿಸ್ಯನಮ್ಮಾ
ದೇವರೂಟಂತ ಲೋಕ ವಾಕ್ಯನಮ್ಮಾ
ಕರೆಕಂಬಳ್ಹಾ ಸ್ಯಾರ ಆಗ ಬಂದು ಮಗನಿಗೆ
ಆಕ ಅರಿಷಿಣ ಕಲ್ಸಿದ
ಅಕ್ಕಿ ಸ್ಯಾಸಿ ಹೊಯ್ದು
ಬೆಳ್ಳಿ ತಟ್ಯಾಗ ಏಳು ತಾಳಿ ಏಳು ಮುತ್ತು".[11]

–ಗಳನ್ನು ಇಟ್ಟುಕೊಂಡು ಮದುವೆಗೆ ನಿಂತು ಮಂಗಲಸೂತ್ರವನ್ನು ಕಟ್ಟುವ ಕಾರ್ಯ ಅದಕ್ಕೂ ಕೆಲವು ವಿಧಿ–ವಿಧಾನಗಳಿವೆ.–

"ಏಳು ಮಂದಿಗೆ ಅರಿಷಿಣ ಹಚ್ಚಿದ
ಮೂಗು ಮುತ್ತು ಹಾಲು ಕಡಗ
ಸೂಸುಗ ಹಾಕಿದ
ಏಳು ತಾಳಿಗೆ ಅರಿಷಿಣ ಗಂಧ ಹಚ್ಚಿ"[12.]

ಹೆಣ್ಣಿಗೆ ಮಂಗಲಸೂತ್ರ ಕಟ್ಟುವ ಪದ್ಧತಿ ಬೆಳೆದು ಬಂತು. ಇಲ್ಲಿ ಏಳು ಮಂಗಲಸೂತ್ರದ ಉಲ್ಲೇಖವಾಗಿದೆಯೆಂದರೆ, ಒಬ್ಬಳಿಗೆ ಏಳು ಮಂಗಲಸೂತ್ರವನ್ನು ಕಟ್ಟುವ ಪದ್ಧತಿ ಇತ್ತೆಂದಲ್ಲ. ಆ ಕಾವ್ಯದಲ್ಲಿ ಏಳು ಜನ ಹೆಣ್ಣುಮಕ್ಕಳನ್ನು ಒಬ್ಬನೇ ಮದುವೆಯಾಗಬೇಕಾದುದರಿಂದ ಏಳು ಮಂಗಲ ಸೂತ್ರವನ್ನು ಸಿದ್ಧಪಡಿಸಿಕೊಂಡಿದ್ದು.

ಈ ಮದುವೆಯ ಪ್ರಕ್ರಿಯೆಗಳೆಲ್ಲ ಕೇವಲ ಮಂಗಲಸೂತ್ರ ಕಟ್ಟುವುದರೊಂದಿಗೆ ಮುಗಿದು ಹೋಗುತ್ತಿದ್ದಿರಲಿಲ್ಲ. ಅದು ಮದುವೆಗೆ ಮೊದಲು ಮತ್ತೆ ಮದುವೆಯ ನಂತರ ಹೀಗೆ ಒಟ್ಟೂ ಏಳು ದಿನಗಳವರೆಗೆ ನಡೆಯುವ ಪದ್ಧತಿಯೊಂದು ಬೆಳೆದು ಬಂದಿತ್ತು. ಅಂದರೆ "ಮದುವೆಯಾದ ಐದು ದಿನಗಳ ನಂತರ ಹಂದರ ಕಿತ್ತು ತಿರುವಿ ನೀರು ಹಾಕು"[13] ವವರೆಗೆ ಮುಂದುವರೆಯುತ್ತಿತ್ತು. ಬಹುಶಃ ಕರ್ನಾಟಕದುದ್ದಕ್ಕೂ ಉದ್ದಗಲಕ್ಕೂ ಬೆಳೆದುಕೊಂಡಿದ್ದಿತ್ತು. ಆದರೆ ಆಧುನಿಕತೆಯ ಗಾಳಿಗೆ ಸಿಲುಕಿ, ಈ ಬಿಡುವಿಲ್ಲದ ಕೆಲಸದ ಒತ್ತಡದ ನಡುವೆ ಬದುಕುವ ಮನುಷ್ಯನಿಗೆ ಏಳು ದಿನಗಳವರೆಗೆ ಮದುವೆಯ ಕಾರ್ಯದಲ್ಲಿಯೇ ತೊಡಗಿರುವುದಕ್ಕೆ ಸಮಯಾವಕಾಶಗಳಿಲ್ಲ. ಹಾಗಾಗಿ ಮನುಷ್ಯ

ISBN – 978-93-5526-247-9

ಅನುಕೂಲಕ್ಕೆ ತಕ್ಕಂತೆ ತನ್ನ ಆಚಾರ–ವಿಚಾರ, ರೂಢಿ–ಸಂಪ್ರದಾಯಗಳನ್ನು ಬದಲಾಯಿಸಿಕೊಳ್ಳುತ್ತಾ ಬಂದಿದ್ದರೂ ಅದರ ಹಿಂದಿನ ಸಂಸ್ಕೃತಿಗಳು ಈ ಜನಪದ ಮಹಾಕಾವ್ಯಗಳಂತ ಸಾಹಿತ್ತೀಕ ಆಧಾರಗಳಿಂದ ವೇದ್ಯವಾಗುತ್ತವೆ.

ಮಗಳನ್ನು ಮದುವೆಮಾಡಿ ಕೊಡುವ ಸಂದರ್ಭದಲ್ಲಿ ಮುಖ್ಯವಾಗಿ ಗಮನಿಸುತ್ತಿದ್ದುದ್ದು ಗುಣವನ್ನೆ ಆಗಿದ್ದಿತು ಹೊರತಾಗಿ ಸಂಪತ್ತನ್ನು ನೋಡಿಯಾಗಲಿ, ಇನ್ನಾವುದೇ ಆಮಿಷಕ್ಕೆ ಬಲಿಯಾಗಿಯಾಗಲಿ ಮಗಳನ್ನು ಕೊಡದೇ–

"ಒಳ್ಳೆಯ ಮನೆತನ ನೋಡಿ
ನಾವ ಕೊಟ್ರೆ
ಅದು ಮನಿತನಾ ಆಗಾದಿಲ್ಲಾ
ಯಂತಾವನ್ನಾಗಲಿ ಗೊಜ್ಜನ ಪಲ್ಯ
ಸಿರಿಸೇಲಿ ಪಲ್ಯ ತಿಂಬೋನ್ನಾಗಲಿ
ಗುಣನೋಡಿ ಮಕ್ಕಳು ಕೊಟ್ರೆ ಆಗೋಯ್ತು"[14.]

ಎನ್ನುತ್ತಾ, ಹಣ ಮುಖ್ಯವಲ್ಲ, ಗುಣವೇ ಮುಖ್ಯವಾದುದು ಎನ್ನುವ ಸುಸಂಸ್ಕೃತ ಮನಸ್ಸು ಬೆಳೆದು ಬಂದಿತೆಂಬುದು ವೇದ್ಯವಾಗುತ್ತದೆ.

ಮದುವೆಯ ವಿಧಿವಿಧಾನಗಳೆಲ್ಲ ಬುಡಕಟ್ಟು ಜನಾಂಗದಲ್ಲಿ ಎಲ್ಲೆಡೆಯಲ್ಲಿಯೂ ಒಂದೇ ರೀತಿಯಿದ್ದುದು ಕಂಡುಬರುವುದಿಲ್ಲ. ಮುಖ್ಯವಾಗಿ ಒಂದೊಂದು ಬುಡಕಟ್ಟು ಕೂಡಾ ತಮ್ಮದೇ ಆದ ಕೆಲವು ಪದ್ಧತಿಗಳನ್ನು ಪಾಲಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಕಾಡುಗೊಲ್ಲರಲ್ಲಿ ಅವರದೇ ಆದ ಸಂಪ್ರದಾಯಗಳು, ರೀತಿನೀತಿಗಳು ಉಳಿದು ಬೆಳೆದು ಬಂದಿರುವುದು ತಿಳಿದುಬರುತ್ತದೆ. ಇವರಲ್ಲಿ ಮುಖ್ಯವಾಗಿ ಹೆಣ್ಣು–ಗಂಡುಗಳ ಕೂಟ ಗಣಗಳನ್ನು ನೋಡುವ ಸಂಪ್ರದಾಯ ಕಂಡು ಬರುವುದಿಲ್ಲ. ಯಾವ ಹೆಣ್ಣು ತಮ್ಮ ಮನೆಯ ಸೊಸೆಯಾಗಿ ಬಂದು ತಮ್ಮ ಕುಲದ ವೃದ್ಧಿಯಾಗಬಹುದು, ಒಳ್ಳೆಯದಾಗಬಹುದು ಎಂಬುದನ್ನು ನಿರ್ಧರಿಸುವಾಗ

"ಒಂದು ಚೆಂಬು ನೀರು
ಒಂದು ಬೆಲ್ಲದುಂಡೆ
ಒಂದಿಷ್ಟು ಅಡಿಕೆ
ಒಂದಿಷ್ಟು ವೀಳ್ಯದೆಲೆಂಡು
ಒಂದಿಷ್ಟು ಅರಿಷಿಣ ಕುಂಕುಮ
––––––––––––––––
ಉಗುಣಿ ಗಿಡದ ಬುಡಕ್ಕೆ
ಒಂದು ಚೆಂಬು ನೀರು ಹಾಕಿ
ಅರಿಷಿಣ ಕುಂಕುಮ ಇಟ್ಟು ಪೂಜೆಮಾಡಿ
––––––––––––––––––
ಹೊತ್ತುಟ್ಟು ಕಡಿಕೆ ಒಡೆದಿರೊ ಬಳ್ಳಿ ನೋಡಿ
ಅದರ ಕುಡಿಗೆ ಅಂಗಾರ ಕಟ್ಟಿ
ಮೊಳಕೊಂದು ಮೊಳಕೊಂದು ಮೂರು ಗೆರಿಯ ಹಾಕಿ"[15]

ಬಂದಮೇಲೆ ಬೆಳಕು ಹರಿಯುವವರೆಗೆ ಆ ಕುಡಿಯು ಮೂರು ಗೆರೆಗಳನ್ನು ದಾಟಿ ಬೆಳೆದಿದ್ದರೆ ಆ ಹೆಣ್ಣು ಮನೆಗೆ ಒಳ್ಳೆಯದಾಗಿ ಬರುವಳೆಂದೂ, ಹಾಗೆ ಮೂರು ಗೆರೆಯನ್ನು ದಾಟಿ ಬರದಿದ್ದರೆ ಆ ಹೆಣ್ಣು ಆ ಮನೆಗೆ ಸರಿ ಬರುವುದಿಲ್ಲವೆಂದು ತಿಳಿಯುವ ವಿಶಿಷ್ಟವಾದ ಪದ್ಧತಿಯೊಂದು ಬೆಳೆದು ಬಂದಿತ್ತು.

ಅವರಲ್ಲಿಯ ಇನ್ನೊಂದು ಪದ್ಧತಿಯೆಂದರೆ, ಮದುವೆಯಾದ ಮೇಲೆ ವಧುವನ್ನು ತಕ್ಷಣ ಮನೆಗೆ ಕರೆತರುತ್ತಿರಲಿಲ್ಲ. ಕಾಡುಗೊಲ್ಲರಲ್ಲಿ–

"ಮೂರು ತಿಂಗಳವರೆಗೂ ತವರು ಮನೇಲಿ ಬಿಟ್ಟು
ಮೂರು ತಿಂಗಳು ಆಗ್ತಿದ್ದಂಗೆ
ಪಲ್ಲಕ್ಕಿ ಪಾಲ್ಕೆ ಮೇಲೆ"[16.]

ಅತ್ತೆ ಮಾವ ಬಂದು ತವರು ಮನೆಯಿಂದ ಕರೆದೊಯ್ಯುತ್ತಿದ್ದರು. ಅದಕ್ಕೆ ಅವರು–

ISBN – 978-93-5526-247-9

"ತಿರುಗಂಚಿ ಬರುಗಂಚಿ
ಎಲ್ಲ ಶಾಸ್ತ್ರಗಳನ್ನು ಮುಗಿಸಿಕೊಂಡು
ಮೂರು ತಿಂಗಳು".[17]

ಕಳೆದು ಬರುವುದೆಂದು ಕರೆಯುವರು. ಹಾಗೆ ಪತಿಗ್ರಹಕ್ಕೆ ಕಳುಹಿಸಿಕೊಡುವಾಗ ಹೊಸ ಸೀರೆಯನ್ನು ಉಡಿಸಿ, ಮಡಿಲು ತುಂಬ ಅಕ್ಕಿ ತುಂಬಿ ಕಳಿಸಿಕೊಡುವುದಿದೆ. ಇದು ಇಂದೂ ಎಲ್ಲೆಡೆಯಲ್ಲಿಯೂ ಗೋಚರಿಸುತ್ತದೆ. ಹೀಗೆ ಮಡಿಲು ತುಂಬಿ ಕಳುಹಿಸುವಿಕೆಯಲ್ಲಿ ಫಲವಂತಿಕೆಯ ವಿಶೇಷ ಹಂಬಲ ಎದ್ದು ಕಾಣುತ್ತಿದೆ.

ಹೀಗೆ ಜನಪದ ಮಹಾಕಾವ್ಯಗಳಲ್ಲಿ ವಿವಾಹ ಅಥವಾ ಮದುವೆ ಸಂಪ್ರದಾಯದ ವಿಧಿವಿಧಾನಗಳು ಬಹಳ ಪ್ರಾಚೀನ ಕಾಲದಿಂದಲೂ ನಮ್ಮ ಆಚರಣೆಯ ಸಾಮಾಜಿಕ ಸಮ್ಮತಿಯ ಮೇರೆಗೆ ಬೆಳೆದುಕೊಂಡು ಬಂದ ಒಂದು ಪದ್ಧತಿಯಾಗಿದೆ. ಇಂದು ಆಧುನಿಕತೆಯ ಸೋಂಕು ಮಾನವನಿಗೆ ತಗುಲಿದರೂ ವೈವಾಹಿಕ ಬದುಕು ಶಾಶ್ವತತೆಯನ್ನು ಕಾಣುವಂತಾಗಬೇಕಾದರೆ ನಮ್ಮ ಜನಪದ ಸಂಪ್ರದಾಯ–ಪದ್ಧತಿಗೆ ಮೋರೆ ಹೋಗುವ ಅನಿವಾರ್ಯತೆ ಇರುವುದು ಇಂದು ಸೂಕ್ಷ್ಮವಾಗಿ ಗ್ರಹಿಸಬಹುದಾಗಿದೆ. ಜೊತೆಗೆ ಅದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಪ್ರಮೇಯವೂ ಬಂದೊದಗಿದೆ. ಅಂತೆಯೇ ಜನಪದ ಮಹಾಕಾವ್ಯಗಳಲ್ಲಿ ವೈವಾಹಿಕ ಜೀವನಕ್ಕೆ ತಮ್ಮದೇ ಆದ ಪದ್ಧತಿಗಳೊಂದಿಗೆ ಅವುಗಳ ವೈಜ್ಞಾನಿಕತೆಯನ್ನು ಹಾಗೂ ವೈಚಾರಿಕತೆಯನ್ನು ಪೋಷಿಸಿ ಬೆಳೆಸಿದ್ದನ್ನು ಕಾಣಬಹುದಾಗಿದೆ.

**ಅಡಿಟಿಪ್ಪಣಿಗಳು:**

1. ಕೆ.ಕೇಶವನ್ ಪ್ರಸಾದ (ಸಂ) ಮಲೆಮಾದೇಶ್ವರ ಮಹಾಕಾವ್ಯ–ಕನ್ನಡ ವಿ.ವಿ. ಹಂಪಿ–ಪು–126
2. ಕೆ. ಎಂ. ಮೈತ್ರಿ (ಸಂ) ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997– ಪು–252.
3. ಕೆ. ಕೇಶವನ್ ಪ್ರಸಾದ (ಸಂ)– ಮಲೆಮಾದೇಶ್ವರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–ಪು–132.
4. ಕೆ. ಕೇಶವನ್ ಪ್ರಸಾದ (ಸಂ)– ಮಲೆಮಾದೇಶ್ವರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–ಪು–132.
5. ಕೆ. ಕೇಶವನ್ ಪ್ರಸಾದ (ಸಂ)– ಮಲೆಮಾದೇಶ್ವರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–ಪು–133.
6. ಕೆ. ಕೇಶವನ್ ಪ್ರಸಾದ (ಸಂ)– ಮಲೆಮಾದೇಶ್ವರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–ಪು–134
7. ಕೆ. ಎಂ. ಮೈತ್ರಿ (ಸಂ) ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–260.
8. ಕೆ. ಕೇಶವನ್ ಪ್ರಸಾದ (ಸಂ)– ಮಲೆಮಾದೇಶ್ವರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–136
9. ಕೆ. ಕೇಶವನ್ ಪ್ರಸಾದ (ಸಂ)– ಮಲೆಮಾದೇಶ್ವರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–ಪು–137
10. ಕೆ. ಎಂ. ಮೈತ್ರಿ (ಸಂ) ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–264.
11. ಕೆ. ಎಂ. ಮೈತ್ರಿ (ಸಂ) ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–265.
12. ಕೆ. ಎಂ. ಮೈತ್ರಿ (ಸಂ) ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–265.
13. ಕೆ. ಎಂ. ಮೈತ್ರಿ (ಸಂ) ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–266.
14. ಕೆ. ಎಂ. ಮೈತ್ರಿ (ಸಂ) ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–276
15. ಚಲುವರಾಜು (ಸಂ)–ಜುಂಜಪ್ಪ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–44
16. ಚಲುವರಾಜು (ಸಂ)–ಜುಂಜಪ್ಪ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–131
17. ಚಲುವರಾಜು (ಸಂ)–ಜುಂಜಪ್ಪ ಮಹಾಕಾವ್ಯ-ಕನ್ನಡ ವಿ.ವಿ.ಹಂಪಿ–1997–ಪು–248

***

ISBN – 978-93-5526-247-9

# 48.ಜನಪದ ಮಹಾಕಾವ್ಯಗಳ ವೃತ್ತಿಗಾಯಕರು

**ಶಶಿಕಲಮ್ಮ. ಯು**

ಜಾನಪದ ಮತ್ತು ಜನಪದಕ್ಕೆ ಒಂದು ಅಂತರ ವಿದೆ, ಜನಪದ ಎಂದರೆ ಜನರ ಬಾಯಿಂದ ಬಾಯಿಗೆ ಬಂದ ಸಾಹಿತ್ಯವನ್ನು ನಾವು ಜನಪದ ಎಂದು ಕರೆಯುತ್ತೆವೆ. ಜಾನಪದ ಎಂದರೆ ಜನಪದ ಕಲೆ, ಜನಪದ ಹಾಡು, ಜನಪದಾಟ, ಎಲ್ಲವನ್ನು ಸೇರಿ ನಾವು ಜಾನಪದ ಎಂದು ಕರೆಯುತ್ತೆವೆ. ಅಂದರೆ ಎಲ್ಲವನ್ನು ಒಳಗೊಂಡಂತೆ ಎಂಬ ಅರ್ಥವನ್ನು ನೀಡುತ್ತದೆ. ಜನಪದ ಸಾಹಿತ್ಯವು ಇಂದು ನಿನ್ನೆಯದಲ್ಲ. ಇದರ ಕರ್ತೃಯಾರೆಂದು ತಿಳಿಸಲಾಗದು, ಆದರೆ ಈ ಸಾಹಿತ್ಯ ಅಪಾರವಾದ ಸಂಪತ್ತನ್ನು ಹೊಂದಿದೆ. ಜನಪದರು ತುಂಬಾ ಜ್ಞಾನವನ್ನು ಹೊಂದಿರುವವರು, ಎಂದು ಅವರು ರಚಿಸಿರುವ ಸಾಹಿತ್ಯವನ್ನು ನೋಡಿದರೆ ತಿಳಿಯುತ್ತದೆ. ಅದನ್ನರಿತೇ ಕವಿರಾಜಮಾರ್ಗಕಾರ 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಹೇಳಿರುವುದು. ಜನಪದರಿಗೆ ಅಕ್ಷರ ಜ್ಞಾನವಿಲ್ಲದಿದ್ದರು ಸಹ ಅವರು ಸಾಹಿತ್ಯ ರಚನೆ ಮಾಡುವಷ್ಟು ಪರಿಣಿತರಾಗಿದ್ದರೆಂದರೆ ನಿಜಾವಾಗಿಯು ಅವರನ್ನು ಕವಿಗಳೆಂದೇ ಹೇಳಬಹುದು.

ಜನಪದ ಕಥೆಗಳು ಇಂದಿನಸಮಾಜಕ್ಕೆ ಪ್ರಸ್ತುತವಾಗಿವೆ ಎಂದರೆ ಜನಜೀವನದ ದಾರಿದೀಪಗಳಾಗಿವೆ, ಜನಪರ ಬದುಕನ್ನು ತಮ್ಮ ಕಥೆಯೊಂದಿಗೆ ಕಟ್ಟಿಕೊಟ್ಟಿವೆ. ಕೇವಲ ಭಾರತ ಮಾತ್ರ ಜನಪದ ಕಥೆಗಳನ್ನು ಹೊಂದಿಲ್ಲ, ವಿಶ್ವದ ಹಲವು ರಾಷ್ಟ್ರಗಳು ಈ ಜನಪದ ಕಥೆಗಳನ್ನು ಹೊಂದಿವೆ. ಈ ಕಥೆಗಳ ಸಂಗ್ರಹ 'ಕಿಂಡರ್ ಉನ್ಡ ಹೌಸ್ ಮ್ಯಾರ್ಶನ್' ಪ್ರಥಮ ಬಾರಿಗೆ ಫ್ರೆಂಚ್ ಭಾಷೆಗೆ ಅನುವಾದವಾಯಿತು. ಮಾರ್ ಬರ್ಗ ವಿಶ್ವವಿದ್ಯಾನಿಲಯವು ಜಾನಪದ ಸಾಹಿತ್ಯದ ಸಂಗ್ರಹಕ್ಕೆ ಪ್ರೇರಣೆ ನೀಡಿತು. ತಾವು ವಿದ್ಯಾರ್ಥಿಯಾಗಿದ್ದಾಗಲೇ ಜಾಕಬ್ ಮತ್ತು ವಿಲ್ ಹೆಲ್ಮ್ ಗ್ರಿಮ್ ಜಾನಪದ ಕಥೆಗಳ ಸಂಗ್ರಹಕಾರ್ಯವನ್ನು ಆರಂಭಿಸಿದರು. ಹೀಗೆ ಪರಸ್ಪರ ಅರಿವು ಮೂಡಿಸಿದವರು ಜರ್ಮನಿಯ ಗ್ರೀಮ್ ಸಹೋದರರು. 1812ರಲ್ಲಿ ಅವರ ಹತ್ತೊಂಬತ್ತನೇ ಶತಮಾನದ ಆದಿಯಲ್ಲಿ ಪ್ರಾರಂಭವಾಯಿತು. ಆಧುನಿಕ ಕನ್ನಡ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಅನೇಕ ಗಣ್ಯರು ಇದ್ದಾರೆ. ಮಾಸ್ತಿ, ಬೇಂದ್ರೆ, ಕಂಬಾರರು ಮುಂತಾದವರು. ವಿಶ್ವದ ಜಾನಪದ ಅಧ್ಯಯನಕ್ಕೆ ಪ್ರರಣೆ ನೀಡಿರುವುದೇ ಜನಪದ ಸಾಹಿತ್ಯ. ಜನಪದ ಸಾಹಿತ್ಯದಿಂದ ಶಿಷ್ಟಸಾಹಿತ್ಯ ರಚನೆಗೆ ಸಾಕಷ್ಟು ಮಾರ್ಗದರ್ಶನ ನೀಡಿದೆ. ಅಪರವಾಗಿ ಬೆಳೆಯಲು ಸಹಾಯಮಾಡಿದೆ. ಜನಪದ ಕಥೆಗಳು ಮಾನವನ ಸೂಪ್ತ ಮನಸಿನ ಭಾವನೆಗಳಾಗಿವೆ. ಇದು ಪ್ರತಿಬಾಶಾಲಿಗಳನ್ನು ಸೆಳೆದು ನಿಲ್ಲಿಸುತ್ತವೆ.

**ಗುರಿ ಮತ್ತು ಉದ್ದೇಶಗಳು**

- ಜನಪದ ಕಾವ್ಯಗಳ ಪ್ರಕಾರ ಬಗ್ಗೆ ತಿಳಿಯುವುದು.
- ಜನಪದ ಕಾವ್ಯಗಳ ಬಗ್ಗೆ ತಿಳಿಯುವುದು.
- ಜನಪದ ಕಾವ್ಯಗಳ ಪರಿಕರಗಳ ಬಗ್ಗೆ ತಿಳಿಯುವುದು.
- ಜನಪದರು ಈ ಕಾವ್ಯಗಳನ್ನು ಬಳಸುವ ಸಂಧರ್ಭಗಳ ಬಗ್ಗೆ ತಿಳಿಯುವುದು.
- ಜನಪದ ಗಾಯಕರ ವೇಷಭೂಷಣಗಳನ್ನು ತಿಳಿಯುವುದು.
- ಜನಪದರ ಸಂಪ್ರದಾಯಗಳ ಬಗ್ಗೆ ತಿಳಿಯುವುದು.
- ಜನಪದ ಕಾವ್ಯಗಳ ಪ್ರಾದೇಶಿಕಥೆಯ ಬಗ್ಗೆ ತಿಳಿಯುವುದು.
- ಜನಪದ ಗಾಯಕರ ಪ್ರಾಮುಖ್ಯತೆಯ ಬಗ್ಗೆ ತಿಳಿಯುವುದು.

  ಜನಪದ ಹಾಡುಗಳು ಒಂದು ಸಾಹಿತ್ಯದ ಪ್ರಮುಖ ಕೊಡುಗೆಗಳು. ಇದರಲ್ಲಿ ಹಲವಾರು ಬಗೆಗಳನ್ನು ಕಾಣಬಹುದು. ಅದರಲ್ಲಿ ಕೆಲವನ್ನು ನಾವು ಇಲ್ಲಿ ಕಾಣಬಹುದು.

- ಮಲೆಮದೇಶ್ವರ ದೇವರಗುಡ್ಡದ ಸಂಪ್ರದಾಯದವರು.
- ಮಂಟೇಸ್ವಾಮಿ ಪರಂಪರೆಯ ನೀಲಗಾರರು.
- ಎಲ್ಲಮ್ಮನ ಚೌಡಿಕೆ ಸಂಪ್ರದಾಯದವರು.

ISBN – 978-93-5526-247-9

- ಕಾಡು ಗೊಲ್ಲರ ಜುಂಜಪ್ಪನ ಸಂಪ್ರದಾಯದವರು.
- ಮಲೆಮದೇಶ್ವರ ದೇವರ ಗುಡ್ಡದ ಸಂಪ್ರದಾಯದವರು.

ಈ ಜನಾಂಗದವರು ನಮ್ಮ ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಹರಡಿಕೊಂಡಿರುವುದನ್ನು ಕಾಣಬಹುದು. ಇವರ ಪ್ರಮುಖ ವಾದ್ಯ ಕಂಸಾಳೆ ಇದು 'ಕೈಸಾಳೆ' 'ಕಂಸಾಳೆ' ಎರಡು ತದ್ಭವ ರೂಪಗಳಿಂದ ಲಭ್ಯವಾಗುತ್ತದೆ. ಇವರು ಕಂಸಾಳೆ ತಟ್ಟುತ್ತಾ ಮಲೆಮಾದೇಶ್ವರನ ಹಾಡುಗಳನ್ನು ಹಾಡುತ್ತಾ ರಾತ್ರಿಯೆಲ್ಲಾ ಕಳೆಯುತ್ತಾರೆ. ಈ ವಾದನಗಳು ಒಂದು ವಿಶಿಷ್ಟ ಬಗೆಯವು ಆಗಿವೆ. ಇವರ ಲಾಛನ ಬೆತ್ತ, ಜೋಳಿಗೆ, ಕಂಸಾಳೆ ಇವುಗಳು ಸ್ವಾಮಿಯಿಂದಲೇ ಬಂದಿರುವವು ಎಂಬ ನಂಬಿಕೆ ಇದೆ. ಆದರೆ 1750ರ ಒಂದು ಕಾವ್ಯದಲ್ಲಿ ಕಂಸಾಳೆಯನ್ನು ಹೆಸರಿಸಲಾಗಿದೆ.

ಉದಾ;– ಕೊಂಬು ತಮ್ಮಟೆ ಸಮ್ಮೇಳ ಕಂಸಾಳೆಯು
ಇಂಬಾಗಿ ನುಡಿವ ಢಮರೀಮಿ
ಕುಂಭೀಣಿ ದೊರೆಗಳು ಪೊಡೆವ ಭೇರೆಯ ದನಿ
ಸಂಭ್ರಮದಿಂದ ನಡೆದಾರು
ವಾಸ ಕಂಸಾಳೆಯ ನುಡಿಸಿಕೊಂಡು ಮಾ
ದೇಶನಂಘ್ರಿಗೆ ನಮೋಯೆಂದು
ಭಾಷೆ ಪಾಲಕ ದುರಿತವ ಪೊರೆಯೆಂದು ವೀ
ರೇಶನ ಕೂಂಡಾಡಿದರು

ಎಂದು ಹೊಗಳುತ್ತಾ ಹೇಳಿರುವುದನ್ನು ಕಾಣಬಹುದು. ಈ ಕಾವ್ಯಗಳನ್ನು ಹಲವು ವಿಭಾಗವಾಗಿ ಮಾಡಿಕೊಂಡು ಹಾಡುವುದನ್ನು ಕಾಣಬಹುದು. ಒಂದೊಂದು ಶಾಖೆಯನ್ನು ಒಂದೊಂದು ಸಾಲು ಎಂದು ಪ್ರತ್ಯೇಕವಾಗಿ ಹಾಡುತ್ತಾರೆ. ಇವು ಒಂದೊಂದು ಸಾಲು ಒಂದೊಂದು ರಾತ್ರಿ ಹಾಡಬಹುದಾದಂತಹವು.

1. ತಾಳುಗತೆ–ಇದರಲ್ಲಿ ಬೇವಿನ ಕೊಲ್ಲಿಯಲ್ಲಿ ಮಾದೇಶ್ವರ ಕಾಣಿಸಿಕೊಂಡು ಹಲಗೇಗೌಡ–ಮಹಾದೇವಮ್ಮನನ್ನು ಹರಸಿರುವುದು. ಮಾಲಂಗಿಯ ಬಳಿ ಮಕ್ಕಳೊಂದಿಗೆ ಆಟವಾಡಿ ಮಕ್ಕಳಾಟಿಗೆ ಮಾದೇವನಾಗಿದ್ದು. ಕಲ್ಯಾಣ ಪಟ್ಟಣದಲ್ಲಿ ಬಸವಣ್ಣ ನೀಲಮ್ಮರ ದೃಢವನ್ನು ಪರೀಕ್ಷಿಸಿದ್ದು.
2. ಶ್ರವಣದೊರೆ ಸಾಲು–ಮಾದೇಶ್ವರ ಶ್ರವಣದೊರೆಯನ್ನು ಕೊಂದದ್ದು.
3. ಜುಂಜೇಗೌಡನ ಸಾಲು–ಆಲಂಬಾಡಿಯ ಜುಂಜೇಗೌಡನನ್ನು ಶಿಷ್ಯನನ್ನಾಗಿ ಪಡೆದು ಗುಡಿಯನ್ನು ಕಟ್ಟಿಕೊಂಡದ್ದು.
4. ಶಂಕರಮ್ಮನ ಸಾಲು–ಸೋಲಿಗೆ ನೀಲೆಗೌಡನ ಮಡದಿ ಶಂಕರಮ್ಮನಿಗೆ ಒಲಿದು ಅವಳ ಕಷ್ಟಗಳನ್ನು ಪರಿಹರಿಸಿ.ಅವಳಿಗೆ ಕಾಯ್ಯ– ಬಿಲ್ಲಯ್ಯ ಎಂಬ ಮಕ್ಕಳನ್ನು ನೀಡಿರುವುದು.
5. ಇಕ್ಕೇರಿ ದೇವಮ್ಮನ ಸಾಲು–ಎಲ್ಲರಿಗೂ ವಿಷದ ಕಜ್ಜಾಯವನ್ನು ನೀಡಿ ಕೊಲ್ಲುತ್ತಿದ್ದ ದೇವಮ್ಮನ ಸೊಲ್ಲನ್ನು ಅಡಗಿಸಿದ್ದು.
6. ಬೇವಿನ ಕಾಳಿಯ ಸಾಲು– ಶ್ರೀಮಂತಿಕೆಯಿಂದ ಮೆರೆಯುತ್ತಿದ್ದ ಬಡವಿನ ಕಾಳಿಯ ಸೊಕ್ಕನ್ನು ಅಡಗಿಸಿದ್ದು.
7. ಸರಗೂರಪ್ಪನ ಸಾಲು–ಸರಗೂರು ರಾಮವ್ವೆಯ ಮಗ ಮೂಗಪ್ಪನ್ನು ಎಣ್ಣೆ ಮಜ್ಜನದ ಸೇವೆಗೆ ಶಿಷ್ಯನನ್ನಾಗಿ ಪಡೆದದ್ದು.

ಈ ಕಾವ್ಯದಲ್ಲಿ ಏಳು ಸೂತ್ರತೆಯ ತೊಡಕನ್ನು ಕಾಣಬಹುದು. ಇದನ್ನು ವೃತ್ತಿಗಾಯಕರು ಕೆಲವು ಆಕರ್ಷಕ ಭಾಗಗಳನ್ನು ಮೇಲಿಂದ ಮೇಲೆ ಹಾಡು ಜನಪ್ರಿಯಗೊಳಿಸಿರುವುದನ್ನು ಕಾಣಬಹುದು. ಇಲ್ಲಿ ಒಂದೊಂದೂ ಪವಾಡಗಳನ್ನೂ ಇಲ್ಲಿ ಕಾಣಬಹುದು. ಈ ಕಾವ್ಯಗಳು ಮೈಸೂರುಜಿಲ್ಲೆ ಹೆಗ್ಗಡದೇವನ ಕೋಟೆ ತಾಲೂಕಿನ ಭೀಮನಕೊಲ್ಲಿಯಿಂದ ಮಾದೇಶ್ವರರ ಕಾವ್ಯ ಆರಂಭವಾಯಿತು. ಇವು ಒಂದು ಚಂಪೂರೂಪದ ಕಾವ್ಯಗಳು, ಕಂಸಾಳೆಯನ್ನು ಹೆಜ್ಜೆ ಹೆಜ್ಜೆಗೂ ತಟ್ಟುತ್ತಾ ನಿರೂಪಿಸಿಕೊಂಡು ಹೊಗಲಾಗುತ್ತದೆ. ಪಲ್ಲವಿಯನ್ನು ಹಿಮ್ಮೇಳದವರು

ISBN – 978-93-5526-247-9

ಹಾಡಿಕೊಂಡು ಹೋಗುತ್ತಾರೆ. ಈ ಕಾವ್ಯ ಭಾಷಾ ವಿಚಾರದಲ್ಲಿ, ವಿಸ್ತಾರದ ವಿಚಾರದಲ್ಲಿ, ವೈವಿದ್ಯದ ಸೊಗಸಿನ ವಿಚಾರದಲ್ಲಿ ಇದು ಒಂದು ಜನಪ್ರಿಯ ಕಾವ್ಯವಾಗಿದೆ.

**ಮಂಟೇಸ್ವಾಮಿ ಕಾವ್ಯ**

ಈ ಕಾವ್ಯದಲದಲ್ಲಿ ಎಲ್ಲೂ ಸಹ ಮಂಟೇಸ್ವಾಮಿ ಎಂದು ಬರುವುದಿಲ್ಲ. ಧರೆಗೆ ದೊಡ್ಡವರು, ನಮ್ಮ ಅಲ್ಲಮ ಪ್ರಭುಗಳು, ಪರಂಜ್ಯೋತಿ ಎಂದು ಕಂಡುಬಂದರೆ ಪಲ್ಲವಿ ಮಾತ್ರ ಸಿದ್ದಪ್ಪಾಜಿಯವರ ಹೆಸರಿನಲ್ಲಿ ಕೊನೆಯವರೆಗೂ ಉಳಿದುಬರುತ್ತದೆ.

ಉದಾ;– ಸಿದ್ದಯ್ಯ ಸ್ವಾಮಿ ಬನ್ನಿ .... ಎಂದು ಪ್ರಾರಂಭವಾಗುವ ಈ ಕಾವ್ಯಗಳು ತಂಬೂರಿ, ಗಗ್ಗರ, ಢಕ್ಕೆಗಳನ್ನು ಬಳಸಿ ಹಾಡುವುದನ್ನು ಕಾಣಬಹುದು.

ನೀಲಗಾರರು ತಮ್ಮನ್ನು ಸಿದ್ದಪ್ಪಾಜಿಯ ಗುಡ್ಡರು ಎಂದು ಕರೆದುಕೊಳ್ಳುತ್ತಾರೆ. ಮಂಟೇಸ್ವಾಮಿ ಮನೆಸ್ಥರು ಎಂದು ಹೇಳಿಕೊಳ್ಳುವ ಕೆಲವರು ಇವರು ಸ್ವಾಮಿಯ ಕಥೆಯನ್ನು ಹಾಡುತ್ತಾರೆ, ಅದರು ಒಂಟಿ ಮಣಿಯನ್ನು ಹಾಕುತ್ತಾರೆ. ಹಾಡುವವರು ಮೂರು ಮಣಿಗಳನ್ನು ಧರಿಸುತ್ತಾರೆ. ಇದು ಎಲ್ಲರಿಗೆ ವಲಿದು ಬಂದಿಲ್ಲ ಒಂದೊಂದು ಮನೆತನದಲ್ಲಿ ಒಬ್ಬ ಮಗ ಮಾತ್ರ ಹಕ್ಕುದಾರನಾಗಿರುತ್ತಾನೆ. ಈ ಮನೆತನದಲ್ಲಿ ಹುಟ್ಟಿದ ಹಿರಿಯ ಮಗನಿಗೆ ದೀಕ್ಷೆ ನೀಡಲಾಗುವುದು. ಇವರು ಒಂದು ತಂಬೂರಿಯಂತಹ ವಾದನವನ್ನು ಬಳಸುತ್ತಾರೆ. ಸಿದ್ದಪ್ಪಾಜಿಯವರು ಹಲಗೂರಿನ ಪವಾಡಕ್ಕೆ ಹೋದಾಗ ತಂಬೂರಿಯನ್ನು ಹಿಡಿದು ಹೋಗಿದ್ದರೆಂದು ಹೇಳುತ್ತಾರೆ.

ಇವರ ಕಾವ್ಯಗಳನ್ನು ನಾಲ್ಕು ರೀತಿಯಿಂದ ಅಭ್ಯಾಸಿಸಬಹುದು.

ದರೆಗೆದೊಡ್ಡವರಸಾಲು
ಸಿದ್ದಪ್ಪಾಜಿ ಸಾಲು
ರಾಜಪ್ಪಾಜಿ ಸಾಲು
ಚಿಕ್ಕಲ್ಲೂರುಸಾಲು
ಎಂದು ವಿಭಾಗಿಸಿರುವುದನ್ನು ಕಾಣಬಹುದು.

ಇವರು ಕನಕಪುರ, ಮಳವಳ್ಳಿ, ರಾಮನಗರ, ಗುಂಡ್ಲುಪೇಟೆ, ಚನ್ನಪಟ್ಟಣ, ಹೆಗ್ಗಡದೇವನ ಕೋಟೆ, ಬಸವ ಕಲಾಣ್ಯ ಮುಂತಾದೆಡೆ ಕಾಣಸಿಗುತ್ತಾರೆ. ಇವರು ಈ ಕಲೆಯನ್ನು ಊರ ಜಾತ್ರೆಗಳಲ್ಲಿ ಒಟ್ಟಿಗೆ ಸೇರುವ ಪ್ರಸಂಗ'ಗಳಲ್ಲಿ ಹಾಡುತ್ತಾರೆ. ನೀಲಗಾರರು ಕುಳಿತು ಚರ್ಚಿಸುತ್ತಾರೆ. ಆದುದರಿಂದ ಮರೆತು ಹೋದ ಕಾವ್ಯದ ಭಾಗಗಳನ್ನು ನೆನಪಿಸಿಕೊಳ್ಳುತ್ತಾರೆ. ಹಬ್ಬಹರಿದಿನಗಳಲ್ಲಿ ಇವರಿಗೆ ಹಾಡುಲು ಅವಕಾಶವಿದೆ. ಅಲ್ಲದೆ ಕೆಲವರು ಪ್ಲೇಗು ಬಂದರೆ ಸಿದ್ದಪ್ಪಾಜಿಯ ದಾಳ ಹಾಕುವುದರೊಂದಿದೆ ಪರಿಹರಿಸಬಹುದೆಂದು, ಕೆಲವೆಡೆ ಕಥೆಹೇಳಿಸಿದರೆ ಪರಿಹಾರವಾಗುತ್ತದೆಂದು ನಂಬಿಕೆ. ಮಂಟೇಸ್ವಾಮಿಯ ಕಾವ್ಯ ಉನ್ನತ ಮಟ್ಟವನ್ನು ಮುಟ್ಟಿದ್ದು ಸಿದ್ದಪ್ಪಾಜಿಯವ ಪ್ರವೇಶದ ನಂತರ. ಇವರು ತಮ್ಮನ್ನು ತಾವು ನೀಲಗಾರರೆಂದು ಕರೆದುಕೊಂಡಿದ್ದಾರೆ.

ಇವರಲ್ಲಿ ಹಲಗೂರಿನ ಪವಾಡ ತುಂಬಾ ಪ್ರಮುಖವಾಗಿರುವಂತಹದು. ಸಿದ್ದಪ್ಪಾಜಿ ಕಾದಗಟ್ಟಿಯನ್ನು ಏರಿರುವುದು ಒಂದು ಅದ್ಬುತವಾದ ಸನ್ನಿವೇಷ

ಉದಾ;–ಕಾದ ಗಟ್ಟಿಮೇ ಡಮರುಗ ಕಾಚುಮಾಡಿ
ಹೊಡೆಯುತ್ತಾರೆ
ಅಯ್ಯಾ ಕಂಡೆ ಅಂತ ಅನ್ನಬೇಡಿ
ಕಾಣಲಿಲ್ಲ ಅನ್ನಬೇಡಿ
ನೋಡಿರೋ ಪಾಂಚಾಳದವರೆ.

ISBN – 978-93-5526-247-9

ಎಂದು ಸಾರುತ್ತಾ ಹುಲ್ಲೇ ಚರ್ಮನ್ನು ಹಾರಿಸಿ ಹುಲಿ ಚರ್ಮವನ್ನು ಹೊದ್ದು, ಕಂಡಾಯವನ್ನು ನೆತ್ತಿಯ ಕೆಳಗಿಟ್ಟು ಬಲಮಗ್ಗುಲಲ್ಲಿ ಪವಡಿಸುವರು ಎಂದು ಹೇಳುವಲ್ಲಿ ಒಂದು ಗತ್ತನ್ನು ಕಾಣಬಹುದು. ಮಂಟೆಸ್ವಾಮಿ ಕಾವ್ಯವನ್ನು ಜನಪದರ ಕಾವ್ಯಗಳಲ್ಲೇ ಅಪ್ರತಿಮವಾಗಿದೆ. ಇದರಲ್ಲಿ ಬರುವ ಕಥೆಗಳು ನಮ್ಮನ್ನು ಮಂತ್ರ ಮುಗ್ದರನ್ನಾಗಿಸುತ್ತವೆ.

ಒಟ್ಟಿನಲ್ಲಿ ಜನಪದ ಕಥೆಗಳು ಒಂದು ಅದ್ಭುತವಾದವು ಇವು ಒಂದು ಸಂದೇಶದೊಂದಿಗೆ ಶೌರ್ಯ ಸಾಹಸವನ್ನು ನೀಡುತ್ತಾ ಒಂದು ನೀತಿಯನ್ನು ಕೊಟ್ಟಿವೆ ಎಂದೇ ಹೇಳಬಹುದು. ಇಲ್ಲಿ ಒಬ್ಬ ನಾಯಕ ಉಳಿದವರು ಪ್ರತಿನಾಯಕರನ್ನು ಕಾಣಬಹುದು. ಕೊನೆಗೆ ನಾಯಕನಿಗೆ ಅವರು ಶರಣಾಗತರಾಗಿರುವುದನ್ನು ಕಾಣಬಹುದು. ಈ ಕಥೆಯ ಬಿಡಿ ಪ್ರಸಂಗಗಳ ಕಥಾಗುಚ್ಚವಾಗಿ ಒಂದು ಅಖಂಡ ಸೂತ್ರವನ್ನು ಹೊಂದಿ ಸುಂದರ ಕಾವ್ಯವಾಗಿ ಕಾವ್ಯ ರಸಿಕರಿಗೆ ಒಂದು ರಸಸ್ವಾದನೆ ಮಾಡಿಸಿದೆ ಎಂದೇ ಹೇಳಬಹುದು.

**ಆಕರ ಗ್ರಂಥಗಳು**

1) ದಕ್ಕಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು–ಜೀ.ಶಂ. ಪರಮಶಿವಯ್ಯ
2) ಜಾನಪದ ಬರಹಗಳು–ಜೀಶಂಪ

***

# 49.ಜನಪದ ಮಹಾಕಾವ್ಯಗಳ ವೃತ್ತಿ ಗಾಯಕರು

ಡಾ. ಶಿವಗಂಗಾ ಯು. ಬಿಲಗುಂದಿ

ಪ್ರಾಚೀನ ಜನರ ಮನಸ್ಸಿನಲ್ಲಿ ಕಲೆ ಮತ್ತು ವಿಜ್ಞಾನ, ನೈತಿಕತೆ, ಧರ್ಮ ಮತ್ತು ಸಾಮಾಜಿಕ ಅಭಿವೃದ್ಧಿಯ ಇತರ ರೀತಿಯ ನಿರ್ದೇಶನಗಳನ್ನು ಬೇರ್ಪಡಿಸಲಾಗದ ಮೂಲಗಳು ಇದ್ದವು. ಸ್ವಲ್ಪ ಸಮಯದ ನಂತರವೇ ಅವೆಲ್ಲವೂ ಸ್ವತಂತ್ರವಾದವು. ಮೌಖಿಕ ಕಲೆ ಇದರ ಮುಖ್ಯ ಅಭಿವ್ಯಕ್ತಿ ಅತ್ಯಂತ ಪ್ರಾಚೀನ ದಂತಕಥೆಗಳು, ಆರಾಧನೆ, ಧಾರ್ಮಿಕ, ದೈನಂದಿನ ಮತ್ತು ಕಾರ್ಮಿಕ ಆಚರಣೆಗಳ ಒಂದು ಭಾಗವಾಗಿದೆ. ಅವರಲ್ಲಿಯೇ ಜನರು ತಮ್ಮ ಬಗ್ಗೆ ಮತ್ತು ಅವರ ಸುತ್ತಲಿನ ಪ್ರಪಂಚದ ಬಗ್ಗೆ ಕೆಲವೊಮ್ಮೆ ಅದ್ಭುತವಾದ ವಿಚಾರಗಳು ಪ್ರತಿಫಲಿಸಿದವು.

ಜಾನಪದ ಕಲೆಯ ಅತ್ಯಂತ ಪುರಾತನ ವಿಧವೆಂದರೆ ಒಂದು ಕಾಲ್ಪನಿಕ ಕಥೆ. ಇದು ಮಾಂತ್ರಿಕ, ಸಾಹಸಮಯ ಅಥವಾ ದೈನಂದಿನ ಪಾತ್ರವನ್ನು ಹೊಂದಿರುವ ಕೆಲಸ. ಇದು ವಾಸ್ತವದೊಂದಿಗೆ ಬೇರ್ಪಡಿಸಲಾಗದಂತ ಸಂಬಂಧವನ್ನು ಹೊಂದಿದೆ. ಅವರ ನಾಯಕರು ಮೌಖಿಕ ಮಹಾಕಾವ್ಯದ ಸೃಜನಶೀಲತೆಯ ನಾಯಕರು. ಪ್ರಪಂಚದ ಬಗ್ಗೆ ಜನರ ವೈಜ್ಞಾನಿಕ ಪೂರ್ವಕಲ್ಪನೆಗಳು ಪುರಾಣಗಳಲ್ಲಿ ಪ್ರತಿಫಲಿಸುತ್ತದೆ. ದಂತಕಥೆಗಳು ಪುರಾಣಗಳಿಗೆ ಹತ್ತಿರವಾಗಿವೆ. ಅವರು ವಾಸ್ತವದಲ್ಲಿ ನಡೆದ ಘಟನೆಗಳ ಬಗ್ಗೆ ಅತಿ ಅದ್ಭುತ ದಂತಕಥೆಗಳು. ದಂತಕಥೆಗಳ ನಾಯಕರು ಆ ದಿನಗಳಲ್ಲಿ ನಿಜವಾಗಿಯೂ ಬದುಕಿನ ಜನರ ಹಾಡುಗಳು ಅಥವಾ ಕಾವ್ಯಾತ್ಮಕ ದಂತಕಥೆಗಳು. ಅವುಗಳಲ್ಲಿ ಮಹಾಕಾವ್ಯದ ನಾಯಕ, ನಿಯಮದಂತೆ ನಾಯಕ. ಅವರು ತಮ್ಮ ಧೈರ್ಯ ಹಾಗೂ ಜನರ ಪ್ರೀತಿಯ ಆದರ್ಶಗಳನ್ನು ಏಕರೂಪವಾಗಿ ಸಾಕಾರಗೊಳಿಸುತ್ತಾರೆ. ಮಹಾಕಾವ್ಯದಲ್ಲಿ ವೀರ ನಾಯಕನಾಗಿರುವುದು ಕಂಡು ಬರುತ್ತವೆ.

ಜನಪದ ಮಹಾಕಾವ್ಯಗಳಾದ ಮಲೆಮಾದೇಶ್ವವರ ಮಂಟೇಸ್ವಾಮಿ, ಹಾಲುಮತ ಮಹಾಕಾವ್ಯ, ಜುಂಜಪ್ಪ, ಮೈಲಾರಲಿಂಗ ಹೀಗೆ ಅನೇಕ ಮಹಾಕಾವ್ಯಗಳು ನಮ್ಮ ಜನಪದ ಕಾವ್ಯದ ವೈಶಿಷ್ಟ್ಯತೆಯನ್ನು ತಿಳಿಸಿಕೊಡುವಂತಹ ವಿಶಿಷ್ಟ ಮಹಾಕಾವ್ಯಗಳು. ನಮ್ಮ ಜನಪದರು ಕನ್ನಡ ಸಾಹಿತ್ಯಕ್ಕೆ ಒಂದು ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ.

"ಜನಪದ ಕಾವ್ಯಗಳಲ್ಲಿ ಪ್ರಧಾನವಾಗಿ ಎರಡು ವರ್ಗಗಳನ್ನು ಕಾಣಬಹುದು.

1. ಹಾಡುವುದನ್ನೆ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡು ಅದನ್ನೇ ಅವಲಂಬಿಸಿ ಬದುಕುವವರು.
2. ಜೀವನೋಪಾಯಕ್ಕೆ ಬೇರೊಂದು ವೃತ್ತಿಯನ್ನು ಅವಲಂಬಿಸಿ ಕೇವಲ ಸಂತೋಷಕ್ಕಾಗಿ ಹಾಡುವವರು."[1]

ಮೊದಲನೆಯ ವರ್ಗ ಕೇವಲ ಕೆಲವರಿಗೆ ಮಾತ್ರ ಸೀಮಿತವಾದುದು. ಯಾವುದೋ ಒಂದು ವಿಶಿಷ್ಟ ಮತದವರೋ, ಯಾವುದೋ ದೈವದ ಆರಾಧಕರೋ ಹಾಡುವುದನ್ನು ಕಥೆ ಮಾಡುವುದನ್ನು ವೃತ್ತಿಯಾಗಿ ಸ್ವೀಕರಿಸಬಹುದು ಅಥವಾ ಯಾವ ದೈವದ ವಯಲಕ್ಕೂ ಒಳಪಡದೆ ಸ್ವತಂತ್ರವಾಗಿ ಎಲ್ಲಿ ದೇವರ ಎಲ್ಲ ಪಂಥದ ಎಲ್ಲ ಬಗೆಯ ಸಾಹಿತ್ಯವನ್ನು ಹಾಡಬಹುದು. ಈ ಎರಡು ಗುಂಪುಗಳನ್ನು 'ವೃತ್ತಿಗಾಯಕರು' ಅಥವಾ 'ಕಥೋಪ ಜೀವಿಗಳು' ಎಂದು ಕರೆಯಬಹುದು.

ವೃತ್ತಿಗಾಯಕರ ತಂಡಗಳನ್ನು ಜಗತ್ತಿನ ಎಲ್ಲ ಭಾಷಾ ಜನಪದಗಳಲ್ಲೂ ಕಾಣಬಹುದು. ಸಮಾಜದಲ್ಲಿ ಅತ್ಯುತ್ತಮ ಸ್ಥಾನವನ್ನು ಅವರು ಪಡೆದಿದ್ದುದು ಕಾಣಬರುತ್ತದೆ. ಶತಮಾನಗಳಿಂದ ಇವರು ಕಂಠಸ್ಥ ಸಂಪ್ರದಾಯದ ಕಾವ್ಯಗಳನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ. ಜಗತ್ತಿನ ಎಲ್ಲ ಕಡೆಗಳಲ್ಲೂ, ಎಲ್ಲ ಸಂಸ್ಕೃತಿಗಳಲ್ಲೂ ವೃತ್ತಿ ಗಾಯಕರು ಕಂಡುಬಂದಿದ್ದಾರೆ. ರಾಜ ಪುತ್ರ ಸ್ಥಾನದ ಭೋಪ ಒಂದು ವಿಶಿಷ್ಟ ಪರಂಪರೆಯ ಜನಪದ ಗಾಯಕ. ಸಾವಿರ ವರ್ಷಕ್ಕೂ ಹಿಂದೆ ರಚಿತವಾದ ವೀರ ಕಾವ್ಯವೊಂದನ್ನು ಅನೇಕ ರಾತ್ರಿಗಳ ಕಾಲ ಅವನು ತನ್ನ ಪರಿವಾರದೊಡನೆ ಹಾಡುತ್ತಾನೆ.

"ಕನ್ನಡ ನಾಡಿನ ಕಥೋಪ ಜೀವಿಗಳ ಪ್ರಥಮ ವಿವರಗಳು ಕಳೆದ ಶತಮಾನದ ಮಧ್ಯಭಾಗದಲ್ಲಿಯೇ ಲಭ್ಯವಾಗುತ್ತದೆ. 1987ರ ವೇಳೆಗೆ ಪ್ರಕಟವಾದ ಗೋವರ್ ಅವರ 'ದಕ್ಷಿಣ ಭಾರತದ ಜನಪದ ಗೀತೆಗಳು' ಗ್ರಂಥದಲ್ಲಿ ಕನ್ನಡ ವೃತ್ತಿಗಾಯಕರ ಒಂದು ಪ್ರಮುಖ ವರ್ಗವನ್ನು ಪರಿಚಯ ಮಾಡಲಾಗಿದೆ. 'ದಾಸ' ಎಂಬ ಹೆಸರಿನಲ್ಲಿ ಅವರು ಗುರುತಿಸಿರುವ ಗಾಯಕ ಭಿಕ್ಷಾಟನೆಯನ್ನು ವೃತ್ತಿಯಾಗಿ ಹೊಂದಿದವನು. ಹಾಡುವುದನ್ನು ಬಿಟ್ಟು ಇನ್ನು ಯಾವ ಉದ್ಯೋಗವೂ ಅವನ ಪಾಲಿಗಿಲ್ಲ. ಮದುವೆಗಳಲ್ಲಿ, ಹಬ್ಬಗಳಲ್ಲಿ, ಸಂಸ್ಕಾರ ಕ್ರಿಯೆಗಳಲ್ಲಿ, ಹುಣ್ಣಿಮೆ ಸಂಕ್ರಾಂತಿಗಳಲ್ಲಿ 'ದಾಸ'ವನ್ನು ಬರಮಾಡಿಕೊಂಡು ಹಾಡಿಸಿ ಉಡುಗೊರೆ ಕೊಡುವ ಪದ್ಧತಿ ಇತ್ತು."[2] ಸಂಚಾರ ಶೀಲನಾದ ದಾಸ ಪ್ರಶಾಂತ ಗ್ರಾಮವೊಂದನ್ನು ಸಂಜೆಯ ವೇಳೆಗೆ ಪ್ರವೇಶಿಸಿದನೆಂದರೆ, ಗ್ರಾಮದಲ್ಲಿ ಒಂದು ಹೊಸ ಬೆಳಕು ಕಾಣುತ್ತಿತ್ತು. ಜನರೆಲ್ಲರೂ ಸೇರಿ ಒಂದು ಸಾಮೂಹಿಕ ಗೀತೆಯಾಗಿ ಹಾಡುತ್ತಿದ್ದರು. 'ದಾಸ' ತಂತಿ ವಾದ್ಯವೊಂದನ್ನು ಹಿಡಿದು ರಾಮಾಯಣ, ಭಾಗವತಗಳಿಗೆ ಸಂಬಂಧಪಟ್ಟ ಅನೇಕ ಐತಿಹಾಸಿಕ ಕತೆಗಳನ್ನು ವೀರಕಥೆಗಳನ್ನು ಹಾಡುತ್ತಿದ್ದರು.

ISBN – 978-93-5526-247-9

ಕೋಲಾರ ಜಿಲ್ಲೆಯಲ್ಲಿ ಅವರು 'ಚೀನೀ ಬುರುಡಿ' ಹಿಡಿದ ಜೋಗಿಗಳನ್ನು ಕಂಡು ಅವರಿಂದ ಕೆಲವು ಪದಗಳನ್ನು ಹಾಡಿಸಿದ ಸನ್ನಿವೇಶವನ್ನು ವರ್ಣಿಸಿದ್ದಾರೆ. ಗಂಡಸು ಚೀನೀ ಬುರುಡೆಯನ್ನು ನುಡಿಸಿದರೆ ಅದರ ಶ್ರುತಿಗೆ ಹೆಂಗಸು ತೆಲುಗಿನಲ್ಲಿ ಹಾಡಿದಳು. ಅದೊಂದು ಸುಂದರ ಪ್ರೇಮಗೀತೆ. ಚೀನೀ ಬುರುಡೆಯನ್ನು ಹಿಡಿದ ಕಿನ್ನರಿ ಜೋಗಿಗಳು ಕರ್ನಾಟಕದಲ್ಲಿ ಇದ್ದಾರೆ. ಬಹುಶಃ ತೆಲುಗು ಹೆಚ್ಚು ಪ್ರಚಲಿತವಿರುವ ನೆಲೆಯಾದ ಕೋಲಾರ ಜಿಲ್ಲೆಯ ಜನಪದ ಕಲಾವಿದ ತೆಲುಗಿನಲ್ಲಿ ಲಾವಣಿಯನ್ನು ಹಾಡಿದ್ದರೆ ಆಶ್ಚರ್ಯವಿಲ್ಲ. ಆದರೆ ಈ ವೃತ್ತಿಗಾಯಕನ ತಂಡದಲ್ಲಿ ಹೆಂಗಸು ಹಾಡಿಗಳು ಎಂಬ ಅಂಶ ಬರುತ್ತದೆ.

ಜೋಗಿಗಳ ಸಂಪ್ರದಾಯದಲ್ಲಿ ಎಲ್ಲಮ್ಮನ ಪರಂಪರೆಯೊಂದನ್ನು ಬಿಟ್ಟರೆ, ಹೆಂಗಸರು, ಗಂಡಸರು ಕೂಡಿದ ಹಾಡು ವಿರಳ. ಈ ಕಲಾವಿದರು ಹಾಡುವುದರಲ್ಲಿ ಸಮರ್ಥರಾಗಿದ್ದರು. ನೀಲಗಾರರಲ್ಲಿ ಪ್ರಚಲಿತವಾಗಿದ್ದ ಈ ಲಾವಣಿ ಈಗ ಸಂಪೂರ್ಣವಾಗಿ ಮರೆತು ಹೋಗಿವೆ. ಚೌಡಿಕೆಯವರಲ್ಲಿ ಹೆಚ್ಚಾಗಿ ಪ್ರಚಲಿತವಾಗಿರುವ ತರೀಕೆರೆ ಪಾಳೆಗಾರರ ಲಾವಣಿ ಭಾಗವನ್ನು ಶ್ರೀ ಮಾಸ್ತಿಯವರು ನೀಡಿದ್ದಾರೆ. ಚೌಡಿಕೆ ಮೇಳದಲ್ಲಿ ಸಮಗ್ರರಾತ್ರಿ ನಿರೂಪಿಸಲ್ಪಡುವ ಪ್ರಸಿದ್ಧ ಲಾವಣಿ. ಮಾಸ್ತಿಯವರು ಬಹುಶಃ ಚೌಡಿಕೆ ಸಂಪ್ರದಾಯದವರಿಂದಲೇ ಈ ಕತೆಯನ್ನು ಕೇಳಿರಬೇಕು. ಚೌಡಿಕೆಯವರ ಮೇಳ ಸಾಮಾನ್ಯವಾಗಿ ಇಬ್ಬರಿಂದ ಕೂಡಿರುತ್ತದೆ. ಮುಮ್ಮೇಳದವನು ಚೌಡಿಕೆಯನ್ನು ನುಡಿಸುತ್ತ ಮುಖ್ಯ ಕಥೆಯನ್ನು ಬೆಳೆಸಿಕೊಂಡು ಹೋಗುತ್ತಾನೆ. ಹಿಮ್ಮೇಳದವನು ಸೊಲ್ಲು ಕೊಡುತ್ತಾ ಸಾಗುತ್ತಾನೆ. ಅವರ ಪಲ್ಲವಿಯನ್ನು ಸರಿಯಾಗಿ ಉಲ್ಲೇಖಿಸಿದರೂ ಚೌಡಿಕೆಯವರು ಅಥವಾ 'ಗೊಂದಲಿಗರು' ಎಂದು ವೃತ್ತಿಗಾಯದ ಪರಂಪರೆಯೊಂದನ್ನು ಸ್ಪಷ್ಟಪಡಿಸಿಲ್ಲ. ಕಿನ್ನರ ಜೋಗಿಗಳನ್ನು ಅವರು ಹಾಡುವ ಅರ್ಜುನ ಜೋಗಿಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ.

ನಮ್ಮ ವೃತ್ತಿಗಾಯಕರ ಒಂದು ಪರಂಪರೆಯ ಶಾಸ್ತ್ರೀಯ ಪರಿಚಯ ಪ್ರಥಮ ಬಾರಿಗೆ 'ಜೀವನ ಸಂಗೀತ' ಎಂಬ ಕೃತಿಯಲ್ಲಿ ದೊರಕುವುದನ್ನು 'ಹುಟ್ಟಿದಹಳ್ಳಿ ಹಳ್ಳಿಯ ಹಾಡು' ಕೃತಿಯಲ್ಲಿ ಜನಪದರ ಸಂಸ್ಕೃತಿ ನೈಜವಾದ ಚಿತ್ರಣವು ಮೂಡುವುದು. ವೃತ್ತಿಗಾಯಕರ ನಿಕಟ ಪರಿಚಯವನ್ನು ಶ್ರೀ ರಂಗಸ್ವಾಮಿಯವರ ಕೃತಿಯಲ್ಲಿ ಕಾಣಬಹುದು. 'ವೃತ್ತಿಗಾಯಕರ' ಸಕ್ರಮವಾದ ಪರಿಚಯವನ್ನು ನೀಡುವಲ್ಲಿ ವಿಫಲರಾದರೂ ಕೆಲವು ಪ್ರಸಿದ್ಧ ಲಾವಣಿಗಳನ್ನು ಹೆಸರಿಸಿರುವ ದೇವುಡು ಅವರ ಉಲ್ಲೇಖವಿದೆ. ಅವರ "ಕರ್ನಾಟಕ ಸಂಸ್ಕೃತಿ" ಗ್ರಂಥದಲ್ಲಿ ಲಾವಣಿ ಸಂಪ್ರದಾಯದ ಅನೇಕ ಸ್ವಾರಸ್ಯವಾದ ವಿಷಯಗಳು ಬರುತ್ತವೆ.

ಉತ್ತರ ಕರ್ನಾಟಕ, ಉತ್ತರ ಕನ್ನಡ ಜಿಲ್ಲೆ ಈ ಪ್ರದೇಶಗಳಲ್ಲಿ ಸವಿಸ್ತಾರ ಜನಪದ ಕಾವ್ಯಗಳನ್ನು ಸಂಗ್ರಹಿಸಿರುವ ಡಾ. ಗದ್ದಿಮಠ ಅವರು 'ದುಂದುಮೆ, ಕಂಬಿಯ ಪದ, ಹಂತಿಯ ಪದ ಮುಂತಾದ ಶೀರ್ಷಿಕೆಗಳಲ್ಲಿ ಗೀತ ಸಂಪ್ರದಾಯಗಳ ಪರಿಚಯ ನೀಡಿದ್ದಾರೆ. ಶ್ರೀ ಬಿ.ಬಿ. ಮಹಿಷವಾಡಿಯವರಲ್ಲಿ ಕಾಣಬಹುದು. ತಮ್ಮ ಕಿರುಹೊತ್ತಿಗೆಯಂದರ 'ಜಾನಪದ ಕಥಾ ಸೃಷ್ಟಿ' ಎಂಬ ಅಧ್ಯಾಯದಲ್ಲಿ ಜನಪದ ಕಥೆಗಳ ವ್ಯಾಪಕತೆಯನ್ನೂ, ಹಿನ್ನೆಲೆಯನ್ನೂ ನೀಡಿರುವ ಅವರು ಕಥೋಪ ಜೀವಿಗಳಾದ 'ಗೊಂದಲಿಗರು, ಕುರುಬರು, ದೊಂಬಿದಾಸರು, ಜೋಗತಿಯರು, ಲಾವಣಿಕಾರರು ಮುಂತಾದವರ ಪರಿಚಯ ನೀಡಿದ್ದಾರೆ. 'ಜನಪದ ಕಥನ ಗೀತೆ'ಗಳ ಈ ಸಂಕಲನದಲ್ಲಿ ಕೃಷ್ಣ, ಶಿವ, ಸಾಮಾಜಿಕ ಕಥೆಗಳನ್ನು ಒಳಗೊಂಡ ಮೊದಲ ಸಂಕಲನ ಕೃತಿಯಾಗಿದೆ. ದೊಂಬಿದಾಸರ ಕಥೆಗಳಾಗಿವೆ. ನೀಲಗಾರರ ಹಾಗೂ ದೇವರ ಗುಡ್ಡರ ಸಂಪ್ರದಾಯಗಳ ವೃತ್ತಿಗಾಯಕರನ್ನು ಸಂದರ್ಶಿಸಿದರು.

ದಕ್ಷಿಣ ಕರ್ನಾಟಕದ ಕಥೋಪ ಜೀವಿಗಳು ದೊಡ್ಡ ತಂಡಗಳನ್ನು ಪಡೆದ ಒಂದು ಸಮೃದ್ಧ ನೆಲೆ. ಅನೇಕ ಸಂಪ್ರದಾಯದ ಈ ವೃತ್ತಿಗಾಯಕರು ವೈವಿಧ್ಯಮಯ ವೇಷ-ಭೂಷಣಗಳಿಂದಲೂ ವಿಶಿಷ್ಟ ಸ್ವರೂಪದ ವಾದ್ಯಗಳಿಂದಲೂ ಶೋಭಿತರಾಗಿ ಉತ್ಸವಗಳಲ್ಲಿ, ಹಬ್ಬ-ಹರಿದಿನ-ಪುಣ್ಯ ದಿನಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ವೃತ್ತಿಗಾಯಕರಲ್ಲಿ ಎರಡು ಪ್ರಕಾರಗಳಲ್ಲಿ ತಿಳಿಯಬಹುದು.

ಧಾರ್ಮಿಕ ಕಥೋಪ ಜೀವಿಗಳು ಇದು ಮೊದಲ ವೃತ್ತಿಗಾಯಕರು ಎಂದು ಸ್ಪಷ್ಟ ವಿಚಾರವನ್ನು ತಿಳಿಸಿದ್ದಾರೆ. ಧಾರ್ಮಿಕ ಎಂಬ ಮಾತನ್ನು ಕೇಳಿದರೆ ದೈವದ ಹಿನ್ನೆಲೆಯ ಕಲ್ಪನೆ ಬರುವುದುಂಟು. ತಮ್ಮ ಅಧಿದೈವದ ಮಹಿಮೆಗಳನ್ನು ಪ್ರಸಾರ ಮಾಡಿ ಜನತೆಯಲ್ಲಿ ಧರ್ಮಶ್ರದ್ಧೆ, ಭಕ್ತಿನಿಷ್ಠೆಗಳನ್ನು ತ್ಯಾಗ ಶೀಲತೆಯನ್ನು ಕಾಪಾಡಿಕೊಂಡು ಬರುವುದು. ದೇವರ ಪ್ರತಿನಿಧಿಯಂತೆ ಓರ್ವ ಪುಣ್ಯ ಪುರುಷನಂತೆ, ಗುರುವಿನಂತೆ ಈ ಧಾರ್ಮಿಕ ಪ್ರತಿನಿಧಿಗಳನ್ನು ಆಯಾ ಒಕ್ಕಲುಗಳು ಗೌರವಿಸುತ್ತಾರೆ. ಮೂಡಲಗಿರಿಯಪ್ಪನ 'ದಾಸರು' ಚುಂಚನಗಿರಿಯಪ್ಪನ 'ಜೋಗಿಗಳು' ಮಾತ್ರ ಹಾಡುಗಾರರ ಪರಂಪರೆಗೆ ಸೇರಿದವರಲ್ಲ. ಧಾರ್ಮಿಕ ಕಲಾವಿದರೆಂದು ಕರೆಸಿಕೊಳ್ಳುವರು. ಅನೇಕ ಲೌಕಿಕ ಕಥೆಗಳನ್ನು ಹಾಡುತ್ತಾರೆ. ಮಾದೇಶ್ವರ, ಮಂಟೇಸ್ವಾಮಿ, ಎಲ್ಲಮ್ಮ ಮುಂತಾದ ಕತೆಗಳನ್ನು ಕೇಳುತ್ತಾರೆ. ಸಂಪ್ರದಾಯದ ಕತೆಗಾರರೂ ತಮ್ಮ ಧಾರ್ಮಿಕ ಕಥೆಯ ಜೊತೆಗೆ ಅನ್ಯದೈವಗಳಿಗೆ ಸಂಬಂಧಿಸಿದ ಅನ್ಯ ವಸ್ತುಗಳಿಗೆ ಸಂಬಂಧಿಸಿದ ಅನೇಕ ಕತೆಗಳನ್ನು ಕಲಿಯುತ್ತಾರೆ.

ಜನಪದ ಕಾವ್ಯದ ಗಾಯಕರು ಕಂಸಾಳೆಯವರು ಇವರ ಆರಾಧ್ಯದೈವ ಮಾದೇಶ್ವರರು. ಇವರ ವಾದ್ಯ ಕಂಸಾಳೆ. ಇವರಿಗೆ ದೇವರಗುಡ್ಡರು ಗಾಯಕರು ಎನ್ನುವರು. ನೀಲಗಾರರು, ಚೌಡಿಕೆಯರು, ಗೊರವರು, ಗುಣೆಯವರು ಇವರೆಲ್ಲ ಧಾರ್ಮಿಕ ವೃತ್ತಿ ಗಾಯಕರಾಗಿರುವರು. ದೇವರ ಗುಡ್ಡರು, ನೀಲಗಾರರು, ಚೌಡಿಕೆಯವರು, ಗಣೆಯವರು, ಗೊರವರು ಈ ಗಾಯಕರು

ಮಾದೇಶ್ವರ ಕತೆ, ಮಂಟೇಸ್ವಾಮಿಯ ಕತೆ, ಎಲ್ಲಮ್ಮನ ಕತೆ, ಜುಂಜಪ್ಪನ ಕತೆ, ಮೈಲಾರಲಿಂಗನ ಕತೆ ಇವೆಲ್ಲವೂ ಧಾರ್ಮಿಕ ಕತೆಗಳಾಗಿದ್ದವು. ಇವುಗಳನ್ನು ವೃತ್ತಿ ಗಾಯಕರಿಂದಲೂ ಹಾಡಿಸಲ್ಪಟ್ಟವು. ಈ ಧಾರ್ಮಿಕ ಗಾಯಕರಲ್ಲಿ ತಮ್ಮ ದೈವದ ನಿಷ್ಠೆಯಿಂದ ಕಾಪಾಡಿಕೊಂಡು ಬಂದಿರುವುದು.

ಯಾವುದೇ ಧರ್ಮದ, ದೈವದ ವ್ಯಾಪ್ತಿಗೂ ಒಳಪಡದೆ ಸ್ವತಂತ್ರವಾಗಿ ತಾವು ಬಯಸಿದ ಕತೆಗಳನ್ನು ಅಭ್ಯಸಿಸಿಕೊಂಡು ಬಂದ ಕಥೋಪ ಜೀವಿಗಳನ್ನು 'ಲೌಕಿಕ' ವೃತ್ತಿಗಾಯಕರೆಂದು ಕರೆಯಬಹುದು. ಇದಕ್ಕೆ ಯಾವುದೇ ನಿರ್ಬಂಧವಿಲ್ಲ. ಹಾಡುಗಾರಿಕೆಯ 'ವೃತ್ತಿ', ದೈವ, ಧರ್ಮ ಇವುಗಳಿಗೆ ಸಂಬಂಧಪಟ್ಟರೆ, ಬೇರೆ–ಬೇರೆ ಮತವನ್ನು ದೀಕ್ಷೆಯನ್ನು ಪಡೆದು ವ್ಯಾದ್ಯಾನವನ್ನು ಕೈಗೆತ್ತಿಕೊಳ್ಳಬಹುದು. ಹೀಗೆ ಸಂಚರಿಸುತ್ತಾ, ಗಾಯನ ಮಾಡುವುದು ಬೇರೆ ಲೌಕಿಕ ವಿಚಾರವನ್ನು ಒಳಗೊಂಡಿರುವ ಹಾಡುಗಳನ್ನು ವೃತ್ತಿಗಾಯಕರು ಸವಿಸ್ತಾರ ಜನಪದ ಕಾವ್ಯಗಳನ್ನು ಕಂಠಪಾಠ ಮಾಡಿಕೊಂಡು ಪ್ರಸಾರ ಮಾಡುತ್ತಿದ್ದರು.

ವೃತ್ತಿಗಾಯಕರೆಲ್ಲ ಬಹಳ ವಿಚವಾರಗಳನ್ನು ತಿಳಿದು ಆಳವಾದ ವಿಷಯವನ್ನು ಬಿಚ್ಚಿಡುತ್ತಿದ್ದರು. ಹಾಡಿನ ಮೂಲಕ ವಿಷಯಗಳು ಜನಸಾಮಾನ್ಯರಿಗೂ ತಿಳಿದುಬರುತ್ತಿದ್ದವು. ಹಳ್ಳಿಗಳಲ್ಲಿ ಜೀವನದ ಸಣ್ಣ ಸಣ್ಣ ಪಟ್ಟಣಗಳ, ನಗರಗಳ ಮನರಂಜನೆಗಿಂತಲೂ ವೃತ್ತಿಗಾಯಕರ ಮೇಳಗಳೇ ಆಗಿದ್ದವು. ಯಕ್ಷಗಾನ ಬಯಲಾಟಗಳು, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ ಮುಂತಾದವು ವರ್ಷದಲ್ಲಿ ಯವಾಗಲೋ ಒಮ್ಮೆ ಹಳ್ಳಿಯ ರಂಗದಲ್ಲಿ ಕಾಣಿಸಿಕೊಳ್ಳುತ್ತವೆ.

ಆದರೆ, ವೃತ್ತಿಗಾಯಕರ ಅನೇಕ ಸಂಪ್ರದಾಯದವರು ಆಗಾಗ ಹಳ್ಳಿಗಳ ಮೇಲೆ ಸಂಚಾರ ಮಾಡುತ್ತ ನಾಲ್ಕು ಜನ ಸೇರಿದಡೆ ಆಹ್ವಾನ ದೊರೆತ ಕಡೆ, ಮನೆ ಮನೆಯ ಜಗಲಿಗಳಲ್ಲಿ ಇಂಥ ಜನಪದ ಮಹಾಕಾವ್ಯಗಳನ್ನು ವಾದ್ಯದ ಹಿನ್ನೆಲೆಯಲ್ಲಿ ಹಾಡಿ ಜನರನ್ನು ತಣಿಸುತ್ತಿದ್ದರು. ಅನೇಕ ಪುಣ್ಯಪುರುಷರ, ದಿವ್ಯ ಜೀವಿಗಳ, ಸಾಹಸಿಗಳ, ತಬ್ಬಲಿಗಳ, ಅಸಹಾಯಕರ, ಕ್ರೂರಿಗಳ, ಕರ್ಮಿಗಳ ಕತೆಗಳನ್ನು ಹಾಡುತ್ತ ನೀತಿ, ಧರ್ಮಗಳನ್ನು ಪ್ರಸಾರ ಮಾಡುತ್ತ ಸಂಸ್ಕೃತಿಯ ಸೆಲೆ ಬತ್ತಿ ಹೋಗದಂತೆ ಕಾದುಕೊಂಡು ಬರುತ್ತಿದ್ದರು. ಕಂಠಸ್ಥ ಸಂಪ್ರದಾಯದ ಉನ್ನತ ಮಹಾಕಾವ್ಯ ಹಾಗೂ ಕಾವ್ಯ ಪರಂಪರೆಯನ್ನು ಜನತೆಯ ಬಾಗಿಲಿಗೆ ತಂದು ರಸಾಸ್ವಾದನೆಯ ಸೊಗಸನ್ನು ಅವರ ಪಾಲಿಗೆ ದೊರಕಿಸುವಂತೆ ವೃತ್ತಿಗಾಯಕರ ಮನಮುಟ್ಟುವ ಕಾರ್ಯವನ್ನು ನಿರ್ವಹಿಸಿದರು.

**ಅಡಿ ಟಿಪ್ಪಣಿಗಳು:**

1. ಜನಪದ ವಿಶ್ವಕೋಶ: ಜಾನಪದ, ಪುಟ ಸಂಖ್ಯೆ 1071
2. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು: ಜೀ.ಶಂ. ಪರಮಶಿವಯ್ಯ, ಪುಟ ಸಂಖ್ಯೆ 107.

***

## 50.ಜನಪದ ಮಹಾಕಾವ್ಯ: ಮಂಟೇಸ್ವಾಮಿ ಕಾವ್ಯ ಕುರಿತು ಒಂದು ಅಧ್ಯಯನ

ವಿಜಯಲಕ್ಷ್ಮೀ ಡಿ.

ಮನುಕುಲದ ಮೊದಲ ಇತಿಹಾಸ ಜನಪದ. ಜಾನಪದವು ಸಮುದಾಯದ ಸಂಸ್ಕೃತಿ, ಪುರಾಣ ಮತ್ತು ಅಲಿಖಿತ ಇತಿಹಾಸಗಳ ಬೃಹತ್ ಭಂಡಾರವಾಗಿದೆ. ಆದುದರಿಂದ ಅನುದಿನದ ಚಟುವಟಿಕೆಗಳನ್ನು, ಧೋರಣೆಗಳನ್ನು ನಿರ್ಧರಿಸುವ ಮಾರ್ಗದರ್ಶಿಗಳು ಆಗಿರುತ್ತದೆ. ಜನಪದ ಸಾಹಿತ್ಯವು ಆಕಾಶದಷ್ಟು ವಿಶಾಲ, ಸಮುದ್ರದಷ್ಟು ಆಳ, ಅದರಲ್ಲಿ ಹಲವು ಪ್ರಕಾರಗಳಿವೆ. ಗಾದೆ, ಒಗಟು, ಒಡಪು, ಕಥನ, ಮಹಾಕಾವ್ಯಗಳು ಪ್ರಮುಖವಾಗಿವೆ. ಜಗತ್ತಿನ ಸಾಹಿತ್ಯದ ಮೂಲವನ್ನು ಜನಪದ ಸಾಹಿತ್ಯದಲ್ಲಿ ಕಾಣಬಹುದು. ಅದಕ್ಕೆ ಬಿ.ಎಂ. ಶ್ರೀ ಅವರು ಜನಪದ ಸಾಹಿತ್ಯವನ್ನು "ಜನವಾಣಿ ಬೇರು, ಕವಿವಾಣಿ ಹೂವು" ಎಂದು ಕರೆದಿದ್ದಾರೆ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಮಹಾಕಾವ್ಯಗಳ ಬಹು ದೊಡ್ಡ ಪಾಲು ಇದೆ. ಜನಪದ ಮಹಾಕಾವ್ಯಗಳು ಸಾಂಸ್ಕೃತಿಕ ಚರಿತ್ರೆಯ ಬೆಳವಣಿಗೆಗೆ ಹೊಸ ಆಯಾಮ ತಂದುಕೊಡಬಲ್ಲದು. ಜನಪದ ಮಹಾಕಾವ್ಯಗಳು ಕೇವಲ ಮನೋರಂಜನೆಗಾಗಿ ಸೃಷ್ಠಿಯಾದುದಲ್ಲ. ಜನಪದರ ಸಮಸ್ತ ಆಚರಣೆ, ನಂಬಿಕೆ, ಸಂಪ್ರದಾಯ ಮುಂತಾಗಿ ಒಟ್ಟಾರೆ ಸಮಸ್ತ ಜೀವನವನ್ನೇ ಒಳಗೊಂಡಿದೆ. ಜನಪದ ಮಹಾ ಕಾವ್ಯಗಳ ಮುಖೇನ ಆಯಾಯ ಭೌಗೋಳಿಕ ಸಾಂಸ್ಕೃತಿಕ ವಲಯವನ್ನು ಗುರುತಿಸಲು ಸುಲಭವಾಗುತ್ತದೆ.

ಸಿ. ಎಂ. ಬೊವ್ರ ಹೇಳುವಂತೆ ಶಿಷ್ಠ ಮತ್ತು ಮೌಖಿಕ ಈ ಎರಡು ಬಗೆಯ ಮಹಾಕಾವ್ಯಗಳಲ್ಲಿ, ಮೌಖಿಕ ಕಾವ್ಯವೇ ಶುದ್ದವಾದ ನಾಗರೀಕತೆಯಿಂದ ಕಲುಷಿತವಾಗದ ಕವಿ ವಾಣಿ. ಭಾರತದ ಅನೇಕ ಬುಡಕಟ್ಟು ಜನಾಂಗಗಳು, ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಅನೇಕ ಮೌಖಿಕ ಮಹಾಕಾವ್ಯಗಳು ಪ್ರಚಲಿತವಾಗಿದ್ದು, ಪರಂಪರಾಗತವಾದ ಪರಂಪರೆಗೆ ವಿರುದ್ಧವಾದ ನೆಲೆಯಲ್ಲಿ ಈ ಕಾವ್ಯಗಳು ಸೃಷ್ಠಿಯಾಗಿವೆ ಎಂದರೆ ತಪ್ಪಾಗಲಾರದು. ಮಹಾಕಾವ್ಯಗಳಲ್ಲಿ ನಾಯಕರು ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಧ್ವನಿ ಎತ್ತುತ್ತಿದ್ದ ಕಥೆಗಳು.

ಇನ್ನು ಕರ್ನಾಟಕದ ಮಟ್ಟಿಗೆ ಬಂದರೆ ಕನ್ನಡದ ಜನಪದ ಮಹಾಕಾವ್ಯ ಮಲೆ ಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಎಲ್ಲಮ್ಮ, ಕುಮಾರರಾಮನ ಕಾವ್ಯ ಪ್ರಮುಖ ಪರಂಪರಾಗತವಾದ ಮಹಾಕಾವ್ಯಗಳು, ಕರ್ನಾಟಕದ ಸಂಸ್ಕೃತಿ ಮತ್ತು ತಾತ್ವಿಕತೆಗೆ ಹಿಡಿದ ಕನ್ನಡಿಯಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕದ ಮಹಾ ಕಾವ್ಯಗಳಲ್ಲಿ ಒಂದಾದ ಮಂಟೇಸ್ವಾಮಿ ಕಾವ್ಯವನ್ನು ಕುರಿತು ಚರ್ಚಿಸಲು ಬಯಸುತ್ತೇನೆ.

ಮಂಟೇಸ್ವಾಮಿ ಕಾವ್ಯ ಧಾರ್ಮಿಕ ಪುರುಷನ ಕುರಿತಾದ ಒಂದು ಮಹಾಕಾವ್ಯ. ಧರ್ಮ ಪರಂಪರೆ ನಿರ್ಮಿಸಿದ ಕಾರಣ ಪುರುಷನ ಕಥೆಯಾಗಿದೆ. ಕೈಲಾಸದಿಂದ ಆಗಮಿಸಿದ ಕಾರಣ ಪುರುಷನಾದ ಮಂಟೇಸ್ವಾಮಿಯ ಕಥೆಯನ್ನು ಅವನ ಒಕ್ಕಲು ಸಂಪ್ರದಾಯವನ್ನು ಒಪ್ಪಿಕೊಂಡಿರುವ ನೀಲಗಾರರು ಸೃಷ್ಠಿಸಿ ಹಾಡಿರುವ ಕಾವ್ಯವಾಗಿದೆ. ಕನ್ನಡದ ಪ್ರಮುಖ ಕಥಾ ನಾಯಕ ಮಂಟೇಸ್ವಾಮಿ, ವೀರಶೈವ ಧರ್ಮವಲ್ಲದೆ ಸ್ವತಂತ್ರ ಜಾನಪದದ ಪ್ರತಿಪಾದಿತ. ಉತ್ತರದ ಕಲ್ಯಾಣ ಬಿಟ್ಟು ದಕ್ಷಿಣಕ್ಕೆ ಬಂದವರು ಮಂಟೇಸ್ವಾಮಿ.

ಕರ್ನಾಟಕದ ಉದ್ದಗಲಕ್ಕೂ ಭಕ್ತಿ ಸಂಪ್ರದಾಯವನ್ನು ಹುಟ್ಟು ಹಾಕಿದವರು ಮಂಟೇಸ್ವಾಮಿ ಎನ್ನುವುದು ನೀಲಗಾರ ಸಮುದಾಯದಿಂದ ತಿಳಿದುಬಂದ ವಿಷಯವಾಗಿದೆ. ಸಿದ್ದಪ್ಪಾಜಿ, ರಾಮಪ್ಪಾಜಿ, ದೊಡ್ಡಮ್ಮ ತಾಯಿ, ನೀಲಮ್ಮ, ಮಡಿವಾಳ ಮಾಚಯ್ಯ ಇಂತಹ ಶಿಷ್ಯ ಪರಂಪರೆಯನ್ನು ಹುಟ್ಟು ಹಾಕಿದರು. ಆದಿಗುರು ಅಲ್ಲಮಪ್ರಭು ಧರೆಗೆ ದೊಡ್ಡವರು, ಪರಂಜ್ಯೋತಿ ಮಂಟೇದ ಲಿಂಗಯ್ಯ ಕಾಲಜ್ಞಾನ ಸಾರಿದ ಕಂಡಾಯದ ಒಡೆಯ ಎಂಬ ಸಾಲು ಪ್ರಸ್ತಾಪವಾದರೂ ಮಂಟೇಸ್ವಾಮಿಗೂ ಆದಿಗುರುವಿಗೂ ಯಾವುದೇ ಸಂಬಂಧವಿಲ್ಲ. ಕಥಾನಾಯಕ ಕೈಲಾಸದಿಂದ ಬಂದಂತೆ ಐತಿಹ್ಯವಿದೆ ಎಂಬುದು ನೀಲಗಾರರ ಉವಾಚ್ಯವಾಗಿದೆ. ಇವರ ಜೊತೆ ಮೂವರು ಭಕ್ತರು ಬಂದರೆಂದು ವಾಡಿಕೆಯಿದೆ. ಪಟ್ಟಭದ್ರ ಹಿತಾಸಕ್ತಿಗಳು, ಜಾತಿವ್ಯವಸ್ಥೆ, ಬಂಡವಾಳಶಾಹಿ ವ್ಯವಸ್ಥೆಯನ್ನು ದಮನಿಸುವಲ್ಲಿ ಧರೆಗೆ ದೊಡ್ಡವರು ಯಶಸ್ವಿಯಾಗಿದ್ದಾರೆ ಎಂದರೆ ತಪ್ಪಾಗಲಾರದು. ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಸುಧೀರ್ಘ ಪ್ರಯಾಣ ಮಾಡಿ ದಕ್ಷಿಣದಲ್ಲಿ ನೆಲೆಯನ್ನು ಕಂಡುಕೊಳ್ಳಲು ಮಾಡಿದ ಸಂಘರ್ಷಗಳು, ನೀಲಗಾರರು ಹಾಡುವ ಧರೆಗೆ ದೊಡ್ಡವರು ಮಂಟೆಸ್ವಾಮಿ ಕಾವ್ಯವಾಗಿದೆ.

ISBN – 978-93-5526-247-9

ಈ ಮಂಟೇಸ್ವಾಮಿಯ ಕಾವ್ಯದಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳು ಕಂಡುಬರುತ್ತದೆ. ಧರೆಗೆ ದೊಡ್ಡವರ ಸಾಲು, ಸಿದ್ದಪ್ಪಾಜಿಯ ಸಾಲು, ರಾಚಪ್ಪಾಜಿಯ ಸಾಲು, ಚಿಕ್ಕಲ್ಲೂರು ಸಾಲು ಇವೇ ಮೊದಲಾಗಿ. ಮಂಟೇಸ್ವಾಮಿ ಕಾವ್ಯ ಪ್ರಾರಂಭವಾಗುವುದು ಉತ್ತರದ ಕಲ್ಯಾಣದಿಂದಲೇ. ಗುರುವಿಲ್ಲದ ಗುಡ್ಡದ ಬಸವಣ್ಣನವರು ಪಟ್ಟದ ಮಂಚದ ಮೇಲೆ ಮಲಗಿಕೊಂಡಾಗ ನೀಲಮ್ಮ ಬಂದು ಕ್ಷೇಮಸಮಾಚಾರವನ್ನು ವಿಚಾರಿಸುತ್ತಾಳೆ. ಆಗ ಬಸವಣ್ಣನವರು "ಇಂದಿನಿಂದ ನಾನು ಲಿಂಗಮಣಿ ತೊಳೆಯುವುದಿಲ್ಲ, ಲಿಂಗಪೂಜೆ ಮಾಡುವುದಿಲ್ಲ, ನನಗಿಂತ ಮಿಗಿಲಾದ ಗುರುವಿನ ದರ್ಶನವಾಗುವ ತನಕ' ಅನ್ನ ಆಹಾರ ಸೇವಿಸುವುದಿಲ್ಲವೆಂದು" ಹೇಳುತ್ತಾರೆ. ಬಸವಣ್ಣನವರು ಅನ್ನ ಆಹಾರವನ್ನು ತ್ಯಜಿಸಿದರೆ, ಎಲ್ಲಾ ಜೀವರಾಶಿಗಳು ಅನ್ನ ತ್ಯಜಿಸಿಬಿಡುತ್ತವೆ ಎಂದು ಚಿಂತಿತಳಾದ ನೀಲಮ್ಮ ಕಲ್ಯಾಣದಲ್ಲಿನ ದ್ವಾರದ ಸರಪಣಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸುತ್ತಾಳೆ. ಅವರಿಬ್ಬರ ಕೋರಿಕೆಯ ಮೇರೆಗೆ ಧರೆಗೆ ದೊಡ್ಡವರು ಮಂಟೇಸ್ವಾಮಿಗಳು ಅಲ್ಲಿಗೆ ಬರುತ್ತಾರೆ. ಆಗ ದ್ವಾರಪಾಲಕ ಅವರನ್ನು ತಡೆದು ತಳ್ಳುತ್ತಾನೆ, ಆಗ ಅವರು ಬೂದಿ ಗುಪ್ಪೆಯಾಗುತ್ತಾರೆ. ಗುರುವಿನ ಆಗಮನದ ಸುದ್ದಿ ತಿಳಿದ ಬಸವಣ್ಣ, ನೀಲಮ್ಮ ಆ ಗುಪ್ಪೆಯ ಬಳಿ ಬಂದು ಕ್ಷಮೆ ಕೇಳಿ ತಮ್ಮ ನಿಜ ರೂಪ ತೋರುವಂತೆ ಬೇಡುತ್ತಾರೆ. ನಿಜರೂಪ ದರ್ಶನವಾದ ಬಳಿಕ ನನಗೆ ಗದ್ದುಗೆ ಏರುವ ಬಯಕೆ ಇಲ್ಲ, ಇಲ್ಲಿ ಲಿಂಗ ಕಟ್ಟಿರುವ ಶರಣರು ನಿಜವಾದ ಶರಣರಲ್ಲ ಎಂಬುದರ ಜ್ಞಾನೋದಯ ಮೂಡಿಸುತ್ತಾರೆ. ಅವರ ಬಳಿಯ ಕಾಲಜ್ಞಾನ ಪುಸ್ತಕ ಪಡೆದು ರಾಚಪ್ಪಯ್ಯ, ಫಲಹಾರದಯ್ಯ ಮತ್ತು ಚನ್ನಮ್ಮ ಎಂಬ ಶಿಷ್ಯ ಮಕ್ಕಳನ್ನು ಪಡೆದು ಅಲ್ಲಿಂದ ಹೊರಡುತ್ತಾರೆ.

ವಿಜಯನಗರದಲ್ಲಿ ರಾಚಪ್ಪಯ್ಯನ ಮುಖಾಂತರ ಅಧ್ಭುತಗಳನ್ನು ಸೃಷ್ಟಿಸಿ ಅಲ್ಲಿರುವ ಸಮುದಾಯವನ್ನು ಒಕ್ಕಲು ಭಕ್ತರನ್ನಾಗಿ ಮಾರ್ಪಡಿಸಿದರು. ಈ ಕಾವ್ಯದಲ್ಲಿ ಪವಾಡಗಳಿಗೇನು ಬರವಿಲ್ಲ. ಒಂದೊಂದು ಪ್ರಸಂಗವೂ ಒಂದೊಂದು ಪವಾಡವೇ. ದೊಡ್ಡಮ್ಮ ತಾಯಿಯನ್ನು ಶಿಷ್ಯ ಭಿಕ್ಷೆಯಾಗಿ ಪಡೆಯುವ ಪ್ರಸಂಗವನ್ನು ನೀಲಗಾರರು ಸೊಗಸಾಗಿ ವರ್ಣಿಸಿದ್ದಾರೆ. ದೊಡ್ಡಮ್ಮನ ತಂದೆ ತಾಯಿಗಳು ಮಗಳನ್ನು ಧರೆಗೆ ದೊಡ್ಡವರಿಗೆ ಕೊಡಲು ಒಪ್ಪದಿದ್ದಾಗ, ಆ ಹೆಣ್ಣು ಮಗು ಜ್ವರ ಬಂದು ಸತ್ತು ಸಮಾಧಿಯಾದ ನಂತರ ಮತ್ತೆ ಮರು ಹುಟ್ಟು ಪಡೆದು ಕ್ಷಣ ಮಾತ್ರದಲ್ಲೇ ಧರೆಗೆ ದೊಡ್ಡವರ ಜೊತೆ ಮರಳಿ ಬರುವುದು ಇವೆಲ್ಲವೂ ಭಕ್ತಿಯ ಪವಾಡಗಳನ್ನು ತಿಳಿಸುತ್ತವೆ.

ಮಂಟೇಸ್ವಾಮಿ ಕಾವ್ಯದಲ್ಲಿ ಧರೆಗೆ ದೊಡ್ಡವರಿಗೆ ಆದವರಿಗೆ ನಡೆದ ನಾಮಕರಣವು ಸಹಜವಾಗಿ, ಸುಂದರವಾಗಿ ಮೂಡಿಬಂದಿದೆ. ಧರೆಗೆ ದೊಡ್ಡವರು ಊರು ಊರು ಸುತ್ತಿ ಬರುತ್ತಾ ಹೊನ್ನಾಯಕನ ಹಳ್ಳಿಯ ಅರಳಿಕಟ್ಟೆಯ ಮೇಲೆ ಶಿಷ್ಯರನ್ನು ಕೂರಿಸಿ ಭಿಕ್ಷೆಗೆ ಹೊರಡುತ್ತಾರೆ. ಇವರ ವಿಚಿತ್ರ ವೇಷ ಭೂಷಣ ನೋಡಿ ಮುದ್ದಮ್ಮನ ಹಸುವು ಬೆದರಿ ಹಾಲಿನ ಪಾತ್ರೆ ಕೆಳಗುರುಳುತ್ತದೆ. ಮುದ್ದಮ್ಮನಿಗೆ ಸಾಕಷ್ಟು ಸಿಟ್ಟು ಬಂತು. "ಹಾಳಾದ ಮಂಟೇದ ಲಿಂಗ ನೀನು" ಎಂದಾಗ ನಕ್ಕ ದೊಡ್ಡವರು "ಕೈಲಾಸದಿಂದ ಬರುವಾಗ ನನಗೆ ನೂರೆಂಟು ಹೆಸರಿತ್ತು, ಇಷ್ಟು ಒಳ್ಳೆಯ ಹೆಸರನ್ನು ಯಾರೂ ಕರೆದಿರಲಿಲ್ಲ". ನೀನು ಕರೆದ ಮಂಟೇದಲಿಂಗಯ್ಯ ಚೆನ್ನಾಗಿದೆ, ನನಗೆ ನಾಮಕರಣ ಮಾಡಿದ ನೀನು ನನ್ನ ಹೆತ್ತ ತಾಯಿ ಎಂದು, ಅಲ್ಲಿಂದ ಮುಂದೆ ನಡೆದರು. ಬೈಗುಳವನ್ನು ಪ್ರೀತಿಯಿಂದ ಸ್ವೀಕರಿಸುವುದು ಇಲ್ಲಿನ ವಿಶೇಷತೆ.

ಮಂಟೇಸ್ವಾಮಿಯವರು ನಂತರ ಭಕ್ತರ ಸೃಷ್ಟಿಗಾಗಿ ಮತ್ತೆ ಮುಂದುವರೆದು, ಬೊಪ್ಪಗೌಡನಿಗೆ ಬುದ್ದಿ ಕಲಿಸಿದ್ದು, ಅವನಿಂದ ಗುರುಮಠವನ್ನು ನಿರ್ಮಿಸಿದ್ದು ಮತ್ತೊಂದು ಪವಾಡ. ಬೊಪ್ಪಗೌಡನಿಗೆ ಎಲೆ ಬೊಪ್ಪಗೌಡ ಕಂಡಕನಹಳ್ಳಿ ಮಡಿವಾಳ ಮಾಚಯ್ಯನ ಉಬ್ಬೆ ಓಲೆ ಗುರುಮಠ ಆಗಬೇಕು, ಅವನ ಕತ್ತೆ ಕಟ್ಟೋ ಕೊಟ್ಟಿಗೆ ನಮಗೆ ಚಂದ್ರ ಶಾಲೆ ಆಗಬೇಕು, ನಮಗೆ 12 ಅಂಕಣದ ಗಂಧದ ಮಾಳಿಗೆ ತಯಾರು ಆಗಬೇಕು, ಮಠದ ಮುಂದೆ ತೋಪಾಗಬೇಕು, ನಾವು ಪವಡಿಸಿರುವ ಮಠ ಮಾಳಿಗೆ ಆಗಬೇಕು ಎಂದು ಅಣತಿ ಇಟ್ಟರು.

ಮಂಟೇಸ್ವಾಮಿ ಕಾವ್ಯದ ಸಿದ್ದಪ್ಪಾಜಿ ಸಾಲಿನಲ್ಲಿ ನೋಡುವುದಾದರೆ, ಕಬ್ಬಿಣದ ಏಕಸ್ವಾಮ್ಯವನ್ನು ಮುರಿಯಲು ಮಾಡಿದ ಕಬ್ಬಿಣ ಭಿಕ್ಷೆ ಪವಾಡ ನೋಡಬಹುದು. ಬಾಚಿ ಬಸವಯ್ಯನು ನಿಡಗಟ್ಟ ಗ್ರಾಮದಲ್ಲಿ ವಿಶ್ವಕರ್ಮ ಜಾತಿಯ ಮುದ್ದೋಜಿ ಮತ್ತು ಅವನ ಮಡದಿ ಲಿಂಗಮ್ಮನ ಮಗನಾಗಿ ಇವರ ವರಪ್ರಸಾದದಿಂದ ಜನಿಸುತ್ತಾರೆ. ಏಳನೇ ಮಗನಾಗಿ ನಾ ಕೊಟ್ಟ ವರವನ್ನು ನನಗೆ ಬಿಟ್ಟುಬಿಡು ಎಂದಾಗ ಲಿಂಗಮ್ಮ ಬೆಚ್ಚುತ್ತಾಳೆ. ಅವಳ ಪತಿ ಸೊಕ್ಕಿನ ಮಾತಾಡಿ ಕಳುಹಿಸುತ್ತಾನೆ. ನಂತರ ಮಗನಾದ ಕೆಂಪಣ್ಣನ ಬಳಿಗೆ ಹೋಗಿ ಕೇಳುತ್ತಾನೆ. ಅವನು ನಿರಾಕರಿಸಿದರೂ ತನ್ನ ಪವಾಡ ತೋರಿಸಿ ಬರಲು ಹೇಳುತ್ತಾನೆ, ಮತ್ತೆ ನಿರಾಕರಿಸಿದಾಗ, ಮಂಟೇಸ್ವಾಮಿ ಊರಿನ ಕುರುಡು ಮಾರಿಯನ್ನು ಕರೆದು

ISBN – 978-93-5526-247-9

ಮುದ್ದೋಜಿ ಐಶ್ವರ್ಯವನ್ನು ಮಣ್ಣುಗೂಡಿಸಿದ. ಕೆಂಪಣ್ಣನನ್ನ ಬಿಟ್ಟು ಉಳಿದ ಎಲ್ಲರೂ ಮಡಿಯುವಂತಾಗುತ್ತದೆ. ಅವನಿಗೆ ಮಾತ್ರ ನಸು ನೆನಪು ಬಂದಂತಾಗುತ್ತದೆ. ನಂತರ ಧರೆಗೆ ದೊಡ್ಡವರು ಎಲ್ಲರನ್ನೂ ಕ್ಷಮಿಸಿ ಕೆಂಪಣ್ಣನಿಗೆ ಈಗಲಾದರೂ ನನ್ನ ಜೊತೆ ಬರುವೆಯಾ ಎಂದಾಗ, ನನಗೆ ಏನು ಕೊಡುತ್ತೀರಾ? ಎನ್ನುತ್ತಾನೆ. ಅದಕ್ಕೆ ಅವರು "ಅರುಕು ಜೋಳಿಗೆ ಮುರುಕು ಬೆತ್ತ ಕೊಡುವುದಾಗಿ" ಹೇಳುತ್ತಾರೆ. ಕೆಂಪಣ್ಣನ್ನು ಕೂಂದೂರು ಬೆಟ್ಟದ ಕಾಳಿಂಗನ ಗವಿಯಲ್ಲಿ ಬಿಟ್ಟು, 12 ವರ್ಷದ ನಂತರ ಅವನನ್ನು ಕರೆಯುತ್ತಾರೆ. ಧರೆಗೆ ದೊಡ್ಡವರು "ನನ್ನ ದಳವಾಯಿ ಸಿದ್ದಯ್ಯ ಸ್ವಾಮಿ ಬನ್ನಿ" ಎಂದು ಕೂಗಿದಾಗ ಕೆಂಪಣ್ಣ ಎಡ ಮಗ್ಗುಲಿನಿಂದ ಬಲ ಮಗ್ಗುಲಿಗೆ ಹೊರಳುತ್ತಾನೆ. ಇಲ್ಲಿ ನೀಲಗಾರರ ನಿರೂಪಣೆ ಅದ್ಭುತವಾಗಿದೆ. ಸಿದ್ಧಪ್ಪಾಜಿಯು ಗವಿಯಲ್ಲಿ ಹೇಗಿದ್ದಾನೆ ಎಂದು ವರ್ಣಿಸಿದ್ದಾರೆ. ಅವನ ನೆತ್ತಿಯ ಮೇಲೆ 12 ಆಳುದ್ದ ಹುತ್ತ ಬೆಳೆದಿದೆ, ಮೂಗಿನ ಮೇಲೆ ಮೂರು ಆಳುದ್ದ ಹುತ್ತ ಬೆಳೆದಿದೆ, ಕತ್ತಿನ ಮೇಲೆ ಮತ್ತವರ ಕಿವಿಯಲ್ಲಿ ಶಕುನದ ಹಕ್ಕಿ ಮರಿ ಮಾಡಿದೆ, ಕಣ್ಣಿನಲ್ಲಿ ಹೆಗ್ಗಡಜ ಮರಿ ಮಾಡಿದೆ, ಮೂಗಿನಲ್ಲಿ ಹೆಜ್ಜೇನು ಕಟ್ಟಿದೆ, ನಾಲಿಗೆಯಲ್ಲಿ ಚಿಕ್ಕ ಚಿಕ್ಕ ಮರ ಹುಟ್ಟಿದೆ, ಕಂಕುಳ ಸಂಧಿಯಲ್ಲಿ ಗರುಡ ಮರಿ ಮಾಡಿದೆ, ಇದು ಅದ್ಭುತ ವರ್ಣನೆ ಅಲ್ಲದೆ ಮತ್ತೇನು? ಪವಾಡಪುರುಷರು ಮಾತ್ರ ಹೀಗೆ ವಿಶೇಷ ಶ'ಕ್ತಿ ಹೊಂದಿರುತ್ತಾರೆ.

ಸಾಮಾನ್ಯ ಮಾನವರಿಗಿಂತ ಅವರು ಹೇಗೆ ಭಿನ್ನ ಎಂದು ತೋರಿಸುತ್ತಾರೆ. ಕೆಂಪಣ್ಣಚಾರಿ, ಘನ ನೀಲ ಸಿದ್ದಪ್ಪಾಜಿ, ಮಂಟೇಸ್ವಾಮಿ ಆಜ್ಞೆಯಂತೆ ಹಲಗೂರಿಗೆ ಹೋಗಿ ಅಲ್ಲಿನ ಪಾಂಚಾಳರಿಂದ ಪಾತಾಳ ಬಾವಿ ತೋಡಲು ಬೇಕಾದ ಸಲಕರಣೆಗಳನ್ನು ತರುವಂತೆ ಹೇಳಿದರು. ಹಲಗೂರಿನ ಪಾಂಚಾಲರ ನೆಲೆ ಏಳು ಮಂದಿ ಅಣ್ಣತಮ್ಮಂದಿರು, ಏಳು ಬೀದಿಗಳನ್ನು ಐಶ್ವರ್ಯದಲ್ಲಿ ಆಳುತ್ತಿದ್ದು, ಅವರನ್ನು ಕುರಿತು "ದಾನವ ಕೊಡಿರಯ್ಯ ಹಲಗೂರು ಪಾಂಚಾಳದವರೆ, ನಮಗೆ ಭಿಕ್ಷಯ ಕೊಡಿರಯ್ಯ ಲಕ್ಷಾಧಿಪತಿಗಳೇ" ಎಂದು ಸಿದ್ಧಪ್ಪ ಕೇಳುತ್ತಾನೆ. ಅಲ್ಲಿನ ಪಾಂಚಾಳದವರು ಸಿದ್ಧಪ್ಪನಿಗೆ ನೀಡಿದ ಅನೇಕ ಸವಾಲುಗಳನ್ನು ಸಿದ್ದಪ್ಪ ಗೆದ್ದು ಬರುತ್ತಾನೆ. "ಧರೆಗೆ ದೊಡ್ಡವರೇ ನಿಮ್ಮ ಪಾದವೇ ಗತಿ, ಕೆಂಡಗಣ್ಣ ರಾಚರಾಯರೇ ನೀವೇ ಗತಿ, ತೋಪಿನ ತಾಯಿ ದೊಡ್ಡಮ್ಮ ನೀವೇ ಗತಿ" ಎನ್ನುತ್ತಾ, ಎಲ್ಲಾ ಸ್ಪರ್ಧೆಗಳನ್ನು ಎದುರಿಸಿ ಜಯಶಾಲಿಯಾಗಿದ್ದಾರೆ. ಸಿದ್ಧಪ್ಪಾಜಿಗೆ ಅವರು ಭಿಕ್ಷೆ ಕೊಡದಿದ್ದಾಗ, ಮಂಟೇಸ್ವಾಮಿ ಅವರು ಬಂದು ಅವರಿಗೆ ಬುದ್ಧಿ ಕಲಿಸುತ್ತಾರೆ. ನಂತರ ಕಬ್ಬಿಣದ ಭಿಕ್ಷೆ ನೀಡುತ್ತಾರೆ.

ಮಂಟೇಸ್ವಾಮಿ ಕಾವ್ಯ ಹೀಗೆ ಅದ್ಭುತಗಳಿಂದ ಕೂಡಿದ ಒಂದು ಸುಂದರ ಕಾವ್ಯವಾಗಿದೆ. ಪರಶಿವನೇ ಪರಂಜ್ಯೋತಿ ಸ್ವರೂಪರಾದವರು ಧರೆಗೆ ದೊಡ್ಡವರು ಕಾಣಿಸಿಕೊಂಡರು. ಉತ್ತರದಿಂದ ದಕ್ಷಿಣದವರೆಗೆ ಈ ತುದಿಯು ಮಳವಳ್ಳಿ ಸಮೀಪದ ಬೊಪ್ಪಗೌ'ಡನ ಪುರದ ವರೆಗೆ ಸಂಚರಿಸಿದನು. ರಾಚಪ್ಪಾಜಿ, ಸಿದ್ದಪ್ಪಾಜಿ ಅವರಂತ ಉನ್ನತ ವ್ಯಕ್ತಿತ್ವದ ಶಿಷ್ಯರನ್ನು ಪಡೆದು ಮಹಿಮೆಯನ್ನು ಮೆರೆದನು. ಮಂಟೇಸ್ವಾಮಿ ಎಂಬ ಹೆಸರಿನಲ್ಲಿ ಸಾಧಾರಣ ಉಬ್ಬೆ ಗೂಡಿನಲ್ಲಿ ನಿಂತವ'ನು, ಹೆಚ್ಚಿದವರ ಸೊಕ್ಕನ್ನು ಮುರಿದು ನಂಬಿದವರಿಗೆ ಸುಖಸಂಪದವನ್ನು ನೀಡಿದನು. ಮಂಟೇಸ್ವಾಮಿ ಕಾವ್ಯದಲ್ಲಿ ಮುಖ್ಯವಾಗಿ ನಾವು ಗಮನಿಸುವುದು, ತಳ ಭಿಕ್ಷೆ, ಮಗನ ಭಿಕ್ಷೆ ಮತ್ತು ಕಬ್ಬಿಣದ ಭಿಕ್ಷೆ. ಬೊಪ್ಪಗೌಡನ ಮುಖಾಂತರ ಮಠ ಕಟ್ಟುವುದಕ್ಕೆ ಜಾಗ ಪಡೆದದ್ದು ಭಕ್ತಿ ಪರಂಪರೆ. ಧಾರ್ಮಿಕ ಪರಂಪರೆಯನ್ನು ಮುಂದುವರೆಸಲು ಬೇಕಾದಂತಹ ಶಿಷ್ಯರನ್ನು ಹುಟ್ಟುಹಾಕುವುದು ಹಾಗೂ ಮತ್ತೊಂದು ಇಲ್ಲಿ ನಾವು ಕಾಣುವುದು ವಿಶೇಷವಾಗಿ ಕಬ್ಬಿಣದ ಭಿಕ್ಷೆ. ಇದು ಒಂದು ಉತ್ಪಾದನ ಚಟುವಟಿಕೆಯನ್ನು ಸಂಕೇತಿಸುತ್ತದೆ. ಕಬ್ಬಿಣದ ಭಿಕ್ಷೆ ಪಡೆಯುವ ಮೂಲಕ ಆರ್ಥಿಕ ರಚನೆಯನ್ನು ಬದಲಾಯಿಸುವ, ಕಬ್ಬಿಣದ ಏಕಸಾಮ್ಯತೆಯನ್ನು ತಪ್ಪಿಸುವುದು ಒಂದು ಯಶಸ್ವಿ ಪ್ರಯತ್ನ. ಕಬ್ಬಿಣದಿಂದ ಸೃಷ್ಠಿಯಾದ ಸಲಕರಣೆಗಳು ಯುದ್ಧ ಸಲಕರಣೆಗಳು, ಹಾಗಾಗಿ ಅವುಗಳ ತಯಾರಿಕೆ ಬಿಟ್ಟು, ಅವರು ವ್ಯವಸಾಯ ಸಾಮಗ್ರಿಗಳನ್ನು ಮಾಡಿ ಜನಪರರಾಗಬೇಕು ಎಂಬುದು ಇದರ ಮುಖ್ಯ ಆಶಯ. ಶಿಷ್ಟ ಸಂಸ್ಕೃತಿಯಿಂದ ತಿರಸ್ಕಾರಕ್ಕೆ ಒಳಗಾದ, ತಿರಸ್ಕಾರದ ಸೂಚಕವಾದ ವಸ್ತುಗಳಿಂದಲೇ ಒಂದು ಸಂಸ್ಕೃತಿಯನ್ನು ಕಟ್ಟುವ ಕಲೆಗಾರಿಕೆಯನ್ನು ನಾವು ಈ ಮಹಾಕಾವ್ಯದಲ್ಲಿ ನೋಡಬಹುದು. ಒಟ್ಟಿನಲ್ಲಿ ನೀಲಗಾರರ ಈ ರಮ್ಯ ಕಾವ್ಯದಲ್ಲಿ ನಮ್ಮ ದೃಷ್ಠಿಯನ್ನು ಸೆಳೆದುಕೊಳ್ಳುವ ವ್ಯಕ್ತಿ, ತೇಜ ಮೂರ್ತಿಯಾದ ಸಿದ್ಧಪ್ಪಾಜಿಯ ಆಗಮನದ ಅನಂತರವೇ ಈ ಕಾವ್ಯಕ್ಕೆ ಶಕ್ತಿ ತುಂಬಿಕೊಳ್ಳುವುದು. ಒಟ್ಟಿನಲ್ಲಿ ಈ ಕಾವ್ಯದಲ್ಲಿ ಧಾರ್ಮಿಕತೆ ಮತ್ತು ತಾತ್ವಿಕತೆಯನ್ನು ಕಾಣಬಹುದು.

ISBN – 978-93-5526-247-9

**ಪರಾಮರ್ಶನ ಗ್ರಂಥಗಳು:**


1. ಜನಪದ ಖಂಡ ಕಾವ್ಯಗಳು – ಜಿ. ಶಂ. ಪ
2. ಕನ್ನಡ ಸಾಹಿತ್ಯ ಕೋಶ – ರಾಜಪ್ಪ ದಳವಾಯಿ
3. ಜನಪದ ಅಧ್ಯಯನ – ದೇ.ಜ.ಗೌ.
4. ಜನಪದ ಸ್ವರೂಪ – ಹಾ. ಮಾ. ನಾಯಕ್


***

ISBN – 978-93-5526-247-9

# 51. ಜನಪದ ಮಹಾಕಾವ್ಯಗಳ ವೃತ್ತಿಗಾಯಕರು

ಶಾರದಮ್ಮ. ಎಂ .ಕೆ

ಸಮಾಜದಲ್ಲಿ ನಡೆದಿರುವ ಘಟನೆಗಳು ಆಚಾರ, ವಿಚಾರಗಳು, ಸಾಹಿತ್ಯ ಬಗೆಗಳು ಮದ್ದು, ಕ್ರೀಡೆ, ಕಲೆ, ನೃತ್ಯ, ನಾಟಕ, ಅಡುಗೆ, ಉಡುಗೆ–ತೊಡುಗೆ ಮನರಂಜನ ಮಾಧ್ಯಮಗಳು, ಧಾರ್ಮಿಕ ಕ್ರಿಯೆಗಳು, ಪರಂಪರೆಯಿಂದ ಹೊತ್ತು ತರುತ್ತಿರುತ್ತವೆ. ಇವುಗಳನ್ನು ಪೂರ್ಣವಾಗಿ ಒಳಗೊಳ್ಳುವ ಚೌಕಟ್ಟನ್ನು ಜಾನಪದ ಎನ್ನುವ ವಿಶಾಲ ಅರ್ಥದಲ್ಲಿ ಕರೆಯುತ್ತಾರೆ.

ಜನಪದ ಮಹಾಕಾವ್ಯಗಳು ಸಾಹಿತ್ಯದ ಅಭಿವೃದ್ದಿಗೆ ಹೊಸ ಅಯಾಮವನ್ನು ತಂದುಕೊಡುತ್ತವೆ. ಜನಪದ ಮಹಾಕಾವ್ಯಗಳು ಕೇವಲ ಮನರಂಜನೆಗಾಗಿ ಸೃಷ್ಟಿಯಾಗಿಲ್ಲ. ಇವು ಜನಪದರ ಸಮಸ್ತ ಆಚರಣೆ, ನಂಬಿಕೆ, ಸಂಪ್ರದಾಯ, ಕಲೆ, ಗಾಯನ, ನೃತ್ಯ, ಉಡುಗೆ–ತೊಡುಗೆ, ಪವಾಡ, ಧಾರ್ಮಿಕ ಒಟ್ಟಾರೆ ಸಮಸ್ತ ಜೀವನವನ್ನು ಒಳಗೊಂಡಿದೆ. ಹಾಗೂ ದೈವದ ಕಲ್ಪನೆಯೊಡನೆ ಬೆರತುಕೊಳ್ಳುತ್ತವೆ. ಜನಪದ ಮಹಾಕಾವ್ಯಗಳ ಮುಖೇನ ಭೌಗೋಳಿಕ ಸನ್ನಿವೇಶ ಆಚಾರ–ವಿಚಾರ ಸಂಸ್ಕೃತಿ ಅವರ ಒಕ್ಕಲುತನ ಅವರ ಅರಾಧ್ಯ ದೈವ ಭಕ್ತಿ, ಅಪಾರ ನಂಬಿಕೆ, ಭಾಷೆ, ವೇಷ'ಭೂಷಣ ತಿಳಿಯಲು ಸುಲಭವಾಗುತ್ತದೆ.

ಭೂತಕಾಲದಲ್ಲಿ ನಡೆದ ಪವಾಡ ಪುರುಷರ ಸುತ್ತ  ಎಣೆದ ಕಥೆಗಳು. ದೈವ ಆರಾಧಕರು, ಪರಿಸರ ಹಾಗೂ ಪ್ರಾಣಿಗಳ ಮೇಲಿನ ಪ್ರೇಮ ಹಾಗೂ ತಮ್ಮ ವೃತ್ತಿಯಲ್ಲಿರುವ ಅಸಕ್ತಿ ತಮ್ಮನ್ನು ತಾವು ದೇವರ ಕೈಂಕರ್ಯಗಳಿಗಾಗಿ ಮುಡಿಪಾಗಿರುವ ಅಪಾರ ಕಥೆಗಳನ್ನು ಜನಪದ ಮಹಾಕಾವ್ಯಗಳು ತಿಳಿಸಿಕೊಡುತ್ತವೆ. ಜನಪದ ಮಹಾಕಾವ್ಯಗಳು ಧಾರ್ಮಿಕ ಅಚರಣೆಯ ಒಂದು ಭಾಗವಾಗಿರುವುದರಿಂದ ಕಥನ ಪ್ರದರ್ಶನವು ಸಾಂಪ್ರಾದಾಯಿಕ ಚೌಕಟ್ಟಿನಲ್ಲಿಯೇ ನಡೆಯುತ್ತದೆ.

## ಜನಪದ ಮಹಾಕಾವ್ಯಗಳು :

ಮಲೆ ಮದೇಶ್ವರ ಕಾವ್ಯವನ್ನು ಹಾಡುವವರು ದೇವರಗುಡ್ಡರು ಅಥವಾ ಕಂಸಾಳೆಯವರು.
ಮಂಟೆಸ್ವಾಮಿ ಮಹಾಕಾವ್ಯವನ್ನು ಹಾಡುವವರು ನೀಲಗಾರರು,
ಮೈಲಾರಲಿಂಗ ಕಾವ್ಯವನ್ನು ಹಾಡುವವರು ಗೊರವರು
ಜುಂಜಪ್ಪ ಕಾವ್ಯವನ್ನು ಹಾಡುವವರು ಕಾಡುಗೊಲ್ಲರು (ಗಣೆಯವರು)
ಎಲ್ಲಮ್ಮ ಕಾವ್ಯವನ್ನು ಹಾಡುವವರು ಚೌಡಿಕೆಯವರು ಇತ್ಯಾದಿ.
ಮೊದಲ ಮಲೆ ಮಹದೇಶ್ವರ ಮಹಾಕಾವ್ಯ 1973 ರಲ್ಲಿ ಪ್ರಕಟವಾಯಿತು, ಅಲ್ಲಿಯವರೆಗೂ ಕನ್ನಡದಲ್ಲಿ ಮಹಾಕಾವ್ಯಗಳು ಇವೆ ಎಂಬುದರ ಬಗ್ಗೆ ಕಲ್ಪನೆಯೂ ಇರಲಿಲ್ಲ. ಈ ಮಲೆ ಮದೇಶ್ವರ ಮಹಾಕಾವ್ಯವನ್ನು 1973 ರಲ್ಲಿ ಡಾ. ಪಿ.ಕೆ.ರಾಜಶೇಖರರವರು ಮೊದಲು ಪ್ರಕಟಿಸಿದರು.

## ಗಾಯಕರು :

ಕನ್ನಡ ಜನಪದ ಸಾಹಿತ್ಯಕ್ಕೆ ಅತಿಹೆಚ್ಚು ವೈಶಿಷ್ಟ್ಯತೆಯನ್ನು ಹಾಗೂ ಜನಮನವನ್ನು ಗೆದ್ದವರು ವೃತ್ತಿಗಾಯಕರು ಗಾಯನ ಎಂಬುದು ಮೂಲ ಕಲೆ ಅದು ತಲೆಮಾರುಗಳಿಂದಲೂ ಬಾಯಿಂದ ಬಾಯಿಗೆ ಹರಿದು ಬಂದಿದೆ. ಜನಪದರ ನೋವು– ನಲಿವುಗಳು, ಪವಾಡ ಪುರುಷರ ಮಹಿಮೆಗಳು, ದೈವಭಕ್ತಿ ಹಾಡುಗಾರಿಕೆಯಲ್ಲಿ ಅಭಿವ್ಯಕ್ತಿಯನ್ನು ಸಾಧಿಸಿವೆ. ಜಾತಿ ಮತಗಳ ಭೇದವಿಲ್ಲದೆ ಹಿರಿಯರು ಕಿರಿಯರು ಎನ್ನದೆ ಹೆಣ್ಣು, ಗಂಡು ಎನ್ನದೆ ಎಲ್ಲರೂ ತಮ್ಮ ತಮ್ಮ ದುಖ: ದುಮ್ಮಾನಗಳು ಸುಖ–ಸಂತಸಗಳನ್ನು ಹಂಚಿಕೊಂಡಿರುವ ಹಾಡುಗಾರಿಕೆಯ ಸಮೃದ್ಧವು ವೈವಿಧ್ಯಮಯವೂ ಆಗಿದೆ.

## ಸಾಮಾನ್ಯ ಗಾಯಕರು :

ಈ ಗಾಯಕರಲ್ಲಿ ಗಂಡಸರು ಹೆಂಗಸರು ಇಬ್ಬರು ಹಾಡುತ್ತಾರೆ. ಈ ಗಾಯಕರುಗಳಿಗೆ ಯಾವುದೇ ನಿರ್ಬಂಧ ಇರುವುದಿಲ್ಲ. ಕುಳಿತು ಕೇಳುವ ತಾಳ್ಮೆಯೊಂದಿದ್ದರೆ ತಿಂಗಳುಗಟ್ಟಲೆ ಮನಸ್ಸಂತೋಷಕ್ಕಾಗಿ ಹಾಡುವರು. ಯಾವುದೇ ಗುರುಗಳ ಮಾರ್ಗದರ್ಶನ ಇರುವುದಿಲ್ಲ. ಸ್ಥಳ ಮತ್ತು ಕಾಲದ ನಿರ್ಬಂಧವು ಇಲ್ಲ. ನುರಿತ ಹಾಡುಗಾರರನ್ನು ಅನುಸರಿಸಿ ಕಲಿಯುತ್ತಾರೆ. ತಂದೆ ತಾಯಿ, ತವರು, ಒಡಹುಟ್ಟು, ದೇವರ ಭಕ್ತಿ, ಪ್ರಕೃತಿ ವಿಚಾರಗಳು ಶಾಸ್ತ್ರ ಸಂಬಂಧಗಳು, ಗೆಳೆತನ, ಪ್ರೇಮ, ದುರಂತ ಸುಖಾಂತ, ಹೀಗೆ ಹತ್ತಾರು ಸಂಗತಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹೆಂಗಸರು ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಾರೆ. ಹಾಗೆಯೆ ದುಡಿಮೆಯ ಸಂದರ್ಭಗಳಾದ ಭತ್ತ ಕುಟ್ಟುವಾಗ, ರಾಗಿ ಬೀಸುವಾಗ, ನಾಟಿ ಹಾಕುವಾಗ, ಕಳೆ ಕೀಳುವಾಗ ಹಾಡುವುದರಿಂದ ಶ್ರಮದ ಅರಿವಾಗುವುದಿಲ್ಲ. ಬದುಕಿನ ಬವಣೆಯನ್ನೇ ಹಾಡನ್ನಾಗಿಸುವ ಇವರ ಹಾಡಿನ ಶ್ರೀಮಂತಿಕೆ ಎಂಥವರನ್ನು ಬೆರಗುಗೊಳಿಸುವುದು.

## ಅರೆ ವೃತ್ತಿ ಗಾಯಕರು :

ಇವರು ಸಾಮಾನ್ಯ ಗಾಯಕರ ಗುಂಪಿನಲ್ಲಿಯೇ ಬರುತ್ತಾರೆಯಾದರೂ, ಸಾಮಾನ್ಯ ಗಾಯಕರಿಗಿಂತಲೂ ಹೆಚ್ಚಿನ ಪರಿಣತಿಯನ್ನು ಹೊಂದಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಹಾಡುತ್ತಾರೆ. ಹಾಡುಗಾರಿಕೆ ಇವರ ಜೀವನ ವೃತ್ತಿಯಲ್ಲ, ನಿರ್ದಿಷ್ಟ ಸಂದರ್ಭಗಳಲ್ಲಿ ಹಾಡಿ ಕೇಳುಗರನ್ನು ಸಂತೋಷಪಡಿಸುತ್ತಾರೆ. ಕೋಲಾಟ, ಭಜನೆ, ಭಾಗವಂತಿಕೆ ಮೇಳ, ಅಂಟಿಗೆ ಪೆಂಟಿಗೆ ಮೇಳದವರ ಗುಂಪಿಗೆ ಸೇರುತ್ತಾರೆ.

## ವೃತ್ತಿಗಾಯಕರು :

ವೃತ್ತಿಗಾಯಕರು ಅಂದರೆ ಹಾಡುವುದನ್ನೇ ವೃತ್ತಿ ಮಾಡಿಕೊಂಡಿರುವವರು, ತಮ್ಮ ಜೀವನೋಪಯಕ್ಕೆ ದಾರಿ ಮಾಡಿಕೊಂಡಿರುವವರು. ಜನಪದ ಹಾಡುಗಾರಿಕೆಯಲ್ಲಿ ಇವರದು ಅಗ್ರಗಣ್ಯಸ್ಥಾನ. ಕನ್ನಡ ಜನಪದ ಸಾಹಿತ್ಯಕ್ಕೆ ಹೆಚ್ಚಿನ ವೈವಿಧ್ಯತೆ ತಂದವರು. ಬೇರೆ ಬೇರೆ ವೃತ್ತಿಗಾಯಕರು, ಅನೇಕ ಉತ್ತಮವೂ ದೀರ್ಘವೂ ಆದ ಜನಪದ ಕಾವ್ಯಗಳನ್ನು ವೃತ್ತಿಗಾಯಕರು ತಮ್ಮ ಶ್ರೀಮಂತ ಕಂಠದಿಂದ ಹಾಡಬಲ್ಲರು. ಹಾಡುವುದೇ ಇವರ ಮುಖ್ಯ ವೃತ್ತಿ.

ಕರ್ನಾಟಕ ಜಾನಪದ ಜಗತ್ತಿಗೆ ವೃತ್ತಿಗಾಯಕರನ್ನು ಪ್ರಪ್ರಥಮವಾಗಿ ಪರಿಚಯಿಸಿದ ಕೀರ್ತಿ ಜೀ.ಶಂ.ಪ ರವರಿಗೆ ಸಲ್ಲುಸತ್ತದೆ. ಕರ್ನಾಟಕದಾದ್ಯಂತ ಅಲೆಮಾರಿಯಂತೆ ಸುತ್ತಾಡಿ, ದಕ್ಷಿಣ ತುದಿಯಿಂದ ಉತ್ತರದ ತುದಿಯವರೆಗೂ ಹತ್ತು ಹಲವು ವೃತ್ತಿ ಗಾಯಕ ಪರಂಪರೆಗಳನ್ನು ಜೀ.ಶಂ.ಪ ಶೋಧಿಸಿ ಹೊರತೆಗೆದರು. ಇವರ ಅನ್ವೇಷಣೆಯ ಫಲವಾಗಿ ಬೆಳಕಿಗೆ ಬಂದಿರುವ ವೃತ್ತಿಗಾಯಕರು, ಕಂಸಾಳೆಯವರು, ನೀಲಗಾರರು, ಚೌಡಿಕೆಯವರು, ಗೊಂದಲಿಗರು, ಗೊರವರು, ಕಪಾಲದವರು, ಹೆಳವರು, ಜೋಗಿಗಳು, ತಂಬೂರಿಯವರು, ಭೂತೇರರು ಇತ್ಯಾದಿ.

## ಜನಪದ ಮಹಾಕಾವ್ಯಗಳಲ್ಲಿ ವೃತ್ತಿಗಾಯಕರು :

ವೃತ್ತಿಗಾಯಕರಲ್ಲಿ 2 ವಿಧಗಳು
1) ಧಾರ್ಮಿಕ ವೃತ್ತಿ ಗಾಯಕರು,
2) ಲೌಖಿಕ ವೃತ್ತಿ ಗಾಯಕರು,
ಧಾರ್ಮಿಕ ವೃತ್ತಿಗಾಯಕರು :– ಇವರು ಮಹಾಕಾವ್ಯಗಳನ್ನು ಹಾಡುತ್ತಾರೆ.

ಧಾರ್ಮಿಕ ವೃತ್ತಿಗಾಯಕರು ತಮ್ಮದೇ ಅದ ಸಂಪ್ರದಾಯ ಹಾಗೂ ಅರಾಧ್ಯ ದೈವದ ಹಿನ್ನಲೆಯಲ್ಲಿ ಒಂದು ಗುಂಪುಗಳನ್ನು ರಚಿಸಿಕೊಂಡು ತಮ್ಮ ಅರಾಧ್ಯ ದೈವದ ಪವಾಡಗಳು, ಮಹಿಮೆಗಳು, ಕಥೆಗಳನ್ನು ಹಾಡಿನ ಮೂಲಕ ಹೇಳುತ್ತಾರೆ. ಅವುಗಳಿಗೆ ಸಂಬಂದಿಸಿದಂತೆ ಅದ್ಬುತವಾಗಿ ತಮ್ಮ ಕಂಠಸಿರಿಯಿಂದ ಉತ್ತಮವಾಗಿ ಹಾಡುತ್ತಾ ಕಥೆಗಳನ್ನು ಕಟ್ಟಿ ಧರ್ಮಕ್ಕೆ ನಿಷ್ಠೆಯಿಂದ ನಡೆದುಕೊಳ್ಳುತ್ತಾರೆ.

ಈ ವರ್ಗಕ್ಕೆ ಸೇರಿದ ಗಾಯಕರೆಲ್ಲರೂ ವಂಶಪಾರಂಪರ್ಯವಾಗಿಯೋ ಗುರುಶಿಷ್ಯ ಸಂಬಂದವಾಗಿಯೋ ದೈವದ ಹೆಸರಿನಲ್ಲಿ ದೀಕ್ಷೆಯನ್ನು ಸ್ವೀಕರಿಸಿ ಬದುಕಿನ ಉದ್ದಕ್ಕೂ ಹಾಡುಗಾರಿಕೆಯನ್ನು ವಿಶೇಷ ವೃತ್ತಿಯಾಗಿ ಸ್ವೀಕರಿಸುತ್ತಾರೆ. ಇವರು ಶ್ರದ್ಧಾ ಭಕ್ತಿಯಿಂದ ತಮ್ಮ ದೈವದ ಬಗೆಗಿನ ಕಥೆಗಳನ್ನು ಸಂಪೂರ್ಣ ಅರಿತು ಅದೇ ಅವರ ವೃತ್ತಿಯನ್ನಾಗಿ ಮಾಡಿಕೊಂಡು ಜೀವನದುದ್ದಕ್ಕೂ ಹಾಡುತ್ತಾರೆ. ಧಾರ್ಮಿಕ ವರ್ಗಕ್ಕೆ ಸೇರಿದ ವೃತ್ತಿಗಾಯಕರು ದೈವದ ಹೆಸರಿನಲ್ಲಿ ದೀಕ್ಷೆ ಪಡೆಯುವುದರಿಂದ ಕೆಲವು ಕಟ್ಟುಪಾಡುಗಳ ವಿಧಿವಿಧಾನಗಳಿಗೆ ಒಳಗಾಗುತ್ತಾರೆ. ಹಾಗೆಯೇ ಇತರ ಜನರಲ್ಲಿ ದೇವರ ಬಗ್ಗೆ ನಂಬಿಕೆ ಭಕ್ತಿ ಶ್ರದ್ದೆ, ಧರ್ಮದ ಗುಣಗಳನ್ನು ಬೆಳೆಸಲು ಪ್ರಯತ್ನಿಸುತ್ತಾರೆ. ಇವರು ಗುರುಮುಖೇನ ದೇವರ ಹೆಸರಿನಲ್ಲಿ ಧರ್ಮದೀಕ್ಷೆಯನ್ನು ಪಡೆದುಕೊಂಡಿತ್ತಾರೆ. ತಮ್ಮ ದೈವರ ಒಕ್ಕಲುಗಳು ನೆಲಸಿರುವ ಸ್ಥಳಗಳಿಗೆ ಹೋಗಿ ದೈವದ ಮಹತ್ವವನ್ನು ಸಾರುತ್ತಾರೆ. ಒಕ್ಕಲುಗಳು ಸಹ ಧಾರ್ಮಿಕ ವೃತ್ತಿಗಾಯಕರನ್ನು ಗುರುವಿನಂತೆ ಗೌರವದಿಂದ ನಡೆಸಿಕೊಳ್ಳುತ್ತಾರೆ.

ಧಾರ್ಮಿಕ ವೃತ್ತಿಗಾಯಕರು ತಮ್ಮ ಇಷ್ಟ ದೈವದ ಹೆಸರಿನಲ್ಲಿ ದೀಕ್ಷೆ ತೆಗೆದುಕೊಳ್ಳುವುದರಿಂದ ದೇವರ ಗುಡ್ಡರು ಎಂದೂ ಸಹ ಕರೆಸಿಕೊಳ್ಳುತ್ತಾರೆ. ಕಂಸಾಳೆಯವರು ನೀಲಗಾರರು, ಗೊಂದಲಿಗರು, ಗೊರವರು ಗಣೆಯವರು, ಧಾರ್ಮಿಕ ವೃತ್ತಿಗಾಯಕರ ಸಾಲಿಗೆ ಬರುತ್ತಾರೆ. ಕೆಲವು ಗೊತ್ತಾದ ದಿನಗಳಲ್ಲಿ ದೇವರ ಹೆಸರಿನಲ್ಲಿ ಭಿಕ್ಷಾಟನೆಯನ್ನು ನಡೆಸುತ್ತಾರೆ. ತಮ್ಮ ದೈವದ ಪ್ರಭಾವವಲಯ ಪ್ರದೇಶದಲ್ಲಿ ಮಾತ್ರ ಸಂಚರಿಸುತ್ತಾರೆ. ತಮ್ಮ ದೈವದ ಪೂಜೆ, ಉತ್ಸವ ಜಾತ್ರೆಗಳಲ್ಲಿ ಭಾಗವಹಿಸುತ್ತಾರೆ. ಅಚರಣೆಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರುತ್ತಾರೆ. ಮಹಾಕಾವ್ಯಗಳನ್ನು ಹಾಡುವಂತಹ ವೃತ್ತಿಗಾಯಕರು.

ಕಂಸಾಳೆಯವರು – ಮಲೆ ಮಾದೇಶ್ವರ ಕಾವ್ಯ
ನೀಲಗಾರರು – ಮಂಟೆಸ್ವಾಮಿ ಕಾವ್ಯ
ಚೌಡಿಕೆಯವರು – ಎಲ್ಲಮ್ಮನ ಕಾವ್ಯ

ISBN – 978-93-5526-247-9

ಗಣೆಯವರು – ಜುಂಜಪ್ಪನ ಕಾವ್ಯ
ಗೊರವರು – ಮೈಲಾರಲಿಂಗನ ಕಾವ್ಯ

**ಕಂಸಾಳೆಯವರು:**

ದೇವರ ಗುಡ್ಡರೆಂದು ಹೆಸರಾದವರೇ ಕಂಸಾಳೆಯವರು. ದೇವರ ಗುಡ್ಡರು ಪ್ರಮುಖವಾಗಿ ಮಲೆ ಮಾದೇಶ್ವರರನ್ನು ಕುರಿತು ಹಾಡುತ್ತಾರೆ ಅದೇ ಅವರ ಧಾರ್ಮಿಕ ಕಾವ್ಯ. ಬಟ್ಟಲಿನ ಆಕಾರದ ಕಂಸಾಳೆಯು ಇವರ ಹಾಡುಗಾರಿಕೆಗೆ ಅನುಗುಣವಾಗಿ ಬಳಸಲು ಪಡುವ ವಿಶಿಷ್ಟ ಸಾಧನ ಹಾಗೂ ಪೂಜ್ಯ ವಸ್ತು. ಕಂಸಾಳೆ ಕಂಚಿನಿಂದ ತಯಾರಾದ ತಾಳವಾಗಿದೆ. ದೇವರ ಗುಡ್ಡರು ಇದನ್ನು "ಬಿರಿಸು" ಎಂದು ಕರೆಯುತ್ತಾರೆ. ಕಂಸಾಳೆ ಮೇಳದಲ್ಲಿ ಮೂರರಿಂದ ಎಂಟು ಜನರು ಭಾಗವಹಿಸುತ್ತಾರೆ. ಹಾಡುವ ಸಂದರ್ಭದಲ್ಲಿ ಮೂವರು, ನೃತ್ಯ ಸಂದರ್ಭದಲ್ಲಿ ಎಂಟರಿಂದ ಹನ್ನೆರಡು ಜನ ಕಲಾವಿದರು ಇರುತ್ತಾರೆ. ವೇಷಭೂಷಣ ನಿತ್ಯದ ಅಂಗಿ, ಪಂಚೆ ಹೆಗಲಿಗೆ ಜೋಳಿಗೆ ಕೊರಳಿಗೆ ರುದ್ರಾಕ್ಷಿ ಮಣಿಯನ್ನು ಅಡ್ಡದಾಗಿ ಕಟ್ಟಿರುತ್ತಾರೆ. ಹಣೆಗೆ ವಿಭೂತಿಗಳು ಇರುತ್ತವೆ.

**ಸಿರಿಯ ದೇವರ ಗುಡ್ಡರು :** ಇವರು ಕಂಚಿನ ತಟ್ಟೆಯಲ್ಲಿ ಊಟ ಮಾಡುವುದಿಲ್ಲ, ಕಾರಣವೆಂದರೆ ಕಂಚನ್ನು ಅವರು ಮಾದೇಶ್ವರನ ಕಂಸಾಳೆ ಎಂದು ಭಾವಿಸುತ್ತಾರೆ. ಸೋಮವಾರ, ಶುಕ್ರವಾರ ಅಮಾವಾಸ್ಯೆ ದಿನ "ಕ್ವಾರಣ್ಯ" ಮಾಡುತ್ತಾರೆ.

ಅಲೆಮಾರಿ ಗುಡ್ಡರು : ಇವರು ಮಲೆ ಮಾದೇಶ್ವರನ ಕಥೆಯನ್ನು ಸಂಪೂರ್ಣವಾಗಿ ಹಾಡುವರು. ಊರೂರು ಅಲೆಯುತ್ತ "ಕ್ವಾರಣ್ಯ" ಮಾಡಿ ಮಾದೇಶ್ವರನ ಸೇವೆ ಮಾಡುತ್ತಾರೆ.

**ದೀಕ್ಷಾ ವಿಧಾನ :**

ಮಾದೇಶ್ವರನ ಭಕ್ತರಾದ ದೇವರ ಗುಡ್ಡರು ಗುರು ಮುಖೇನ ದೇವರ ಹೆಸರಿನಲ್ಲಿ ದೀಕ್ಷೆಯನ್ನು ಪಡೆಯಬೇಕು. ಸಾಮಾನ್ಯವಾಗಿ ಮಾದೇಶ್ವರನ ಬೆಟ್ಟದಲ್ಲಿ ಸಾಲೂರು ಮಠದಲ್ಲಿ ದೀಕ್ಷೆ ಪಡೆಯುವುದು ಸಂಪ್ರದಾಯ ಅಥವಾ ಊರಿನ ಪ್ರಧಾನ ವೃತ್ತಿಗಾಯಕರ ಮುಖಾಂತರ ದೀಕ್ಷೆಯನ್ನು ಪಡೆಯಬಹುದು. ನಂತರ ಪ್ರಧಾನ ಗಾಯಕರ ಜೊತೆಯಲ್ಲಿ ಭಿಕ್ಷೆ ಬೇಡುವುದಕ್ಕೆ ಹೋದಾಗ ಅಲ್ಲಿ ಸೊಲ್ಲು ಹೇಳವುದನ್ನು ಪ್ರಾರಂಭಿಸುತ್ತಾರೆ. ಅಂದರೆ ಹೌದು. . ಹೌದಪ್ಪ. .. . ಆ.......ಆ.... ... ಈ ರೀತಿ ಹೇಳುತ್ತಾರೆ. ಕ್ರಮೇಣ ಪ್ರಧಾನ ಗಾಯಕರನ್ನು ಅನುಸರಿಸುತ್ತಾ ತಾನೇ ಉತ್ತಮ ಗಾಯನ ಕಥೆ ಹೇಳುವುದರಲ್ಲಿ ನಿಸ್ಸೀಮನಾಗುತ್ತಾನೆ. ದೀಕ್ಷೆ ಪಡೆದುಕೊಂಡ ನಂತರ ಗಾಯನದಲ್ಲಿ ಪ್ರಾವೀಣ್ಯತೆಯನ್ನು ಪಡೆದುಕೊಳ್ಳುತ್ತಾರೆ. ಕಂಸಾಳೆ ನಾದದೊಂದಿಗೆ ಸಾಲೂರು ಮಠಕ್ಕೆ ಕರೆತರಲಾಗುತ್ತದೆ. "ಈತ ನನ್ನ ಮಗನಲ್ಲ, ಮಾದೇಶ್ವರನ ಮಗ'" ಎಂದೆನ್ನುತ್ತಾ ಮಾದೇವ ನಿನ್ನ ಒಕ್ಕಲಾಗುತ್ತೇವೆ ಕಂದನನ್ನು ಉದ್ದಾರ ಮಾಡಪ್ಪಾ ಎಂದು ಕೈ ಮುಗಿಯುತ್ತಾರೆ.

ಕಂಸಾಳೆಯಲ್ಲಿ ಎರಡು ವಿಧಗಳಿವೆ :

1. ಕುಳಿತು ಹಾಡುವ ಕಂಸಾಳೆ
2. ಬೀಸು ಕಂಸಾಳೆ

ಕುಳಿತು ಹಾಡುವ ಕಂಸಾಳೆಯಲ್ಲಿ ಮೂರರಿಂದ ಎಂಟು ಜನ ಭಾಗವಹಿಸುತ್ತಾರೆ. ಮುಖ್ಯ ಹಾಡುಗಾರ ಅವರ ಮಧ್ಯದಲ್ಲಿ ಇರುತ್ತಾನೆ. ಸಹ ಕಲಾವಿದರು ಡಪ್ಪು, ಕಂಸಾಳೆ, ಚಿಟಿಗೆ ಹಿಡಿದು ಸುತ್ತ ಕುಳಿತಿರುತ್ತಾರೆ.

ಬೀಸು ಕಂಸಾಳೆಯಲ್ಲಿ ಮೂರರಿಂದ ಎಂಟು ಜನ ಭಾಗವಹಿಸುತ್ತಾರೆ. ದಾರದ ತುದಿಯಿಂದ ಹಿಡಿದು ಬೀಸಿ ತಾಳ ಹಾಕುವುದರಿಂದಲೇ ಇದನ್ನು ಬೀಸು ಕಂಸಾಳೆ ಎನ್ನಲಾಗುತ್ತದೆ. ಮಲೆ ಮಾದೇಶ್ವರ ಕಾವ್ಯ ಕಂಸಾಳೆ ಸಂಪ್ರದಾಯದಲ್ಲಿ ಬಹಳ ಪ್ರಮುಖವಾದದು ಅದು ಕನ್ನಡ ಜನಪದ ಮಹಾಕಾವ್ಯಗಳಲ್ಲಿ ಗಾತ್ರದಲ್ಲಿ ದೊಡ್ಡದು, ಈ ಕಾವ್ಯ ಏಳು ಸಾಲುಗಳಾಗಿ ಒಡೆದಿದೆ.

1.ತಾಳುಗತೆ 2.ಶ್ರವಣದೊರೆಯಸಾಲು 3) ಜುಂಜೇಗೌಡನ ಸಾಲು 4) ಸಂಕಮ್ಮನ ಸಾಲು 5) ಇಕ್ಕೇರಿ ದೇವಮ್ಮನ ಸಾಲು 6) ಸರಗೂರಯ್ಯನ ಸಾಲು ಮತ್ತು 7) ಬೇವಿಹಟ್ಟಿ ಕಾಳಿಯ ಸಾಲು

ಮಾದಪ್ಪನ ದೀಕ್ಷೆ ಪಡೆದ ಗುಡ್ಡರು ಸಾಮಾನ್ಯವಾಗಿ ವರ್ಷಕ್ಕೊಂದು ಬಾರಿ ಬೆಟ್ಟಕ್ಕೆ ಹೋಗಿ ಬರಲೇಬೇಕೆಂಬ ನಂಬಿಕೆಯಿದೆ. ಬೆಂಗಳೂರು, ಮಂಡ್ಯ, ತುಮಕೂರು ಹಾಗೂ ಮೈಸೂರು ಜಿಲ್ಲೆಗಳ ಜನ ಶಿವರಾತ್ರಿ ಅಥವಾ ನವರಾತ್ರಿಯ ಸಂದರ್ಭಗಳಲ್ಲಿ ಒಟ್ಟೊಟ್ಟಾಗಿ ಹೊರಡುತ್ತಾರೆ.

**ISBN – 978-93-5526-247-9**

**ನೀಲಗಾರರು :**

ಮಂಟೇಸ್ವಾಮಿಯ ಭಕ್ತರಾದ ನೀಲಗಾರರು, ಕಂಸಾಳೆಯವರಂತೆಯೇ ಇನ್ನೊಂದು ರೀತಿಯ ವೃತ್ತಿಗಾಯಕರು ಮೈಸೂರು ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ನೀಲಗಾರರಿದ್ದಾರೆ. ಇವರನ್ನು ಮಂಟೆದಯ್ಯ, ಮಂಟೇದೇವರು ಎಂದು ಕರೆಯುವುದು ವಾಡಿಕೆ ಮಳವಳ್ಳಿ ಬೊಪ್ಪಗೌಡನಪುರ ಮತ್ತು ಚಿಕ್ಕಲೂ'ರಿನಲ್ಲಿ ಇವರ ಮಠಗಳಿವೆ. ನೀಲಗಾರರ ಸಂಪ್ರದಾಯದ ಮೂಲ ಪುರಷ ಮಂಟೇಸ್ವಾಮಿ.

**ವೇಷಭೂಷಣ :**

ಕರಿಯ ನೀಲುವಂಗಿ, ಕಚ್ಚೆ ಪಂಚೆಗಳು, ಜೋಳಿಗೆ, ಕೈಯಲ್ಲಿ ಕೋಲು, ತಲೆಗೆ ಕೆಂಪು ರುಮಾಲು, ನಡುವಿಗೆ ಸುತ್ತಿದ ವಸ್ತ್ರ, ಕೊರಳಲ್ಲಿ ಮೂರು ರುದ್ರಾಕ್ಷಿ ಮಣಿಗಳು.

**ಸಾಧಾರಣ ನೀಲಗಾರರು :**

ಇವರು ಕಾವ್ಯ ಅಥವಾ ಪದಗಳನ್ನು ಹಾಡುವುದಿಲ್ಲ, ಇವರಿಗೆ ಒಂದು ರುದ್ರಾಕ್ಷಿಯನ್ನು ಮಾತ್ರ ಕಟ್ಟಲಾಗುತ್ತದೆ.

**ತಂಬೂರಿ ನೀಲಗಾರರು :**

ದೇವರ ಕಥೆಗಳಲ್ಲಿ ಹಾಡುತ್ತಾ ಧಾರ್ಮಿಕ ವಿಧಿವಿಧಾನಗಳಲ್ಲಿ ಭಾಗವಹಿಸುತ್ತಾರೆ. ಇವರಿಗೆ ದೀಕ್ಷೆಯಾದಾಗ ಮೂರು ರುದ್ರಾಕ್ಷಿ ಮಣಿಗಳನ್ನು ಕಟ್ಟಲಾಗುತ್ತದೆ. ಹಾಡಲು ಹೋದಾಗ ಮುವತ್ತೊಂದು ಮಣಿ ಧರಿಸುತ್ತಾರೆ.

**ದೀಕ್ಷಾ ವಿಧಾನ :**

ನೀಲಗಾರರಿಗೆ ದೀಕ್ಷೆಕೊಡುವ ಎರಡು ಪಾರಂಪರಿಕ ಮಠಗಳು ಬೊಪ್ಪಗೌಡನಪುರ ಮತ್ತು ಮಳವಳ್ಳಿಗಳಲ್ಲಿವೆ. ಆ ಎರಡು ಮಠಗಳಲ್ಲಿ ಯಾವುದಾದರೂ ಒಂದು ಮಠದಿಂದ ದೀಕ್ಷೆ ಪಡೆಯಬಹುದು. ಒಂದು ವೇಳೆ ಮಠಗಳ ಮೂಲಕ ದೀಕ್ಷೆ ಪಡೆಯಲು ಸಾಧ್ಯವಾಗಲಿಲ್ಲವಾದರೆ ಜಾತ್ರೆಗಳಲ್ಲಿ ಪಡೆಯಬಹುದು.

ನೀಲುಗಾರರ ಪ್ರಮುಖ ವಾದ್ಯ ತಂಬೂರಿ, ತಂಬೂರಿಯು ಸುಮಾರು ಎರಡು ಮೊಳವಿರುತ್ತದೆ. ಇದನ್ನು ಹಲಸಿನ ಮರದಿಂದ ತಯಾರು ಮಾಡುತ್ತಾರೆ. ಇದರ ಮೇಲು ತುದಿಯಲ್ಲಿ ನಾಗರಹೆಡೆ ಇಲ್ಲವೇ ಸಿಂಹದ ಮುಖವನ್ನು ಬಿಡಿಸುತ್ತಾರೆ.

ನೀಲಗಾರರನ್ನು ಮಂಟೇದಯ್ಯ, ಮಂಟೇಸ್ವಾಮಿ ಮಂಟೇದವರು ಎಂದು ಕರೆಯುತ್ತಾರೆ. ನೀಲಗಾರರ ಹಾಡಿನ ರೀತಿ ಇತರೆ ವೃತ್ತಿಗಾಯಕರಿಗಿಂತ ತುಂಬ ಭಿನ್ನ ಅಬ್ಬರವಿಲ್ಲದೆ ಆದರೆ ಸಂಕೋಮಲ ರಾಗದ ಈ ಹಾಡುಗಳು ಕೇಳಗರನ್ನು ಬೇರೊಂದು ಜಗತ್ತಿಗೆ ಕರೆದೊಯ್ಯುವ ಶಕ್ತಿ ಪಡೆದಿದೆ. ನೀಲಗಾರರು ಹಾಡುವ ಕಾವ್ಯಗಳನ್ನು ಧಾರ್ಮಿಕ ಕಾವ್ಯ ಹಾಗೂ ಲೌಖಿಕ ಕಾವ್ಯಗಳೆಂದು ವಿಂಗಡಿಸಲಾಗಿದೆ. ಧಾರ್ಮಿಕ ಕಾವ್ಯದಲ್ಲಿ ಜನಪದ ಮಹಾಕಾವ್ಯವಾದ "ಮಂಟೇಸ್ವಾಮಿ ಕಾವ್ಯವು" ನಾಲ್ಕು ಸಾಲುಗಳಾಗಿ ವಿಭಾಗಿಸಲ್ಪಟ್ಟಿದೆ.

1. ಧರೆಗೆ ದೊಡ್ಡವರ ಸಾಲು 2. ಸಿದ್ದಪ್ಪಾಜಿ ಸಾಲು 3. ರಾಚಪ್ಪಾಜಿ ಸಾಲು 4. ಚಿಕ್ಕಲ್ಲೂರು ಸಾಲು

ಲೌಖಿಕ ಕಾವ್ಯದಲ್ಲಿ ಕುಶ ಲವರ ಕಥೆ ಅರ್ಜುನ ಜೋಗಿ, ಹಾಡು ಪಿರಿಯಾಪಟ್ಟದ ಕಾಳಗ, ಲಿಂಗರಾಜಮ್ಮ, ಚನ್ನಿಗರಾಮ, ಸಾರಂಗಧರ, ಗುಂಡು ಬ್ರಹ್ಮಯ್ಯ, ಅಕ್ಕನಾಗಮ್ಮ, ಭುವದಮ್ಮ, ಚೆನ್ನಬಸವಣ್ಣ, ಬಾಲನಾಗಮ್ಮ, ಚಲುವರಾಯ ಬಳಗದಿಂದ ನಂಜುಂಡೇಶ್ವರ ಕಾರುಗಹಳ್ಳಿ ಕಾಳಗ ಇತ್ಯಾದಿ ಕಥೆಗಳು ಸೇರುತ್ತವೆ.

**ಚೌಡಿಕೆಯವರು :**

ಶಕ್ತಿದೇವತೆ ಯಲ್ಲಮ್ಮನ ಪರಮಭಕ್ತರು ಚೌಡಿಕೆಯವರು, ಯಲ್ಲಮ್ಮ, ಹುಲಿಗೆಮ್ಮ ರೇಣುಕಾ ಇತ್ಯಾದಿ ಹೆಸರುಗಳಿಂದ ಉತ್ತರ ಕರ್ನಾಟಕದಾದ್ಯಂತ ಆರಾಧನೆಗೊಳ್ಳುವ ಈ ದೇವತೆಯ ಗುಡಿಗಳು ಹತ್ತಾರು ಕಡೆಗಳಲ್ಲಿ ಕಂಡು ಬರುತ್ತವೆ. ಗುಲ್ಬರ್ಗಾ, ಧಾರವಾಡ, ಬಳ್ಳಾರಿ, ಬಿಜಾಪುರ, ತುಮಕೂರು, ಚಿಕ್ಕಮಗಳೂರು, ಬೆಳಗಾವಿ, ಚಿತ್ರದುರ್ಗ, ರಾಯಚೂರು, ಶಿವಮೊಗ್ಗ, ಮಂಡ್ಯ, ಉತ್ತರ ಕರ್ನಾಟಕದಲ್ಲಿ ಅಲ್ಲಲ್ಲಿ ಚೌಡಿಕೆ ಸಂಪ್ರದಾಯ ಜನಪ್ರಿಯವಾಗಿದೆ.

ಕಂಸಾಳೆ ಮತ್ತು ನೀಲಗಾರರಂತೆ ಚೌಡಿಕೆಯವರು ದೀಕ್ಷೆಯನ್ನು ಪಡೆದುಕೊಂಡು ಯಲ್ಲಮ್ಮನ ಭಕ್ತರಾಗುತ್ತಾರೆ.

ISBN – 978-93-5526-247-9

ಮರದ ಅಥವಾ ತಾಮ್ರದ ಕೊಳಗಕ್ಕೆ ಚರ್ಮದ ಹೊದಿಕೆ ಎರಡುವರೆ ಅಡಿ ಉದ್ದದ ಕುರಿಯ ಕರುಳಿನ ಬೆಸೆದಾರವನ್ನು ಕೊಳಗದ ಮಧ್ಯದ ರಂಧ್ರದಿಂದ ತಂದು ಗೆಜ್ಜೆ ಮತ್ತು ಗಗ್ಗರಗಳನ್ನು ಕಟ್ಟಿದ ಆರು ಇಂಚಿನ ಕಟ್ಟಿಗೆಯ ಚಿಣಿಗೆಗೆ ಕಟ್ಟಿರುತ್ತಾರೆ. ಚಿಣಿಯನ್ನು ಜಗ್ಗಿ ಹಿಡಿದು ಕಡ್ಡಿಯಿಂದ ದಾರವನ್ನು ಮೀಟಿದರೆ ಇಂಪಾದ ಸದ್ದು ಹೊರಡುತ್ತದೆ.

ಧಾರ್ಮಿಕ ವೃತ್ತಿಗಾಯಕರು ಯಲ್ಲಮ್ಮನ ಭಕ್ತರಾಗಿ ದೀಕ್ಷೆ ಪಡೆದು ವಿದಿಬದ್ದರಾಗಿ ದೇವಿಯ ಕಥೆಯನ್ನು, ಮಹಿಮೆಯನ್ನು ಹಾಡುತ್ತಾ, ಪರ್ಯಟನೆ ಮಾಡುವರು, ಭಿಕ್ಷೆ ಬೇಡುವುದು ಮುಖ್ಯ ಉದ್ದೇಶವಲ್ಲ, ದೇವಿಯ ಮಹಿಮೆಯನ್ನು ಪ್ರಸಾರ ಮಾಡುವುದು ಮುಖ್ಯ ಉದ್ದೇಶವಾಗಿರುತ್ತದೆ.

ಚೌಡಿಕೆ ಸಂಪ್ರದಾಯದಲ್ಲಿ ಗಂಡಸರ ಮೇಳ ಮತ್ತು ಹೆಂಗಸರ ಮೇಳಗಳೆಂದು ಗುರುತಿಸಲಾಗಿದೆ. ಗಂಡಸರ ಚೌಡಿಕೆ ಮೇಳವು ದಕ್ಷಿಣ ಹಾಗೂ ಉತ್ತರ ಕರ್ನಾಟಕದ ಎರಡು ಭಾಗಗಳಲ್ಲಿಯೂ ಕಂಡುಬರುತ್ತದೆ. ದೀಕ್ಷೆ ಪಡೆದು ಚೌಡಿಕೆ ನುಡಿಸುವ ಸಾಂಪ್ರದಾಯಿಕ ಕಲಾವಿದರನ್ನು ಜೋಗಿಗಳು ಎಂದೂ ಕರೆಯಲಾಗುತ್ತದೆ. ಹೆಂಗಸರನ್ನು ಜೋಗತಿಯರು ಎಂದು ಕರೆಯುತ್ತಾರೆ.

**ಗಣೆಯವರು :**

ವೃತ್ತಿಗಾಯಕರ ಪರಂಪರೆಯಲ್ಲಿ ತುಂಬಾ ವಿಶಿಷ್ಟವಾದ ಸಾಹಿತ್ಯವನ್ನು ಹೊಂದಿರುವ ಗಣೆಯವರು ಕಾಡುಗೊಲ್ಲರ ಜನಾಂಗದವರು ಇವರನ್ನು ವಕ್ತಾರರು ಎಂದು ಕರೆಯುತ್ತಾರೆ. ಇವರ ಆರಾಧ್ಯ ದೈವ ಹಾಗೂ ಮೂಲ ಪುರುಷ ಕಾಡುಗೊಲ್ಲರ ಕಲಿವೀರ ಜಂಜಪ್ಪ, ಜುಂಜಪ್ಪನ ಕಾವ್ಯ, ಕನ್ನಡ ಜನಪದ ಮಹಾಕಾವ್ಯಗಳ ಸಾಲಿಗೆ ಸೇರುವ ಮತ್ತೊಂದು ಮಹತ್ವದ ಕೃತಿಯಾಗಿದೆ. ಜುಂಜಪ್ಪನ ಗಣೆಯನ್ನು ಹೊತ್ತು ಊರೂರು ಮೇಲೆ ಬರುತ್ತಾರೆ. ಜುಂಜಪ್ಪನ ಹೆಸರಿನಲ್ಲಿ ಕಾಣಿಕೆ ಮತ್ತು ಹರಕೆಯನ್ನು ಸಂಗ್ರಹಿಸುವ ಇವರನ್ನು ಕಾಣಿಕೆಯವರು ಎಂದೂ ಕರೆಯುತ್ತಾರೆ.

ಹರಕೆ ಮತ್ತು ಕಾಣಿಕೆಯನ್ನು ಸ್ವೀಕರಿಸಿ ಗಣೆಯನ್ನು ಹೊತ್ತ ಜುಂಜಪ್ಪನ ಭಕ್ತನು ತನ್ನ ಜನರನ್ನು ಹೀಗೆ ಹರಸುತ್ತಾನೆ.

ಸ್ವಾಮಿ ಜುಂಜಪ್ಪ ಹರಿಯೋ ಹಾವಿನ ಗಂಡ
ಉರಿಯೋ ಕಿಚ್ಚಿನ ಗಂಡ
ಅವರ ಹೊಲದಲ್ಲಿ ಮನೆಯಲ್ಲಿ । ಮಕ್ಕಳಲ್ಲಿ ಮರಿಯಲ್ಲಿ
ಹೊತ್ತಾವು, ಬಂತಾವು, ಕುರೀನಲ್ಲಿ, ದನಿಯಲ್ಲಿ । ಹಾವು, ಚೇಳು
ಹುಳ ಹುಪ್ಪಟೆಯಾಗಿ ಏನಾಗಿ ಕಂಡಿಯಸು
ನಿನ್ನ ಕಾಣಿಕೆ ಆಗ್ಯಾದಪ್ಪ !
ಕಾಪಾಡಪ್ಪ ಕಾಪಾಡು

ಗಣೆಯವರು ತಮ್ಮ ಸಾಕಷ್ಟು ಉದ್ದನೆಯ ಬಿದಿರನ ಕೊಳಲನ್ನು ಬಾರಿಸಿಕೊಂಡು ಅತ್ಯಂತ ಸುಶ್ರಾವ್ಯವಾಗಿ ಕಾವ್ಯವನ್ನು ಹಾಡುತ್ತಾರೆ.

**ಗೊರವರು :**

ಜನಪದ ಮಹಾಕಾವ್ಯಗಳ ವೃತ್ತಿಗಾಯಕರಲ್ಲಿ ಇವರು ಒಬ್ಬರು ಗೊರವರು. ಇವರು ಮೈಲಾರಲಿಂಗನ ಪರಮಭಕ್ತರು. ಮೈಲಾರಲಿಂಗನ ಗುಡ್ಡರೆಂದೇ ಹೆಸರಾದ ಗೊರವರು, ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿದೆ. ಮೈಲಾರಲಿಂಗನ ದೇವಾಲಯವಿರುವ ಸ್ಥಳವನ್ನು ಹೀರೆಮೈಲಾರವೆಂದು ಕರೆಯುವುದು ವಾಡಿಕೆ. ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಕಾಣಿಸುಕೊಳ್ಳುವ ಗೊರವರು, ಮೈಲಾರಲಿಂಗನ ಧಾರ್ಮಿಕ ಸಂಪ್ರದಾಯವನ್ನು ಅನುಸರಿಸುವವರು.

ಕಂಬಳಿಯ ನಿಲುವಂಗಿಯನ್ನು ಧರಿಸುವವರು. ಕೊರಳಲ್ಲಿ ಭಂಡಾರವನ್ನಿಡುವ ಹುಲಿಯ ಚರ್ಮದ ಚೀಲ, ಕವಡೆಸರ, ಭಿಕ್ಷಾಪಾತ್ರೆ, ದೋಣಿ, ಡಮರುಗ ತ್ರಿಶೂಲಗಳನ್ನು ಧರಿಸುತ್ತಾರೆ. ಗೊರವ ಗೊಗ್ಗಯ್ಯ, ಗೊಡಬಡ್ಡಯ್ಯ, ಕಡಬಡ್ಡೆ ಮುಂತಾದ ಹೆಸರುಗಳಿಂದ ಇವರನ್ನು ಕರೆಯುತ್ತಾರೆ.

ಮುಖ್ಯ ಕಥೆಗಾರ ಡಮರುಗ ನುಡಿಸುತ್ತಾ ಕಥೆಯನ್ನು ನಿರೂಪಿಸುತ್ತಿದ್ದಾರೆ. ಇನ್ನಿಬ್ಬರು ಹಿಮ್ಮೇಳದಲ್ಲಿ ಕಾವ್ಯ ಸ್ಥಳ ಪುರಾಣಗಳು ಜನಪದ ಕಥೆಗಳು ಹೇರಳವಾಗಿವೆ. ದೇವರ ಮಹಿಮೆ ಮತ್ತು ಪವಾಡಗಳು ಇಲ್ಲೆಲ್ಲಾ ಸ್ವಾರಸ್ಯಕರವಾಗಿ ನಿರೂಪಿತವಾಗಿವೆ.

ದಕ್ಷಿಣ ಕರ್ನಾಟಕದ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮೈಲಾರಪಟ್ನ , ಬೆಂಗಳೂರು ಜಿಲ್ಲೆಯ ಅನೇಕಲ್ ತಾಲ್ಲೂಕಿನ ಎಳ್ಳಾಗರ, ಮೈಸೂರು ಜಿಲ್ಲೆಯ ಮುಡುಕುತೊರೆ ಕ್ಷೇತ್ರಗಳು ಪ್ರಸಿದ್ಧವಾದವು.

ISBN – 978-93-5526-247-9

ಜನಪದ ಮಹಾಕಾವ್ಯಗಳನ್ನು ಹಾಡುವಂತಹ ವೃತ್ತಿಗಾಯಕರನ್ನು ಸಂವಹನ ಮಾಧ್ಯಮವೆಂದು ಹೇಳಬಹುದು. ಧಾರ್ಮಿಕ ಆಚರಣೆಗಳು, ವಿಧಿ ವಿಧಾನಗಳು, ಪವಾಡಪುರುಷರ ಮಹಿಮೆಗಳು, ಕಥೆ ಹಾಗೂ ಹಾಡುಗಳ ಮೂಲಕ ವಿಸ್ತರಿಸುವ ಕಾರ್ಯವಾಗಿರುತ್ತದೆ.

ಜನಪದ ಮಹಾಕಾವ್ಯಗಳ ವೃತ್ತಿಗಾಯಕರು ತಮ್ಮನ್ನು ತಾವು ಧಾರ್ಮಿಕ ಕಾರ್ಯಕ್ಕೆ ಮುಡಿಪಾಗಿಟ್ಟು ಶ್ರದ್ಧಾಭಕ್ತಿಯಿಂದ ದೇವರ ಹೆಸರಿನಲ್ಲಿ ದೀಕ್ಷೆ ಪಡೆದು ದೇವರ ಮಹಿಮೆಯನ್ನು ಸಾರುವರು. ಧಾರ್ಮಿಕ ವೃತ್ತಿಗಾಯಕರು ಅವರವರ ಅರಾಧ್ಯ ದೈವದ ಮಹಿಮೆಯನ್ನು ತಮ್ಮ ಅದ್ಭುತ ಕಂಠದಿಂದ ಸುಶ್ರಾವ್ಯವಾಗಿ ಹೇಳುವರು.

ಜನಪದ ಮಹಾಕಾವ್ಯಗಳು ಧಾರ್ಮಿಕ ಆಚರಣೆಯ ಒಂದು ಭಾಗವಾಗಿರುವುದರಿಂದ ಭಕ್ತರು ತಾವು ಸಂಕಲ್ಪಿಸಿದ ಶುಭಕಾರ್ಯ ಕೈಗೊಂಡರೆ ಆ ದೇವರುಗಳಿಗೆ ಸಂಬಂಧಿಸಿದ ಕಥೆಯನ್ನು ಮಾಡುಸುವುದಾಗಿ ಹರಕೆ ಹೊರುತ್ತಾರೆ. ಅಲ್ಲದೆ ಜನನ, ವಿವಾಹ ಮರಣ, ಗೃಹಪ್ರವೇಶ ಮುಂತಾದ ವಿಶಿಷ್ಟ ಸಮಾರಂಭಗಳಿಗೆ ಹಾಡಿಸುತ್ತಾರೆ.

## ಆಕರ ಗ್ರಂಥಗಳು :

1. ಕರ್ನಾಟಕ ಜನಪದ ಕಲೆಗಳ ಕೋಶ – ಹಿ.ಚಿ. ಬೋರಲಿಂಗಯ್ಯ
2. ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ – ಕಾಳೇಗೌಡ ನಾಗವಾರ

***

ISBN – 978-93-5526-247-9

# 52.ಕನ್ನಡ ಜನಪದ ಮಹಾಕಾವ್ಯಗಳು : ಒಂದು ಅಧ್ಯಯನ

ಡಾ. ಭಾಗ್ಯಮ್ಮ.ಜಿ

ಕನ್ನಡ ಜನಪದ ಮಹಾಕಾವ್ಯಗಳಿಗೆ ಸುದೀರ್ಘವಾದ ಪರಂಪರೆಯಿದೆ. ನಮ್ಮ ರಾಷ್ಟ್ರದ ರಾಷ್ಟ್ರೀಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಮಹಾಕಾವ್ಯಗಳು ಮಹತ್ವದ ಪಾತ್ರವನ್ನು ವಹಿಸಿವೆ. ಭಾರತದ ಎಲ್ಲಾ ಭಾಷೆಗಳಲ್ಲಿ ಮಹಾಕಾವ್ಯಗಳ ಸೃಷ್ಟಿ ನಿರಂತರವಾಗಿ ಸಾಗುತ್ತಾ ಬಂದಿದೆ. ಪ್ರಾಚೀನ ಮತ್ತು ಆಧುನಿಕ ಪರಂಪರೆಯಲ್ಲಿ ಮಹಾಕಾವ್ಯಗಳ ಆವಿಷ್ಕಾರ ಆಗುತ್ತಲಿರುವುದು ಭಾರತೀಯ ಸಾಹಿತ್ಯದ ವಿಶಿಷ್ಟತೆಗಳಲ್ಲೊಂದಾಗಿದೆ.

ಭರತ ಖಂಡದ ಅವಳಿ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಮಹಾಭಾರತವೇ ಅತ್ಯಂತ ವಿಸ್ತಾರವಾದ ಮಹಾಕಾವ್ಯವಾಗಿದೆ. ಮಹಾಭಾರತವು ವ್ಯಾಸದಿಂದ ರಚಿಸಲ್ಪಟ್ಟಿದೆ ಎಂದು ಹೇಳಿದರೂ ಕೂಡಾ ಅದು ಅವರಿಗಿಂತ ಪೂರ್ವದಿಂದಲೂ ಬೆಳೆದು ಬಂದಿರಬೇಕು. ಒಂದೇ ಕುಲದ ಎರಡು ಕವಲುಗಳು ರಾಜ್ಯದ ಒಡೆತನಕ್ಕಾಗಿ ನಡೆಸಿದ ಯುದ್ಧದ ವಿವರಣೆಯೊಂದಿಗೆ ಆರಂಭವಾಗಿರುವ ಸಾಧ್ಯತೆ ಹೆಚ್ಚಾಗಿದೆ. ಈ ಯುದ್ಧದ ಕಥಾವಳಿಗಳು ಜನಸಾಮಾನ್ಯರನ್ನು ಸೂತರ ಮೂಲಕ ಸೇರಿದವು. ರಾಮಾಯಣ, ಮಹಾಭಾರತ, ಭಾಗವತದಂಥ ರಾಷ್ಟ್ರೀಯ ಮಹಾಕಾವ್ಯಗಳು ಜನಪದ ಕಥವಕ್ತೃಗಳ ಮೂಲಕ ಜನಾಂಗಿಕ ವ್ಯಾಪ್ತಿಯಲ್ಲಿ ಆಕೃತಿಗೊಳ್ಳುತ್ತವೆ. ಉದಾಹರಣೆಗೆ ರಾಮಾಯಣವು ಗೊಂಡರ ರಾಮಾಯಣವಾಗುತ್ತದೆ. ಮಹಾಭಾರತವು ಗ್ರಾಮೊಕ್ಕಲ ಮಹಾಭಾರತವಾಗುತ್ತದೆ. ಭಾಗವತವು ಗೊಲ್ಲರ ಕಥೆಯಾಗುತ್ತದೆ.

ಮಹಾಕಾವ್ಯವು ಮೂರು ವಿಧವಾದ ರೀತಿಯಲ್ಲಿ ಸೃಷ್ಟಿಗೊಳ್ಳುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ದೇಶದ ರಾಷ್ಟ್ರೀಯ ಸಂಸ್ಕೃತಿಯನ್ನು ಪ್ರಚುರಪಡಿಸುವ ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಒಂದು ಬಗೆಯದಾದರೆ, ಎರಡನೆಯ ಬಗೆಯದ್ದು ಏಕಕರ್ತೃತ್ವ ಮಹಾಕಾವ್ಯಗಳು. ಜನಾಂಗದ ಅಧ್ಯಯನ ವಿಪುಲವಾದಂತೆ ಅದರ ಸಂಸ್ಕೃತಿಯ ಪ್ರತೀಕವಾದ ಜನಪದ ಮಹಾಕಾವ್ಯಗಳ ಅಧ್ಯಯನವು ವಿಶಿಷ್ಟವಾದ ರೀತಿಯಲ್ಲಿ ಬೆಳೆದುಬರಲು ಸಾಧ್ಯವಾಗಿದೆ.

ಭಾರತೀಯ ಭಾಷೆಗಳಲ್ಲೇ ವಿಶಿಷ್ಟವಾದ ಜನಪದ ಮಹಾಕಾವ್ಯಗಳು ಕನ್ನಡದಲ್ಲಿವೆ. ಜನಪದ ಮಹಾಕಾವ್ಯಗಳ ಬಗ್ಗೆ ವಿದ್ವಾಂಸರು ಅಧ್ಯಯನ ನಡೆಸುತ್ತಿರುವುದು ಒಂದು ಪ್ರಮುಖವಾದ ಅಂಶ. ಸಂಸ್ಕೃತಿಯ ಅಧ್ಯಯನ ನಡೆದಂತೆ ಅವುಗಳ ಮಹತ್ವವನ್ನು ಸಾರುವಲ್ಲಿ ಮಹಾಕಾವ್ಯಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ಒಂದು ಜನಾಂಗದ, ನಾಡಿನ ಹಾಗೂ ದೇಶದ ಸಂಸ್ಕೃತಿಯ ಪರಮ ಮೌಲ್ಯಗಳನ್ನು ಗುರುತಿಸುವುದಕ್ಕೆ ಮಹಾಕಾವ್ಯ ಪ್ರಮುಖವಾದ ಆಕರವಾಗಿದೆ.

ಕನ್ನಡದ ಜನಪದ ಮಹಾಕಾವ್ಯಗಳನ್ನು ಹಾಡಿದವರು ಸಮಾಜದಲ್ಲಿ ಅತ್ಯಂತ ಹಿಂದುಳಿದವರು. ಇಲ್ಲಿಯ ಪ್ರತಿಯೊಂದು ಮಹಾಕಾವ್ಯಗಳಿಗೂ ಒಂದೊಂದು ಗಾಯಕ ವರ್ಗವಿದೆ. ಅವರು ತಮ್ಮ ತಮ್ಮ ಅಧಿದೈವಕ್ಕೆ ಸಂಬಂಧಿಸಿದಂತೆ ಚರಿತ್ರೆಯನ್ನು ಪರಂಪರಾಗತವಾಗಿ, ಕಾವ್ಯಮಯವಾಗಿ ಹಾಡಿಕೊಳ್ಳುತ್ತಾ ಉಳಿಸಿಕೊಂಡು ಬಂದಿದ್ದಾರೆ. ಮಲೆಮಾದೇಶ್ವರ ಕಾವ್ಯವನ್ನು ಹಾಡುವವರು ಅಸ್ಪೃಶ್ಯರು ಅವರನ್ನು ಕಂಸಾಳೆಯವರೆಂತಲೂ, ದೇವರ ಗುಡ್ಡರೆಂತಲೂ ಕರೆಯುವರು. ಮಂಟೇಸ್ವಾಮಿ ಕಾವ್ಯವನ್ನು ಹಾಡುವವರು ನೀಲಗಾರರು. ಜುಂಜಪ್ಪ ಕಾಡುಗೊಲ್ಲರು ರಕ್ಷಿಸಿಕೊಂಡು ಬಂದಕಾವ್ಯ. ಇವರನ್ನು ಗಣೆಯವರು ಎಂತಲೂ ಕರೆಯುವರು, ಮೈಲಾರಲಿಂಗನ ಕಾವ್ಯವನ್ನು ಹಾಡುವವರು ಗೊರವರು. ಹಾಲುಮತ ಮಹಾಕಾವ್ಯವನ್ನು ಹಾಡುವವರು ಕುರುಬರು. ಈ ಹಾಡುಗಾರರೆಲ್ಲ ತಮ್ಮ ಕಾವ್ಯದ ಕಥಾನಾಯಕರನ್ನು ತಮ್ಮ ಕುಲದವರೆಂದು ಹೆಮ್ಮೆಯಿಂದ ಹೇಳಿಕೊಳ್ಳುವರು. ಇವರನ್ನು ದೇವರ ಅವತಾರವೆಂತಲೇ ನಂಬುವರು. ಅಂದರೆ ಜನಪದ ಮಹಾಕಾವ್ಯಗಳ ಕಥನ ವಕ್ತೃಗಳು ಮತ್ತು ಶ್ರೋತೃವರ್ಗ ಆಯಾ ಬುಡಕಟ್ಟಿನ ಜನಾಂಗದವರೇ ಆಗಿದ್ದಾರೆ. ಜನಪದ ಮಹಾಕಾವ್ಯದ ಹಾಡುಗಾರರೆಲ್ಲಾ ತಮ್ಮ ತಮ್ಮ ದೈವದ ಸಂಕೇತವಾದ ಜನಪದ ವಾದ್ಯವನ್ನು ಬಳಸಿಕೊಂಡೇ ಬಂದಿದ್ದಾರೆ. ಕಂಸಾಳೆಯವರು ಕಂಸಾಳೆ ಎಂಬ ತಾಳವಾದ್ಯವನ್ನು ಬಳಸಿದರೆ, ನೀಲಗಾರರು ಹಾವಿನ ಹೆಡೆಯ ಆಕಾರದ, ಸಿಂಹದ ಮುಖದ ಮಟ್ಟಸವಾದ ನಾಲ್ಕು ತಂತಿಯ ತಂಬೂರಿಯನ್ನು ನುಡಿಸುವರು. ಕಾಡುಗೊಲ್ಲರು ಬಿದಿರಿನಿಂದ ತಯಾರಿಸಿದ ಮೂರು ಗೆಣ್ಣುಗಳಿಂದ ಕೂಡಿದ ಉದ್ದವಾದ ಕೊಳಲನ್ನು ಬಾರಿಸುವರು. ಇದನ್ನು ಗಣೆ ಎಂಬ ಹೆಸರಿನಿಂದ ಕರೆಯುವರು. ಗೊರವರು ತಮ್ಮ ಹಾಡಿಗೆ ಹಿಮ್ಮೇಳವಾಗಿ ಡಮರುಗವನ್ನು, ಮದ್ದಳೆಯನ್ನು ಬಳಸುವರು. ಇವೆಲ್ಲವುಗಳಂತೆಯೇ ಕೃಷ್ಣಗೊಲ್ಲರ ಮಹಾಕಾವ್ಯವನ್ನು ಹಾಡುವವರು ವೀಣೆಯನ್ನು ಹೋಲುವ ಒಂದು ಬಗೆಯ ಉದ್ದವಾದ ಕೊಳಲನ್ನು ಬಾರಿಸುವರು. ಇದನ್ನು ಗಣೆ ಎಂಬ ಹೆಸರಿನಿಂದ ಕರೆಯುವರು. ಗೊರವರು ತಮ್ಮ ಹಾಡಿಗೆ ಹಿಮ್ಮೇಳವಾಗಿ ಡಮರುವನ್ನು, ಮದ್ದಳೆಯನ್ನು ಬಳಸುವರು. ಇವೆಲ್ಲವುಗಳಂತೆಯೇ ಕೃಷ್ಣ–ಗೊಲ್ಲರ ಮಹಾಕಾವ್ಯವನ್ನು ಹಾಡುವವರು ವೀಣೆಯನ್ನು ಹೋಲುವ ಒಂದು ಬಗೆಯ ವಾದ್ಯವನ್ನು ಬಳಸುವರು. ಈ ವಾದ್ಯಗಳನ್ನೆಲ್ಲಾ ಆಯಾ ಗಾಯಕರು ತಾವು ಹಾಡುವಾಗ ಮಾತ್ರ ಬಳಸುತ್ತಿದ್ದು ಉಳಿದ ಸಂದರ್ಭಗಳಲ್ಲಿ ಅದನ್ನು ಗದ್ದುಗೆಯ ಮೇಲಿಟ್ಟು ಪೂಜಿಸುವರು. ಜನಪದ ಮಹಾಕಾವ್ಯಗಳ ಹಾಡುಗಾರರು ತಮ್ಮದೇ ಆದ ವೇಷಾಲಂಕಾರವನ್ನು ಹೊಂದಿದ್ದಾರೆ. ಇವರು ಮತಾಚರಣೆಯ ಸಂದರ್ಭದಲ್ಲೋ, ಪೂಜೆಯ ಸಂದರ್ಭದಲ್ಲೋ, ಆಯಾ ದೇವರ ಜಾತ್ರೆಯ ಸಂದರ್ಭದಲ್ಲೋ ಇಲ್ಲವೇ ಜನರ ಆಮಂತ್ರಣ ಮೇರೆಗೋ ಹಾಡುವರು. ಅದೊಂದು ತಮ್ಮ

ISBN – 978-93-5526-247-9

ಕೈಂಕರ್ಯವೆಂದೇ ಭಾವಿಸುವರು. ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಕುರುಬರ ಬೀರಪ್ಪ ಕುಮಾರರಾಮ, ಕೋಟಿಚೆನ್ನಯ, ಸಿರಿ ಇವರೆಲ್ಲರ ಗುಡಿಗಳು ನಿರ್ಮಾಣವಾಗಿವೆ. ಅವರದೇ ಆದ ಅರ್ಚನಾ ವಿಧಾನವನ್ನು ರೂಢಿಸಿಕೊಂಡಿದ್ದಾರೆ. ಜಾತ್ರೆಗಳನ್ನು ನೆರವೇರಿಸಿಕೊಂಡು ಬಂದಿದ್ದಾರೆ. ಬಹುತೇಕ ಮಹಾಕಾವ್ಯದ ಗಾಯಕರಿಗೆ ಅವರ ಹಿರಿಯ ಗುಡ್ಡರಿಂದ ದೀಕ್ಷೆಯಾಗಿರುವುದನ್ನು ಕಾಣುತ್ತೇವೆ. ಧೀರೋದ್ದಾತ್ತವಾದ ನಾಯಕ, ಅವನಿಗೆ ಪ್ರತಿಯಾಗಿ ಖಳನಾಯಕ ಈ ಎರಡು ಶಕ್ತಿಗಳ ನಡುವಿನ ಹೋರಾಟ ಒಳಿತು ಕೆಡಕುಗಳ ಸಂಘರ್ಷ. ಈ ಸಂಘರ್ಷದಲ್ಲಿ ಒಳ್ಳೆಯದಕ್ಕೆ ಗೆಲುವಾಗುವುದು. ದುಷ್ಟಶಕ್ತಿಗಳು ಸೋಲುವುದು, ಇಲ್ಲವೇ ನಾಶವಾಗುವುದು. ಮನುಷ್ಯರ ಜೀವನವನ್ನು ದೈವಿಕ ಹಾಗೂ ದೈವಿಕವಲ್ಲದ ಶಕ್ತಿಗಳು ನಿಯಂತ್ರಿಸುವುದು, ನಿರ್ಧರಿಸುವುದು. ಇಡೀ ಸಮುದಾಯದ ಆಶೆ ಆಶೋತ್ತರಗಳು ಈ ಮೂಲಕ ಮಹಾಕಾವ್ಯದ ಸಂರಚನೆಯಲ್ಲಿ ಅಭಿವ್ಯಕ್ತಿಗೊಳ್ಳುವುದನ್ನು ಕಾಣಬಹುದು. ಹೀಗಾಗಿ ಮಹಾಕಾವ್ಯವೆನ್ನುವುದು ಸಾಹಿತ್ಯದ ಇತರ ಯಾವುದೇ ಪ್ರಕಾರಕ್ಕಿಂತ ಹೆಚ್ಚಿನ ಮನ್ನಣೆಯನ್ನು ಪಡೆಯಲು ಸಾಧ್ಯವಾಗಿದೆ. ಮಹತ್ತು ಬೃಹತ್ತುಗಳು ಮಹಾಕಾವ್ಯಗಳ ಪ್ರಮುಖವಾದ ಲಕ್ಷಣವಾಗಿದೆ.

ಜನಪದ ಮಹಾಕಾವ್ಯಗಳಲ್ಲಿಯ ಕಥಾನಾಯಕರೆಲ್ಲರೂ ಶಿಷ್ಟ ಕಾವ್ಯದ ಕಥಾನಾಯಕನ ಗುಣಾವಗುಣಗಳನ್ನು ಹೋಲುವಂತವರು. ಉದಾ: ಮಲೆಮಾದೇಶ್ವರನನ್ನು ಪರಶಿವನಿಗೆ, ಮಂಟೇಸ್ವಾಮಿಯನ್ನು ಅಲ್ಲಮ ಪ್ರಭುವಿಗೂ, ಜುಂಜಪ್ಪನನ್ನು ಶ್ರೀಕೃಷ್ಣನಿಗೂ, ಮೈಲಾರನನ್ನು ವೀರಭದ್ರನಿಗೂ ಹೋಲಿಸುವರು. ಹೀಗೆ ಶಿಷ್ಟಕಾವ್ಯದಲ್ಲಿ ಬರುವ ಪುರಾಣ ಪ್ರಸಿದ್ಧ ಸಿದ್ಧಪುರುಷರನ್ನೇ ಇಲ್ಲಿಯೂ ಎಳೆತಂದೋ ಅಂತಹವರು ಇಲ್ಲಿಯೂ ಇದ್ದಾರೆಯೆಂದೋ ಸಾಧಿಸುವ ಪ್ರಯತ್ನವನ್ನು ನಾವಿಲ್ಲಿ ಕಾಣತ್ತೇವೆ. ಅಂದರೆ ಇಲ್ಲಿಯ ಕಥಾನಾಯಕರೆಲ್ಲರೂ ಕಾರಣೀಪುರುಷರಾಗಿದ್ದಾರೆ. ಅದು ಜಗತ್ತನ್ನು ಸೃಷ್ಟಿಸಬಲ್ಲದು. ಜೀವಸೃಷ್ಟಿಯನ್ನು ಮಾಡಬಲ್ಲರು. ದುಷ್ಟ ಶಿಕ್ಷಣ ಶಿಷ್ಟರಕ್ಷಣ ನಿರತರು ಎಂಬುದನ್ನು ಸಾಧಿಸುತ್ತಾ ಆರಾಧಿಸುವುದು. ಜನಪದ ಮಹಾಕಾವ್ಯಗಳು ಜನಾಂಗಿಕ ಮಹಾಕಾವ್ಯಗಳೂ ಆಗಿವೆ. ಅವು ತಮ್ಮ ತಮ್ಮ ಜನಾಂಗಕ್ಕೆ ಸಾಮಾಜಿಕ ಸ್ಥಾನಮಾನವನ್ನು ಒದಗಿಸಿಕೊಡುವ ಅನನ್ಯತೆಯನ್ನು ತೋರ್ಪಡಿಸಿವೆ.

ಜನಪದ ಮಹಾಕಾವ್ಯವು ಪ್ರತಿಯೊಂದು ಜನಾಂಗದ ಪ್ರಾಚೀನ ಪರಂಪರೆಯ ಪ್ರತಿನಿಧಿಯಾಗಿದೆ. ಕಥನಗೀತೆಗಳು, ದೀರ್ಘವಾದ ಖಂಡಕಾವ್ಯಗಳು ಜನಾಂಗದ ವೀರ ಪರಂಪರೆಯನ್ನು ಮುನ್ನಡೆಸುವ ವಾಹಿನಿಯಾಗಿವೆ. ಜನಪದ ಕಾವ್ಯದ ಉತ್ತುಂಗವಾದ ಶಿಖರವೇ ಅದರ ಮಹಾಕಾವ್ಯ. "ಅನೇಕಪಾತ್ರಗಳು ಮತ್ತು ಘಟನೆಗಳಿಂದ ಕೂಡಿದ ದೀರ್ಘವಾದ ಕಥೆಯುಳ್ಳ ವಿಸ್ತಾರವಾದ ಹರವುಳ್ಳ ಮಹಾಕಾವ್ಯ ಒಂದು ದೇಶದ ಒಂದು ಸಾಂಸ್ಕೃತಿಕ ವರ್ಗದ ಆಕಾಂಕ್ಷೆಗಳನ್ನು ಅಭಿವ್ಯಕ್ತಿಸುವ ಸಾಧನವಾಗುತ್ತದೆ.

ಜನಪದ ಮಹಾಕಾವ್ಯವನ್ನು ನಾಟಕ ಮಹಾಕಾವ್ಯವೆಂದೂ ಕರೆಯಲಾಗುತ್ತದೆ. ಮಹಾಕಾವ್ಯಗಳಲ್ಲಿ ವಾಚಿಕ ಮಹಾಕಾವ್ಯವೇ ಶುದ್ಧವಾದ, ಸಹಜ ನೇರವಾದ, ನಿರರ್ಗಳವಾದ, ನಾಗರಿಕತೆಯಿಂಥ ಕಲುಷಿತವಾಗದ ಕವಿವಾಣಿ ಎಂದೂ, ಅದರ ಸರಳತೆ ಸತ್ತ ಹಾಗೂ ಅಕೃತಕತೆಯಿಂದ ಮತ್ತು ಅದರ ನಿರಾಂತಕವಾದ ನಿರೂಪಣೆಯ ಬೀಸುಗಳಿಂದ ಉಜ್ವಲವಾದ ಖಚಿತತೆ ಮತ್ತು ಪರಿಣಾಮ ತೀವ್ರತೆಗಳಿಂದ ಗೆದ್ದುನಿಲ್ಲುತ್ತದೆ.

ಕನ್ನಡದ ಜನಪದ ಮಹಾಕಾವ್ಯಗಳು ಕನ್ನಡ ಸಂಸ್ಕೃತಿಯ ಅಮೂಲ್ಯವಾದ ಭಾಗವಾಗಿದೆ. ಅದು ಕರ್ನಾಟಕ ಬುಡಕಟ್ಟು ಜನಾಂಗದ ಆತ್ಮದ ಧ್ವನಿಯೂ ಆಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನಪದ ಮಹಾಕಾವ್ಯ ಒಂದು ಪರಂಪರಾಗತ ಅವಶೇಷವಾದರೆ ಕರ್ನಾಟಕದಲ್ಲಿ ಜನಪದ ಮಹಾಕಾವ್ಯಗಳು ಜೀವಂತ ಜನಪದ ವಾಹಿನಿಯಾಗಿದೆ. ಕನ್ನಡದ ಜನಸಮುದಾಯದ ಆಶೆ ಆಶೋತ್ತರಗಳ, ಜನಾಂಗಿಕ ಅನನ್ಯತೆಯ ಪ್ರತೀಕವಾಗಿ, ಕಥನ ವಕ್ತೃಗಳ ಮತ್ತು ಪ್ರದರ್ಶನಗಳ ಮೂಲಕ ಜನ ಮನಸ್ಸನ್ನು ಕಟ್ಟುವ ಕಾರ್ಯದಲ್ಲಿ, ಕನ್ನಡ ಸಂಸ್ಕೃತಿಯನ್ನು ಉಳಿಸುವ ಕಾರ್ಯದಲ್ಲಿ ಕನ್ನಡ ಜನಪದ ಮಹಾಕಾವ್ಯಗಳು ಮಹತ್ವದ ಪಾತ್ರವಹಿಸಿವೆ.

**ಗ್ರಂಥ ಋಣ :**

1. ಜನಪದ ಬಸವ ಪುರಾಣ : ಸಂ.ಪಿಕೆ, ರಾಜಶೇಖರ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು

2. ಜನಪದ ಹಾಲುಮತ ಮಹಾಕಾವ್ಯ, ಸಂ.ಡಾ.ವೀರಣ್ಣದಂಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು–2000

3. ಜುಂಜಪ್ಪ ಸಂಪಾದಕರು ಚೆಲುವರಾಜು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ1992.

4. ಮಂಟೇಸ್ವಾಮಿ ಸಂ. ಪ್ರೊ.ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 1997

5. ಕರ್ನಾಟಕ ಜನಪದ ಮಹಾಕಾವ್ಯಗಳು : ಸಂ.ತೀ.ನಂ.ಶಂಕರ ನಾರಾಯಣ, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಡಾಡೆಮಿ 1998

***

# 53.ಜನಪದ ಕಥೆಗಳಲ್ಲಿ ಪ್ರತಿನಿಧೀಕರಣಗೊಂಡ ಸಾಂಸ್ಕೃತಿಕ ಮೌಲ್ಯಗಳು*

**ಲೋಹಿತ್.ಪಿ**

ಜನಪದ ಕತೆ ತಲೆಮಾರಿನಿಂದ ಮೌಖಿಕ ಪರಂಪರೆಯಲ್ಲಿ, ಜನಸಾಮಾನ್ಯರ ನಡುವೆ ಹರಿದು ಬಂದುದು. ದೇಶೀಯ ಜನ ಬದುಕಿನ ರೀತಿ ನೀತಿ ರೂಢಿ ನಂಬಿಕೆ ನಡುವಳಿಕೆ ಮುಂತಾದ ಬದುಕಿನ ಸಾಧ್ಯತೆಗಳು ಕತೆಯ ಜಗತ್ತಿನಲ್ಲಿ ತುಂಬಿಕೊಂಡಿವೆ. ಹೀಗಾಗಿ ಜನಪದ ಕತೆ ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುವ ಒಂದು ಮಹತ್ವದ ಆಕರವಾಗಿದೆ. ಸಂಸ್ಕೃತಿ ಎಂದರೆ ಯಾವುದೇ ಸಮುದಾಯವೊಂದರ ವಿಶಿಷ್ಟ ಜೀವನ ರೀತಿ ಎನ್ನುವುದಾದರೆ ಜಾನಪದ ಅಂತಹ ಮಾನವ ಸಂಸ್ಕೃತಿಯ ಸಮಗ್ರ ತಿಳಿವಳಿಕೆಯನ್ನು ಒದಗಿಸುವ ಒಂದು ಅಂಶವಾಗುತ್ತದೆ. ಇಲ್ಲಿ ಸಂಸ್ಕೃತಿ ಎನ್ನುವುದು ಒಂದು ವಿಶಾಲ ಪರಿಭಾವನೆ. ಇದರಲ್ಲಿ ಕುಟುಂಬ, ಕುಲ, ಬುಡಕಟ್ಟು, ಕುಲದೇವತಾರಾಧನೆ, ಪುರಾಣ, ಕತೆ, ಗಾದೆ, ವಿಧಿ ನಿಷೇಧ, ಅಲಂಕರಣ, ವ್ಯಾಪಾರ ಇತ್ಯಾದಿ ವಿಷಯಗಳು ಸೇರುತ್ತವೆ. ಸಂಸ್ಕೃತಿಯನ್ನು ಟೈಲರ್ ಹೀಗೆ ವಿವರಿಸುತ್ತಾನೆ. "ಸಂಸ್ಕೃತಿ ಅಥವಾ ನಾಗರಿಕತೆ ಎನ್ನುವುದು ಜ್ಞಾನ, ನಂಬಿಕೆ, ಕಲೆ, ನೀತಿ, ಕಾನೂನು ಪದ್ಧತಿ ಮತ್ತು ಮಾನವ ಸಮಾಜದ ಸದಸ್ಯನಾಗಿ ಗಳಿಸಿಕೊಂಡ ಇತರ ಎಲ್ಲ ಸಾಧ್ಯತೆ ಮತ್ತು ನಡವಳಿಕೆಗಳ ಸಂಕೀರ್ಣ ಮೊತ್ತ.."

ಈ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯ ಸಂಸ್ಕೃತಿಯ ಒಂದು ಅಂಗವಾಗಿದ್ದು ಇದು ಕೇವಲ ಸಾಹಿತ್ಯವಾಗಿ ಮಹತ್ವದ್ದಾಗದೆ ಅದನ್ನು ಮೀರಿದ ಸಾಂಸ್ಕೃತಿಕ ಮಹತ್ವ ಉಳ್ಳದ್ದು. ಇದು ವ್ಯವಸ್ಥೆಯ ಮೌಲ್ಯವನ್ನು ಹೇಳುತ್ತದೆ, ಅನಿಸಿಕೆಗಳನ್ನು ಅಭಿವ್ಯಕ್ತಿಸುತ್ತದೆ. ಅಲ್ಲಿನ ಬದುಕನ್ನು ಪ್ರತಿಬಿಂಬಿಸುತ್ತದೆ. ಈ ನೆಲೆಯಲ್ಲಿ ಜನಪದ ಕತೆ ಇತರ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಉಪಯುಕ್ತವಾಗಿದೆ. ಸಂಸ್ಕೃತಿಯ ಅನೇಕ ವಿವರಗಳನ್ನು ಒಳಗೊಂಡಿರುವ ಕತೆಯ ಇಂತಹ ಅಧ್ಯಯನ ಮಾನವನ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯುವಲ್ಲಿ ಅತ್ಯಂತ ಸಹಕಾರಿಯಾಗಬಲ್ಲದು. ಲಿಂಡಾ ಡೇಗ್ ಅವರು ಹೇಳುವಂತೆ "ಕಟ್ಟು ಕತೆಗಳು ಮಾನವನ ಚರಿತ್ರೆಗೆ ಸರಿಯಾದ ದಾಖಲೆ".

ಜನಪದ ಕಥಾ ಲೋಕದಲ್ಲಿ ವ್ಯಕ್ತವಾಗುವ ಸಂಸ್ಕೃತಿಯನ್ನು ಕಾಲದ ದೃಷ್ಟಿಯಿಂದ ಮೂರು ಸ್ತರಗಳಾಗಿ ವಿಂಗಡಿಸಬಹುದು. ಪ್ರಾಚೀನ, ಮಧ್ಯಕಾಲೀನ, ಸಮಕಾಲೀನ ಎಂದು.

**ಪ್ರಾಚೀನ ಸಂಸ್ಕೃತಿ:**

ಪ್ರಾಚೀನ ಸಂಸ್ಕೃತಿಯ ಅನೇಕ ವಿಷಯಗಳು ಇಂದು ಕತೆಗಳಲ್ಲಿ ಮಾತ್ರ ಕಾಣಬಹುದಾದಂತಹವುಗಳಾಗಿವೆ. ಕತೆಗಳಲ್ಲಿ ಪ್ರಾಚೀನ ಸಂಸ್ಕೃತಿಯ ವಿಚಾರಗಳೂ, ಧ್ಯೇಯಗಳು, ಮೌಲ್ಯಗಳು ಮುಂತಾದ ಅನೇಕ ವಿಷಯಗಳು ಉಳಿದುಕೊಂಡಿದೆ. ಆದ್ದರಿಂದ ಮಾನವ ಸಂಸ್ಕೃತಿಯ ಪುನರ್ರಚನೆಯಲ್ಲಿ ಮಾನವಶಾಸ್ತ್ರಜ್ಞರು ಜನಪದ ಕತೆಗಳನ್ನು ಮುಖ್ಯ ಆಕರವೆಂದೆ ಬಗೆಯುತ್ತಾರೆ. ಈ ಅಧ್ಯಯನ ಕತೆಗಳಲ್ಲಿ ಇಂದು ನಮಗೆ ಅಸಂಗತವಾಗಿ ಕಾಣುವ ಎಷ್ಟೋ ಅಂಶಗಳನ್ನು ಅರ್ಥೈಸುತ್ತದೆ.

ಜನಪದ ಕತೆಗಳಲ್ಲಿ ಪ್ರಾಚೀನ ಸಂಸ್ಕೃತಿಯ ಕುರುಹುಗಳಾಗಿ ಕಾಣಿಸುವುದು. ಆತ್ಮದ ಬಗೆಗಿನ ಪರಿಭಾವನೆಗಳು ಹಾಗೂ ಮಾಟದ ನಾನಾ ಆಚರಣೆಗಳು. ಕತೆಗಳಲ್ಲಿ ಕಂಡುಬರುವ ಅತಿಮಾನುಷ ಜೀವಿಗಳು, ರೂಪ ಪರಿವರ್ತನೆ, ಜನ್ಮಾಂತರ, ಪುನರ್ಜನ್ಮ ಪರಕಾಯ ಪ್ರವೇಶ, ಸತ್ತವರಿಗೆ ಜೀವದಾನ, ವಿಚಿತ್ರ ರೀತಿಯ ಗರ್ಭಧಾರಣೆ ಮುಂತಾದ ಅದ್ಭುತ ಅಂಶಗಳ ಹಿಂದೆ ಕೆಲಸ ಹೂಡುವ ಪರಿಭಾವನೆ ಆತ್ಮಕ್ಕೆ ಸಂಬಂಧಿಸಿದ್ದು. ಅತಿಮಾನುಷ ಜೀವಿಗಳಿಗೆಲ್ಲಾ ಅತಿಮಾನುಷ ಶಕ್ತಿಗಳಿವೆ. ಇವರ ಆತ್ಮಗಳ ತಮ್ಮ ಉದ್ದೇಶ ಸಾಧನೆಗೆ ಅನುಕೂಲವಾಗಿರುವ ಯಾವುದೇ ರೂಪ ತಾಳಿ ಅಥವಾ ಯಾವುದೇ ದೇಹ ಪ್ರವೇಶಿಸಿ ತಮ್ಮ ಕೆಲಸ ಸಾಧಿಸಿಕೊಳ್ಳಬಲ್ಲವು. ರೂಪ ಪರಿವರ್ತನೆ ಈ ಜೀವಿಗಳ ಮುಖ್ಯ ಗುಣ. ರಾಕ್ಷಸನೊಬ್ಬ ಸುಂದರವಾದ ಹೆಣ್ಣಾಗಬಹುದು, ಹೂವಾಗಬಹುದು, ಪ್ರಾಣಿಯಾಗಬಹುದು. ತನ್ನ ಉದ್ದೇಶಕ್ಕೆ ವಿರೋಧಿಯಾಗಿ ಬಂದ ವ್ಯಕ್ತಿಯ ರೂಪವನ್ನೂ ಪರಿವರ್ತಿಸಿ ಅಡ್ಡಿ ಆತಂಕವನ್ನು ನಿವಾರಿಸಿಕೊಳ್ಳುವುದೂ ಇದೆ. ಮಾನವರನ್ನು ಪ್ರಾಣಿಯಾಗಿಯೋ, ಕಲ್ಲಾಗಿಯೋ ಪರಿವರ್ತಿಸುವುದನ್ನು ಕಾಣುತ್ತೇವೆ. ಇಂತಹ ರೂಪ ಪರಿವರ್ತನೆಯಲ್ಲಿ ಆತ್ಮ ತಾತ್ಕಾಲಿಕವಾಗಿ ಬೇರೆ ದೇಹ ಹೋಂದುತ್ತದೆ. ಜನ್ಮಾಂತರದಲ್ಲಿರುವ ರೂಪಾಂತರಹ ಮತ್ತೊಂದು ರೀತಿಯದು. ಇಲ್ಲಿ ಸಾವಿನ ನಂತರ ಆತ್ಮ ಧರಿಸುವ ದೇಹ ವ್ಯಕ್ತಿಯ ಹಿಂದಿನ ಜನ್ಮದ ಕರ್ಮದಿಂದ ನಿರ್ಧಾರವಾತ್ತದೆ.

ಆದಿಮಾನವನ ಜೀವನದಲ್ಲಿ ಆತ್ಮದಷ್ಟೇ ವ್ಯಾಪಕವಾದುದು ಮಾಟ. ಬದುಕಿನ ಸುಖಸಂಪತ್ತು, ಕಷ್ಟ, ರೋಗರುಜನ, ಸಾವು ನೋವು, ಮದುವೆ, ಜನನ, ಫಲವಂತಿಕೆಗೆ ಹೀಗೆ ಎಲ್ಲ ಸಂಗತಿಯೊಂದಿಗೂ ಮಾಟದ ಸಂಬಂಧವನ್ನು ಕಲ್ಪಿಸಿದ್ದ, ಮಾಟದಿಂದ ಪ್ರಕೃತಿ ನಿಯಮವನ್ನು ಮುರಿಯುವ ಸಾಧ್ಯತೆಯನ್ನು ನಂಬಿದ್ದ. ಹೀಗಾಗಿ ಕತೆಗಳಲ್ಲಿ ಅತಿಮಾನುಷವೆನಿಸುವ ಘಟನೆಗಳು ಇರುವೆಡೆ ಮಾಟದ ಪ್ರಭಾವ ಎಂದೇ ಬಗೆದ, ಅತಿಮಾನುಷ ಜೀವಿಗಳಲ್ಲಿ ಪವಾಡದ ಶಕ್ತಿ ಇದೆ ಎಂದು ಭಾವಿಸಿದ ಮಾನವ ಅದನ್ನು ಮಾಟದ ಮೂಲಕ ಸಾಧಿಸುತ್ತಾರೆ ಎಂದು ತಿಳಿದ. ಜನಪದ ಕತೆಗಳಲ್ಲಿ ಯಾವುದೇ ಅಸಾಮಾನ್ಯ ಕಾರ್ಯ ಸಾಧಿಸಲು ಮಾನವರು ಇಂತಹ. ಮಾಂತ್ರಿಕ, ಮಾಟಗಾತಿಯರ ಸಹಾಯ ಪಡೆಯುವುದನ್ನು ಗಮನಿಸಬಹುದು. ದುಷ್ಟ ಜೀವಿಗಳನ್ನು ನಿವಾರಿಸಿಕೊಳ್ಳಲು ಕತೆಗಳಲ್ಲಿ ಮಾಟ ಪ್ರಯೋಗವಾಗುವುದು ಸಾಮಾನ್ಯ. ಕತೆಗಳಲ್ಲಿ ಸಾದೃಶ್ಯ ಹಾಗೂ ಸೌಮ್ಯ ಮಾಟ ವಿಧಾನ ಎರಡೂ ಕಾಣಿಸುತ್ತದೆ. ಉದಾಹರಣೆಗಾಗಿ ರಾಕ್ಷಸನ ಆತ್ಮ ಪಂಜರದ ಗಿಳಿಯಲ್ಲಿರುವುದು. ಆ ಗಿಳಿಯ ಕಾಲು ಮುರಿದಾಗ ರಾಕ್ಷಸನ ಕಾಲು ಮುರಿಯುವುದು ಗಿಳಿಯ ರೆಕ್ಕೆ ಮುರಿದಾಗ ರಾಕ್ಷಸನ ಕೈ ಮುರಿಯುವುದು, ಗಿಳಿಯನ್ನು ಕೊಂದರೆ ರಾಕ್ಷಸ ಸಾಯುವುದು ಹಾಗೆನೇ ವ್ಯಕ್ತಿ ಅಪಾಯಕ್ಕೀಡಾದಾಗ ಆತನ ಜೀವ ಸೂಚಿಯಾದ ಗಿಡ ಅಥವಾ ಹೂ ಬಾಡುವುದು, ಹರಳು ಕಪ್ಪಾಗುವುದು, ನೀರು ಕೆಂಪಾಗುವುದು ಇತ್ಯಾದಿಗಳನ್ನು ನೋಡಬಹುದು. ಹೆಣ್ಣಿನ ಗರ್ಭಧಾರಣೆ ಮಾಂತ್ರಿಕ ಅಥವಾ ಮಾಟ ಶಕ್ತಿಯ ವ್ಯಾಪಾರವೆಂದೇ ಕತೆಯಲ್ಲಿ ಭಾವಿಸಲಾಗಿದೆ. ಬಂಜೆತನ ಹಾಗೂ ಫಲವಂತಿಕೆ ಎರಡೂ ಸಾದೃಶ್ಯ ಮಾಟ ಫಲವೆಂದೇ ತಿಳಿಯಲಾಗಿದೆ. ಮಾಂತ್ರಿಕ ಫಲ ಸೇವಿಸಿ ಬಸುರಿಯಾಗುವುದು, ನೀರಿನಲ್ಲಿ ತನ್ನ ಮರಿಗಳೊಂದಿಗೆ ಆಡುತ್ತಿರುವ ಏಡಿಯನ್ನು ನೋಡಿ ತನಗೂ ಅಂತಹ ಮಕ್ಕಳಿದ್ದರೆ ಎಷ್ಟು ಚೆನ್ನ ಎಂದು ಯೋಚಿಸುತ್ತ ಆ ನೀರನ್ನು ಸೇವಿಸಿದಾಗ ಏಡಿ ಮಕ್ಕಳನ್ನ ಹೆರುವುದು, ಅಳಿಲು ತಿಂದೆಸೆದ ಹಣ್ಣನ್ನು ತಿಂದಾಕೆ ಅಳಿಲೆಗೆ ಜನ್ಮ ಕೊಡುವುದು ಇಲ್ಲೆಲ್ಲ ಮಾಟದ ನಂಬಿಕೆ ಸ್ಪಷ್ಟವಾಗುತ್ತದೆ.

ಮಾಟದ ಇನ್ನೊಂದು ಮುಖ್ಯಭಾಗ ನಿಷಿದ್ಧ, ಒಂದು ವಿಷಯವನ್ನು ಹೇಳುವುದಕ್ಕಾಗಲೀ, ಮಾಡುವುದಕ್ಕಾಗಲೀ ಹಾರೆದ ತಡೆ, ಒಂದು ವಸ್ತು, ವ್ಯಕ್ತಿಗಳ ಮೇಲೆ ಹಾರೆದ ಪ್ರತಿಬಂಧಕವೂ ನಿಷಿದ್ದ ಎನಿಸುತ್ತದೆ. ಅನೇಕ ಕತೆಗಳಲ್ಲಿ ನಿಷಿದ್ಧ ಇಡೀ ಕತೆಯ ಕೇಂದ್ರವಾಗಿರುತ್ತದೆ. ಆದರೆ ಬಹುತೇಕ ಕತೆಗಳಲ್ಲಿ ಈ ನಿಷಿದ್ಧವನ್ನು ಮೀರಿದ ವರ್ತನೆ ಹಾಗೂ ಅದರಿಂದ ಒದಗುವ ದುಷ್ಪರಿಣಾಮ, ದುರಂತವನ್ನು ಹೇಳುತ್ತವೆ. ಉದಾಹರಣೆಗೆ ನಾಯಕನಿಗೆ ನಿಷಿದ್ದ ಒಡ್ಡಲಾಗುತ್ತದೆ. ಆದರೆ ನಾಯಕ ಅದನ್ನು ಉಲ್ಲಂಘಿಸುತ್ತಾನೆ. ಸುಟ್ಟೂ ಬೂದಿಯಾಗುತ್ತಾನೆ ಅಥವಾ ಕಲ್ಲಾಗುತ್ತಾನೆ ಅಥವಾ ರಾಕ್ಷಸನ ವಶವಾಗುತ್ತಾನೆ. ಹೀಗೆ ಆದಿಮಾನವ ಕೆಲವೊಂದು ನಂಬಿಕೆಗಳ ಮೇಲೆ ಬದುಕನ್ನು ಕಟ್ಟಿಕೊಂಡ. ಇಂತಹ ನಂಬಿಕೊರಳಲ್ಲಿ ಶಕುನ ಕೂಡಾ ಒಂದು ಕನಸು, ಪ್ರಾಣಿ, ಪಕ್ಷಿಗಳು, ಸೀನುವುದು, ಇತ್ಯಾದಿಗಳು ಶಕುನದ ಸಂಕೇತವಾಗಿ ಜನಪದ ಕತೆಗಳಲ್ಲಿ ಕಾಣಿಸುತ್ತದೆ. ಶಕುನಗಳಲ್ಲಿನ ನಂಬಿಕೆ ಮಾನವ ಸಮಾನವಾದರೂ ಅದರ ವಿವರ ಮಾತ್ರ ಆಯಾ ಸಂಸ್ಕೃತಿಯಿಂದಲೆ ಕೂಡಿಕೊಳ್ಳುತ್ತದೆ. ಇದು ಆಯಾ ಸಂಸ್ಕೃತಿಯ ಮೌಲ್ಯಗಳು, ನೀತಿ ನಿಯಮಗಳು, ಮನೋಧರ್ಮಗಳು, ಭೌಗೋಳಿಕ ವಿವರಗಳಲ್ಲಿ ಅವಲಂಬಿಸುರುತ್ತದೆ.

ಕತೆಗಳಲ್ಲಿ ಕಾಣಿಸುವ ಇನ್ನೊಂದು ಅಂಶ ವರ ಹಾಗೂ ಶಾಪದ್ದು. ಇದು ಮನಸ್ಸಿನಲ್ಲಿ ಏನಾದರೂ ಹಾರೈಸಿದರೆ ಅದು ಮಾತಿನಲ್ಲಿ ಪ್ರಕಟವಾದಂತೆ ವಾಸ್ತವದಲ್ಲಿ ನಿಜವಾಗುತ್ತದೆ ಎಂಬ ನಿಲುವನ್ನು ಆಧರಿಸಿದ್ದು. ಯಾವುದೇ ವ್ಯಕ್ತಿಯ ಶಕ್ತಿ ಸಾಮರ್ಥ್ಯವನ್ನು ಕಠಿಣ ಪರೀಕ್ಷೆಗೊಡ್ಡುವ ಮೂಲಕ ಒರೆಗೆ ಹಚ್ಚಲಾಗುವುದನ್ನು ಅನೇಕ ಕತೆಗಳು ವಿವರಿಸುತ್ತವೆ. ರಾಕ್ಷಸನ ಕೈಗೆ ಸಿಕ್ಕಿಹಾಕಿಕೊಂಡು ನಾಯಕ ತನ್ನ ಸತ್ಯವನ್ನೇ ಪಣವಾಗಿ ಒಡ್ಡಿ ಕೆಲಸ ಸಾಧಿಸುವುದು, ಕಷ್ಟದಲ್ಲಿರುವ ನಾಯಕಿಗೆ ಒಂದು ನದಿ ಅಡ್ಡವಾಗುವುದು, ನಾನು ಪತಿವ್ರತೆಯಾದರೆ ನೀರು ಎರಡು ಭಾಗವಾಗಿ ಮಧ್ಯೆ ದಾರಿಯಾಗಲಿ ಎಂದು ಪಾತಿವ್ರತ್ಯದ ಬಲದಿಂದ ಸವಾಲನ್ನು ದಾಟುವುದು. ಇಲ್ಲೆಲ್ಲ ನಾಯಕ ಅಥವಾ ನಾಯಕಿ ನುಡಿಯುವ ಒಂದು ವಾಕ್ಯ ಒಂದು ನಿಬಂಧನಾತ್ಮಕ ಶಾಪಕೂಪದ್ದಾಗಿದೆ. ಇನ್ನು ಕೆಲವೊಮ್ಮೆ ವ್ಯಕ್ತಿ ತನ್ನ ಸತ್ಯ ಮತ್ತು ಸತ್ಯ ಪರೀಕ್ಷೆಗಾಗಿ ತಾನೇ ತನ್ನನ್ನು ದಿವ್ಯಕ್ಕೆ ಒಡ್ಡಿಕೊಳ್ಳುವಂತಹದು. ನಾನು ಸತ್ಯವಂತವಲ್ಲದಿದ್ದರೆ ಈ ಹುತ್ತದಲ್ಲಿನ ಹಾವು ನನ್ನನ್ನು ಕಚ್ಚಲಿ, 'ನಾನು ಪತಿವ್ರತೆ ಅಲ್ಲದಿದ್ದರೆ ಈ ಬೆಂಕಿ ನನ್ನನ್ನು ಸುಡಲಿ' ಎಂಬಂತಹ ಸಂದರ್ಭಗಳು ಕತೆಗಳಲ್ಲಿ ಸಾಕಷ್ಟು ಬರುತ್ತವೆ.

ISBN – 978-93-5526-247-9 

ಪ್ರಾಚೀನ ಕಾಲದ ಕುಟುಂಬ ವ್ಯವಸ್ಥೆ, ವಿವಾಹದಂತಹ ಸಂಗತಿಗಳ ಬಗೆಗೂ ಜನಪದ ಕತೆಗಳು ಬೆಳಕು ಚೆಲ್ಲುತ್ತವೆ. ರಾಜಪುತ್ರಿಯನ್ನು ವರಿಸಲು ರಾಜವಂಶಸ್ಥನೆ ಆಗಬೇಕೆಂಬ ನಿಯಮವಿರಲಿಲ್ಲ. ಆತ ಯಾವುದೇ ವರ್ಗದ ವ್ಯಕ್ತಿಯಾಗಿರಲಿ ರಾಜ ಅಥವಾ ರಾಜಕುಮಾರಿ ಒಡ್ಡುವ ಸ್ಪರ್ಧೆಗಳನ್ನು ಗೆದ್ದು ಸಾಮರ್ಥ್ಯ ಮೆರೆದವನನ್ನು ಆಯುವ ಆಶಯ ಅನೇಕ ಕತೆಗಳಲ್ಲಿ ಬರುತ್ತದೆ. ಇಂತಹ ಸಾಹಸದಲ್ಲಿ ಗೆದ್ದವನಿಗೆ ಅರ್ಧ ರಾಜ್ಯವನ್ನು, ರಾಜಕುಮಾರಿಯನ್ನು ಕೊಡಲಾಗುತ್ತಿತ್ತು. ಆ ಕಾಲದಲ್ಲಿ ಪ್ರಚಲಿತವಿದ್ದ ಬಹುಪತ್ನಿತ್ವದ ಬಗೆಗೆ ಕತೆಗಳಲ್ಲಿ ನಿದರ್ಶನವಿದೆ. ಅಗಮ್ಯಗಮನ ವಿವಾಹ ನಿಷಿದ್ದವೆಂದು ಭಾವಿಸಲಾಗುತ್ತಿತ್ತು. ತಂದೆಯೇ ಮಗಳನ್ನು ಬಯಸಿದಾಗ ಆಕೆ ಕಾಡಿಗೆ ಓಡಿ ಹೋಗುವುದು ಅಣ್ಣನೇ ತಂಗಿಯನ್ನು ಬಯಸಿದಾಗ ತಂಗಿ ತಪ್ಪಿಸಿಕೊಳ್ಳುವ ಪ್ರಕ್ರಿಯೆ ಅನೇಕ ಕತೆಗಳಲ್ಲಿ ದಾಖಲಾಗಿದೆ.

**ಮಧ್ಯಕಾಲೀನ ಸಂಸ್ಕೃತಿ:**

ಯಾವುದೇ ಆಲೋಚನೆಗಳನ್ನು ಆಯಾ ಪ್ರದೇಶದ ಭೌಗೋಳಿಕ, ಸಾಮಾಜಿಕ, ಚಾರಿತ್ರಿಕ ಕಾರನಗಳಿಂದ ಬದಲಾವಣೆಗೆ ಒಳಗಾಗುತ್ತ ಆಯಾ ಪ್ರಭಾವಗಳಿಗೆ ತಕ್ಕನಾದ ರೂಪ ತಳೆಯುತ್ತದೆ. ಈ ಬದಲಾವಣೆಗಳು ಮೂಲರೂಪವನ್ನೆ ಬದಲಿಸುವಷ್ಟು ತೀವ್ರವಾಗಿರುವುದೂ ಇದೆ. ಆರ್ಯ ದ್ರಾವಿಡ ಸಂಸ್ಕೃತಿಯ ಅಂಶಗಳು ತಮ್ಮ ಸಂಸ್ಕೃತಿಗೆ ವಿಶಿಷ್ಟವಾದ ಅಂಶಗಳ ಜೊತೆಯಲ್ಲೆ ಪರಸ್ಪರ ಪ್ರಭಾವಕ್ಕೆ ಒಳಗಾಗಿ ಮಾರ್ಪಟು ಹೊಂದಿದವು.

ಜಾತಿ ಪದ್ಧತಿ ಆಧಾರಿತ ಸಮಾಜ ವ್ಯವಸ್ಥೆಯು ಅದರ ಕಟ್ಟುನಿಟ್ಟು ಪಾಲನೆಗಾಗಿ ಅನೇಕ ನಿಯಮ ಪದ್ಧತಿಗಳನ್ನು ರೂಪಿಸಿಕೊಂಡಿರುತ್ತದೆ. ವೃತ್ತಿಗನುಸಾರವಾಗಿ ಜಾತಿ ರೂಪುಗೊಂಡು ಕಾಲಕ್ರಮೇಣ ಅದು ಕುಲ ವೃತ್ತಿಯಾಗಿ ಮಾರ್ಪಾಟು ಹೊಂದಿತು. ಈ ವ್ಯವಸ್ಥೆ ಕತೆಗಳಲ್ಲಿ ಪ್ರತಿಬಿಂಬಿಸಿದೆ. ಇಲ್ಲಿ ರಾಜ್ಯ ಆಳುವವನು ಕ್ಷತ್ರಿಯ, ವ್ಯಾಪಾರ ಮಾಡುವವ ವೈಶ್ಯ ಹೀಗೆ ಕತೆಗಳಲ್ಲೂ ಇದೇ ವ್ಯವಸ್ಥೆಯನ್ನು ತಪ್ಪದೆ ಅನುಸರಿಸಲಾಗಿದೆ. ತಳವಾರ, ಜೋಯಿಸ, ಕ್ಷೌರಿಕ, ಅಗಸ, ಚಮ್ಮಾರ, ಕಮ್ಮಾರ, ಅಕ್ಕಸಾಲಿಗ ಮೊದಲಾದವರು ತನಗೆ ಮೀಸಲಾದ ಕಾಯಕ ವೃತ್ತಿ ಮಾಡಬೇಕಾಗಿತ್ತು.

ಬಾಲ್ಯ ವಿವಾಹ ಹಾಗೂ ಪ್ರೌಢ ವಿವಾಹ ಪದ್ಧತಿ ರೂಢಿಯಲ್ಲಿದ್ದುದರ ಬಗೆಗೆ ಕತೆಗಳಲ್ಲಿ ಮಾಹಿತಿ ಸಿಗುತ್ತದೆ. ಹಾಗಿದ್ದರೂ ಪ್ರೌಢ ವಿವಾಹವೇ ಹೆಚ್ಚು ಚಾಲ್ತಿಯಲ್ಲಿದ್ದ ಪದ್ಧತಿ. ತನ್ನನ್ನು ವಿವಾಹವಾಗುವ ವ್ಯಕ್ತಿಯನ್ನು ತಾನೇ ಸ್ಪರ್ಧೆ ಒಡ್ಡಿಯೊ, ಸ್ವಯಂವರದ ಮೂಲಕವೊ ಆಯ್ಕೆ ಮಾಡಿಕೊಳ್ಳುವ ಹಕ್ಕು ಹೆಣ್ಣಿಗಿತ್ತು. ಹಾಗೆಯೆ ತಾನು ಒಲಿದ ಗಂಡನ್ನು ವರಿಸುವ ಹೆಣ್ಣಿನ ಕತೆಗಳು ಸಾಕಷ್ಟಿವೆ. ಮದುವೆಗೆ ಮುಂಚೆಯೇ ಋತುವಾದ ಹುಡುಗಿಯನ್ನು ಕಾಡಿಗಟ್ಟುವ ಪದ್ಧತಿ ಬಾಲ್ಯ ವಿವಾಹದ ಪ್ರಾಚಾರ್ಯವನ್ನು ವಿವರಿಸುತ್ತದೆ.

ಕಥೆಗಳಲ್ಲಿ ಕಾಣುವ ಅನೇಕ ಶಿಕ್ಷಾ ಪದ್ಧತಿಗಳು ಮಧ್ಯಕಾಲೀನ ಸಮಾಜದಲ್ಲಿ ರೂಢಿಯಲ್ಲಿದ್ದವು ಎಂದು ಚಾರಿತ್ರಿಕ ದಾಖಲೆಗಳಿಂದ ತಿಳಿದುಬರುತ್ತದೆ. ಅಪರಾಧಿಗಳನ್ನು ಕಾಡಿಗಟ್ಟುವುದು, ಕೊಲ್ಲುವುದು, ಸುಣ್ಣದ ಗೂಡಿಗೆ ಹಾಕುವುದು, ಸಿಗಿದು ಊರ ಬಾಗಲಿಗೆ ತೋರಣ ಕಟ್ಟುವುದು, ಮೂರು ದಾರಿ ಕೂಡುವಲ್ಲಿ ರುಂಡ ಹಾರಿಸುವುದು, ತಲೆ ಬೋಳಿಸಿ ಕತ್ತೆ ಮೇಲೆ ಕೂರಿಸಿ ಮೆರವಣಿಗೆ ಮಾಡುವುದು, ಹೆಣ್ಣು ಅಪರಾಧಿಗಳನ್ನು ದೀಪದ ಮಲ್ಲಿಗಳನ್ನಾಗಿ ಮಾಡುವುದು ಮೊದಲಾದ ಶಿಕ್ಷ ಪದ್ಧತಿಗಳ ವಿವರಗಳು ಕತೆಗಳಲ್ಲಿ ಸಿಗುತ್ತದೆ. ಕರ್ಮಫಲ, ವಿಧಿ, ಹಣೆಬರಹ, ಪುನರ್ಜನ್ಮ, ಬಂಜೆತನ ಮೊದಲಾದ ಬಗೆಗಿನ ಕತೆಯ ವಿವರಗಳಲ್ಲಿ ಮತ್ತೆ ಮತ್ತೆ ಕಾಣಿಸುತ್ತದೆ.

**ಸಮಕಾಲೀನ:**

ಜನಪದ ಕತೆಗಳು ಬರಿಯ ಭೂತಕಾಲದ ಬದುಕಿನ ಪಳೆಯುಳಿಕೆ ಎನ್ನುವುದು ಸರಿಯಲ್ಲ. ಜನಪದ ಸಾಹಿತ್ಯ ಸೃಷ್ಟಿ ಎನ್ನುವುದು ಒಂದು ನಿರಂತರ ಪ್ರಕ್ರಿಯೆ. ಭೂತಕಾಲದ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಅದು, ವರ್ತಮಾನ ಬದುಕಿಗೂ ಅಷ್ಟೇ ಸ್ಪಂದಿಸುತ್ತದೆ. ಹೀಗಾಗಿ ಮಾನವಶಾಸ್ತ್ರಜ್ಞರು ಹೇಳುವ ಕತೆಗಳು ಪ್ರಾಚೀನ ಕಾಲದ ಉಳಿಕೆಗಳು ಎಂಬ ಮಾತು ಸರಿಯಲ್ಲ.

ಜನಪದ ಕತೆ ಪ್ರದರ್ಶನವೆಂಬ ಗ್ರಹಿಕೆಯಲ್ಲಿ ಕಥಾಪಠ್ಯವೊಂದು ನಿರ್ಮಾಣಗೊಳ್ಳುವ ಬಗೆ, ಆ ಸಂದರ್ಭ ಹಾಗೂ ಕತೆಗಾರರು ಮತ್ತು ಪ್ರೇಕ್ಷಕರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಕೌಟುಂಬಿಕ ಅಂಶಗಳೊಂದಿಗೆ ಸಂಬಂಧ ಹೊಂದಿರುತ್ತದೆ. ಈ ಎಲ್ಲವುಗಳಿಂದ ಪ್ರೇರಿತವಾಗಿ ಭಿನ್ನ ಕಥಾ ಪಠ್ಯಗಳು ರೂಪ ತಾಳುತ್ತವೆ. ಒಟ್ಟು

ಸಂದರ್ಭಕ್ಕೆ ಒಪ್ಪಿತವಾಗದ ಆಶಯಗಳು ಕಥಾ ಶರೀರದಿಂದ ಕಳಚಿ ಹೋಗುತ್ತವೆ. ಹೊಸ ಆಶಯಗಳು, ವಿವರಗಳು ಪಠ್ಯದೊಳಗೆ ಸೇರಿಕೊಳ್ಳುತ್ತವೆ. ಹೀಗಾಗಿ ಜನಪದ ಕತೆಗಳು ಸ್ಥಿರ ಅಥವಾ ಸ್ಥಗಿತ ಚಿತ್ರಗಳಾಗಿರದೆ ಚಲನಶೀಲತೆಯನ್ನು ಪಡೆದುಕೊಳ್ಳುತ್ತವೆ, ಪ್ರಸ್ತುತತೆಯನ್ನು ಸಾಧಿಸಿಕೊಳ್ಳುತ್ತವೆ.

ಒಂದು ಸಂಸ್ಕೃತಿಗೂ ಮತ್ತು ಕಥನ ಪ್ರಕಾರಕ್ಕೂ ಇರುವ ಸಂಬಂಧವನ್ನು ಅವಲೋಕಿಸಿದಾಗ ಕತೆಯಲ್ಲಿ ವಾಸ್ತವ ಬದುಕಿನ ವಿವರಗಳು ದಾಖಲಾಗಿರುವುದರ ಜೊತೆಗೆ ಅವನು ವಾಸ್ತವ ಬದುಕಿನಲ್ಲಿ ಪಡೆಯಲಾರದ, ಅನುಭವಿಸಲಾರದ ಅಂಶಗಳು ಕಲೆಯ ಮೂಲಕ ಕತೆಯಲ್ಲಿ ಪೂರೈಸಲಾಗುತ್ತದೆ. ಕತೆ ವಾಸ್ತವ ಬದುಕಿನ ಒತ್ತಡವನ್ನು, ಸಾಂಸ್ಕೃತಿಕ ಇಕ್ಕಟುಗಳನ್ನು ನೀಗಿಕೊಳ್ಳುವ ಒಂದು ಪರ್ಯಾಯ ಜಗತ್ತು. ಕತೆ ಸಮಕಾಲೀನ ಬದುಕಿನೊಂದಿಗೆ ಎಷ್ಟರಮಟ್ಟಿಗೆ ಸಂಬಂಧ ಹೊಂದಿರುತ್ತದೆ ಎಂದರೆ ಕತೆಗಾರರು ಕ್ಯಾತೆಯ ಆಯ್ಕೆ, ಕತೆಯ ರಚನೆಗಳು ಆಯಾ ದಿನದ ಕತೆಗಾರರ ಬದುಕಿನ ಘಟನೆಗಳೊಂದಿಗೆ ಸಂಬಂಧವನ್ನು ಪಡೆದಿರುತ್ತದೆ. ಕತೆಗಾರರು ಬದುಕಿನ ಸಂದರ್ಭ ಮತ್ತು ಪರಿಸರ ಇಡಿಯಾ ಕಥಾ ಪಠ್ಯದ ಸ್ವರೂಪವನ್ನು ನಿಯಂತ್ರಿಸುತ್ತದೆ. ಉದಾಹರಣೆಗೆ ಕತೆಗಾರ್ತಿ ಅತ್ತೆಯಾಗಿದ್ದು ಅಂದು ಕೌಟುಂಬಿಕವಾಗಿ ನಡೆದಿದ್ದ ಅತ್ತೆ–ಸೊಸೆ ಜಗಳ ಅಂದಿನ ಕತೆಯ ಆಯ್ಕೆಯಲ್ಲಿ ಪ್ರಭಾವ ಬೀರುತ್ತದೆ. ಇದರಿಂದ ಅತ್ತೆ–ಸೊಸೆ ಕತೆ ಪ್ರಧಾನವಾಗಿ ಆಯ್ಕೆಗೊಳ್ಳುತ್ತದೆ ಮತ್ತು ಆ ಕತೆಯಲ್ಲಿ ಸೊಸೆ ಕೆಟ್ಟ ಪಾತ್ರವಾಗಿ ರೂಪಗೊಳ್ಳುತ್ತಾಳೆ ಹಾಗೂ ಕೆಟ್ಟ ಸೊಸೆಯ ಆಶಯಗಳು ವಿವರವಾಗಿ ದಾಖಲಾಗುತ್ತವೆ. ಸೊಸೆಗೆ ಕೇಡಾಗುತ್ತದೆ, ನೋವಿಗೆ ಒಳಗಾಗುತ್ತಾಳೆ. ಇದಕ್ಕೆ ಪ್ರತಿಯಾಗಿ ಅತ್ತೆ ಮುಗ್ಧಳಾಗಿ ಆಕಾರ ಪಡೆಯುತ್ತಾಳೆ ಮತ್ತು ಆಕೆಯ ಒಳ್ಳೆಯತನ ಸಾಕಷ್ಟು ದಾಖಲುಗೊಳ್ಳುತ್ತದೆ. ಅತ್ತೆಯ ಒಳ್ಳೆಯತನದ ಮುಂದೆ ಸೊಸೆಯ ನೀಚತನ ಸೋಲುತ್ತದೆ. ಕತೆಗಾರರು ಸೊಸೆಯಾದಲ್ಲಿ ಇದಕ್ಕೆ ತೀರಾ ವಿರುದ್ಧವಾದ ಇನ್ನೊಂದು ಮುಖದಲ್ಲಿ ಕತೆ ರೂಪುಗೊಳ್ಳುತ್ತದೆ. ಇದು ಗಂಡ, ಹೆಂಡತಿ, ಅತ್ತಿಗೆ ನಾದಿನಿ, ಮಲತಾಯಿ ಮಲಮಗಳು, ಅಣ್ಣ ತಂಗಿ ಹೀಗೆ ಯಾವುದು ಆಗಿದ್ದರೂ ಹೀಗೇ ಇರುತ್ತದೆ. ಅಂದರೆ ವಾಸ್ತವ ಬದುಕಿನ ಘಟನೆಗಳು, ಅನುಭವಗಳು, ಕತಾ ಚೌಕಟ್ಟಿನಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ಇನ್ನೊಂದು ರೀತಿಯಲ್ಲಿ ಜನಪದ ಕತೆ ಮಾನವನ ಸುಪ್ತ ಪ್ರಜ್ಞೆಯ ಭಾವನೆಗಳ ಸಾಂಕೇತಿಕ ಅಭಿವ್ಯಕ್ತಿ ಕೂಡಾ. ವಾಸ್ತವ ಬದುಕಿನಲ್ಲಿ ಸಾಧ್ಯವಾಗದ, ದಮನಕ್ಕೊಳಗಾದ ಭಾವನೆಗಳನ್ನು ಅಭಿವ್ಯಕ್ತಿಯನ್ನು ಸ್ಥಾಪಿಸಿಕೊಳ್ಳುವ ಪರ್ಯಾಯ ವ್ಯವಸ್ಥೆಯಾಗಿ ಕತೆ ಕೆಲಸ ಮಾಡುತ್ತದೆ. ದೈನಂದಿನ ಬದುಕಿನಲ್ಲಿ ತನಗಾದ ನೋವು ಅಸಹಾಯಕತೆಗೆ ವಾಸ್ತವದಲ್ಲಿ ಪ್ರತಿಕ್ರಿಯೆ ತೋರಲಾಗದ ಮೌನದ ಒತ್ತಡ ಪ್ರತಿಭಟನೆಯ ಕಾರ್ಯತಂತ್ರವಾಗಿ ಕತೆಯನ್ನು ಅರ್ಥೈಸಬೇಕಾಗಿದೆ.

ಜನಪದ ಕತೆಗಳು ಆಯಾ ಸಂಸ್ಕೃತಿಯ ಸಂದರ್ಭದ ಆಲೋಚನೆಗಳು, ಭಾವನೆಗಳಿಂದ ರೂಪುಗೊಳ್ಳುತ್ತವೆ. ಆದ್ದರಿಂದಲೆ ಕತೆಗಳು ಸಾಮಾಜಿಕ ಅನ್ಯಾಯಗಳನ್ನು, ಅಧಿಕಾರಿಯ ವ್ಯವಸ್ಥೆಯನ್ನು ಪ್ರತಿರೋಧಿಸುವ, ಪ್ರತಿಭಟಿಸುವ ಒಳದಾರಿ ಎಂದು ತಿಳಿಯಬಹುದು. ಕತೆಗಳ ನಾಯಕ ಸಾಮಾನ್ಯವಾಗಿ ಕಿರಿಯವನಾಗಿರುವುದು, ಸಾಮಾನ್ಯ ಮನುಷ್ಯನಾಗಿರುವುದು, ಬಡವನಾಗಿರುವುದು ಅಥವಾ ಪೆದ್ದನಾಗಿರುವುದು. ಆತ ಬಲಿಷ್ಠನಾದ ರಾಜನನ್ನೋ, ರಾಕ್ಷಸನನ್ನೋ, ಪ್ರಾಣಿಯನ್ನೋ ಅಥವಾ ದೇವಕನ್ಯೆಯನ್ನೊ ಗೆದ್ದು ಮೇಲೇರುವುದು ಒಂದು ಹೋರಾಟದ ಮಾದರಿಯ ಸಾಧ್ಯತೆಯನ್ನು ತೆರೆಯುತ್ತದೆ. ಹಾಗೆ ಮಾಡುವ ಮೂಲಕ ವಾಸ್ತವದ ಸಮಕಾಲೀನ ಸಂದರ್ಭವನ್ನು ಪ್ರಶ್ನಿಸುತ್ತದೆ. ಪ್ರತಿಭಟಿಸುತ್ತದೆ. ಸಂಸ್ಕೃತಿಯ ಒಂದು ಅಂಗವೇ ಆದ ಜನಪದ ಕತೆ ಸಾಂಸ್ಕೃತಿಕ ಸಂಸ್ಥೆ, ಜೀವನ ಮೌಲ್ಯಗಳನ್ನು ಜನರಿಗೆ ಬೋಧಿಸುವುದರ ಜೊತೆಗೆ ಅವುಗಳೆಂದರೆ ನಿರ್ಮಿತವಾದ ಕಟ್ಟುಪಾಡುಗಳನ್ನು ಮೀರುವ ಮಾಧ್ಯಮವನ್ನು ಒದಗಿಸಿಕೊಡುತ್ತಿರುವುದು ಅಪೂರ್ವವಾಗಿದೆ.

ಜನಪದ ಕತೆಗಳು "ಒಂದಾನೊಂದು ಕಾಲದ್ದಾಗೆ ಒಂದಾಗೊಂದು ಊರು ಅಲ್ಲೊಬ್ಬ ರಾಜರಾಣಿಯರೊ, ಗಂಡ ಹೆಂಡತಿಯರು ವಾಸವಾಗಿದ್ದರು" ಎಂದು ಆರಂಭಗೊಂಡರೂ ಕಥಾ ಪ್ರಪಂಚ ಬಿಚ್ಚಿಕೊಳ್ಳೋದು ಸಾಮಾನ್ಯ ನಮ್ಮ ಸುತ್ತಿನ ಆವರಣದಲ್ಲಿ, ಪಾತ್ರಗಳು ನಮ್ಮ ನಡುವಿನ ಸಾಮಾನ್ಯ ವ್ಯಕ್ತಿಗಳಾಗಿ ಇರುತ್ತವೆ. ಇಲ್ಲಿ ನಡೆಯುವ ಎಲ್ಲ ಚಟುವಟಿಕೆಗಳು ನಮ್ಮ ದೈನಂದಿನ ಬದುಕಿನ ವ್ಯವಹಾಗರಳೇ ಆಗಿರುತ್ತವೆ. ನಮ್ಮ ಸಾಮಾಜಿಕ ವ್ಯವಸ್ಥೆ, ರೀತಿ ನೀತಿಯನ್ನು ತೆರೆದಿಡುತ್ತವೆ. ಹೀಗಾಗಿಯೇ ಅನೇಕ ಜನಪದ ಕತೆಗಳನ್ನು ಕೇಳುವಾಗ ಅದು ನಮ್ಮ ಊರಲ್ಲೇ ನಡೆದ ಕತೆಯಾಗಿ, ನಮ್ಮ ಆಚೇಚಿಗಿನ ಸಂದರ್ಭವಾಗಿ ಕಾಣಿಸುತ್ತವೆ. ಕತೆಯಲ್ಲಿ ಬರುವ ಅರಮನೆ ಇರಬಹುದು, ಆಹಾರ ಕ್ರಮವಿರಬಹುದು, ಅಥವಾ ಮದುವೆ ಇರಬಹುದು, ಅಥವಾ ಹಾಸ್ಯ ಕತೆಯ ವಸ್ತು ವಿವರ ಇರಬಹುದು ಎಲ್ಲ

ISBN – 978-93-5526-247-9

ವಿವರಗಳು ನಮ್ಮ ಸುತ್ತಿನ ಪ್ರಪಂಚದಲ್ಲಿ ನಡೆದಂತೆಯೇ ಇರುತ್ತದೆ. ಅಂದರೆ ಅಷ್ಟರಮಟ್ಟಿಗೆ ಕತೆ ವಾಸ್ತವ ಬದುಕಿನ ಪ್ರತಿಬಿಂಬವಾಗಿದೆ.

**ಪರಾಮರ್ಶನ ಗ್ರಂಥಗಳು**


- ಪ್ರೊ.ದೇ.ಜ.ಗೌ. : ಜನಪದ ಗೀತಾಂಜಲಿ : ಸಾಹಿತ್ಯ ಅಕಾಡೆಮಿ, ರವೀಂದ್ರ ಭವನ, 1990
- ಡಾ. ರಾಗೌ : ಜನಪದ ಸಾಹಿತ್ಯ ರೂಪಗಳು : ಸಂವಹನ, ಮೈಸೂರು, 3ನೇ ಮುದ್ರಣ, 1996.
- ಪ್ರೊ. ಎಚ್.ಜೆ. ಲಕ್ಕಪ್ಪಗೌಡ : ಜಾನಪದ ಕೈಪಿಡಿ : ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ.
- ಗಿರಡ್ಡಿ ಗೋವಿಂದರಾಜು : ಜನಪದ ಕಾವ್ಯ : ಕರ್ನಾಟಕ ವಿಶ್ವವಿದ್ಯಾನಿಲಯ್, ಧಾರವಾಡ, 1994.
- ಡಾ. ಅಂಬಳಿಕೆ ಹಿರಿಯಣ್ಣ – ಜನಪದ ಸಿದ್ಧಾಂತಗಳು ಮತ್ತು ವಿಧಾನಗಳು
- ರಾಗೌ – ಜಾನಪದ ಸಂಶೋಧನೆ
- ಡಾ. ಹಾ.ಮಾ. ನಾಯಕ – ಜಾನಪದ ಸ್ವರೂಪ
- ಪ್ರೊ.ಹಿ.ಚಿ. ಬೋರಲಿಂಗಯ್ಯ – ಕರ್ನಾಟಕ ಜನಪದ ಕಲೆಗಳ ಕೋಶ


***

# 54.ಜನಪದ ಒಗಟುಗಳ ವೈಶಿಷ್ಠತೆಯ ಜೊತೆಗಿನ ಒಳ ನೋಟ*

ಶಿವಾನಂದ

ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ಹೆಚ್ಚಿನ ನೆಲ ಮೂಲ ಸಂಸ್ಕೃತಿಯ ಪರಂಪರೆ ಇದೆ. ಆ ಪರಂಪರೆ ಮುಖ್ಯವಾಗಿ ಸಮಾಜದ ಕೆಳವರ್ಗದಿಂದ ಕವಲೊಡೆದು ಇಂದು ವಿಶ್ವಮಟ್ಟದಲ್ಲಿ ಪಸರಿಸಿ ಜನಪದ ಸಾಹಿತ್ಯದ ಪರಿಮಳದ ಸುಗಂಧ ಪ್ರಪಂಚಕ್ಕೆಲ್ಲ ಹರಡುತ್ತಾ ವಿಸ್ತರಿಸುತ್ತಾ ಸಾಗುತ್ತಿರುವುದಕ್ಕೆ ಪ್ರಮುಕವಾದ ಕಾರಣವೇ ಹಳ್ಳಿ ಸೊಗಡಿನ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಊಟ, ಹುಡುಗೆ-ತೊಡುಗೆ, ಸಂಬಂಧ, ಆತ್ಮೀಯತೆ, ಅನ್ಯನತೆ, ಪರಸ್ಪರ ಪ್ರೀತಿ ಸಹಕಾರ ಸಹಬಾಳ್ವೆ ಸೌರ್ಹದತೆಗಳೆ ಇಲ್ಲಿನ ಶಕ್ತಿಗಳಾಗಿ ನಿಲ್ಲುತ್ತವೆ. ಮನುಷ್ಯ ಪ್ರೇಮದ ಸಂಕೇತ ಗ್ರಾಮೀಣ ಪ್ರದೇಶದ ಜನರಲ್ಲಿ ಹುಟ್ಟಿದೆ. ಅದನ್ನು ವಿಶ್ವಮಾನವ ಸಂದೇಶ ಸಾರಲು ಪ್ರೇರಣೆಯಾಗಿದೆ. ರಾಷ್ಟ್ರಕವಿಗಳ ಈ ಒಂದು ಮಾತಿಗೆ ಜನಪದ ಸಂಸ್ಕೃತಿಯ ಪರಂಪರೆನೆ ಸ್ಪೂರ್ತಿಯಾಗಿರಬೇಕು. ಸಮಾಜದಲ್ಲಿ ಎಲ್ಲರ ಹಿತವನ್ನೇ ಬಯಸುವಾತನೇ ವಿಶ್ವಮಾನವನಾಗಲು ಸಾಧ್ಯವಾದಿತ್ತು. ಏಕೆಂದರೆ, ಜನಪದರಲ್ಲಿ ಯಾವುದೇ ರೀತಿಯ ಕಸ್ಮಲಗಳ ಮಲಿನತೆ ಕಾಣಲು ಸಾಧ್ಯವಿಲ್ಲ. ಅಲ್ಲಿ ಜಾತಿ, ವರ್ಗ, ವರ್ಣ, ಲಿಂಗಬೇಧವನ್ನು ಮೀರಿದ ಶ್ರೀಮಂತಿಕೆ ನೋಡಬಹುದು. ಶಿಷ್ಟಸಾಹಿತ್ಯದಲ್ಲಿ ಕೇಳಿಬರುವ ವಿಮರ್ಶೆ, ಟೀಕೆ ಟಿಪ್ಪಣಿಗಳಷ್ಟು ಜನಪದ ಸಾಹಿತ್ಯದಲ್ಲಿ ಕೇಳಿಬರುವುದು ತೀರಾ ವಿರಳ ಎನ್ನಬಹುದೇ? ಜನಪದ ಭಾಷೆ ಪ್ರಶ್ನಾತೀತವಾದ ಭಾಷೆ ಜನಪದ ಕಲೆ ಸಂಸ್ಕೃತಿ ಆಚಾರ ವಿಚಾರ ನಡೆ ನುಡಿ ಸಂಪ್ರದಾಯ ಇತ್ಯಾಧಿ ಪ್ರಕಾರಗಳು ಪ್ರತಿಯೊಬ್ಬ ಮನುಷ್ಯ ಪ್ರೇಮಿಯ ಹೃದಯಕ್ಕೆ ಹಿತವನ್ನೇ ನೀಡುತ್ತವೆ. ಮತ್ತು ಎಲ್ಲರ ಮನಸ್ಸಿಗೆ ಆನಂದವನುಂಟು ಮಾಡುತ್ತವೆ.

## ಒಡಪು ಪದದ ಉಗಮ ಮತ್ತು ವಿಸ್ತಾರ:

ಪ್ರಾಚೀನ ಕಾಲದ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಒಗಟುಗಳು ಮಾನವನ ದೈನಂದಿನ ಬದುಕಿನ ಅನುಭವದೊಂದಿಗೆ ಬೆರೆತುಕೊಂಡು ಹುಟ್ಟಿಕೊಂಡ ಒಂದು ಪರಿ ಭಾಷೆ. ಅದರ ಉಗಮ ಮತ್ತು ವಿಸ್ತಾರ ಮನುಷ್ಯನ ಜೀವನದೊಂದಿಗೆ ಒಗಟುಗಳು ಸೃಷ್ಠಿಯಾಗಿರಬಹುದು ಎಂದು ಡಾ. ಬಸವರಾಜ ಪೊಲೀಸ್ ಪಾಟೀಲ್ ರವರು ಅಭಿಪ್ರಾಯ ಪಡುತ್ತಾರೆ. ಮನುಷ್ಯನ ಪ್ರಾಥಮಿಕ ಸಂಸ್ಕೃತಿಗಳಲ್ಲಿ ಒಂದಾಗಿ ವೇದಕಾಲದಿಂದಲೂ ಇವುಗಳ ಉಗಮದ ಬಗ್ಗೆ ಹಲುವು ಸಂಗತಿಗಳು ನಮ್ಮಗೆ ಆಧಾದರಗಳಾಗಿ ನಿಲ್ಲುತ್ತವೆ. ಬೇತಾಳನ ಪಂಚವಿಂಶಶಿ, ಭಟ್ಟಿ ವಿಕ್ರಮಾದಿತ್ಯನ ಕಥೆಗಳ ಕುರುಹುಗಳ ಬಗ್ಗೆ ಇಲ್ಲಿ ಪೊಲೀಸ್ ಪಾಟೀಲ್‌ರು ಸುಳಿವು ನೀಡುತ್ತಾರೆ.

ಒಡಪುಗಳ ಹುಟ್ಟುವಿಕೆನೇ ಒಂದು ಅದ್ಭುತವಾದ ಪರಿಪಲ್ಪನೆಯ ಚಿಂತನೆ ಮನುಷ್ಯನ ಭಾವನೆಗಳು ಸಂಗಮವಾಗಿ ಮನಸ್ಸಿಗೆ ಮನರಂಜನೆಯನ್ನು ಉಂಟುಮಾಡುವುದರ ಜೊತೆಗೆ ಆಲೋಚನೆಗಳಿಗೆ ಎಡಮಾಡಿಕೊಡುವ ರೀತಿ ಮತ್ತು ಮನುಷ್ಯನ ಮನಸ್ಸಿನ ಸಾಮರ್ಥ್ಯವನ್ನು ಪರೀಕ್ಷೆಗೆ ಒಳಪಡಿಸುವ ವಿಧಾನ ಬಹು ವೈಶಿಷ್ಟ್ಯವಾಗಿ, ವಿಭಿನ್ನವಾಗಿ, ಸರಳವಾಗಿ ಅರ್ಥಗರ್ಭಿತವಾಗಿ ಗ್ರಾಮೀಣ ಪ್ರದೇಶದ ಜನಜೀವನದ ಅನುಭವ ಮೇಲೆ ಬೆಳಕು ಚೆಲ್ಲುತ್ತದೆ. ಮತ್ತು ಅವರ ಅನುಭಾವಗಳ ಅನುಸಂಧಾನದ ಮೂಲಕವೇ ಅನಿಸಿಕೆಗಳ ಆಗರವನ್ನು ವ್ಯಕ್ತಪಡಿಸುವ ಸೂಕ್ಷ್ಮತೆಗಳು ಒಗಟಿನಲ್ಲಿ ಅಡಗಿರುತ್ತವೆ. ಒಗಟುಗಳಲ್ಲಿ ಸಾಂಸ್ಕೃತಿಕ ವಿಚಾರಗಳ ಕುರುಹು ಸಮಾಜದಕ್ಕೆ ಅರ್ಥೈಸುವ ಸಾಧನಗಳ ಎಳೆಗಳಾಗಿವೆ. ಬದುಕಿನ ಗಾಢವಾದ ನಂಭಿಕೆ ಸಂಪ್ರದಾಯ ನಡೆ-ನುಡಿ ಆಚಾರ-ವಿಚಾರಗಳ ಸ್ಥಿತಿಗತಿಗಳೇ ಇಲ್ಲಿ ಹೆಚ್ಚಾಗಿ ಪ್ರತಿನಿಧಿಸುವುದನ್ನು ನೋಡುತ್ತೇವೆ.

## ಒಗಟಿನ ಪ್ರಕಾರಗಳು:

ISBN – 978-93-5526-247-9

1. **ವಿನೋದ 2. ಹಾಸ್ಯ 3. ವಿಡಂಬನೆ**

ಒಗಟುಗಳು ಬಹು ಮುಖ್ಯವಾಗಿ ಬದುಕಿನ ಸಿಹಿ–ಕಹಿಗಳನ್ನು ಬೆರೆಸಿ ಉಣಬಡಿಸಿದಾಗ ಕೇಳುಗನ ಮನಸ್ಸಿಗೂ ಹೃದಯಕ್ಕು ರಸಾಮೃತವನ್ನು ನೀಡಿ ತೃಪ್ತಿಗೊಳಿಸಬಲ್ಲವು. ಒಗಟುಗಳಲ್ಲಿ ಗೂಡವಾದ ಜೀವನದ ಒಳ ಅರ್ಥವನ್ನು ನಿಗೂಡವಾಗಿ ಅಡಗಿಸಿಕೊಂಡು ವಿವೇಚನೆಗೆ ಅವಕಾಶ ಮಾಡಿಕೊಡಬಲ್ಲವು. ಇಲ್ಲಿ ಮನರಂಜನೆ, ವಿನೋದ, ಹಾಸ್ಯ, ವಿಡಂಬನೆ, ರಸಿಕತೆ ಮುಂತಾದ ಪ್ರಕಾರಗಳಿಂದ ಮನಸ್ಸನ್ನು ಹತ್ತಿರಕ್ಕೆ ಸೆಳೆಯುವ ಸಾಧನಗಳಾಗಿವೆ. ಹಾಗಾಗಿಯೇ ಜನಪದ ಸಾಹಿತ್ಯ ಇತರೆ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದ್ದರೂ ಸಹ ಹೆಚ್ಚು ಮನುಷ್ಯನ ಅಂತರಂಗದಲ್ಲಿ ಲೀನವಾಗಿ ಪ್ರತಿಯೊಬ್ಬರ ಉಸಿರಿನಲ್ಲಿ ಉಸಿರಾಗಿ ಜೀವಿಸುತ್ತಿದೆ. ಒಗಟುಗಳು ಗದ್ಯ ರೂಪದಲ್ಲೇ ಇದ್ದರೂ ಕೂಡ ಅದರಲ್ಲಿರುವ ಒಂದೊಂದು ಪುಟದ ಒಗಟುಗಳು ಕಾವ್ಯ ಪ್ರಕಾರವೇ ಪ್ರತಿನಿಧಿಸುತ್ತವೆ. ಅದಕ್ಕಾಗಿಯೇ ಒಗಟುಗಳು ಸಹ ಭಾವಗೀತೆಗಳಂತೆ ಗುನುಗುತ್ತವೆ.

ಪ್ರಮುಖವಾಗಿ ಒಗಟುಗಳಲ್ಲಿ ಎರಡು ವಿಧವಾಗಿ ವಿಂಗಡಿಸಲಾಗಿದೆ. ಅವುಗಳು ಎಂದರೆ, ಮೊದಲನೆಯದು **'ಉಪಮಾನ'** ಎರಡೆನೆಯದು **'ಉಪಮೇಯ'**

ಈ ಪ್ರಕಾರಗಳಲ್ಲಿನ ಭಿನ್ನತೆಯನ್ನು ನೋಡುವುದಾದರೆ, 'ಉಪಮಾನ' ವಾಚ್ಯವಾಗಿದ್ದರೆ, 'ಉಪಮೇಯ' ಅಸ್ಪಷ್ಟವಾಗಿ ಗಾಹ್ಯವಾಗಿರುವುದನ್ನು ನೋಡಬಹುದು. ಈ ಎರಡರ ಮಧ್ಯ ಇರುವ ವ್ಯತ್ಯಾಸವನ್ನು ಒಗಟುಗಳ ನಿರ್ಮಾತೃ ತನ್ನ ಸೂಕ್ಷ್ಮತೆಯ ಜಾಣ್ಮೆ ಗೌಪ್ಯವಾಗಿಟ್ಟಿರುತ್ತಾನೆ. ಉಪಮಾನದ ಸಾಕ್ಷಿಯಿಂದ ಉಪಮೇಯವನ್ನು ಗುರುತಿಸಬಹುದು. ಇವು ಮನುಷ್ಯನ ಬೌದ್ಧಿಕ ಸಾಮರ್ಥ್ಯದ ಚಿಂತನೆಗೆ ಸವಾಲಾಗಿ ನಿಲ್ಲುತ್ತದೆ. ಇದೊಂದು ಜನಸಾಮನ್ಯನ ವಿಶ್ವವಿದ್ಯಾಲಯದಂತೆ ಅದಕ್ಕಾಗಿಯೇ ಪ್ರಾಚೀನಕಾಲದಿಂದಲೂ ಅತ್ಯಂತ ಪ್ರಕಾರಮಾನವಾಗಿ ಬೆಳೆದು ನಿಂತಿದೆ.

**ಒಗಟು ಪದದ ಅರ್ಥ:**

ಜನಪದ ಸಾಹಿತ್ಯ ಕನ್ನಡ ಸಾಹಿತ್ಯ ಲೋಕದ ಶ್ರೀಮಂತ ಕ್ಷೇತ್ರವೆಂದೇ ಕರೆಯುತ್ತಾರೆ. ಅದರಲ್ಲಿ ಹಲವು ಬಗೆಯ ವೈಶಿಷ್ಟ್ಯತೆಯನ್ನು ಒಳಗೊಂಡಿದೆ. ಒಗಟು ಎಂಬ ಪದದ ಅರ್ಥವನ್ನು ನೋಡುವುದಾದರೆ, 'ಒಗಟು' ಶಬ್ದಕ್ಕೆ ಸಂಸ್ಕೃತದ ಮುಂಡಿಗೆ ಪ್ರಹೇಳಿಕಾ, ಪ್ರಶ್ನೆ, ಕೂಟ, ಬ್ರಹ್ಮೋದ್ಯ, ವಿವಾದ, ಸಮಸ್ಯಾ ಹೀಗೆ ಇತ್ಯಾದಿ ಪ್ರಭೇದಗಳಲ್ಲಿ 'ಒಗಟು' ಎಂಬ ಶಬ್ದಕ್ಕೆ ಅರ್ಥ ಹೇಳಲಾಗುತ್ತದೆ. ಒಗಟಿನ ಬಗ್ಗೆ ಅನೇಕ ಜನ ಮಹನೀಯರು ಹೇಳುವ ಮಾತುಗಳು ಗಮನಿಸಿದಾಗ ಅದರ ಪೂರ್ವಪರ ತಿಳಿಯಲು ಸಾಧ್ಯವಾಗಬಲ್ಲದು. ವೇದ, ಶೃತಿ, ಉಪನಿಷತ್ತು, ಬ್ರಾಹ್ಮಣಕ ಇನ್ನೂ ಮುಂತಾದವುಗಳಲ್ಲಿ ಅದರ ಬಳಕೆಯ ಕುರಿತು ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ಎತ್ತಿದ್ದಾರೆ. ಜೊತೆಗೆ ಒಗಟಿನ ಬಗ್ಗೆ ಗ್ರೀಕ್‌ನಲ್ಲಿ Aineo ಲ್ಯಾಟಿನ್ನದಲ್ಲಿ Aenigma ಫ್ರೆಂಚನಲ್ಲಿ Engime ಹಾಗೂ ಇಂಗ್ಲಿಷಿನಲ್ಲಿ Enigma ಎಂದು ಕರೆಯುವ ಶಬ್ದಗಳಲ್ಲಿ ಸಮಾನವಾದ ದೃಶ್ಯ ರೂಪವನ್ನು ಕಂಡುಬರುತ್ತದೆ. ಈ ಒಂದು ಪದ ಬಳಕೆ ಮುಂದೆ ಗ್ರೀಕ್ನಲ್ಲಿ Aineo ಜರ್ಮನ್ ನಲ್ಲಿ Rat ಮತ್ತು ಇಂಗ್ಲಿಷನಲ್ಲಿ Riddle ಗಳಾಗಿ ಜನ ಬಳಕೆಗೆ ಮುಕ್ತ ಅವಕಾಶವಿತ್ತಿತ್ತು ಎಂಬುದು ಇಲ್ಲಿ ಕಂಡುಬರುತ್ತದೆ. ಈ ಎಲ್ಲಾ ಮೇಲಿನ ಭಾಷೆಗಳಲ್ಲಿ ಒಗಟಿನ ಅರ್ಥವನ್ನು ಕುರಿತು ಒಟ್ಟಾರೆಯಾಗಿ ಗಮನಿಸಿದಾಗ 'ಒಗಟು' ಎಂದರೆ, 'ಉಪದೇಶ ನೀಡು' ಎಂಬ ಅರ್ಥವನ್ನು ಸೂಚಿಸುತ್ತದೆ. ('ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ' –ಸಂ. ಡಾ. ಜಿ.ಸಿ. ನಿಂಗಣ್ಣ ಪುಟ ಸಂಖ್ಯೆ–549)

'ಒಗಟಿ'ನ ಅರ್ಥವನ್ನು ಕುರಿತು ಕನ್ನಡದಲ್ಲಿಯೂ ಹಲವಾರು ಬಗೆಯ ಅರ್ಥವನ್ನು ಸೂಚಿಸುವ ವಿಧಾನವನ್ನು ನೋಡುವುದಾದರೆ, 'ಒಗಟು' ಎಂದರೆ 'ಒಂಟು' ಎಂದು ಗ್ರಾಮೀಣ ಜನಪದ ವಿದ್ವಾಂಸರಿಂದ ಅರ್ಥೈಸಲ್ಪಡುತ್ತದೆ. ಒಂಟು ಎಂಬ ಅರ್ಥವೇ ಮುಂದೆ ಒಗಂಟು–ಒಗಟು ಒಗಟ್ಟು ಎಂಬ ಅರ್ಥದ ಬಗೆಯನ್ನು ತಿಳಿದುಬರುತ್ತದೆ. ಮುಂದುವರೆದು ಮತ್ತೊಂದು ವಿಧಾನದಲ್ಲಿ ಅರ್ಥವನ್ನು ಕಟ್ಟಲಾಗಿದೆ. 'ಒಂಟು ಎಂಬದು ಹಳ್ಳಿಯ ಭಾಷೆಯಲ್ಲಿ 'ಒಟ್ಟು' ಎಂದು 'ಒಟ್ಟು' ಎಂದರೆ ಒಗೆ, ಒಗೆ ಎಂದರೆ ಒಗಟಿನ ಸವಾಲನ್ನು ಒಗೆ ಎಂಬ ಅರ್ಥ ಸೂಚಿಸುತ್ತದೆ. ಅದೇ ರೀತಿಯಾಗಿ ಎಸೆ ಎಂದರೆ ಸವಾಲು ಎಸೆ, ಎಂಬ ಅರ್ಥ ಬೀಸಾಡು ಎಂಬ ಅರ್ಥವನ್ನು ಒಗಟಿನ ಗಂಟನು

ISBN – 978-93-5526-247-9

ಬೀಸಾಡು ಎಂದು ಹೀಗೆ ಒಗಟಿನ ಅರ್ಥವನ್ನು ಕಟ್ಟಲಾಗಿದೆ. ಅಂದರೆ ಒಟ್ಟಿನಲ್ಲಿ ಮನುಷ್ಯನ ಭಾಷೆಗಳ ಮೇಲಿನ ಹಿಡಿತ ಹಾಗೂ ಆಲೋಚನೆಗೆ ಎಡೆಮಾಡಿಕೊಡುವ ಮಾನಸಿಕ ಬುದ್ಧಿಮತೆ ಎಂದು ಹೇಳಬಹುದು.

## ಒಗಟಿನ ಬಗೆಗಳು

1. **ದ್ವಂದ್ವಾರ್ಥದ ಒಗಟುಗಳು**
2. **ಗೂಢಾರ್ಥದ್ಯೋತಕ ಒಗಟುಗಳು**
3. **ಚಿತ್ರಶಬ್ಧದಿಯ ಒಗಟುಗಳು**
4. **ಪದ ಸಮಸ್ಯೆಯ ಒಗಟುಗಳು**
5. **ಗಣಿತದ ಒಗಟುಗಳು**
6. **ವಿನೋದಾತ್ಮಕ ಒಗಟುಗಳು**

ಹೀಗೆ ಇನ್ನೂ ಹಲವು ಬಗೆಯ ಒಗಟುಗಳು ಜನಪದ ಸಾಹಿತ್ಯದಲ್ಲಿ ನೋಡಬಹುದಾಗಿದೆ. ಇದರಲ್ಲಿ ಮತ್ತೇ ಮೂರು ವಿಧದ ಕಾರ್ಯಗಳನ್ನು ಹೆಸರಿಸಬಹುದು ಸಾಮಾನ್ಯವಾಗಿ ಪದ್ಯದಲ್ಲಿರುವ ಕ್ಲಿಷ್ಟತೆ, ದ್ವಂದ್ವಾರ್ಥ, ಮತ್ತು ಬ್ರಾಂತಿ ಮೂಲ ಅಂಶಗಳೇ ಇಲ್ಲಿ ಪ್ರಧಾನವಾಗಿ ನೋಡಬಹುದಾಗಿದೆ. ಪ್ರಾಚೀನ ಕಾಲದಲ್ಲಿಯೂ ಒಗಟು ಇತ್ತು ಎಂಬುದಕ್ಕೆ ವೇದಗಳಲ್ಲಿ ಬರುವ ಅಧ್ಯಾತ್ಮಿಕ ಚಿಂತನೆಗಳಿಗೆ ಇಡುಮಾಡುವ ಒಗಟುಗಳ ಪರಂಪರೆ ಪುರಾತನವಾದ ಸಾಕ್ಷಿಗಳಿಗೆ ಒಂದು ರೀತಿಯಲ್ಲಿ ಆಧಾರಗಳಾಗಿ ನಿಲ್ಲುತ್ತವೆ.

ಒಗಟುಗಳು ಸಾಮಾನ್ಯವಾಗಿ ಕೆಲಸ ಕಾರ್ಯ ಮಾಡುವಾಗ ಅಥವಾ ವಿಶ್ರಾಂತಿ ಮಾಡುವಾಗ ಅಥವಾ ಮಲಗುವ ಸಮಯದಲ್ಲಿ ಮನೆಯಲ್ಲಿನ ಹಿರಿಯ ಅಜ್ಜಿ–ಅಜ್ಜಾ, ಅಪ್ಪಾ–ಅಮ್ಮನವರ ಆದಿಯಾಗಿ ಅನುಭವದ ಮಾತುಗಳನ್ನು ಮಕ್ಕಳಿಗೆ ಹೇಳುವುದು ಅವರಿಗೆ ಮನರಂಜನೆಯನ್ನು ಉಂಟುಮಾಡುವುದು, ಹಾಗೂ ಮಕ್ಕಳ ಮನಸ್ಸಿಗೆ ಸಂತೋಷವನ್ನು ಉಂಟುಮಾಡುವುದು. ಹೀಗೆ ಒಂದಿಲೊಂದು ಸಂದರ್ಭಗಳಲ್ಲಿ ಒಗಟು ಹಾಕುವುದು ಅದರ ಅರ್ಥವನ್ನು ಪಡೆಯುವುದು. ಇದೊಂದು ರೀತಿಯಲ್ಲಿ ಜೀವನದ ಅನ್ಯೋನ್ಯತೆ, ಆತ್ಮೀಯತೆ, ಸೌಹಾರ್ದತೆ, ಭಾಂದವ್ಯ, ಅಭಿಮಾನ, ಗೌರವಗಳ ಜೊತೆಗೆ ಮನಸ್ಸಿನ ಸಾಮರ್ಥ್ಯವನ್ನು ಪರೀಕ್ಷೆಗೆ ಒಳಪಡಿಸುವ ವಿಧಾನವು ಕೂಡ ಆಗಿರುತ್ತಿತ್ತು ಎಂಬುದನ್ನು ಗ್ರಾಮೀಣ ಪ್ರದೇಶದ ಹಿರಿಯ ನಾಗರೀಕರಿಗೆ ಕೇಳಿದಾಗ ಅವರ ಅನುಭಗಳನ್ನು ಹಂಚಿಕೊಳ್ಳುವಾಗ ಮುಖದಲೊಂದು ಸಂತೋಷದ ಉಸಿ ನಗು ತೇಲಿ ಹೋಗುವುದು.

## ಒಗಟಿನ ವಸ್ತುಗಳು :

1. **ಶರೀರಕ್ಕೆ ಸಂಬಂಧಿಸಿದ ಒಗಟುಗಳು**
2. **ಪ್ರಕೃತಿ ಮೇಲಿನ ಒಗಟುಗಳು**
3. **ಪಶು–ಪಕ್ಷಿ, ಪ್ರಾಣಿಗಳ ಮೇಲಿನ ಒಗಟುಗಳು**
4. **ಅಡಿಗೆ ಉಪಕರಗಳ ಮೇಲಿನ ಒಗಟುಗಳು**
5. **ಊಟೋಪಚಾರಕ್ಕೆ ಸಂಬಂಧಿಸಿದ ಒಗಟುಗಳು**
6. **ತರಕಾರಿ ಹಣ್ಣು ಹಂಪಲುಗಳ ಮೇಲಿನ ಒಗಟುಗಳು**
7. **ಅಲಂಕಾರಕ್ಕೆ ಸಂಬಂಧಿಸಿದ ಒಗಟುಗಳು**
8. **ರಸಿಕತೆಗೆ ಸಂಬಂಧಿಸಿದ ಒಗಟುಗಳು**
9. **ಚಟಗಳಿಗೆ ಸಂಬಂಧಿಸಿದ ಒಗಟುಗಳು**
10. **ಪೋಷಣೆಗೆ ಸಂಬಂಧಿಸಿದ ಒಗಟುಗಳು**
11. **ಬುದ್ಧಿ ಚಮತ್ಕಾರಕ್ಕೆ ಸಂಬಂಧಿಸಿದ ಒಗಟುಗಳು**

ಕನ್ನಡ ಜನಪದ ಸಾಹಿತ್ಯ ಒಂದು ಅದ್ಭುತವಾದ ಶಕ್ತಿಯನ್ನು ಹೊಂದಿದೆ. ಇಲ್ಲಿ ಅಕ್ಷರ ಜ್ಞಾನವಿಲ್ಲದ ಮಹನೀಯರು ನೂರಾರು ಕಾವ್ಯಗಳನ್ನು ಕಟ್ಟಿದ್ದಾರೆ. ತಮ್ಮ ಸುತ್ತಮುತ್ತಲಿನ ಪರಿಸರವನ್ನು ಕುರಿತು ಜೀವನದ

ISBN – 978-93-5526-247-9

ಅನುಭವವನ್ನು ಕುರಿತು ಕಟ್ಟಿದ ಸಾಹಿತ್ಯ ಪ್ರಕಾರ ಸರಳ ಮತ್ತು ಸುಂದರವಾಗಿದೆ. ಅದನ್ನು ಅರ್ಥೈಹಿಸುವಲ್ಲಿ ವಿಶ್ವ ವಿದ್ಯಾಲಯಗಳಲ್ಲಿ ಓದಿದ ಪಂಡಿತರಿಗೂ ನಿಲುಕದ ಗೂಢರ್ಥದ ಪದ ಬಳಕೆಯ ಶಬ್ಧಬಂಡಾರ ಸಾಮಾನ್ಯವೇನಲ್ಲ. ಅವರು ಬಳಸುವ ಭಾಷೆ ಜೀವನ ಮತ್ತು ಜೀವನಕ್ಕೆ ಅವಶ್ಯವಿರುವ ವಸ್ತುಗಳನ್ನು ಕುರಿತು ಕಟ್ಟುವ ಒಗಟು ಅಶ್ಲೀಲ ಎನಿಸಿದರು ಅದಕೊಂಡು ಒಳ ಅರ್ಥ ಹಾಗೂ ಗೂಡಾರ್ಥ ಒಗಟಿನ ಒಳ ಗರ್ಭದಲ್ಲಿ ಅಡಗಿರುತ್ತದೆ.

**ಅಂಗಗಳ ಕುರಿತಾದ ಒಗಟು.**

**ಉದಾ: ಅಚ್ಚೇರ್ ತುಣ್ಣಿ**
**ದಡೇದ ತುಲ್ಲು**

ಮನುಷ್ಯನ ಜೀವನದ ಹಲವು ಅಂಗಾಂಗಗಳನ್ನು ಕುರಿತು ಒಗಟನ್ನು ಕಟ್ಟುವ ನೈಪುಣ್ಯತೆ ಗ್ರಾಮೀಣ ಪ್ರದೇಶದ ಜನರಿಗೆ ಸರಾಗವಾಗಿ ಮನನವಾಗಿತ್ತು. ಅಲ್ಲಿನ ಪರಸ್ಥಿತಿಗನುಗುಣವಾಗಿ ಮನಸ್ಸಿನ ಆಲೋಚನೆಗಳು ಕುಡಿಹೊಡೆದು ಭಾವ–ಭಾವಗಳಲ್ಲಿ ಬೆರೆತು ಅಂತರಾತ್ಮದ ಸಂದರ್ಶನ ಮಾಡಿಸುವಂತಹ ಒಗಟುಗಳು ಮನಸ್ಸಿನ ಮೇಲೆ ಕಾಮ–ಪ್ರೇಮದ ಕಾವು ಉಕ್ಕುವುದು ಸಹಜ ಎನಿಸಿದರು ಅದರ ಒಳ ಅರ್ಥದಲ್ಲಿ ಅದರ ಮೌಲ್ಯವೆ ಭಿನ್ನಾಗಿರುತ್ತದೆ. 'ಅಚ್ಚೇರ್ ತುಣ್ಣಿ' ಎಂದರೆ ಹಸಗಲ್ಲ ಗುಂಡು 'ದಡೇದ್ ತುಲ್ಲು' ಎಂದರೆ ಹಸಗಲ್ಲು ಈ ಎರಡು ವಸ್ತುಗಳನ್ನು ಮಾನವನ ದಹಿತ ಅಂಗಗಳಿಗೆ ಬಳಸಿಕೊಂಡು ಅಲ್ಲಿ ಅಶ್ಲೀಲಕ್ಕೆ ಅಸಲಿ ಉತ್ತರ ಕೊಡುವ ಮೂಲಕ ಮನಸ್ಸಿನ ತೀಕ್ಷಣತೆ, ಆಲೋಚನೆ, ವಿವೇಚನೆ, ಮತ್ತು ಸೂಕ್ಷ್ಮತೆಯೂ ಕಾಡ ಗಮನಿಸಬಹುದು. ಇಂತಹ ಅಶ್ಲೀಲವಾದ ಒಗಟನು ಹೇಳುವ ಜನಪದರು ಕಲಬುರಗಿ ಜಿಲ್ಲೆಯಲ್ಲಿ ಬೇಕಾದಷ್ಟು ಜನ ಸಿಗುತ್ತಾರೆ. ಅಂತವರಲ್ಲಿ 90ರ ಪ್ರಾಯದ ಹಿರಿಯ ಜೀವ ಗೌರಮ್ಮ ಆಂದೋಲ (ಹೊಲೆಯ) ಶಿವಲಿಂಗಮ್ಮ ಇಜೇರಿ (ಹೊಲೆಯ) ಹಳ್ಳೆಪ್ಪ ಗಂವ್ಹಾರ್ (ಮಾದರ) ಜೋಟೆ ಭೀಮಪ್ಪ ಮಾದರ ಇನ್ನೂ ಮುಂತಾದವರು ಕಲಬುರಗಿ ಜಿಲ್ಲೆಯಲ್ಲಿ ಸಿಗುತ್ತಾರೆ.

**ಪರಿಸರ ಕುರಿತಾದ ಒಗಟು:**

ಪ್ರಕೃತಿ ಸೃಷ್ಠಿನೇ ಒಂದು ವಿಸ್ಮಯಕಾರಿ ಹಾಗೂ ಅದ್ಭುತವಾದ ಶಕ್ತಿ ಈ ನಿಸರ್ಗದಲ್ಲಿ ಸಕಲ ಕೋಟಿ ಜೀವರಾಶಿಗಳು ಬದುಕಲು ಮುಕ್ತವಾದ ಅವಕಾಶ ಕಲ್ಪಿಸಿಕೊಟ್ಟಿದೆ. ಅದರಲ್ಲಿ ಮನುಷ್ಯನು ಕೂಡ ಪರಿಸರದ ಕೂಸು ಎಂದು ಹೇಳಲಾಗುತ್ತದೆ. ಮನುಷ್ಯನಿಗೆ ಅಂದರೆ, ಪ್ರಾಚೀನಕಾಲದ ಆದಿ ಮಾನವನಿಗೆ ಪರಿಸರವೆ ಮನೆ, ಮಠ, ಆಸ್ತಿ, ಪಾಸ್ತಿ ಸಿರಿ, ಸಂಪತ್ತು ಎಲ್ಲವೂ ಪರಿಸರವೆ ಆಗಿತ್ತು. ಪರಿಸರಕ್ಕೂ ಮನುಷ್ಯನಿಗು ಅವಿನಾಭಾವ ಸಂಬಂಧ ಅತ್ಯಂತ ಮಹತ್ವವನ್ನು ಪಡೆಯುತ್ತದೆ. ಪ್ರಕೃತಿಯೊಂದಿಗೆ ಮನುಷ್ಯನ ಜೀವನ ಆರಂಭವಾಗಿ ಕೊನೆಗೆ ಪರಿಸರದೊಂದಿಗೆ ಕೊನೆಯಾಗುತ್ತದೆ. ಪ್ರಕೃತಿಯೊಂದಿಗಿನ ಮನುಷ್ಯನ ಸಂಸ್ಕೃತಿ ಆಚಾರ ವಿಚಾರ ರೂಡಿ ಸಂಪ್ರಾದಾಯ ಇತ್ಯಾದಿಗಳಲ್ಲಿ ಪಕೃತಿಯ ಪಾತ್ರ ಹಿರಿದಾಗಿದೆ. ಆ ಕಾರಣಕ್ಕಾಗಿಯೇ ಮನುಷ್ಯನ ಸರ್ವಾಂಗೀಣ ಅಭಿವೃದ್ದಿಗೆ ಪರಿಸರವೆ ಕಾರಣವಾಗಿದೆ. ನಮ್ಮ ಜನಪದರು ಪರಿಸರವನ್ನು ಕುರಿತು ರಚಿಸಿದ ಒಗಡು ಕೂಡ ಅತ್ಯಂತ ಅರ್ಥಪೂರ್ಣ ಹಾಗೂ ಮಹತ್ವಪೂರ್ಣವಾಗಿವೆ. ಅಂತಹ ಒಗಟುಗಳಲ್ಲಿ ಒಂದಾದ ಒಗಟು ಎಂದರೆ, ಈಗಿದೆ.

"ಅವ್ವಗ ಮನಿ ಸಾರಸಕ ಆಗಲ್ಲ
ಅಪ್ಪಾಗ ರೊಕ್ಕಾ ಎಣಿಸಕ್ಕಾಗಲ್ಲ"

ಅಂದರೆ ಅಪ್ಪಾ ಅವ್ವನ ಹೆಸರಿನ ಮೂಲಕ ತಮ್ಮ ಜ್ಞಾನ ಪರೀಕ್ಷಗೆ ತಮ್ಮನ್ನು ತಾವು ಪರೀಕ್ಷಿಸಿಕೊಳ್ಳುವ ರೀತಿ ಮತ್ತು ಸಂಬಂಧಗಳ ಗಟ್ಟಿತನ ಹಾಗೂ ಸ್ಪರ್ಧಾಮನೋಭಾವದೊಂದಿಗೆ ಒಬ್ಬರನ್ನೊಬ್ಬರು ತಮ್ಮ ಸೂಕ್ಷ್ಮತೆಯ ಪರೀಕ್ಷೆಗೆ ಒಳಗಾಗುತ್ತಿದ್ದರು. ಮಾನಸಿಕ ಬುದ್ದಿ ಕೌಶಲ್ಯ ವೃದ್ಧಿಸಿಕೊಳ್ಳುವಲ್ಲಿ ತೊಡಗುತ್ತಿದ್ದ ರೀತಿ ಮತ್ತು ಒಗಟಿನ ಒಳ ಅರ್ಥವನ್ನು ತಮ್ಮ ಸೂಕ್ಷ್ಮತೆಯಿಂದನೆ ಉತ್ತರವನ್ನು ನೀಡುತ್ತಿದ್ದರು. ಅವ್ವನಿಗೆ ಮನಿ ಸಾರಿಸುವುದಕ್ಕೆ ಆಗಲ್ಲ ಎಂದರೆ ಆಕಾಶವನ್ನು ಮನೆಯಂತೆ ಸುಲಬವಾಗಿ ಸಾರಿಸಲು ಕಷ್ಟಸಾಧ್ಯ! ಅದರಂತೆ ಅಪ್ಪನಿಗೆ ರೊಕ್ಕ ಎಣಿಸುವುದಕ್ಕೆ ಆಗುವುದಿಲ್ಲ ಎಂದರೆ ಆಕಾಶದಲ್ಲಿನ ನಕ್ಷತ್ರಗಳನ್ನು ಲೆಕ್ಕಹಾಕಲು ಸಾಧ್ಯವೇ ಇಲ್ಲ. ಇಂತಹ ಒಂದು ಕಠಿಣವಾದ ಒಗಟುಗಳು ಮನುಷ್ಯನ ಜ್ಞಾನ ಶಕ್ತಿಯನ್ನು ಹೆಚ್ಚಿಸುವುದರೊಂದಿಗೆ ಆಲೋಚನೆಗೆ ಒಡುತ್ತವೆ.

ISBN – 978-93-5526-247-9

ನಮ್ಮನೆ ಅಂಗಳ್ದಾಗ ಒಂದು ಗಿಡ ಆಯ್ತೇ ತಿಂಗಳಿಗೊಮ್ಮಿ ಮಾತ್ರ ಹಣ್ಣ ಬಿಡ್ತಾದ(ಚಂದ್ರಮ) ಗುಂಪನ ಗಿಡಕ ಗೀಳಿ ಮುಕುರ್‍ಯಾವ ( ಮೆಣಸೀನ ಕಾಯಿ ಗಿಡ) ಆಗ್ಗ ಹಾಸಿದೆ ಗೂಳಿ ಮಲಗಿದೆ( ಕುಂಬಳ ಕಾಯಿ) ಅಕ್ಕಕ್ಕ ಬಾವಿ ನೋಡು ಬಾವಿ ಒಳಗ ನೀರು ನೋಡು ನೀರಿನೊಳಗೆ ಬಳ್ಳಿ ನೋಡು ಬಳ್ಳಿಗೊಂದು ಹೂ ನೋಡು (ಚಿಮುಣಿ, ಬತ್ತಿ, ಸೀಮೆಎಣ್ಣೆ) ನಮ್ಮನ್ಯಾಗ ಒಂದು ಪೋರಿ ಇದೆ ಆ ಪೋರಿಗೆ ಮೈ ತುಂಬಾ ಕಣ್ಣು (ವರ್ಸ್) ಇಟೇ ಪಾರಾ ಚೋಟೇ ಪೀರಾ ಹೋಟಲ್ದಾಗ ಕುಂತ ಊಟ ಮಾಡತಾನ(ನೊಣ) ಹೋಗುವಾಗ ಕೆಂದ ಬರುವಾಗ ಬಿಳಿ (ತೆಂಗಿನ ಕಾಯಿ) ಹಾದಿಗೆ ಹೋಗೋ ಪಾರ ಅಂಕಾಡೊಂಕ (ಎತ್ತಿನ ಉಚ್ಚಿ) ಗುಡ್ಡದ ಹಿಂದೆ ಲೊಡ್ಡ ಬಿದ್ದಿದೆ (ತಲೆ ತುರುಬಾ) ಹೀಗೆ ಹಲವಾರು ವಸ್ತು ವಿಷಯಗಳ ಕುರಿತು ಒಗಟು ರಚಿಸುವಲ್ಲಿ ನಮ್ಮ ಪೂರ್ವಿಕರು ಅತ್ಯಂತ ಬುದ್ದಿವಂತರು ಹಾಗೂ ನಿಪುಣರು ಆಗಿದ್ದರು ಎಂಬುದಕ್ಕೆ ಈ ಮೇಲಿನ ಹಲವಾರು ಒಗಟುಗಳೆ ಉತ್ತರಾಗಿ ನೋಡಬಹುದು.

ಒಟ್ಟಾರೆಯಾಗಿ ಕಲಬುರಗಿ ಜಿಲ್ಲೆಯು ಹಲವು ಆಯಾಮಗಳಿಂದ ನಾಡಿನ ಗಮನ ಸೇಳೆಯುತ್ತಾ ಸಾಗುತ್ತಿದೆ. ಅಂತಹ ಮಹತ್ವದ ಸ್ಥಾನ ತನ್ನ ಗರ್ಭದಲ್ಲಿ ಅಡಗಿಸಿಕೊಂಡು ಉಳಿಸಿಕೊಂಡು ಬೆಳಸಿಕೊಂಡು ಪೋಷಿಸುವಲ್ಲಿ ಹಾಗೂ ಜನಪದ ಇತಿಹಾಸಕ್ಕೆ ಪ್ರಸಿದ್ದಿಯಾಗಿದೆ. ಇಂತಹ ಒಗಟುಗಳು ಹೇಳುವ ಪರಂಪರೆ ಇಂದಿಗೂ ಜೀವಂತವಾಗಿವೆ. ಜನಪದರು ತಮ್ಮ ದಿನನಿತ್ಯದ ಕೆಲಸಕಾರ್ಯಗಳಲ್ಲಿ ಬಳಸಿದ ಮಾತುಗಳು ಒಗಟುಗಳಾಗಿ ಜನಮನದಲ್ಲಿ ಹಸಿರಾಗಿ ಉಳಿದಿವೆ. ಇಂತಹ ಒಗಟಿನಲ್ಲಿ ರಸಿಕತೆ ಹಾಸ್ಯ ವಿಡಂಬನೆ ಸಂತೋಷ, ತಮಾಸೆ ಅಲಂಕಾರ ರಸ ಎಲ್ಲವೂ ಇಲ್ಲಿ ಮಿಳಿತಗೊಂಡು ಮನಸಿಗೆ ನೆಮ್ಮದಿ ಮತ್ತು ಚಿಂತನೆಗೆ ಎಡೆಮಾಡಿಕೊಂಡು ನಾಡಿನ ಭಾಷೆ ಪದಗಳ ಶಕ್ತಿ ಸಂಭೋದನೆ ಸಂಭಾಷಣೆ ವಿವರಣೆ ರಸವತ್ತಾಗಿ ಬಳಸುವ ರೀತಿ ಜನಪದರು ಕಟ್ಟಿಕೊಟ್ಟ ಅವರ ಹಾಡುಗಳು, ಲಾವಣಿಗಳು, ಒಡಪುಗಳು, ಒಗಟುಗಳು ಗಾದೆಮಾತುಗಳು, ಪಡೆನುಡಿಗಳು ಇನ್ನೂ ಮುಂತಾದ ಪ್ರಕಾರಗಳಲ್ಲಿ ಸ್ಥಳಿಯ ಆಡು ಭಾಷೆಯನ್ನೇ ಅವರು ಹೆಚ್ಚಾಗಿ ಬಳಸಿ ಅತ್ಯಂತ ಸರಳಾಗಿ ವಿಶಿಷ್ಟವಾಗಿ ವಿಭಿನ್ನವಾಗಿ ಸಮಯೊಚ್ಚಿತ್ತವಾಗಿ ರಚಿಸಿದ ಜನಪದ ಸಾಹಿತ್ಯ ನಿತ್ಯನೂತನವಾಗಿ ಜನರಿಂದ ಜನರಿಗೆ ಸಂಚರಿಸುವ ಮಾಧ್ಯಮವಾಗಿ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಬೆಳಸಿಕೊಂಡು ಕಾಪಾಡಿಕೊಂಡು ಹೋಗುತ್ತಿದೆ. ಆದರಿಂದ ಕಲಬುರಗಿ ಜಿಲ್ಲೆ ಇತರೆ ಜಿಲ್ಲೆಗಳಿಗಿಂತ ಭಿನ್ನ ಹಾಗೂ ವಿಷ್ಟತೆಯಿಂದ ನಾಡಿನ ಗಮನ ಸೆಳೆಯುತ್ತಿದೆ.

### ಆಕಾರ ಗ್ರಂಥಗಳು :


1. ಸೋಮಶೇಖರ್ ಇಮ್ರಾಪುರ – (ಸಂ) ಕನ್ನಡ ಸಾವಿರ ಒಗಟುಗಳು – 1981 ಪುಟ. 55
2. ಜಿ. ಶಂ. ಪರಮಶಿವಯ್ಯ ( ಸಂ) ಕನ್ನಡ ಒಗಟುಗಳು 1967 – ಪುಟ .5
3. ಒಗಟು ಹೇಳಿದವರು – ಶಿವಲಿಂಗಮ್ಮ ಇಜೇರಿ ಕಲಬುರಗಿ ಜಿಲ್ಲೆ
4. ಗೌರಮ್ಮ ಆಂದೋಲಾ ಹೋಬಳಿ ಜೇವರ್ಗಿ ತಾಲ್ಲೂಕ ಕಲಬುರಿ ಜಿಲ್ಲೆ
5. ಬಸವಂತಪ್ಪ ಶರ್ಮಾ ಚಿತ್ತಾಪೂರ
6. ಮಂಜಪ್ಪ ಗುಂಡಗುರ್ತಿಹೋಬಳಿ ಚಿತ್ತಾಪೂರ ತಾಲ್ಲೂಕ


***

- * ಈ ಎರಡು ಲೇಖನಗಳು ವಿಚಾರ ಸಂಕಿರಣದ ಮುಖ್ಯ ಶೀರ್ಶಿಕೆಗೆ ಒಳಪಡದೆ ಇರುವ ಲೇಖನಗಳು

## ಪ್ರಬಂಧ ಮಂಡನಾಕಾರರ ವಿಳಾಸ


| | |
|---|---|
| **ಪ್ರೊ. ಹಿ.ಚಿ ಬೋರಲಿಂಗಯ್ಯ**<br>ವಿಶ್ರಾಂತ ಕುಲಪತಿಗಳು<br>ಕನ್ನಡ ವಿಶ್ವ ವಿದ್ಯಾಲಯ, ಹಂಪಿ | **ಪ್ರೊ. ತಮಿಳ್ ಸೆಲ್ವಿ**<br>ಎಂ.ಎ., ಪಿಎಚ್.ಡಿ., ಡಿ.ಲಿಟ್.,<br>ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು<br>ಕನ್ನಡ ವಿಭಾಗ, ಮದ್ರಾಸ್ ವಿಶ್ವವಿದ್ಯಾಲಯ<br>ಮರೀನಾ ಆವರಣ, ಚೆನ್ನೈ – 600 005.<br>ಫೋ : 9840239321 |
| **ಡಾ.ಎಂ.ಎಸ್.ದುರ್ಗಾಪ್ರವೀಣ**<br>ಆಯ್ಕೆ ಶ್ರೇಣಿ ಸಹಾಯಕ ಪ್ರಾಧ್ಯಾಪಕರು,<br>ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ<br>ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ,<br>ಶ್ರೀನಿವಾಸವನಂ–517426),<br>ಆಂಧ್ರಪ್ರದೇಶ 9441997639 | **ಡಾ. ಚೆಲುವರಾಜು**<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. |
| **ಡಾ.ಟಿ.ಎಸ್.ಲವಕುಮಾರ್**<br>Email id – nagaralava@gamil.com<br>ಮುಖ್ಯಸ್ಥರು, ಕನ್ನಡ ವಿಭಾಗ,<br>ಸಂತ ಜೋಸೆಫರ ವಾಣಿಜ್ಯ ಕಾಲೇಜು(ಸ್ವಾಯತ್ತ)<br>ಬೆಂಗಳೂರು – 560021 | **ರವಿಶಂಕರ್ ಎ.ಕೆ**<br>ಸಹಾಯಕ ಪ್ರಧ್ಯಾಪಕ<br>ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ<br>ಬೆಂಗಳೂರು – 560077 |
| **ಡಾ. ಸುರೇಶ ಕೆ.ಸಿ**<br>ಮುಖ್ಯಸ್ಥರು, ಕನ್ನಡ ವಿಭಾಗ,<br>ಕೆ.ಎಲ್.ಇ ಸಂಸ್ಥೆ, ಎಸ್ ನಿಜಲಿಂಗಪ್ಪ ಕಾಲೇಜು<br>ಬೆಂಗಳೂರು – 560010 | **ಪ್ರೊ. ಚಂದ್ರಶೇಖರ್. ಎನ್.**<br>ಸಹಾಯಕ ಪ್ರಾಧ್ಯಾಪಕರು<br>ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ)<br>ಬೆಂಗಳೂರು–560077 |
| **ಡಾ. ವಿಜಯ ಕುಮಾರ್. ಎಚ್.ಜಿ.**<br>ಸಹಾಯಕ ಪ್ರಾಧ್ಯಾಪಕರು.<br>ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ<br>ಮತ್ತು ಸಂಶೋಧನಾ ಕೇಂದ್ರ,<br>ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ<br>ಮೊ: 8884242143<br>Email: vijayhg1985@gmail.com | ಡಾ. ನಾಗವೇಂದ್ರ ಸ್ವಾಮಿ<br>ರಾಜಾಜಿನಗರ. ಬೆಂಗಳೂರು,<br>ಮೊ: 94480 12269,<br>ಇ–ಮೇಲ್<br>nagavendraswamychidaravally@gmail.com |

| | |
|---|---|
| **ವಿಜಯ್ ಕುಮಾರ್. ಟಿ**<br>ಕಿರಿಯ ಸಂಶೋಧನಾರ್ಥಿ,<br>ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ,<br>ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ<br>ಕಾಲೇಜು,ಊಟಿ ರಸ್ತೆ, ಮೈಸೂರು–25 (89714 95222) | **ಚರಣರಾಜ ಜೆ ಹೆಚ್**<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಗರ.<br>ಸಾಗರ ತಾ. ಶಿವಮೊಗ್ಗ ಜಿಲ್ಲೆ.–577401<br>ಮೊಬೈಲ್ ಸಂಖ್ಯೆ–8277012898<br>charanjambani195@gmail.com |
| **ಚೇತನಾ ಹೆಗಡೆ**<br>ಸಹಾಯಕ ಪ್ರಾಧ್ಯಾಪಕರು , ಕನ್ನಡ ವಿಭಾಗ<br>ಮೌಂಟ್ ಕಾರ್ಮೆಲ್ ಕಾಲೇಜು, ಅರಮನೆ ರಸ್ತೆ,<br>ವಸಂತನಗರ, ಬೆಂಗಳೂರು.<br>ಮೊ – 9591674524 | **ಡಾ. ಜಿ ಆಶಾ**<br>ಸಹಾಯಕ ಪ್ರಾಧ್ಯಾಪಕರು,<br>ಕನ್ನಡ ವಿಭಾಗ,<br>ಕೆ.ಎಲ್.ಇ ಸಂಸ್ಥೆ ಎಸ್ ನಿಜಲಿಂಗಪ್ಪ ಕಾಲೇಜು,<br>ರಾಜಾಜಿನಗರ, ಬೆಂಗಳೂರು – 560010<br>Email id – g.ashabasavaraj47@gamil.com<br>Ph no – 9986293357 |
| **ಅಶ್ವಿನಿಬಾಯಿ.ಕೆ**<br>ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ,<br>ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ,<br>ಬೆಂಗಳೂರು – 560056.<br>ದೂರವಾಣಿ : 9743448527.<br>Email: ashwinibaik@gmail.com | **ಡಿ. ಅಬ್ದುಲ್ ನಿಶಾರ್**<br>ಅತಿಥಿ ಪ್ರಾಧ್ಯಾಪಕರು<br>ಮಿಲಿಟರಿ ಬಯಲು ರಾಮನಗರ<br>ಹಗರಿಬೊಮ್ಮನಹಳ್ಳಿ 583212<br>ವಿಜಯನಗರ ಜಿ.<br>ದೂರವಾಣಿ: 9880519814, 8310869077 |
| **ಶ್ರೀ ಶಾಂತಕುಮಾರ**<br>ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ಸರಕಾರಿ ಪ್ರಥಮ ದರ್ಜೆ ಕಾಲೇಜು, ಚಿಟಗುಪ್ಪಾ<br>ಮೋ:–9742463553 | **ಲಕ್ಷ್ಮಿದೇವಿ .ಎನ್** MA, PGDKS, NET, KSET<br>ಕನ್ನಡ ಸಹಾಯಕ ಪ್ರಾಧ್ಯಾಪಕರು<br>ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್<br>ಸ್ಟಡೀಸ್<br>ಚಿಕ್ಕಬಳ್ಳಾಪುರ<br>MOBILE NO. 9008045265<br>Email: lakshmidevin95@gmail.com |
| **ಮಂಜುನಾಥ.ಡಿ.ಕೆ.**<br>ಎಂ.ಎ. ಬಿಇಡಿ. ಎಂ.ಫಿಲ್. ಕೆಸೆಟ್<br>ಕನ್ನಡ ಉಪನ್ಯಾಸಕರು<br>ಸ್ವಾಮಿ ವಿವೇಕಾನಂದ ಗ್ರಾಮಾಂತರ ಪದವಿ ಪೂರ್ವ<br>ಕಾಲೇಜು.<br>ಚಂದಾಪುರ. ಆನೇಕಲ್.ತಾ. ಬೆಂಗಳೂರು–81<br>ಮೊಬೈಲ್ ನಂ–8904256813 | **ಡಾ. ಮಲ್ಲಯ್ಯ ಸಂಡೂರು**<br>ಅಧ್ಯಾಪಕರು<br>ಕನ್ನಡ ಅಧ್ಯಯನ ವಿಭಾಗ<br>ವಿ.ಶ್ರೀ.ಕೃ.ವಿ., ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ<br>ಸಂಡೂರು–583 119<br>ಮೊ: 94810 46934<br>Email: mallaiahsandur@gmail.com |

| | |
|---|---|
| **ಡಾ.ಕೆ.ಪ್ರೇಮಕುಮಾರ**<br>ಹಿರಿಯ ಸಂಶೋಧನಾ ಅಧಿಕಾರಿ<br>ಕರ್ನಾಟಕ ಜಾನಪದ ವಿಶ್ವವಿದ್ಯಾಲಯ,ಗೊಟಗೋಡಿ | **ನಾಗವೇಣಿ ಎನ್**<br>Email: nagaveniprathu@gmail.com |
| **ಸಂದೇಶ್ ಎ.ಎಸ್**<br>ಸಂಶೋಧನಾ ವಿದ್ಯಾರ್ಥಿ<br>ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯನ ಕೇಂದ್ರ<br>ತುಮಕೂರು ವಿಶ್ವವಿದ್ಯಾಲಯ ತುಮಕೂರು<br>ಫೋ. 8892542188 | **ಪ್ರಕಾಶ್. ಬಿ**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ವಿಭಾಗ ಸ.ಪ್ರ.ಕಾ. ಸಿರ್ಸಿ<br>Email – prakshbuppinahalli@gmail.com<br>Ph - 9611140303 |
| **ಪ್ರೊ. ಪುಷ್ಪ. ಎಂ**<br>ಉಪಪ್ರಾಂಶುಪಾಲರು<br>ವಾಸವಿ ಜ್ಞಾನಪೀಠ ಪ್ರಥಮ ದರ್ಜೆ ಕಾಲೇಜು<br>ವಿಜಯನಗರ ಬೆಂಗಳೂರು–40 | **ಡಾ. ಗುಡ್ಡಪ್ಪ. ಜಿ**<br>ಉಪನ್ಯಾಸಕರು<br>ಕನ್ನಡ ಅಧ್ಯಯನ ವಿಭಾಗ<br>ವಿ.ಶ್ರೀ.ಕೃ.ವಿ ಸ್ನಾತಕೋತ್ತರ ಕೇಂದ್ರ ನಂದಿ ಹಳ್ಳಿ<br>ಮೋ – 9449368843<br>Email-<br>guleppanavaraguddappa@gmail.com |
| **ಡಾ. ಸುಮ ಆರ್.**<br>ಪ್ರಾಧ್ಯಾಪಕರು, ಮುಖ್ಯಸ್ಥರು, ಸಂಯೋಜಕರು.<br>ಎಸ್ಜೆಬಿ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್<br>ಬಿಜಿಎಸ್ ಸಮೂಹ ಸಂಸ್ಥೆಗಳು<br>ಬಿಜಿಎಸ್ ಹೆಲ್ತ್ ಅಂಡ್ ಎಜುಕೇಷನ್ ಸಿಟಿ<br>ವಿಷ್ಣುವರ್ಧನ ಮೇನ್ ರೋಡ್, ಕೆಂಗೇರಿ<br>ಬೆಂಗಳೂರು–60, Ph. No. – 9986200213 | **ಸೈಯದ್ ಮುಯಿನ್**<br>ಕನ್ನಡ ಸಹಾಯಕ ಪ್ರಾಧ್ಯಾಪಕ,<br>ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ,<br>ಕೆ.ನಾರಾಯಣಪುರ, ಕೊತ್ತನೂರು ಅಂಚೆ,<br>ಬೆಂಗಳೂರು–560077<br>ದೂರವಾಣಿ ಸಂಖ್ಯೆ:9972925077 |
| **ಪ್ರೊ. ಭುವನೇಶ್ವರಿ. ಜಿ**<br>ಕನ್ನಡ ಉಪನ್ಯಾಸಕರು,<br>ಕೆ.ಎಲ್.ಇ.ಎಸ್.ನಿಜಲಿಂಗಪ್ಪ ಮಹಾವಿದ್ಯಾಲಯ,<br>ರಾಜಾಜಿನಗರ, ಬೆಂಗಳೂರು–560010 | **ಡಾ. ಸೀಮಾ. ಎಸ್.ಆರ್.**<br>ಕನ್ನಡ ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಪ್ರಥಮದರ್ಜೆ ಕಾಲೇಜು, ಶಿವಮೊಗ್ಗ<br>Email Id: Seemasr02@gmail.com<br>ದೂರವಾಣಿ ಸಂಖ್ಯೆ: 9480472818 |
| **ಡಾ.ಪುಷ್ಪಭಾರತಿ.ಆರ್.ಎ**<br>ಸಹಪ್ರಾಧ್ಯಪಕರು,<br>ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗ,<br>ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು,<br>ಚಿಕ್ಕಮಗಳೂರು–577102<br>ಮೋ: 9964514432 | **ಮೋಹನ್.ಎಂ**<br>ಸಹಾಯಕ ಪ್ರಾಧ್ಯಾಪಕರು,<br>ಕೆ.ಎಲ್.ಇ ಎಸ್. ನಿಜಲಿಂಗಪ್ಪ ಕಾಲೇಜು<br>ಬೆಂಗಳೂರು<br>ಮೋ–8431160960 |

| | |
|---|---|
| **ವೆಂಕಟೇಶ್ ಟಿ.ಕೆ**<br>ಸಹಾಯಕ ಪ್ರಾಧ್ಯಾಪಕರು,<br>ಕೆ.ಎಲ್.ಇ ಎಸ್. ನಿಜಲಿಂಗಪ್ಪ ಕಾಲೇಜು<br>ಬೆಂಗಳೂರು<br>ಪೋ–9060710988 | **ಪ್ರತಿಮಾ ಎಂ ಸಿ**<br>ಕೆ ಎಲ್ ಇ ಎಸ್ ನಿಜಲಿಂಗಪ್ಪ ಕಾಲೇಜು<br>ರಾಜಾಜಿನಗರ ಬೆಂಗಳೂರು–10<br>E-mail prathimamc1917@gmail.com<br>Phone number-8553973766 |
| **ಮಿಲನ್ ಎಂ. ಹೆಚ್**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ವಿಭಾಗ<br>ಎ.ಪಿ.ಎಸ್ ಕಲೆ ಮತ್ತು ವಿಜ್ಞಾನ ಕಾಲೇಜು<br>ಎನ್.ಆರ್ ಕಾಲೋನಿ, ಬೆಂ : 19 | **ರವಿ. ಎನ್.**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ವಿಭಾಗ<br>ಸರ್. ಎಂ. ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು<br>ಭದ್ರಾವತಿ ಶಿವಮೊಗ್ಗ |
| **ಡಾ. ತಾರಾಮಣಿ**<br>ಸಹ ಪ್ರಾಧ್ಯಾಪಕರು<br>ಕನ್ನಡ ವಿಭಾಗ ಸ.ಪ್ರ.ಕಾ ಕೆ.ಆರ್ ಪುರಂ<br>ಬೆಂಗಳೂರು–36 | **ಪ್ರೊ. ಹರೀಶ ಎಂ.ಸಿ**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ವಿಭಾಗ<br>ಎ.ಪಿ.ಎಸ್ ಕಲೆ ಮತ್ತು ವಿಜ್ಞಾನ ಕಾಲೇಜು<br>ಎನ್.ಆರ್ ಕಾಲೋನಿ. ಬೆಂಗಳೂರು :19<br>ಫೋನ್ ನಂ : 9916677557 |
| **ರಶ್ಮಿ. ಪಿ**<br>ಸಂಶೋಧನಾರ್ಥಿ<br>ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ<br>ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು<br>ಊಟಿ ರಸ್ತೆ, ಮೈಸೂರು–25<br>ಮೊ.ನಂ: 8884868993, 7892757371 | **ಅನಿತ ಕೆ.ವಿ**<br>ಸಹಾಯಕ ಪ್ರಾಧ್ಯಾಪಕರು<br>ಮೌಂಟ್ ಕಾರ್ಮೆಲ್ ಕಾಲೇಜು ಸ್ವಾಯತ್ತ,<br>ಬೆಂಗಳೂರು |
| **ಪ್ರಭಾವತಿ ಜೆ.**<br>ಕನ್ನಡ ಸಹಾಯಕ ಪ್ರಾಧ್ಯಾಪಕರು,<br>ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,<br>ಮತ್ತಿಕೆರೆ, ಬೆಂಗಳೂರು – 560054. | **ಸುಜಾತ.ಎ**<br>ತ್ರಿವೇಣಿ ಇನ್ಸ್ಟಿಟ್ಯೂಟ್ ಆಫ್‌ಕಾಮರ್ಸ್‌ಅಂಡ್ ಮ್ಯಾನೇಜ್‌ಮೆಂಟ್<br>ಹೆಸರಘಟ್ಟ ಮೈನ್‌ರೋಡ್,ಬಗಲಗುಂಟೆ 560058 |
| **ಶೋಭಾರಾಣಿ. ಎನ್**<br>ಸಹ ಪ್ರಾಧ್ಯಾಪಕರು<br>ಸ.ಪ್ರ.ಕಾ ಬಿಡದಿ | **ಡಾ.ಅಶ್ವಿನಿ ನಾಯಕ್**<br>ಸಹಾಯಕ ಪ್ರಾಧ್ಯಾಪಕರು<br>ವಿಶ್ವವಿದ್ಯಾನಿಲಯ ಕಾಲೇಜು ಹಮಪನಕಟ್ಟೆ<br>ಮಂಗಳೂರು<br>Ph no 8217436649<br>Email id- nayakashu24@gmail.com |

| | |
|---|---|
| **ವೇಣುಗೋಪಾಲ್.ಆರ್.**<br>ಸಹಾಯಕ ಪ್ರಾಧ್ಯಾಪಕರು<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಂಗಾರಪೇಟೆ<br>ಕೋಲಾರ ಜಿಲ್ಲೆ-563114 | **ಸಾವಿತ್ರಿ ಮೋದಿ**<br>ಸಂಶೋಧನಾರ್ಥಿ ಗುಲಬರ್ಗಾ<br>ವಿಶ್ವವಿದ್ಯಾನಿಲಯ ಕಲಬಬುರಗಿ<br>ಪೋ ನಂ - 9663666068 |
| **ಡಾ. ಪ್ರೇಮಾ ಅಪಚಂದ**<br>ಪ್ರಾಂಶುಪಾಲರು,<br>ವಿಶ್ವನಾಥರಡ್ಡಿ ಮುದ್ನಾಳ<br>ವಾಣಿಜ್ಯ ವಿದ್ಯಾಲಯ,<br>ಕಲಬುರಗಿ-585105<br>ಮೊ.ನಂ-9916854368 | **ಶಶಿಕಲಮ್ಮ. ಯು**<br>ಸೈಂಟ್ ಕ್ಲಾರೆಟ್ ಕಾಲೇಜು ಜಾಲಹಳ್ಳಿ<br>ಬೆಂಗಳೂರು<br>ಮೊ. 9740816827 |
| **ಡಾ. ಶಿವಗಂಗಾ ಯು. ಬಿಲಗುಂದಿ**<br>ಅತಿಥಿ ಉಪನ್ಯಾಸಕರು<br>ಕನ್ನಡ ಅಧ್ಯಯನ ಸಂಸ್ಥೆ<br>ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | **ವಿಜಯಲಕ್ಷ್ಮೀ ಡಿ.**<br>ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,<br>ರಾಮಯ್ಯ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು,<br>ಮತ್ತೀಕೆರೆ, ಬೆಂಗಳೂರು-560054.<br>ಮೊಬೈಲ್ ಸಂಖ್ಯೆ: 9844489257 |
| **ಶಾರದಮ್ಮ. ಎಂ .ಕೆ**<br>ಕನ್ನಡ' ಉಪನ್ಯಾಸಕರು, ಬಿ.ಇ.ಎಸ್.ಪದವಿ ಕಾಲೇಜು,<br><br>ಜಯನಗರ, ಬೆಂಗಳೂರು | **ಭಾಗ್ಯಮ್ಮ. ಜಿ**<br>ಸಹಾಯಕ ಪ್ರಾಧ್ಯಾಪಕರು<br>ಕನ್ನಡ ವಿಭಾಗ ಪ್ರೆಸಿಡೆನ್ಸಿ ಕಾಲೇಜು<br>ಮೊ-9164767174<br>Email.bhagya.sneha@gmail.com |
| **ಲೋಹಿತ್.ಪಿ**<br>ಕನ್ನಡ ಸಹಾಯಕ ಪ್ರಾಧ್ಯಾಪಕರು<br>ಅಕ್ಷರ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್<br>ಶಿವಮೊಗ್ಗ<br>Ph No9483993456<br>E-mail – lohithp8055@gmail.com | **ಶಿವಾನಂದ**<br>ಸಂಶೋಧನ ವಿದ್ಯಾರ್ಥಿ<br>ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ ಆವರಣ<br>ಬೆಂಗಳೂರು ವಿಶ್ವ ವಿದ್ಯಾಲಯ ಬೆಂಗಳೂರು-<br>560056.<br>Phone – NO. 9880294-079<br>Email. ID- shivu.hm111@gmail.com |

**K.L.E SOCIETY's**

# S. NIJALINGAPPA COLLEGE

Reaccredited by NAAC at "A+" grade with 3.53 CGPA
College with UGC Stride Component – 1
II Block, Rajajinagar Bangalore - 10

**Title:** Proceedings of UGC STRIDE Sponsored IQAC Initiated **National Seminar on "Janapada Mahakavyagalu of Karnataka - culture and heritage".**

**Author's Name:** Dr Arunkumar B. Sonappanavar.

**Editorial Committee Details:**

| Sl. No. | Author Details | Designation | Contributor Details |
|---|---|---|---|
| 1 | Dr. Arunkumar B. Sonappanavar | Principal | Scientific Editor |
| 2 | Dr. Suresha K. C. | Associate Professor | Associate Editor |
| 3 | Dr. Asha G. | Assistant Professor | Associate Editor |
| 4 | Prof. Bhuvaneshwari G . | Assistant Professor | Associate Editor |
| 5 | Prof. Mohan M. | Assistant Professor | Associate Editor |
| 6 | Prof. Venkatesha T. K. | Assistant Professor | Associate Editor |

**Published By: Self Published**

**Publisher's Address:** Dr Arunkumar B. Sonappanavar, Principal, K.L.E Society's S. Nijalingappa College II Block, Rajajinagar Bangalore-10, Karnataka.
**Email: principal@klesnc.org Website: http://www.klesnc.org Mobile: 9483946362 Tel: 080-23526055**

**Printer's Details:**
Principal, K.L.E Society's S. Nijalingappa College II Block, Rajajinagar Bangalore-10, Karnataka

**Edition details: I (First Edition), 2021 ISBN: 978-93-5526-247-9**

**Copyright © 2021.** All rights reserved. No part of this publication may be reproduced, stored in retrieval system or transmitted in any form or by any means, electronic, mechanical, photocopying, recording, otherwise, without the prior written permission of the publishers.

**ಶೀರ್ಷಿಕೆ: ಯುಜಿಸಿ ಸ್ಟ್ರೈಡ್ ಪ್ರಾಯೋಜಿತ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿರುವ ರಾಷ್ಟ್ರೀಯ ವಿಚಾರ ಸಂಕಿರಣ "ಕರ್ನಾಟಕದ ಜಾನಪದ ಮಹಾಕಾವ್ಯಗಳು – ಸಂಸ್ಕೃತಿ ಮತ್ತು ಪರಂಪರೆ" ಪ್ರಕ್ರಿಯೆಗಳು**
**ಲೇಖಕರ ಹೆಸರು: ಡಾ. ಅರುಣಕುಮಾರ ಬಿ. ಸೋನಪ್ಪನವರ್**
**ಸಂಪಾದಕೀಯ ಸಮಿತಿಯ ವಿವರಗಳು:**

| Sl. No. | Author Details | Designation | Contributor Details |
|---|---|---|---|
| 1 | ಡಾ. ಅರುಣಕುಮಾರ ಬಿ. ಸೋನಪ್ಪನವರ | ಪ್ರಾಂಶುಪಾಲರು | ವೈಜ್ಞಾನಿಕ ಸಂಪಾದಕರು |
| 2 | ಡಾ. ಸುರೇಶ ಕೆ.ಸಿ. | ಸಹ ಪ್ರಾಧ್ಯಾಪಕರು | ಸಹ ಸಂಪಾದಕರು |
| 3 | ಡಾ. ಆಶಾ ಜಿ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |
| 4 | ಪ್ರೊ. ಭುವನೇಶ್ವರಿ ಜಿ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |
| 5 | ಪ್ರೊ. ಮೋಹನ್ ಎಂ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |
| 6 | ಪ್ರೊ. ವೆಂಕಟೇಶ್ ಟಿ.ಕೆ. | ಸಹಾಯಕ ಪ್ರಾಧ್ಯಾಪಕರು | ಸಹ ಸಂಪಾದಕರು |

**ಪ್ರಕಟಿಸಿದವರು:** ಸ್ವಯಂ ಪ್ರಕಟಿಸಲಗಿದೆ:

**ಪ್ರಕಾಶಕರ ವಿಳಾಸ :** ಡಾ. ಅರುಣಕುಮಾಅರ ಬಿ. ಸೋನಪ್ಪನವರ್, ಪ್ರಾಂಶುಪಾಲರು, ಕೆ.ಎಲ್.ಇ ಸೊಸೈಟಿಯ ಎಸ್.ನಿಜಲಿಂಗಪ್ಪ ಕಾಲೇಜು ೨ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು – ೧೦ ಕರ್ನಾಟಕ

**ಮುದ್ರಕರ ವಿರವಗಳು:** ಕೆ.ಎಲ್.ಇ ಸೊಸೈಟಿಯ ಎಸ್. ನಿಜಲಿಂಗಪ್ಪ ಕಾಲೇಜು ೨ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು – ೧೦ ಕರ್ನಾಟಕ

**ಆವೃತ್ತಿ ವಿವರಗಳು:** ೧ (ಮೊದಲ ಆವೃತ್ತಿ) ೨೦೨೧ **ಐ.ಎಸ್.ಬಿ.ಎನ್ : ೯೭೮–೯೩–೫೫೨೬–೨೪೭–೯**

ಕೃತಿಸ್ವಾಮ್ಯ ಬಿ ೨೦೨೧ ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಪ್ರಕಟಣೆಯ ಯಾವುದೇ ಭಾಗದ ಮರುಮುದ್ರಣ, ಸಂಗ್ರಹಣೆಯ ಮರುಪಡೆಯುವಿಕೆಯ ವ್ಯವಸ್ಥೆ ಅಥವಾ ಯಾವುದೇ ರೂಪದಲ್ಲಿ ವರ್ಗಾಯಿಸುವ ಅಥವಾ ಯಾವುದೇ ಮಾದರಿಯ ಎಲೆಕ್ಟ್ರಿಕಲ್, ಯಾಂತ್ರಿಕ, ನಕಲುಪ್ರತಿ, ಧ್ವನಿಮುದ್ರಣ ಮತ್ತಿತರ ಯಾವುದೇ ರೂಪದಲ್ಲಿ ಪ್ರಕಟಿಸಬೇಕೆಂದರು ಪ್ರಕಾಶಕರ ಪೂರ್ವಾನುಮತಿ ಪಡೆಯಬೇಕು.